ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ
ಸಂಖ್ಯೆ—೪೭

ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀಮದಧ್ಯಾತ್ಮರಾಮಾಯಣಂ

ಪ್ರಥಮ ಭಾಗ

(ಸಂಸ್ಕೃತಮೂಲ, ಕನ್ನಡದ ಅರ್ಥಾನುವಾದ ವಿವರಣೆಗಳೊಡನೆ)

ಬಾಲಕಾಂಡ	ಅಯೋಧ್ಯಾಕಾಂಡ	ಅರಣ್ಯಕಾಂಡ
(೧—೭ ಸರ್ಗಗಳು)	(೧—೯ ಸರ್ಗಗಳು)	(೧—೧೦ ಸರ್ಗಗಳು)

ಅನುವಾದಕ: ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ.
ಸಾಹಿತ್ಯ ವಿದ್ವಾನ್, ಕನ್ನಡ ಪಂಡಿತ (ಮೈಸೂರು) ಕನ್ನಡ ವಿದ್ವಾನ್ (ಮದ್ರಾಸ್)

ಶ್ರೀ ಹನುಮಾನ್ ಪವರ್ ಪ್ರೆಸ್, ಮೈಸೂರು. ೧೯೪೮

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ —೪೭



ಶ್ರೀಮದಾದಿಕವಿ ವಾಲ್ಮೀಕಿ ವಿರಚಿತಂ

ಶ್ರೀಮದಧ್ಯಾತ್ಮರಾಮಾಯಣಂ

ಪ್ರಥಮ ಭಾಗ

(ಸಂಸ್ಕೃತಮೂಲ, ಕನ್ನಡದ ಅರ್ಥಾನುವಾದ ವಿವರಣೆಗಳೊಡನೆ)

ಬಾಲಕಾಂಡ (೧—೭ ಸರ್ಗಗಳು) ಅಯೋಧ್ಯಾಕಾಂಡ (೧—೯ ಸರ್ಗಗಳು) ಅರಣ್ಯಕಾಂಡ (೧—೧೦ ಸರ್ಗಗಳು)

ಅನುವಾದಕ: **ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ.**

ಸಾಹಿತ್ಯ ವಿದ್ವಾನ್, ಕನ್ನಡ ಪಂಡಿತ (ಮೈಸೂರು) ಕನ್ನಡ ವಿದ್ವಾನ್(ಮದ್ರಾಸ್)

ಶ್ರೀ ಹನುಮಾನ್ ಪವರ್ ಪ್ರೆಸ್, ಮೈಸೂರು. ೧೯೪೮

॥ ಶ್ರೀರಸ್ತು ॥

ಮುನ್ನುಡಿ

ಲೋಕದಲ್ಲಿ ನೀತಿಗಳನ್ನೂ ಕರ್ತವ್ಯಕರ್ಮಗಳನ್ನೂ ಪುರುಷಾರ್ಥಗಳನ್ನೂ ಬೋಧಿಸುವ ಗ್ರಂಥಗಳು ಅಪಾರವಾಗಿವೆ. ಅವುಗಳಲ್ಲಿ ನಿದರ್ಶನಪೂರ್ವಕವಾಗಿ ಬೋಧಿಸುವ ಉತ್ತಮ ಗ್ರಂಥವೆಂದರೆ ಶ್ರೀಮದ್ರಾಮಾಯಣವು. ಅಂತಹ ಗ್ರಂಥ ಮತ್ತೊಂದಿಲ್ಲ.

ಈ ರಾಮಾಯಣವು ಶ್ರೀರಾಮಕಥೆಯನ್ನು ವಿಶದಪಡಿಸುತ್ತಾದರೂ ಅದೇ ಕಥೆಯನ್ನು ವಿಶದಪಡಿಸುವ ರಾಮಾಯಣವೆಂದೇ ಹೆಸರುಳ್ಳ ಬೇರೆ ಬೇರೆ ಕವಿಕರ್ತೃಕವಾದ ರಾಮಾಯಣಗಳು ಬಹುವಾಗಿವೆ. ಅಲ್ಲದೆ ಪ್ರಸಿದ್ಧವಾದ ಎಲ್ಲ ಗ್ರಂಥಗಳಲ್ಲಿಯೂ ಈ ಶ್ರೀರಾಮನ ಕಥೆಯು ಬಂದೇ ಬರುತ್ತದೆ.

ಈ ಶ್ರೀರಾಮಕಥೆಯು ಪ್ರತಿಯೊಂದು ಕವಿಯ ಗ್ರಂಥಕ್ಕೂ ಕಥಾಶರೀರವಾಗಿದ್ದರೂ ಅವುಗಳ ವಿಷಯಗಳ ಗುರಿಯೇ ಬೇರೆ ಬೇರೆಯಾಗಿರುವುದು. ಅಂತೆಯೇ ಶ್ರೀಮದಧ್ಯಾತ್ಮರಾಮಾಯಣದ ಗುರಿಯೂ ಬೇರೆಯಾಗಿರುವುದರಲ್ಲಿ ವಿವಾದವಿರುವುದಿಲ್ಲ.

ಈ ಅಧ್ಯಾತ್ಮರಾಮಾಯಣವನ್ನು ಶಂಭುವು ಪಾರ್ವತಿಗೆ ಹೇಳಿದಂತೆಯೂ ಅದನ್ನೇ ಬಾದರಾಯಣನು ಬರೆದಂತೆಯೂ ಗ್ರಂಥದ ಪ್ರಶ್ನೋತ್ತರಗಳಿಂದ ತಿಳಿದು ಬರುತ್ತದೆ. ರಾಮಕಥೆಯನ್ನು ವಾಲ್ಮೀಕಿರಾಮಾಯಣದಿಂದ ವಿಶದವಾಗಿ ತಿಳಿಯಬಹುದಾದರೂ ಅದನ್ನು ಸೂಕ್ಷ್ಮವಾಗಿ ಬೇಗ ತಿಳಿಯಲು ಈ ಅಧ್ಯಾತ್ಮರಾಮಾಯಣವು ಸಾಧಕವಾದರೂ ರಾಮನೇ ಶ್ರೀಪರತತ್ವವು ಅವನೇ ಸಚ್ಚಿದಾನಂದರೂಪನು ಎಂಬುದನ್ನು ಕವಿಯು ಅಧ್ಯಾಯ ಅಧ್ಯಾಯದಲ್ಲಿಯೂ ಆ ರಾಮನ ಬಾಯಿಂದಲೇ ಹೇಳಿಸುತ್ತ ಆತ್ಮತತ್ವವನ್ನು ಒಂದೆರಡೇ ಶ್ಲೋಕಗಳಿಂದ

ಜನರು ಬೇಸರಪಡದಂತೆ ಹೇಳಿಸಿರುತ್ತಾನೆ. ಈ ಅಧ್ಯಾತ್ಮ ಬೋಧೆಯು ಬೇಸರಪಡಿಸದಂತೆ ಮಾಡಲು ಕಥೆಯ ಮುಂದುವರಿಸುವಿಕೆಯೂ ಸಹಾಯವಾಗುವಂತೆ ಮಾಡಿ ಅಲ್ಲಲ್ಲೇ ಇತರ ರಾಮಾಯಣಗಳಲ್ಲಿಲ್ಲದ ಒಂದೆರಡು ಹೊಸ ವಿಶೇಷವನ್ನು ಸೇರಿಸಿ ಪಾನಕದಲ್ಲಿ ಏಲಕ್ಕಿಯ ವಾಸನೆಯು ಹೊರಹೊಮ್ಮಿ ಸೊಗಸುವಂತೆ ಸೊಗಸಿಸುತ್ತಾನೆ. ಆಯಾ ಕವಿಗಳು ಈ ರೀತಿಯಾಗಿ ವಿಷಯಗಳನ್ನು ಸೇರಿಸಿರುವುದರಿಂದಲೇ ಶ್ರೀರಾಮನು ಒಬ್ಬನೇ ಆಗಿ ರಾಮಾಯಣದ ಕಥೆಯು ಒಂದೇ ಆದರೂ ರಾಮಾಯಣಗಳು ಅನೇಕವೆಂದು ಹೇಳಿಸಿಕೊಳ್ಳುತ್ತವೆ.

ಈ ಅಧ್ಯಾತ್ಮರಾಮಾಯಣವು ಆತ್ಮತತ್ವವನ್ನೇ ಗುರಿಯಾಗಿ ಹೊಂದಿರುವುದರಿಂದ ಅಧ್ಯಾತ್ಮರಾಮಾಯಣವೆಂದು ಅನ್ವರ್ಥವಾಗಿರುವುದು. ಇದರಲ್ಲಿ ಬೋಧಿತವಾಗುವ ಆತ್ಮತತ್ವವು ಸುಲಭರೀತಿಯಲ್ಲಿ ಬುದ್ಧಿಗೋಚರವಾಗಿ ಗಹನವಾದ ವಿಷಯಗಳನ್ನು ಹೊರಗಡೆಯಲ್ಲಿ ತಿಳಿಯಲು ಬಹು ಅನುಕೂಲಿಸುತ್ತದೆ.

ಪಾರಾಯಣಮಾಡುವುಕ್ಕೆ ಅನುಕೂಲಿಸುವಂತೆ ಇದನ್ನು ಭಾಗಗಳನ್ನಾಗಿ ಮಾಡಿ ಮೊದಲನೆಯ ಭಾಗಕ್ಕೆ ಮೂರುಕಾಂಡಗಳನ್ನು ಸೇರಿಸಿದೆ. ಮತ್ತು ಪ್ರಾಚೀನಪದ್ಧತಿಯಂತೆ ಅಂಗನ್ಯಾಸ ಕರನ್ಯಾಸಾದಿಗಳನ್ನು ಸೇರಿಸಿ ಮತ್ತೊಬ್ಬರ ಸಹಾಯವು ಬೇಕಿಲ್ಲದಂತೆ ಮಾಡಿದೆ.

ಇಂತಹ ಗ್ರಂಥಗಳನ್ನು ಕನ್ನಡಕ್ಕೆ ಪರಿವರ್ತಿಸಿ ಕನ್ನಡಿಗರು ಓದಿ ವಿಷಯಗಳನ್ನು ಗ್ರಹಣಮಾಡಿ ಸಾಧ್ಯವಾದಷ್ಟನ್ನಾದರೂ ಆಚರಿಸಿ ಕೃತಾರ್ಥರಾಗುವಂತೆ ಮಾಡುತ್ತಿರುವ ನಮ್ಮ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ. ಮಹಾಪ್ರಭುಗಳವರಿಗೆ ಶ್ರೀರಾಮಚಂದ್ರನು ಪುತ್ರಪೌತ್ರಾದಿ ಸಕಲ ಸೌಭಾಗ್ಯಗಳನ್ನು ಕೊಟ್ಟು ಸಲಹಲೆಂದು ಅನನ್ಯಮನಸ್ಸಿನಿಂದ ಆ ಶ್ರೀರಾಮಚಂದ್ರನನ್ನು ಪ್ರಾರ್ಥಿಸುತ್ತೇನೆ.

ಮೈಸೂರು,
16—5—1948

ಅನುವಾದಕ,
ಬೇಲದಕೆರೆ ಸೂರ್ಯನಾರಾಯಣಶಾಸ್ತ್ರಿ.

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣದಲ್ಲಿ ಬಾಲಕಾಂಡದ ವಿಷಯಾನುಕ್ರಮಣಿಕೆ

ಪುಟಸಂಖ್ಯೆ

ಎರಡನೆಯ ಸರ್ಗವು

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣದಲ್ಲಿ ಅಯೋಧ್ಯಾಕಾಂಡದ

ವಿಷಯಾನುಕ್ರಮಣಿಕೆ

ಎಂಟನೆಯ ಸರ್ಗವು

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣದಲ್ಲಿ ಅರಣ್ಯಕಾಂಡದ

ವಿಷಯಾನುಕ್ರಮಣಿಕೆ

ಪುಟಸಂಖ್ಯೆ

ಮೈಸೂರು ಶಿವರಾಂಪೇಟೆಯಲ್ಲಿರುವ ಶ್ರೀ ಹನುಮಾನ್ ಪವರ್ ಪ್ರೆಸ್ಸಿನಲ್ಲಿ ಪ್ರೊಪ್ರೈಟರ್ ಎನ್. ನಾರಾಯಣರಾಜುರವರಿಂದ ಮುದ್ರಿಸಲ್ಪಟ್ಟಿತು. ತಾ|| 26–5–48

|| ಶ್ರೀಃ ||

|| ಶ್ರೀ ಶಾರದಾ ಗಣೇಶ ಗುರುಭ್ಯೋ ನಮಃ ||

ಅಥ ಸಮಾಹಾತ್ಮ್ಯ ಮಧ್ಯಾತ್ಮರಾಮಾಯಣಂ ಪ್ರಾರಭ್ಯತೇ

ಶ್ರೀಮದಧ್ಯಾತ್ಮರಾಮಾಯಣಮಾಹಾತ್ಮ್ಯಂ

ಪಾರಾಯಣಕಾಲದಲ್ಲಿ ಬಾಲಕಾಂಡದಲ್ಲಿ ಮಾಡಬೇಕಾದ ಸಂಕಲ್ಪ, ನ್ಯಾಸ, ಧ್ಯಾನ, ಜಪಗಳ ಕ್ರಮ

ಅಸ್ಯ ಶ್ರೀರಾಮಾಯಣೇ ಬಾಲಕಾಂಡ ಮಹಾ ಮಾಲಾಮಂತ್ರಸ್ಯ, ಶ್ರೀ ಭಗವಾನ್ ಸದಾಶಿವ ಋಷಿಃ. ಅನುಷ್ಟುಪ್ ಛಂದಃ. ಶ್ರೀರಾಮಃ ಪರಮಾತ್ಮಾದೇವತಾ. ಓಂ ನಮೋ ನಾರಾಯಣಾಯೇತಿ ಬೀಜಂ. ದಾಶರಥಿರಿತಿ ಶಕ್ತಿಃ. ರಾವಣಘ್ನ ಇತಿ ಕೀಲಕಂ. ಮಮ ಅಮುಕ ಕಾಮನಾಸಿದ್ಧ್ಯರ್ಥಂ ಅಮುಕ ಸ್ತೋತ್ರಸ್ಯ ಮಂತ್ರಸಂಪುಟೀಕರಣಂ ಕರಿಷ್ಯೇ. ಇತಿ ಆದೌ ಸಂಕಲ್ಪ್ಯ

ಅಥ ಲೋಮವಿಲೋಮ ಮಂತ್ರನ್ಯಾಸಯುಕ್ತಂ ಕರಿಷ್ಯೇ. ಮಂಡಲಯುಕ್ತಂ ಕರಿಷ್ಯೇ. ಇತಿ ವಾ । ಪಾರಾಯಣಾದೌ ಭೂಶುದ್ಧಿ, ಭೂತಶುದ್ಧಿ ಮಾತೃಕಾನ್ಯಾಸಾಃ ಪ್ರತ್ಯಧ್ಯಾಯೇ ನ್ಯಾಸ ಧ್ಯಾನಂ ಚ ಕರ್ತವ್ಯಂ.

|| ಅಥ ಬೀಜಷಟ್ಕಂ ||

ಓಂ ರಾಂ, ಓಂ ರೀಂ, ಓಂ ರೂಂ, ಓಂ ರೈಂ, ಓಂ ರೌಂ, ಓಂ ರಃ.

॥ ಅಥ ಮಂತ್ರಷಟ್ಕಂ ॥

(೧) ಓಂ ಶ್ರೀರಾಮಚಂದ್ರಾಯ ಸ್ವಾಹಾ. (೨) ಓಂ ಕ್ಲೀಂ ನಮಃ ಶ್ರೀ ರಘುನಾಥಾಯ. (೩) ಓಂ ಜಯ ಜಯ ರಾವಣಾಂತಕಾಯ. (೪) ಓಂ ನಮಃ ಸೀತಾಪತಯೇ ನಮಃ. (೫) ಓಂ ಲಕ್ಷ್ಮಣಾಗ್ರಜಾಯ . (೬) ಓಂ ಭರತಶತ್ರುಘ್ನಸೇವಿತ ಚರಣಕಮಲಾಯ.

॥ ಕಾಂಡಸ್ಯ ಮುಖಂ ಷಡಕ್ಷರಂ ॥

॥ ಓಂ ಶ್ರೀ ರಾಮಾಯ ನಮಃ ॥

॥ ಅಥ ಕಾಂಡನ್ಯಾಸಃ ॥

॥ ತತ್ರಾದೌ ಋಷ್ಯಾದಿಕಂಚರೇತ್ ॥

ಓಂ ಶ್ರೀ ಭಗವಾನ್ ಸದಾಶಿವ ಋಷಯೇ ನಮಃ ಶಿರಸಿ. ಓಂ ಅನುಷ್ಟುಪ್ ಛಂದಸೇ ನಮಃ ಮುಖೇ. ಓಂ ಶ್ರೀರಾಮ ಪರಮಾತ್ಮ ದೇವತಾಯೈ ನಮಃ ಹೃದಯೇ. ಓಂ ನಮೋ ನಾರಾಯಣಾಯೇತಿ ಬೀಜಾಯ ನಮಃ ಗುಹ್ಯೇ. ಓಂ ದಾಶರಥಿರಿತಿ ಶಕ್ತಯೇ ನಮಃ ಪಾದಯೋಃ. ಓಂ ರಾವಣಘ್ನ ಇತಿ ಕೀಲಕಾಯ ನಮಃ ಸರ್ವಾಂಗೇ. ಮಮ ಚತುರ್ವಿಧಪುರುಷಾರ್ಥ ಸಿದ್ಧ್ಯರ್ಥೇ ಜಪೇ ವಿನಿಯೋಗಃ.

॥ ಅಥ ಕರನ್ಯಾಸಃ ॥

ಓಂ ರಾಂ ಅಂಗುಷ್ಠಾಭ್ಯಾಂ ನಮಃ, ಓಂ ರೀಂ ತರ್ಜನೀಭ್ಯಾಂ ನಮಃ, ಓಂ ರೂಂ ಮಧ್ಯಮಾಭ್ಯಾಂ ನಮಃ, ಓಂ ರೈಂ ಅನಾಮಿಕಾಭ್ಯಾಂ ನಮಃ, ಓಂ ರೌಂ ಕನಿಷ್ಠಿಕಾಭ್ಯಾಂ ನಮಃ, ಓಂ ರಃ ಕರತಲಕರಪೃಷ್ಠಾಭ್ಯಾಂ ನಮಃ.

|| ಅಥ ಷಡಂಗನ್ಯಾಸಃ ||

ಓಂ ರಾಂ ಹೃದಯಾಯ ನಮಃ. ಓಂ ರೀಂ ಶಿರಸೇ ಸ್ವಾಹಾ. ಓಂ ರೂಂ ಶಿಖಾಯೈ ವಷಟ್. ಓಂ ರೈಂ ಕವಚಾಯ ಹುಂ. ಓಂ ರೌಂ ನೇತ್ರತ್ರಯಾಯ ವೌಷಟ್. ಓಂ ರಃ ಅಸ್ತ್ರಾಯ ಫಟ್. ಓಂ ರಾಂ ರೀಂ ರೂಂ ರೈಂ ರೌಂ ರಃ ಇತಿ ದಿಗ್ಬಂಧಃ.

|| ಅಥ ಧ್ಯಾನಂ ||

ನೀಲೇಂದೀವರ ತುಲ್ಯಶ್ಯಾಮವದನಂ ಪೀತಾಂಬರಾಲಂಕೃತಂ । ಮುದ್ರಾಂ ಜ್ಞಾನಮಯೀಂ ದಧಾನಮಪರಾಂ ವಿದ್ಯುನ್ನಿಭಾಂ ರಾಘವಂ ॥ ಪಶ್ಯಂತೀಂ ಮುಕುಟಾಂಗದಾದಿವಿವಿಧೈಃ ಕಲ್ಪೋಜ್ಜ್ವಲಾಂಗಂ ಭಜೇ । ಶ್ರೀಮದ್ದಾಶರಥಿಂ ನಮಾಮಿ ಸುತರಾಮಬ್ಧಿಪ್ಲವಂ ದುಸ್ತರೇ ॥

ಇತಿ ಧ್ಯಾತ್ವಾ, ಮಾನಸೋಪಚಾರೈಃ ಸಂಪೂಜ್ಯ, ಪಾರಾಯಣಂ ಕುರ್ಯಾತ್.

ಇದು ಬಾಲಕಾಂಡಕ್ಕೆ ಪೂರ್ತಿಯಾದ ನ್ಯಾಸವಿಧಿಯು. ಇದಲ್ಲದೆ ಪ್ರತಿಸರ್ಗಕ್ಕೂ ಅಂಗನ್ಯಾಸ ಕರನ್ಯಾಸ ಧ್ಯಾನಗಳಿವೆ.

ಕಾಂಡವನ್ನು ಪೂರ್ತಿಯಾಗಿ ಪಾರಾಯಣಮಾಡಲು ಸಂಕಲ್ಪಿಸಿದರೆ ಕಾಂಡನ್ಯಾಸವಿಧಿಯೇ ಸಾಕಾಗಿರುವುದು. ಸರ್ಗವನ್ನು ಬೇರೆ ಬೇರೆಯಾಗಿ ಪಾರಾಯಣ ಮಾಡುವಾಗ ಆಯಾ ಸರ್ಗದ ಅಂಗನ್ಯಾಸಾದಿಗಳೇ ಸಾಕು. ಸರ್ಗದಲ್ಲಿ ಅರ್ಧವನ್ನು ಪಾರಾಯಣಮಾಡಿ ಮತ್ತೆ ಮುಂದಕ್ಕೆ ಪಾರಾಯಣ ಮಾಡುವಾಗ ಮೊದಲು ಮತ್ತೆ ಅದೇ ಸರ್ಗದ ನ್ಯಾಸಾದಿಗಳನ್ನು ಮಾಡಿಕೊಳ್ಳಬೇಕು. ಪಾರಾಯಣವನ್ನು ನಿಲ್ಲಿಸುವಾಗ ಹಿಂದೆ ಹೇಳಿದ ಅಂಗನ್ಯಾಸ ಕರನ್ಯಾಸಗಳಲ್ಲಿ ಅಂಗನ್ಯಾಸಗಳನ್ನು ಮಾತ್ರ ಮಾಡಿಕೊಂಡು ಕರನ್ಯಾಸವನ್ನು ಬಿಡಬೇಕು. ಧ್ಯಾನ ಶ್ಲೋಕವನ್ನೂ ಹೇಳಬೇಕು. ಇದು ಅನೂಚಾನವಾದ ಪದ್ಧತಿಯು.

ಆದರೆ ಕೆಲವರು ಕಾಂಡನ್ಯಾಸವನ್ನೂ ಮಾಡಿಕೊಂಡು ಸರ್ಗಗಳನ್ನು ಪ್ರಾರಂಭಿಸುವಾಗ ಆಯಾ ಸರ್ಗದ ಅಂಗನ್ಯಾಸ ಕರನ್ಯಾಸ ಧ್ಯಾನಾದಿಗಳನ್ನೂ ಮಾಡಿಕೊಳ್ಳುವುದು ಅವಶ್ಯಕವೆಂದೆನ್ನುತ್ತಾರೆ. ಅದು ಅಭ್ಯುಚ್ಚಯವಾದವೇ ಹೊರತು ಅನೂಚಾನ ಪದ್ಧತಿಯಲ್ಲ. ಹಾಗೆ ಮಾಡುವುದರಿಂದ ಬಾಧಕವೂ ಇಲ್ಲ.

ಮನೋವಾಕ್ಕಾಯ ದೂರಾಯ ನಿರ್ಗುಣಾಯ ಪರಾತ್ಮನೇ | ಭಜತಾಂ ಸಗುಣಾಯಾದ್ಯಪುಂಸೇ ಜ್ಞಾನಾತ್ಮನೇ ನಮಃ ||

ಅಥಾಧ್ಯಾತ್ಮರಾಮಾಯಣ ಮಾಹಾತ್ಮ್ಯಸರ್ಗೇ ಸಂಕಲ್ಪಪೂರ್ವಕಂ ನ್ಯಾಸಾದಿಕ್ರಮಃ

ಓಂ ಅಸ್ಯ ಶ್ರೀಮದಧ್ಯಾತ್ಮರಾಮಾಯಣಮಾಹಾತ್ಮ್ಯ ಸರ್ಗಸ್ಯ, ಶ್ರೀ ಭಗವಾನ್ ಬಾದರಾಯಣ ಋಷಿಃ, ಗಾಯತ್ರೀ ಛಂದಃ, ಓಂ ನಮೋ ನಾರಾಯಣೋ ದೇವತಾ, ಶ್ರೀ ಲಕ್ಷ್ಮೀಃ ಬೀಜಂ, ಪರಮಾ ಶಕ್ತಿಃ, ಅವ್ಯಕ್ತಂ ಕೀಲಕಂ, ಅಮುಕ ಸಂಪುಟೀಕರಣ ಸಿದ್ಧ್ಯರ್ಥೇ ಅಮುಕಮಂತ್ರಲೋಮವಿಲೋಮ ಸಂಪುಟೀಕರಣಾಧ್ಯಾಯೇ ಮಂತ್ರಾಷ್ಟಾಕ್ಷರ ಸಂಯುಕ್ತಂ ಮಾಹಾತ್ಮ್ಯಸರ್ಗೇ ನ್ಯಾಸ ಧ್ಯಾನ ಜಪ ಮಹಂ ಕರಿಷ್ಯೇ.

|| ಇತಿ ಸಂಕಲ್ಪಃ ||

॥ ಅಥ ಕರನ್ಯಾಸಃ ॥

ಓಂ ಶ್ರೀಂ ರಾಂ ಶ್ರೀಂ ಅಂಗುಷ್ಠಾಭ್ಯಾಂ ನಮಃ ಓಂ ಶ್ರೀಂ ರಾಂ ಶ್ರೀಂ ತರ್ಜನೀಭ್ಯಾಂ ನಮಃ
ಓಂ ಶ್ರೀಂ ರಾಂ ಶ್ರೀಂ ಮಧ್ಯಮಾಭ್ಯಾಂ ನಮಃ ಓಂ ಶ್ರೀಂ ರಾಂ ಶ್ರೀಂ ಅನಾಮಿಕಾಭ್ಯಾಂ ನಮಃ
ಓಂ ಶ್ರೀಂ ರಾಂ ಶ್ರೀಂ ಕನಿಷ್ಠಿಕಾಭ್ಯಾಂ ನಮಃ ಓಂ ಶ್ರೀಂ ರಾಂ ಶ್ರೀಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಓಂ ಶ್ರೀಂ ರಾಂ ಶ್ರೀಂ ಹೃದಯಾಯ ನಮಃ ಓಂ ಶ್ರೀಂ ರಾಂ ಶ್ರೀಂ ಶಿರಸೇ ಸ್ವಾಹಾ
ಓಂ ಶ್ರೀಂ ರಾಂ ಶ್ರೀಂ ಶಿಖಾಯೈ ವಷಟ್ ಓಂ ಶ್ರೀಂ ರಾಂ ಶ್ರೀಂ ಕವಚಾಯ ಹುಂ
ಓಂ ಶ್ರೀಂ ರಾಂ ಶ್ರೀಂ ನೇತ್ರತ್ರಯಾಯ ವೌಷಟ್ ಓಂ ಶ್ರೀಂ ರಾಂ ಶ್ರೀಂ ಅಸ್ತ್ರಾಯ ಫಟ್

ಓಂ ಶ್ರೀರಾಮಚಂದ್ರಾಯ ನಮಃ ಇತಿ ಮಂತ್ರೇಣ ದಿಗ್ಬಂಧಃ

॥ ಅಥ ಧ್ಯಾನಂ ॥

ಕದಾಚಿನ್ನಾರದೋ ಯೋಗೀ ಪರಾನುಗ್ರಹವಾಂಛಯಾ ।
ಪರ್ಯಟನ್ ಸಕಲಾನ್ ಲೋಕಾನ್ ಸತ್ಯಲೋಕಮುಪಾಗಮತ್ ॥

॥ ಇತಿ ಧ್ಯಾತ್ವಾ ॥

ಏವಂ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಇತ್ಯಧ್ಯಾತ್ಮರಾಮಾಯಣ ಮಾಹಾತ್ಮ್ಯಸರ್ಗೇ ನ್ಯಾಸ ಧ್ಯಾನ ಜಪ ವಿಧಿಃ

|| ಶ್ರೀ ಗಣಾಧಿಪತಯೇ ನಮಃ ||

ಶ್ರೀರಾಮಚಂದ್ರ ಪರಬ್ರಹ್ಮಣೇ ನಮೋ ನಮಃ

ಸಮಹಾತ್ಮ್ಯಂ ಅಧ್ಯಾತ್ಮರಾಮಾಯಣಂ

ಅಥ ಸಮಾಹಾತ್ಮ್ಯಸರ್ಗಂ

ಅಪ್ರಮೇಯತ್ರಯಾತೀತ ನಿರ್ಮಲ ಜ್ಞಾನಮೂರ್ತಯೇ । ಮನೋಗಿರಾಂ ವಿದೂರಾಯ ದಕ್ಷಿಣಾಮೂರ್ತಯೇ ನಮಃ ॥ ೧ ॥

॥ ಶ್ರೀ ಸೂತ ಉವಾಚ ॥

ಕದಾಚಿನ್ನಾರದೋ ಯೋಗೀ ಪರಾನುಗ್ರಹವಾಂಛಯಾ । ಪರ್ಯಟನ್ ಸಕಲಾನ್ ಲೋಕಾನ್ ಸತ್ಯಲೋಕಮುಪಾಗಮತ್ ॥ ೨ ॥

ಶ್ರೀಮದಧ್ಯಾತ್ಮರಾಮಾಯಣದ ಮಹಿಮೆಯು

೧. ಅಳಿಯಲು ಆಗದಿರುವ ಮಹಿಮೆಯುಳ್ಳ, ಆಧ್ಯಾತ್ಮಿಕ, ಆಧಿದೈವಿಕ, ಆದಿಭೌತಿಕಗಳೆಂಬ ತಾಪತ್ರಯಗಳಿಗೆ ಸಿಲುಕದ, ನಿರ್ಮಲವಾದ ಜ್ಞಾನವುಳ್ಳ, ಮಾತುಗಳಿಂದ ಹೊಗಳಲು ಸಾಧ್ಯವಾಗದ, ಮನಸ್ಸಿನಿಂದ ಯೋಚಿಸಲೂ ಆಗದ ಆ ದಕ್ಷಿಣಾಮೂರ್ತಿಸ್ವಾಮಿಗೆ ನಮಸ್ಕರಿಸುತ್ತೇನೆ.

೨. ಸೂತನು ಹೇಳಿದನು—ಇತರರಿಗೆ ಅನುಗ್ರಹ ಮಾಡುವುದೇ ಅಪೇಕ್ಷೆಯಾಗಿ ಉಳ್ಳ ಯೋಗೀಶ್ವರನಾದ ನಾರದನು ಒಂದುಸಾರಿ ಲೋಕಗಳನ್ನೆಲ್ಲಾ ಸುತ್ತುತ್ತ ಬ್ರಹ್ಮನ ಲೋಕವಾದ ಸತ್ಯಲೋಕಕ್ಕೆ ಬಂದನು.

ತತ್ರ ದೃಷ್ಟ್ವಾ ಮೂರ್ತಿಮದ್ಭಿಃ ಛಂದೋಭಿಃ ಪರಿವೇಷ್ಟಿತಂ । ಬಾಲಾರ್ಕ ಪ್ರಭಯಾ ಸಮ್ಯಕ್ ಭಾಸಯಂತಂ ಸಭಾಗೃಹಂ ॥ ೩ ॥
ಮಾರ್ಕಂಡೇಯಾದಿ ಮುನಿಭಿಃ ಸ್ತೂಯಮಾನಂ ಮುಹುರ್ಮುಹುಃ । ಸರ್ವಾರ್ಥಗೋಚರಜ್ಞಾನಂ ಸರಸ್ವತ್ಯಾ ಸಮನ್ವಿತಂ ॥ ೪ ॥
ಚತುರ್ಮುಖಂ ಜಗನ್ನಾಥಂ ಭಕ್ತಾಭೀಷ್ಟವರಪ್ರದಂ । ಪ್ರಣಮ್ಯ ದಂಡವದ್ಭಕ್ತ್ಯಾ ತುಷ್ಟಾವ ಮುನಿಪುಂಗವಃ ॥ ೫ ॥
ಸಂತುಷ್ಟಸ್ತಂ ಮುನಿಂ ಪ್ರಾಹ ಸ್ವಯಂಭೂಃ ವೈಷ್ಣವೋತ್ತಮಂ । ಕಿಂ ಪ್ರಷ್ಟುಕಾಮಸ್ತ್ವಮಸಿ ತದ್ವದಿಷ್ಯಾಮಿ ತೇ ಮುನೇ ॥ ೬ ॥

೩–೫. ಆ ಬ್ರಹ್ಮಲೋಕದಲ್ಲಿದ್ದ ಬ್ರಹ್ಮನ ಮನೆಗೆ ಹೋದನು. ಆ ಬ್ರಹ್ಮನು ಸಭೆಯಲ್ಲಿ ಕುಳಿತಿದ್ದನು. ಆ ಬ್ರಹ್ಮನನ್ನು ಚತುರ್ವೇದಗಳೂ ಆಕಾರವನ್ನು ಹೊಂದಿ ಸೇವಿಸುತ್ತಿದ್ದುವು. ಉದಯಿಸುತ್ತಿರುವ ಸೂರ್ಯನಂತೆ ಕಾಂತಿಯುಳ್ಳವನಾಗಿ ಆ ಸಭಾಪ್ರದೇಶಗಳನ್ನು ಬೆಳಗುತ್ತಿರುವ, ಮಾರ್ಕಂಡೇಯನೇ ಮೊದಲಾದ ಋಷಿಗಳು ಆಗಾಗ್ಗೆ ಸ್ತುತಿಸುತ್ತಿರುವ, ಎಲ್ಲಾ ವಿಷಯವೂ ಕಣ್ಣೆದುರಿಗೆ ಕಾಣುವಂತೆ ಮಾಡುವ ಜ್ಞಾನವನ್ನು ಹೊಂದಿರುವ, ಸರಸ್ವತಿಯನ್ನೂ ಜೊತೆಯಲ್ಲಿ ಕುಳ್ಳಿರಿಸಿಕೊಂಡಿರುವ, ನಾಲ್ಕು ಮುಖವನ್ನು ಹೊಂದಿರುವ, ಜಗತ್ತಿಗೇ ಒಡೆಯನಾದ, ಭಕ್ತರಿಗೆ ಬೇಕಾದ ವರಗಳನ್ನು ಕೊಡುತ್ತಿರುವ ಆ ಬ್ರಹ್ಮನನ್ನು ನೋಡಿ ದಂಡಪ್ರಣಾಮವನ್ನು ಮಾಡಿ ಭಕ್ತಿಯಿಂದ ಆ ನಾರದನು ಸ್ತುತಿಸಿದನು.

೬. ಆಗ ಆ ಬ್ರಹ್ಮನು ಸಂತೋಷಗೊಂಡು ವಿಷ್ಣುಭಕ್ತನಾದ ನಾರದನನ್ನು ಕುರಿತು ಎಲೈ ಮುನಿಯೇ ! ನೀನು ಏನನ್ನು ಕೇಳಬೇಕೆಂದಿದ್ದೀಯೆ ? ಅದನ್ನು ಕೇಳು. ನಿನಗೆ ಹೇಳುತ್ತೇನೆ.

ಇತ್ಯಾಕರ್ಣ್ಯ ವಚಸ್ತಸ್ಯ ಮುನಿರ್ಬ್ರಹ್ಮಾಣಮಬ್ರವೀತ್ । ತ್ವತ್ತಃ ಶ್ರುತಂ ಮಯಾ ಸರ್ವಂ ಪೂರ್ವಮೇವ ಶುಭಾಶುಭಂ ॥ ೭ ॥

ಇದಾನೀಮೇಕಮೇವಾಸ್ತಿ ಶ್ರೋತವ್ಯಂ ಸುರಸತ್ತಮ । ತದ್ರಹಸ್ಯಮಪಿ ಬ್ರೂಹಿ ಯದಿ ತೇಽನುಗ್ರಹೋ ಮಯಿ ॥ ೮ ॥

ಪ್ರಾಪ್ತೇ ಕಲಿಯುಗೇ ಘೋರೇ ನರಾಃ ಪುಣ್ಯವಿವರ್ಜಿತಾಃ । ದುರಾಚಾರರತಾಸ್ಸರ್ವೇ ಸತ್ಯವಾರ್ತಾಪರಾಙ್ಮುಖಾಃ ॥ ೯ ॥

ಪರಾಪವಾದನಿರತಾಃ ಪರದ್ರವ್ಯಾಭಿಲಾಷಿಣಃ । ಪರಸ್ತ್ರೀಸಕ್ತಮನಸಃ ಪರಹಿಂಸಾಪರಾಯಣಾಃ ॥ ೧೦ ॥

---

೭. ಬ್ರಹ್ಮನ ಈ ಮಾತನ್ನು ನಾರದನು ಕೇಳಿ ಎಲೈ ಬ್ರಹ್ಮನೇ ! ನಿನ್ನಿಂದ ಮೊದಲೇ ಒಳ್ಳೆಯದು, ಕೆಟ್ಟದ್ದು ಎಲ್ಲವನ್ನೂ ಕೇಳಿದ್ದೇನೆ.

೮. ಎಲೈ ಸುರಶ್ರೇಷ್ಠನೇ ! ಈಗ ಕೇಳತಕ್ಕದ್ದು ಒಂದು ಮಾತ್ರವಿದೆ. ನನ್ನಲ್ಲಿ ನಿನಗೆ ಅನುಗ್ರಹ ಬುದ್ಧಿಯಿದ್ದರೆ ಅದು ಗುಟ್ಟಾದುದಾದರೂ ಹೇಳು.

೯. ಎಲೈ ಬ್ರಹ್ಮನೇ ! ಘೋರವಾದ ಕಲಿಯುಗವು ಬಂದಮೇಲೆ ಮನುಷ್ಯರೆಲ್ಲರೂ ಪುಣ್ಯಕೆಲಸಗಳನ್ನು ಬಿಟ್ಟುಬಿಡುತ್ತಾರೆ. ದುರಾಚಾರದಲ್ಲಿ ಆಸಕ್ತರಾಗುತ್ತಾರೆ. ಸತ್ಯದ ಮಾತನ್ನೇ ಆಡುವುದಿಲ್ಲ.

೧೦. ಪರರಮೇಲೆ ಅಪವಾದವನ್ನು ಹೊರಿಸುವುದರಲ್ಲಿ ಆಸಕ್ತಿಯುಳ್ಳವರಾಗಿಯೂ, ಪರರ ಹಣವನ್ನು ಆಶಿಸುವವರಾಗಿಯೂ, ಪರರ ಹೆಂಡಿರಲ್ಲಿ ಮನಸ್ಸುಳ್ಳವರಾಗಿಯೂ, ಪರರನ್ನು ಹಿಂಸಿಸುವುದರಲ್ಲಿ ಅಪೇಕ್ಷೆಯುಳ್ಳವರಾಗಿಯೂ ಆಗುವರು.

ದೇಹಾತ್ಮದೃಷ್ಟಯೋ ಮೂಢಾ ನಾಸ್ತಿಕಾಃ ಪಶುಬುದ್ಧಯಃ । ಮಾತಾಪಿತೃಕೃತದ್ವೇಷಾಃ ಸ್ತ್ರೀದೇವಾಃ ಕಾಮಕಿಂಕರಾಃ ॥ ೧೧ ॥

ವಿಪ್ರಾ ಲೋಭಗ್ರಹಗ್ರಸ್ತಾ ವೇದವಿಕ್ರಯಜೀವಿನಃ । ಧನಾರ್ಜನಾರ್ಥಮಭ್ಯಸ್ತವಿದ್ಯಾ ಮದವಿಮೋಹಿತಾಃ ॥ ೧೨ ॥

ತ್ಯಕ್ತಸ್ವಜಾತಿ ಕರ್ಮಾಣಃ ಪ್ರಾಯಶಃ ಪರವಂಚಕಾಃ । ಕ್ಷತ್ರಿಯಾಶ್ಚ ತಥಾ ವೈಶ್ಯಾಃ ಸ್ವಧರ್ಮತ್ಯಾಗಶೀಲಿನಃ ॥ ೧೩ ॥

---

೧೧. ದೇಹವೇ ಆತ್ಮವೆಂಬ ತಪ್ಪುತಿಳಿವಳಿಕೆಯುಳ್ಳವರಾಗಿಯೂ, ದಡ್ಡರಾಗಿಯೂ ದೇವರನ್ನು ನಂಬದವರಾಗಿಯೂ ಪಶುಗಳಂತೆ ವಿವೇಕಜ್ಞಾನವಿಲ್ಲದವರಾಗಿಯೂ, ತಾಯಿತಂದೆಗಳನ್ನು ದ್ವೇಷಿಸುವವರಾಗಿಯೂ, ಕಾಮಭೋಗಕ್ಕೆ ಮನಗೊಟ್ಟು ಹೆಂಡತಿಯನ್ನೇ ದೇವರಂತೆ ತಿಳಿಯುವವರಾಗಿಯೂ, ಆಗುತ್ತಾರೆ.

೧೨. ಬ್ರಾಹ್ಮಣರಾದವರು ಆಸೆಗೆ ಒಳಗಾದವರಾಗಿಯೂ, ವೇದವನ್ನು ಹೇಳಿಕೊಟ್ಟು ಅದರಿಂದ ಜೀವನ ಮಾಡುವವರಾಗಿಯೂ, ಹಣವನ್ನು ಸಂಪಾದಿಸುವುದಕ್ಕಾಗಿಯೇ ವಿದ್ಯಾಭ್ಯಾಸವನ್ನು ಮಾಡುವವರಾಗಿಯೂ, ಆ ವಿದ್ಯೆಯಿಂದ ವಿವೇಕವನ್ನು ಹೊಂದದೆ ಮದವನ್ನು ಹೊಂದಿ ಅಜ್ಞಾನದಲ್ಲಿ ಬೀಳುವವರಾಗಿಯೂ, ಆಗುತ್ತಾರೆ.

೧೩. ತಮ್ಮ ತಮ್ಮ ಜಾತಿಗೆ ತಕ್ಕಂತೆ ಶಾಸ್ತ್ರದಲ್ಲಿ ಹೇಳಿರುವ ಕರ್ಮವನ್ನು ಮಾಡದೆ ಬಿಟ್ಟು ಬಿಡುವವರಾಗಿಯೂ, ಅನೇಕವಾಗಿ ಪರರನ್ನು ವಂಚಿಸುವವರಾಗಿಯೂ ಆಗುವರು. ಕ್ಷತ್ರಿಯರೂ, ಅಂತೆಯೇ ವೈಶ್ಯರೂ ಕೂಡ ತಮ್ಮ ತಮ್ಮ ಕುಲಜಾತಿಗಳ ಧರ್ಮವನ್ನು ಬಿಟ್ಟು ಬಿಡುತ್ತಾರೆ.

ತದ್ವಚ್ಛೂದ್ರಾಶ್ಚ ಯೇ ಕೇಚಿದ್ಬ್ರಾಹ್ಮಣಾಚಾರತತ್ಪರಾಃ । ಸ್ತ್ರಿಯಶ್ಚ ಪ್ರಾಯಶೋ ಭ್ರಷ್ಟಾ ಭರ್ತೃವಜ್ಞಾನನಿರ್ಭಯಾಃ ॥ ೧೪ ॥
ಶ್ವಶುರದ್ರೋಹಕಾರಿಣ್ಯೋ ಭವಿಷ್ಯಂತಿ ನ ಸಂಶಯಃ । ಏತೇಷಾಂ ನಷ್ಟಬುದ್ಧೀನಾಂ ಪರಲೋಕಃ ಕಥಂ ಭವೇತ್ ॥ ೧೫ ॥
ಇತಿ ಚಿಂತಾಕುಲಂ ಚಿತ್ತಂ ಜಾಯತೇ ಮಮ ಸಂತತಂ । ಲಘೂಪಾಯೇನ ಯೇನೈಷಾಂ ಪರಲೋಕಗತಿರ್ಭವೇತ್ ॥ ೧೬ ॥
ತಮುಪಾಯಮುಪಾಖ್ಯಾಹಿ ಸರ್ವಂ ವೇತ್ತಿ ಯತೋ ಭವಾನ್ । ಇತ್ಯೃಷೇರ್ವಾಕ್ಯಮಾಕರ್ಣ್ಯ ಪ್ರತ್ಯುವಾಚಾಂಬುಜಾಸನಃ॥೧೭॥

---

೧೪. ಅದರಂತೇ ಶೂದ್ರರೂ ತಮ್ಮ ಆಚಾರವನ್ನು ಬಿಟ್ಟು ಬ್ರಾಹ್ಮಣರ ಆಚಾರದಲ್ಲಿ ಆಸಕ್ತರಾಗಿ ಅದನ್ನು ಆಚರಿಸುತ್ತಾರೆ. ಹೆಂಗಸರೂ ಕೂಡ ತಮ್ಮ ಪಾತಿವ್ರತ್ಯದಿಂದ ಪತಿತರಾಗಿ ಗಂಡನಿಗೆ ಅವಮಾನಮಾಡುತ್ತ ಭಯವಿಲ್ಲದೇ ಇರುತ್ತಾರೆ.

೧೫. ಆ ಹೆಂಗಸರು ತಮ್ಮ ಮಾವನಿಗೆ ದ್ರೋಹಮಾಡುತ್ತ ಇರುವರು. ಇದರಲ್ಲಿ ಸಂಶಯವಿಲ್ಲ. ಈ ರೀತಿಯಾಗಿ ಇವರೆಲ್ಲರೂ ವಿವೇಕ ಬುದ್ಧಿಯನ್ನು ನಾಶಮಾಡಿಕೊಳ್ಳುವರಷ್ಟೆ ! ಇವರೆಲ್ಲರಿಗೂ ಪರಲೋಕವು ಹೇಗೆ ಸಿಕ್ಕುವುದು ?

೧೬. ಇದನ್ನು ಯೋಚಿಸುತ್ತ ನನ್ನ ಮನಸ್ಸು ಯಾವಾಗಲೂ ಚಿಂತೆಗೆ ಒಳಗಾಗುತ್ತಲೇ ಇರುವುದು. ಇಂತಹವರಿಗೆ ಯಾವುದಾದರೂ ಒಂದು ಸಣ್ಣ ಉಪಾಯದಿಂದ ಪರಲೋಕ ಪ್ರಾಪ್ತಿಯಾಗಬೇಕು.

೧೭. ಎಲೈ ಬ್ರಹ್ಮನೇ ! ನೀನು ಇದೆಲ್ಲವನ್ನೂ ತಿಳಿದಿರುವುದರಿಂದ ಅಂತಹ ಒಂದು ಸುಲಭವಾದ ಉಪಾಯವನ್ನು ಹೇಳು. ಎನ್ನಲು ನಾರದನ ಈ ರೀತಿಯಾದ ಮಾತನ್ನು ಕೇಳಿ ಬ್ರಹ್ಮನು ಅವನನ್ನು ಕುರಿತು ಇಂತೆಂದನು.

ಸಾಧುಪೃಷ್ಟಂ ತ್ವಯಾ ಸಾಧೋ ವಕ್ಷ್ಯೇ ತಚ್ಛೃಣು ಸಾದರಂ । ಪುರಾತ್ರಿಪುರಹಂತಾರಂ ಪಾರ್ವತೀ ಭಕ್ತವತ್ಸಲಾ ॥ ೧೮ ॥

ಶ್ರೀರಾಮತತ್ವಂ ಜಿಜ್ಞಾಸುಃ ಪಪ್ರಚ್ಛ ವಿನಯಾನ್ವಿತಾ । ಪ್ರಿಯಾಯೈ ಗಿರಿಶಸ್ತಸ್ಯೈ ಗೂಢಂ ವ್ಯಾಖ್ಯಾತವಾನ್ ಸ್ವಯಂ ॥ ೧೯ ॥

ಪುರಾಣೋತ್ತಮಮಧ್ಯಾತ್ಮರಾಮಾಯಣಮಿತಿ ಸ್ಮೃತಂ । ತತ್ಪಾರ್ವತೀ ಜಗದ್ಧಾತ್ರೀ ಪೂಜಯಿತ್ವಾ ದಿವಾನಿಶಂ ॥ ೨೦ ॥

ಆಲೋಚಯಂತೀ ಸ್ವಾನಂದಮಗ್ನಾ ತಿಷ್ಠತಿ ಸಾಂಪ್ರತಂ । ಪ್ರಚರಿಷ್ಯತಿ ತಲ್ಲೋಕೇ ಪ್ರಾಣ್ಯದೃಷ್ಟವಶಾದ್ಯದಾ ॥ ೨೧ ॥

೧೮–೧೯. ಎಲೈ ನಾರದನೇ ! ನೀನು ಕೇಳಿದ ವಿಚಾರವು ಚೆನ್ನಾಗಿದೆ. ಅದಕ್ಕೆ ಉಪಾಯವನ್ನು ಹೇಳುತ್ತೇನೆ. ಮನಸ್ಸಿಟ್ಟು ಕೇಳು. ಪೂರ್ವದಲ್ಲಿ ಭಕ್ತವತ್ಸಲಳಾದ ಪಾರ್ವತಿಯು ತ್ರಿಪುರಸಂಹಾರಕನಾದ ಶಿವನನ್ನು ಕುರಿತು ಶ್ರೀರಾಮನ ನಿಜಸ್ಥಿತಿಯನ್ನು ತಿಳಿಯಬೇಕೆಂಬ ಅಪೇಕ್ಷೆಯಿಂದ ವಿನಯದಿಂದ ಅವನನ್ನು ಕುರಿತು ಕೇಳಲು ಆ ಶಿವನು ಪಾರ್ವತಿಗೆ ಆ ರಾಮನ ವಿಷಯವನ್ನು ಗುಟ್ಟಾದರೂ ತಾನಾಗಿಯೇ ಹೇಳಿದನು.

೨೦. ಪುರಾಣಗಳಲ್ಲಿ ಅತ್ಯುತ್ತಮವಾದ ಅಧ್ಯಾತ್ಮರಾಮಾಯಣವೆಂಬುದು ಒಂದು ಇದೆ. ಅದನ್ನು ಪಾರ್ವತಿಯು ಹಗಲೂ ರಾತ್ರಿಯೂ ಪೂಜಿಸುತ್ತಿರುವಳು.

೨೧–೨೨. ಆಕೆಯು ಆ ರಾಮಾಯಣದ ವಿಷಯವನ್ನೇ ಆಲೋಚಿಸುತ್ತ ತಾನು ಅದರ ಆನಂದದಲ್ಲಿಯೇ ಆಸಕ್ತಳಾಗಿ ಮೈಮರೆತಿರುವಳು. ಆಕೆಯು ಅದನ್ನು ಪ್ರಾಣಿಗಳ ಅದೃಷ್ಟದ ದೆಸೆಯಿಂದ ಯಾವಾಗ ಲೋಕದಲ್ಲಿ ಪ್ರಚಾರಮಾಡುವಳೋ ಆಗ ಅದನ್ನು

ತಸ್ಯಾಧ್ಯಯನಮಾತ್ರೇಣ ಜನಾ ಯಾಸ್ಯಂತಿ ಸದ್ಗತಿಂ । ತಾವದ್ವಿಜೃಂಭತೇ ಪಾಪಂ ಬ್ರಹ್ಮಹತ್ಯಾಪುರಸ್ಸರಂ ॥ ೨೨ ॥

ಯಾವಜ್ಜಗತಿ ನಾಧ್ಯಾತ್ಮರಾಮಾಯಣಮುದೇಷ್ಯತಿ । ತಾವತ್ಕಲಿರ್ಮಹೋತ್ಸಾಹೋ ನಿಶ್ಶಂಕಂ ಸಂಪ್ರವರ್ತತೇ ॥ ೨೩ ॥

ಯಾವಜ್ಜಗತಿ ನಾಧ್ಯಾತ್ಮರಾಮಾಯಣಮುದೇಷ್ಯತಿ । ತಾವದ್ಯಮಭಟಾಶ್ಶೂರಾಃ ಸಂಚರಿಷ್ಯಂತಿ ನಿರ್ಭಯಾಃ ॥ ೨೪ ॥

ಯಾವಜ್ಜಗತಿ ನಾಧ್ಯಾತ್ಮರಾಮಾಯಣಮುದೇಷ್ಯತಿ । ತಾವತ್ಸರ್ವಾಣಿ ಶಾಸ್ತ್ರಾಣಿ ವಿವದಂತೇ ಪರಸ್ಪರಂ ॥ ೨೫ ॥

ಓದುವುದರಿಂದಲೇ ಜನಗಳು ಉತ್ತಮಗತಿಯನ್ನು ಹೊಂದುವರು. ಅಲ್ಲಿಯುವರೆಗೂ ಬ್ರಹ್ಮಹತ್ಯವೇ ಮುಂತಾದ ಪಾಪಗಳು ನಾನು ತಾನೆಂದು ಪ್ರಕಾಶವಾಗಿರುತ್ತವೆ.

೨೩. ಅಧ್ಯಾತ್ಮರಾಮಾಯಣವು ಪ್ರಪಂಚದಲ್ಲಿ ಪ್ರಚಾರವಾಗುವವರೆಗೂ ಕಲಿಯು ಬಹು ಉತ್ಸಾಹದಿಂದ ತಡೆಯಿಲ್ಲದೆ ಎಲ್ಲಾ ಕಡೆಯಲ್ಲಿಯೂ ಹರಡಿಕೊಂಡಿರುವನು.

೨೪. ಜಗತ್ತಿನಲ್ಲಿ ಅಧ್ಯಾತ್ಮರಾಮಾಯಣವು ಪ್ರಚಾರವಾಗುವವರೆಗೂ ಯಮಭಟರು ಶೂರರಾಗಿ ಭಯವಿಲ್ಲದೆ ಪ್ರಪಂಚದಲ್ಲಿ ಸಂಚರಿಸುತ್ತಾ ಪ್ರಾಣಿಗಳನ್ನು ಹಿಡಿದುಕೊಂಡು ಹೋಗುತ್ತಿರುತ್ತಾರೆ

೨೫. ಜಗತ್ತಿನಲ್ಲಿ ಅಧ್ಯಾತ್ಮರಾಮಾಯಣವು ಪ್ರಚಾರವಾಗುವವರೆಗೂ ಎಲ್ಲಾ ಶಾಸ್ತ್ರಗಳೂ ಒಂದಕ್ಕೊಂದು ವಿರೋಧವಾಗಿ ಕಾಣುತ್ತವೆ. ಮತ್ತು ನಾನು ಹೆಚ್ಚು ತಾನು ಹೆಚ್ಚೆಂದೆನ್ನುತ್ತವೆ.

ತಾವತ್ಸ್ವರೂಪಂ ರಾಮಸ್ಯ ದುರ್ಬೋಧಂ ಮಹತಾಮಪಿ । ಯಾವಜ್ಜಗತಿ ನಾಧ್ಯಾತ್ಮರಾಮಾಯಣಮುದೇಷ್ಯತಿ ॥ ೨೬ ॥

ಅಧ್ಯಾತ್ಮರಾಮಾಯಣಸಂಕೀರ್ತನಶ್ರವಣಾದಿಜಂ । ಫಲಂ ವಕ್ತುಂ ನ ಶಕ್ನೋಮಿ ಕಾರ್ತ್ಸ್ನ್ಯೇನ ಮುನಿಸತ್ತಮ ॥ ೨೭ ॥

ತಥಾಪಿ ತಸ್ಯ ಮಾಹಾತ್ಮ್ಯಂ ವಕ್ಷ್ಯೇ ಕಿಂಚಿತ್ತವಾನಘ । ಶೃಣು ಚಿತ್ತಂ ಸಮಾಧಾಯ ಶಿವೇನೋಕ್ತಂ ಪುರಾ ಮಮ । ॥ ೨೮ ॥

ಅಧ್ಯಾತ್ಮರಾಮಾಯಣತಃ ಶ್ಲೋಕಂ ಶ್ಲೋಕಾರ್ಧಮೇವ ವಾ । ಯಃ ಪಠೇದ್ಭಕ್ತಿಸಂಯುಕ್ತಃ ಸ ಪಾಪಾನ್ಮುಚ್ಯತೇ ಕ್ಷಣಾತ್ ॥೨೯॥

---

೨೬. ಅಧ್ಯಾತ್ಮರಾಮಾಯಣವು ಎಲ್ಲಿಯವರೆಗೆ ಪ್ರಚಾರವಾಗುವುದಿಲ್ಲವೋ ಅಲ್ಲಿಯವರೆಗೂ ಕೂಡ ಶ್ರೀರಾಮನ ಸ್ವರೂಪವು ಮಹಾತ್ಮರಿಗೂ ಕೂಡ ತಿಳಿಯಲು ಕಷ್ಟವಾಗುತ್ತದೆ. ಅಧ್ಯಾತ್ಮರಾಮಾಯಣವು ಪ್ರಚಾರಕ್ಕೆ ಬಂದಮೇಲೆ ಅವನ ಸ್ವರೂಪವು ತಿಳಿಯುತ್ತದೆ.

೨೭. ಈ ಅಧ್ಯಾತ್ಮರಾಮಾಯಣವನ್ನು ಹೇಳುವುದರಿಂದಾಗಲಿ ಕೇಳುವುದರಿಂದಾಗಲಿ ಬರುವ ಫಲವನ್ನು ಪೂರ್ತಿಯಾಗಿ ಹೇಳಲು ನನಗೆ ಸಾಧ್ಯವೇ ಆಗುವುದಿಲ್ಲ.

೨೮. ಆದರೂ ಕೂಡ ಅದರ ಮಹಿಮೆಯನ್ನು ನಿನಗೆ ಸ್ವಲ್ಪಮಟ್ಟಿಗೆ ಹೇಳುತ್ತೇನೆ. ಎಲೈ ನಾರದನೆ! ಆ ಶಿವನೇ ಅದನ್ನು ನನಗೆ ಪೂರ್ವದಲ್ಲಿ ಹೇಳಿದನು. ಅದನ್ನೇ ನಿನಗೆ ಹೇಳುತ್ತೇನೆ. ಸಾವಧಾನವಾಗಿ ಕೇಳು.

೨೯. ಅಧ್ಯಾತ್ಮರಾಮಾಯಣದ ಒಂದು ಶ್ಲೋಕವನ್ನಾಗಲಿ ಅದಾಗದಿದ್ದರೆ ಅರ್ಧಶ್ಲೋಕವನ್ನಾಗಲಿ ಯಾವನು ಭಕ್ತಿಯಿಂದ ಓದುವನೋ ಅಥವಾ ಕೇಳುವನೋ ಅವನ ಪಾಪವು ಒಡನೆಯೇ ಹೋಗುತ್ತದೆ.

ಯಸ್ತು ಪ್ರತ್ಯಹಮಧ್ಯಾತ್ಮರಾಮಾಯಣಮನನ್ಯಧೀಃ । ಯಥಾಶಕ್ತಿ ವದೇದ್ಭಕ್ತ್ಯಾ ಸ ಜೀವನ್ಮುಕ್ತ ಉಚ್ಯತೇ ॥ ೩೦ ॥
ಯೋ ಭಕ್ತ್ಯಾರ್ಚಯತೇಧ್ಯಾತ್ಮರಾಮಾಯಣಮತಂದ್ರಿತಃ । ದಿನೇದಿನೇಶ್ವಮೇಧಸ್ಯ ಫಲಂ ತಸ್ಯ ಭವೇನ್ಮುನೇ ॥ ೩೧ ॥
ಯದೃಚ್ಛಯಾಪಿ ಯೋಧ್ಯಾತ್ಮರಾಮಾಯಣಮನಾದರಾತ್ । ಅನ್ಯತಃ ಶೃಣುಯಾನ್ಮರ್ತ್ಯಃ ಸೋಪಿ ಮುಚ್ಯೇತ ಪಾತಕಾತ್ ॥ ೩೨ ॥
ನಮಸ್ಕರೋತಿ ಯೋಧ್ಯಾತ್ಮರಾಮಾಯಣಮದೂರತಃ । ಸರ್ವದೇವಾರ್ಚನಫಲಂ ಸ ಪ್ರಾಪ್ನೋತಿ ನ ಸಂಶಯಃ ॥ ೩೩ ॥

---

೩೦. ಈ ಅಧ್ಯಾತ್ಮರಾಮಾಯಣವನ್ನು ಯಾವನು ಮನಸ್ಸನ್ನು ಸ್ಥಿರವಾಗಿಟ್ಟುಕೊಂಡು ಬೇರೆ ಕಡೆಗೆ ಚಲಿಸದಂತೆ ಮಾಡಿ ತನ್ನ ಕೈಲಾದಷ್ಟನ್ನು ಸಾಧ್ಯವಾದಷ್ಟನ್ನು ಓದುತ್ತಾನೆಯೋ ಅಥವಾ ಕೇಳುತ್ತಾನೆಯೋ ಅವನು ಜೀವನ್ಮುಕ್ತನೆಂಬುದಾಗಿ ಹೇಳಲ್ಪಡುತ್ತಾನೆ.

೩೧. ಅಧ್ಯಾತ್ಮರಾಮಾಯಣವನ್ನು ಯಾವನು ಉದಾಸೀನಮಾಡದೆ ನಿತ್ಯವೂ ಪೂಜಿಸುವನೋ ಅವನು ಪ್ರತಿದಿನವೂ ಅಶ್ವಮೇಧ ಯಾಗವನ್ನು ಮಾಡಿದ ಪುಣ್ಯವನ್ನು ಹೊಂದುವನು.

೩೨. ಅಧ್ಯಾತ್ಮರಾಮಾಯಣವನ್ನು ಹೇಳುತ್ತಿದ್ದಲ್ಲಿ ಯಾವನಾದರೂ ಅದರಲ್ಲಿ ಅಪೇಕ್ಷೆಪಡದೆ ಅಕಸ್ಮಾತ್ತಾಗಿ ಕೇಳಿದರೂ ಕೂಡ ಅವನು ಪಾಪಗಳಿಂದ ಮುಕ್ತನಾಗುತ್ತಾನೆ.

೩೩. ಯಾವನು ಅಧ್ಯಾತ್ಮರಾಮಾಯಣವನ್ನು ಹತ್ತಿರದಲ್ಲಿ ನಮಸ್ಕರಿಸುತ್ತಾನೆಯೋ ಅವನು ಎಲ್ಲಾ ದೇವರನ್ನೂ ಪೂಜಿಸಿದ ಫಲವನ್ನು ಹೊಂದುತ್ತಾನೆ. ಸಂಶಯವಿಲ್ಲ.

ಲಿಖಿತ್ವಾ ಪುಸ್ತಕೇಧ್ಯಾತ್ಮರಾಮಾಯಣಮಶೇಷತಃ । ಯೋ ದದ್ಯಾದ್ರಾಮಭಕ್ತೇಭ್ಯಃ ತಸ್ಯ ಪುಣ್ಯಫಲಂ ಶ್ರುಣು ॥ ೩೪ ॥

ಅಧೀತೇಷು ಚ ವೇದೇಷು ಶಾಸ್ತ್ರೇಷು ವ್ಯಾಕೃತೇಷು ಚ । ಯತ್ಫಲಂ ದುರ್ಲಭಂ ಲೋಕೇ ತತ್ಫಲಂ ತಸ್ಯ ಸಂಭವೇತ್ ॥ ೩೫ ॥

ಏಕಾದಶೀದಿನೇಧ್ಯಾತ್ಮರಾಮಾಯಣಮುಪೋಷಿತಃ । ಯೋ ರಾಮಭಕ್ತಃ ಸದಸಿ ವ್ಯಾಕರೋತಿ ನರೋತ್ತಮಃ ॥

ತಸ್ಯ ಪುಣ್ಯಫಲಂ ವಕ್ಷ್ಯೇ ಶೃಣು ವೈಷ್ಣವಸತ್ತಮ ॥ ೩೬ ॥

ಪ್ರತ್ಯಕ್ಷರಂ ತು ಗಾಯತ್ರೀಪುರಶ್ಚರ್ಯಾಫಲಂ ಭವೇತ್ । ಉಪವಾಸವ್ರತಂ ಕೃತ್ವಾ ಶ್ರೀರಾಮನವಮೀದಿನೇ ॥ ೩೭ ॥

---

೩೪. ಯಾವನು ಅಧ್ಯಾತ್ಮರಾಮಾಯಣವನ್ನು ಪೂರ್ತಿಯಾಗಿ ಬರೆದು ಪುಸ್ತಕವನ್ನು ಮಾಡಿ ರಾಮಭಕ್ತರಿಗೆ ಕೊಡುತ್ತಾನೆಯೋ ಅವನಿಗೆ ಬರುವ ಪುಣ್ಯದ ಫಲವನ್ನು ಕೇಳು.

೩೫. ವೇದಗಳನ್ನು ಅಧ್ಯಯನಮಾಡಿ ಶಾಸ್ತ್ರಗಳಿಗೆ ಅರ್ಥವನ್ನು ಬರೆದರೆ ಲೋಕದಲ್ಲಿ ಯಾವ ಉತ್ತಮವಾದ ಫಲವು ಬರುತ್ತದೆಯೋ ಆ ಫಲವನ್ನು ಹೊಂದುತ್ತಾನೆ.

೩೬. ಏಕಾದಶಿಯ ದಿವಸದಲ್ಲಿ ಉಪವಾಸವಿದ್ದುಕೊಂಡು ಯಾವನು ಸಭೆಯಲ್ಲಿ ಇದರ ಅರ್ಥವನ್ನು ಹೇಳುವನೋ ಅವನಿಗೆ ಬರುವ ಪುಣ್ಯಫಲವನ್ನು ಹೇಳುತ್ತೇನೆ. ಕೇಳು.

೩೭. ಹಾಗೆ ರಾಮಾಯಣದ ಅರ್ಥವನ್ನು ಹೇಳಿದರೆ ಗಾಯತ್ರಿಯ ಪುನಶ್ಚರಣೆಯನ್ನು ಮಂತ್ರಶಾಸ್ತ್ರದಲ್ಲಿ ಹೇಳಿರುವಂತೆ ಸಂಪೂರ್ಣವಾಗಿ ಪುನಶ್ಚರಣೆ ಮಾಡಿದರೆ ಪ್ರತಿಯಕ್ಷರಕ್ಕೂ ಯಾವ ಫಲವನ್ನು ಹೇಳಿದೆಯೋ ಅಂತಹ ಗಾಯತ್ರಿಯ ಸಂಪೂರ್ಣ ಫಲವನ್ನು ಹೊಂದುತ್ತಾನೆ.

ರಾತ್ರೌ ಜಾಗರಿತೋಧ್ಯಾತ್ಮರಾಮಾಯಣಮನನ್ಯಧೀಃ । ಯಃ ಪಠೇಚ್ಛೃಣುಯಾದ್ವಾಪಿ ತಸ್ಯ ಪುಣ್ಯಂ ವದಾಮ್ಯಹಂ ॥ ೩೮ ॥
ಕುರುಕ್ಷೇತ್ರಾದಿನಿಖಿಲಪುಣ್ಯತೀರ್ಥೇಷ್ವನೇಕಶಃ । ಆತ್ಮತುಲ್ಯಂ ಧನಂ ಸೂರ್ಯಗ್ರಹಣೇ ಸರ್ವತೋಮುಖೇ ॥ ೩೯ ॥
ವಿಪ್ರೇಭ್ಯೋ ವ್ಯಾಸತುಲ್ಯೇಭ್ಯೋ ದತ್ವಾ ಯತ್ಫಲಮಶ್ನುತೇ । ತತ್ಫಲಂ ಸಂಭವೇತ್ತಸ್ಯ ಸತ್ಯಂ ಸತ್ಯಂ ನ ಸಂಶಯಃ ॥ ೪೦ ॥
ಯೋ ಗಾಯತೇ ಮುದಾಧ್ಯಾತ್ಮರಾಮಾಯಣಮಹರ್ನಿಶಂ । ಆಜ್ಞಾಂ ತಸ್ಯ ಪ್ರತೀಕ್ಷಂತೇ ದೇವಾ ಇಂದ್ರಪುರೋಗಮಾಃ ॥ ೪೧ ॥

---

೩೮. ಶ್ರೀರಾಮನವಮಿಯ ದಿವಸ ಉಪವಾಸವನ್ನು ಮಾಡಿ ರಾತ್ರಿಯಲ್ಲಿ ಜಾಗರಣೆಮಾಡುತ್ತಾ ಈ ಅಧ್ಯಾತ್ಮರಾಮಾಯಣವನ್ನು ಒಂದೇ ಮನಸ್ಸಿನಿಂದ ಓದಿದರಾಗಲೀ ಕೇಳಿದರಾಗಲೀ ಅವನಿಗೆ ಬರುವ ಪುಣ್ಯಫಲವನ್ನು ಹೇಳುತ್ತೇನೆ.

೩೯-೪೦. ಕುರುಕ್ಷೇತ್ರವೇ ಮುಂತಾದ ಪುಣ್ಯತೀರ್ಥಗಳಲ್ಲಿ ಪೂರ್ಣಗ್ರಾಸವಾಗುವ ಸೂರ್ಯಗ್ರಹಣದಲ್ಲಿ ಅನೇಕ ಬಾರಿ ತನ್ನ ತೂಕದ ಹಣವನ್ನು ವ್ಯಾಸರಂತೆ ಬ್ರಹ್ಮನನ್ನು ತಿಳಿದ ಯೋಗ್ಯರಾದ ಬಹುಜನ ವಿಪ್ರರಿಗೆ ಕೊಟ್ಟರೆ ಯಾವ ಫಲವು ಬರುತ್ತದೆಯೋ ಅಂತಹ ಫಲವನ್ನು ಹೊಂದುತ್ತಾನೆ. ಸತ್ಯವು, ಸತ್ಯವು, ಸಂಶಯವಿಲ್ಲ.

೪೧. ಯಾವನು ಸಂತೋಷದಿಂದ ಅಧ್ಯಾತ್ಮರಾಮಾಯಣವನ್ನು ಯಾವಾಗಲೂ ಹಾಡುತ್ತಿರುವನೋ ಅವನ ಅಪ್ಪಣೆಯನ್ನು ಇಂದ್ರನೇ ಮುಂತಾದ ದೇವತೆಗಳೂ ಕೂಡ ಎದುರು ನೋಡುತ್ತಾ ಸಿದ್ಧರಾಗಿರುತ್ತಾರೆ.

ಪಠ೯ ಪ್ರತ್ಯಹಮಧ್ಯಾತ್ಮರಾಮಾಯಣಮನುವ್ರತಃ । ಯದ್ಯತ್ಕರೋತಿ ತತ್ಕರ್ಮ ತತಃ ಕೋಟಿಗುಣಂ ಭವೇತ್ ॥ ೪೨ ॥

ತತ್ರ ಶ್ರೀರಾಮಹೃದಯಂ ಯಃ ಪಠೇತ್ಸುಸಮಾಹಿತಃ । ಸ ಬ್ರಹ್ಮಘ್ನೋಽಪಿ ಪೂತಾತ್ಮಾ ತ್ರಿಭಿರೇವ ದಿನೈರ್ಭವೇತ್ ॥ ೪೩ ॥

ಶ್ರೀರಾಮಹೃದಯಂ ಯಸ್ತು ಹನೂಮತ್ಪ್ರತಿಮಾಂತಿಕೇ । ತ್ರಿಃ ಪಠೇತ್ಪ್ರತ್ಯಹಂ ಮೌನೀ ಸ ಸರ್ವೇಪ್ಸಿತಭಾಗ್ಭವೇತ್ ॥ ೪೪ ॥

ಪಠ೯ ಶ್ರೀರಾಮಹೃದಯಂ ತುಲಸ್ಯಶ್ವತ್ಥಯೋರ್ಯದಿ । ಪ್ರತ್ಯಕ್ಷರಂ ಪ್ರಕುರ್ವೀತ ಬ್ರಹ್ಮಹತ್ಯಾಂ ನಿವರ್ತಯೇತ್ ॥ ೪೫ ॥

---

೪೨. ನಿಯಮದಿಂದ ಅಧ್ಯಾತ್ಮರಾಮಾಯಣವನ್ನು ನಿತ್ಯವೂ ಪಾರಾಯಣಮಾಡುತ್ತಲಿರುವವನು ಯಾವ ಕೆಲಸವನ್ನು ಮಾಡಿದರೂ ಅದು ಅದರ ಫಲದ ಕೋಟಿಯಷ್ಟು ಫಲವನ್ನು ಹೆಚ್ಚಾಗಿ ಕೊಡುವುದು

೪೩. ಈ ಅಧ್ಯಾತ್ಮರಾಮಾಯಣದಲ್ಲಿರುವ ಶ್ರೀರಾಮಹೃದಯವನ್ನು ಯಾವನು ನಿತ್ಯವೂ ಒಂದೇ ಮನಸ್ಸಿನಿಂದ ಓದುವನೋ ಅವನು ಬ್ರಹ್ಮಹತ್ಯೆಯನ್ನು ಮಾಡಿದ್ದರೂ ಮೂರುದಿನಗಳಲ್ಲಿಯೇ ಆ ಪಾಪವನ್ನು ಕಳೆದುಕೊಂಡು ಶುದ್ಧನಾಗುವನು.

೪೪. ಹನುಮಂತನ ಪ್ರತಿಮೆಯ ಬಳಿಯಲ್ಲಿ ಈ ಶ್ರೀರಾಮಹೃದಯವನ್ನು ಮೌನದಲ್ಲಿದ್ದುಕೊಂಡು ದಿನವೂ ಮೂರುಬಾರಿ ಮನಸ್ಸಿನಲ್ಲಿಯೇ ಹೇಳಿಕೊಂಡರೆ ಅವನ ಇಷ್ಟಾರ್ಥಗಳೆಲ್ಲವೂ ಕೈಗೂಡುತ್ತವೆ.

೪೫. ಈ ಶ್ರೀರಾಮಹೃದಯವನ್ನು ತುಲಸಿಯ ಗಿಡದ ಬಳಿಯಲ್ಲಾಗಲೀ ಅರಳಿಯ ಮರದ ಬುಡದಲ್ಲಿಯಾಗಲೀ ಓದುತ್ತಾ ಅವುಗಳಿಗೆ ಅಕ್ಷರ ನಮಸ್ಕಾರಗಳನ್ನು ಅರ್ಪಿಸಿದರೆ ಬ್ರಹ್ಮಹತ್ಯೆಯು ಹೋಗುತ್ತದೆ.

ಶ್ರೀರಾಮಗೀತಾಮಾಹಾತ್ಮ್ಯಂ ಕೃತ್ಸ್ನಂ ಜಾನಾತಿ ಶಂಕರಃ । ತದರ್ಧಂ ಗಿರಿಜಾ ವೇತ್ತಿ ತದರ್ಧಂ ವೇದ್ಮ್ಯಹಂ ಮುನೇ ॥ ೪೬ ॥

ತತ್ತೇ ಕಿಂಚಿತ್ಪ್ರವಕ್ಷ್ಯಾಮಿ ಕೃತ್ಸ್ನಂ ವಕ್ತುಂ ನ ಶಕ್ಯತೇ । ಯತ್ ಜ್ಞಾತ್ವಾ ತತ್ ಕ್ಷಣಾಲ್ಲೋಕಃ ಚಿತ್ತಶುದ್ಧಿಮವಾಪ್ನುಯಾತ್ ।
ಶ್ರೀರಾಮಗೀತಾ ಯತ್ಪಾಪಂ ನ ನಾಶಯತಿ ನಾರದ ॥ ೪೭ ॥

ತನ್ನನಶ್ಯತಿ ತೀರ್ಥಾದೌ ಲೋಕೇ ಕ್ವಾಪಿ ಕದಾಚನ । ತನ್ನ ಪಶ್ಯಾಮ್ಯಹಂ ಲೋಕೇ ಮಾರ್ಗಮಾಣೋಪಿ ಸರ್ವದಾ ॥ ೪೮ ॥

---

೪೬. ಶ್ರೀರಾಮ ಚರಿತ್ರೆಯ ಪೂರ್ತಿಯಾದ ಫಲವನ್ನು ಶಂಕರನು ತಿಳಿದಿರುವನು. ಆ ಶಂಕರನು ತಿಳಿದಿರುವುದರಲ್ಲಿ ಅರ್ಧವನ್ನು ಅವನ ಹೆಂಡತಿಯಾದ ಪಾರ್ವತಿಯು ತಿಳಿದಿರುವಳು. ಆ ಗಿರಿಜೆಯು ತಿಳಿದಿರುವುದರಲ್ಲಿ ನಾನು ಅರ್ಧವನ್ನು ತಿಳಿದಿದ್ದೇನೆ. ಎಂ೯ರೆ ನನಗೆ ಕಾಲುಪಾಲು ಗೊತ್ತಿದೆ.

೪೭. ಅದರಲ್ಲಿ ಸ್ವಲ್ಪವನ್ನು ನಿನಗೆ ಹೇಳುತ್ತೇನೆ. ಪೂರ್ತಿಯಾಗಿ ಹೇಳಲು ಸಾಧ್ಯವಾಗುವುದೇ ಇಲ್ಲ. ಅಷ್ಟನ್ನು ಕೇಳಿದರೇನೇ ಜನವು ಒಡನೆಯೇ ಚಿತ್ತಶುದ್ಧಿಯನ್ನು ಹೊಂದುತ್ತದೆ.

೪೮. ಎಲೈ ನಾರದನೇ! ಶ್ರೀರಾಮನ ಗೀತೆಯಾದ ಈ ಅಧ್ಯಾತ್ಮರಾಮಾಯಣವು ಯಾವ ಪಾಪವನ್ನು ನಾ ಮಾಡುವುದಿಲ್ಲವೋ ಆ ಪಾಪವನ್ನು ಲೋಕದಲ್ಲಿ ತೀರ್ಥಗಳಿಂದಲೇ ಆಗಲಿ ಮತ್ತೆ ಯಾವ ರೀತಿಯಿಂದಲೇ ಆಗಲಿ ಕಳೆದುಕೊಳ್ಳಲಾರನು. ಅಂತಹ ಮತ್ತೊಂದು ಪಾಪನಾಶಕವಾದ ಪದಾರ್ಥವನ್ನು ಲೋಕದಲ್ಲಿ ಎಷ್ಟು ನೋಡಿ ಹುಡುಕಿದರೂ ಗೊತ್ತಾಗುವುದಿಲ್ಲ.

ರಾಮೋಣೋಪನಿಷತ್ಸಿಂಧುಮುನ್ಮಥ್ಯೋತ್ಪಾದಿತಂ ಮುದಾ । ಲಕ್ಷ್ಮಣಾಯಾರ್ಪಿತಾಂ ಗೀತಾಸುಧಾಂ ಪೀತ್ವಾಮರೋಭವೇತ್ ॥೪೯॥
ಜಮದಗ್ನಿಸುತಃ ಪೂರ್ವಂ ಕಾರ್ತವೀರ್ಯವಧೇಚ್ಛಯಾ । ಧನುರ್ವಿದ್ಯಾಮಭ್ಯಸಿತುಂ ಮಹೇಶಸ್ಯಾಂತಿಕೇ ವರ್ಸ ॥ ೫೦ ॥
ಅಧೀಯಮಾನಾಂ ಪಾರ್ವತ್ಯಾ ರಾಮಗೀತಾಂ ಪ್ರಯತ್ನತಃ । ಶ್ರುತ್ವಾ ಗೃಹೀತ್ವಾಶು ಪರ್ಶ ನಾರಾಯಣಕಲಾಮಗಾತ್ ॥ ೫೧ ॥
ಬ್ರಹ್ಮಹತ್ಯಾದಿಪಾಪಾನಾಂ ನಿಷ್ಕೃತಿಂ ಯದಿ ವಾಂಛತಿ । ರಾಮಗೀತಾಂ ಮಾಸಮಾತ್ರಂ ಪಠಿತ್ವಾ ಮುಚ್ಯತೇ ನರಃ ॥ ೫೨ ॥

---

೪೯. ಶ್ರೀರಾಮನು ಉಪನಿಷತ್ತೆಂಬ ಸಮುದ್ರವನ್ನು ಕಡೆದು ಸಂತೋಷದಿಂದ ಲಕ್ಷ್ಮಣನಿಗೆ ಕೊಟ್ಟ ರಾಮಗೀತೆಯೆಂಬ ಅಮೃತವನ್ನು ಕುಡಿದರೆ ದೇವತೆಯಾಗುತ್ತಾನೆ.

೫೦. ಪೂರ್ವದಲ್ಲಿ ಜಮದಗ್ನಿಯ ಮಗನಾದ ಪರಶುರಾಮನು ತನ್ನ ತಂದೆಗೆ ಅಪಕಾರವನ್ನು ಮಾಡಿದ ಕಾರ್ತವೀರ್ಯನನ್ನು ಕೊಲ್ಲಲು ಧನುರ್ವಿದ್ಯೆಯನ್ನು ಕಲಿಯುವ ಇಚ್ಛೆಯಿಂದ ಮಹೇಶ್ವರನ ಬಳಿಯಲ್ಲಿ ಅದನ್ನು ಅಭ್ಯಾಸಮಾಡುತ್ತಲಿದ್ದನು.

೫೧. ಆ ಶಿವನ ಬಳಿಯಲ್ಲಿ ಧನುರ್ವಿದ್ಯೆಯನ್ನು ಕಲಿಯುತ್ತಿದ್ದಾಗ ಪಾರ್ವತಿಯಿಂದ ರಾಮಗೀತೆಯನ್ನೂ ಅಭ್ಯಾಸ ಮಾಡುತ್ತಿದ್ದನು. ಅದರಿಂದಲೇ ಅವನು ನಾರಾಯಣನ ಅಂಶವನ್ನು ಹೊಂದಿದವನಾದನು.

೫೨. ಬ್ರಹ್ಮಹತ್ಯವೇ ಮುಂತಾದ ಪಾಪಗಳಿಗೆ ಬದಲು ಮಾಡಬೇಕೆಂದಿದ್ದರೆ ಈ ರಾಮಗೀತೆಯನ್ನು ಒಂದು ತಿಂಗಳು ಕಾಲ ಮಾತ್ರ ಓದು. ಆಗ ಅಂತಹ ಪಾಪಗಳೆಲ್ಲವೂ ಹೋಗುತ್ತವೆ.

ದುಷ್ಪ್ರತಿಗ್ರಹದುರ್ಭೋಜ್ಯದುರಾಲಾಪಾದಿಸಂಭವಂ । ಪಾಪಂ ಯತ್ಕೀರ್ತನಾದೇವ ರಾಮಗೀತಾ ವಿನಾಶಯೇತ್ ॥ ೫೩ ॥

ಸಾಲಗ್ರಾಮಶಿಲಾಗ್ರೇ ಚ ತುಲಸ್ಯಶ್ವತ್ಥಸನ್ನಿಧೌ । ಯತೀನಾಂ ಪುರತಸ್ತದ್ವದ್ರಾಮಗೀತಾಂ ಪಠೇತ್ತು ಯಃ ॥ ೫೪ ॥

ಸ ತತ್ಫಲಮವಾಪ್ನೋತಿ ಯದ್ವಾಚೋಽಪಿ ನ ಗೋಚರಃ । ರಾಮಗೀತಾಂ ಪಠೇದ್ಭಕ್ತ್ಯಾ ಯಃ ಶ್ರಾದ್ಧೇ ಭೋಜಯೇದ್ದ್ವಿಜಾನ್ ॥ ೫೫ ॥

ತಸ್ಯ ತೇ ಪಿತರಸ್ಸರ್ವೇ ಯಾಂತಿ ವಿಷ್ಣೋಃ ಪರಂ ಪದಂ । ಏಕಾದಶ್ಯಾಂ ನಿರಾಹಾರೋ ನಿಯತೋ ದ್ವಾದಶೀದಿನೇ ॥ ೫೬ ॥

---

೫೩. ದುರ್ದಾನವನ್ನು ತೆಗೆದುಕೊಂಡುದರಿಂದ ಬಂದ ಪಾಪ. ಕೆಟ್ಟಪದಾರ್ಥವನ್ನು ಊಟಮಾಡಿದರಾಗಲೀ ಜಾ ಗೆಟ್ಟವರ ಮನೆಯಲ್ಲಿ ಊಟಮಾಡಿದರಾಗಲೀ ಬಂದ ಪಾಪ, ಕೆಟ್ಟಮಾತುಗಳನ್ನಾಡುವುದರಿಂದ ಬಂದ ಪಾಪ, ಇವೇ ಮುಂತಾದ ಪಾಪಗಳನ್ನು ಈ ರಾಮಗೀತೆಯ ಪಠನ ಶ್ರವಣಗಳಿಂದ ನಾಶಮಾಡಿಕೊಳ್ಳಬಹುದು.

೫೪-೫೫. ಸಾಲಿಗ್ರಾಮ, ತುಲಸಿ, ಅಶ್ವತ್ಥದಮರ, ಯತಿಗಳು, ಇವರ ಎದುರಿನಲ್ಲಿ ರಾಮಗೀತೆಯನ್ನು ಯಾವನು ಓದುತ್ತಾನೆಯೋ ಅವನು ಮಾತಿನಿಂದ ಹೇಳಿ ಪೂರ್ಣಮಾಡಲಾಗದಿರುವಷ್ಟು ಒಳ್ಳೆಯ ಫಲವನ್ನು ಹೊಂದುತ್ತಾನೆ.

೫೬-೫೭. ಶ್ರಾದ್ಧಕಾಲದಲ್ಲಿ ಯಾವನು ಈ ರಾಮಗೀತೆಯನ್ನು ಹೇಳಿ ಬ್ರಾಹ್ಮಣರು ಕೇಳುವಂತೆ ಮಾಡುತ್ತ ಊಟಮಾಡಿಸುವನೋ ಅವನ ಪಿತೃಗಳು ಪರಮಪದವಾದ ವೈಕುಂಠವನ್ನು ಹೊಂದುತ್ತಾರೆ. ಏಕಾದಶಿಯದಿವಸ ಉಪವಾಸವಿದ್ದುಕೊಂಡು ದ್ವಾದಶಿಯದಿವಸ

ಸ್ಥಿತ್ವಾಗಸ್ತ್ಯತರೋರ್ಮೂಲೇ ರಾಮಗೀತಾಂ ಪಠೇತ್ತು ಯಃ । ಸ ಏವ ರಾಘವಃ ಸಾಕ್ಷಾತ್ಸರ್ವದೇವೈಶ್ಚ ಪೂಜ್ಯತೇ ॥ ೫೭ ॥

ವಿನಾ ದಾನಂ ವಿನಾ ಧ್ಯಾನಂ ವಿನಾ ತೀರ್ಥಾವಗಾಹನಂ । ರಾಮಗೀತಾಂ ನರೋಧೀತ್ಯ ತದನಂತಫಲಂ ಲಭೇತ್ ॥ ೫೮ ॥

ಬಹುನಾ ಕಿಮಿಹೋಕ್ತೇನ ಶೃಣು ನಾರದ ತತ್ವತಃ । ಶ್ರುತಿಸ್ಮೃತಿಪುರಾಣೇತಿಹಾಸಾಗಮಶತಾನಿ ಚ ॥
ಅರ್ಹಂತಿ ನಾಲ್ಪಮಧ್ಯಾತ್ಮರಾಮಾಯಣಕಲಾಮಪಿ ॥ ೫೯ ॥

ಅಗಸೆಯಮರದ ಬುಡದಲ್ಲಿ ಈ ರಾಮಗೀತೆಯನ್ನು ಪಠಿಸಿದರೆ ಅವನು ಶ್ರೀರಾಮನಾಗಿಯೇ ಆಗಿ ಎಲ್ಲಾ ದೇವತೆಗಳಿಂದಲೂ ಪೂಜೆಯನ್ನು ಹೊಂದುತ್ತಾನೆ.

೫೮. ದಾನಮಾಡದಿದ್ದರೂ, ಧ್ಯಾನಮಾಡದಿದ್ದರೂ, ತೀರ್ಥಸ್ನಾನಗಳನ್ನು ಮಾಡದಿದ್ದರೂ, ಈ ರಾಮಗೀತೆಯನ್ನು ಓದಿದರೆ ಅವುಗಳಿಂದ ಬರುವ ಫಲಕ್ಕಿಂತಲೂ ಹೆಚ್ಚಿನ ಫಲವನ್ನು ಹೊಂದುತ್ತಾನೆ.

೫೯. ಎಲೈ ನಾರದನೆ! ಬಹುವಾಗಿ ಹೇಳಿದುದರಿಂದ ಪ್ರಯೋಜನವೇನು? ನಿಜವಾಗಿಯೂ ಹೇಳುತ್ತೇನೆ. ಕೇಳು. ವೇದ, ಸ್ಮೃತಿಗಳು, ಪುರಾಣ, ಇತಿಹಾಸ, ಆಗಮ, ಇವುಗಳೊಂದೂ, ಈ ಅಧ್ಯಾತ್ಮರಾಮಾಯಣದ ಹದಿನಾರನೇ ಒಂದುಭಾಗದ ಯೋಗ್ಯತೆಯನ್ನೂ ಹೊಂದಲಾರವು.

ಅಧ್ಯಾತ್ಮರಾಮಚರಿತಸ್ಯ ಮುನೀಶ್ವರಾಯ ಮಾಹಾತ್ಮ್ಯಮೇತದುದಿತಂ ಕಮಲಾಸನೇನ |
ಯಃ ಶ್ರದ್ಧಯಾ ಪಠತಿ ವಾ ಶ್ರುಣುಯಾತ್ಸಮರ್ತ್ಯಃ ಪ್ರಾಪ್ನೋತಿ ವಿಷ್ಣುಪದವೀಂ ಸುರಪೂಜ್ಯಮಾನಃ ॥ ೬೦ ॥

ಇತಿ ಶ್ರೀ ಬ್ರಹ್ಮಾಂಡಪುರಾಣೇ ಉತ್ತರಖಂಡೇ ಅಧ್ಯಾತ್ಮರಾಮಾಯಣ ಮಹಾತ್ಮ್ಯ ಕಥನಸ್ಸರ್ಗ ಸಮಾಪ್ತಃ

---

೬೦. ಬ್ರಹ್ಮನು ಮುನೀಶ್ವರನಾದ ನಾರದನಿಗೆ ಅಧ್ಯಾತ್ಮರಾಮಾಯಣದ ಮಹಿಮೆಯುನ್ನು ಹೇಳಿದನು. ಇದನ್ನು ಯಾವನು ಶ್ರದ್ಧೆಯಿಂದ ಓದುವನೋ ಅಥವಾ ಕೇಳುವನೋ ಅವನು ದೇವತೆಗಳಿಂದ ಪೂಜೆಯುನ್ನು ಹೊಂದುತ್ತಾ ಪರಮಪದವಾದ ವೈಕುಂಠವನ್ನು ಹೊಂದುತ್ತಾನೆ.

ಇಂತು ಶ್ರೀ ಬ್ರಹ್ಮಾಂಡಪುರಾಣದ ಉತ್ತರಖಂಡದಲ್ಲಿ ಅಧ್ಯಾತ್ಮರಾಮಾಯಣದ ಮಹಿಮೆಯ ಕಥನವೆಂಬ ಸರ್ಗವು ಮುಗಿಯಿತು.

|| ಶ್ರೀರಸ್ತು ||

ಅಥ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ಪ್ರಥಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪ ಕ್ರಮಃ

ಅಧ್ಯಾತ್ಮರಾಮಾಯಣದ ಬಾಲಕಾಂಡದ ಪ್ರಥಮಸರ್ಗದಲ್ಲಿ ಮಾಡಬೇಕಾದ ಸಂಕಲ್ಪ ನ್ಯಾಸ ಧ್ಯಾನ ಜಪ ಕ್ರಮವು

ಪೂರ್ವೋಕ್ತವಿಧಿನಾ ಬಾಲಕಾಂಡೇ ಪ್ರಥಮಸರ್ಗೇ । ನ್ಯಾಸಧ್ಯಾನಜಪಮಹಂ ಕರಿಷ್ಯೇ ಇತಿಸಂಕಲ್ಪ್ಯ ||

ಹಿಂದೆ ಹೇಳಿದ ವಿಧಿಯಂತೆ ಬಾಲಕಾಂಡದ ಪ್ರಥಮಸರ್ಗದಲ್ಲಿ ನ್ಯಾಸ, ಧ್ಯಾನ, ಜಪಗಳನ್ನು ಮಾಡುತ್ತೇನೆ. ಎಂಬುದಾಗಿ ಸಂಕಲ್ಪವನ್ನು ಮಾಡಬೇಕು.

|| ಅಥ ಕರನ್ಯಾಸಃ ||

ಕರನ್ಯಾಸವು

ಓಂ ಶ್ರೀಂ ರಾಂ ರಾಂ ಅಂಗುಷ್ಠಾಭ್ಯಾಂ ನಮಃ
ಓಂ ಶ್ರೀಂ ರಾಂ ರಾಂ ತರ್ಜನೀಭ್ಯಾಂ ನಮಃ
ಓಂ ಶ್ರೀಂ ರಾಂ ರಾಂ ಮಧ್ಯಮಾಭ್ಯಾಂ ನಮಃ
ಓಂ ಶ್ರೀಂ ರಾಂ ರಾಂ ಅನಾಮಿಕಾಭ್ಯಾಂ ನಮಃ
ಓಂ ಶ್ರೀಂ ರಾಂ ರಾಂ ಕನಿಷ್ಠಿಕಾಭ್ಯಾಂ ನಮಃ
ಓಂ ಶ್ರೀಂ ರಾಂ ರಾಂ ಕರತಲಕರಪೃಷ್ಠಾಭ್ಯಾಂ ನಮಃ

॥ ಏವಂ ಷಡಂಗನ್ಯಾಸಃ ॥

ಆರು ಅಂಗಗಳನ್ಯಾಸವು

ಓಂ ಶ್ರೀಂ ರಾಂ ರಾಂ ಹೃದಯಾಯ ನಮಃ
ಓಂ ಶ್ರೀಂ ರಾಂ ರಾಂ ಶಿರಸೇ ಸ್ವಾಹಾ
ಓಂ ಶ್ರೀಂ ರಾಂ ರಾಂ ಶಿಖಾಯೈ ವಷಟ್
ಓಂ ಶ್ರೀಂ ರಾಂ ರಾಂ ಕವಚಾಯ ಹುಂ
ಓಂ ಶ್ರೀಂ ರಾಂ ರಾಂ ನೇತ್ರತ್ರಯಾಯ ವೌಷಟ್
ಓಂ ಶ್ರೀಂ ರಾಂ ರಾಂ ಅಸ್ತ್ರಾಯ ಫಟ್

ಓಂ ಶ್ರೀ ರಾಮಚಂದ್ರಾಯ ನಮಃ ಇತಿ ಮಂತ್ರೇಣ ದಿಗ್ಬಂಧಃ

ಓಂ ಶ್ರೀರಾಮಚಂದ್ರಾಯ ನಮಃ ಎಂಬ ಮಂತ್ರದಿಂದ ದಿಗ್ಬಂಧವನ್ನು ಮಾಡಿಕೊಳ್ಳಬೇಕು.

॥ ಅಥ ಧ್ಯಾನಂ ॥

ಧ್ಯಾನವು

ಯಃ ಪೃಥ್ವೀಭರವಾರಣಾಯ ದಿವಿಜೈಃ ಸಂಪ್ರಾರ್ಥಿತಶ್ಚಿನ್ಮಯಃ । ಸಂಜಾತಃ ಪೃಥಿವೀತಲೇ ರವಿಕುಲೇ ಮಾಯಾಮನುಷ್ಯೋಽವ್ಯಯಃ ॥ ನಿಶ್ಚಕ್ರಂ ಹತರಾಕ್ಷಸಃ ಪುನರಗಾದ್ಬ್ರಹ್ಮತ್ವಮಾದ್ಯಂ ಸ್ಥಿರಾಂ । ಕೀರ್ತಿಂ ಪಾಪಹರಾಂ ವಿಧಾಯ ಜಗತಾಂ ತಂ ಜಾನಕೀಶಂ ಭಜೇ ॥

ಏವಂ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥
ಹೀಗೆ ಧ್ಯಾನಮಾಡಿ ಶ್ರೀರಾಮಚರಿತ್ರೆಯನ್ನು ಓದಬೇಕು.

ಇತಿ ಶ್ರೀ ಬಾಲಕಾಂಡೇ ಪ್ರಥಮಸರ್ಗೇ ನ್ಯಾಸ ಧ್ಯಾನ ಜಪ ವಿಧಿಃ ॥
ಇಂತು ಶ್ರೀ ಬಾಲಕಾಂಡದ ಪ್ರಥಮಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಅಥ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ಪ್ರಥಮಸ್ಸರ್ಗಃ

ಯಃ ಪೃಥ್ವೀಭರವಾರಣಾಯ ದಿವಿಜೈಃ ಸಂಪ್ರಾರ್ಥಿತಶ್ಚಿನ್ಮಯಃ ।
ಸಂಜಾತಃ ಪೃಥಿವೀತಲೇ ರಘುಕುಲೇ ಮಾಯಾ ಮನುಷ್ಯೋಽವ್ಯಯಃ ।
ನಿಶ್ಚಕ್ರಂ ಹತರಾಕ್ಷಸಃ ಪುನರಗಾದ್ಬ್ರಹ್ಮತ್ವಮಾದ್ಯಂ ಸ್ಥಿರಾಂ ।
ಕೀರ್ತಿಂ ಪಾಪಹರಾಂ ವಿಧಾಯ ಜಗತಾಂ ತಂ ಜಾನಕೀಶಂ ಭಜೇ ॥ ೧ ॥

ಅಧ್ಯಾತ್ಮರಾಮಾಯಣದ ಬಾಲಕಾಂಡದಲ್ಲಿ ಮೊದಲನೆಯ ಸರ್ಗವು

೧. ದೇವತೆಗಳು ಭೂಭಾರವನ್ನು ನಾಶಮಾಡುವುದಕ್ಕೋಸ್ಕರ ಚಿನ್ಮಯನಾದ ಯಾವ ಶ್ರೀವಿಷ್ಣುವನ್ನು ಪ್ರಾರ್ಥಿಸಿಕ್ಕೊಳ್ಳಲು ಅವನು ಭೂಮಿಯಲ್ಲಿ ರಘುಕುಲದಲ್ಲಿ ಮಾಯಾಮನುಷ್ಯನಾಗಿ ಅವತರಿಸಿ ಭೂಭಾರಭೂತರಾದ ರಾಕ್ಷಸರನ್ನು ಕೊಂದು ಆ ಭೂಭಾರವನ್ನು ಇಳಿಸಿ ಸ್ಥಿರವಾದ ಕೀರ್ತಿಯನ್ನು ಹೊಂದಿ ಪ್ರಪಂಚದಲ್ಲಿ ಪಾಪವು ನಾಶವಾಗುವಂತೆಯೂ ಪುಣ್ಯವು ಹರಡುವಂತೆಯೂ ಮಾಡಿ, ಮತ್ತೆ ಸ್ಥಿರವಾದ ತನ್ನ ವೈಕುಂಠಕ್ಕೆ ಹೊರಟುಹೋದನೋ ಅಂತಹ ಜಾನಕೀರಮಣನಾದ ಶ್ರೀರಾಮನನ್ನು ಭಜಿಸುತ್ತೇನೆ.

ವಿಶ್ವೋದ್ಭವಸ್ಥಿತಿಲಯಾದಿಷು ಹೇತುಮೇಕಂ ಮಾಯಾಶ್ರಯಂ ವಿಗತಮಾಯಮಚಿಂತ್ಯಮೂರ್ತಿಂ ||
ಆನಂದಸಾಂದ್ರಮಮಲಂ ನಿಜಬೋಧರೂಪಂ ಸೀತಾಪತಿಂ ವಿದಿತತತ್ತ್ವಮಹಂ ನಮಾಮಿ || ೧ ||

ಪಠಂತಿ ಯೇ ನಿತ್ಯಮನನ್ಯಚೇತಸಃ ಶೃಣ್ವಂತಿ ಚಾಧ್ಯಾತ್ಮಿಕಸಂಜ್ಞಿಕಂ ಶುಭಂ |
ರಾಮಾಯಣಂ ಸರ್ವಪುರಾಣಸಂಮತಂ ನಿರ್ಧೂತಪಾಪಾ ಹರಿಮೇವ ಯಾಂತಿ ತೇ || ೩ ||

ಅಧ್ಯಾತ್ಮರಾಮಾಯಣಮೇವ ನಿತ್ಯಂ | ಪಠೇದ್ಯದೀಚ್ಛೇದ್ಭವಬಂಧಮುಕ್ತಿಂ
ಗವಾಂ ಸಹಸ್ರಾಯುತಕೋಟಿದಾನಾತ್ಫಲಂ ಲಭೇದ್ಯಃ ಶೃಣುಯಾತ್ಸ ನಿತ್ಯಂ || ೪ ||

---

೧. ಪ್ರಪಂಚದ ಉತ್ಪತ್ತಿ, ಸ್ಥಿತಿ, ನಾಶಗಳಿಗೆ ಕಾರಣನಾದ ಮಾಯೆಯನ್ನು ಆಶ್ರಯಿಸಿಕೊಂಡಿರುವ ತಾನು ಮಾಯೆಗೆ ಅಧೀನನಾಗದ ಅಚಿಂತ್ಯಮೂರ್ತಿಯಾದ ಆನಂದದಿಂದ ಕೂಡಿರುವ ಪವಿತ್ರನಾದ ಜ್ಞಾನರೂಪನಾದ ತತ್ವಮಯನಾದ ಸೀತಾಪತಿಯನ್ನು ನಮಸ್ಕರಿಸುತ್ತೇನೆ.

೩. ಸರ್ವಪುರಾಣಸಮ್ಮತವಾದ ಈ ಅಧ್ಯಾತ್ಮರಾಮಾಯಣವನ್ನು ಯಾರು ಒಂದೇ ಮನಸ್ಸಿನಿಂದ ಓದುತ್ತಾರೆಯೋ ಅಥವಾ ಕೇಳುತ್ತಾರೆಯೋ ಅವರು ಪಾಪಗಳನ್ನು ಕಳೆದುಕೊಂಡು ಸತ್ತಮೇಲೆ ಹರಿಯನ್ನೇ ಹೊಂದುತ್ತಾರೆ.

೪. ಸಂಸಾರ ಬಂಧವನ್ನು ನಾಶಮಾಡಿಕೊಳ್ಳಬೇಕೆಂದು ಅಪೇಕ್ಷಿಸುವವನು ನಿತ್ಯವೂ ಅಧ್ಯಾತ್ಮರಾಮಾಯಣವನ್ನು ಓದಬೇಕು. ಇದನ್ನು ಕೇಳಿದವನು ಕೂಡ ನೂರುಕೋಟಿ ಹಸುಗಳನ್ನು ದಾನಮಾಡುವುದರಿಂದ ಬರುವಷ್ಟು ಪುಣ್ಯವನ್ನು ಹೊಂದುತ್ತಾನೆ.

ಪುರಾರಿಗಿರಿಸಂಭೂತಾ ಶ್ರೀರಾಮಾರ್ಣವಸಂಗತಾ । ಅಧ್ಯಾತ್ಮರಾಮಗಂಗೇಯಂ ಪುನಾತಿ ಭುವನತ್ರಯಂ ॥ ೫ ॥

ಕೈಲಾಸಾಗ್ರೇ ಕದಾಚಿದ್ರವಿಶತವಿಮಲೇಮಂದಿರೇ ರತ್ನಪೀಠೇ ।
ಸಂವಿಷ್ಟಂ ಧ್ಯಾನನಿಷ್ಠಂ ತ್ರಿನಯನಮಭಯಂ ಸೇವಿತಂ ಸಿದ್ಧಸಂಘೈಃ ।
ದೇವೀ ವಾಮಾಂಕಸಂಸ್ಥಾ ಗಿರಿವರತನಯಾ ಪಾರ್ವತೀ ಭಕ್ತಿನಮ್ರಾ ।
ಪ್ರಾಹೇದಂ ದೇವಮೀಶಂ ಸಕಲಮಲಹರಂ ವಾಕ್ಯಮಾನಂದಕಂದಂ ॥ ೬ ॥

---

೫. ಮಹೇಶ್ವರನೆಂಬ ಬೆಟ್ಟದಿಂದ ಹುಟ್ಟಿದ ರಾಮನೆಂಬ ಸಮುದ್ರವನ್ನು ಸೇರಿದ ಅಧ್ಯಾತ್ಮರಾಮಾಯಣವೆಂಬ ಗಂಗೆಯು ಮೂರು ಲೋಕವನ್ನೂ ಪವಿತ್ರವನ್ನಾಗಿ ಮಾಡುತ್ತದೆ.

೬. ಒಂದುಸಾರಿ ಸಾವಿರಾರು ಸೂರ್ಯರಂತೆ ಪ್ರಕಾಶಮಾನವಾದ ಕೈಲಾಸದ ತುದಿಯಲ್ಲಿರುವ ಮನೆಯೊಳಗೆ ರತ್ನದ ಪೀಠದಲ್ಲಿ ಧ್ಯಾನದಿಂದ ಕುಳಿತಿರುವ ಸಿದ್ಧರಿಂದ ಸೇವಿಸಲ್ಪಡುತ್ತಿರುವ, ಅಭಯವನ್ನು ಕೊಡುತ್ತಿರುವ ಮುಕ್ಕಣ್ಣನಾದ ಶಿವನನ್ನು ಅವನ ಎಡದ ತೊಡೆಯ ಮೇಲೆ ಕುಳಿತಿರುವ ಪರ್ವತಪುತ್ರಿಯಾದ ಗೌರಿಯು ಎದ್ದು ಭಕ್ತಿಯಿಂದ ತಲೆಬಾಗಿ ನಮಸ್ಕರಿಸಿ ಕಲ್ಮಷಗಳನ್ನೆಲ್ಲಾ ನಾಶಮಾಡುವ ಆನಂದವನ್ನುಂಟುಮಾಡುವ ಈ ವಿಷಯವನ್ನು ಕೇಳಿದಳು.

|| ಪಾರ್ವತ್ಯು ವಾಚ ||

ನಮೋಽಸ್ತು ತೇ ದೇವಜಗನ್ನಿವಾಸ ಸರ್ವಾತ್ಮದೃಕ್ ತ್ವಂ ಪರಮೇಶ್ವರೋಽಸಿ ।
ಪೃಚ್ಛಾಮಿ ತತ್ತ್ವಂ ಪುರುಷೋತ್ತಮಸ್ಯ ಸನಾತನಂ ತ್ವಂ ಚ ಸನಾತನೋಽಸಿ || ೭ ||

ಗೋಪ್ಯಂ ಯದತ್ಯಂತಮನನ್ಯವಾಚ್ಯಂ ವದಂತಿ ಭಕ್ತೇಷು ಮಹಾನುಭಾವಾಃ ।
ತದಪ್ಯಹೋಽಹಂ ತವ ದೇವ ಭಕ್ತಾ ಪ್ರಿಯೋಽಸಿ ಮೇ ತ್ವಂ ವದ ಯತ್ತು ಪೃಷ್ಟಂ || ೮ ||

---

೭. ಪಾರ್ವತಿಯು ಹೇಳಿದಳು–ಜಗನ್ನಿವಾಸಭೂತನಾದ ದೇವನೇ ! ನಿಮಗೆ ನಮಸ್ಕಾರವು. ನೀನು ಎಲ್ಲರ ಆತ್ಮದಲ್ಲಿರುವುದನ್ನು ತಿಳಿಯುವವನಾಗಿಯೂ, ಪರಮೇಶ್ವರನಾಗಿಯೂ ಆಗಿದ್ದೀಯೆ. ಆದ್ದರಿಂದ ಪುರುಷೋತ್ತಮನ ತತ್ತ್ವದ ವಿಚಾರವನ್ನು ಕೇಳುತ್ತೇನೆ. ನೀನೂ ಬಹು ಹಳಬನಾಗಿದ್ದೀಯೆ.

೮. ಅದು ಬಹು ಗೋಪ್ಯವು ಮತ್ತೊಬ್ಬರಿಗೆ ಹೇಳತಕ್ಕದಲ್ಲ ಯೋಗ್ಯರಾದ ಭಕ್ತರಿಗೆ ಮಾತ್ರ ಹೇಳತಕ್ಕದ್ದು. ಎಲೈ ಸ್ವಾಮಿಯೇ ! ನಾನು ನಿನಗೆ ಭಕ್ತಳು. ನೀನು ನನಗೆ ಪ್ರೀತಿಪಾತ್ರನಾದ ಗಂಡನಾಗಿದ್ದೀಯೆ. ನಾನು ಕೇಳಿದ್ದನ್ನು ದಯವಿಟ್ಟು ಹೇಳು.

ಜ್ಞಾನಂ ಸುನಿಜ್ಞಾನಮಥಾನುಭಕ್ತಿವೈರಾಗ್ಯಯುಕ್ತಂ ಚ ಮಿತಂ ವಿಭಾಸ್ವತ್ ।
ಜಾನಾಮ್ಯಹಂ ಯೋಷಿದಪಿ ತ್ವದುಕ್ತಂ ಯಥಾ ತಥಾ ಬ್ರೂಹಿ ತರಂತಿ ಯೇನ ॥ ೯ ॥

ಪೃಚ್ಛಾಮಿ ಚಾನ್ಯಚ್ಚ ಪರಂ ರಹಸ್ಯಂ ತದೇವ ಚಾಗ್ರೇ ವದ ವಾರಿಜಾಕ್ಷ ।
ಶ್ರೀರಾಮಚಂದ್ರೇಖಿಲಲೋಕಸಾರೇ ಭಕ್ತಿರ್ದೃಢಾ ನೌರ್ಭವತಿ ಪ್ರಸಿದ್ಧಾ ॥ ೧೦ ॥

---

೯. ಜ್ಞಾನವನ್ನು ಪಡೆದು ಅದನ್ನು ಅನುಭವಕ್ಕೆ ತೆಗೆದುಕೊಳ್ಳಬೇಕು. ಆ ಅನುಭವಜ್ಞಾನಕ್ಕೆ ವಿಜ್ಞಾನವೆಂಬ ಹೆಸರು. ಅದು ಶಾಸ್ತ್ರ ಸಮ್ಮತವಾಗಿರಬೇಕು. ಆ ಶಾಸ್ತ್ರಜ್ಞಾನ ಸಮ್ಮತವಾದ ವಿಜ್ಞಾನಕ್ಕೆ ಭಕ್ತಿಯೂ ಸೇರಿರಬೇಕು. ಆ ಭಕ್ತಿಯೊಡನೆ ವೈರಾಗ್ಯವೂ ಇರಬೇಕು. ಇಂತಹ ಉತ್ತಮೋತ್ತಮವಾದ ಪ್ರಕಾಶಮಾನವಾದ ಸಂಸಾರವೆಂಬ ಸಮುದ್ರದಿಂದ ಪಾರುಗಾಣಿಸುವ ಜ್ಞಾನವನ್ನು ಹೆಂಗಸಾದ ನನಗೂ ಕೂಡ ತಿಳಿಯುವಂತೆ ಹೇಳು.

೧೦. ಅಲ್ಲದೆ ಮತ್ತೊಂದು ವಿಷಯವನ್ನು ಕೇಳುತ್ತೇನೆ. ಅದು ಬಹು ರಹಸ್ಯವಾದರೂ ನನಗೆ ಹೇಳು. ಸಮಸ್ತಲೋಕಸಾರನಾದ ಶ್ರೀರಾಮಚಂದ್ರನಲ್ಲಿ ನಮಗೆ ಭಕ್ತಿಯುಂಟಾಗುವುದು ಹೇಗೆ? ಅದನ್ನು ವಿವರಿಸು.

ಭಕ್ತಿಃ ಪ್ರಸಿದ್ಧಾ ಭವಮೋಕ್ಷಣಾಯ ನಾನ್ಯತ್ತತಸ್ಸಾಧನಮಸ್ತಿ ಕಿಂಚಿತ್ ।
ತಥಾಪಿ ಹೃತ್ಸಂಶಯ ಬಂಧನಂ ಮೇ ವಿಭೇತ್ತು ಮರ್ಹಸ್ಯಮಲೋಕ್ತಿಭಿಸ್ತ್ವಂ ॥ ೧೧ ॥

ವದಂತಿ ರಾಮಂ ಪರಮೇಕಮಾದ್ಯಂ ನಿರಸ್ತಮಾಯಾಗುಣಸಂಪ್ರವಾಹಂ ।
ಭಜಂತಿ ಚಾಹರ್ನಿಶಮಪ್ರಮತ್ತಾಃ ಪರಂ ಪದಂ ಯಾಂತಿ ತಥೈವ ಸಿದ್ಧಾಃ ॥ ೧೨ ॥

---

೧೧. ಎಲೈ ಶಿವನೆ ! ಸಂಸಾರ ಬಂಧನದಿಂದ ಬಿಡುಗಡೆಯನ್ನು ಹೊಂದಿ ಮುಕ್ತಿಯನ್ನು ಹೊಂದುವುದಕ್ಕೆ ಭಕ್ತಿಯೆಂಬುದೊಂದೇ ಪ್ರಸಿದ್ಧವಾಗಿದೆ. ಇದರಂತಿರುವುದು ಮತ್ತೊಂದಿಲ್ಲ. ಎಂದು ಕೇಳಿದ್ದೇನೆ. ಆದರೂ ಕೂಡ ಸರಳವಾದ ಮಾತುಗಳಿಂದ ನನ್ನಲ್ಲಿ ಮೂಡಿರುವ ಸಂಶಯವನ್ನು ನಿವೃತ್ತಿಮಾಡು.

೧೨. ಸಿದ್ಧಿಹೊಂದಿರುವ ಮನುಷ್ಯರು (ಸಿದ್ಧರು) ರಾಮನನ್ನು ಪರವಸ್ತುವನ್ನಾಗಿಯೂ, ಆದಿಪುರುಷನನ್ನಾಗಿಯೂ ಮಾಯೆಯನ್ನು ಹೊಂದದವನನ್ನಾಗಿಯೂ ಹೇಳುವರು. ಮತ್ತು ಹಗಲೂ ರಾತ್ರಿಯೂ ಅವನನ್ನು ಭಜಿಸಿ ಪರಮಪದವನ್ನು ಹೊಂದುವರು.

ವದಂತಿ ಕೇಚಿತ್ಪರವೋಽಪಿ ರಾಮಃ ಸ್ವಾವಿದ್ಯಯಾ ಸಂವೃತಮಾತ್ಮಸಂಜ್ಞಂ ।
ಜಾನಾತಿ ನಾತ್ಮಾನಮತಃಪರೇಣ ಸಂಬೋಧಿತೋ ವೇದಪರಾತ್ಮತತ್ತ್ವಂ ॥ ೧೩ ॥

ಯದಿ ಸ್ಮ ಜಾನಾತಿ ಕುತೋ ವಿಲಾಪಃ ಸೀತಾಕೃತೇನೇನ ಕೃತಃ ಪರೇಣ ।
ಜಾನಾತಿ ನೈವಂ ಯದಿ ಕೇನ ಸೇವ್ಯಃ ಸಮೋ ಹಿ ಸರ್ವೈರಪಿ ಜೀವಜಾತೈಃ ॥ ೧೪ ॥

ಅತ್ರೋತ್ತರಂ ಕಿಂ ವಿದಿತಂ ಭವದ್ಭಿಃ ತದ್ಬ್ರೂತ ಮೇ ಸಂಶಯಭೇದಿ ವಾಕ್ಯಂ ॥ ೧೫ ॥

---

೧೩. ಶ್ರೀರಾಮನು ಪರಮಪುರುಷನಾದರೂ ಅವಿದ್ಯೆಯಿಂದ ತನ್ನನ್ನು ಮುಚ್ಚಿಕೊಂಡಿರುವನೆಂದೂ, ಅದರಿಂದಲೇ ತನ್ನನ್ನು ತಾನು ತಿಳಿದುಕೊಂಡಿಲ್ಲವೆಂದೂ ಹೇಳುತ್ತಾರೆ. ಅವನು ವೇದದಲ್ಲಿ ಹೇಳಿರುವ ಆತ್ಮತತ್ತ್ವರೂಪನಾದರೂ ಮತ್ತೊಬ್ಬರಿಂದ ಬೋಧಿತನಾದಮೇಲೆ ತನ್ನನ್ನು ತಾನು ತಿಳಿಯುವನೆಂದು ಹೇಳುತ್ತಾರೆ.

೧೪. ಶ್ರೀರಾಮನು ತಾನು ಪರಮಾತ್ಮನೆಂದು ತಿಳಿದುಕೊಂಡಿದ್ದರೆ ಸೀತೆಯ ವಿರಹದಿಂದ ಇತರರಂತೆ ದುಃಖಿಸಿದುದು ಏತಕ್ಕೆ? ಆ ರಾಮನು ತನ್ನನ್ನು ತಾನು ತಿಳಿದುಕೊಂಡಿಲ್ಲವೆಂದು ಹೇಳಿದರೆ ಅವನೂ ಎಲ್ಲಾ ಪ್ರಾಣಿಗಳಂತೆಯೇ ಆಗುವನು. ಆದುದರಿಂದ ಅವನನ್ನು ಯಾವನು ತಾನೇ ಏಕೆ ಸೇವಿಸಬೇಕು?

೧೫. ಎಲೈ ಶಿವನೆ! ಈ ವಿಷಯದಲ್ಲಿ ನಿನಗೆ ತಿಳಿದಿದ್ದರೆ ಸಂಶಯವನ್ನು ನಾಶಮಾಡುವಂತಹ ಉತ್ತರವನ್ನು ಹೇಳು.

॥ ಶ್ರೀ ಮಹಾದೇವ ಉವಾಚ ॥

ಧನ್ಯಾಸಿ ಭಕ್ತಾಸಿ ಪರಾತ್ಮನಸ್ತ್ವಂ ಯತ್ ಜ್ಞಾತುಮಿಚ್ಛಾ ತವ ರಾಮತತ್ತ್ವಂ ।
ಪುರಾ ನ ಕೇನಾಪ್ಯಭಿಚೋದಿತೋಽಹಂ ವಕ್ತುಂ ರಹಸ್ಯಂ ಪರಮಂ ನಿಗೂಢಂ ॥ ೧೬ ॥

ತ್ವಯಾದ್ಯ ಭಕ್ತ್ಯಾ ಪರಿನೋದಿತೋಽಹಂ ವಕ್ಷ್ಯೇ ನಮಸ್ಕೃತ್ಯ ರಘೂತ್ತಮಂ ತೇ ।
ರಾಮಃ ಪರಾತ್ಮಾ ಪ್ರಕೃತೇರನಾದಿಃ ಆನಂದ ಏಕಃ ಪುರುಷೋತ್ತಮೋ ಹಿ ॥ ೧೭ ॥

---

೧೬. ಶ್ರೀ ಮಹಾದೇವನು ಹೇಳಿದನು—ಎಲೈ ಪಾರ್ವತಿಯೆ ! ನೀನು ಆ ಶ್ರೀರಾಮನ ತತ್ತ್ವವನ್ನು ತಿಳಿಯಲು ಇಚ್ಛಿಸಿರುವುದರಿಂದ ಧನ್ಯಳೂ ಭಕ್ತಳೂ ಆಗಿದ್ದೀಯೆ. ಈ ರೀತಿಯಾದ ಗುಹ್ಯವಾದ, ಉತ್ಕೃಷ್ಟವಾದ ವಿಷಯವನ್ನು ಹೇಳಲು ಹಿಂದೆ ನನ್ನನ್ನು ಯಾರೂ ಹೀಗೆ ಕೇಳಲೇ ಇಲ್ಲ.

೧೭. ನಿನಗೆ ಆ ರಾಮನಲ್ಲಿ ಭಕ್ತಿಯಿರುವುದರಿಂದ ಆ ಭಕ್ತಿಯು ನಿನ್ನನ್ನು ಪ್ರೇರಿಸಿದೆ. ನೀನೂ ನನ್ನನ್ನು ಪ್ರೀತಿಸುತ್ತಿದ್ದೀಯೆ. ಆದ್ದರಿಂದ ಆ ರಘೋತ್ತಮನಾದ ರಾಮನಿಗೆ ನಮಸ್ಕರಿಸಿ ಅವನ ವಿಷಯವನ್ನು ಹೇಳುತ್ತೇನೆ. ಆ ರಾಮನು ಪರರೂಪನಾದ ಆತ್ಮನು. ಪ್ರಕೃತಿಗಿಂತಲೂ ಆದಿಭೂತನು. ಆನಂದರೂಪನು. ಏಕಸ್ವರೂಪನು. ಪುರುಷರಲ್ಲಿ ಉತ್ತಮನೂ ಆಗಿದ್ದಾನೆ.

ಸ್ವಮಾಯಯಾ ಕೃತ್ಸ್ನಮಿದಂ ಹಿ ಸೃಷ್ಟ್ವಾ ನಭೋವದಂತರ್ಬಹಿರಾಸ್ಥಿತೋ ಯಃ ।
ಸರ್ವಾಂತರಸ್ಥೋಽಪಿ ನಿಗೂಢ ಆತ್ಮಾ ಸ್ವಮಾಯಯಾ ಸೃಷ್ಟಮಿದಂ ವಿಚಷ್ಟೇ ॥ ೧೮ ॥
ಜಗಂತಿ ನಿತ್ಯಂ ಪರಿತೋ ಭ್ರಮಂತಿ ಯತ್ಸನ್ನಿಧೌ ಚುಂಬಕಲೋಹವದ್ಧಿ ।
ಏತನ್ನ ಜಾನಂತಿ ವಿಮೂಢಚೇತಾಃ ಸ್ವಾವಿದ್ಯಯಾ ಸಂವೃತಮಾನಸಾ ಯೇ ॥ ೧೯ ॥
ಸ್ವಾಜ್ಞಾನಮಸ್ಯಾತ್ಮನಿ ಶುದ್ಧಬುದ್ಧೇ ಸ್ವಾರೋಪಯಂತೀಹ ನಿರಸ್ತಮಾಯೇ ।
ಸಂಸಾರಮೇವಾನುಸರಂತಿ ತೇ ವೈ ಪುತ್ರಾದಿಸಕ್ತಾಃ ಪುರುಕರ್ಮಯುಕ್ತಾಃ ॥ ೨೦ ॥

---

೧೮. ಈ ಪ್ರಪಂಚವೆಲ್ಲವನ್ನೂ ತನ್ನ ಮಾಯೆಯಿಂದ ಸೃಷ್ಟಿಸಿ ಅವುಗಳಲ್ಲಿ ಆಕಾಶದಂತೆ ಒಳಗೂ ಹೊರಗೂ ಕೂಡ ಸೇರಿಕೊಂಡಿರುವನು ಎಲ್ಲ ಕಡೆಯಲ್ಲಿಯೂ ಇದ್ದರೂ ಆತ್ಮರೂಪದಿಂದ ಪ್ರಕಾಶವಾಗದೆ ಇದ್ದಾನೆ. ತಾನು ತನ್ನ ಮಾಯೆಯಿಂದ ಸೃಷ್ಟಿಸಿದ ಈ ಪ್ರಪಂಚವನ್ನು ವಿಸ್ತರಿಸುತ್ತಾನೆ.

೧೯. ಈ ಜಗತ್ತೆಲ್ಲವೂ ಕೂಡ ಅಯಸ್ಕಾಂತವನ್ನನುಸರಿಸಿ ಕಬ್ಬಿಣವು ತಿರುಗುವಂತೆ ಆ ಸ್ವಾಮಿಯನ್ನು ಅನುಸರಿಸಿಕೊಂಡು ಯಾವಾಗಲೂ ಸುತ್ತುತ್ತಿರುತ್ತದೆ. ಇದನ್ನು ಆ ಸ್ವಾಮಿಯ ಅವಿದ್ಯೆಯಿಂದ ಕೂಡಿದವರು ತಿಳಿಯದೆ ಮೂಢರಾಗಿರುವರು.

೨೦. , ಶುದ್ಧವಾಗಿರುವ ಬುದ್ಧಸ್ವರೂಪನಾದ ಮಾಯೆಗೊಳಗಾಗದ ಆ ಆತ್ಮನಲ್ಲಿ ಜನರು ತಮ್ಮ ಅಜ್ಞಾನವನ್ನು ಆರೋಪಣೆಮಾಡಿ ಆ ರಾಮನೂ ತಮ್ಮಂತೆಯೇ ಮನುಷ್ಯನೆಂದು ತಿಳಿಯುತ್ತಾರೆ. ಆದರಂತೆ ಅವರು ಪುತ್ರಕಳತ್ರಾದಿಗಳಲ್ಲಿ ಪ್ರೀತಿಯನ್ನಿಟ್ಟುಕೊಂಡು ಸಂಸಾರವನ್ನೇ ಅನುಸರಿಸುವಂತೆಯೂ ಕರ್ಮಗಳನ್ನೂ ಮಾಡುವಂತೆಯೂ ಭಾವಿಸುತ್ತಾರೆ.

ಜಾನಂತಿ ನೈವಂ ಹೃದಯಸ್ಥಿತಂ ನೈ ಚಾಮೀಕರಂ ಕಂಠಗತಂ ಯಥಾಜ್ಞಾಃ ।
ಯಥಾಪ್ರಕಾಶೋ ನನು ವಿದ್ಯತೇ ರವೌ ಜ್ಯೋತಿಃಸ್ವಭಾವೇ ಪರಮೇಶ್ವರೇ ತಥಾ ॥ ೨೧ ॥

ವಿಶುದ್ಧವಿಜ್ಞಾನಘನೇ ರಘೂತ್ತಮೇಽ ವಿದ್ಯಾ ಕಥಂ ಸ್ಯಾತ್ಪರತಃ ಪರಾತ್ಮನಿ ।
ಯಥಾ ಹಿ ಚಾಕ್ಷ್ಣಾ ಭ್ರಮತಾ ಗೃಹಾದಿಕಂ ವಿನಷ್ಟದೃಷ್ಟೇರ್ಭ್ರಮತೀವ ದೃಶ್ಯತೇ ।
ತಥೈವ ದೇಹೇಂದ್ರಿಯಕರ್ತುರಾತ್ಮನಃ ಕೃತಂ ಪರೇಥ್ಯಸ್ಯ ಜನೋ ವಿಮುಹ್ಯತಿ ॥ ೨೨ ॥

---

೨೧. ಅಜ್ಞರಾದವರು ತಾವು ಕತ್ತಿನಲ್ಲಿ ಹಾಕಿಕೊಂಡಿರುವ ಒಡವೆಯನ್ನು ಅಜ್ಞಾನದಿಂದ ಮರೆತು ನೋಡಿಕೊಳ್ಳದೆ ಹುಡುಕುವಂತೆ ಹೃದಯಸ್ಥಿತನಾದ ಆ ಸ್ವಾಮಿಯನ್ನು ಹೊರಗೆ ಹುಡುಕುತ್ತಾರೆ. ಸೂರ್ಯನಲ್ಲಿ ಪ್ರಕಾಶವು ಇರುವಂತೆಯೇ ಜ್ಯೋತಿಸ್ಸಿನಸ್ವರೂಪನಾದ ಆ ಸ್ವಾಮಿಯಲ್ಲಿಯೂ ತೇಜಸ್ಸಿರುವುದು.

೨೨. ಶುದ್ಧನೂ ವಿಜ್ಞಾನರೂಪಿಯೂ ಆದ ಆ ರಘೋತ್ತಮನಲ್ಲಿ ಮಾಯೆಯೆಂಬುದು ಹೇಗೆ ತಾನೆ ಬಂದು ಸಂಬಂಧಿಸೀತು ? ಕಣ್ಣಿನಲ್ಲಿ ದೋಷವಿರುವವರು ಸ್ಥಿರವಾದ ಮನೆ ಮುಂತಾದುವು ತಿರುಗದಿದ್ದರೂ ತಮ್ಮ ಕಣ್ಣಿನ ದೋಷದಿಂದ ತಿರುಗುವಂತೆ ತಿಳಿಯುತ್ತಾ ಯಥಾರ್ಥವನ್ನು ತಿಳಿಯಲು ಶಕ್ತರಾಗದೆ ಹೇಗೆ ತಿರುಗುತ್ತವೆಂದೇ ತಿಳಿಯುತ್ತಾರೋ ಹಾಗೆಯೇ ದೇಹ ಇಂದ್ರಿಯಗಳನ್ನು ಸೃಷ್ಟಿಸುವ ಆ ಪರಮಾತ್ಮನಾದ ಆ ಸ್ವಾಮಿಯಲ್ಲಿ ದೇಹೇಂದ್ರಿಯ ಸಂಬಂಧವುಂಟೆಂದೂ ಅವನಿಗೆ ಜ್ಞಾನವು ಅಜ್ಞಾನದಿಂದ ಮುಚ್ಚಲ್ಪಟ್ಟಿರುವುದೆಂದೂ ತಿಳಿಯುತ್ತಾರೆ.

ನಾಹೋ ನ ರಾತ್ರಿಸ್ಸವಿತುರ್ಯಥಾ ಭವೇತ್ಪ್ರಕಾಶರೂಪಾವ್ಯಭಿಚಾರತಃ ಕ್ವಚಿತ್ ।
ಜ್ಞಾನಂ ತಥಾಜ್ಞಾನಮಿದಂ ದ್ವಯಂ ಹಿ ರಾಮೇ ಕಥಂ ಸ್ಥಾಸ್ಯತಿಶುದ್ಧಚಿದ್ಘನೇ ॥ ೨೩ ॥

ತಸ್ಮಾತ್ಪರಾನಂದಮಯೇ ರಘೂತ್ತಮೇ ವಿಜ್ಞಾನರೂಪೇ ಹಿ ನ ವಿದ್ಯತೇ ತಮಃ ।
ಅಜ್ಞಾನಸಾಕ್ಷಿಣ್ಯರವಿಂದಲೋಚನೇ ಮಾಯಾಶ್ರಯತ್ವಾನ್ನ ಹಿ ಮೋಹಕಾರಣಂ ॥ ೨೪ ॥

---

೨೩. ಸೂರ್ಯನ ಬೆಳಕಿರುವ ಸಮಯವನ್ನು ಹಗಲೆಂದೂ ಅವನ ಆ ಬೆಳಕು ಇಲ್ಲದಿರುವ ಸಮಯವನ್ನು ರಾತ್ರಿಯೆಂದೂ ಹೇಳುತ್ತೇವೆ. ಮತ್ತಾವುದಾದರೂ ಬೆಳಕಿದ್ದರೆ ಅದನ್ನು ಹಗಲೆಂದಾಗಲೀ, ಸೂರ್ಯನಿದ್ದಾಗ ಮತ್ತಾವಕಾರಣದಿಂದಲಾದರೂ ಕತ್ತಲೆಯಾಗಿದ್ದರೆ ಅದನ್ನು ರಾತ್ರಿಯೆಂದಾಗಲೀ ಹೇಳುವುದಿಲ್ಲ. ಹೀಗಿರುವಲ್ಲಿ ಹಗಲೆಂದು ಹೇಳಿಸಿಕೊಳ್ಳುವ ಪ್ರಕಾಶಕ್ಕೆ ಯಾವಾಗಲೂ ಆಧಾರನಾದ ಸೂರ್ಯನಿಗೆ ಹಗಲಿರುವುದೇ ಹೊರತು ರಾತ್ರಿಯೆಂಬುದಿರುವುದೇ ಇಲ್ಲ. ಹಾಗೆ ಚಿತ್ಸ್ವರೂಪನಾದ ಆ ಶ್ರೀರಾಮನು ಜ್ಞಾನಸ್ವರೂಪನೇ ಆದುದರಿಂದ ಅವನಲ್ಲಿ ಅಜ್ಞಾನವು ಬರುವುದಿಲ್ಲ. ಜ್ಞಾನ ಅಜ್ಞಾನಗಳು ಕತ್ತಲೆ, ಬೆಳಕುಗಳಂತೆ ಒಂದಕ್ಕೊಂದು ವಿರುದ್ಧವಾದುವು. ಆದುದರಿಂದ ಅವು ಒಂದು ಜಾಗದಲ್ಲಿರಲಾರವು.

೨೪. ಈ ಕಾರಣದಿಂದ ಆನಂದಸ್ವರೂಪನಾದ ಆ ಶ್ರೀರಾಮನು ವಿಜ್ಞಾನಸ್ವರೂಪನಾದುದರಿಂದ ಅಜ್ಞಾನವು ಅವನಲ್ಲಿ ಸೇರುವುದಿಲ್ಲ. ಆದರೆ ಈ ಶ್ರೀರಾಮನು ಅಜ್ಞಾನಕ್ಕೆ ಸಾಕ್ಷಿಯಾಗಿರುವನೇ ಹೊರತು ಮಾಯೆಗೆ ಬುದ್ಧನೂ ಅಲ್ಲ, ಆಶ್ರಯನ್ನೂ ಅಲ್ಲ, ಆದ್ದರಿಂದ ಮೋಹಪಡುವುದಕ್ಕೆ ಕಾರಣವೇ ಇಲ್ಲ.

ಅತ್ರ ತೇ ಕಥಯಿಷ್ಯಾಮಿ ರಹಸ್ಯಮಪಿ ದುರ್ಲಭಂ । ಸೀತಾರಾಮಮರುತ್ಸೂನುಸಂವಾದಂ ಮೋಕ್ಷಸಾಧನಂ ॥ ೨೫ ॥

ಪುರಾ ರಾಮಾಯಣೇ ರಾಮೋ ರಾವಣಂ ದೇವಕಂಟಕಂ । ಹತ್ವಾ ರಣೇ ರಣಶ್ಲಾಘೀ ಸಪುತ್ರಬಲವಾಹನಂ ॥ ೨೬ ॥

ಸೀತಯಾ ಸಹ ಸುಗ್ರೀವಲಕ್ಷ್ಮಣಾಭ್ಯಾಂ ಸಮನ್ವಿತಃ । ಅಯೋಧ್ಯಾಮಗಮದ್ರಾಮೋ ಹನೂಮತ್ಪ್ರಮುಖೈರ್ವೃತಃ ॥ ೨೭ ॥

ಅಭಿಷಿಕ್ತಃ ಪರಿವೃತೋ ವಸಿಷ್ಠಾದ್ಯೈರ್ಮಹಾತ್ಮಭಿಃ । ಸಿಂಹಾಸನೇ ಸಮಾಸೀನಃ ಕೋಟಿಸೂರ್ಯಸಮಪ್ರಭಃ ॥ ೨೮ ॥

---

೨೫. ಈ ವಿಷಯದಲ್ಲಿ ಹನುಮಂತ ರಾಮರಿಗೆ ನಡೆದ ಒಂದು ಸಂವಾದವನ್ನು ಹೇಳುತ್ತೇನೆ. ಅದು ರಹಸ್ಯವಾದುದು. ತಿಳಿಯುವುದಕ್ಕೆ ಕಷ್ಟವಾದುದು. ಮೋಕ್ಷಕ್ಕೆ ಕಾರಣವಾದುದು.

೨೬–೨೭. ಹಿಂದೆ ಶ್ರೀರಾಮನು ದೇವಕಂಟಕನಾದ ರಾವಣನನ್ನೂ ಅವನ ಮಕ್ಕಳು ವಾಹನ ಸೈನ್ಯ ಮುಂತಾದುವನ್ನೂ ಕೊಂದು ರಣದಲ್ಲಿ ಜಯವನ್ನು ಪಡೆದು ಸೀತೆ, ಸುಗ್ರೀವ, ಲಕ್ಷ್ಮಣ, ಹನುಮಂತ ಮುಂತಾದವರೊಡನೆ ಅಯೋಧ್ಯೆಗೆ ಬಂದನು.

೨೮. ಅಯೋಧ್ಯೆಯಲ್ಲಿ ವಸಿಷ್ಠನೇ ಮುಂತಾದವರು ಆ ರಾಮನಿಗೆ ರಾಜ್ಯಾಭಿಷೇಕವನ್ನು ಮಾಡಿದರು. ಆಗ ಆ ಶ್ರೀರಾಮನು ಸಿಂಹಾಸನದಲ್ಲಿ ಕುಳಿತುಕೊಂಡು ಕೋಟಿಸೂರ್ಯರಂತೆ ಪ್ರಕಾಶಿಸುತ್ತಿದ್ದನು. ಸೀತೆಯೂ ಜೊತೆಯಲ್ಲಿ ಕುಳಿತಿದ್ದಳು.

ದೃಷ್ಟ್ವಾ ತದಾ ಹನೂಮಂತಂ ಪ್ರಾಂಜಲಿಂ ಪುರತಃ ಸ್ಥಿತಂ । ಕೃತಕಾರ್ಯಂ ನಿರಾಕಾಂಕ್ಷಂ ಜ್ಞಾನಾಪೇಕ್ಷಂ ಮಹಾಮತಿಂ ॥ ೨೯ ॥

ರಾಮಃ ಸೀತಾಮುವಾಚೇದಂ ಬ್ರೂಹಿ ತತ್ವಂ ಹನೂಮತೇ । ನಿಷ್ಕಲ್ಮಷೋಽಯಂ ಜ್ಞಾನಸ್ಯ ಪಾತ್ರಂ ನೌ ನಿತ್ಯಭಕ್ತಿಮಾನ್ ॥ ೩೦ ॥

ತಥೇತಿ ಜಾನಕೀ ಪ್ರಾಹ ತತ್ವಂ ರಾಮಸ್ಯ ನಿಶ್ಚಿತಂ । ಹನೂಮತೇ ಪ್ರಪನ್ನಾಯ ಸೀತಾ ಲೋಕವಿಮೋಹಿನೀ ॥ ೩೧ ॥

॥ ಸೀತಾ ಉವಾಚ ॥

ರಾಮಂ ವಿದ್ಧಿ ಪರಂ ಬ್ರಹ್ಮ ಸಚ್ಚಿದಾನಂದಮದ್ವಯಂ । ಸರ್ವೋಪಾಧಿವಿನಿರ್ಮುಕ್ತಂ ಸತ್ತಾಮಾತ್ರಮಗೋಚರಂ ॥ ೩೨ ॥

---

೨೯. ಹನುಮಂತನು ಅವರಿಬ್ಬರ ಎದುರಿಗೆ ಕೈಮುಗಿದುಕೊಂಡು ನಿಂತಿದ್ದನು. ಅವನು ತನಗೆ ವಹಿಸಿದ್ದ ಕಾರ್ಯವನ್ನು ಮಾಡಿಕೊಟ್ಟು ಕೃತಾರ್ಥನಾಗಿದ್ದನು. ಯಾವ ವಿಧವಾದ ಆಸೆಯೂ ಅವನಿಗಿರಲಿಲ್ಲ ಬಹು ಬುದ್ಧಿವಂತನು. ಆದರೆ ಜ್ಞಾನವನ್ನು ತಿಳಿಯಬೇಕೆಂಬ ಅಪೇಕ್ಷೆಯು ಬಹುವಾಗಿದ್ದಿತು.

೩೦ ಆಗ ಇದನ್ನು ತಿಳಿದು ಶ್ರೀರಾಮನು ಸೀತೆಯನ್ನು ಕುರಿತು, ಎಲೈ ಸೀತೆಯೆ ! ಈ ಹನುಮಂತನು ಶುದ್ಧನಾದವನು. ನಮ್ಮುಗಳಲ್ಲಿ ಬಹು ಭಕ್ತಿಯುಳ್ಳವನು. ಜ್ಞಾನೋಪದೇಶಕ್ಕೆ ಸರಿಯಾದ ಪಾತ್ರನು. ಇವನಿಗೆ ತತ್ವಜ್ಞಾನವನ್ನು ಉಪದೇಶಿಸು ಎಂದನು.

೩೧. ಆಗ ತನ್ನ ಮಾಯೆಯಿಂದ ಲೋಕವನ್ನೇ ಅಜ್ಞಾನದಲ್ಲಿ ಬೀಳುವಂತೆ ಮಾಡುತ್ತಿರುವ ಮಾಯಾಸ್ವರೂಪಿಣಿಯಾದ ಆ ಸೀತೆಯು ಹಾಗೆಯೇ ಆಗಲೆಂದು ಹೇಳಿ ಭಕ್ತನಾದ ಹನುಮಂತನಿಗೆ ರಾಮನ ಯಥಾರ್ಥವಾದ ಸ್ವರೂಪವನ್ನು ತಿಳಿಸಿದಳು.

೩೨. ಸೀತೆಯು ಹೇಳಿದಳು-ಎಲೈ ಹನುಮಂತನೇ ! ರಾಮನು ಪರಬ್ರಹ್ಮನು. ಸಚ್ಚಿದಾನಂದರೂಪನು. ಒಬ್ಬನೇ ಆಗಿರುವವನು. ಮಾಯೆಯೇ ಮೊದಲಾದ ಆವರಣಗಳಾವುವೂ ಅವನಿಗಿರುವುದಿಲ್ಲ. ಸತ್ತಾಸ್ವರೂಪನು. ಎಲ್ಲೆಡೆಯಲ್ಲಿಯೂ ಇರುವವನು.

ಆನಂದಂ ನಿರ್ಮಲಂ ಶಾಂತಂ ನಿರ್ವಿಕಾರಂ ನಿರಂಜನಂ । ಸರ್ವವ್ಯಾಪಿನಮಾತ್ಮಾನಂ ಸ್ವಪ್ರಕಾಶಮಕಲ್ಮಷಂ ॥ ೩೩ ॥

ಮಾಂ ವಿದ್ಧಿ ಮೂಲಪ್ರಕೃತಿಂ ಸರ್ವಸ್ಥಿತ್ಯಂತಕಾರಿಣೀಂ । ತಸ್ಯ ಸನ್ನಿಧಿಮಾತ್ರೇಣ ಸೃಜಾಮೀದಮತಂದ್ರಿತಾ ॥ ೩೪ ॥

ತತ್ಸಾನ್ನಿಧ್ಯಾನ್ಮಯಾ ಸೃಷ್ಟಂ ತಸ್ಮಿನ್ನಾರೋಪ್ಯತೇಽಬುಧೈಃ । ಅಯೋಧ್ಯಾನಗರೇ ಜನ್ಮ ರಘುವಂಶೇತಿನಿರ್ಮಲೇ ॥ ೩೫ ॥

ವಿಶ್ವಾಮಿತ್ರಸಹಾಯತ್ವಂ ಮಖಸಂರಕ್ಷಣಂ ತತಃ । ಅಹಲ್ಯಾಶಾಪಶಮನಂ ಚಾಪಭಂಗೋ ಮಹೇಶಿತುಃ ॥ ೩೬ ॥

---

೩೩. ಆನಂದರೂಪನು, ನಿರ್ಮಲನು, ಶಾಂತನು. ವಿಕಾರಗಳಾವುವೂ ಆತನಿಗಿರುವುದಿಲ್ಲ. ಮತ್ತೊಂದರಿಂದ ಪ್ರಕಾಶಿಸಿಕೊಳ್ಳ ತಕ್ಕವನಲ್ಲ. ಎಲ್ಲೆಡೆಯಲ್ಲಿಯೂ ವ್ಯಾಪಿಸಿಕೊಂಡಿರುವವನು. ಆತ್ಮಸ್ವರೂಪನು. ಸ್ವಯಂಪ್ರಕಾಶನು. ಪರಿಶುದ್ಧನು.

೩೪. ಸೀತೆಯಾದ ನಾನಾದರೋ ಮೂಲಪ್ರಕೃತಿಯೆಂದು ತಿಳಿ. ನಾನು ಸೃಷ್ಟಿಸ್ಥಿತಿಲಯಗಳಿಗೆ ಕಾರಣಳು. ಆ ಸ್ವಾಮಿಯು ನನ್ನ ಬಳಿಯಲ್ಲಿದ್ದರೆ ಸಾಕು. ಈ ಪ್ರಪಂಚವೆಲ್ಲವನ್ನೂ ಒಂದು ಕ್ಷಣಕಾಲದಲ್ಲಿ ಸೃಷ್ಟಿಸುತ್ತೇನೆ.

೩೫. ಮೂಲಪ್ರಕೃತಿಯಾದ ನಾನು ಸೃಷ್ಟಿಮಾಡಬೇಕಾದರೆ ಅವನ ಸಾಮೀಪ್ಯವು ನನಗೆ ಬೇಕು. ಆ ಸಾಮೀಪ್ಯವು ಇರುವುದರಿಂದಲೇ ಪಾಮರರು ನಾನು ಮಾಡಿದ ಈ ಮಾಯೆಯ ಕೆಲಸವನ್ನು ಆ ಸ್ವಾಮಿಯು ಮಾಡಿದುದೆಂದು ಅವನ ಮೇಲೆ ಹೊರಿಸುತ್ತಾರೆ.

೩೬–೪೨. ಈ ರಾಮನು ಆಯೋಧ್ಯೆಯಲ್ಲಿ ಜನ್ಮವನ್ನು ತಾಳಿದುದು. ವಿಶ್ವಾಮಿತ್ರನ ಸಹಾಯಕ್ಕೆ ಹೋದುದು, ಯಜ್ಞ ಸಂರಕ್ಷಣೆಯನ್ನು ಮಾಡಿದುದು, ಅಹಲ್ಯಾ ಶಾಪವಿಮೋಚನೆ ಮಾಡಿದುದು, ಮಹೇಶನ ಧನುಸ್ಸನ್ನು ಮಿಥಿಲಾಪಟ್ಟಣದಲ್ಲಿ ಮುರಿದುದು, ಸೀತೆಯಾದ

ಮತ್ಪಾಣಿಗ್ರಹಣಂ ಪಶ್ಚಾದ್ಭಾರ್ಗವಸ್ಯ ಮದಕ್ಷಯಃ । ಅಯೋಧ್ಯಾನಗರೇ ವಾಸೋ ಮಯಾ ದ್ವಾದಶವಾರ್ಷಿಕಃ ॥ ೩೭ ॥

ದಂಡಕಾರಣ್ಯಗಮನಂ ವಿರಾಧವಧ ಏವ ಚ । ಮಾಯಾಮಾರೀಚಮರಣಂ ಮಾಯಾಸೀತಾಹೃತಿಸ್ತಥಾ ॥ ೩೮ ॥

ಜಟಾಯುಷೋ ಮೋಕ್ಷಲಾಭಃ ಕಬಂಧಸ್ಯ ತಥೈವ ಚ । ಶಬರ್ಯಾಃ ಪೂಜನಂ ಪಶ್ಚಾತ್ಸುಗ್ರೀವೇಣ ಸಮಾಗಮಃ ॥ ೩೯ ॥

ವಾಲಿನಶ್ಚ ವಧಃ ಪಶ್ಚಾತ್ಸೀತಾನ್ವೇಷಣಮೇವ ಚ । ಸೇತುಬಂಧಶ್ಚ ಜಲಧೌ ಲಂಕಾಯಾಶ್ಚ ನಿರೋಧನಂ ॥ ೪೦ ॥

ರಾವಣಸ್ಯ ವಧೋ ಯುದ್ಧೇ ಸಪುತ್ರಸ್ಯ ದುರಾತ್ಮನಃ । ವಿಭೀಷಣೇ ರಾಜ್ಯದಾನಂ ಪುಷ್ಪಕೇಣ ಮಯಾ ಸಹ ॥ ೪೧ ॥

ನನ್ನನ್ನು ಮದುವೆಯಾದುದು, ಪರಶುರಾಮನ ಗರ್ವವನ್ನು ಮುರಿದುದು, ಅಯೋಧ್ಯೆಯಲ್ಲಿ ಸುಖದಲ್ಲಿದ್ದುದು, ಹನ್ನೆರಡು ವರ್ಷಗಳ ವನವಾಸವು, ದಂಡಕಾರಣ್ಯಕ್ಕೆ ಹೋದುದು, ವಿರಾಧನ ವಧೆ ಮಾಡಿದುದು, ಮಾಯಾ ಮಾರೀಚನನ್ನು ಕೊಂದುದು, ಮಾಯಾ ಸೀತೆಯನ್ನು ರಾವಣನು ಕದ್ದುದು, ಜಟಾಯುವಿಗೆ ಮೋಕ್ಷವನ್ನು ಕೊಟ್ಟುದು, ಕಬಂಧನ ವಧೆ ಮತ್ತು ಆತನಿಗೆ ಮೋಕ್ಷದಾನ, ಶಬರಿಯು ನಮ್ಮನ್ನು ಪೂಜಿಸಿದುದು, ಸುಗ್ರೀವನೊಡನೆ ಸಖ್ಯ, ವಾಲಿಯ ವಧೆ, ಸೀತೆಯನ್ನು ಹುಡುಕಿದುದು, ಸಮುದ್ರದಲ್ಲಿ ಸೇತುವೆಯನ್ನು ಕಟ್ಟಿದುದು, ಲಂಕೆಯನ್ನು ಮುತ್ತಿದುದು, ಯುದ್ಧಮಾಡಿ ರಾವಣನನ್ನು ಕೊಂದುದು, ವಿಭೀಷಣನಿಗೆ ರಾಜ್ಯವನ್ನು ಕೊಟ್ಟುದು, ಪುಷ್ಪಕದಲ್ಲಿ ನನ್ನನ್ನು ಕೂರಿಸಿ

ಅಯೋಧ್ಯಾಗಮನಂ ಪಶ್ಚಾದ್ರಾಜ್ಯೇ ರಾಮಾಭಿಷೇಚನಂ । ಏವಮಾದೀನಿ ಕರ್ಮಾಣಿ ಮಯ್ಯೈವಾಚರಿತಾನ್ಯಪಿ ।
ಆರೋಪಯಂತಿ ರಾಮೇಽಸ್ಮಿನ್ ನಿರ್ವಿಕಾರೇಽಖಿಲಾತ್ಮನಿ ॥ ೪೩ ॥

ರಾಮೋ ನ ಗಚ್ಛತಿ ನ ತಿಷ್ಠತಿ ನಾನುಶೋಚತ್ಯಾಕಾಂಕ್ಷತೇ ತ್ಯಜತಿ ನೋ ನ ಕರೋತಿ ಕಿಂ ಚಿತ್ ।
ಆನಂದಮೂರ್ತಿರಚಲಃ ಪರಿಣಾಮಹೀನೋ ಮಾಯಾಗುಣಾನನುಗತೋ ಹಿ ತಥಾ ವಿಭಾತಿ ॥ ೪೩ ॥

ತತೋ ರಾಮಃ ಸ್ವಯಂ ಪ್ರಾಹ ಹನೂಮಂತಮುಪಸ್ಥಿತಂ । ಶೃಣು ತತ್ವಂ ಪ್ರವಕ್ಷ್ಯಾಮಿ ಹ್ಯಾತ್ಮಾನಾತ್ಮಪರಾತ್ಮನಾಂ ॥ ೪೪ ॥

ಕೊಂಡು ಅಯೋಧ್ಯೆಗೆ ಬಂದುದು, ಅನಂತರ ರಾಮಾಭಿಷೇಕ, ಇವೇ ಮುಂತಾದ ಕೆಲಸಗಳೆಲ್ಲವನ್ನೂ ನಾನೇ ಮಾಡಿದೆನು. ನಾನು ಮಾಡಿದರೂ ಕೂಡ ನಿರ್ವಿಕಾರನಾದ ಎಲ್ಲರಲ್ಲಿಯೂ ಇರುತ್ತಿರುವ ಆ ಶ್ರೀರಾಮನಲ್ಲಿ ಅವನು ಮಾಡಿದುದೆಂದು ಅವನ ಮೇಲೆ ಹೊರಿಸುತ್ತಾರೆ.

೪೩. ರಾಮನು ಎಂತಹವನೆಂದರೆ ಹೇಳುತ್ತೇನೆ ಕೇಳು. ಹೋಗುವುದಿಲ್ಲ, ನಿಲ್ಲುವುದಿಲ್ಲ, ದುಃಖಿಸುವುದಿಲ್ಲ, ಆಶಿಸುವುದಿಲ್ಲ, ಬಿಡುವುದಿಲ್ಲ, ಯಾವುದನ್ನೂ ಮಾಡುವುದೂ ಇಲ್ಲ, ಅವನು ಆನಂದಮೂರ್ತಿಯು, ಚಲಿಸದವನು, ಬೇರೆ ಬಗೆಯಾದ ಪರಿಣಾಮವನ್ನೇ ಹೊಂದುವುದಿಲ್ಲ. ಮಾಯೆಗೆ ಸಿಕ್ಕತಕ್ಕವನಲ್ಲ, ಆ ರೀತಿಯಾಗಿರತಕ್ಕವನು.

೪೪. ಸೀತೆಯು ಇಷ್ಟನ್ನು ಹೇಳಿದ ಮೇಲೆ ರಾಮನು ಆತನನ್ನು ಕುರಿತು ತಾನಾಗಿಯೇ ಎಲೈ ಹನುಮಂತನೇ! ಆತ್ಮ ಅನಾತ್ಮ ಪರಮಾತ್ಮಗಳ ತತ್ವವನ್ನು ಹೇಳುತ್ತೇನೆ, ಕೇಳು.

ಆಕಾಶಸ್ಯ ಯಥಾ ಭೇದಸ್ತ್ರಿವಿಧೋ ದೃಶ್ಯತೇ ಮಹಾನ್ | ಜಲಾಶಯೇ ಮಹಾಕಾಶಸ್ತದವಚ್ಛಿನ್ನ ಏವ ಹಿ ॥ ೪೫ ॥

ಪ್ರತಿಬಿಂಬಾಖ್ಯಮಪರಂ ದೃಶ್ಯತೇ ತ್ರಿವಿಧಂ ನಭಃ । ಬುದ್ಧ್ಯವಚ್ಛಿನ್ನಚೈತನ್ಯಮೇಕಂ ಪೂರ್ಣಮಥಾಪರಂ ।
ಆಭಾಸಸ್ತ್ವಪರಂ ಬಿಂಬಭೂತಮೇವಂ ತ್ರಿಧಾ ಚಿತಿಃ ॥ ೪೬ ॥

---

೪೫. ಆಕಾಶದಲ್ಲಿ ಮೂರು ವಿಧವಾಗಿರುವ ಭೇದವು ಕಾಣುತ್ತದೆ. ನಮ್ಮ ಸುತ್ತಲೂ ನೋಡಿದರೆ ಕಾಣುವುದು ಒಂದು, ನೀರಿನೊಳಗೆ ನೋಡಿದರೆ ಅದೇ ಪ್ರತಿಬಿಂಬಿಸಿ ಕಾಣುವ ಪ್ರತಿಬಿಂಬರೂಪವಾದ ಆಕಾಶವು ಒಂದು, ಕೆರೆ, ಕೊಳ, ಭಾವಿ, ಮುಂತಾದುವುಗಳಲ್ಲಿ ಕಾಣುವ ಅವವಕ್ಕೆ ಅನುಗುಣವಾಗಿ ಚಿಕ್ಕದು, ದೊಡ್ಡದಾಗಿ ಕಾಣುವುದರಿಂದ ಆ ಉಪಾಧಿಗಳನ್ನು ವಿಶೇಷಣವಾಗಿ ಹೊಂದಿರುವ ಕೆರೆಯ ಆಕಾಶ, ಕೊಳದ ಆಕಾಶ, ಬಾವಿಯ ಆಕಾಶ ಎಂಬುವ ರೀತಿಯವೇ ಬಂದು. ಇವುಗಳಲ್ಲಿ ಮೇಲೆ ಕಾಣುವ ಆಕಾಶಕ್ಕೆ ಬಿಂಬಾಕಾಶವೆಂದೂ, ನೀರಿನಲ್ಲಿ ಕಾಣುವುದಕ್ಕೆ ಪ್ರತಿಬಿಂಬಾಕಾಶವೆಂದೂ, ಸಣ್ಣದು, ದೊಡ್ಡದಾಗಿ ತಾನು ಆಶ್ರಯಿಸಿರುವ ಪದಾರ್ಥಗಳಿಗನುಗುಣವಾಗಿ ಕಾಣುವ ಆಕಾಶಕ್ಕೆ ಅವಚ್ಛಿನ್ನಾಕಾಶವೆಂದೂ ಹೆಸರು.

೪೬. ಇದೇ ರೀತಿಯಲ್ಲಿ ಚಿದ್ರೂಪವಾದ ಆತ್ಮನು ಬುದ್ಧಿಯಿಂದ ಕೂಡಿದರೆ ಅವಚ್ಛಿನ್ನಾತ್ಮನೆಂದೂ, ವ್ಯಾಪಕನಾದ ಆತ್ಮನನ್ನು ಪೂರ್ಣವಾದ ಆತ್ಮನೆಂದೂ, ಪ್ರತಿಕೃತಿಯಂತೆ ಪ್ರತಿಬಿಂಬದಿಂದ ಕಾಣುವ ಆತ್ಮನನ್ನು ಆಭಾಸಾತ್ಮನೆಂದೂ, ಮೂರು ಬಗೆಯಾಗಿ ವಿಂಗಡಿಸುತ್ತಾರೆ.

ಸಾಭಾಸಬುದ್ಧೇಃ ಕರ್ತೃತ್ವಮವಚ್ಛಿನ್ನೇಽವಿಕಾರಿಣಿ । ಸಾಕ್ಷಿಣ್ಯಾರೋಪ್ಯತೇ ಭ್ರಾಂತ್ಯಾ ಜೀವತ್ವಂ ಚ ತಥಾಽಬುಧೈಃ ‖ ೪೭ ‖

ಆಭಾಸಸ್ತು ಮೃಷಾಬುದ್ಧಿರವಿದ್ಯಾಕಾರ್ಯಮುಚ್ಯತೇ । ಅವಚ್ಛಿನ್ನಂ ತು ತದ್ಬ್ರಹ್ಮ ವಿಚ್ಛೇದಸ್ತು ವಿಕಲ್ಪತಃ ‖ ೪೮ ‖

ಅವಚ್ಛಿನ್ನಸ್ಯ ಪೂರ್ಣೇನ ಏಕತ್ವಂ ಪ್ರತಿಪಾದ್ಯತೇ । ತತ್ತ್ವಮಸ್ಯಾದಿವಾಕ್ಯೈಶ್ಚ ಸಾಭಾಸಸ್ಯಾಹಮಸ್ತಥಾ ‖ ೪೯ ‖

---

೪೭. ಅಖಂಡನಾದ, ವಿಕಾರಗಳನ್ನು ಹೊಂದದ, ಎಲ್ಲಕ್ಕೂ ಸಾಕ್ಷಿಯಾದ ಚೈತನ್ಯರೂಪವಾದ ರಾಮನಲ್ಲಿ ಆಭಾಸವಿಶಿಷ್ಟವಾದ ಬುದ್ಧಿಯ ಕರ್ತೃತ್ವವು ಆತ್ಮಾನಾತ್ಮವಿವೇಕವಿಲ್ಲದ ಅಜ್ಞಾನಿಗಳಿಂದ ವಿಪರೀತಜ್ಞಾನರೂಪವಾದ ಭ್ರಾಂತಿಯಿಂದ ಆರೋಪಿಸಲ್ಪಡುವುದು. ಬುದ್ಧಿಗೆ ಅಧೀನವಾಗಿ ಸಂಸಾರಿಯಾಗುವುದೇ ಜೀವವು. ಬುದ್ಧಿಯನ್ನತಿಕ್ರಮಿಸಿರುವುದೇ ಸಾಕ್ಷಿಯು. ಆತ್ಮನಿಗೆ ಸಾಕ್ಷಿತ್ವವೇ ಸ್ವಾಭಾವಿಕವು. ಅಧೀನವಾಗಿರುವ ಜೀವತ್ವವು ಸ್ವಾಭಾವಿಕವಲ್ಲ.

೪೮. ಆತ್ಮಭಿನ್ನವಾದ ದೇಹಾದಿಗಳಲ್ಲಿ ಆತ್ಮವೆಂಬ ಬುದ್ಧಿಯೇ ಅವಿದ್ಯೆಯು. ಈ ಅವಿದ್ಯೆಯಿಂದ ದೇಹಾದಿಗಳೇ ತಾನೆಂದು ತಿಳಿದಿರುವುದೇ ಮಿಥ್ಯಾಜ್ಞಾನವು. ಇದನ್ನೇ ಆಭಾಸವೆಂದು ಕರೆಯುತ್ತಾರೆ. "ಏಕಮೇವಾದ್ವಿತೀಯಂ ಬ್ರಹ್ಮ" ಎಂಬ ವಾಕ್ಯದಿಂದ ಹೇಳಲ್ಪಡುವ ಸರ್ವರೂಪವಾದ ಚೈತನ್ಯಕ್ಕೆ ಬ್ರಹ್ಮವೆಂದು ಹೆಸರು. ಈ ಬ್ರಹ್ಮವು ಅಖಂಡವಾದ್ದರಿಂದ ಅವಚ್ಛಿನ್ನವೆಂದು ಎನ್ನಿಸಿಕೊಳ್ಳುತ್ತದೆ. ಈ ಅವಚ್ಛಿನ್ನವಾದ ಬ್ರಹ್ಮವನ್ನು ಸಾಕ್ಷಿತ್ವ ಮೊದಲಾದ ವಿಕಲ್ಪಗಳಿಂದ ಭೇದವುಳ್ಳದ್ದೆಂದು ಹೇಳುತ್ತಾರೆ.

೪೯. ಸಮಷ್ಟಿ, ಎಂಬ ಉಪಾಧಿಯಿಂದ ಕೂಡಿದ ಚೈತನ್ಯಕ್ಕೆ ಪೂರ್ಣವೆಂದು ಹೆಸರು ಆತ್ಮನಲ್ಲಿ ಅನಾತ್ಮಕವಾದ ದೇಹಾದಿಧರ್ಮಗಳನ್ನು ಆರೋಪಿಸುವ ಅಜ್ಞಾನವಿಶೇಷವೇ ಆಭಾಸವೆಂಬ ಹೆಸರನ್ನು ಹೊಂದುತ್ತದೆ. ಈ ಅಜ್ಞಾನವುಳ್ಳ ಹಂಭಾವದಿಂದ ಕೂಡಿದ ಚೈತನ್ಯಕ್ಕೆ ಅವಚ್ಛಿನ್ನಾವೆಂದು ಹೆಸರು. ತತ್ತ್ವಮಸ್ಯಾದಿವಾಕ್ಯಗಳಿಂದ ಅವಚ್ಛಿನ್ನತ್ಮನಿಗೆ ಪೂರ್ಣಾತ್ಮನೊಡನೆ ಐಕ್ಯವು ಹೇಳಲ್ಪಡುತ್ತದೆ. ಅಂತೆಯೇ ಆಭಾಸದಿಂದ ಕೂಡಿರುವ ಅಹಂಭಾವವುಳ್ಳ ಚೈತನ್ಯಕ್ಕೂ ಪೂರ್ಣನೊಡನೆ ಐಕ್ಯವು ಹೇಳಲ್ಪಡುತ್ತದೆ.

ಐಕ್ಯಜ್ಞಾನಂ ಯದೋತ್ಪನ್ನಂ ಮಹಾವಾಕ್ಯೇನ ಚಾತ್ಮನೋಃ । ತದಾವಿದ್ಯಾ ಸ್ವಕಾರ್ಯೈಶ್ಚ ನಶ್ಯತ್ಯೇವ ನ ಸಂಶಯಃ ॥ ೫೦ ॥

ಏತದ್ವಿಜ್ಞಾಯ ಮದ್ಭಕ್ತೋ ಮದ್ಭಾವಾಯೋಪಪದ್ಯತೇ । ಮದ್ಭಕ್ತಿವಿಮುಖಾನಾಂ ಹಿ ಶಾಸ್ತ್ರಗರ್ತೇಷು ಮುಹ್ಯತಾಂ ॥ ೫೧ ॥

ನ ಜ್ಞಾನಂ ನ ಚ ಮೋಕ್ಷಃ ಸ್ಯಾತ್ತೇಷಾಂ ಜನ್ಮಶತೈರಪಿ ಇದಂ ರಹಸ್ಯಂ ಹೃದಯಂ ಮಮಾತ್ಮನೋ ಮಯೈವ
ಸಾಕ್ಷಾತ್ಕಥಿತಂ ತವಾನಘ । ಮದ್ಭಕ್ತಿಹೀನಾಯ ಶಠಾಯ ನ ತ್ವಯಾ ದಾತವ್ಯಮೈಂದ್ರಾದಪಿ ರಾಜ್ಯತೋಧಿಕಂ ॥ ೫೨ ॥

---

೫೦. "ಅಹಂ ಬ್ರಹ್ಮಾಸ್ಮಿ" ಎಂಬ ವಾಕ್ಯದಿಂದ ಆತ್ಮಪರಮಾತ್ಮಗಳು ಒಂದೇ ಎಂಬುದು ತಿಳಿಯುತ್ತದೆ. ಅವಿದ್ಯೆಯಿಂದುದಿಸಿದ ಭೇದಜ್ಞಾನವು ನಾಶವಾಗುತ್ತದೆ. ಈ ಅಭೇದಜ್ಞಾನವು ಹುಟ್ಟಿದೊಡನೆಯೇ ಅವಿದ್ಯಾರೂಪವಾದ ಮಾಯೆಯು ತನ್ನ ಕಾರ್ಯಗಳಾದ ಅಹಂಕಾರಗಳೊಡನೆ ಹೋಗಿಯೇ ಹೋಗುತ್ತದೆ. ಸಂಶಯವಿಲ್ಲ.

೫೧. ನನ್ನಲ್ಲಿ ಭಕ್ತನಾಗಿರುವವನು ನಾನು ಮೇಲೆ ಹೇಳಿರುವ ವಿಷಯಗಳನ್ನು ತಿಳಿದುಕೊಂಡು ನಾನಾಗುವುದಕ್ಕೆ (ನನ್ನನ್ನು ಹೊಂದುವುದಕ್ಕೆ) ಪ್ರಯತ್ನಪಡುತ್ತಾನೆ. ನನ್ನಲ್ಲಿ ಭಕ್ತಿಯಿಲ್ಲದವರು ಶಾಸ್ತ್ರಗಳನ್ನು ಓದುತ್ತ ಅದರಲ್ಲಿಯೇ ಚರ್ಚಿಸಿಕೊಳ್ಳುತ್ತಾ, ಇದ್ದು ಜ್ಞಾನವನ್ನಾಗಲೀ, ಮೋಕ್ಷವನ್ನಾಗಲೀ, ಸಾವಿರಾರು ಜನ್ಮಗಳಾದರೂ ಹೊಂದುವುದೇ ಇಲ್ಲ.

೫೨. ಜೀವಾತ್ಮನಿಗೂ ಪರಮಾತ್ಮನಿಗೂ ಇರುವ ಈ ಹರಸ್ಯವನ್ನು ನಾನು ಪ್ರತ್ಯಕ್ಷವಾಗಿಯೇ ನಿನಗೆ ಹೇಳಿದ್ದೇನೆ. ನೀನು ನನ್ನಲ್ಲಿ ಭಕ್ತಿಯಿಲ್ಲದ ಅಯೋಗ್ಯನಿಗೆ ಹೇಳಿಕೊಡಬೇಡ. ಈ ವಿಷಯವು ಇಂದ್ರನ ಸಾಮ್ರಾಜ್ಯಕ್ಕಿಂತಲೂ ಉತ್ಕೃಷ್ಟವಾದುದು.

॥ ಶ್ರೀ ಮಹಾದೇವ ಉವಾಚ ॥

ಏತತ್ತೇಽಭಿಹಿತಂ ದೇವಿ ಶ್ರೀರಾಮಹೃದಯಂ ಮಯಾ | ಅತಿಗುಹ್ಯತಮಂ ಹೃದ್ಯಂ ಪವಿತ್ರಂ ಪಾಪಶೋಧನಂ ॥ ೫೩ ॥

ಸಾಕ್ಷಾದ್ರಾಮೇಣ ಕಥಿತಂ ಸರ್ವವೇದಾಂತಸಂಗ್ರಹಂ । ಯಃ ಪಠೇತ್ಸತತಂ ಭಕ್ತ್ಯಾ ಸ ಮುಕ್ತೋ ನಾತ್ರ ಸಂಶಯಃ ॥ ೫೪ ॥

ಬ್ರಹ್ಮಹತ್ಯಾದಿಪಾಪಾನಿ ಬಹುಜನ್ಮಾರ್ಜಿತಾನ್ಯಪಿ । ನಶ್ಯಂತ್ಯೇವ ನ ಸಂದೇಹೋ ರಾಮಸ್ಯ ವಚನಂ ಯಥಾ ॥ ೫೫ ॥

---

೫೩. ಶ್ರೀ ಮಹಾದೇವನು ಹೇಳಿದನು–ಎಲೈ ಪಾರ್ವತಿಯೆ ! ಈ ಶ್ರೀರಾಮಹೃದಯವನ್ನು ನಿನಗೆ ಹೇಳಿದ್ದೇನೆ. ಇದು ಬಹು ಗುಹ್ಯವಾದುದು. ಮನೋಹರವಾದುದು. ಪವಿತ್ರವೂ ಪಾಪನಾಶವೂ ಆದುದು.

೫೪. ಈ ವಿಷಯವು ಎಲ್ಲಾ ವೇದಾಂತಗಳ ಸಂಗ್ರಹರೂಪವಾಗಿರುವುದು. ರಾಮನೇ ಇದನ್ನು ಹೇಳಿರುವನು ಇದನ್ನು ಯಾವನು ಭಕ್ತಿಯಿಂದ ಓದುವನೋ ಅವನು ಮುಕ್ತಿಯನ್ನು ಹೊಂದುವನು. ಸಂಶಯವಿಲ್ಲ.

೫೫. ಇದನ್ನು ಕೇಳಿದರೂ ಓದಿದರೂ ಬ್ರಹ್ಮಹತ್ಯಾದಿ ಪಾಪಗಳು ಬಹು ಜನ್ಮಗಳಿಂದ ಅನುಸರಿಸಿಕೊಂಡು ಬಂದಿದ್ದರೂ ಹೋಗುತ್ತವೆ, ಸಂದೇಹವಿಲ್ಲ. ಶ್ರೀರಾಮನೇ ಹೀಗೆಂದು ಹೇಳಿರುವನು.

ಯೋಽತಿಭ್ರಷ್ಟೋಽತಿಪಾಪೀ ಪರಧನಪರದಾರೇಷು ನಿತ್ಯೋದ್ಯತೋ ವಾ ।
ಸ್ತೇಯೀ ಬ್ರಹ್ಮಘ್ನಮಾತಾಪಿತೃವಧನಿರತೋ ಯೋಗಿವೃಂದಾಪಕಾರೀ ।
ಯಃ ಸಂಪೂಜ್ಯಾಭಿರಾಮಂ ಪಠತಿ ಚ ಹೃದಯಂ ರಾಮಚಂದ್ರಸ್ಯ ಭಕ್ತ್ಯಾ ।
ಯೋಗೀಂದ್ರೈರಪ್ಯಲಭ್ಯಂ ಪದಮಿಹ ಲಭತೇ ಸರ್ವದೇವೈಸ್ಸ ಪೂಜ್ಯಃ ॥ ೫೬ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಬಾಲಕಾಂಡೇ ಉಮಾಮಹೇಶ್ವರ ಸಂವಾದೇ
ಶ್ರೀರಾಮಹೃದಯಂ ನಾಮ ಪ್ರಥಮಃ ಸರ್ಗಃ

---

೫೬. ಯಾವನು ಶ್ರೀರಾಮನನ್ನು ಭಕ್ತಿಯಿಂದ ಪೂಜಿಸಿ ಈ ಶ್ರೀರಾಮ ಹೃದಯವನ್ನು ಓದುತ್ತಾನೆಯೋ ಅವನು ಭ್ರಷ್ಟನಾಗಿರಲಿ, ಪಾಪಿಯಾಗಿರಲಿ, ಪರರ ಹಣವನ್ನು ಕದ್ದಿರಲಿ, ಪರರ ಹೆಂಡಿರಲ್ಲಿ ಆಸಕ್ತನಾಗಿರಲಿ, ಕಳ್ಳನಾಗಿರಲಿ, ಬ್ರಹ್ಮಹತ್ಯೆಯನ್ನು ಮಾಡದವನಾಗಿರಲಿ, ತಾಯಿತಂದೆಗಳನ್ನು ಕೊಂದಿರಲಿ, ಯೋಗಿಗಳಿಗೆ ಅಪಕಾರಮಾಡಿರಲಿ, ಅಂತಹ ಅನೇಕ ಪಾಪಗಳನ್ನೂ ಕಳೆದುಕೊಂಡು ಯೋಗಿಶ್ರೇಷ್ಠರಿಗೂ ಹೊಂದಲಸಾಧ್ಯವಾದ ಸ್ಥಾನವನ್ನು ಹೊಂದುತ್ತಾನೆ. ದೇವತೆಗಳಿಂದಲೂ ಪೂಜೆಯನ್ನು ಹೊಂದುತ್ತಾನೆ.

ಇಂತು ಶ್ರೀಮದಧ್ಯಾತ್ಮರಾಮಾಯಣದ ಬಾಲಕಾಂಡದ ಉಮಾಮಹೇಶ್ವರರ ಸಂವಾದದಲ್ಲಿ
ಶ್ರೀರಾಮ ಹೃದಯವೆಂಬ ಮೊದಲನೆಯ ಸರ್ಗವು.

॥ ಶ್ರೀರಸ್ತು ॥

ಅಥ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ದ್ವಿತೀಯಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪ ಕ್ರಮಃ

ಅಧ್ಯಾತ್ಮರಾಮಾಯಣದ ಬಾಲಕಾಂಡದ ಎರಡನೆಯ ಸರ್ಗದಲ್ಲಿ ಮಾಡಬೇಕಾದ ಸಂಕಲ್ಪ ನ್ಯಾಸ ಧ್ಯಾನ ಜಪಗಳ ಕ್ರಮವು

ಪೂರ್ವೋಕ್ತವಿಧಿನಾ ಬಾಲಕಾಂಡೇ ದ್ವಿತೀಯಸರ್ಗೇ ನ್ಯಾಸಧ್ಯಾನಜಪಮಹಂ ಕರಿಷ್ಯೇ ಇತಿಸಂಕಲ್ಪ್ಯ ॥

ಹಿಂದೆ ಹೇಳಿದ ವಿಧಿಯಂತೆ ಬಾಲಕಾಂಡದ ಎರಡನೆಯ ಸರ್ಗದಲ್ಲಿ ನ್ಯಾಸ, ಧ್ಯಾನ, ಜಪಗಳನ್ನು ಮಾಡುತ್ತೇನೆ ಎಂಬುದಾಗಿ ಸಂಕಲ್ಪವನ್ನು ಮಾಡಬೇಕು

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ಶ್ರೀಂ ರಾಂ ರಾಂ ಅಂಗುಷ್ಠಾಭ್ಯಾಂ ನಮಃ
ಓಂ ಶ್ರೀಂ ರಾಂ ರಾಂ ತರ್ಜನೀಭ್ಯಾಂ ನಮಃ
ಓಂ ಶ್ರೀಂ ರಾಂ ರಾಂ ಮಧ್ಯಮಾಭ್ಯಾಂ ನಮಃ
ಓಂ ಶ್ರೀಂ ರಾಂ ರಾಂ ಅನಾಮಿಕಾಭ್ಯಾಂ ನಮಃ
ಓಂ ಶ್ರೀಂ ರಾಂ ರಾಂ ಕನಿಷ್ಠಿಕಾಭ್ಯಾಂ ನಮಃ
ಓಂ ಶ್ರೀಂ ರಾಂ ರಾಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಆರು ಅಂಗಗಳ ನ್ಯಾಸವು

ಓಂ ಶ್ರೀಂ ರಾಂ ರಾಂ ಹೃದಯಾಯ ನಮಃ | **ಓಂ ಶ್ರೀಂ ರಾಂ ರಾಂ ಶಿರಸೇ ಸ್ವಾಹಾ**
ಓಂ ಶ್ರೀಂ ರಾಂ ರಾಂ ಶಿಖಾಯೈ ವಷಟ್ | **ಓಂ ಶ್ರೀಂ ರಾಂ ರಾಂ ಕವಚಾಯ ಹುಂ**
ಓಂ ಶ್ರೀಂ ರಾಂ ರಾಂ ನೇತ್ರತ್ರಯಾಯ ವೌಷಟ್ | **ಓಂ ಶ್ರೀಂ ರಾಂ ರಾಂ ಅಸ್ತ್ರಾಯ ಫಟ್**

ಓಂ ಶ್ರೀ ರಾಮಚಂದ್ರಾಯ ನಮಃ ಇತಿ ಮಂತ್ರೇಣ ದಿಗ್ಬಂಧಃ

ಓಂ ಶ್ರೀರಾಮಚಂದ್ರಾಯ ನಮಃ ಎಂಬ ಮಂತ್ರದಿಂದ ದಿಗ್ಬಂಧವನ್ನು ಮಾಡಿಕೊಳ್ಳಬೇಕು.

॥ ಅಥ ಧ್ಯಾನಂ ॥

ಧ್ಯಾನವು

ಧನ್ಯಾ ಸ್ಮ್ಯನುಗೃಹೀತಾಸ್ಮಿ ಕೃತಾರ್ಥಾಸ್ಮಿ ಜಗತ್ಪ್ರಭೋ । ವಿಚ್ಛಿನ್ನೋ ಮೇಽತಿಸಂದೇಹಗ್ರಂಥಿರ್ಭವದನುಗ್ರಹಾತ್ ॥
ಏವಂ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

॥ ಇತಿ ಶ್ರೀ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ದ್ವಿತೀಯಸರ್ಗೇ ನ್ಯಾಸ ಧ್ಯಾನ ಜಪ ವಿಧಿಃ ॥

ಇಂತು ಶ್ರೀ ಅಧ್ಯಾತ್ಮರಾಮಾಯಣದ ಬಾಲಕಾಂಡದ ಎರಡನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

|| ಶ್ರೀರಸ್ತು ||

ಅಥ ಶ್ರೀ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ದ್ವಿತೀಯಸ್ಸರ್ಗಃ

|| ಪಾರ್ವತ್ಯುವಾಚ ||

ಧನ್ಯಾಸ್ಮ್ಯನುಗೃಹೀತಾಸ್ಮಿ ಕೃತಾರ್ಥಾಸ್ಮಿ ಜಗತ್ಪ್ರಭೋ । ವಿಚ್ಛಿನ್ನೋ ಮೇತಿಸಂದೇಹಗ್ರಂಥಿರ್ಭವದನುಗ್ರಹಾತ್ . || ೧ ||

ತ್ವನ್ಮುಖಾದ್ಗಲಿತಂ ರಾಮ ತತ್ವಾಮೃತರಸಾಯನಂ । ಪಿಬಂತ್ಯಾ ಮೇ ಮನೋ ದೇವ ನ ತೃಪ್ಯತಿ ಭವಾಪಹಂ || ೨ ||

ಶ್ರೀ ಅಧ್ಯಾತ್ಮರಾಮಾಯಣದ ಬಾಲಕಾಂಡದಲ್ಲಿ ಎರಡನೆಯ ಸರ್ಗವು

೧. ಪಾರ್ವತಿಯು ಹೇಳಿದಳು—ಎಲೈ ಜಗತ್ಪ್ರಭುವೇ । ಧನ್ಯಳಾದೆನು. ಅನುಗ್ರಹವನ್ನು ಹೊಂದಿದವಳಾದೆನು. ಕೃತಾರ್ಥಳಾದೆನು. ನಿನ್ನ ಅನುಗ್ರಹದಿಂದ ನನ್ನ ಸಂಶಯವೆಲ್ಲವೂ ನಾಶವಾದುವು.

೨. ಜನನ ಮರಣವನ್ನು ನಾಶಮಾಡುವ ಎಲೈ ದೇವನೆ! ನಿನ್ನ ಮುಖದಿಂದ ಹೊರಟ ಜನನಮರಣವನ್ನು ನಾಶಮಾಡುವ ರಾಮ ತತ್ವಾಮೃತವೆಂಬ ರಸಾಯನವನ್ನು ನಾನು ಎಷ್ಟು ಕುಡಿದರೂ ತೃಪ್ತಿಯೇ ಉಂಟಾಗುತ್ತಿಲ್ಲ.

ಶ್ರೀರಾಮಸ್ಯ ಕಥಾ ತ್ವತ್ತಃ ಶ್ರುತಾ ಸಂಕ್ಷೇಪತೋ ಮಯಾ । ಇದಾನೀಂ ಶ್ರೋತುಮಿಚ್ಛಾಮಿ ವಿಸ್ತರೇಣ ಸ್ಫುಟಾಕ್ಷರಂ ॥ ೩ ॥

॥ ಶ್ರೀ ಮಹಾದೇವ ಉವಾಚ ॥

ಶೃಣು ದೇವಿ ಪ್ರವಕ್ಷ್ಯಾಮಿ ಗುಹ್ಯಾದ್ಗುಹ್ಯತರಂ ಮಹತ್ । ಅಧ್ಯಾತ್ಮರಾಮಚರಿತಂ ರಾಮೇಣೋಕ್ತಂ ಪುರಾ ಮಮ ॥ ೪ ॥

ತದದ್ಯ ಕಥಯಿಷ್ಯಾಮಿ ಶೃಣು ತಾಪತ್ರಯಾಪಹಂ । ಯಚ್ಛ್ರುತ್ವಾ ಮುಚ್ಯತೇ ಜಂತುರಜ್ಞಾನೋತ್ಥಮಹಾಭಯಾತ್ ।
ಪ್ರಾಪ್ನೋತಿ ಪರಮಾಮೃದ್ಧಿಂ ದೀರ್ಘಾಯುಃ ಪುತ್ರಸಂತತಿಂ ॥ ॥ ೫ ॥

---

೩. ಶ್ರೀರಾಮನ ಕಥೆಯನ್ನು ನೀನೇ ನನಗೆ ಸಂಗ್ರಹವಾಗಿ ಹೇಳಿದ್ದೀಯೆ. ಈಗ ಅದನ್ನೇ ವಿಸ್ತಾರವಾಗಿ ಕೇಳಬೇಕೆಂದಿದ್ದೇನೆ. ಸರಿಯಾಗಿ ಚೆನ್ನಾಗಿ ಹೇಳು.

೪. ಮಹಾದೇವನು ಹೇಳಿದನು—ಎಲೈ ದೇವಿಯೆ! ಹೇಳುತ್ತೇನೆ ಕೇಳು. ಇದು ಬಹು ರಹಸ್ಯವಾದುದು. ಉತ್ತಮವಾದುದು. ಪೂರ್ವದಲ್ಲಿ ರಾಮನೇ ನನಗೆ ಈ ಅಧ್ಯಾತ್ಮರಾಮಾಯಣವನ್ನು ಹೇಳಿರುವನು

೫. ಅದನ್ನೇ ಈಗ ನಿನಗೆ ಹೇಳುತ್ತೇನೆ. ಇದು ಅಧ್ಯಾತ್ಮಿಕ, ಆಧಿವ್ಯಾಧಿಕ, ಆಧಿಭೌತಿಕ, ವೆಂಬ ತಾಪತ್ರಯಗಳನ್ನು ನಾಶಮಾಡುತ್ತದೆ. ಇದನ್ನು ಕೇಳಿದವನು ಅಜ್ಞಾನದಿಂದ ಪಾರಾಗುತ್ತಾನೆ. ಉತ್ತಮವಾದ ಏಳಿಗೆಯನ್ನೂ ಹೊಂದುತ್ತಾನೆ. ಪೂರ್ಣಾಯುಸ್ಸನ್ನೂ ಹೊಂದುತ್ತಾನೆ. ಅಲ್ಲದೆ ಸಂತತಿಯನ್ನು ಬೆಳೆಸುವ ಮಕ್ಕಳೂ ಆಗುತ್ತವೆ.

ಭೂಮಿರ್ಭಾರೇಣ ಮಗ್ನಾ ದಶವದನಮುಖಾಶೇಷರಕ್ಷೋಗಣಾನಾಂ ।
ಧೃತ್ವಾ ಗೋರೂಪಮಾದೌ ದಿವಿಜಮುನಿಜನೈಃ ಸಾಕಮಬ್ಜಾಸನಸ್ಯ ।
ಗತ್ವಾ ಲೋಕಂ ರುದಂತೀ ವ್ಯಸನಮುಪಗತಂ ಬ್ರಹ್ಮಣೇ ಪ್ರಾಹ ಸರ್ವಂ ।
ಬ್ರಹ್ಮಾ ಧ್ಯಾತ್ವಾ ಮುಹೂರ್ತಂ ಸಕಲಮಪಿ ಹೃದಾ ವೇದ ಶೇಷಾತ್ಮಕತ್ವಾತ್ ॥ ೬ ॥

ತಸ್ಮಾತ್ ಕ್ಷೀರಸಮುದ್ರತೀರಮಗಮದ್ಬ್ರಹ್ಮಾಥ ದೇವೈರ್ವೃತೋ ।
ದೇವ್ಯಾಚಾಖಿಲಲೋಕಹೃತ್ಸ್ಥಮಜರಂ ಸರ್ವಜ್ಞಮೀಶಂ ಹರಿಂ ।

---

೬. ಪೂರ್ವದಲ್ಲಿ ರಾವಣನೇ ಮುಂತಾದ ರಾಕ್ಷಸರು ಭೂಮಿಯಲ್ಲಿ ಅಪಚಾರವನ್ನು ಮಾಡುತ್ತಾ ಭೂಭಾರವನ್ನುಂಟುಮಾಡಲು ಆಗ ಭೂಮಿಯು ಆ ಭಾರವನ್ನು ಸಹಿಸಲಾರದೆ ಗೋವಿನ ರೂಪವನ್ನು ಹೊಂದಿ ದೇವತೆಗಳೊಡನೆಯೂ, ಮುನಿಗಳೊಡನೆಯೂ ಬ್ರಹ್ಮನ ಬಳಿಗೆ ಹೋದಳು. ಆ ಬ್ರಹ್ಮನಿಗೆ ಭೂಮಿಯು ತನಗೆ ಬಂದಿರುವ ಕಷ್ಟಗಳನ್ನೆಲ್ಲಾ ಅಳುತ್ತ ಹೇಳಿದಳು. ಬ್ರಹ್ಮನೂ ಕೂಡ ಎಲ್ಲಾ ಪ್ರಾಣಿಗಳ ರೂಪದಲ್ಲಿಯೂ ಇದ್ದುಕೊಂಡಿರುವುದರಿಂದ ಅದೆಲ್ಲವನ್ನೂ ತಿಳಿದುಕೊಂಡನು.

೭. ಈ ರೀತಿಯಾಗಿ ಎಲ್ಲವನ್ನೂ ಯೋಚಿಸಿ ತಿಳಿದ ಬ್ರಹ್ಮನು ದೇವತೆಗಳನ್ನು ಕರೆದುಕೊಂಡು ಕ್ಷೀರಸಮುದ್ರದ ದಡಕ್ಕೆ ಹೋದನು. ಎಲ್ಲರಲ್ಲಿಯೂ ಸೂಕ್ಷ್ಮರೂಪದಿಂದ ಇರುವ ನಾಶರಹಿತನಾದ ಸರ್ವಜ್ಞನಾದ ಎಲ್ಲರಿಗೂ ಒಡೆಯನಾದ ಹರಿಯು ಆ ಸಮುದ್ರದಲ್ಲಿ

ಅಸ್ತೌಷೀಚ್ಛ್ರುತಿಸಿದ್ಧನಿರ್ಮಲಪದೈಃ ಸ್ತೋತ್ರೈಃ ಪುರಾಣೋದ್ಭವೈಃ ।
ಭಕ್ತ್ಯಾ ಗದ್ಗದಯಾ ಗಿರಾತಿವಿಮಲೈರಾನಂದಬಾಷ್ಪೈರ್ವೃತಃ ॥ ೭ ॥

ತತಃ ಸ್ಫುರತ್ಸಹಸ್ರಾಂಶುಸಹಸ್ರಸದೃಶಪ್ರಭಃ । ಆವಿರಾಸೀದ್ಧರಿಃ ಪ್ರಾಚ್ಯಾಂ ದಿಶಾಂ ವ್ಯಪನಯಂಸ್ತಮಃ ॥ ೮ ॥

ಕಥಂಚಿದ್ದೃಷ್ಟವಾನ್ ಬ್ರಹ್ಮಾ ದುರ್ದರ್ಶಮಕೃತಾತ್ಮನಾಂ । ಇಂದ್ರನೀಲಪ್ರತೀಕಾಶಂ ಸ್ಮಿತಾಸ್ಯಂ ಪದ್ಮಲೋಚನಂ ॥ ೯ ॥

ಲಕ್ಷ್ಮಿಯೊಡನೆ ಇದ್ದನು. ಅವನನ್ನು ವೇದದಲ್ಲಿ ಪ್ರಸಿದ್ಧವಾದ ಉತ್ತಮವಾದ ಪದಗಳಿಂದ ಕೂಡಿರುವ ಸ್ತುತಿವಾಕ್ಯಗಳಿಂದಲೂ, ಪುರಾಣದ ಸ್ತುತಿವಾಕ್ಯಗಳಿಂದಲೂ ಭಕ್ತಿಯಿಂದ ಕೂಡಿದ ಗದ್ಗದ ಸ್ವರದಿಂದ ಆನಂದಬಾಷ್ಪಗಳನ್ನು ಸುರಿಸುತ್ತಾ ಆ ಬ್ರಹ್ಮನು ಸ್ತುತಿಸಿದನು.

೮. ಆಗ ಸಾವಿರಾರು ಕಿರಣಗಳಿಂದ ಕೂಡಿದ ಸಾವಿರ ಸೂರ್ಯರಿಗೆ ಸಮನಾದ ಹರಿಯು ಸೂರ್ಯನು ಕತ್ತಲೆಯನ್ನು ನಾಶಮಾಡುತ್ತ ಪೂರ್ವದಿಕ್ಕಿನಲ್ಲಿ ಹುಟ್ಟುವಂತೆ ಅಜ್ಞಾನವನ್ನೂ ಕತ್ತಲೆಯನ್ನೂ ನಾಶಮಾಡುತ್ತ ಪೂರ್ವದಿಕ್ಕಿನಲ್ಲಿ ಕಾಣಿಸಿಕೊಂಡನು.

೯. ಪಾಪಿಗಳಿಗೂ ಭಕ್ತಿಹೀನರಿಗೂ ದರ್ಶನವನ್ನೀಯದ ಪ್ರಕಾಶರೂಪನಾದ ಆ ಸ್ವಾಮಿಯನ್ನು ಬ್ರಹ್ಮನು ಬಹು ಕಷ್ಟದಿಂದ ನೋಡಿದನು. ಆ ಸ್ವಾಮಿಯು ಇಂದ್ರನೀಲಮಣಿಯಂತಿದ್ದನು. ಮುಗುಳುನಗೆಯನ್ನು ಬೀರುತ್ತಿದ್ದನು ಕಣ್ಣುಗಳು ಕಮಲದಂತಿದ್ದುವು.

ಕಿರೀಟಹಾರಕೇಯೂರಕುಂಡಲೈಃ ಕಟಕಾದಿಭಿಃ । ವಿಭ್ರಾಜಮಾನಂ ಶ್ರೀವತ್ಸಕೌಸ್ತುಭಪ್ರಭಯಾನ್ವಿತಂ ॥ ೧೦ ॥

ಸ್ತುವದ್ಭಿಃ ಸನಕಾದ್ಯೈಶ್ಚ ಪಾರ್ಷದೈಃ ಪರಿವೇಷ್ಟಿತಂ । ಶಂಖಚಕ್ರಗದಾಪದ್ಮವನಮಾಲಾವಿರಾಜಿತಂ ॥ ೧೧ ॥

ಸ್ವರ್ಣಯಜ್ಞೋಪವೀತೇನ ಸ್ವರ್ಣವರ್ಣಾಂಬರೇಣ ಚ । ಶ್ರೀಯಾ ಭೂಮ್ಯಾ ಚ ಸಹಿತಂ ಗರುಡೋಪರಿ ಸಂಸ್ಥಿತಂ ॥ ೧೨ ॥

ಹರ್ಷಗದ್ಗದಯಾ ವಾಚಾ ಸ್ತೋತುಂ ಸಮುಪಚಕ್ರಮೇ ॥ ೧೩ ॥

---

೧೦. ಕಿರೀಟ, ಹಾರ, ಭುಜಕೀರ್ತಿ, ಕರ್ಣಾಭರಣ, ಕೈಬಳೆಗಳೆಂಬ ಆಭರಣಗಳನ್ನು ಹಾಕಿಕೊಂಡಿದ್ದನು. ಶ್ರೀವತ್ಸವೆಂಬ ಮಚ್ಚೆಯು ಮತ್ತು ಕೌಸ್ತುಭವೆಂಬ ರತ್ನದ ಕಾಂತಿಯಿಂದ ಕೂಡಿಕೊಂಡು ಪ್ರಕಾಶಿಸುತ್ತಿದ್ದನು.

೧೧. ಸನಕಾದಿ ಋಷಿಗಳು ಸ್ತುತಿಸುತ್ತಿದ್ದರು. ಪಾರ್ಷದ ಗಣಗಳು ಸುತ್ತಲೂ ಇದ್ದರು. ಶಂಖ, ಚಕ್ರ, ಗದೆ, ಪದ್ಮ, ವನಮಾಲೆಯೆಂಬ ಹಾರ ಇವುಗಳನ್ನು ಧರಿಸಿ ಪ್ರಕಾಶಿಸುತ್ತಿದ್ದನು.

೧೨. ಚಿನ್ನದ ಯಜ್ಞೋಪವೀತವನ್ನು ಹಾಕಿಕೊಂಡಿದ್ದನು. ಚಿನ್ನದ ಬಣ್ಣದ ಪೀತಾಂಬರವನ್ನು ಧರಿಸಿದ್ದನು. ಶ್ರೀದೇವಿ, ಭೂದೇವಿಯರಿಂದ ಕೂಡಿಕೊಂಡು ಗರುಡನಮೇಲೆ ಕುಳಿತುಕೊಂಡಿದ್ದನು.

೧೩. ಹರ್ಷದಿಂದ ಧ್ವನಿಯು ತಡೆಯುತ್ತಿರಲು, ಆ ಧ್ವನಿಯಿಂದಲೇ ಇಂತಹ ಸ್ವಾಮಿಯನ್ನು ಬ್ರಹ್ಮನು ಸ್ತುತಿಸುತ್ತಿದ್ದನು.

॥ ಬ್ರಹ್ಮೋವಾಚ ॥

ನತೋಽಸ್ಮಿ ತೇ ಪದಂ ದೇವ ಪ್ರಾಣಬುದ್ಧೀಂದ್ರಿಯಾತ್ಮಭಿಃ । ಯಚ್ಚಿಂತ್ಯತೇ ಕರ್ಮಪಾಶಾದ್ಧೃದಿ ನಿತ್ಯಂ ಮುಮುಕ್ಷುಭಿಃ ॥ ೧೪ ॥

ಮಾಯಯಾ ಗುಣಮಯ್ಯಾ ತ್ವಂ ಸೃಜಸ್ಯವಸಿ ಲುಂಪಸಿ । ಜಗತ್ತೇನ ನ ತೇ ಲೇಪ ಆನಂದಾನುಭವಾತ್ಮನಃ ॥ ೧೫ ॥

ತಥಾ ಶುದ್ಧಿರ್ನ ದುಷ್ಟಾನಾಂ ದಾನಾಧ್ಯಯನ ಕರ್ಮಭಿಃ । ಶುದ್ಧಾತ್ಮನಾಂ ತೇ ಯಶಸಿ ಸದಾ ಭಕ್ತಿಮತಾಂ ಯಥಾ ॥ ೧೬ ॥

---

೧೪. ಬ್ರಹ್ಮನು ಹೇಳಿದನು—ಎಲೈ ದೇವನೆ! ಮೋಕ್ಷವನ್ನು ಅಪೇಕ್ಷಿಸುವ ಯೋಗಿಗಳು ತಮ್ಮ ಕರ್ಮಗಳಿಗೊಳಗಾಗಿ ಅದರಿಂದ ತಪ್ಪಿಸಿಕೊಳ್ಳಲು ಯಾವನನ್ನು ಹೃದಯದಲ್ಲಿ ಪ್ರಾಣ ಬುದ್ಧಿ ಇಂದ್ರಿಯಗಳಿಂದ ಯಾವಾಗಲೂ ಧ್ಯಾನಿಸುತ್ತಾರೆಯೋ ಆ ನಿನ್ನ ಪಾದಗಳನ್ನು ನಮಸ್ಕರಿಸುತ್ತೇನೆ.

೧೫. ಎಲೈ ಸ್ವಾಮಿಯೆ! ನೀನು ಸತ್ವ ರಜಸ್ತಮೋಗುಣಗಳನ್ನು ಆಶ್ರಯಿಸಿ ಮಾಯೆಗೊಳಗಾಗಿ ಪ್ರಪಂಚವನ್ನು ಸೃಷ್ಟಿಸುತ್ತೀಯೆ. ಕಾಪಾಡುತ್ತೀಯೆ. ನಾಶವನ್ನೂ ಮಾಡುತ್ತೀಯೆ. ಯಾವಾಗಲೂ ಆನಂದಸ್ವರೂಪನಾದ, ಆನಂದವನ್ನೇ ಅನುಭವಿಸುತ್ತಿರುವ ನಿನಗೆ ಆ ಮಾಯೆಯ ಲೇಪವಾಗಲಿ ಆ ಗುಣಗಳ ಲೇಪವೇ ಆಗಲಿ ಉಂಟಾಗುವುದಿಲ್ಲ.

೧೬. ಎಲೈ ಸ್ವಾಮಿಯೇ! ನಿನ್ನಲ್ಲಿ ಭಕ್ತಿಯನ್ನಿಟ್ಟುಕೊಂಡು ನಿನ್ನ ಯಶಸ್ಸನ್ನೇ ಹೊಗಳುತ್ತ ಇರುವವರು ಯಾವ ರೀತಿಯಾಗಿ ಶುದ್ಧರಾಗುವರೋ ಆ ರೀತಿಯಾಗಿ ದಾನದಿಂದಾಗಲಿ ಅಧ್ಯಯನದಿಂದಾಗಲಿ ಯಾಗಾದಿಕರ್ಮಗಳಿಂದಾಗಲಿ ಮತ್ತಾವುದರಿಂದಲೇ ಆಗಲಿ ಪ್ರಾಣಿಗಳು ಶುದ್ಧರಾಗಲಾರರು.

ಅತಸ್ತವಾಂಘ್ರಿರ್ನೋದೃಷ್ಟಶ್ಚಿತ್ತದೋಷಾಪನುತ್ತಯೇ । ಸದ್ಯೋಂತರ್ಹೃದಯೇ ನಿತ್ಯಂ ಮುನಿಭಿಃ ಸಾತ್ವತೈರ್ವೃತಃ ॥ ೧೭ ॥

ಬಹ್ಮಾದ್ಯೈಃ ಸ್ವಾರ್ಥಸಿದ್ಧ್ಯರ್ಥ ಮಸ್ಮಾಭಿಃ ಪೂರ್ವಸೇವಿತಃ । ಅಪರೋಕ್ಷಾನುಭೂತ್ಯರ್ಥಂ ಜ್ಞಾನಿಭಿಃ ಹೃದಿ ಭಾವಿತಃ ॥ ೧೮ ॥

ತವಾಂಘ್ರಿ ಪೂಜಾನಿರ್ಮಾಲ್ಯ ತುಲಸೀಮಾಲಯಾ ವಿಭೋ । ಸ್ಪರ್ಧತೇ ವಕ್ಷಸಿ ಪದಂ ಲಬ್ಧ್ವಾಪಿ ಶ್ರೀಃ ಸಪತ್ನಿವತ್ ॥ ೧೯ ॥

---

೧೭. ಸರ್ವಗುಣದಿಂದ ಕೂಡಿರುವ ಯೋಗಿಗಳ ಹೃದಯದಲ್ಲಿ ದೋಷಗಳನ್ನೆಲ್ಲಾ ನಾಶಮಾಡುತ್ತ ನೆಲಸಿರುವ ನೀನು ನಾನು ಭಕ್ತಿಯುಳ್ಳವನಾದುದರಿಂದಲೇ ದರ್ಶನವನ್ನು ಕೊಟ್ಟಿದ್ದೀಯೆ.

೧೮. ಅಪರೋಕ್ಷರೂಪನಾದ ನಿನ್ನ ಪಾದವನ್ನು ಅನುಭವಿಸಲು ಜ್ಞಾನಿಗಳು ನಿನ್ನನ್ನು ಯಾವಾಗಲೂ ಹೃದಯದಲ್ಲಿ ಧರಿಸಿಕೊಂಡಿರುವರು ನಮ್ಮಗಳಿಂದಲಾದರೋ ನಮ್ಮ ಇಷ್ಟಗಳನ್ನು ಪೂರ್ತಿಮಾಡಿಕೊಳ್ಳಲು ಮಾತ್ರ ಆ ನಿನ್ನ ಪಾದಗಳು ಸೇವಿಸಲ್ಪಟ್ಟಿವೆ. (ಇಂದ್ರಿಯಗಳಿಗೆ ವಿಷಯವಾದುದು ಪ್ರತ್ಯಕ್ಷವು. ಇಂದ್ರಿಯಗಳಿಗೆ ವಿಷಯವಾಗದುದು ಅಪರೋಕ್ಷವು. ಈ ಪ್ರತ್ಯಕ್ಷ ಪರೋಕ್ಷಭಾವಗಳಿಲ್ಲದೆ "ನಾನು ಎನ್ನುವುದಕ್ಕೂ ಅವಕಾಶವಿಲ್ಲದೆ. ರಸದಂತೆ ಗೋಚರವಾಗುತ್ತಿದ್ದರೂ ಇಂತಹದೆಂದು ಹೇಳಲು ಸಾಧ್ಯವಾಗದೆ ಸುಷುಪ್ತಿಯ ಸುಖದಂತೆ ಬೇರೆಯ ಕಾಲದಲ್ಲಿ ಸ್ಮರಿಸಿಕೊಳ್ಳಲು ಪ್ರತ್ಯಕ್ಷದಂತೆ ಸಂತೋಷಪಡಿಸುವುದೋ ಅದು ಅಪರೋಕ್ಷವು)

೧೯. ಎಲೈ ಪ್ರಭುವೇ! ಮಹಾಲಕ್ಷ್ಮಿಯು ನಿನ್ನ ಎದೆಯಲ್ಲಿಯೇ ಇರುತ್ತಿದ್ದರೂ ನಿನ್ನ ಪಾದಗಳಿಗೆ ಪೂಜೆಮಾಡಿದ ನಿರ್ಮಾಲ್ಯ ರೂಪವಾದ ತುಲಸೀಮಾಲೆಯೊಡನೆ ಸವತಿಯಂತೆ ಜಗಳವಾಡುವಳು (ಎಲೈ ಸ್ವಾಮಿಯೆ! ನಿನ್ನ ಪಾದವನ್ನು ಪೂಜಿಸಿದ ತುಲಸೀ ಮಾಲೆಯನ್ನು ಧರಿಸಿಕೊಂಡರೆ, ಆ ಮಾಲೆಯು ಎದೆಯಮೇಲೆ ನಿಲ್ಲುವಾಗ ಲಕ್ಷ್ಮಿಯು ತಾನೇ ಮುಂದೆಬರುತ್ತೇನೆಂದು ಹಠದಮೇಲೆ ಬರುತ್ತಿರುವಳು. ಎಂದರೆ ನಿನ್ನ ನಿರ್ಮಾಲ್ಯವನ್ನು ಧರಿಸಿದೊಡನೆಯೇ ಅವನಿಗೆ ಐಶ್ವರ್ಯವು ಬರುವುದು)

ಅತಸ್ತ್ವತ್ಪಾದಭಕ್ತೇಷು ತವ ಭಕ್ತಿಃ ಶ್ರೇಯೋಧಿಕಾ । ಭಕ್ತಿಮೇವಾಭಿವಾಂಛಂತಿ ತ್ವದ್ಭಕ್ತಾಃ ಸಾರವೇದಿನಃ ॥ ೨೦ ॥

ಅತಸ್ತ್ವತ್ಪಾದಕಮಲೇ ಭಕ್ತಿರೇವ ಸದಾಸ್ತು ಮೇ । ಸಂಸಾರಾಮಯತಪ್ತಾನಾಂ ಭೇಷಜಂ ಭಕ್ತಿರೇವ ತೇ ॥ ೨೧ ॥

ಇತಿಬ್ರುವಂತಂ ಬ್ರಹ್ಮಾಣಂ ಬಭಾಷೇ ಭಗವಾನ್ ಹರಿಃ । ಕಿಂ ಕರೋಮೀತಿ ತಂ ವೇಧಾಃ ಪ್ರತ್ಯುವಾಚಾತಿಹರ್ಷಿತಃ ॥ ೨೨ ॥

ಭಗವನ್ ರಾವಣೋ ನಾಮ ಪೌಲಸ್ತ್ಯತನಯೋ ಮಹಾನ್ । ರಾಕ್ಷಸಾನಾಂ ಅಧಿಪತಿರ್ಮದ್ದತ್ತವರದರ್ಪಿತಃ ॥ ೨೩ ॥

---

೨೦ ನಿನ್ನ ಪಾದದಲ್ಲಿ ಭಕ್ತಿಯುಳ್ಳವರಿಗೆ ಐಶ್ವರ್ಯಕಿಂತಲೂ ನಿನ್ನ ಪಾದದ ಭಕ್ತಿಯೇ ಹೆಚ್ಚಿನದು. ಆದ್ದರಿಂದ ವಿಷಯವನ್ನು ಚೆನ್ನಾಗಿ ಬಲ್ಲವರು ನಿನ್ನಲ್ಲಿ ಭಕ್ತಿಯನ್ನೇ ಹೆಚ್ಚಾಗಿ ಅಪೇಕ್ಷಿಸುತ್ತಾರೆ. ಮತ್ತೊಂದನ್ನೂ ಕೇಳುವುದೇ ಇಲ್ಲ.

೨೧. ಆದುದರಿಂದ ನಿನ್ನ ಪಾದಕಮಲಗಳಲ್ಲಿ ನನಗೆ ಯಾವಾಗಲೂ ಭಕ್ತಿಯೇ ಇರಲಿ. ಸಂಸಾರವೆಂಬ ರೋಗದಿಂದ ಕೂಡಿರುವವರಿಗೆ ನಿನ್ನ ಪಾದದ ಭಕ್ತಿಯೇ ಔಷಧಿಯಲ್ಲವೆ!

೨೨. ಹೀಗೆ ಹೇಳುತ್ತಿರುವ ಬ್ರಹ್ಮನನ್ನು ಕುರಿತು ನನ್ನಿಂದ ನಿನಗೆ ಏನಾಗಬೇಕೆಂದು ಹರಿಯು ಕೇಳಲು ಆಗ ಬ್ರಹ್ಮನು ಬಹು ಸಂತೋಷದಿಂದ ಇಂತೆಂದನು.

೨೩. ಎಲೈ ಸ್ವಾಮಿಯೆ! ರಾವಣನೆಂಬುವನೊಬ್ಬ ರಾಕ್ಷಸನಿರುವನು ಅವನು ಪುಲಸ್ತ್ಯನ ಮಗನು ಬಹು ಗಟ್ಟಿಗನು. ರಾಕ್ಷಸರಿಗೆಲ್ಲರಿಗೂ ರಾಜನಾಗಿರುವನು. ನಾನು ಕೊಟ್ಟ ವರದಿಂದಲೇ ಕೊಬ್ಬಿರುವನು.

ತ್ರಿಲೋಕೀಂ ಲೋಕಪಾಲಾಂಶ್ಚ ಬಾಧತೇ ವಿಶ್ವಬಾಧಕಃ । ಮಾನುಷೇಣ ಮೃತಿಸ್ತಸ್ಯ ಮಯಾ ಕಲ್ಯಾಣ ಕಲ್ಪಿತಾ ॥ ೨೪ ॥

ಅತಸ್ತ್ವಂ ಮಾನುಷೋ ಭೂತ್ವಾ ಜಹಿ ದೇವರಿಪುಂ ಪ್ರಭೋ ।

॥ ಶ್ರೀಭಗವಾನುವಾಚ ॥

ಕಶ್ಯಪಸ್ಯ ವರೋ ದತ್ತಸ್ತಪಸಾ ತೋಷಿತೇನ ಮೇ ॥ ೨೫ ॥

ಯಾಚಿತಃ ಪುತ್ರಭಾವಾಯ ತಥೇತ್ಯಂಗೀಕೃತಂ ಮಯಾ । ಸ ಇದಾನೀಂ ದಶರಥೋ ಭೂತ್ವಾ ತಿಷ್ಠತಿ ಭೂತಲೇ ॥ ೨೬ ॥

---

೨೪. ಆತನು ಮೂರುಲೋಕದ ಪ್ರಾಣಿಗಳನ್ನೂ ಲೋಕಪಾಲಕರನ್ನೂ ಬಾಧಿಸುತ್ತ ಪ್ರಪಂಚಕ್ಕೆ ಬಾಧಕನಾಗಿರುವನು. ನಾನು ಅವನಿಗೆ ಮನುಷ್ಯರಿಂದ ಮರಣವುಂಟಾಗುವಂತೆ ಏರ್ಪಡಿಸಿರುತ್ತೇನೆ. ಆದ್ದರಿಂದ ನೀನು ಮನುಷ್ಯರಲ್ಲಿ ಹುಟ್ಟಿ ದೇವತೆಗಳಿಗೆ ಶತ್ರುವಾದ ಆ ರಾವಣನನ್ನು ಕೊಂದುಹಾಕು.

೨೫-೨೬. ಶ್ರೀಭಗವಂತನು ಹೇಳಿದನು.—ಎಲೈ ಬ್ರಹ್ಮನೇ! ಕಶ್ಯಪನು ತಪಸ್ಸನ್ನು ಮಾಡಿ ನನ್ನನ್ನು ಸಂತೋಷಪಡಿಸಿದನು. ಆಗ ನಾನು ಸಂತೋಷದಿಂದ ಆ ಕಶ್ಯಪನಿಗೆ ವರವನ್ನು ಕೊಟ್ಟಿರುವೆನು. ಆ ಕಶ್ಯಪನು ನೀನು ನನಗೆ ಮಗನಾಗಬೇಕೆಂದು ಕೇಳಿಕೊಳ್ಳಲು ನಾನು ಹಾಗೆಯೇ ಆಗಲಿ ಎಂದು ಹೇಳಿದೆನು. ಆ ಕಶ್ಯಪನು ಈಗ ದಶರಥನಾಗಿ ಹುಟ್ಟಿ ಭೂಲೋಕದಲ್ಲಿರುವನು.

ತಸ್ಯಾಹಂ ಪುತ್ರತಾಮೇತ್ಯ ಕೌಸಲ್ಯಾಯಾಂ ಶುಭೇ ದಿನೇ। ಚತುರ್ಧಾತ್ಮಾನಮೇವಾಹಂ ಸೃಜಾಮೀತರಯೋಃ ಪೃಥಕ್ ॥ ೨೭ ॥

ಯೋಗಮಾಯಾಪಿ ಸೀತೇತಿ ಜನಕಸ್ಯ ಗೃಹೇ ತದಾ। ಉತ್ಪತ್ಸ್ಯತೇ ತಯಾ ಸಾರ್ಧಂ ಸರ್ವಂ ಸಂಪಾದಯಾಮ್ಯಹಂ ॥ ೨೮ ॥

ಇತ್ಯುಕ್ತ್ವಾಂ ತರ್ದಧೇ ವಿಷ್ಣುರ್ಬ್ರಹ್ಮಾ ದೇವಾನಥಾಬ್ರವೀತ್।

॥ ಬ್ರಹ್ಮೋವಾಚ ॥

ವಿಷ್ಣುರ್ಮಾನುಷರೂಪೇಣ ಭವಿಷ್ಯತಿ ರಘೋಃ ಕುಲೇ ॥ ೨೯ ॥

ಯೂಯಂ ಸೃಜಧ್ವಂ ಸರ್ವೇಽಪಿ ವಾನರೇಷ್ವಂಶಸಂಭವಾನ್। ವಿಷ್ಣೋಃ ಸಹಾಯಂ ಕುರುತ ಯಾವತ್ಸ್ಥಾಸ್ಯತಿ ಭೂತಲೇ ॥ ೩೦ ॥

---

೨೭. ಆ ರಾಜನಿಗೆ ನಾನು ಕೌಸಲ್ಯೆಯಲ್ಲಿ ಮಗನಾಗಿ ಶುಭದಿನದಲ್ಲಿ ಹುಟ್ಟುತ್ತೇನೆ. ಮತ್ತು ನಾನೇ ನಾಲ್ಕು ಭಾಗವಾಗಿ ಅವನ ಮತ್ತಿಬ್ಬರು ಹೆಂಡಿರಲ್ಲಿ ಮೂರು ಭಾಗವಾಗಿ ಬೇರೆಬೇರೆಯಾಗಿ ಹುಟ್ಟುತ್ತೇನೆ.

೨೮. ಯೋಗಮಾಯೆಯು ಸೀತೆಯೆಂಬ ಹೆಸರಿನಿಂದ ಜನಕನ ಮನೆಯಲ್ಲಿ ಹುಟ್ಟುತ್ತಾಳೆ. ಅವಳೊಡನೆ ಸೇರಿಕೊಂಡು ಎಲ್ಲಾ ಕೆಲಸವನ್ನೂ ಆಗುಮಾಡುತ್ತೇನೆ. ಹೀಗೆಂದು ಹೇಳಿ ಆ ವಿಷ್ಣುವು ಹೊರಟು ಹೋದನು. ಅನಂತರ ಬ್ರಹ್ಮನು ದೇವತೆಗಳನ್ನು ಕುರಿತು ಇಂತೆಂದನು.

೨೯–೩೦. ಬ್ರಹ್ಮನು ಹೇಳಿದನು—ಎಲೈ ದೇವತೆಗಳಿರಾ! ವಿಷ್ಣುವು ಮನುಷ್ಯರೂಪದಿಂದ ರಘುವಿನ ಕುಲದಲ್ಲಿ ಹುಟ್ಟುತ್ತಾನೆ. ನೀವುಗಳೆಲ್ಲರೂ ಕಪಿಗಳಲ್ಲಿ ನಿಮ್ಮ ಅಂಶದಿಂದ ಕಪಿಗಳನ್ನು ಸೃಷ್ಟಿಸಿರಿ. ವಿಷ್ಣುವು ಭೂಮಿಯಲ್ಲಿ ಇರುವವರೆಗೆ ಅವನಿಗೆ ಸಹಾಯವನ್ನು ಮಾಡಿರಿ.

ಇತಿದೇವಾ್ ಸಮಾದಿಶ್ಯ ಸಮಾಶ್ವಾಸ್ಯ ಚ ಮೇದಿನೀಂ । ಯಯೌ ಬ್ರಹ್ಮಾ ಸ್ವಭವನಂ ವಿಜ್ವರಃ ಸುಖಮಾಸ್ಥಿತಃ ॥ ೩೧ ॥

ದೇವಾಶ್ಚ ಸರ್ವೇ ಹರಿರೂಪಧಾರಿಣಃ ಸ್ಥಿತಾಃ ಸಹಾಯಾರ್ಥ ಮಿತಸ್ತತೋ ಹರೇಃ ।

ಮಹಾಬಲಾಃ ಪರ್ವತವೃಕ್ಷಯೋಧಿನಃ ಪ್ರತೀಕ್ಷಮಾಣಾ ಭಗವಂತಮೀಶ್ವರಂ ॥ ೩೨ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಬಾಲಕಾಂಡೇ ಉಮಾಮಹೇಶ್ವರ ಸಂವಾದೇ
ದ್ವಿತೀಯ ಸರ್ಗಃ

---

೩೧. ಹೀಗೆಂದು ಹೇಳಿ ದೇವತೆಗಳಿಗೆ ಅಪ್ಪಣೆಮಾಡಿ ಭೂದೇವಿಯನ್ನೂ ಸಮಾಧಾನಪಡಿಸಿದನು. ಅನಂತರ ಬ್ರಹ್ಮನು ಹಿಂತಿರುಗಿ ಹೋಗಿ ನಿರಾತಂಕವಾಗಿ ತನ್ನ ಮನೆಯಲ್ಲಿ ಇದ್ದನು.

೩೨. ದೇವತೆಗಳೆಲ್ಲರೂ ಕಪಿಗಳ ರೂಪವನ್ನು ಹೊಂದಿ ಭೂಮಿಯಲ್ಲಿ ಅವತರಿಸಿ ವಿಷ್ಣುವಿನ ಸಹಾಯಕ್ಕೋಸ್ಕರ ಅವನು ಹುಟ್ಟುವುದನ್ನೇ ನೋಡುತ್ತ ಅಲ್ಲಲ್ಲಿರುತ್ತಿದ್ದರು. ಅವರೆಲ್ಲರೂ ಬಹು ಬಲಿಷ್ಠರಾಗಿದ್ದರು. ಪರ್ವತಗಳಿಂದಲೂ, ಮರಗಳಿಂದಲೂ, ಯುದ್ಧಮಾಡತಕ್ಕವರಾಗಿದ್ದರು.

ಷಡಂಗನ್ಯಾಸಗಳನ್ನು ಮಾಡಿಕೊಂಡು ಶ್ರೀರಾಮಚಂದ್ರಾಯ ಸ್ವಾಹಾ ಇತಿ ದಿಗ್ವಿಮೋದಕಃ
ಎಂದು ಹೇಳಿ ಧ್ಯಾನ ಶ್ಲೋಕವನ್ನು ಹೇಳಬೇಕು.

ಇಂತು ಶ್ರೀಮದಧ್ಯಾತ್ಮರಾಮಾಯಣದ ಬಾಲಕಾಂಡದ ಉಮಾಮಹೇಶ್ವರ ಸಂವಾದದಲ್ಲಿ
ಎರಡನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಅಥ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ತೃತೀಯಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪ ಕ್ರಮಃ

ಅಧ್ಯಾತ್ಮರಾಮಾಯಣದ ಬಾಲಕಾಂಡದ ಮೂರನೆಯ ಸರ್ಗದಲ್ಲಿ ಮಾಡಬೇಕಾದ ಸಂಕಲ್ಪ ನ್ಯಾಸ ಧ್ಯಾನ ಜಪಗಳ ಕ್ರಮವು

ಪೂರ್ವೋಕ್ತವಿಧಿನಾ ಬಾಲಕಾಂಡೇ ತೃತೀಯಸರ್ಗೇ ನ್ಯಾಸಧ್ಯಾನಜಪಮಹಂ ಕರಿಷ್ಯೇ ಇತಿಸಂಕಲ್ಪ್ಯ ॥

ಹಿಂದೆ ಹೇಳಿದ ವಿಧಿಯಂತೆ ಬಾಲಕಾಂಡದ ಮೂರನೆಯ ಸರ್ಗದಲ್ಲಿ ನ್ಯಾಸ, ಧ್ಯಾನ, ಜಪಗಳನ್ನು ಮಾಡುತ್ತೇನೆ ಎಂಬುದಾಗಿ ಸಂಕಲ್ಪವನ್ನು ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ಶ್ರೀಂ ರಾಂ ಚಂ ಅಂಗುಷ್ಠಾಭ್ಯಾಂ ನಮಃ
ಓಂ ಶ್ರೀಂ ರಾಂ ಚಂ ತರ್ಜನೀಭ್ಯಾಂ ನಮಃ
ಓಂ ಶ್ರೀಂ ರಾಂ ಚಂ ಮಧ್ಯಮಾಭ್ಯಾಂ ನಮಃ
ಓಂ ಶ್ರೀಂ ರಾಂ ಚಂ ಅನಾಮಿಕಾಭ್ಯಾಂ ನಮಃ
ಓಂ ಶ್ರೀಂ ರಾಂ ಚಂ ಕನಿಷ್ಠಿಕಾಭ್ಯಾಂ ನಮಃ
ಓಂ ಶ್ರೀಂ ರಾಂ ಚಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಆರು ಅಂಗಗಳ ನ್ಯಾಸವು

ಓಂ ಶ್ರೀಂ ರಾಂ ಚಂ ಹೃದಯಾಯ ನಮಃ **ಓಂ ಶ್ರೀಂ ರಾಂ ಚಂ ಶಿರಸೇ ಸ್ವಾಹಾ**

ಓಂ ಶ್ರೀಂ ರಾಂ ಚಂ ಶಿಖಾಯೈ ವಷಟ್ **ಓಂ ಶ್ರೀಂ ರಾಂ ಚಂ ಕವಚಾಯ ಹುಂ**

ಓಂ ಶ್ರೀಂ ರಾಂ ಚಂ ನೇತ್ರತ್ರಯಾಯ ವೌಷಟ್ **ಓಂ ಶ್ರೀಂ ರಾಂ ಚಂ ಅಸ್ತ್ರಾಯ ಫಟ್**

ಓಂ ಶ್ರೀ ರಾಮಚಂದ್ರಾಯ ಸ್ವಾಹಾ ಇತಿ ಮಂತ್ರೇಣ ದಿಗ್ಬಂಧಃ

ಓಂ ಶ್ರೀರಾಮಚಂದ್ರಾಯ ನಮಃ ಎಂಬ ಮಂತ್ರದಿಂದ ದಿಗ್ಬಂಧವನ್ನು ಮಾಡಿಕೊಳ್ಳಬೇಕು.

॥ ಅಥ ಧ್ಯಾನಂ ॥

ಧ್ಯಾನವು

ಅಥ ರಾಜಾ ದಶರಥಃ ಶ್ರೀಮಾನ್ ಸತ್ಯಪರಾಕ್ರಮಃ । ಅಯೋಧ್ಯಾಧಿಪತಿರ್ವೀರಃ ಸರ್ವಲೋಕೇಷು ವಿಶ್ರುತಃ ॥
ಏವಂ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

॥ ಇತಿ ಶ್ರೀ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ತೃತೀಯಸರ್ಗೇ ನ್ಯಾಸ ಧ್ಯಾನ ಜಪ ವಿಧಿಃ ॥

ಇಂತು ಬಾಲಕಾಂಡದ ಮೂರನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

ಸರ್ಗವು ಮುಗಿದ ಮೇಲೆ ಷಡಂಗನ್ಯಾಸವನ್ನು ಮಾಡಿಕೊಂಡು ಶ್ರೀರಾಮಚಂದ್ರಾಯ ಸ್ವಾಹಾ ಇತಿ ದಿಗ್ವಿಮೋಕಃ ಎಂದು ಹೇಳಿ ಧ್ಯಾನ ಶ್ಲೋಕವನ್ನು ಹೇಳಬೇಕು.

॥ ಶ್ರೀರಸ್ತು ॥

ಅಥ ಶ್ರೀ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ತೃತೀಯಸ್ಸರ್ಗಃ

॥ ಶ್ರೀಮಹಾದೇವ ಉವಾಚ ॥

ಅಥ ರಾಜಾ ದಶರಥಃ ಶ್ರೀಮಾನ್ ಸತ್ಯಪರಾಯಣಃ । ಅಯೋಧ್ಯಾಧಿಪತಿರ್ವೀರಃ ಸರ್ವಲೋಕೇಷು ವಿಶ್ರುತಃ ॥ ೧ ॥

ಸೋನಪತ್ಯತ್ವದುಃಖೇನ ಪೀಡಿತೋ ಗುರುಮೇಕದಾ । ವಸಿಷ್ಠಂ ಸ್ವಕುಲಾಚಾರ್ಯಮಭಿವಾದ್ಯೇದಮಬ್ರವೀತ್ ॥ ೨ ॥

---

೧. ಶ್ರೀ ಮಹಾದೇವನು ಹೇಳಿದನು--ಅಯೋಧ್ಯೆಗೆ ಅಧಿಪತಿಯಾದ ದಶರಥನೆಂಬ ವೀರನಿದ್ದನು. ಅವನು ಸತ್ಯವಂತನು. ಎಲ್ಲಾ ಲೋಕದಲ್ಲಿಯೂ ಪ್ರಸಿದ್ಧನಾಗಿದ್ದನು.

೨. ಅವನಿಗೆ ವಯಸ್ಸಾದರೂ ಮಕ್ಕಳೇ ಆಗಲಿಲ್ಲ. ಈ ದುಃಖವು ಅವನಿಗೆ ಬಹಳವಾಯಿತು. ಆದ್ದರಿಂದ ಅವನು ಒಂದುಸಾರಿ ಕುಲಾಚಾರ್ಯನೂ ಗುರುವೂ ಆದ ವಸಿಷ್ಠನಿಗೆ ನಮಸ್ಕರಿಸಿ ಇಂತೆಂದನು.

ಸ್ವಾಮಿನ್ ಪುತ್ರಾಃ ಕಥಂ ಮೇ ಸ್ಯುಃ ಸರ್ವಲಕ್ಷಣಲಕ್ಷಿತಾಃ । ಪುತ್ರಹೀನಸ್ಯ ಮೇ ರಾಜ್ಯಂ ಸರ್ವದುಃಖಾಯ ಕಲ್ಪತೇ ॥ ೩ ॥

ತತೋಽಬ್ರವೀದ್ವಸಿಷ್ಠಸ್ತಂ ಭವಿಷ್ಯಂತಿ ಸುತಾಸ್ತವ । ಚತ್ವಾರಃ ಸತ್ತ್ವಸಂಪನ್ನಾ ಲೋಕಪಾಲಾ ಇವಾಪರಾಃ ॥ ೪ ॥

ಶಾಂತಾಭರ್ತಾರಮಾನೀಯ ಋಷ್ಯಶೃಂಗಂ ತಪೋಧನಂ । ಅಸ್ಮಾಭಿಃ ಸಹಿತಃ ಪುತ್ರಕಾಮೇಷ್ಟಿಂ ಶೀಘ್ರಮಾಚರ ॥ ೫ ॥

ತಥೇತಿ ಮುನಿಮಾನೀಯ ಮಂತ್ರಿಭಿಃ ಸಹಿತಃ ಶುಚಿಃ । ಯಜ್ಞಕರ್ಮ ಸಮಾರೇಭೇ ಮುನಿಭಿರ್ವೀತಕಲ್ಮಷೈಃ ॥ ೬ ॥

---

೩. ಎಲೈ ಗುರುವೆ ! ನನಗೆ ಎಲ್ಲಾ ಲಕ್ಷಣಗಳಿಂದಲೂ ಕೂಡಿದ ಮಕ್ಕಳು ಏನುಮಾಡಿದರೆ ಹುಟ್ಟುವರು ? ಪುತ್ರರಿಲ್ಲದಿರುವ ನನಗೆ ರಾಜ್ಯವು ಬಹುವಾದ ದುಃಖವನ್ನು ಕೊಡುತ್ತಿರುವುದಲ್ಲ !

೪. ಎಂದೆನಲು ವಸಿಷ್ಠನು ರಾಜನನ್ನು ಕುರಿತು ಎಲೈ ರಾಜನೇ ! ನಿನಗೆ ನಾಲ್ಕುಜನ ಮಕ್ಕಳಾಗುತ್ತಾರೆ. ಅವರು ಎಲ್ಲಾ ಲಕ್ಷಣಗಳಿಂದಲೂ ಕೂಡಿ ಲೋಕಪಾಲಕರಂತೆ ಇರುತ್ತಾರೆ.

೫. ತಪೋಧನನಾದ ಶಾಂತೆಯ ಗಂಡನಾದ ಋಷ್ಯಶೃಂಗನನ್ನು ಕರೆಸಿ ನಮ್ಮನ್ನೂ ಸೇರಿಸಿಕೊಂಡು ಪುತ್ರಕಾಮೇಷ್ಟಿ ಯಾಗವನ್ನು ನೀನು ಬೇಗನೆ ಮಾಡು. ಎಂದನು.

೬. ಆ ರಾಜನು ಹಾಗೆಯೇ ಆಗಲೆಂದು ಮಂತ್ರಿಗಳಿಂದ ಆ ಋಷಿಯನ್ನು ಕರೆಸಿ ಪವಿತ್ರರಾದ ಆ ಋಷಿಗಳೊಡನೆ ಯಜ್ಞವನ್ನು ಪ್ರಾರಂಭಿಸಿದನು.

ಶ್ರದ್ಧಯಾ ಹೂಯಮಾನೇಗ್ನೌ ತಪ್ತ ಜಾಂಬೂನದಪ್ರಭಃ । ಪಾಯಸಂ ಸ್ವರ್ಣಪಾತ್ರಸ್ಥಂ ಗೃಹೀತ್ವೋವಾಚ ಹವ್ಯವಾಟ್ ॥ ೭ ॥

ಗೃಹಾಣ ಪಾಯಸಂ ದಿವ್ಯಂ ಪುತ್ರೀಯಂ ದೇವನಿರ್ಮಿತಂ । ಲಪ್ಸ್ಯಸೇ ಪರಮಾತ್ಮಾನಂ ಪುತ್ರತ್ವೇನ ನ ಸಂಶಯಃ ॥ ೮ ॥

ಇತ್ಯುಕ್ತ್ವಾ ಪಾಯಸಂ ದತ್ವಾ ರಾಜ್ಞೇ ಸೋಂತರ್ದಧೇಽನಲಃ । ವವಂದೇ ಮುನಿಶಾರ್ದೂಲೌ ರಾಜಾ ಲಬ್ಧಮನೋರಥಃ ॥ ೯ ॥

ವಸಿಷ್ಠಋಷ್ಯಶೃಂಗಾಭ್ಯಾಮನುಜ್ಞಾತೋ ದದೌ ಹವಿಃ । ಕೌಸಲ್ಯಾಯೈ ಸ ಕೈಕೇಯ್ಯೈ ಅರ್ಧಮರ್ಧಂ ಪ್ರಯತ್ನತಃ ॥ ೧೦ ॥

---

೭. ಅಗ್ನಿಯಲ್ಲಿ ಶ್ರದ್ಧೆಯಿಂದ ಹೋಮಮಾಡುತ್ತಿರಲು ಪುಟಕ್ಕೆ ಹಾಕಿದ ಚಿನ್ನದಂತೆ ವರ್ಣವುಳ್ಳ ಅಗ್ನಿದೇವನು ಚಿನ್ನದ ಪಾತ್ರೆಯಲ್ಲಿ ಪಾಯಸವನ್ನು ಹಿಡಿದುಕೊಂಡು ಕಾಣಿಸಿಕೊಂಡನು.

೮. ಮತ್ತು ಇವನನ್ನು ಕುರಿತು ಎಲೈ ದೊರೆಯೇ ! ಈ ಪಾಯಸವನ್ನು ತೆಗೆದುಕೊ. ಇದು ದೇವಲೋಕದಲ್ಲಿ ನಿರ್ಮಿತವಾದುದು. ಉತ್ತಮರಾದ ಮಕ್ಕಳನ್ನು ಕೊಡತಕ್ಕದ್ದು, ಇದನ್ನು ಸೇವಿಸಿದರೆ ಪರಮಾತ್ಮನನ್ನೇ ಮಗನನ್ನಾಗಿ ಹೊಂದುತ್ತೀಯೆ. ಎಂದನು.

೯. ಆ ಅಗ್ನಿಯು ರಾಜನಿಗೆ ಇಂತೆಂದು ಹೇಳಿ ಪಾಯಸವನ್ನು ಕೊಟ್ಟು ಹೊರಟು ಹೋದನು. ಅನಂತರ ಆ ರಾಜನು ಋಷಿಶ್ರೇಷ್ಠರಾದ ವಸಿಷ್ಠ ಋಷ್ಯಶೃಂಗರಿಗೆ ನಮಸ್ಕರಿಸಿದನು. ಅವನ ಇಷ್ಟಾರ್ಥವು ನೆರವೇರಿತು.

೧೦. ಆ ವಸಿಷ್ಠ ಋಷ್ಯಶೃಂಗರ ಅನುಮತಿಯನ್ನು ಹೊಂದಿ ಆ ಪಾಯಸವನ್ನು ಎರಡುಭಾಗವಾಗಿ ಮಾಡಿ ಪಟ್ಟದರಾಣಿಯಾದ ಕೌಸಲ್ಯೆಗೆ ಅರ್ಧವನ್ನೂ, ಪ್ರೀತಿಪಾತ್ರಳಾದ ಕೈಕೆಗೆ ಅರ್ಧವನ್ನೂ ಕೊಟ್ಟನು.

ತತಃ ಸುಮಿತ್ರಾ ಸಂಪ್ರಾಪ್ತಾ ಜಗೃಧ್ನುಃ ಪೌತ್ರಿಕಂ ಚರುಂ । ಕೌಸಲ್ಯಾ ತು ಸ್ವಭಾಗಾರ್ಧಂ ದದೌ ತಸ್ಯೈ ಮುದಾನ್ವಿತಾ ॥ ೧೧ ॥

ಕೈಕೇಯಿ ಚ ಸ್ವಭಾಗಾರ್ಧಂ ದದೌ ಪ್ರೀತಿಸಮನ್ವಿತಾ । ಉಪಭುಜ್ಯ ಚರುಂ ಸರ್ವಾಃ ಸ್ತ್ರಿಯೋ ಗರ್ಭಸಮನ್ವಿತಾಃ ॥ ೧೨ ॥

ದೇವತಾ ಇವ ರೇಜುಸ್ತಾಃ ಸ್ವಭಾಸಾ ರಾಜಮಂದಿರೇ । ದಶಮೇ ಮಾಸಿ ಕೌಸಲ್ಯಾ ಸುಷುವೇ ಪುತ್ರಮದ್ಭುತಂ ॥ ೧೩ ॥

ಮಧುಮಾಸೇ ಸಿತೇ ಪಕ್ಷೇ ನವಮ್ಯಾಂ ಕರ್ಕಟೇ ಶುಭೇ । ಪುನರ್ವಸ್ವೃಕ್ಷಸಹಿತೇ ಉಚ್ಚಸ್ಥೇ ಗ್ರಹಪಂಚಕೇ ॥ ೧೪ ॥

೧೧--೧೨. ಅನಂತರ ಸುಮಿತ್ರೆಗೆ ಕೌಸಲ್ಯೆಯೂ, ಕೈಕೇಯಿಯೂ ತಮ್ಮ ತಮ್ಮ ಭಾಗಗಳಲ್ಲಿ ಅರ್ಧರ್ಧವನ್ನು ವಿಶ್ವಾಸದಿಂದ ಕೊಟ್ಟರು. ಆ ಪಾಯಸವನ್ನು ಎಲ್ಲರೂ ಸೇವಿಸಿ ಗರ್ಭವನ್ನು ಧರಿಸಿದರು.

೧೩. ಆ ರಾಣಿಯರೆಲ್ಲರೂ ದೇವತೆಗಳಂತೆ ಕಾಂತಿಯಿಂದ ಕೂಡಿ ಪ್ರಕಾಶಿಸಿದರು. ಕೌಸಲ್ಯೆಯು ಹತ್ತನೆಯ ತಿಂಗಳಿನಲ್ಲಿ ಅದ್ಭುತನಾದ ಮಗನನ್ನು ಹೆತ್ತಳು.

೧೪. ಆ ದಿನ ಚೈತ್ರಶುದ್ಧ ನವಮಿಯಾಗಿದ್ದಿತು. ಕರ್ಕಾಟಕಲಗ್ನದಲ್ಲಿ ಪುನರ್ವಸು ನಕ್ಷತ್ರದಲ್ಲಿ ಆ ಮಗುವು ಹುಟ್ಟಿತು. ಐದುಗ್ರಹಗಳು ಉಚ್ಚಸ್ಥಾನದಲ್ಲಿದ್ದುವು.

ಮೇಷಂ ಪೂಷಣಿ ಸಂಪ್ರಾಪ್ತೇ ಪುಷ್ಪವೃಷ್ಟಿಸಮಾಕುಲೇ । ಆವಿರಾಸೀಜ್ಜಗನ್ನಾಥಃ ಪರಮಾತ್ಮಾ ಸನಾತನಃ ॥ ೧೫ ॥

ನೀಲೋತ್ಪಲದಳಶ್ಯಾಮಃ ಪೀತವಾಸಾಶ್ಚತುರ್ಭುಜಃ । ಜಲಜಾರುಣನೇತ್ರಾಂತಃ ಸ್ಫುರತ್ಕುಂಡಲಮಂಡಿತಃ ॥ ೧೬ ॥

ಸಹಸ್ರಾರ್ಕಪ್ರತೀಕಾಶಃ ಕಿರೀಟೀ ಕುಂಚಿತಾಲಕಃ । ಶಂಖಚಕ್ರಗದಾಪದ್ಮವನಮಾಲಾವಿರಾಜಿತಃ ॥ ೧೭ ॥

ಅನುಗ್ರಹಾಖ್ಯಹೃತ್ಸ್ಥೇಂದುಸೂಚಕಸ್ಮಿತಚಂದ್ರಿಕಃ । ಕರುಣಾರಸಸಂಪೂರ್ಣವಿಶಾಲೋತ್ಪಲಲೋಚನಃ ॥ ೧೮ ॥

---

೧೫. ಸೂರ್ಯನು ಮೇಷರಾಶಿಯಲ್ಲಿದ್ದನು. ಆಗ ಆಕಾಶದಲ್ಲಿ ಪುಷ್ಪವೃಷ್ಟಿಯಾಯಿತು. ಇಂತಹ ಸಮಯದಲ್ಲಿ ಆ ಸನಾತನನೂ ಜಗನ್ನಾಥನೂ ಆದ ವಿಷ್ಣುವು ಅವತರಿಸಿದನು.

೧೬. ಕನ್ನೈದಿಲೆಯ ದಳದಂತೆ ನೀಲಿಯ ವರ್ಣಕ್ಕೆ ಇದ್ದನು. ಹೊಂಬಣ್ಣದ ಬಟ್ಟೆಯನ್ನು ಧರಿಸಿದ್ದನು. ನಾಲ್ಕುತೋಳುಗಳಿದ್ದುವು. ಕಮಲದಂತೆ ಕಣ್ಣುಗಳಿದ್ದುವು. ಕರ್ಣಾಭರಣಗಳು ಥಳ ಥಳನೆ ಅಲ್ಲಾಡುತ್ತಾ ಪ್ರಕಾಶಿಸುತ್ತಿದ್ದುವು.

೧೭ ಸಾವಿರಜನ ಸೂರ್ಯರಂತೆ ಪ್ರಕಾಶಿಸುತ್ತಿದ್ದನು. ಕಿರೀಟವನ್ನು ಹಾಕಿಕೊಂಡಿದ್ದನು. ಮುಂಗುರುಳುಗಳು ಗುಂಗುರು ಗುಂಗುರಾಗಿದ್ದುವು. ಶಂಖ ಚಕ್ರ ಗದೆ ಪದ್ಮಗಳನ್ನು ಧರಿಸಿ ವನಮಾಲೆಯೆಂಬ ಮಾಲೆಯನ್ನು ಹಾಕಿಕೊಂಡಿದ್ದನು.

೧೮. ಹೃದಯದಲ್ಲಿರುವ ಅನುಗ್ರಹವೆಂಬ ಚಂದ್ರನನ್ನು ಅವನ ಹಲ್ಲುಗಳಿಂದ ಹೊರಡುವ ಹುಸಿನಗೆಯೆಂಬ ಚಂದ್ರಿಕೆಯು ಸೂಚಿಸುತ್ತಿದ್ದಿತು. (ಹುಸಿನಗೆಯನ್ನು ನಗುತ್ತಿದ್ದನು) ಕರುಣಾರಸದಿಂದ ಕೂಡಿದ್ದನು. ದೊಡ್ಡದಾಗಿರುವ ಕನ್ನೈದಿಲೆಯಂತೆ ಕಣ್ಣುಗಳಿದ್ದುವು.

ಶ್ರೀವತ್ಸಹಾರಕೇಯೂರನೂಪೂರಾದಿ ವಿಭೂಷಣಃ । ದೃಷ್ಟ್ವಾ ತಂ ಪರಮಾತ್ಮಾನಂ ಕೌಸಲ್ಯಾ ವಿಸ್ಮಯಾಕುಲಾ ॥ ೧೯ ॥

॥ ಕೌಸಲ್ಯೋವಾಚ ॥

ದೇವ ದೇವ ನಮಸ್ತೇಸ್ತು ಶಂಖಚಕ್ರಗದಾಧರ । ಪರಮಾತ್ಮಾಚ್ಯುತೋನಂತ ಪೂರ್ಣಸ್ತ್ವಂ ಪುರುಷೋತ್ತಮ ॥ ೨೦ ॥

ವದಂತ್ಯಗೋಚರಂ ವಾಚಾಂ ಬುದ್ಧ್ಯಾದೀನಾಮತೀಂದ್ರಿಯಂ । ತ್ವಾಂ ವೇದವಾದಿನಃ ಸತ್ತಾಮಾತ್ರಂ ಜ್ಞಾನೈಕವಿಗ್ರಹಂ ॥ ೨೧ ॥

ತ್ವಮೇವ ಮಾಯಯಾ ವಿಶ್ವಂ ಸೃಜಸ್ಯವಸಿ ಹಂಸಿ ಚ । ಸತ್ವಾದಿಗುಣಸಂಯುಕ್ತಸ್ತುರ್ಯ ಏವಾಮಲಸ್ಸದಾ ॥ ೨೨ ॥

---

೧೯. ಶ್ರೀವತ್ಸವೆಂಬ ಮಚ್ಚೆ, ಹಾರ, ಭುಜಕೀರ್ತಿ, ಕಾಲುಬಳೆ ಕೈಬಳೆಗಳು ಇವನ್ನು ಧರಿಸಿದ್ದನು. ಇಂತಹ ಪರಮಾತ್ಮನನ್ನು ನೋಡಿ ಕೌಸಲ್ಯೆಯು ಆಶ್ಚರ್ಯಪಟ್ಟಳು. ಸಂತೋಷದಿಂದ ಕಣ್ಣೀರನ್ನು ಸುರಿಸುತ್ತಾ ನಮಸ್ಕರಿಸಿ ಕೈಮುಗಿದುಕೊಂಡು ಇಂತೆಂದಳು.

೨೦. ಕೌಸಲ್ಯೆಯು ಹೇಳಿದಳು—ಶಂಖಚಕ್ರ ಗದಾಧರನಾದ ದೇವ ದೇವನೆ! ನಿನಗೆ ನಮಸ್ಕಾರವು. ಪರಮಾತ್ಮನೆ! ಅಚ್ಯುತನೆ! ಅನಂತನೆ! ಪುರುಷೋತ್ತಮನೆ! ನಿನಗೆ ನಮಸ್ಕಾರವು. ನೀನು ಪೂರ್ಣನು.

೨೧. ನೀನು ಇಂತಹವನೆಂದು ಹೇಳಲು ಮಾತಿಗೆ ಸಿಲುಕದವನು. ಬುದ್ಧಿಗೆ ಬಾರದವನು. ಇಂದ್ರಿಯಗಳಿಗೆ ಕಾಣದವನು. ವೇದವಾದಿಗಳು ನಿನ್ನನ್ನು ಸತ್ತಾ ಮಾತ್ರನೆಂದೂ (ಇರುವವನೆಂದೂ) ಜ್ಞಾನಕ್ಕೆ ಸಿಲುಕತಕ್ಕ ವಿಗ್ರಹವುಳ್ಳವನೆಂದೂ ಹೇಳುತ್ತಾರೆ.

೨೨. ನೀನೇ ಮಾಯೆಯಿಂದ ಮೂರುಭಾಗವಾಗಿ ಜಗತ್ತನ್ನು ಸೃಷ್ಟಿಸುತ್ತೀಯೆ. ಪಾಲಿಸುತ್ತೀಯೆ. ಕೊಲ್ಲುತ್ತೀಯೆ. ನಿರ್ಮಲವಾಗಿ ನಾಲ್ಕನೆಯವನಾಗಿ ನೀನೇ ಬೇರೆಯಾಗಿಯೂ ಇದ್ದೀಯೆ.

ಕರೋಷೀವ ನ ಕರ್ತಾ ತ್ವಂ ಗಚ್ಛಸೀವ ನ ಗಚ್ಛಸಿ । ಶೃಣೋಷಿ ನ ಶೃಣೋಷೀವ ಪಶ್ಯಸೀವ ನ ಪಶ್ಯಸಿ ॥ ೨೩ ॥

ಅಪ್ರಾಣೋ ಹ್ಯಮನಾ ಶುದ್ಧ ಇತ್ಯಾದಿ ಶ್ರುತಿರಬ್ರವೀತ್ । ಸಮಃ ಸರ್ವೇಷು ಭೂತೇಷು ತಿಷ್ಠನ್ನಪಿ ನ ಲಕ್ಷ್ಯಸೇ ॥ ೨೪ ॥

ಅಜ್ಞಾನಧ್ವಾಂತಚಿತ್ತಾನಾಂ ವ್ಯಕ್ತ ಏವ ಸುಮೇಧಸಾಂ । ಜಠರೇ ತವ ದೃಶ್ಯಂತೇ ಬ್ರಹ್ಮಾಂಡಾಃ ಪರಮಾಣವಃ ॥ ೨೫ ॥

---

೨೩. ಕರ್ತೃವಿನಂತೆ ಕಾಣುತ್ತೀಯೆ. ನೀನು ಕರ್ತೃವಲ್ಲ. ನಡೆಯುವವನಂತೆ ಕಾಣುತ್ತೀಯೆ. ಆದರೆ ನಡೆಯುವವನಲ್ಲ ಕೇಳುವವನಂತೆ ಕಾಣುತ್ತೀಯೆ. ಆದರೆ ಕೇಳುವುದಿಲ್ಲ. ನೋಡುವವನಂತೆ ಕಾಣುತ್ತೀಯೆ. ಆದರೆ ನೋಡುವುದಿಲ್ಲ.

೨೪. ಪ್ರಾಣರೂಪನಲ್ಲ. ಮನೋರೂಪನಲ್ಲ. ಶುದ್ಧನಾದವನು ಎಂದು ಅನೇಕ ವಿಧವಾಗಿ ಶ್ರುತಿಗಳು ಹೇಳುತ್ತಿರುವುವು. ನೀನು ಎಲ್ಲಾ ಪ್ರಾಣಿಗಳಲ್ಲಿಯೂ ಒಂದೇ ರೀತಿಯಾಗಿದ್ದೀಯೆ. ಎಲ್ಲಾ ಪ್ರಾಣಿಗಳಲ್ಲಿಯೂ ಸಮಬುದ್ಧಿಯುಳ್ಳವನಾಗಿದ್ದೀಯೆ. ಎಲ್ಲಾ ಕಡೆಯಲ್ಲಿಯೂ ಇದ್ದರೂ ಕೂಡ ಕಾಣುವುದಿಲ್ಲ.

೨೫. ಅಜ್ಞಾನವೆಂಬ ಕತ್ತಲೆಯನ್ನು ಹೊಂದಿರುವ ಮನಸ್ಸುಳ್ಳವರಿಗೆ ಎಂದರೆ ದಡ್ಡರಿಗೆ ನೀನು ಎಲ್ಲಾ ಕಡೆಯಲ್ಲಿಯೂ ಇದ್ದರೂ ಕಾಣುವುದಿಲ್ಲ. ಒಳ್ಳೆಯ ಬುದ್ಧಿಯುಳ್ಳ ಜ್ಞಾನಿಗಳಿಗೆ ನಿನ್ನ ದರ್ಶನವಾಗುವುದಲ್ಲದೆ ನಿನ್ನ ಹೊಟ್ಟೆಯಲ್ಲಿರುವ ಬ್ರಹ್ಮಾಂಡಗಳು ಪರಮಾಣುಗಳಂತೆ ಕಾಣುತ್ತವೆ.

ತ್ವಂ ಮನೋದರಸಂಭೂತ ಇತಿ ಲೋಕಾನ್ ವಿಡಂಬಸೇ । ಭಕ್ತೇಷು ಪಾರವಶ್ಯಂ ತೇ ದೃಷ್ಟಂ ಮೇಽದ್ಯ ರಘೂತ್ತಮ ॥ ೨೬ ॥

ಸಂಸಾರಸಾಗರೇ ಮಗ್ನಾ ಪತಿಪುತ್ರಧನಾದಿಷು । ಭ್ರಮಾಮಿ ಮಾಯಯಾ ತೇಽದ್ಯ ಪಾದಮೂಲಮುಪಾಗತಾ ॥ ೨೭ ॥

ದೇವ ತ್ವದ್ರೂಪಮೇತನ್ಮೇ ಸದಾ ತಿಷ್ಠತು ಮಾನಸೇ । ಆವೃಣೋತು ನ ಮಾಂ ಮಾಯಾ ತವ ವಿಶ್ವವಿಮೋಹಿನೀ ॥ ೨೮ ॥

ಉಪಸಂಹರ ವಿಶ್ವಾತ್ಮನ್ನದೋರೂಪಮಲೌಕಿಕಂ । ದರ್ಶಯಸ್ವ ಮಹಾನಂದಬಾಲಭಾವಂ ಸುಕೋಮಲಂ ॥ ೨೯ ॥

---

೨೬. ಜನಗಳು ಇವನು ಕೌಸಲ್ಯೆಯ ಹೊಟ್ಟೆಯಲ್ಲಿ ಹುಟ್ಟಿದವನು. ಎಂಬುದಾಗಿ ಲೋಕದಲ್ಲಿ ಹೇಳುವ ಹಾಗೆ ನನ್ನ ಹೊಟ್ಟೆಯಲ್ಲಿ ಹುಟ್ಟಿದವನಂತೆ ಕಾಣುವಂತೆ ಮಾಡುತ್ತೀಯೆ. ನೀನು ಭಕ್ತರ ಅಧೀನನಾಗಿದ್ದೀಯೆ. ಎಂಬುದು ಈಗ ನನಗೆ ತಿಳಿಯಿತು.

೨೭. ಇವನು ನನ್ನ ಪತಿಯು ಇವನು ನನ್ನ ಪುತ್ರನು. ಇದು ನನ್ನ ಹಣವು. ಇವೆಲ್ಲವೂ ನನ್ನವು. ಎಂದು ಕೊಳ್ಳುತ್ತ ಸಂಸಾರವೆಂಬ ಸಾಗರದಲ್ಲಿ ನಿನ್ನ ಮಾಯೆಯಿಂದ ಬಿದ್ದು ತೊಳಲುತ್ತಿದ್ದೇನೆ. ಅಂತಹ ನಾನು ಈಗ ನಿನ್ನ ಪಾದಗಳನ್ನು ಶರಣು ಹೊಂದಿದ್ದೇನೆ.

೨೮. ಎಲೈ ದೇವನೆ ! ಈ ನಿನ್ನ ರೂಪವು ಯಾವಾಗಲೂ ನನ್ನ ಮನಸ್ಸಿನಲ್ಲಿಯೇ ನಿಂತಿರಲಿ. ಪ್ರಪಂಚವನ್ನೇ ಆವರಿಸಿಕೊಂಡಿರುವ ನಿನ್ನ ಈ ಮಾಯೆಯು ನನ್ನನ್ನು ಆವರಿಸದಿರಲಿ.

೨೯. ವಿಶ್ವಾತ್ಮನಾದ ಎಲೈ ಸ್ವಾಮಿಯೇ ! ಉತ್ತಮವಾದ ಈ ನಿನ್ನ ರೂಪವನ್ನು ಮರೆಮಾಡಿಕೋ. ಆನಂದವನ್ನುಂಟುಮಾಡುವ ಮನೋಹರವಾದ ನಿನ್ನ ಬಾಲತನವನ್ನು ನನಗೆ ತೋರಿಸು. ಅಂತಹ ಬಾಲನಾದ ನಿನ್ನನ್ನು ಅಪ್ಪಿಕೊಂಡು ಮಾತನಾಡಿಸಿ ಈ ಅಗಾಧವಾದ ಸಂಸಾರವನ್ನು ದಾಟುತ್ತೇನೆ.

ಲಲಿತಾಲಿಂಗನಾಲಾಪೈಸ್ತರಿಷ್ಯಾಮ್ಯುತ್ಕಟಂ ತಮಃ ।

॥ ಶ್ರೀಭಗವಾನುವಾಚ ॥

ಯ ದ್ಯದಿಷ್ಟಂ ತವಾಸ್ತ್ಯಂಬ ತತ್ತದ್ಭವತು ನಾನ್ಯಥಾ ॥ ೩೦ ॥

ಅಹಂತು ಬ್ರಹ್ಮಣಾ ಪೂರ್ವಂ ಭೂಮೇರ್ಭಾರಾಪನುತ್ತಯೇ । ಪ್ರಾರ್ಥಿತೋ ರಾವಣಂ ಹಂತುಂ ಮಾನುಷತ್ವಮುಪಾಗತಃ ॥ ೩೧ ॥

ತ್ವಯಾ ದಶರಥೇನಾಹಂ ತಪಸಾರಾಧಿತಃ ಪುರಾ । ಮತ್ಪುತ್ರತ್ವಾಭಿಕಾಂಕ್ಷಿಣ್ಯಾ ತಥಾ ಕೃತಮನಿಂದಿತೇ ॥ ೩೨ ॥

೩೦–೩೧. ಶ್ರೀ ಭಗವಂತನು ಹೇಳಿದನು–ಎಲೈ ತಾಯಿಯೆ ! ನಿನಗೆ ಏನೇನು ಇಷ್ಟವೋ ಅವೆಲ್ಲವೂ ಖಂಡಿತವಾಗಿ ಸಿದ್ಧಿಸಲಿ. ನನ್ನನ್ನು ಬ್ರಹ್ಮನು ಭೂಭಾರವನ್ನು ನಾಶಮಾಡಬೇಕೆಂದು ಕೇಳಿಕೊಂಡನು. ಆದ್ದರಿಂದ ಲೋಕಕಂಟಕನಾದ ರಾವಣನನ್ನು ಸಂಹರಿಸಲು ಮನುಷ್ಯನಾಗಿ ಹುಟ್ಟಿದ್ದೇನೆ.

೩೨. ಹಿಂದೆ ನೀನೂ ದಶರಥನೂ ತಪಸ್ಸುಮಾಡಿ ನನ್ನನ್ನು ಸಂತೋಷಪಡಿಸಿದಿರಿ. ಆಗ ನೀನು ನಿನ್ನ ಹೊಟ್ಟೆಯಲ್ಲಿ ಹುಟ್ಟಬೇಕೆಂದು ನನ್ನನ್ನು ಕೇಳಿಕೊಂಡಿದ್ದೆ. ಅದೇ ರೀತಿಯಾಗಿ ಹುಟ್ಟಿದ್ದೇನೆ.

ರೂಪಮೇತತ್ತ್ವಯಾ ದೃಷ್ಟಂ ಪ್ರಾಕ್ತನಂ ತಪಸಃ ಫಲಂ । ಮದ್ದರ್ಶನಂ ವಿಮೋಕ್ಷಾಯ ಕಲ್ಪತೇ ಹ್ಯಸ್ಯದುರ್ಲಭಂ ॥ ೩೩ ॥
ಸಂವಾದಮಾವಯೋರ್ಯಸ್ತು ಪಠೇದ್ವಾ ಶೃಣುಯಾದಪಿ । ಸ ಯಾತಿ ಮಮ ಸಾರೂಪ್ಯಂ ಮರಣೇ ಮತ್ಸ್ಮೃತಿಂ ಲಭೇತ್ ॥ ೩೪ ॥
ಇತ್ಯುಕ್ತ್ವಾ ಮಾತರಂ ರಾಮೋ ಬಾಲೋ ಭೂತ್ವಾ ರುರೋದ ಹ । ಬಾಲತ್ವೇಪೀಂದ್ರನೀಲಾಭೋ ವಿಶಾಲಾಕ್ಷೋತಿಸುಂದರಃ ॥ ೩೫ ॥
ಬಾಲಾರುಣ ಪ್ರತೀಕಾಶೋ ಲಾಲಿತಾಖಿಲಲೋಕಪಃ । ಅಥ ರಾಜಾ ದಶರಥಃ ಶ್ರುತ್ವಾ ಪುತ್ರೋದ್ಭವೋತ್ಸವಂ ॥ ೩೬ ॥

---

೩೩. ನನ್ನ ಈ ರೂಪವನ್ನು ನೀನು ಈಗ ನೋಡಿದೆ. ಇದು ನಿನ್ನ ಪೂರ್ವಜನ್ಮದ ತಪಸ್ಸಿನ ಫಲವು. ನನ್ನ ದರ್ಶನವು ಎಲ್ಲರಿಗೂ ಸಿಕ್ಕುವುದಿಲ್ಲ. ನನ್ನ ದರ್ಶನವಾದರೆ ಅವರಿಗೆ ಮೋಕ್ಷವು ಸಿಕ್ಕುತ್ತದೆ.

೩೪. ಈ ನಮ್ಮಗಳ ಮಾತುಗಳನ್ನು ಓದುವವರೂ, ಕೇಳುವವರೂ ಸಾಯುವಾಗ ನನ್ನ ಸ್ಮರಣೆಯನ್ನು ಮಾಡುತ್ತಾ ನನ್ನ ಸಾರೂಪ್ಯವನ್ನೇ ಹೊಂದುತ್ತಾರೆ.

೩೫. ಆ ವಿಷ್ಣುವು ಹೀಗೆಂದು ತಾಯಿಗೆ ಹೇಳಿ ಮೊದಲಿನಂತೆ ಮಗುವಾಗಿ ಅಳಲು ಮೊದಲುಮಾಡಿದನು. ಆ ಮಗುವಾಗಿದ್ದಾಗಲೂ ಅವನು ಇಂದ್ರನೀಲಮಣಿಯಂತೆ ಕಾಂತಿಯುಳ್ಳವನಾಗಿ ದೊಡ್ಡದಾದ ಕಣ್ಣುಳ್ಳವನಾಗಿ ಸುಂದರನಾಗಿ ಇದ್ದನು. ಬಾಲಸೂರ್ಯನಂತೆ ಪ್ರಕಾಶಿಸುತ್ತಿದ್ದನು. ಎಲ್ಲರೂ ಅವನನ್ನು ಲಾಲಿಸುತ್ತಿದ್ದರು.

೩೬. ಆಮೇಲೆ ರಾಜನಾದ ದಶರಥನು ಮಗನು ಹುಟ್ಟಿದುದನ್ನುಕೇಳಿ ಆನಂದ ಸಮುದ್ರದಲ್ಲಿ ಮುಳುಗಿ ಗುರುವಿನೊಡನೆ ಅಲ್ಲಿಗೆ ಬಂದನು.

ಆನಂದಾರ್ಣವಮಗ್ನೋಽಸಾವಾಯಯೌ ಗುರುಣಾ ಸಹ । ರಾಮಂ ರಾಜೀವಪತ್ರಾಕ್ಷಂ ದೃಷ್ಟ್ವಾ ಹರ್ಷಾಶ್ರುಸಂಪ್ಲುತಃ ।
ಗುರುಣಾ ಜಾತಕರ್ಮಾಣಿ ಕರ್ತವ್ಯಾನಿ ಚಕಾರ ಸಃ ॥ ೩೭ ॥

ಕೈಕೇಯೀ ಚಾಥ ಭರತಮಸೂತ ಕಮಲೇಕ್ಷಣಾ । ಸುಮಿತ್ರಾಯಾಂ ಯಮೌ ಜಾತೌ ಪೂರ್ಣೇಂದುಸದೃಶಾನನೌ ॥ ೩೮ ॥

ತದಾ ಗ್ರಾಮಸಹಸ್ರಾಣಿ ಬ್ರಾಹ್ಮಣೇಭ್ಯೋ ಮುದಾ ದದೌ । ಸುವರ್ಣಾನಿ ಚ ರತ್ನಾನಿ ವಾಸಾಂಸಿ ಸುರಭೀಃ ಶುಭಾಃ ॥ ೩೯ ॥

ಯಸ್ಮಿನ್ ರಮಂತೇ ಮುನಯೋ ವಿದ್ಯಯಾ ಜ್ಞಾನವಿಪ್ಲವೇ । ತಂ ಗುರುಃ ಪ್ರಾಹ ರಾಮೇತಿ ರಮಣಾದ್ರಾಮ ಇತ್ಯಪಿ ॥ ೪೦ ॥

---

೩೭. ಕಮಲದಂತೆ ಕಣ್ಣುಗಳುಳ್ಳ ಆ ಮಗುವನ್ನು ನೋಡಿ ಸಂತೋಷದಿಂದ ಕಣ್ಣೀರುಗಳು ಉದುರಿದುವು. ಆ ಮಗುವಿಗೆ ಮಾಡಬೇಕಾದ ಜಾತಕರ್ಮ ಮುಂತಾದುವುಗಳನ್ನು ಆ ಗುರುವಿನಿಂದ ಮಾಡಿಸಿದನು.

೩೮. ಕೈಕೇಯಿಯು ಭರತನೆಂಬುವನನ್ನು ಹೆತ್ತಳು. ಸುಮಿತ್ರೆಯು ಚಂದ್ರನಂತೆ ಮುಖವುಳ್ಳ ಅವಳಿ ಮಕ್ಕಳನ್ನು ಹೆತ್ತಳು.

೩೯. ಆಗ ದಶರಥನು ಬ್ರಾಹ್ಮಣರಿಗೆ ಸಾವಿರಾರು ಗ್ರಾಮಗಳನ್ನು ದಾನಮಾಡಿದನು. ಚಿನ್ನಗಳನ್ನೂ, ರತ್ನಗಳನ್ನೂ, ಬಟ್ಟೆಗಳನ್ನೂ, ಗೋವುಗಳನ್ನೂ, ಬಹುವಾಗಿ ದಾನಮಾಡಿದನು.

೪೦. ಮುನಿಗಳು ತಾವು ಉತ್ತಮವಾದ ವಿದ್ಯೆಯನ್ನು ಹೊಂದಿ ಅದರಿಂದ ಜ್ಞಾನವೆಂಬ ದೋಣಿಯನ್ನು ಹತ್ತಿ ಯಾವ ಪರಮಾತ್ಮನೆಂಬ ಸಮುದ್ರದಲ್ಲಿ ವಿಹರಿಸುತ್ತಾರೆಯೋ ಅಂತಹವನಿಗೆ ರಾಮನೆಂದು ಗುರುವು ಹೆಸರನ್ನಿಟ್ಟನು. ಅಲ್ಲದೆ ಎಲ್ಲರಿಗೂ ಒಡೆಯನಾಗಿ ಅವರನ್ನು ಆಡಿಸುವುದರಿಂದಲೂ ರಾಮನೆಂದು ಹೆಸರನ್ನಿಟ್ಟನು.

ಭರಣಾದ್ಭರತೋ ನಾಮ ಲಕ್ಷ್ಮಣಂ ಲಕ್ಷಣಾನ್ವಿತಂ । ಶತ್ರುಘ್ನಂ ಶತ್ರುಹಂತಾರಮೇವಂ ಗುರುರಭಾಷತ ॥ ೪೧ ॥

ಲಕ್ಷ್ಮಣೋ ರಾಮಚಂದ್ರೇಣ ಶತ್ರುಘ್ನೋ ಭರತೇನ ಚ । ದ್ವಂದ್ವೀಭೂಯ ಚರಂತೌ ತೌ ಪಾಯಸಾಂಶಾನುಸಾರತಃ ॥ ೪೨ ॥

ರಾಮಸ್ತು ಲಕ್ಷ್ಮಣೇನಾಥ ವಿಚರ್ರ ಬಾಲಲೀಲಯಾ । ರಮಯಾಮಾಸ ಪಿತರೌ ಚೇಷ್ಟಿತೈರ್ಮುಗ್ಧಭಾಷಿತೈಃ ॥ ೪೩ ॥

ಭಾಲೇ ಸ್ವರ್ಣಮಯಾಶ್ವತ್ಥಪರ್ಣಮುಕ್ತಾಫಲಪ್ರಭಂ । ಕಂಠೇ ರತ್ನಮಣಿವ್ರಾತ ಮಧ್ಯದೀಪಿನಖಾಂಚಿತಂ ॥ ೪೪ ॥

---

೪೧. ಭರತನಿಗೆ ಪ್ರಪಂಚವೆಲ್ಲವನ್ನೂ ಕಾಪಾಡುವುದರಲ್ಲಿ ಶಕ್ತನಾಗಿರುವುದರಿಂದ ಭರತನೆಂದೂ ಒಳ್ಳೆಯ ಲಕ್ಷಗಳಿಂದ ಕೂಡಿರುವುದರಿಂದ ಲಕ್ಷ್ಮಣನಿಗೆ ಲಕ್ಷ್ಮಣನೆಂದೂ, ಶತ್ರುಗಳನ್ನು ನಾಶಮಾಡುವುದರಿಂದ ಶತ್ರುಘ್ನನಿಗೆ, ಶತ್ರುಘ್ನನೆಂದೂ, ಗುರುವು ಹೆಸರುಗಳನ್ನಿಟ್ಟು ನಾಮಕರಣಶಾಸ್ತ್ರವನ್ನು ಮಾಡಿದನು

೪೨. ಲಕ್ಷ್ಮಣನು ರಾಮಚಂದ್ರನ ಜೊತೆಯಲ್ಲಿಯೂ ಶತ್ರುಘ್ನನು ಭರತನ ಜೊತೆಯಲ್ಲಿಯೂ ಸೇರಿಕೊಂಡು ಎಡೆಬಿಡದೆ ಇರುತ್ತಿದ್ದರು. ಯಾವ ಯಾವ ಪಾಯಸದ ಭಾಗವು ಯಾರು ಯಾರದಾಗಿದ್ದಿತೋ ಅದರಂತೆ ಸೇರಿಕೊಂಡಿದ್ದರು.

೪೩. ರಾಮನು ಲಕ್ಷ್ಮಣನೊಡನೆ ಸೇರಿಕೊಂಡು ತನ್ನ ಬಾಲಲೀಲೆಗಳಿಂದಲೂ ಮನೋಹರವಾದ ನಗುವಿಕೆಗಳಿಂದಲೂ ತಾಯಿತಂದೆಗಳನ್ನು ಸಂತೋಷಪಡಿಸುತ್ತಿದ್ದನು.

೪೪-೪೫. ಚಿನ್ನದ ಅರಳಿಯೆಲೆಗಳನ್ನು ಮಾಡಿಸಿ ಅವನ್ನು ಮುತ್ತಿನಸಂಗಡ ಪೋಣಿಸಿ ಹಣೆಯ ಮೇಲುಭಾಗದಲ್ಲಿ ಬರುವಂತೆ ಆ ಮಕ್ಕಳ ತಲೆಗೆ ಅವನ್ನು ಕಟ್ಟಿದ್ದರು. ರತ್ನದ ಮಣಿಗಳ ಜೊತೆಗೆ ಮಧ್ಯಭಾಗದಲ್ಲಿ ಹುಲಿಯುಗುರನ್ನು ಸೇರಿಸಿ ಕತ್ತಿಗೆ ಹಾರವನ್ನು ಹಾಕಿದ್ದರು

ಕರ್ಣಯೋಃ ಸ್ವರ್ಣಸಂಪನ್ನ ರತ್ನಾರ್ಜುನ ಶಲಾಟುಕಂ । ಸಿಂಜಾರಮಣಿಮಂಜೀರಕಟಿಸೂತ್ರಾಂಗದೈರ್ವೃತಂ ॥ ೪೫ ॥

ಸ್ಮಿತವಕ್ತ್ರಾಲ್ಪದಶನಮಿಂದ್ರನೀಲಮಣಿಪ್ರಭಂ । ಅಂಗಣೇ ರಿಂಗಮಾಣಂ ತಂ ತರ್ಣಕಾನನುಸರ್ವತಃ ॥ ೪೬ ॥

ದೃಷ್ಟ್ವಾ ದಶರಥೋ ರಾಜಾ ಕೌಸಲ್ಯಾ ಮುಮುದೇ ತದಾ । ಭೋಕ್ಷ್ಯಮಾಣೋ ದಶರಥೋ ರಾಮಮೇಹೀತಿ ಚಾಸಕೃತ್ ॥ ೪೭ ॥

ಆಹ್ವಯತ್ಯತಿಹರ್ಷೇಣ ಪ್ರೇಮ್ಣಾ ನಾಯಾತಿ ಲೀಲಯಾ । ಆನಯೇತಿ ಚ ಕೌಸಲ್ಯಾಮಾಹ ಸಾ ಸಸ್ಮಿತಾ ಸುತಂ ॥ ೪೮ ॥

ಚಿನ್ನದ ಕೊಳವೆಯೊಳಕ್ಕೆ ಮುತ್ತಿಯ ಚಕ್ಕೆಯನ್ನು ಹಾಕಿ ಅದರಮುಂದೆ ರತ್ನವನ್ನು ಇಟ್ಟು ಇರುವ ಕರ್ಣಾಭರಣವನ್ನು ಹಾಕಿದ್ದರು. ಭುಜಗಳಿಗೆ ಭುಜಕೀರ್ತಿಯನ್ನೂ ಸೊಂಟಕ್ಕೆ ಉಡಿಗೆಜ್ಜೆಯನ್ನೂ ಹಾಕಿದ್ದರು. (ಹುಲಿಯುಗುರು ಮುತ್ತಿಚಕ್ಕೆ ಇವುಗಳು ಬಾಲರಕ್ಷೆಗಳು)

೪೬. ಈ ಮಕ್ಕಳುಗಳು ನಗೆಮುಖವುಳ್ಳವುಗಳಾಗಿದ್ದುವು. ಹಲ್ಲುಗಳು ಆಗ ಹುಟ್ಟಿ ಕಾಣುತ್ತಿದ್ದುವು. ಮತ್ತು ಎರಡೆರಡೇ ಇದ್ದುವು. ಇಂದ್ರನೀಲ ಮಣಿಗಳಂತೆ ಕಾಂತಿಯುಳ್ಳವರಾಗಿದ್ದುವು. ಇಂತಹ ಮಕ್ಕಳು ಅಂಗಳದಲ್ಲೆಲ್ಲಾ ಅಂಬೆಗಾಲುಗಳನ್ನು ಇಡುತ್ತಾ ಸಂಚರಿಸುತ್ತಿದ್ದುವು.

೪೭-೪೮. ಇಂತಹ ಮಕ್ಕಳನ್ನು ನೋಡಿ ದಶರಥನೂ ಕೌಸಲ್ಯೆಯೂ ಬಹಳವಾಗಿ ಆನಂದಿಸಿದರು. ದಶರಥನು ಊಟಮಾಡುತ್ತಿದ್ದಾಗ ರಾಮ ರಾಮ ಎಂಬುದಾಗಿ ಅನೇಕಬಾರಿ ಬಹು ಹರ್ಷದಿಂದ ಊಟಕ್ಕೆ ಕೂಗುತ್ತಿದ್ದನು. ಆದರೆ ಆ ಮಗುವು ಲೀಲೆಯಿಂದ ಅವನ ಬಳಿಗೆ ಬರುತ್ತಿರಲಿಲ್ಲ. ಕರೆದುಕೊಂಡು ಬಾ. ಎಂದು ಕೌಸಲ್ಯೆಗೆ ಹೇಳುತ್ತಿದ್ದನು. ಆಕೆಯು ನಗುತ್ತ ಆ ಮಗುವನ್ನು ಎತ್ತಿಕೊಂಡು ಬರಲು ಓಡಿಹೋಗುತ್ತಿದ್ದಳು.

ಧಾವತ್ಯಾಪಿ ನ ಶಕ್ನೋತಿ ಸ್ಪ್ರಷ್ಟುಂ ಯೋಗಿಮನೋಗತಿಂ । ಪ್ರಹರ್ಷ ಸ್ವಯಮಾಯಾತಿ ಕರ್ದಮಾಂಕಿತಪಾಣಿನಾ ॥ ೪೯ ॥
ಕಿಂಚಿದ್ಗೃಹೀತ್ವಾ ಕಬಳಂ ಪುನರೇವ ಪಲಾಯತೇ । ಕೌಸಲ್ಯಾ ಜನನೀ ತಸ್ಯ ಮಾಸಿ ಮಾಸಿ ಪ್ರಕುರ್ವತೀ ॥ ೫೦ ॥
ವಾಯನಾನಿ ವಿಚಿತ್ರಾಣಿ ಸಮಲಂಕೃತ್ಯ ರಾಘವಂ । ಅಪೂಪಾನ್ ಮೋದಕಾನ್ ಕೃತ್ವಾ ಕರ್ಣಶಷ್ಕುಲಿಕಾಸ್ತಥಾ ॥ ೫೧ ॥
ಕರ್ಣಪೂರಾಂಶ್ಚ ವಿವಿಧಾನ್ ವರ್ಷವೃದ್ಧೌ ಚ ವಾಯನಂ । ಗೃಹಕೃತ್ಯಂ ತಯಾ ತ್ಯಕ್ತಂ ತಸ್ಯ ಚಾಪಲ್ಯಕಾರಣಾತ್ ॥ ೫೨ ॥

---

೪೯. ಇವಳು ಆ ಮಗುವನ್ನು ಎತ್ತಿಕೊಂಡು ಬರಲು ಮತ್ತೆ ಓಡಿಹೋಗುತ್ತಿದ್ದಳು. ಆದರೂ ಕೂಡ ಯೋಗಿಗಳ ಮನಸ್ಸಿನಲ್ಲಿ ವಾಸಿಸುವ ಆತನನ್ನು ಮುಟ್ಟುವುದಕ್ಕೂ ಅವಳ ಕೈಯ್ಯಲ್ಲಿ ಆಗುತ್ತಿರಲಿಲ್ಲ. ಹಿಡಿಯಲು ಓಡಿಯಾಡಿ ಸಾಕಾಗುತ್ತಿದ್ದಳು. ಕೊನೆಗೆ ಆ ರಾಮನು ತಾನಾಗಿಯೇ ಬರುತ್ತಿದ್ದನು. ಹಾಗೆ ಬಂದು ಕೊಳೆಯಾಗಿರುವ ಕೈಗಳಿಂದಲೇ ಈಕೆಯ ಕೈಯ್ಯಲ್ಲಿರುವ ತಿಂಡಿಯನ್ನು ತೆಗೆದು ಕೊಂಡು ಓಡುತ್ತಿದ್ದನು.

೫೦-೫೧. ರಾಮನ ತಾಯಿಯು ತಿಂಗಳು ತಿಂಗಳಿಗೂ ಆ ಮಕ್ಕಳಿಗೆ ಅಲಂಕಾರಮಾಡಿ ಆರತಿಯನ್ನು ಎತ್ತಿ ಬಾಗಿನಗಳನ್ನು ಕೊಡುತ್ತಿದ್ದಳು. ಕಡುಬು, ಎಣ್ಣೆಯೋರಿಗೆ, ಚಕ್ಕುಲಿ, ಹೂರಣವನ್ನು ಒಳಗೆಹಾಕಿ ಮೇಲೆ ಮುಚ್ಚಿರುವ ನಾನಾ ಬಗೆಯಾದ ಭಕ್ಷ್ಯಗಳು, ಇವುಗಳೆಲ್ಲವನ್ನೂ ಮಾಡಿ ಬಾಗಿನವನ್ನು ಕೊಡುತ್ತಿದ್ದಳು.

೫೨. ಆ ಮಗುವಿಗೆ ರಕ್ಷೆ ಮುಂತಾದುವನ್ನು ಮಾಡುವುದು. ಆಡಿಸುವುದು, ಬಾಗಿನ ಮುಂತಾದುವುಗಳನ್ನು ಮಾಡುವುದು. ಹುಟ್ಟಿದ ಹಬ್ಬದ ಸಡಗರಣೆ ಇದರಮೇಲೆ ಆಸೆಪಟ್ಟು ಮನೆಗೆಲಸಗಳನ್ನೇ ಬಿಟ್ಟು ಬಿಟ್ಟಳು. ಒಂದುಸಾರಿ ರಾಮನನ್ನು ಕೌಸಲ್ಯೆಯು ಆಡಿಸುತ್ತಿದ್ದಾಗ ಆ ರಾಮನು ತಾಯಿಯ ಹತ್ತಿರಕ್ಕೆ ಹೋದನು.

ಭೋಜನಂ ದೇಹಿ ಮೇ ಮಾತಃ ನ ಶ್ರುತಂ ಕಾರ್ಯಸಕ್ತಯಾ । ತತಃ ಕ್ರೋಧೇನ ಭಾಂಡಾನಿ ಲಗುಡೇನಾಹನತ್ತದಾ ॥ ೫೩ ॥

ಶಿಕ್ಯಸ್ಥಂ ಪಾತಯಾಮಾಸ ಗವ್ಯಂ ಚ ನವನೀತಕಂ । ಲಕ್ಷ್ಮಣಾಯ ದದೌ ರಾಮೋ ಭರತಾಯ ಯಥಾಕ್ರಮಂ ॥ ೫೪ ॥

ಶತ್ರುಘ್ನಾಯ ದದೌ ಪಶ್ಚಾದ್ದಧಿ ದುಗ್ಧಂ ತಥೈವ ಚ । ಸೂದೇನ ಕಥಿತೇ ಮಾತ್ರೇ ಹಾಸ್ಯಂ ಕೃತ್ವಾ ಪ್ರಧಾವತಿ ॥ ೫೫ ॥

ಆಗತಾಂ ತಾಂ ವಿಲೋಕ್ಯಾಥ ತತಃ ಸರ್ವೈಃ ಪಲಾಯಿತಂ । ಕೌಸಲ್ಯಾ ಧಾವಮಾನಾಪಿ ಪ್ರಸ್ಖಲಂತೀ ಪದೇ ಪದೇ ॥ ೫೬ ॥

ರಘುನಾಥಂ ಕರೇ ಧೃತ್ವಾ ಕಿಂಚಿನ್ನೋವಾಚ ಭಾಮಿನೀ । ಬಾಲಭಾವಂ ಸಮಾಶ್ರಿತ್ಯ ಮಂದಂ ಮಂದಂ ರುರೋದ ಹ ॥ ೫೭ ॥

---

೫೩ ಹೋಗಿ, ಅಮ್ಮ, ನನಗೆ ಅನ್ನವನ್ನು ಹಾಕು ಎಂದನು. ಆಕೆಯು ಕೆಲಸಮಾಡುತ್ತಲಿದುದರಿಂದ ಆಕೆಯು ಅದನ್ನು ಗಮನಿಸಲಿಲ್ಲ. ಆಗ ರಾಮನಿಗೆ ಕೋಪಬಂದು ಕೋಲನ್ನು ತೆಗೆದುಕೊಂಡು ಪಾತ್ರೆಗಳನ್ನು ಹೊಡೆದು ಒಡೆಯುವುದು ಉರುಳಿಸುವುದು ಇದನ್ನು ಮಾಡಲು ಮೊದಲಿಟ್ಟನು.

೫೪–೫೫. ನೆಲುವಿನಮೇಲಿಟ್ಟಿದ್ದುವುಗಳನ್ನು ಕೆಳಕ್ಕೆ ಕೆಡವಿದನು. ಆ ಬಿದ್ದುವುಗಳಲ್ಲಿ ಬೆಣ್ಣೆಯಿರಲು ಅದನ್ನು ತೆಗೆದು ಲಕ್ಷ್ಮಣ, ಭರತ ಶತ್ರುಘ್ನರಿಗೆ ಕ್ರಮವಾಗಿ ಕೊಡುತ್ತಿದ್ದನು. ಮತ್ತು ಹಾಗೆಯೇ ಹಾಲು ಮೊಸರುಗಳನ್ನೂ ಕೊಡುತ್ತ ತಾನೂ ಕುಡಿಯುತ್ತ ಇದ್ದನು. ಅಡಿಗೆಯವನು ಕೌಸಲ್ಯೆಗೆ ಹೇಳಿದರೆ ನಗುತ್ತ ಆ ರಾಮನು ಓಡಿಹೋಗುತ್ತಿದ್ದನು.

೫೬–೫೭. ಅಡಿಗೆಯವನ ಮಾತನ್ನು ಕೇಳಿ ಆ ಕೌಸಲ್ಯೆಯು ಬರಲು ಅವಳನ್ನು ನೋಡಿ ಎಲ್ಲಾ ಹುಡುಗರೂ ಓಡಿಹೋಗುತ್ತಿದ್ದರು. ಕೌಸಲ್ಯೆಯು ಎಡವುತ್ತ ಮುಗ್ಗರಿಸುತ್ತ ಹಿಂದೆಯೇ ಓಡಿಹೋಗುತ್ತಿದ್ದಳು. ಕೊನೆಗೆ ರಾಮನನ್ನು ಕೈಯಲ್ಲಿ ಹಿಡುಕೊಳ್ಳುತ್ತಿದ್ದಳು. ಆಗ ಆ ರಾಮನು ತಪ್ಪಿನ ವಿಷಯವನ್ನು ಕೇಳಿದರೆ ಮಾತನ್ನೇ ಆಡುತ್ತಿರಲಿಲ್ಲ. ಹುಡುಗತನಕ್ಕೆ ಅನುಗುಣವಾಗಿ ಮೆಲ್ಲ ಮೆಲ್ಲಗೆ ಅಳುತ್ತಿದ್ದನು.

ತೇ ಸರ್ವೇ ಲಾಲಿತಾ ಮಾತ್ರಾ ಗಾಢಮಾಲಿಂಗ್ಯ ಯತ್ನತಃ । ಏವಮಾನಂದಸಂದೋಹಜಗದಾನಂದಕಾರಕಃ ॥ ೫೮ ॥

ಮಾಯಾಬಾಲವಪುರ್ಧೃತ್ವಾ ರಮಯಾಮಾಸ ದಂಪತೀ । ಅಥ ಕಾಲೇನ ತೇ ಸರ್ವೇ ಕೌಮಾರಂ ಪ್ರತಿಪೇದಿರೇ ॥ ೫೯ ॥

ಉಪನೀತಾ ವಸಿಷ್ಠೇನ ಸರ್ವವಿದ್ಯಾವಿಶಾರದಾಃ । ಧನುರ್ವೇದೇ ಚ ನಿರತಾಃ ಸರ್ವಶಾಸ್ತ್ರಾರ್ಥವೇದಿನಃ ॥ ೬೦ ॥

ಬಭೂವುರ್ಜಗತಾಂ ನಾಥಾ ಲೀಲಯಾ ನರರೂಪಿಣಃ । ಲಕ್ಷ್ಮಣಸ್ತು ಸದಾ ರಾಮಮನುಗಚ್ಛತಿ ಸಾದರಂ ॥ ೬೧ ॥

೫೮-೫೯. ಈ ರೀತಿಯಾಗಿ ಆಡಿಸುತ್ತ ಆ ತಾಯಿಯರು ಮಕ್ಕಳನ್ನು ಗಾಢವಾಗಿ ಆಲಿಂಗಿಸಿಕೊಂಡು ಸಂತೋಷಿಸುತ್ತಿದ್ದರು. ಈ ಬಾಲ್ಯದ ಆನಂದಗಳ ಪರಂಪರೆಯನ್ನುಂಟುಮಾಡುತ್ತ ಜಗತ್ತಿಗೆ ಆನಂದವನ್ನುಂಟುಮಾಡುವ ಶ್ರೀರಾಮನು ಮಾಯೆಯಿಂದ ಮಗುವಾಗಿ ಆ ದಂಪತಿಗಳನ್ನು ಹೀಗೆ ಸಂತೋಷಪಡಿಸಿದನು. ಹೀಗಿರುತ್ತಿರಲು ಕೆಲವುಕಾಲದಮೇಲೆ ಆ ಮಕ್ಕಳು ಬಾಲಭಾವವನ್ನು ಕಳೆಯುತ್ತ ಕೌಮಾರಭಾವವನ್ನು ಹೊಂದಿದರು.

೬೦ ಆಗ ವಸಿಷ್ಠನು ಅವರಿಗೆ ಉಪನಯನವನ್ನು ಮಾಡಿಸಿದನು. ಅವರೆಲ್ಲರೂ ಎಲ್ಲಾ ವಿದ್ಯೆಗಳನ್ನೂ ಕಲಿತು ಬುದ್ಧಿವಂತರಾದರು. ಧನುರ್ವೇದದಲ್ಲಿಯೂ ಗಟ್ಟಿಗರಾದರು. ಎಲ್ಲಾ ಶಾಸ್ತ್ರಗಳ ಅರ್ಥವನ್ನೂ ತಿಳಿದುಕೊಂಡರು.

೬೧. ಲೀಲೆಯಿಂದ ಮನುಷ್ಯರಾಗಿ ಹುಟ್ಟಿದ ಅವರು ಪ್ರಪಂಚಕ್ಕೇ ಒಡೆಯರಾದರು. ಲಕ್ಷ್ಮಣನು ಯಾವಾಗಲೂ ಪ್ರೀತಿಯಿಂದ ರಾಮನ ಜೊತೆಯಲ್ಲಿಯೇ ಇರುತ್ತಿದ್ದನು. ಮತ್ತೂ ಆ ರಾಮನನ್ನೇ ಸೇವಿಸುತ್ತಿದ್ದನು.

ಸೇವ್ಯಸೇವಕಭಾವೇನ ಶತ್ರುಘ್ನೋ ಭರತಂ ತಥಾ । ರಾಮಶ್ಚಾಪಧರೋ ನಿತ್ಯಂ ತೂಣೀಬಾಣಾನ್ವಿತಃ ಪ್ರಭುಃ ॥ ೬೨ ॥
ಅಶ್ವಾರೂಢೋ ವನಂ ಯಾತಿ ಮೃಗಯಾಯೈ ಸಲಕ್ಷ್ಮಣಃ । ಹತ್ವಾ ದುಷ್ಟಮೃಗಾನ್ ಸರ್ವಾನ್ ಪಿತ್ರೇ ಸರ್ವಂ ನ್ಯವೇದಯತ್ ॥ ೬೩ ॥
ಪ್ರಾತರುತ್ಥಾಯ ಸುಸ್ನಾತಃ ಪಿತರಾವಭಿವಾದ್ಯ ಚ । ಪೌರಕಾರ್ಯಾಣಿ ಸರ್ವಾಣಿ ಕರೋತಿ ವಿನಯಾನ್ವಿತಃ ॥ ೬೪ ॥
ಬಂಧುಭಿಃ ಸಹಿತೋ ನಿತ್ಯಂ ಭುಕ್ತ್ವಾ ಮುನಿಭಿರನ್ವಹಂ । ಧರ್ಮಶಾಸ್ತ್ರರಹಸ್ಯಾನಿ ಶೃಣೋತಿ ವ್ಯಾಕರೋತಿ ಚ ॥ ೬೫ ॥

೬೨-೬೩. ಶತ್ರುಘ್ನನು ಭರತನನ್ನು ಅನುಸರಿಸುತ್ತ ಸೇವಿಸುತ್ತಿದ್ದನು. ರಾಮನು ಬಾಣಬತ್ತಳಿಕೆಗಳನ್ನು ಧರಿಸಿ ಕುದುರೆಯಮೇಲೆ ಕುಳಿತುಕೊಂಡು ಲಕ್ಷ್ಮಣನೊಡನೆ ಯಾವಾಗಲೂ ಕಾಡಿಗೆ ಬೇಟೆಗೆ ಹೋಗುತ್ತಿದ್ದನು. ಅಲ್ಲಿ ದುಷ್ಟಮೃಗಗಳನ್ನು ಕೊಂದುತಂದು ತಂದೆಗೆ ತೋರಿಸುತ್ತಿದ್ದನು.

೬೪. ರಾಮನು ಬೆಳಗ್ಗೆ ಎದ್ದು ಸ್ನಾನಮಾಡಿ ಸಂಧ್ಯಾವಂದನೆಗಳನ್ನು ಮಾಡಿ ತಾಯಿತಂದೆಗಳಿಗೆ ನಮಸ್ಕರಿಸಿ ಪಟ್ಟಣದ ಕೆಲಸಗಳನ್ನು (ಕಚೇರಿಯ ಕೆಲಸಗಳನ್ನು) ವಿನಯದಿಂದ ಮಾಡುತ್ತಿದ್ದನು.

೬೫. ಆದಾಗುತ್ತಲೂ ಮಧ್ಯಾಹ್ನದ ವೇಳೆಯಲ್ಲಿ ಬಂಧುಗಳೊಡನೆ ಊಟಮಾಡುತ್ತಿದ್ದನು. ಊಟವಾದಮೇಲೆ ಮುನಿಗಳೊಡನೆ ಧರ್ಮಶಾಸ್ತ್ರದ ರಹಸ್ಯಗಳನ್ನು ಕೇಳುತ್ತ ಅದರ ಅರ್ಥವನ್ನು ಹೇಳುತ್ತಿದ್ದನು. ಮತ್ತು ಕೇಳುತ್ತಿದ್ದನು.

ಏವಂ ಪರಾತ್ಮಾ ಮನುಜಾವತಾರೋ ಮನುಷ್ಯಲೋಕಾನನುಸೃತ್ಯ ಸರ್ವಂ ।
ಚಕ್ರೇಽವಿಕಾರೀ ಪರಿಣಾಮಹೀನೋ ವಿಚಾರ್ಯಮಾಣೇ ನ ಕರೋತಿ ಕಿಂ ಚಿತ್ ॥ ೬೬ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಬಾಲಕಾಂಡೇ ಉಮಾಮಹೇಶ್ವರಸಂವಾದೇ
ತೃತೀಯಃ ಸರ್ಗಃ

---

೬೬. ಪರಮಾತ್ಮನಾದ ಆ ಸ್ವಾಮಿಯು ಮನುಷ್ಯಾವತಾರವನ್ನು ಮಾಡಿ ಮನುಷ್ಯ ಲೋಕವನ್ನು ಅನುಸರಿಸುತ್ತ ಅವರ ಕೆಲಸಗಳೆಲ್ಲವನ್ನೂ ಮಾಡುತ್ತಿದ್ದನು. ಯೋಚಿಸಿ ನೋಡಿದರೆ ಅವನು ವಿಕಾರವಿಲ್ಲದವನು. ಪರಿಣಾಮವನ್ನು ಹೊಂದದವನು. ತಾನು ಏನನ್ನೂ ಮಾಡತಕ್ಕವನಲ್ಲ.

ಇಂತು ಶ್ರೀಮದಧ್ಯಾತ್ಮರಾಮಾಯಣದ ಬಾಲಕಾಂಡದ ಉಮಾಮಹೇಶ್ವರ ಸಂವಾದದಲ್ಲಿ
ಮೂರನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಅಥ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ಚತುರ್ಥಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪ ಕ್ರಮಃ

ಅಧ್ಯಾತ್ಮರಾಮಾಯಣದ ಬಾಲಕಾಂಡದ ನಾಲ್ಕನೆಯ ಸರ್ಗದಲ್ಲಿ ಮಾಡಬೇಕಾದ ಸಂಕಲ್ಪ ನ್ಯಾಸ ಧ್ಯಾನ ಜಪಗಳ ಕ್ರಮವು

ಪೂರ್ವೋಕ್ತವಿಧಿನಾ ಬಾಲಕಾಂಡೇ ಚತುರ್ಥಸರ್ಗೇ ನ್ಯಾಸಧ್ಯಾನಜಪಮಹಂ ಕರಿಷ್ಯೇ ಇತಿಸಂಕಲ್ಪ್ಯ ॥

ಹಿಂದೆ ಹೇಳಿದ ವಿಧಿಯಂತೆ ಬಾಲಕಾಂಡದ ನಾಲ್ಕನೆಯ ಸರ್ಗದಲ್ಲಿ ನ್ಯಾಸ, ಧ್ಯಾನ, ಜಪಗಳನ್ನು ಮಾಡುತ್ತೇನೆ ಎಂಬುದಾಗಿ ಸಂಕಲ್ಪವನ್ನು ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ಶ್ರೀಂ ರಾಂ ದ್ರಾಂ ಅಂಗುಷ್ಠಾಭ್ಯಾಂ ನಮಃ | **ಓಂ ಶ್ರೀಂ ರಾಂ ದ್ರಾಂ ತರ್ಜನೀಭ್ಯಾಂ ನಮಃ**

ಓಂ ಶ್ರೀಂ ರಾಂ ದ್ರಾಂ ಮಧ್ಯಮಾಭ್ಯಾಂ ನಮಃ | **ಓಂ ಶ್ರೀಂ ರಾಂ ದ್ರಾಂ ಅನಾಮಿಕಾಭ್ಯಾಂ ನಮಃ**

ಓಂ ಶ್ರೀಂ ರಾಂ ದ್ರಾಂ ಕನಿಷ್ಠಿಕಾಭ್ಯಾಂ ನಮಃ | **ಓಂ ಶ್ರೀಂ ರಾಂ ದ್ರಾಂ ಕರತಲಕರಪೃಷ್ಠಾಭ್ಯಾಂ ನಮಃ**

॥ ಅಥ ಅಂಗನ್ಯಾಸಃ ॥

ಅಂಗನ್ಯಾಸವು

ಓಂ ಶ್ರೀಂ ರಾಂ ದ್ರಾಂ ಹೃದಯಾಯ ನಮಃ

ಓಂ ಶ್ರೀಂ ರಾಂ ದ್ರಾಂ ಶಿರಸೇ ಸ್ವಾಹಾ

ಓಂ ಶ್ರೀಂ ರಾಂ ದ್ರಾಂ ನೇತ್ರತ್ರಯಾಯ ವೌಷಟ್

ಓಂ ಶ್ರೀಂ ರಾಂ ದ್ರಾಂ ಕವಚಾಯ ಹುಂ

ಓಂ ಶ್ರೀಂ ರಾಂ ದ್ರಾಂ ಶಿಖಾಯೈ ವಷಟ್

ಓಂ ಶ್ರೀಂ ರಾಂ ದ್ರಾಂ ಅಸ್ತ್ರಾಯ ಫಟ್

ಓಂ ಶ್ರೀ ರಾಮಚಂದ್ರಾಯ ಸ್ವಾಹಾ ಇತಿ ಮಂತ್ರೇಣ ದಿಗ್ಬಂಧಃ

ಓಂ ಶ್ರೀರಾಮಚಂದ್ರಾಯ ಸ್ವಾಹಾ ಎಂಬ ಮಂತ್ರದಿಂದ ದಿಗ್ಬಂಧವನ್ನು ಮಾಡಿಕೊಳ್ಳಬೇಕು.

॥ ಅಥ ಧ್ಯಾನಂ ॥

ಧ್ಯಾನವು

ಕದಾಚಿತ್ಕೌಶಿಕೋऽಭ್ಯಾಗಾದಯೋಧ್ಯಾಂ ಜ್ವಲನಪ್ರಭಃ । ದ್ರಷ್ಟುಂ ರಾಮಂ ಪರಾತ್ಮಾನಂ ಜಾತಂ ಜ್ಞಾತ್ವಾ ಸಮಾಯಯೌ ॥
ಏವಂ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

॥ ಇತಿ ಶ್ರೀ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ತೃತೀಯಸರ್ಗೇ ನ್ಯಾಸ ಧ್ಯಾನ ಜಪ ವಿಧಿಃ ॥

ಇಂತು ಬಾಲಕಾಂಡದ ಮೂರನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

ಅಂತೇ ಹೃದಯಾದಿನ್ಯಾಸಂ ಕೃತ್ವಾ ಶ್ರೀರಾಮಚಂದ್ರಾಯಸ್ವಾಹಾ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾನಶ್ಲೋಕಂ ಪಠೇತ್

ಸರ್ಗವು ಮುಗಿದ ಮೇಲೆ ಷಡಂಗನ್ಯಾಸವನ್ನು ಮಾಡಿಕೊಂಡು ಶ್ರೀರಾಮಚಂದ್ರಾಯ ಸ್ವಾಹಾ ಇತಿ ದಿಗ್ವಿಮೋಕಃ
ಎಂದು ಹೇಳಿ ಧ್ಯಾನ ಶ್ಲೋಕವನ್ನು ಹೇಳಬೇಕು.

॥ ಶ್ರೀರಸ್ತು ॥

ಅಥ ಶ್ರೀ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ಚತುರ್ಥಸ್ಸರ್ಗಃ

ಕದಾಚಿತ್ಕೌಶಿಕೋಭ್ಯಾಗಾದಯೋಧ್ಯಾಂ ಜ್ವಲನಪ್ರಭಃ । ದ್ರಷ್ಟುಂ ರಾಮಂ ಪರಾತ್ಮಾನಂ ಜಾತಂ ಜ್ಞಾತ್ವಾ ಸ್ವಮಾಯಯಾ ॥ ೧ ॥
ದೃಷ್ಟ್ವಾ ದಶರಥೋ ರಾಜಾ ಪ್ರತ್ಯುತ್ಥಾಯಾಚಿರೇಣ ತು । ವಸಿಷ್ಠೇನ ಸಮಾಗಮ್ಯ ಪೂಜಯಿತ್ವಾ ಯಥಾವಿಧಿ ॥ ೨ ॥

ಅಧ್ಯಾತ್ಮರಾಮಾಯಣದ ಬಾಲಕಾಂಡದಲ್ಲಿ ನಾಲ್ಕನೆಯ ಸರ್ಗವು

೧. ಅಗ್ನಿಗೆ ಸಮವಾದ ಶಕ್ತಿ ತೇಜಸ್ಸುಗಳುಳ್ಳ ವಿಶ್ವಾಮಿತ್ರನು ರಾಮನು ಅಯೋಧ್ಯೆಯಲ್ಲಿ ತನ್ನ ಮಾಯೆಯಿಂದ ಹುಟ್ಟಿರುವುದನ್ನು ತಿಳಿದು ಆ ಪರಮಾತ್ಮನನ್ನು ನೋಡಲು ಒಂದುಸಾರಿ ಅಯೋಧ್ಯೆಗೆ ಬಂದನು.

೨. ದಶರಥನು ಆ ವಿಶ್ವಾಮಿತ್ರನು ಬಂದುದನ್ನು ನೋಡಿ ಬೇಗನೆ ವಸಿಷ್ಠನೊಡನೆ ಆತನನ್ನು ಎದುರುಗೊಂಡು ಶಾಸ್ತ್ರದಲ್ಲಿ ಹೇಳಿರುವಂತೆ ಮಧುಪರ್ಕಾದಿಗಳನ್ನು ಕೊಟ್ಟು ಪೂಜಿಸಿದನು.

ಅಭಿವಾದ್ಯ ಮುನಿಂ ರಾಜಾ ಪ್ರಾಂಜಲಿರ್ಭಕ್ತಿನಮ್ರಧೀಃ । ಕೃತಾರ್ಥೋಽಸ್ಮಿ ಮುನೀಂದ್ರಾಹಂ ತ್ವದಾಗಮನಕಾರಣಾತ್ ॥ ೩ ॥
ತ್ವದ್ವಿಧಾ ಯದ್ಗೃಹಂ ಯಾಂತಿ ತತ್ರೈವಾಯಾಂತಿ ಸಂಪದಃ । ಯದರ್ಥಮಾಗತೋಽಸಿ ತ್ವಂ ಬ್ರೂಹಿ ಸತ್ಯಂ ಕರೋಮಿ ತತ್ ॥ ೪ ॥
ವಿಶ್ವಾಮಿತ್ರೋಽಪಿ ತಂ ಪ್ರೀತಃ ಪ್ರತ್ಯುವಾಚ ಮಹಾಮತಿಃ । ಅಹಂ ಪರ್ವಣಿ ಸಂಪ್ರಾಪ್ತೇ ದೃಷ್ಟ್ವಾ ಯಷ್ಟುಂ ಸುರಾನ್ ಪಿತೄನ್ ॥ ೫ ॥
ಯದಾರಭೇ ತದಾ ದೈತ್ಯಾ ವಿಘ್ನಂ ಕುರ್ವಂತಿ ನಿತ್ಯಶಃ । ಮಾರೀಚಶ್ಚ ಸುಬಾಹುಶ್ಚಾಪರೇ ಚಾನುಚರಾಸ್ತಯೋಃ ॥ ೬ ॥

---

೩. ಆ ದಶರಥನು ಮುನಿಯಾದ ವಿಶ್ವಾಮಿತ್ರನಿಗೆ ನಮಸ್ಕರಿಸಿ ನಮ್ರತನದಿಂದ ತಲೆಯನ್ನು ಬಗ್ಗಿಸಿಕೊಂಡು ಎಲೈ ಮುನೀಂದ್ರನೇ ! ನೀನು ಬಂದುದರಿಂದ ನಾನು ಕೃತಾರ್ಥನಾದೆನು.

೪. ಎಲೈ ಋಷಿಯೇ ! ನಿನ್ನಂತಹವರು ಯಾರ ಮನೆಗೆ ಹೋಗುತ್ತಾರೆಯೋ ಅಲ್ಲಿಗೆ ಸಂಪತ್ತುಗಳು ತಾವಾಗಿಯೇ ಬರುತ್ತವೆ. ನೀನೇತಕ್ಕೆ ಇಲ್ಲಿಗೆ ಬಂದಿದ್ದೀಯೆ ? ಎಂಬುದನ್ನು ಹೇಳು. ಅದನ್ನು ಒಡನೆಯೇ ಖಂಡಿತವಾಗಿಯೂ ಮಾಡಿಕೊಡುತ್ತೇನೆ ಎಂದನು.

೫–೬. ಆಗ ವಿಶ್ವಾಮಿತ್ರನು ಬಹು ಸಂತೋಷಗೊಂಡು ಆವನನ್ನು ಕುರಿತು ಇಂತೆಂದು ಹೇಳಿದನು. ಪರ್ವಕಾಲ ಬಂದಾಗ ನಾನು ದೇವತೆಗಳನ್ನೂ ಪಿತೃಗಳನ್ನೂ ಉದ್ದೇಶಿಸಿ ಯಾಗವನ್ನು ಮಾಡಲು ಮೊದಲು ಮಾಡಿದರೆ ಆಗ ದೈತ್ಯರು ಬಂದು ನಿತ್ಯವೂ ಅದಕ್ಕೆ ವಿಘ್ನವನ್ನು ಮಾಡುತ್ತಾರೆ. ಇವರುಗಳಲ್ಲಿ ಮಾರೀಚನೂ ಸುಬಾಹುವೂ ಮುಖ್ಯರು. ಉಳಿದವರು ಅವರನ್ನು ಅನುಸರಿಸಿಕೊಂಡು ಬರುತ್ತಾರೆ.

ಅತಸ್ತಯೋರ್ವಧಾರ್ಥಾಯ ಜ್ಯೇಷ್ಠಂ ರಾಮಂ ಪ್ರಯಚ್ಛ ಮೇ । ಲಕ್ಷ್ಮಣೇನ ಸಹ ಭ್ರಾತ್ರಾ ತವ ಶ್ರೇಯೋ ಭವಿಷ್ಯತಿ ॥ ೭ ॥

ವಸಿಷ್ಠೇನ ಸಹಾಮಂತ್ರ್ಯ ದೀಯತಾಂ ಯದಿ ರೋಚತೇ । ಪಪ್ರಚ್ಛ ಗುರುಮೇಕಾಂತೇ ರಾಜಾ ಚಿಂತಾಪರಾಯಣಃ ॥ ೮ ॥

ಕಿಂ ಕರೋಮಿ ಗುರೋ ರಾಮಂ ತ್ಯಕ್ತುಂ ನೋತ್ಸಹತೇ ಮನಃ । ಬಹುವರ್ಷಸಹಸ್ರಾಂತೇ ಕಷ್ಟೇನೋತ್ಪಾದಿತಾಃ ಸುತಾಃ ॥ ೯ ॥

ಚತ್ವಾರೋಽಮರತುಲ್ಯಾಸ್ತೇ ತೇಷಾಂ ರಾಮೋಽತಿವಲ್ಲಭಃ । ರಾಮಸ್ತ್ವಿತೋ ಗಚ್ಛತಿ ಚೇನ್ನ ಜೀವಾಮಿ ಕಥಂಚನ ॥ ೧೦ ॥

---

೭. ಆದ್ದರಿಂದ ಅವರನ್ನು ಕೊಲ್ಲುವುದಕ್ಕೆ ದೊಡ್ಡ ಮಗನಾದ ರಾಮನನ್ನು ನನ್ನೊಡನೆ ಕಳುಹಿಸಿಕೊಡು. ಲಕ್ಷ್ಮಣನೂ ಅವನ ಜೊತೆಯಲ್ಲಿ ಬರಲಿ. ಇದರಿಂದ ನಿನಗೆ ಶ್ರೇಯಸ್ಸುಂಟಾಗುತ್ತದೆ.

೮. ನೀನು ವಸಿಷ್ಠನೊಡನೆ ಆಲೋಚಿಸು. ನಿನಗೆ ಇಷ್ಟಬಂದರೆ ಕಳುಹಿಸು. ಎನ್ನಲು ರಾಜನು ಬಹುವಾದ ಚಿಂತೆಗೊಳಗಾಗಿ ಆ ಗುರುವನ್ನು ಗುಟ್ಟಾಗಿ ಕರೆದು ಇಂತೆಂದು ಕೇಳಿದನು.

೯. ಎಲೈ ಗುರುವೇ ! ಏನುಮಾಡಲಿ ? ನನ್ನ ಮನಸ್ಸು ರಾಮನನ್ನು ಬಿಟ್ಟಿರುವುದಕ್ಕೆ ರುಚಿಸುವುದಿಲ್ಲ. ಸಾವಿರಾರು ವರ್ಷಗಳು ಕಳೆದಮೇಲೆ ಬಹುವಾದ ಕಷ್ಟಗಳನ್ನು ಹೊಂದಿ ಈ ಮಕ್ಕಳನ್ನು ಪಡೆದಿರುವೆನು.

೧೦. ನನಗೆ ಇರುವ ನಾಲ್ವರು ಮಕ್ಕಳೂ ದೇವತೆಗಳಂತೆ ಇದ್ದಾರೆ ಅವರಲ್ಲಿ ರಾಮನನ್ನು ಕಂಡರೆ ನನಗೆ ಪ್ರೀತಿಯು ಬಹು ಹೆಚ್ಚಾಗಿದೆ. ರಾಮನು ನನ್ನನ್ನು ಬಿಟ್ಟು ಇಲ್ಲಿಂದ ಹೊರಟು ಹೋದರೆ ನಾನು ಯಾವ ರೀತಿಯಲ್ಲಿಯೂ ಬದುಕುವ ಹಾಗೆಯೇ ಇಲ್ಲ.

ಪ್ರತ್ಯಾಖ್ಯಾತೋ ಯದಿ ಮುನಿಃ ಶಾಪಂ ದಾಸ್ಯತ್ಯಸಂಶಯಃ । ಕಥಂ ಶ್ರೇಯೋ ಭವೇನ್ಮಹ್ಯಮುಸತ್ಯಂ ಚಾಪಿ ನ ಸ್ಪೃಶೇತ್॥ ೧೧ ॥

॥ ವಸಿಷ್ಠ ಉವಾಚ ॥

ಶೃಣು ರಾಜರ್ಷ ದೇವಗುಹ್ಯಂ ಗೋಪನೀಯಂ ಪ್ರಯತ್ನತಃ । ರಾಮೋ ನ ಮಾನುಷೋ ಜಾತಃ ಪರಮಾತ್ಮಾ ಸನಾತನಃ ॥ ೧೨ ॥

ಭೂಮೇರ್ಭಾರಾವತಾರಾಯ ಬ್ರಹ್ಮಣಾ ಪ್ರಾರ್ಥಿತಃ ಪುರಾ । ಸ ಏವ ಜಾತೋ ಭವನೇ ಕೌಸಲ್ಯಾಯಾಂ ತವಾನಘ ॥ ೧೩ ॥

---

೧೧. ಆ ಮುನಿಯಾದ ವಿಶ್ವಾಮಿತ್ರನ ಮಾತನ್ನು ತಿರಸ್ಕರಿಸಿದರೆ ಆವನು ಖಂಡಿತವಾಗಿಯೂ ಶಾಪವನ್ನು ಕೊಡುವನು. ಸಂಶಯವಿಲ್ಲ; ನನಗೆ ಒಳ್ಳೆಯದೂ ಆಗಬೇಕು. ಸುಳ್ಳನ್ನು ಹೇಳಿದ ದೋಷವೂ ಬರಬಾರದು ಇದಕ್ಕೇನು ಮಾಡಲಿ ?

೧೨. ವಸಿಷ್ಠನು ಹೇಳಿದನು-ಎಲೈ ರಾಜನೇ ! ಕೇಳು. ಇದರಲ್ಲಿ ದೇವತೆಗಳ ಗುಟ್ಟಿನ ಕೆಲಸವಿರುವುದು. ಅದನ್ನು ಸ್ವಲ್ಪವೂ ಹೊರ ಬೀಳದಂತೆ ಕಾಪಾಡಬೇಕು. ನಿನ್ನಲ್ಲಿ ಹುಟ್ಟಿರುವ ರಾಮನು ಮನುಷ್ಯನು ಎಂದು ತಿಳಿಯಬೇಡ. ಅವನು ಆ ಸನಾತನ ರೂಪಿಯಾದ ಪರಮಾತ್ಮನು.

೧೩. ಬ್ರಹ್ಮನು ಭೂಭಾರವನ್ನು ನಾಶಮಾಡಬೇಕೆಂಬುದಾಗಿ ಆ ಪರಮಾತ್ಮನನ್ನು ಪೂರ್ವದಲ್ಲಿ ಪ್ರಾರ್ಥಿಸಲು ಆ ಸ್ವಾಮಿಯೇ ನಿನ್ನ ಮನೆಯಲ್ಲಿ ಕೌಸಲ್ಯೆಯಲ್ಲಿ ಈ ರಾಮನೆಂಬುದಾಗಿ ಉದಿಸಿರುವನು.

ತ್ವಂ ತು ಪ್ರಜಾಪತಿಃ ಪೂರ್ವಂ ಕಶ್ಯಪೋ ಬ್ರಹ್ಮಣಸ್ಸುತಃ । ಕೌಸಲ್ಯಾ ಚಾದಿತಿರ್ದೇವಮಾತಾ ಪೂರ್ವಂ ಯಶಸ್ವಿನೀ ॥ ೧೪ ॥

ಭವಂತೌ ತಪ ಉಗ್ರಂ ವೈ ತೇಪಾಥೇ ಬಹುವತ್ಸರಂ । ಅಗ್ರಾಮ್ಯವಿಷಯೌ ವಿಷ್ಣುಪೂಜಾಧ್ಯಾನೈಕತತ್ಪರೌ ।
ತದಾ ಪ್ರಸನ್ನೋ ಭಗವಾನ್ ವರದೋ ಭಕ್ತವತ್ಸಲಃ ॥ ೧೫ ॥

ವೃಣೀಷ್ವ ವರಮಿತ್ಯುಕ್ತೇ ತ್ವಂ ಮೇ ಪುತ್ರೋ ಭವಾಮಲ । ಇತಿ ತ್ವಯಾ ಯಾಚಿತೋಽಸೌ ಭಗವಾನ್ ಭೂತಭಾವನಃ ॥ ೧೬ ॥

---

೧೪. ನೀನೂ ಕೂಡ ಪೂರ್ವಜನ್ಮದಲ್ಲಿ ಬ್ರಹ್ಮನ ಮಗನಾದ ಕಶ್ಯಪನಾಗಿದ್ದೆ. ಕೌಸಲ್ಯೆಯೂ ಕೂಡ ಪೂರ್ವಜನ್ಮದಲ್ಲಿ ದೇವತೆಗಳಿಗೆ ತಾಯಿಯೂ ಕೀರ್ತಿವಂತಳೂ ಆದ ಅದಿತಿಯು.

೧೫. ನೀವಿಬ್ಬರೂ ಕೂಡ ಉಗ್ರವಾದ ತಪಸ್ಸನ್ನು ಬಹು ವರ್ಷಗಳ ಕಾಲ ಮಾಡಿದಿರಿ. ಅಯೋಗ್ಯವಾದ ವಿಷಯಗಳಲ್ಲಿ ಮನಸ್ಸನ್ನು ಇಡದೆ ಅವನ್ನು ಬಿಟ್ಟು ಬಿಟ್ಟಿರಿ. ಆ ವಿಷ್ಣುವಿನ ಪೂಜೆ ಧ್ಯಾನ ಇವುಗಳಲ್ಲಿಯೇ ಆಸಕ್ತರಾಗಿದ್ದಿರಿ. ವರವನ್ನು ಕೊಡತಕ್ಕವನೂ ಭಕ್ತರಲ್ಲಿ ಪ್ರೀತಿಯುಳ್ಳವನೂ ಆದ ಆ ವಿಷ್ಣುವು ನಿನಗೆ ಆಗ ಪ್ರಸನ್ನನಾದನು.

೧೬. ಪ್ರಸನ್ನನಾದ ಆ ಸ್ವಾಮಿಯು ನೀನು ವರವನ್ನು ಕೇಳಿಕೋ ಎಂದು ನಿನಗೆ ಹೇಳಲು ಎಲೈ ಸ್ವಾಮಿಯೇ ! ನೀನು ನನ್ನ ಮಗನಾಗಿ ಹುಟ್ಟು. ಎಂಬುದಾಗಿ ಆ ಪರಮಾತ್ಮನನ್ನು ನೀನು ಕೇಳಿಕೊಂಡೆ.

ತಥೇತ್ಯುಕ್ತ್ವಾದ್ಯ ಪುತ್ರಸ್ತೇ ಜಾತೋ ರಾಮಸ್ಸ ಏವ ಹಿ । ಶೇಷಸ್ತು ಲಕ್ಷ್ಮಣೋ ರಾಜನ್ ರಾಮಮೇವಾನ್ವಪದ್ಯತ ॥ ೧೭ ॥

ಜಾತೌ ಭರತಶತ್ರುಘ್ನೌ ಶಂಖಚಕ್ರೇ ಗದಾಭೃತಃ । ಯೋಗಮಾಯಾಪಿ ಸೀತೇತಿ ಜಾತಾ ಜನಕನಂದಿನೀ ॥ ೧೮ ॥

ವಿಶ್ವಾಮಿತ್ರೋಽಪಿ ರಾಮಾಯ ತಾಂ ಯೋಜಯಿತುಮಾಗತಃ । ಏತದ್ಗುಹ್ಯತಮಂ ರಾಜನ್ನ ವಕ್ತವ್ಯಂ ಕದಾಚನ ॥ ೧೯ ॥

ಅತಃ ಪ್ರೀತೇನ ಮನಸಾ ಪೂಜಯಿತ್ವಾಥ ಕೌಶಿಕಂ । ಪ್ರೇಷಯಸ್ವ ರಮಾನಾಥಂ ರಾಘವಂ ಸಹ ಲಕ್ಷ್ಮಣಂ ॥ ೨೦ ॥

---

೧೭. ಆ ಸ್ವಾಮಿಯೇ ಹಾಗೆಯೇ ಆಗಲೆಂದು ಹೇಳಿ ನಿನಗೆ ಈಗ ಮಗನಾಗಿ ಹುಟ್ಟಿದನು. ಅವನೇ ಈಗ ರಾಮನಾಗಿರುವನು. ಆ ಸ್ವಾಮಿಯ ಹಾಸಿಗೆಯಾದ ಆದಿಶೇಷನೇ ಲಕ್ಷ್ಮಣನು. ಅವನು ರಾಮನನ್ನೇ ಅನುಸರಿಸುತ್ತಿರುವನು.

೧೮. ಆ ಸ್ವಾಮಿಯ ಶಂಖಚಕ್ರಗಳು ಭರತ ಶತ್ರುಘ್ನರಾಗಿ ಅವತರಿಸಿರುವುವು. ಯೋಗಮಾಯೆಯು ಸೀತೆಯೆಂಬ ಹೆಸರಿನಿಂದ ಜನಕನ ಮಗಳಾಗಿ ಹುಟ್ಟಿರುವಳು.

೧೯. ಈ ವಿಶ್ವಾಮಿತ್ರನು ಪರಮಾತ್ಮನ ಅವತಾರವಾದ ರಾಮನೊಡನೆ ಯೋಗಮಾಯೆಯಾದ ಸೀತೆಯನ್ನು ಸೇರಿಸಲು ಬಂದಿರುವನು. ಎಲೈ ರಾಜನೆ! ಇದೇ ಇದರಲ್ಲಿರುವ ಗುಟ್ಟಾದ ಸಮಾಚಾರವು. ಇದನ್ನು ಯಾರಸಂಗಡಲೂ ಹೇಳಬೇಡ.

೨೦. ಆದ್ದರಿಂದ ನೀನು ಸಂತೋಷದ ಮನಸ್ಸಿನಿಂದ ಆ ವಿಶ್ವಾಮಿತ್ರನನ್ನು ಪೂಜಿಸಿ ಅವನ ಇಷ್ಟಾರ್ಥವನ್ನು ನೆರವೇರಿಸಿ ಕಳುಹಿಸು. ಅವನ ಜೊತೆಯಲ್ಲಿ ರಮಾರಮಣನಾದ ರಾಮನನ್ನೂ ಲಕ್ಷ್ಮಣನನ್ನೂ ಕಳುಹಿಸು.

ವಸಿಷ್ಠೈನೈವಮುಕ್ತಸ್ತು ರಾಜಾ ದಶರಥಸ್ತದಾ । ಕೃತಕೃತ್ಯಮಿವಾತ್ಮಾನಂ ಮೇನೇ ಪ್ರಮುದಿತಾಂತರಃ ॥ ೨೧ ॥
ಆಹೂಯ ರಾಮ ರಾಮೇತಿ ಲಕ್ಷ್ಮಣೇತಿ ಚ ಸಾದರಂ । ಆಲಿಂಗ್ಯ ಮೂರ್ಧ್ನ್ಯವಘ್ರಾಯ ಕೌಶಿಕಾಯ ಸಮರ್ಪಯತ್ ॥ ೨೨ ॥
ತತೋತಿಹೃಷ್ಟೋ ಭಗವಾನ್ ವಿಶ್ವಾಮಿತ್ರಃ ಪ್ರತಾಪವಾನ್ । ಆಶೀರ್ಭಿರಭಿನಂದ್ಯಾಥ ಆಗತೌ ರಾಮಲಕ್ಷ್ಮಣೌ ॥ ೨೩ ॥
ಗೃಹೀತ್ವಾ ಚಾಪತೂಣೀರಬಾಣಖಡ್ಗಧರೌ ಯಯೌ । ಕಿಂಚಿದ್ದೇಶಮತಿಕ್ರಮ್ಯ ರಾಮಮಾಹೂಯ ಭಕ್ತಿತಃ ॥ ೨೪ ॥

---

೨೧. ವಸಿಷ್ಠನು ಹೀಗೆಂದು ಉಪದೇಶಿಸಲು ಆ ರಾಜನಾದ ದಶರಥನು ಮನಸ್ಸಿನಲ್ಲಿ ಬಹು ಸಂತೋಷಪಟ್ಟುಕೊಂಡು ತಾನು ಕೃತಕೃತ್ಯನೆಂದು ತಿಳಿದುಕೊಂಡನು.

೨೨. ಆಗ ರಾಜನು ರಾಮ ರಾಮ ಲಕ್ಷ್ಮಣ ಲಕ್ಷ್ಮಣ ಎಂಬುದಾಗಿ ಪ್ರೀತಿಯಿಂದ ಅವರನ್ನು ತನ್ನ ಬಳಿಗೆ ಕರೆದನು. ಅವರು ಬರಲು ಅವರನ್ನು ಆಲಿಂಗಿಸಿಕೊಂಡು ತಲೆಯನ್ನು ಪುತ್ರವಾತ್ಸಲ್ಯದಿಂದ ಮೂಸಿನೋಡಿ ಅವರನ್ನು ವಿಶ್ವಾಮಿತ್ರನಿಗೆ ಒಪ್ಪಿಸಿದನು.

೨೩. ಆಗ ಆ ಪ್ರತಾಪಶಾಲಿಯಾದ ವಿಶ್ವಾಮಿತ್ರನು ಬಹುವಾಗಿ ಸಂತೋಷಪಟ್ಟನು. ತನ್ನ ಬಳಿಗೆ ಬಂದ ಆ ರಾಮಲಕ್ಷ್ಮಣರನ್ನು ಆಶೀರ್ವಾದಮಾಡಿ ಸಂತೋಷಪಡಿಸಿದನು.

೨೪. ಧನುರ್ಬಾಣಗಳನ್ನೂ ಕತ್ತಿ ಬತ್ತಳಿಕೆಗಳನ್ನೂ ಧರಿಸಿರುವ ಆ ರಾಮಲಕ್ಷ್ಮಣರನ್ನು ಕರೆದುಕೊಂಡು ಸ್ವಲ್ಪದೂರದವರೆಗೆ ಹೋಗಿ ವಿಶ್ವಾಮಿತ್ರನು ರಾಮನನ್ನು ಭಕ್ತಿಯಿಂದ ಹತ್ತಿರಕ್ಕೆ ಕರೆದನು.

ದದೌ ಬಲಾಂ ಚಾತಿಬಲಾಂ ವಿದ್ಯೇ ದ್ವೇ ದೇವನಿರ್ಮಿತೇ । ಯಯೋರ್ಗ್ರಹಣಮಾತ್ರೇಣ ಕ್ಷುತ್ ತೃಷಾಪಿ ನ ಜಾಯತೇ॥ ೨೫ ||

ತತ ಉತ್ತೀರ್ಯ ಗಂಗಾಂ ತೇ ತಾಟಕಾವನಮಾಗಮನ್ । ವಿಶ್ವಾಮಿತ್ರಸ್ತದಾ ಪ್ರಾಹ ರಾಮಂ ಸತ್ಯಪರಾಕ್ರಮಂ || ೨೬ ||

ಅತ್ರಾಸ್ತಿ ತಾಟಕಾ ನಾಮ ರಾಕ್ಷಸೀ ಕಾಮರೂಪಿಣೀ । ಬಾಧತೇ ಲೋಕಮಖಿಲಂ ಜಹಿ ತಾಮವಿಚಾರಯನ್ || ೨೭ ||

---

೨೫. ಹತ್ತಿರಕ್ಕೆ ಕರೆದು ದೇವತೆಗಳಿಂದ ನಿರ್ಮಿತವಾದ ಬಲ, ಅತಿಬಲ ಎರಡು ವಿದ್ಯೆಗಳನ್ನು ಅವನಿಗೆ ಕೊಟ್ಟನು (ಉಪದೇಶ ಮಾಡಿದನು) ಈ ವಿದ್ಯೆಗಳನ್ನು ಕಲಿತಿರುವವನಿಗೆ ಹಸಿವು ಬಾಯಾರಿಕೆ ಶ್ರಮಗಳೊಂದೂ ಉಂಟಾಗುವುದಿಲ್ಲ.

೨೬. ವಿಶ್ವಾಮಿತ್ರನು ಅಲ್ಲಿಂದ ಮುಂದೆ ಹೋಗಲು ಗಂಗಾನದಿಯು ಸಿಕ್ಕಿತು. ಆ ನದಿಯನ್ನು ದಾಟಿ ರಾಮಲಕ್ಷ್ಮಣರೊಡನೆ ಮುಂದೆ ಹೋಗಲು ತಾಟಕಾವನವೆಂಬ ವನವು ಸಿಕ್ಕಿತು. ಆಗ ವಿಶ್ವಾಮಿತ್ರನು ಸತ್ಯಪರಾಕ್ರಮನಾದ ರಾಮನನ್ನು ಕುರಿತು ಇಂತೆಂದನು.

೨೭. ಎಲೈ ರಾಮನೆ! ಇಲ್ಲಿ ಇಚ್ಛೆಬಂದಹಾಗೆ ರೂಪಗಳನ್ನು ಹೊಂದಬಲ್ಲ ತಾಟಕೆಯೆಂಬ ರಾಕ್ಷಸಿ ಇರುವಳು. ಪ್ರಪಂಚವೆಲ್ಲವನ್ನೂ, ತೊಂದರೆಪಡಿಸುತ್ತಿದ್ದಾಳೆ. ನೀನು ಸ್ವಲ್ಪವೂ ಹಿಂಜರಿಯದೆ ಯೋಚಿಸದೆ ಯಾವ ವಿಚಾರವನ್ನೂ ಮನಸ್ಸಿಗೆ ತೆಗೆದುಕೊಳ್ಳದೆ ಅವಳನ್ನು ಕೊಂದುಹಾಕು.

ತಥೇತಿ ಧನುರಾದಾಯ ಸಗುಣಂ ರಘುನಂದನಃ । ಟಂಕಾರಮಕರೋತ್ತೇನ ಶಬ್ದೇನಾಪೂರಯದ್ವನಂ ॥ ೨೮ ॥

ತಚ್ಛ್ರುತ್ವಾಸಹಮಾನಾಸಾ ತಾಟಕಾ ಘೋರರೂಪಿಣೀ । ಕ್ರೋಧಸಂಮೂರ್ಛಿತಾ ರಾಮಮಭಿದುದ್ರಾವ ಮೇಘವತ್ ॥ ೨೯ ॥

ತಾಮೇಕೇನ ಶರೇಣಾಶು ತಾಡಯಾಮಾಸ ವಕ್ಷಸಿ । ಪಿಪಾತ ವಿಪಿನೇ ಘೋರಾ ವಮಂತೀ ರುಧಿರಂ ಬಹು ॥ ೩೦ ॥

---

೨೮. ಅದನ್ನು ಕೇಳಿದ ರಾಮನು ಹಾಗೆಯೇ ಆಗಲಿ. ಎಂದು ಧನುಸ್ಸನ್ನು ತೆಗೆದು ಅದಕ್ಕೆ ಬೀವನ್ನು ಏರಿಸಿದನು. ಒಡನೆಯೆ ಠಣ ಎಂದೆನ್ನುವಂತೆ ಆ ಬೀವನ್ನು ಶಬ್ದಮಾಡಿದನು. ಆ ಶಬ್ದವು ಆ ವನವನ್ನೆಲ್ಲಾ ಆವರಿಸಿ ತುಂಬಿಕೊಂಡಿತು.

೨೯. ತಾಟಕೆಯು ಆ ಶಬ್ದವನ್ನು ಕೇಳಿ ಸಹಿಸಲಾರದೆ ಕೋಪಗೊಂಡು ಘೋರವಾದ ಆಕಾರವನ್ನು ಹೊಂದಿ ರಾಮನಮೇಲೆ ಬೀಳಲು ಮೇಘದಂತೆ ಬಂದಳು.

೩೦. ಒಡನೆಯೇ ರಾಮನು ಒಂದು ಬಾಣವನ್ನು ಎದೆಗೆ ಗುರಿಕಟ್ಟಿ ಬಿಟ್ಟನು. ಆಗ ಆಕೆಯು ರಕ್ತವನ್ನು ಕಾರುತ್ತ ಘೋರವಾದ ಆಕಾರವನ್ನು ಹೊಂದಿ ಆ ಕಾಡಿನಲ್ಲಿಯೇ ಬಿದ್ದು ಬಿಟ್ಟಳು.

ತತೋತಿಸುಂದರೀ ಯಕ್ಷೀ ಸರ್ವಾಭರಣಭೂಷಿತಾ । ಶಾಪಾತ್ಪಿಶಾಚತಾಂ ಪ್ರಾಪ್ತಾ ಮುಕ್ತಾ ರಾಮಪ್ರಸಾದತಃ
ನತ್ವಾ ರಾಮಂ ಪರಿಕ್ರಮ್ಯ ಗತಾ ರಾಮಾಜ್ಞಯಾ ದಿವಂ ॥ ೩೧ ॥

ತತೋತಿಹೃಷ್ಟಃ ಪರಿರಭ್ಯ ರಾಮಂ । ಮೂರ್ಧನ್ಯವಘ್ರಾಯ ವಿಚಿಂತ್ಯ ಕಿಂಚಿತ್ ।
ಸರ್ವಾಸ್ತ್ರಜಾಲಂ ಸರಹಸ್ಯಮಂತ್ರಂ । ಪ್ರೀತ್ಯಾಭಿರಾಮಾಯ ದದೌ ಮುನೀಂದ್ರಃ ॥ ೩೨ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಬಾಲಕಾಂಡೇ ಉಮಾಮಹೇಶ್ವರ ಸಂವಾದೇ
ಚತುರ್ಥಸ್ಸರ್ಗಃ

---

೩೧. ಒಡನೆಯೇ ಅವಳು ಯಕ್ಷಿಣಿಯ ಆಕಾರವನ್ನು ಹೊಂದಿ ಎಲ್ಲಾ ಆಭರಣಗಳನ್ನೂ ತೊಟ್ಟುಕೊಂಡು ಕಣ್ಣಿಗೆ ಕಾಣಿಸಿಕೊಂಡಳು. ಆ ಯಕ್ಷಿಣಿಯು ಶಾಪದಿಂದ ಈ ತಾಟಕೆಯೆಂಬ ಪಿಶಾಚಜನ್ಮವನ್ನು ಹೊಂದಿದ್ದಳು. ಈಗ ಆ ಜನ್ಮವನ್ನು ರಾಮನ ಅನುಗ್ರಹದಿಂದ ಕಳೆದು ಕೊಂಡು ಹಿಂದಿನ ಯಕ್ಷಿಣಿಯಾದಳು. ಅನಂತರ ಆಕೆಯು ರಾಮನಿಗೆ ನಮಸ್ಕರಿಸಿ ಆ ರಾಮನ ಅಪ್ಪಣೆಯನ್ನು ಪಡೆದು ಸ್ವರ್ಗಕ್ಕೆ ಹೊರಟು ಹೋದಳು.

೩೨. ಇದನ್ನು ನೋಡಿ ವಿಶ್ವಾಮಿತ್ರನು ರಾಮನನ್ನು ಸಂತೋಷದಿಂದ ಆಲಿಂಗಿಸಿಕೊಂಡು ತಲೆಯನ್ನು ಮೂಸಿನೋಡಿ ಕೊಂಚ ಹೊತ್ತು ಏನನ್ನೋ ಆಲೋಚಿಸಿ ಅನಂತರ ಎಲ್ಲ ಅಸ್ತ್ರಗಳನ್ನೂ ಅವುಗಳ ಪ್ರಯೋಗ ಉಪಸಂಹಾರಗಳನ್ನೂ ರಹಸ್ಯಗಳನ್ನೂ ಆ ರಾಮನಿಗೆ ಹೇಳಿಕೊಟ್ಟನು.

ಇಂತು ಶ್ರೀಮದಧ್ಯಾತ್ಮರಾಮಾಯಣದ ಬಾಲಕಾಂಡದಲ್ಲಿ ಉಮಾಮಹೇಶ್ವರಸಂವಾದದಲ್ಲಿ
ನಾಲ್ಕನೆಯ ಸರ್ಗವು.

॥ ಶ್ರೀರಸ್ತು ॥

ಅಥ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ಪಂಚಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪ ಕ್ರಮಃ

ಅಧ್ಯಾತ್ಮರಾಮಾಯಣದ ಬಾಲಕಾಂಡದ ಐದನೆಯ ಸರ್ಗದಲ್ಲಿ ಮಾಡಬೇಕಾದ ಸಂಕಲ್ಪ ನ್ಯಾಸ ಧ್ಯಾನ ಜಪಗಳ ಕ್ರಮವು

ಪೂರ್ವೋಕ್ತವಿಧಿನಾ ಬಾಲಕಾಂಡೇ ಪಂಚಮಸರ್ಗೇ ನ್ಯಾಸಧ್ಯಾನಜಪಮಹಂ ಕರಿಷ್ಯೇ ಇತಿಸಂಕಲ್ಪ್ಯ ॥

ಹಿಂದೆ ಹೇಳಿದ ವಿಧಿಯಂತೆ ಬಾಲಕಾಂಡದ ಐದನೆಯ ಸರ್ಗದಲ್ಲಿ ನ್ಯಾಸ, ಧ್ಯಾನ, ಜಪಗಳನ್ನು ಮಾಡುತ್ತೇನೆ ಎಂಬುದಾಗಿ ಸಂಕಲ್ಪವನ್ನು ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ಶ್ರೀಂ ರಾಂ ಯಂ ಅಂಗುಷ್ಠಾಭ್ಯಾಂ ನಮಃ
ಓಂ ಶ್ರೀಂ ರಾಂ ಯಂ ತರ್ಜನೀಭ್ಯಾಂ ನಮಃ
ಓಂ ಶ್ರೀಂ ರಾಂ ಯಂ ಮಧ್ಯಮಾಭ್ಯಾಂ ನಮಃ
ಓಂ ಶ್ರೀಂ ರಾಂ ಯಂ ಅನಾಮಿಕಾಭ್ಯಾಂ ನಮಃ
ಓಂ ಶ್ರೀಂ ರಾಂ ಯಂ ಕನಿಷ್ಠಿಕಾಭ್ಯಾಂ ನಮಃ
ಓಂ ಶ್ರೀಂ ರಾಂ ಯಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಹೃದಯಾದಿನ್ಯಾಸಃ ॥

ಹೃದಯಾದಿನ್ಯಾಸವು

ಓಂ ಶ್ರೀಂ ರಾಂ ಯಂ ಹೃದಯಾಯ ನಮಃ
ಓಂ ಶ್ರೀಂ ರಾಂ ಯಂ ಕವಚಾಯ ಹುಂ

ಓಂ ಶ್ರೀಂ ರಾಂ ಯಂ ಶಿರಸೇ ಸ್ವಾಹಾ
ಓಂ ಶ್ರೀಂ ರಾಂ ಯಂ ನೇತ್ರತ್ರಯಾಯ ವೌಷಟ್

ಓಂ ಶ್ರೀಂ ರಾಂ ಯಂ ಶಿಖಾಯೈ ವಷಟ್
ಓಂ ಶ್ರೀಂ ರಾಂ ಯಂ ಅಸ್ತ್ರಾಯ ಫಟ್

ಓಂ ಶ್ರೀ ರಾಮಚಂದ್ರಾಯ ಸ್ವಾಹಾ ಇತಿ ದಿಗ್ಬಂಧಃ

ಓಂ ಶ್ರೀರಾಮಚಂದ್ರಾಯ ಸ್ವಾಹಾ ಎಂದು ದಿಗ್ಬಂಧವನ್ನು ಮಾಡಿಕೊಳ್ಳಬೇಕು.

॥ ಅಥ ಧ್ಯಾನಂ ॥

ಧ್ಯಾನವು

ತತ್ರಕಾಮಾಶ್ರಮೇ ರಮ್ಯೇ ಕಾನನೇ ಮುನಿಸಂಕುಲೇ । ಉಷಿತ್ವಾ ರಜನೀಮೇಕಾಂ ಪ್ರಭಾತೇ ಪ್ರಸ್ಥಿತಾಃ ಶನೈಃ ॥
ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಪಾರಾಯಣಾಂತೇ ಹೃದಯಾದಿನ್ಯಾಸಂ ಕೃತ್ವಾ ಶ್ರೀರಾಮಚಂದ್ರಾಯಸ್ವಾಹಾ ಇತಿದಿಗ್ವಿಮೋಕಃ
ಇತ್ಯುಕ್ತ್ವಾ ಧ್ಯಾನಶ್ಲೋಕಂ ಪಠೇತ್

ಸರ್ಗವು ಮುಗಿದ ಮೇಲೆ ಷಡಂಗನ್ಯಾಸವನ್ನು ಮಾಡಿಕೊಂಡು ಶ್ರೀರಾಮಚಂದ್ರಾಯ ಸ್ವಾಹಾ ಇತಿ ದಿಗ್ವಿಮೋಕಃ
ಎಂದು ಹೇಳಿ ಧ್ಯಾನ ಶ್ಲೋಕವನ್ನು ಹೇಳಬೇಕು.

॥ ಇತಿ ಶ್ರೀ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ಪಂಚಮಸರ್ಗೇ ನ್ಯಾಸ ಧ್ಯಾನ ಜಪ ವಿಧಿಃ ॥

ಇಂತು ಬಾಲಕಾಂಡದ ಮೂರನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಅಥ ಶ್ರೀ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ಪಂಚಮಸ್ಸರ್ಗಃ

ತತ್ರ ಕಾಮಾಶ್ರಮೇ ರಮ್ಯೇ ಕಾನನೇ ಮುನಿಸಂಕುಲೇ । ಉಷಿತ್ವಾ ರಜನೀಮೇಕಾಂ ಪ್ರಭಾತೇಪ್ರಸ್ಥಿತಾಃ ಶನೈಃ ॥ ೧ ॥

ಸಿದ್ಧಾಶ್ರಮಂ ಗತಾಸ್ಸರ್ವೇ ಸಿದ್ಧಚಾರಣಸೇವಿತಂ । ವಿಶ್ವಾಮಿತ್ರೇಣ ಸಂದಿಷ್ಟಾ ಮುನಯಸ್ತನ್ನಿವಾಸಿನಃ ॥ ೨ ॥

ಪೂಜಾಂ ಚ ಮಹತೀಂ ಚಕ್ರೂ ರಾಮಲಕ್ಷ್ಮಣಯೋರ್ದ್ರುತಂ । ಶ್ರೀರಾಮಃ ಕೌಶಿಕಂ ಪ್ರಾಹ ಮುನೇ ದೀಕ್ಷಾಂ ಪ್ರವಿಶ್ಯತಾಂ ॥ ೩ ॥

ಅಧ್ಯಾತ್ಮರಾಮಾಯಣದ ಬಾಲಕಾಂಡದಲ್ಲಿ ಐದನೆಯ ಸರ್ಗವು

೧. ವಿಶ್ವಾಮಿತ್ರನೊಡನೆ ರಾಮಲಕ್ಷ್ಮಣರು ಮುಂದೆ ಹೊರಟು ಕಾಮಾಶ್ರಮವೆಂಬ ಆಶ್ರಮಕ್ಕೆ ಹೋದರು. ಅದು ಮನೋಹರವಾಗಿದ್ದಿತು. ಅಲ್ಲಿ ಬಹು ಜನ ಋಷಿಗಳಿದ್ದರು. ಅಲ್ಲಿ ಒಂದುರಾತ್ರಿಯಿದ್ದು ಬೆಳಗಾಗುತ್ತಲೂ ಮೆಲ್ಲಗೆ ಮುಂದಕ್ಕೆ ಹೊರಟರು.

೨-೩. ಅಲ್ಲಿಂದ ಮುಂದೆ ಹೋಗಲು ಸಿದ್ಧಾಶ್ರಮವೆಂಬ ಆಶ್ರಮವು ಸಿಕ್ಕಿತು. ಅಲ್ಲಿ ಸಿದ್ಧರೂ ಚಾರಣರೂ ಬಹುವಾಗಿದ್ದರು. ಇದೇ ವಿಶ್ವಾಮಿತ್ರನ ಆಶ್ರಮವು. ಅಲ್ಲಿರತಕ್ಕ ಋಷಿಗಳಿಗೆಲ್ಲಾ ವಿಶ್ವಾಮಿತ್ರನು ರಾಮಲಕ್ಷ್ಮರನ್ನು ಪೂಜಿಸುವಂತೆ ಹೇಳಲು ಅವರು ಅದೇ ರೀತಿಯಾಗಿ ಪೂಜಿಸಿದರು. ಆಗ ಶ್ರೀರಾಮನು ಕೌಶಿಕನನ್ನು ಕುರಿತು ಎಲೈ ಋಷಿಯೆ! ದೀಕ್ಷೆಯನ್ನು ಹೊಂದಿ ಯಾಗವನ್ನು ಮಾಡು ಎಂದನು.

ದರ್ಶಯಸ್ವ ಮಹಾಭಾಗ ಕುತಸ್ತೌ ರಾಕ್ಷಸಾಧಮೌ । ತಥೇತ್ಯುಕ್ತೋ ಮುನಿರ್ಯಷ್ಟುಮಾರೇಭೇ ಮುನಿಭಿಸ್ಸಹ ॥ ೪ ॥
ಮಧ್ಯಾಹ್ನೇ ದದೃಶಾತೇ ತೌ ರಾಕ್ಷಸೌ ಕಾಮರೂಪಿಣೌ । ಮಾರೀಚಶ್ಚ ಸುಬಾಹುಶ್ಚ ವರ್ಷಂತೌ ರುಧಿರಾಸ್ಥಿನೀ ॥ ೫ ॥
ರಾಮೋಽಪಿ ಧನುರಾದಾಯ ದ್ವೌ ಬಾಣೌ ಸಂದಧೇ ಸುಧೀಃ । ಆಕರ್ಣಾಂತಂ ಸಮಾಕೃಷ್ಯ ವಿಸಸರ್ಜ ತಯೋಃ ಪೃಥಕ್ ॥ ೬ ॥

---

೪. ಆ ಸುಬಾಹು ಮಾರೀಚರು ಬರಲಿ. ಅವರನ್ನು ತೋರಿಸು, ಅವರು ಎಲ್ಲಿದ್ದಾರೆ, ಅವರನ್ನು ನಿಗ್ರಹಿಸುತ್ತೇನೆ. ಎಂಬುದಾಗಿ ರಾಮನು ಹೇಳಿದನು. ವಿಶ್ವಾಮಿತ್ರನು ಹಾಗೆಯೇ ಆಗಲೆಂದು ಉಳಿದ ಋಷಿಗಳನ್ನು ಕರೆದುಕೊಂಡು ಅವರ ಜೊತೆಯಲ್ಲಿ ಯಾಗಮಾಡಲು ಮೊದಲು ಮಾಡಿದನು.

೫. ಮಧ್ಯಾಹ್ನದ ವೇಳೆಯು ಬರಲು ಕಾಮರೂಪಿಗಳಾದ ರಾಕ್ಷಸ ಶ್ರೇಷ್ಠರಾದ ಆ ಸುಬಾಹು ಮಾರೀಚರು ಬಹುವಾಗಿ ರಕ್ತವನ್ನು ಸುರಿಸುತ್ತ ಮೂಳೆಯನ್ನು ಎಸೆಯುತ್ತ ಅಲ್ಲಿ ಕಾಣಿಸಿಕೊಂಡರು.

೬. ಆಗ ರಾಮನು ಎರಡು ಬಾಣಗಳನ್ನು ತೆಗೆದುಕೊಂಡು ಬುದ್ಧಿವಂತಿಕೆಯಿಂದ ಧನುಸ್ಸಿನಲ್ಲಿ ಸೇರಿಸಿ ಕಿವಿಯವರೆಗೂ ಎಳೆದು ಅವರಿಬ್ಬರಿಗೂ ಬೇರೆ ಬೇರೆಯಾಗಿ ತಗಲುವಂತೆ ಬಿಟ್ಟನು.

ತಯೋರೇಕಸ್ತು ಮಾರೀಚಂ ಭ್ರಾಮಯನ್ ಶತಯೋಜನಂ । ಪಾತಯಾಮಾಸ ಜಲಧೌ ತದದ್ಭುತಮಿವಾಭವತ್ ॥ ೭ ॥

ದ್ವಿತೀಯೋಗ್ನಿಮಯೋ ಬಾಣಃ ಸುಬಾಹುಮಜಯತ್ ಕ್ಷಣಾತ್ । ಅಪರೇ ಲಕ್ಷ್ಮಣೇನಾಶು ಹತಾಸ್ತದನುಯಾಯಿನಃ ॥ ೮ ॥

ಪುಷ್ಪೈಃ ಪುಷ್ಪೈರಾಕಿರನ್ ದೇವಾ ರಾಘವಂ ಸಹಲಕ್ಷ್ಮಣಂ । ದೇವದುಂದುಭಯೋನೇದುಸ್ತುಷ್ಟುವುಸ್ಸಿದ್ಧಚಾರಣಾಃ ॥ ೯ ॥

ವಿಶ್ವಾಮಿತ್ರಸ್ತು ಸಂಪೂಜ್ಯ ಪೂಜಾರ್ಹಂ ರಘುನಂದನಂ । ಅಂಕೇ ನಿವೇಶ್ಯ ಚಾಲಿಂಗ್ಯ ಭಕ್ತ್ಯಾ ಬಾಷ್ಪಾಕುಲೇಕ್ಷಣಃ ॥ ೧೦ ॥

---

೭. ಅವುಗಳಲ್ಲೊಂದು ಬಾಣವು ಮಾರೀಚನಿಗೆ ತಗುಲಿ ಸುತ್ತಿಸುತ್ತ ಅವನನ್ನು ನೂರು ಯೋಜನಗಳ ಆಚೆ ಸಮುದ್ರದಲ್ಲಿ ಕೆಡಗಿತು. ಅದು ಬಹಳ ಅದ್ಭುತವಾದುದಾಗಿದ್ದಿತು.

೮. ಮತ್ತೊಂದು ಬಾಣವು ಆಗ್ನೇಯಾಸ್ತ್ರವು. ಅದು ಸುಬಾಹುವನ್ನು ಹೊಂದಿ ನಾಶಮಾಡಿತು. ಉಳಿದ ಅವರ ಅನುಯಾಯಿಗಳಾದ ರಾಕ್ಷಸರನ್ನು ಲಕ್ಷ್ಮಣನು ನಾಶಮಾಡಿದನು.

೯. ಇದನ್ನು ನೋಡಿ ದೇವತೆಗಳು ಅಂತರಿಕ್ಷದಿಂದ ಆ ರಾಮಲಕ್ಷ್ಮಣರಮೇಲೆ ಹೂಮಳೆಯನ್ನು ಕರೆದರು. ದೇವದುಂದುಭಿಗಳು ಮೊಳಗಿದುವು. ಸಿದ್ಧರೂ ಚಾರಣರೂ ಆ ರಾಮಲಕ್ಷ್ಮಣರನ್ನು ಹೊಗಳಿದರು.

೧೦. ಗೌರವಾರ್ಹನಾದ ಆ ರಾಮನನ್ನು ವಿಶ್ವಾಮಿತ್ರನು ಪೂಜಿಸಿ ಗೌರವಿಸಿ ತೊಡೆಯಮೇಲೆ ಕೂರಿಸಿಕೊಂಡು ಭಕ್ತಿಯಿಂದ ಆಲಿಂಗನಮಾಡಿಕೊಳ್ಳುತ್ತಾ ಆನಂದಬಾಷ್ಪವನ್ನು ಸುರಿಸಿದನು.

ಭೋಜಯಿತ್ವಾ ಸಹ ಭ್ರಾತ್ರಾ ರಾಮಂ ಪಕ್ವಫಲಾದಿಭಿಃ । ಪುರಾಣವಾಕ್ಯೈರ್ಮಧುರೈರ್ನಿನಾಯ ದಿವಸತ್ರಯಂ ॥ ೧೧ ॥
ಚತುರ್ಥೇಽಹನಿ ಸಂಪ್ರಾಪ್ತೇ ಕೌಶಿಕೋ ರಾಮಮಬ್ರವೀತ್ । ರಾಮ ರಾಮ ಮಹಾಯಜ್ಞಂ ದ್ರಷ್ಟುಂ ಗಚ್ಛಾಮಹೇ ವಯಂ॥ ೧೨ ॥
ವಿದೇಹರಾಜನಗರೇ ಜನಕಸ್ಯ ಮಹಾತ್ಮನಃ । ತತ್ರ ಮಾಹೇಶ್ವರಂ ಚಾಪಮಸ್ತಿ ನ್ಯಸ್ತಂ ಪಿನಾಕಿನಾ ॥ ೧೩ ॥
ದ್ರಕ್ಷ್ಯಸಿ ತ್ವಂ ಮಹಾಸತ್ವಂ ಪೂಜ್ಯಸೇ ಜನಕೇನ ಚ । ಇತ್ಯುಕ್ತ್ವಾ ಮುನಿಭಿಸ್ತಾಭ್ಯಾಂ ಯಯೌ ಗಂಗಾಸಮೀಪಗಂ ॥ ೧೪ ॥

---

೧೧. ಒಳ್ಳೆಯ ಹಣ್ಣು ಮುಂತಾದುವುಗಳನ್ನು ಕೊಟ್ಟು ಒಳ್ಳೆಯ ಭೋಜನವನ್ನು ಆ ರಾಮಲಕ್ಷ್ಮಣರಿಗೆ ಮಾಡಿಸಿದನು. ಅನೇಕ ಬಗೆಯಾದ ಪುರಾಣದ ವಿಷಯಗಳನ್ನು ಹೇಳುತ್ತ ಮೂರುದಿವಸಗಳು ಆ ಆಶ್ರಮದಲ್ಲಿಟ್ಟುಕೊಂಡಿದ್ದನು.

೧೨. ನಾಲ್ಕನೆಯದಿನ ವಿಶ್ವಾಮಿತ್ರನು ರಾಮನನ್ನು ಕುರಿತು ಇಂತೆಂದನು. ಎಲೈ ರಾಮನೆ! ಒಂದು ಮಹಾ ಯಾಗವು ನಡೆಯುತ್ತದೆ. ಅದನ್ನು ನೋಡಲು ನಾವೂ ಹೋಗೋಣ ಬಾ.

೧೩. ವಿದೇಹವೆಂಬ ಒಂದು ರಾಜಧಾನಿಯಿರುವುದು. ಅದನ್ನು ಜನಕನು ಆಳುತ್ತಿರುವನು. ಅಲ್ಲಿಯೇ ಈ ಮಹಾ ಯಜ್ಞವು ನಡೆಯುವುದು. ಅಲ್ಲಿ ಮಹೇಶ್ವರನು ಹಿಡಿದಿದ್ದ ಒಂದು ಬಿಲ್ಲು ಇರುವುದು. ಆ ಪಿನಾಕಿಯೇ ಅದನ್ನು ಅಲ್ಲಿಟ್ಟಿರುವನು.

೧೪. ಆ ಧನುಸ್ಸು ಬಹು ಭಾರವೂ ಬಲವುಳ್ಳದ್ದೂ ಆಗಿರುವುದು. ಅದನ್ನು ನೋಡುತ್ತೀಯಂತೆ. ಜನಕನೂ ನಿನ್ನನ್ನು ಗೌರವಿಸುವನು. ಎಂದು ಹೇಳಿ ಅವರಿಬ್ಬರನ್ನೂ ಇನ್ನೂ ಅನೇಕ ಜನ ಮುನಿಗಳನ್ನೂ ಕರೆದುಕೊಂಡು ಗಂಗೆಯ ಸಮೀಪಕ್ಕೆ ಹೋದನು.

ಗೌತಮಸ್ಯಾಶ್ರಮಂ ಪುಣ್ಯಂ ಯತ್ರಾಹಲ್ಯಾಸ್ಥಿತಾ ತಪಃ । ದಿವ್ಯಪುಷ್ಪಫಲೋಪೇತಪಾದಪೈಃ ಪರಿವೇಷ್ಟಿತಂ ॥ ೧೫ ॥

ಮೃಗಪಕ್ಷಿಗಣೈರ್ಹೀನಂ ನಾನಾಜಂತುವಿವರ್ಜಿತಂ । ದೃಷ್ಟ್ವೋವಾಚ ಮುನಿಂ ಶ್ರೀಮಾನ್ ರಾಮೋ ರಾಜೀವಲೋಚನಃ ॥ ೧೬ ॥

ಕಸ್ಯೈತದಾಶ್ರಮಪದಂ ಭಾತಿ ಭಾಸ್ವಚ್ಛುಭಂ ಮಹತ್ । ಪತ್ರಪುಷ್ಪಫಲೈರ್ಯುಕ್ತಂ ಜಂತುಭಿಃ ಪರಿವರ್ಜಿತಂ ॥ ೧೭ ॥

ಆಹ್ಲಾದಯತಿ ಮೇ ಚೇತೋ ಭಗವನ್ ಬ್ರೂಹಿ ತತ್ವತಃ ॥ ೧೮ ॥

---

೧೫. ಅಲ್ಲಿ ಗೌತಮ ಋಷಿಯ ಆಶ್ರಮವಿರುವುದು. ಅಲ್ಲಿಯೇ ಅಹಲ್ಯೆಯು ತಪಸ್ಸನ್ನು ಮಾಡುತ್ತಿದ್ದಳು ಆ ವನದಲ್ಲಿ ಉತ್ತಮವಾದ ಅನೇಕ ಮರಗಳಿದ್ದುವು. ಅವುಗಳು ಉತ್ತಮವಾದ ಹಣ್ಣು ಹೂವುಗಳಿಂದ ತುಂಬಿದ್ದುವು.

೧೬. ಆದರೆ ಅಲ್ಲಿ ಮೃಗಗಳಾಗಲೀ ಪಕ್ಷಿಗಳಾಗಲೀ ಇರಲಿಲ್ಲ. ಮತ್ತಾವ ಪ್ರಾಣಿಯೂ ಇರಲಿಲ್ಲ. ಈ ವನವು ಹೀಗಿರುವುದನ್ನು ನೋಡಿ ರಾಮನು ಮುನಿಯನ್ನು ಕುರಿತು ಇಂತೆಂದು ಕೇಳಿದನು.

೧೭-೧೮ ಎಲೈ ಋಷಿಶ್ರೇಷ್ಠನೆ! ಈ ಆಶ್ರಮವು ಯಾರದು? ಬಹು ಪ್ರಕಾಶಮಾನವಾಗಿದೆ. ಮಂಗಳಕರವಾಗಿ ಕಾಣುತ್ತಿದೆ. ಮರಗಳು ಅನೇಕವಾಗಿವೆ. ಮತ್ತು ಎಲೆಗಳೂ ಹಣ್ಣುಗಳೂ ಹೂವುಗಳೂ ಬಹುವಾಗಿವೆ. ಆದರೆ ಒಂದು ಪ್ರಾಣಿಯೂ ಇಲ್ಲವಲ್ಲ? ಹೀಗದ್ದರೂ ನನ್ನ ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತಿದೆ. ಸ್ವಾಮಿ! ಇದರ ವಿಷಯವೇನು? ಸರಿಯಾಗಿ ಹೇಳು.

‖ ವಿಶ್ವಾಮಿತ್ರ ಉವಾಚ ‖

ಶೃಣು ರಾಮ ಪುರಾವೃತ್ತಂ ಗೌತಮೋ ಲೋಕವಿಶ್ರುತಃ । ಸರ್ವಧರ್ಮಭೃತಾಂ ಶ್ರೇಷ್ಠಸ್ತಪಸಾರಾಧಯರ್ಹರಿಂ ‖ ೧೯ ‖
ತಸ್ಮೈ ಬ್ರಹ್ಮಾ ದದೌ ಕನ್ಯಾಮಹಲ್ಯಾಂ ಲೋಕಸುಂದರೀಂ । ಬ್ರಹ್ಮಚರ್ಯೇಣ ಸಂತುಷ್ಟಃ ಶುಶ್ರೂಷಣಪರಾಯಣಾಂ ‖ ೨೦ ‖
ತಯಾ ಸಾರ್ಥಮಿಹಾವಾಸೀದ್ಗೌತಮಸ್ತಪಸಾಂ ವರಃ । ಶಕ್ರಸ್ತು ತಾಂ ಧರ್ಷಯಿತುಮಂತರಂ ಪ್ರೇಪ್ಸುರನ್ವಹಂ ‖ ೨೧ ‖
ಕದಾಚಿನ್ಮುನಿವೇಷೇಣ ಗೌತಮೇ ನಿರ್ಗತೇ ಗೃಹಾತ್ । ಧರ್ಷಯಿತ್ವಾಥ ನಿರಗಾತ್ತ್ವರಿತಂ ಮುನಿರಪ್ಯಗಾತ್ ‖ ೨೨ ‖

---

೧೯. ವಿಶ್ವಾಮಿತ್ರನು ಹೇಳಿದನು–ಎಲೈ ರಾಮನೆ ! ಪೂರ್ವಕಥೆಯನ್ನು ಹೇಳುತ್ತೇನೆ. ಕೇಳು. ಗೌತಮನೆಂಬ ಒಬ್ಬ ಋಷಿಯಿರುವನು. ಅವನು ಲೋಕಪ್ರಸಿದ್ಧನಾದವನು. ಧರ್ಮಿಷ್ಠರೊಳಗೆಲ್ಲಾ ಬಹು ಶ್ರೇಷ್ಠನು. ಅವನು ತಪಸ್ಸಿನಿಂದ ಹರಿಯನ್ನು ಆರಾಧಿಸಿದನು.

೨೦. ಅವನಿಗೆ ಬ್ರಹ್ಮನು ಲೋಕಸುಂದರಿಯಾದ ಅಹಲ್ಯೆಯೆಂಬ ಕನ್ಯೆಯನ್ನು ಕೊಟ್ಟನು. ಅವಳು ಬ್ರಹ್ಮಚರ್ಯದಿಂದಿದ್ದುಕೊಂಡು ತನ್ನ ಪತಿಯನ್ನು ಶುಶ್ರೂಷೆಮಾಡಿಕೊಂಡಿದ್ದಳು. ಇದರಿಂದ ಆ ಋಷಿಗೆ ಬಹು ಸಂತೋಷವಾಗಿದ್ದಿತು.

೨೧. ಆ ಗೌತಮನು ಈ ಅಹಲ್ಯೆಯೊಡನೆ ಇಲ್ಲಿ ವಾಸಮಾಡಿಕೊಂಡಿದ್ದನು. ಇಂದ್ರನು ಆ ಅಹಲ್ಯೆಯನ್ನು ಅನುಭವಿಸಬೇಕೆಂದು ಪ್ರತಿದಿನವೂ ಸಮಯವನ್ನು ನೋಡುತ್ತಿದ್ದನು.

೨೨. ಒಂದುಸಾರಿ ಆ ಗೌತಮನು ಮನೆಯಿಂದ ಹೊರಟು ಹೋಗಲು ತಾನು ಆ ಗೌತಮಮುನಿಯ ವೇಷವನ್ನು ಹಾಕಿಕೊಂಡು ಆಕೆಯಲ್ಲಿ ರಮಿಸಿ ಹೊರಕ್ಕೆ ಹೊರಟನು. ಅಷ್ಟು ಹೊತ್ತಿಗೆ ಆ ಮುನಿಯೂ ಎದುರಿಗೆ ಬಂದನು.

ದೃಷ್ಟ್ವಾ ಯಾಂತಂ ಸ್ವರೂಪೇಣ ಮುನಿಃ ಪರಮಕೋಪನಃ । ಪಪ್ರಚ್ಛ ಕಸ್ತ್ವಂ ದುಷ್ಟಾತ್ಮನ್ ಮಮ ರೂಪಧರೋಧಮಃ ॥ ೨೩ ॥
ಸತ್ಯಂ ಬ್ರೂಹಿ ನ ಚೇದ್ಭಸ್ಮಕರಿಷ್ಯಾಮಿ ನ ಸಂಶಯಃ । ಸೋಽಬ್ರವೀದ್ದೇವರಾಜೋಽಹಂ ಪಾಹಿ ಮಾಂ ಕಾಮಕಿಂಕರಂ ಕರಂ ॥ ೨೪ ॥
ಕೃತಂ ಜುಗುಪ್ಸಿತಂ ಕರ್ಮ ಮಯಾ ಕುತ್ಸಿತಚೇತಸಾ । ಗೌತಮಃ ಕ್ರೋಧತಾಮ್ರಾಕ್ಷಃ ಶಶಾಪ ದಿವಿಜಾಧಿಪಂ ॥ ೨೫ ॥
ಯೋನಿಲಂಪಟ ದುಷ್ಟಾತ್ಮನ್ ಸಹಸ್ರಭಗವಾನ್ ಭವ । ಸಪ್ತ್ವಾ ತಂ ದೇವರಾಜಾನಂ ಪ್ರವಿಶ್ಯ ಸ್ವಾಶ್ರಮಂ ದ್ರುತಂ ॥ ೨೬ ॥

---

೨೩. ತನ್ನ ಎದುರಿಗೆ ತನ್ನ ವೇಷವನ್ನು ಹಾಕಿಕೊಂಡು ಬರುತ್ತಿದ್ದ ಆ ಇಂದ್ರನನ್ನು ನೋಡಿದನು. ಅವನಿಗೆ ಬಹು ಕೋಪಬಂದಿತು. ಎಲೈ ದುಷ್ಟನೇ ! ನೀನಾರು ? ಅಧಮನಾದ ನೀನು ನನ್ನ ವೇಷವನ್ನು ಏತಕ್ಕೆ ಹಾಕಿಕೊಂಡಿದ್ದೀಯೆ ?

೨೪. ಸತ್ಯವಾದ ವಿಷಯಗಳನ್ನು ಹೇಳು. ಇಲ್ಲದಿದ್ದರೆ ತಪೋಬಲದಿಂದ ಸುಟ್ಟುಹಾಕುತ್ತೇನೆ. ಸಂಶಯವಿಲ್ಲ. ಎಂದನು. ಆಗ ಇಂದ್ರನು ನಾನು ದೇವರಾಜನಾದ ಇಂದ್ರನು. ಕಾಮನಬಾಧೆಯನ್ನು ತಡೆಯಲಾರದೆ ಬಂದಿದ್ದೇನು. ನನ್ನನ್ನು ದಯವಿಟ್ಟು ಕಾಪಾಡು.

೨೫. ನಾನಾದರೋ ಕಾಮನಿಗೆ ಅಧೀನನಾಗಿ ಅಯೋಗ್ಯವಾದ ಮನಸ್ಸಿನಿಂದ ನಿನ್ನ ಆಶ್ರಮಕ್ಕೆ ಬಂದು ಅಯೋಗ್ಯವೂ ನಿಂದ್ಯವೂ ಆದ ಕೆಲಸವನ್ನು ಮಾಡಿದ್ದೇನೆ. ನನ್ನನ್ನು ಕಾಪಾಡು. ಎನ್ನಲು ಆಗ ಗೌತಮನು ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಆ ಸ್ವರ್ಗಕ್ಕೆ ಅಧಿಪನಾದ ಇಂದ್ರನನ್ನು ಇಂತೆಂದು ಶಪಿಸಿದನು.

೨೬. ಎಲೈ ದುಷ್ಟನೆ ! ಹೆಂಗಸರ ಗುಹ್ಯಪ್ರದೇಶದಲ್ಲಿ ಆಸೆಯುಳ್ಳವನೇ ! ಹೆಂಗಸರ ಗುಹ್ಯಪ್ರದೇಶದಂತೆ ನಿನ್ನ ಮೈಯ್ಯಲ್ಲೆಲ್ಲಾ ಸಾವಿರಾರು ಗುಹ್ಯಪ್ರದೇಶಗಳು ಉಂಟಾಗಲಿ ಎಂದು ಆ ದೇವೇಂದ್ರನನ್ನು ಶಪಿಸಿ ಜಾಗ್ರತೆಯಾಗಿ ತನ್ನ ಆಶ್ರಮದೊಳಕ್ಕೆ ಹೋದನು.

ದೃಷ್ಟ್ವಾಽಹಲ್ಯಾಂ ವೇಪಮಾನಾಂ ಪ್ರಾಂಜಲಿಂ ಗೌತಮೋಽಬ್ರವೀತ್ । ದುಷ್ಟೇ ತ್ವಂ ತಿಷ್ಠ ದುರ್ವೃತ್ತೇ ಶಿಲಾಯಾಮಾಶ್ರಮೇ ಮಮ
ನಿರಾಹಾರಾ ದಿವಾರಾತ್ರಂ ತಪಃ ಪರಮಮಾಸ್ಥಿತಾ । ಆತಪಾನಿಲವರ್ಷಾದಿಸಹಿಷ್ಣುಃ ಪರಮೇಶ್ವರಂ ॥ ೨೮ ॥
ಧ್ಯಾಯಂತೀ ರಾಮಮೇಕಾಗ್ರಮನಸಾ ಹೃದಿ ಸಂಸ್ಥಿತಂ । ನಾನಾಜಂತುವಿಹೀನೋಽಯಂ ಆಶ್ರಮೋ ಮೇ ಭವಿಷ್ಯತಿ ॥ ೨೯ ॥
ಏವಂ ವರ್ಷಸಹಸ್ರೇಷು ಹ್ಯನೇಕೇಷು ಗತೇಷು ಚ । ರಾಮೋ ದಾಶರಥಿಃ ಶ್ರೀಮಾನಾಗಮಿಷ್ಯತಿ ಸಾನುಜಃ ॥ ೩೦ ॥

---

೨೭. ಅಲ್ಲಿ ಅಹಲ್ಯೆಯನ್ನು ನೋಡಿದನು. ಆಕೆಯು ಭಯದಿಂದ ನಡುಗುತ್ತಿದ್ದಳು. ಕೈಮುಗಿದುಕೊಂಡು ನಿಂತಿದ್ದಳು. ಆಗ ಎಲೈ ದುಷ್ಟೆಯೇ ! ನೀನು ನನ್ನ ಆಶ್ರಮದಲ್ಲಿ ಕಲ್ಲಿನ ರೂಪದಿಂದಿರು.

೨೮. ಆಹಾರವನ್ನು ತೆಗೆದುಕೊಳ್ಳಬೇಡ. ಹಗಲೂ ರಾತ್ರಿಯೂ ತಪಸ್ಸನ್ನು ಮಾಡು. ಬಿಸಿಲು, ಗಾಳಿ, ಮಳೆಗಳಿನ್ನದಿ ಅವನ್ನು ಸಹಿಸಿಕೊಂಡು ಆ ಪರಮೇಶ್ವರನನ್ನು ಕುರಿತು ತಪಸ್ಸು ಮಾಡು.

೨೯-೩೦. ಎಲ್ಲರ ಹೃದಯದಲ್ಲಿಯೂ ಇರುತ್ತಿರುವ ಶ್ರೀರಾಮನನ್ನು ಮನಸ್ಸಿನಲ್ಲಿಯೇ ಧ್ಯಾನಮಾಡುತ್ತಿರು. ಈ ನನ್ನ ಆಶ್ರಮವು ಯಾವ ಬಗೆಯಾದ ಪ್ರಾಣಿಗಳೂ ಇಲ್ಲದಂತಾಗಲಿ. ಈ ರೀತಿಯಾಗಿ ಅನೇಕಸಾವಿರ ವರ್ಷಗಳು ಕಳೆದಮೇಲೆ ರಾಮನು ದಶರಥನ ಹೊಟ್ಟೆಯಲ್ಲಿ ಹುಟ್ಟಿ ತಮ್ಮನೊಡನೆ ಇಲ್ಲಿಗೆ ಬರುವನು.

ಯದಾ ತ್ವದಾಶ್ರಮಶಿಲಾಂ ಪಾದಾಭ್ಯಾಮಾಕ್ರಮಿಷ್ಯತಿ । ತದೈವ ಧೂತಪಾಪಾ ತ್ವಂ ರಾಮಂ ಸಂಪೂಜ್ಯ ಭಕ್ತಿತಃ ॥ ೩೧ ॥
ಪರಿಕ್ರಮ್ಯ ನಮಸ್ಕೃತ್ಯ ಸ್ತುತ್ವಾ ಪಾಪಾದ್ವಿಮೋಕ್ಷ್ಯಸೇ । ಪೂರ್ವವನ್ಮಮ ಶುಶ್ರೂಷಾಂ ಕರಿಷ್ಯಸಿ ಯಥಾಸುಖಂ ॥ ೩೨ ॥
ಇತ್ಯುಕ್ತ್ವಾ ಗೌತಮಃ ಪ್ರಾಗಾದ್ಧಿಮವಂತಂ ನಗೋತ್ತಮಂ । ತದಾದ್ಯಹಲ್ಯಾ ಭೂತಾನಾಮದೃಶ್ಯಾ ಸ್ವಾಶ್ರಮೇ ಶುಭೇ ॥ ೩೩ ॥
ತವ ಪಾದರಜಃಸ್ಪರ್ಶಂ ಕಾಂಕ್ಷತೇ ಪವನಾಶನಾ । ಆಸ್ತೇದ್ಯಾಪಿ ರಘುಶ್ರೇಷ್ಠ ತಪೋ ದುಷ್ಕರಮಾಸ್ಥಿತಾ ॥ ೩೪ ॥

---

೩೧. ಅವನು ಇಲ್ಲಿಗೆ ಬಂದು ಆಶ್ರಮದಲ್ಲಿ ಕಲ್ಲಿನ ರೂಪದಿಂದಿರುವ ನಿನ್ನನ್ನು ಕಾಲಿನಿಂದ ತುಳಿಯುವನು ಆಗ. ನಿನಗೆ ನಿನ್ನ ಸ್ವರೂಪವು ಬರುತ್ತದೆ ಅನಂತರ ಆಗ ರಾಮನನ್ನು ಭಕ್ತಿಯಿಂದ ಪೂಜಿಸು.

೩೨. ಮತ್ತು ಭಕ್ತಿಯಿಂದ ಪ್ರದಕ್ಷಿಣೆ, ನಮಸ್ಕಾರಗಳನ್ನು ಮಾಡು. ಸ್ತುತಿಸು. ಹೀಗೆ ಮಾಡಿದರೆ ಆ ಪಾಪಗಳೆಲ್ಲವೂ ಹೋಗುತ್ತದೆ. ಅನಂತರ ನನ್ನ ಬಳಿಗೆ ಬಂದು ನನ್ನ ಶುಶ್ರೂಷೆಯನ್ನು ಸುಖವಾಗಿ ಮಾಡಿಕೊಂಡಿರು.

೩೩. ಹೀಗೆಂದು ಆ ಗೌತಮನು ಹೇಳಿ ಪರ್ವತಶ್ರೇಷ್ಠವಾದ ಹಿಮವತ್ಪರ್ವತಕ್ಕೆ ಹೊರಟು ಹೋದನು. ಅದು ಮೊದಲುಗೊಂಡು ಅಹಲ್ಯೆಯು ಪ್ರಾಣಿಗಳಿಗೆ ಕಾಣದಂತೆ ತನ್ನ ಆಶ್ರಮದಲ್ಲಿದ್ದುಕೊಂಡಿದ್ದಾಳೆ.

೩೪. ಗಾಳಿಯನ್ನೇ ಕುಡಿದುಕೊಂಡು ತಪಸ್ಸನ್ನು ಮಾಡುತ್ತಿರುವ ಆ ಅಹಲ್ಯೆಯು ನಿನ್ನ ಪಾದದ ಧೂಳಿನ ಸ್ಪರ್ಶವನ್ನು ಅಪೇಕ್ಷಿಸುತ್ತಿದ್ದಾಳೆ. ಬಹು ಉಗ್ರವಾದ ತಪಸ್ಸನ್ನು ಮಾಡುತ್ತ ಈಗಲೂ ಇಲ್ಲಿಯೇ ಇದ್ದುಕೊಂಡಿರುವಳು.

ಪಾವಯಸ್ವ ಮುನೇರ್ಭಾರ್ಯಾಮಹಲ್ಯಾಂ ಬ್ರಹ್ಮಣಸ್ಸುತಾಂ । ಇತ್ಯುಕ್ತ್ವಾ ರಾಘವಂ ಹಸ್ತೇ ಗೃಹೀತ್ವಾ ಮುನಿಪುಂಗವಃ ॥ ೩೫ ॥
ದರ್ಶಯಾಮಾಸ ಚಾಹಲ್ಯಾಮುಗ್ರೇಣ ತಪಸಾ ಸ್ಥಿತಾಂ । ರಾಮಃ ಶಿಲಾಂ ಪದಾ ಸ್ಪೃಷ್ಟ್ವಾ ತಾಂ ಚಾಪಶ್ಯತ್ತಪೋಧನಾಂ ॥ ೩೬ ॥
ನನಾಮ ರಾಘವೋಽಹಲ್ಯಾಂ ರಾಮೋಽಹಮಿತಿ ಚಾಬ್ರವೀತ್ । ತತೋ ದೃಷ್ಟ್ವಾ ರಘುಶ್ರೇಷ್ಠಂ ಪೀತಕೌಶೇಯವಾಸಸಂ ॥ ೩೭ ॥
ಚತುರ್ಭುಜಂ ಶಂಖಚಕ್ರಗದಾಪಂಕಜಧಾರಿಣಂ । ಧನುರ್ಬಾಣಧರಂ ರಾಮಂ ಲಕ್ಷ್ಮಣೇನ ಸಮನ್ವಿತಂ ॥ ೩೮ ॥

---

೩೫. ಬ್ರಹ್ಮನ ಮಗಳಾದ ಮುನಿಯ ಹೆಂಡತಿಯಾದ ಆಕೆಯನ್ನು ನಿನ್ನ ಪಾದ ಸ್ಪರ್ಶದಿಂದ ಪವಿತ್ರಳನ್ನಾಗಿ ಮಾಡು. ಹೀಗೆಂದು ಹೇಳಿ ವಿಶ್ವಾಮಿತ್ರನು ಆ ರಾಮನ ಕೈಯ್ಯನ್ನು ಹಿಡಿದುಕೊಂಡು ಹೋದನು.

೩೬. ಎದುರಿನಲ್ಲಿ ಉಗ್ರವಾದ ತಪಸ್ಸನ್ನು ಮಾಡುತ್ತಿರುವ ಆ ಅಹಲ್ಯೆಯನ್ನು ತೋರಿಸಿದನು. ಆಗ ಆ ರಾಮನು ಆ ಅಹಲ್ಯಾ ರೂಪವಾದ ಕಲ್ಲಿನಮೇಲೆ ಕಾಲನ್ನಿಡಲು ಆಕೆಯು ನಿಜಸ್ವರೂಪವನ್ನು ಹೊಂದಿ ಬಂದಳು. ಆಕೆಯನ್ನು ರಾಮನು ನೋಡಿದನು.

೩೭. ಆಗ ರಾಮನು ತನ್ನ ಪ್ರವರವನ್ನು ಹೇಳುತ್ತಾ ನಾನು ರಾಮನೆಂದು ಹೇಳಿ ಆ ಅಹಲ್ಯೆಗೆ ನಮಸ್ಕರಿಸಿದನು. ಆಗ ಆಕೆಯು ಹೊಂಬಣ್ಣದ ರೇಶ್ಮೆಯ ಬಟ್ಟೆಯನ್ನು ಧರಿಸಿರುವ ರಘುಶ್ರೇಷ್ಠನಾದ ರಾಮನನ್ನು ನೋಡಿದಳು.

೩೮. ಅವನು ನಾಲ್ಕು ತೋಳುಗಳನ್ನು ಧರಿಸಿದ್ದನು. ಶಂಖ ಚಕ್ರ ಗದೆ ಪದ್ಮಗಳನ್ನು ಧರಿಸಿದ್ದನು. ಧನುಸ್ಸು ಬಾಣಗಳನ್ನು ಹಿಡಿದಿದ್ದನು. ಜೊತೆಯಲ್ಲಿ ಲಕ್ಷ್ಮಣನೂ ಇದ್ದನು.

ಸ್ಮಿತವಕ್ತ್ರಂ ಪದ್ಮನೇತ್ರಂ ಶ್ರೀವತ್ಸಾಂಕಿತವಕ್ಷಸಂ । ನೀಲವಾಕ್ಯಣಿಸಂಕಾಶಂ ದ್ಯೋತಯಂತಂ ದಿಶೋ ದಶ ॥ ೩೯ ॥

ದೃಷ್ಟ್ವಾ ರಾಮಂ ರಮಾನಾಥಂ ಹರ್ಷವಿಸ್ಫಾರಿತೇಕ್ಷಣಾ । ಗೌತಮಸ್ಯ ವಚಃ ಸ್ಮೃತ್ವಾ ಜ್ಞಾತ್ವಾ ನಾರಾಯಣಂ ವರಂ ॥ ೪೦ ॥

ಸಂಪೂಜ್ಯ ವಿಧಿವದ್ರಾಮಮರ್ಘ್ಯಾದಿಭಿರನಿಂದಿತಾ । ಹರ್ಷಾಶ್ರುಜಲನೇತ್ರಾಂತಾ ದಂಡವತ್ಪ್ರಣಿಪತ್ಯ ಸಾ ॥ ೪೧ ॥

ಉತ್ಥಾಯ ಚ ಪುನರ್ದೃಷ್ಟ್ವಾ ರಾಮಂ ರಾಜೀವಲೋಚನಂ । ಪುಲಕಾಂಕಿತಸರ್ವಾಂಗಾ ಗಿರಾ ಗದ್ಗದಯೈರತ ॥ ೪೨ ॥

---

೩೯. ಮುಗುಳು ನಗೆಯನ್ನು ಬೀರುತ್ತಿದ್ದನು. ಕಣ್ಣುಗಳು ಕಮಲದಂತಿದ್ದುವು. ಎದೆಯಲ್ಲಿ ಶ್ರೀವತ್ಸವೆಂಬ ಮಚ್ಚೆಯು ಪ್ರಕಾಶಿಸುತ್ತಿದ್ದಿತು. ನೀಲಬಣ್ಣದ ಮಣಿಯಂತಿದ್ದನು. ಅವನು ತನ್ನ ಕಾಂತಿಯಿಂದ ಹತ್ತುದಿಕ್ಕುಗಳನ್ನೂ ಬೆಳಗುತ್ತಿದ್ದನು.

೪೦. ಈ ರಮಾನಾಥನಾದ ರಾಮನನ್ನು ನೋಡಿ ಹರ್ಷದಿಂದ ಆಕೆಯ ಕಣ್ಣುಗಳು ಅಗಲವಾದುವು. ಗೌತಮನ ಮಾತನ್ನು ಜ್ಞಾಪಿಸಿಕೊಂಡು ಇವನು ಉತ್ತಮನಾದ ನಾರಾಯಣನೆಂದು ತಿಳಿದುಕೊಂಡಳು.

೪೧. ಒಡನೆಯೇ ಅರ್ಘ್ಯ ಪಾದ್ಯಾದಿಗಳಿಂದ ಶಾಸ್ತ್ರೋಕ್ತವಾಗಿ ಆ ರಾಮನನ್ನು ಪೂಜಿಸಿದಳು. ಹರ್ಷದಿಂದ ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು ದೀರ್ಘವಾಗಿ ನಮಸ್ಕರಿಸಿದಳು.

೪೨. ಮೇಲಕ್ಕೆದ್ದು ಮತ್ತೆ ರಾಜೀವಾಕ್ಷನಾದ ಆ ರಾಮನನ್ನು ನೋಡಿದಳು. ಮೈಯೆಲ್ಲವೂ ಸಂತೋಷದಿಂದ ನಿಮಿರಿದುವು. ಆಗ ಸಂತೋಷದಿಂದ ತಡವರಿಸುತ್ತಿರುವ ಮಾತಿನಿಂದ ಇಂತೆಂದಳು.

॥ ಅಹಲ್ಯೋವಾಚ ॥

ಅಹೋ ಕೃತಾರ್ಥಾಸ್ಮಿ ಜಗನ್ನಿವಾಸ ತೇ ಪಾದಾಬ್ಜ ಸಂಲಗ್ನ ರಜಃ ಕಣಾದಹಂ ।
ಸ್ಪೃಶಾಮಿ ಯತ್ಪದ್ಮಜಶಂಕರಾದಿಭಿಃ ವಿಮೃಗ್ಯತೇ ರಂಧ್ರಿತಮಾನಸೈಃ ಸದಾ ॥ ೪೩ ॥

ಅಹೋ ವಿಚಿತ್ರಂ ತವ ರಾಮಚೇಷ್ಟಿತಂ ಮನುಷ್ಯಭಾವೇನ ವಿಮೋಹಿತಂ ಜಗತ್ ।
ಚಲಸ್ಯಜಸ್ರಂ ಚರಣಾದಿವರ್ಜಿತಃ ಸಂಪೂರ್ಣ ಆನಂದಮಯೋತಿಮಾಯಿಕಃ ॥ ೪೪ ॥

---

೪೩. ಅಹಲ್ಯೆಯು ಹೇಳಿದಳು–ಎಲೈ ಜಗನ್ನಿವಾಸನೆ! ನಿನ್ನ ಪಾದದಲ್ಲಿ ಅಂಟಿಕೊಂಡಿದ್ದ ಧೂಳಿನಸ್ಪರ್ಶದಿಂದ ನಾನು ಕೃತಾರ್ಥಳಾದೆನು. ಬ್ರಹ್ಮ, ಈಶ್ವರನೇ ಮುಂತಾದವರು ಮನಸ್ಸನ್ನು ಬಿಗಿಹಿಡಿದು ಯಾವನ ಪಾದಗಳನ್ನು ನೋಡಲಿಲ್ಲವಲ್ಲಾ ಎಂದು ಯೋಗಾಭ್ಯಾಸದಿಂದ ಹುಡುಕುವರೋ ಅಂತಹವನ ಪಾದಗಳನ್ನು ನಾನು ಮುಟ್ಟುತ್ತಿದ್ದೇನೆ.

೪೪. ಎಲೈ ರಾಮನೆ! ಮನುಷ್ಯನ ರೀತಿಯಿಂದ ಜಗತ್ತನ್ನೇ ಮೋಹಪಡಿಸುತ್ತಿರುವೆಯಲ್ಲಾ! ಈ ನಿನ್ನ ಚೇಷ್ಟೆಯು ವಿಚಿತ್ರವಾದುದು. ಕಾಲು ಮುಂತಾದುವುಗಳಿಲ್ಲದಿದ್ದರೂ ಓಡಿಯಾಡುತ್ತೀಯೆ. ಇಂದ್ರಿಯಗಳಿಲ್ಲದಿದ್ದರೂ ಆಯಾ ಇಂದ್ರಿಯಗಳ ಕೆಲಸವನ್ನು ಮಾಡುತ್ತೀಯೆ. ನೀನು ಸಂಪೂರ್ಣನು. ಆನಂದಸ್ವರೂಪನು. ಮಾಯಗೆ ಒಳಗಾಗದವನು.

ಯತ್ಪಾದಪಂಕಜಪರಾಗಪವಿತ್ರಗಾತ್ರಾ ಭಾಗೀರಥೀ ಭವವಿರಿಂಚಿ ಮುಖಾನ್ ಪುನಾತಿ ।
ಸಾಕ್ಷಾತ್ಸ ಏವ ಮಮ ದೃಗ್ವಿಷಯೋ ಯದಾಸ್ತೇ ಕಿಂ ವರ್ಣ್ಯತೇ ಮಮ ಪುರಾಕೃತಭಾಗಧೇಯಂ ॥೪೫॥

ಮರ್ತ್ಯಾವತಾರೇ ಮನುಜಾಕೃತಿಂ ಹರಿಂ ರಾಮಾಭಿಧೇಯಂ ರಮಣೀಯದೇಹಿನಂ ।
ಧನುರ್ಧರಂ ಪದ್ಮವಿಶಾಲಲೋಚನಂ ಭಜಾಮಿ ನಿತ್ಯಂ ನ ಪರಾನ್ ಭಜಿಷ್ಯೇ ॥ ೪೬ ॥

---

೪೫. ಸ್ವಾಮಿಯಾದ ನಿನ್ನ ಪಾದಪದ್ಮಗಳ ಧೂಳನ್ನು ಹೊಂದಿ ಭಾಗೀರಥೀನದಿಯು ಬ್ರಹ್ಮ ಮತ್ತು ಈಶ್ವರರನ್ನೇ ಪವಿತ್ರರನ್ನಾಗಿ ಮಾಡುತ್ತಿರುವುದು. ಅಂತಹ ಪಾದಪದ್ಮವು ನನ್ನ ಎದುರಿಗೆ ಪ್ರತ್ಯಕ್ಷವಾಗಿ ಕಾಣುತ್ತಿರುವುದು. ಇಂತಹ ನನ್ನ ಪೂರ್ವಜನ್ಮದ ಪುಣ್ಯದ ವಿಶೇಷವನ್ನು ಏನೆಂದು ವರ್ಣಿಸಲಿ ?

೪೬. ಮರ್ತ್ಯ ಲೋಕದಲ್ಲಿ ಮನುಷ್ಯಾಕಾರವನ್ನು ಹೊಂದಿ ರಮಣೀಯವಾದ ದೇಹವನ್ನು ಧರಿಸಿ ರಾಮನೆಂಬ ಹೆಸರನ್ನು ಇಟ್ಟು ಕೊಂಡು ಧನುಸ್ಸನ್ನು ಹಿಡಿದು ಪದ್ಮದಂತೆ ವಿಶಾಲವಾಗಿರುವ ಕಣ್ಣುಗಳುಳ್ಳ ಈ ಸ್ವಾಮಿಯನ್ನು ಯಾವಾಗಲೂ ಭಜಿಸುತ್ತೇನೆ. ಮತ್ತಾರನ್ನೂ ಭಜಿಸುವುದಿಲ್ಲ.

ಯತ್ಪಾದಪಂಕಜರಜಃ ಶ್ರುತಿಭಿರ್ವಿಮೃಗ್ಯಂ ಯನ್ನಾಭಿಪಂಕಜಭವಃ ಕಮಲಾಸನಶ್ಚ ।
ಯನ್ನಾಮಸಾರರಸಿಕೋ ಭಗವಾನ್ ಪುರಾರಿಸ್ತಂ ರಾಮಚಂದ್ರಮನಿಶಂ ಹೃದಿ ಭಾವಯಾಮಿ ॥ ೪೭ ॥

ಯಸ್ಯಾವತಾರಚರಿತಾನಿ ವಿರಿಂಚಿಲೋಕೇ ಗಾಯಂತಿ ನಾರದಮುಖಾ ಭವಪದ್ಮಜಾದ್ಯಾಃ ।
ಆನಂದಜಾಶ್ರುಪರಿಷಿಕ್ತಕುಚಾಗ್ರಸೀಮಾ ವಾಗೀಶ್ವರೀ ಚ ತಮಹಂ ಶರಣಂ ಪ್ರಪದ್ಯೇ ॥ ೪೮ ॥

---

೪೭. ಯಾವ ಸ್ವಾಮಿಯ ಪಾದದ ಧೂಳನ್ನೇ ಶ್ರುತಿಗಳು ಹುಡುಕುತ್ತಿರುವುವೋ ಯಾವ ಸ್ವಾಮಿಯ ಹೊಕ್ಕುಳಿನಿಂದ ಹುಟ್ಟಿದ ಕಮಲದಲ್ಲಿ ಜಗತ್ಕರ್ತನಾದ ಬ್ರಹ್ಮನು ಹುಟ್ಟಿರುವನೋ ಯಾವನ ನಾಮಗಳನ್ನೇ ಭಗವಂತನಾದ ತ್ರಿಪುರಾಂತಕನು ಭಜಿಸುತ್ತಿರುವನೋ ಅಂತಹ ರಾಮಚಂದ್ರನನ್ನು ನಾನು ಯಾವಾಗಲೂ ಭಜಿಸುತ್ತಿರುವೆನು.

೪೮ ಯಾವನ ಅವತಾರದ ಚರಿತ್ರೆಗಳನ್ನು ಬ್ರಹ್ಮಲೋಕದಲ್ಲಿ ನಾರದ ಬ್ರಹ್ಮ ಇವರೇ ಮುಂತಾದವರು ಗಾನಮಾಡುತ್ತಾರೆಯೋ ವಾಗೀಶ್ವರಿಯಾದ ಸರಸ್ವತಿಯು ಯಾವ ಸ್ವಾಮಿಯ ಸ್ತುತಿಯನ್ನು ಕೇಳಿ ಆನಂದದಿಂದ ಕಣ್ಣೀರನ್ನು ಸುರಿಸಿಕೊಂಡು ಎದೆಯ ಪ್ರದೇಶವನ್ನೆಲ್ಲಾ ನೆನೆಸಿಕೊಳ್ಳುತ್ತಿರುವಳೋ ಅಂತಹ ಸ್ವಾಮಿಯನ್ನು ಶರಣು ಹೊಂದುತ್ತೇನೆ.

ಸೋಽಯಂ ಪರಾತ್ಮಾ ಪುರುಷಃ ಪುರಾಣ ಏಷಃ ಸ್ವಯಂ ಜ್ಯೋತಿರನಂತ ಆದ್ಯಃ ।
ಮಾಯಾತನುಂ ಲೋಕವಿಮೋಹನೀಯಾಂ ಧತ್ತೇ ಪರಾನುಗ್ರಹ ಏಷ ರಾಮಃ ॥ ೪೯ ॥

ಅಯಂ ಹಿ ವಿಶ್ವೋದ್ಭವಸಂಯಮಾನಾಮೇಕಃ ಸ್ವಮಾಯಾಗುಣಬಿಂಬತೋ ಯಃ ।
ವಿರಿಂಚಿವಿಷ್ಣ್ವೀಶ್ವರನಾಮಭೇದಾ೯ ಧತ್ತೇ ಸ್ವತಂತ್ರಃ ಪರಿಪೂರ್ಣ ಆತ್ಮಾ ॥ ೫೦ ॥

ನಮೋಽಸ್ತು ತೇ ರಾಮ ತವಾಂಘ್ರಿಪಂಕಜಂ ಶ್ರಿಯಾ ಧೃತಂ ವಕ್ಷಸಿ ಲಾಲಿತಂ ಪ್ರಿಯಾತ್ ।
ಆಕ್ರಾಂತಮೇಕೇನ ಜಗತ್ತ್ರಯಂ ಪುರಾ ಧ್ಯೇಯಂ ಮುನೀಂದ್ರೈರಭಿಮಾನವರ್ಜಿತೈಃ ॥ ೫೧ ॥

---

೪೯. ಆ ನೀನೇ ಪರಮಾತ್ಮನು. ಪುರಾಣಪುರುಷನು. ಸ್ವಯಂ ಜ್ಯೋತಿಸ್ವರೂಪನು ಅಂತ್ಯವಿಲ್ಲದವನು. ಆದಿಭೂತನು. ಇಂತಹವನು ರಾಮನಾಗಿ ಲೋಕದ ಜನರನ್ನು ಭ್ರಾಂತಿಪಡಿಸುವುದಕ್ಕೋಸ್ಕರ ಮಾಯಾರೂಪವಾದ ದೇಹವನ್ನು ಧರಿಸುತ್ತಾನೆ.

೫೦. ಈ ಶ್ರೀರಾಮನು ತಾನು ಒಬ್ಬನೇ ಆಗಿದ್ದರೂ ಪ್ರಪಂಚದ ಸೃಷ್ಟಿಸ್ಥಿತಿ ಲಯಗಳಿಗೆ ಕಾರಣರಾದ ಬ್ರಹ್ಮ ವಿಷ್ಣು ರುದ್ರರನ್ನು ಆಯಾ ಹೆಸರಿನ ವ್ಯತ್ಯಾಸಗಳಿಂದಲೂ ತನ್ನ ಮಾಯೆಯಿಂದಲೂ ಗುಣಗಳಿಂದಲೂ ಪ್ರತಿಬಿಂಬಿಸಿ ತಾನೇ ಆ ರೀತಿಯಾಗಿದ್ದು ಮೂರುಭಾಗವಾಗಿದ್ದಾನೆ. ತಾನು ಮಾತ್ರ ಇದರಿಂದ ಕಡಿಮೆಯಾಗದೆ ಸ್ವತಂತ್ರನೂ ಪೂರ್ಣನೂ ಆಗಿದ್ದಾನೆ.

೫೧. ಎಲೈ ರಾಮನೇ ! ನಿನ್ನ ಪಾದಗಳಿಗೆ ನಮಸ್ಕರಿಸುತ್ತೇನೆ. ಆ ಪಾದಗಳನ್ನು ಲಕ್ಷ್ಮೀದೇವಿಯು ಎದೆಯಮೇಲಿಟ್ಟುಕೊಂಡು ಪ್ರೀತಿಯಿಂದ ಲಾಲಿಸುವಳು. ಆ ಪಾದ ಒಂದೇ ಮೂರು ಲೋಕಗಳನ್ನೂ ಆಕ್ರಮಿಸಿತು. ಅಭಿಮಾನಗಳನ್ನು ಬಿಟ್ಟು ಮುನೀಂದ್ರರು ಆ ಪಾದಗಳನ್ನು ಯಾವಾಗಲೂ ಧ್ಯಾನಿಸುತ್ತಾರೆ.

ಜಗತಾಮಾದಿಭೂತಸ್ತ್ವಂ ಜಗತ್ ತ್ವಂ ಜಗದಾಶ್ರಯಃ । ಸರ್ವಭೂತೇಷ್ವಸಂಯುಕ್ತ ಏಕೋ ಭಾತಿ ಭವಾನ್ ಪರಃ ॥ ೫೨ ॥

ಓಂಕಾರವಾಚ್ಯಸ್ತ್ವಂ ರಾಮ ವಾಚಾಮವಿಷಯಃ ಪುಮಾನ್ । ವಾಚ್ಯವಾಚಕಭೇದೇನ ಭವಾನೇವ ಜಗನ್ಮಯಃ ॥ ೫೩ ॥

---

೫೨. ಎಲೈ ಸ್ವಾಮಿಯೆ ! ನೀನು ಪ್ರಪಂಚಕ್ಕೆ ಮೊದಲನೆಯ ಕಾರಣನು. ಪಂಚಭೂತಗಳಲ್ಲಿ ಮೊದಲನೆಯ ಭೂತವು. ಜಗತ್ತೇ ನೀನಾಗಿದ್ದೀಯೆ. ಜಗತ್ತಿಗೆ ಆಶ್ರಯನೂ ಆಗಿದ್ದೀಯೆ. ನೀನು ಯಾವ ಪ್ರಾಣಿಯಲ್ಲಿಯೂ ಸೇರಿಕೊಂಡಿಲ್ಲ. ನೀನೊಬ್ಬನೇ ಬೇರೆಯವನಾಗಿ ಕಾಣುತ್ತಿದ್ದೀಯೆ.

೫೩. ಎಲೈ ರಾಮನೇ ! ವೇದಗಳ ಮೊದಲಲ್ಲಿ ಇರುವ ಓಂಕಾರದ ಅರ್ಥವೇ ನೀನಾಗಿದ್ದೀಯೆ. ಮಾತಿಗೆ ನಿಲುಕದವನೂ ನೀನಾಗಿದ್ದೀಯೆ. ನೀನೇ ಪರಮಪುರುಷನು. ವಾಚ್ಯ ವಾಚಕಗಳೆಂಬ ಭೇದದಿಂದ ನೀನೇ ಜಗತ್ಸ್ವರೂಪನಾಗಿದ್ದೀಯೆ. (ವಾಚ್ಯವೆಂದರೆ ಹೇಳುವುದಕ್ಕೆ ವಿಷಯವಾಗಿರುವುದು. ವಾಚಕವೆಂದರೆ ಹೆಸರು. ಬೆಟ್ಟ ಎಂದು ಹೇಳಿದರೆ ಆ ಹೆಸರಿನಿಂದ ತೋರುವ ಕಲ್ಲುಗಳ ಒಂದು ಸಮೂಹವಾದ ಪದಾರ್ಥ ಇದೇ ವಾಚ್ಯ. ಆ ಕಲ್ಲುಗಳ ಸಮೂಹವು ನಮ್ಮ ಸ್ಮೃತಿಗೆ ಬರುವಂತೆ ಮಾಡುವುದು ಅದರ ಹೆಸರಾದ ಬೆಟ್ಟವೆಂಬ ಶಬ್ದ ಈ ಶಬ್ದವೇ ವಾಚಕವು)

ಕಾರ್ಯಕಾರಣಕರ್ತೃತ್ವಫಲಸಾಧನಭೇದತಃ । ಏಕೋ ವಿಭಾಸಿ ರಾಮ ತ್ವಂ ಮಾಯಯಾ ಬಹುರೂಪಯಾ ॥ ೩೪ ॥

ತ್ವನ್ಮಾಯಾಮೋಹಿತಧಿಯಸ್ತ್ವಾಂ ನ ಜಾನಂತಿ ತತ್ವತಃ । ಮಾನುಷಂ ತ್ವಾಭಿಮನ್ಯಂತೇ ಮಾಯಿನಂ ಪರಮೇಶ್ವರಂ ॥ ೩೫ ॥

ಆಕಾಶವತ್ತ್ವಂ ಸರ್ವತ್ರ ಬಹಿರಂತರ್ಗತೋಮಲಃ । ಅಸಂಗೋ ಹ್ಯಚಲೋ ನಿತ್ಯಃ ಶುದ್ಧೋ ಬುದ್ಧಃ ಸದವ್ಯಯಃ ॥ ೩೬ ॥

---

೩೪. ಕಾರ್ಯ ಕಾರಣಕರ್ತೃ ಫಲ ಸಾಧನಗಳೆಂಬ ಭೇದಗಳಿಂದ ನೀನು ಮಾಯೆಯನ್ನು ಹೊಂದಿ ಬಹು ರೂಪವಾಗಿ ಕಾಣುತ್ತೀಯೆ. ನೀನಾದರೋ ಒಬ್ಬನೇ ಆಗಿದ್ದೀಯೆ. (ಕಾರ್ಯ ಕುಂಬಾರನು ಕೆಲಸಮಾಡುವಾಗ ತೆಗೆದುಕೊಂಡರೆ ಮಡಕೆಯ ರೂಪವೇ ಕಾರ್ಯವು, ಕಾರಣ ಆ ಮಡಕೆಗೆ ಬೇಕಾಗುವ ಮಣ್ಣು. ಕರ್ತೃ ಮಾಡತಕ್ಕ ಕುಂಬಾರ. ಫಲ ಆ ಮಡಕೆಯಲ್ಲಿ ನಮಗೆ ಅನುಕೂಲವಾಗಿ ನೀರು ಮುಂತಾದುವನ್ನು ತರುವುದು. ಸಾಧನ ಚಕ್ರ, ದೊಣ್ಣೆ ಮುಂತಾದುವು ಆ ಮಡಕೆಯನ್ನು ಮಾಡಲು ಬೇಕಾಗುವ ಇತರ ಪದಾರ್ಥಗಳು.)

೩೫. ಎಲೈ ರಾಮನೇ ! ನಿನ್ನ ಮಾಯೆಯಿಂದ ಮೋಹಗೊಂಡವರು ನಿನ್ನ ಸ್ವರೂಪವನ್ನು ತಿಳಿಯಲಾರರು. ಮಾಯೆಗೆ ಅಧಿಪತಿಯಾದ ಪರಮೇಶ್ವರನಾದ ನಿನ್ನನ್ನು ಮನುಷ್ಯನೆಂದು ಮಾತ್ರ ತಿಳಿದುಕೊಳ್ಳುತ್ತಾರೆ.

೩೬. ನೀನು ಆಕಾಶದಂತೆ ಎಲ್ಲೆಡೆಗಳಲ್ಲಿಯೂ ಇದ್ದೀಯೆ. ನೀನು ಪರಿಶುದ್ಧನಾದವನು. ನಿನಗೆ ಯಾವ ಸಂಗವೂ ಇಲ್ಲ. ಚಲಿಸುವುದೂ ಇಲ್ಲ. ನಿತ್ಯನಾದವನು. ಶುದ್ಧನಾದವನು. ಜ್ಞಾನಿಯಾದವನು. ಸತ್‌ಸ್ವರೂಪನು ನಾಶರಹಿತನು. ಕಡಿಮೆಯಾಗದೇ ಇರುವವನು.

ಯೋಷಿನ್ಮೂಢಾಹಮಜ್ಞಾ ತೇ ತತ್ತ್ವಂ ಜಾನೇ ಕಥಂ ವಿಭೋ । ತಸ್ಮಾತ್ತೇ ಶತಶೋ ರಾಮ ನಮಸ್ಕುರ್ಯಾಮನನ್ಯಧೀಃ ॥ ೫೭ ॥
ದೇವ ಮೇ ಯತ್ರ ಕುತ್ರಾಪಿ ಸ್ಥಿತಾಯಾ ಅಪಿ ಸರ್ವದಾ । ತ್ವತ್ಪಾದಕಮಲೇ ಸಕ್ತಾ ಭಕ್ತಿರೇವ ಸದಾಸ್ತು ಮೇ ॥ ೫೮ ॥
ನಮಸ್ತೇ ಪುರುಷಾಧ್ಯಕ್ಷ ನಮಸ್ತೇ ಭಕ್ತವತ್ಸಲ । ನಮಸ್ತೇಸ್ತು ಹೃಷೀಕೇಶ ನಾರಾಯಣ ನಮೋಸ್ತು ತೇ ॥ ೫೯ ॥

ಭವಭಯಹರಮೇಕಂ ಭಾನುಕೋಟಿಪ್ರಕಾಶಂ । ಕರಧೃತಶರಚಾಪಂ ಕಾಲಮೇಘಾವಭಾಸಂ ।
ಕನಕರುಚಿರವಸ್ತ್ರಂ ರತ್ನವತ್ಕುಂಡಲಾಢ್ಯಂ । ಕಮಲವಿಶದನೇತ್ರಂ ಸಾನುಜಂ ರಾಮಮೀಡೇ ॥ ೬೦ ॥

---

೫೭. ನಾನು ಹೆಂಗಸು, ದಡ್ಡಳು. ತಿಳಿವಳಿಕೆಯಿಲ್ಲದವಳು. ನಿನ್ನ ನಿಜಸ್ವರೂಪವನ್ನು ತಿಳಿಯಲು ನನಗೆ ಹೇಗೆ ಸಾಧ್ಯ ? ಆದ್ದರಿಂದ ಎಲೈ ರಾಮನೇ ! ನಿನ್ನನ್ನು ಒಂದೇ ಮನಸ್ಸಿನಿಂದ ಸಾವಿರಾರುಬಾರಿ ನಮಸ್ಕರಿಸುತ್ತೇನೆ.

೫೮. ಎಲೈ ದೇವನೆ ! ನಾನು ಎಲ್ಲಿಯಾದರೂ ಇರಲಿ ನನಗೆ ನಿನ್ನ ಪಾದಕಮಲಗಳಲ್ಲಿ ಯಾವಾಗಲೂ ಭಕ್ತಿಯಿರಬೇಕು.

೫೯. ಪುರುಷರಿಗೆಲ್ಲಾ ಒಡೆಯನೇ ! ನಿನಗೆ ನಮಸ್ಕಾರವು. ಭಕ್ತವತ್ಸಲನೇ ! ನಮಸ್ಕಾರವು. ಹೃಷೀಕೇಶನೇ ! ನಿನಗೆ ನಮಸ್ಕಾರವು. ನಾರಾಯಣನೇ ! ನಿನಗೆ ನಮಸ್ಕಾರವು.

೬೦. ಸಂಸಾರವೆಂಬ ಭಯವನ್ನು ನಾಶಮಾಡುವ ಅದ್ವಿತೀಯನಾದ ಕೋಟಿಜನ ಸೂರ್ಯರಂತೆ ಪ್ರಕಾಶಿಸುವ ಬಾಣಬಿಲ್ಲುಗಳನು ಕೈಯ್ಯಲ್ಲಿ ಹಿಡಿದಿರುವ ಮುಂಗಾರಿನ ಕಪ್ಪುಮೋಡದಂತೆ ಕಾಂತಿಯುಳ್ಳ ಹೊಂಬಣ್ಣದಿಂದ ಮನೋಹರವಾದ ಬಟ್ಟೆಯನ್ನು ಧರಿಸಿರುವ ರತ್ನದಿಂದ ಕೂಡಿರುವ ಕರ್ಣಾಭರಣವನ್ನು ಧರಿಸಿರುವ ಕಮಲದಂತೆ ಕಣ್ಣುಗಳುಳ್ಳ, ತಮ್ಮನಾದ ಲಕ್ಷ್ಮಣನೊಡನೆ ಕೂಡಿರುವ ರಾಮನನ್ನು ಸ್ತುತಿಸುತ್ತೇನೆ.

ಸ್ತುತ್ವೈವಂ ಪುರುಷಂ ಸಾಕ್ಷಾದ್ರಾಘವಂ ಪುರತಃ ಸ್ಥಿತಂ । ಪರಿಕ್ರಮ್ಯ ಪ್ರಣಮ್ಯಾಶು ಸಾನುಜ್ಞಾತಾ ಯಯೌ ಪತಿಂ ॥ ೬೧ ॥

ಅಹಲ್ಯಯಾ ಕೃತಂ ಸ್ತೋತ್ರಂ ಯಃ ಪಠೇದ್ಭಕ್ತಿಸಂಯುತಃ । ಸ ಮುಚ್ಯತೇಽಖಿಲೈಃ ಪಾಪೈಃ ಪರಂ ಬ್ರಹ್ಮಾಧಿಗಚ್ಛತಿ ॥ ೬೨ ॥

ಪುತ್ರಾದ್ಯರ್ಥೀ ಪಠೇದ್ಭಕ್ತ್ಯಾ ರಾಮಂ ಹೃದಿ ನಿಧಾಯ ಚ । ಸಂವತ್ಸರೇಣ ಲಭತೇ ವಂಧ್ಯಾ ಅಪಿ ಸುಪುತ್ರಕಂ ॥ ೬೩ ॥

ಸರ್ವಾನ್ ಕಾಮಾನ್ ಅವಾಪ್ನೋತಿ ರಾಮಚಂದ್ರಪ್ರಸಾದತಃ ॥ ೬೪ ॥

---

೬೧. ಇಂತೆಂದು ಅಹಲ್ಯೆಯು ಎದುರಿಗಿರುವ ರಾಮನನ್ನು ಈ ರೀತಿಯಾಗಿ ಸ್ತುತಿಸಿ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಅವನ ಅನುಮತಿಯನ್ನು ಪಡೆದು ಗಂಡನ ಬಳಿಗೆ ಹೊರಟು ಹೋದಳು.

೬೨. ಅಹಲ್ಯೆಯು ಭಕ್ತಿಯಿಂದ ಹೇಳಿದ ಈ ಶ್ರೀರಾಮಸ್ತೋತ್ರವನ್ನು ಭಕ್ತಿಯಿಂದ ಓದುವವನು ಎಲ್ಲಾ ಪಾಪಗಳನ್ನೂ ಕಳೆದು ಕೊಂಡು ಪರಬ್ರಹ್ಮನನ್ನು ಹೊಂದುತ್ತಾನೆ.

೬೩-೬೪. ಮಕ್ಕಳಾಗದಿರುವ ಬಂಜೆಯು ಮಕ್ಕಳಾಗಬೇಕೆಂದು ರಾಮನನ್ನೇ ಮನಸ್ಸಿನಲ್ಲಿಟ್ಟುಕೊಂಡು ಈ ಸ್ತೋತ್ರವನ್ನು ಭಕ್ತಿಯಿಂದ ಓದಿದರೆ ಅವಳು ಎಂತಹ ಬಂಜೆಯಾಗಿದ್ದರೂ ಒಂದುವರ್ಷದ ಒಳಗೆ ಮಕ್ಕಳನ್ನು ಹೊಂದುತ್ತಾಳೆ. ಮತ್ತು ಆ ಶ್ರೀರಾಮನ ಪ್ರಸಾದದಿಂದ ಎಲ್ಲಾ ಇಷ್ಟಾರ್ಥಗಳನ್ನೂ ಹೊಂದುತ್ತಾಳೆ.

ಬ್ರಹ್ಮಘ್ನೋ ಗುರುತಲ್ಪಗೋಽಪಿ ಪುರುಷಃ ಸ್ತೇಯೀ ಸುರಾಪೋಽಪಿ ವಾ ।
ಮಾತೃಭ್ರಾತೃವಿಹಿಂಸಕೋಽಪಿ ಸತತಂ ಭೋಗೈಕಬದ್ಧಾದರಃ ।
ನಿತ್ಯಂ ಸ್ತೋತ್ರಮಿದಂ ಜಪನ್ ರಘುಪತಿಂ ಭಕ್ತ್ಯಾ ಹೃದಿಸ್ಥಂ ಸ್ಮರನ್ ।
ಧ್ಯಾಯನ್ ಮುಕ್ತಿಮುಪೈತಿ ಕಿಂ ಪುನರಸೌ ಸ್ವಾಚಾರಯುಕ್ತೋ ನರಃ ॥ ೬೫ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಬಾಲಕಾಂಡೇ ಉಮಾಮಹೇಶ್ವರಸಂವಾದೇ
ಅಹಲ್ಯೋದ್ಧರಣಂ ನಾಮ ಪಂಚಮ ಸ್ಸರ್ಗಃ

---

೬೫. ಬ್ರಹ್ಮಹತ್ಯೆಮಾಡಿರಲಿ, ಗುರುವಿನ ಹೆಂಡತಿಯಲ್ಲಿ ರಮಿಸಿರಲಿ, ಚಿನ್ನವನ್ನು ಕದ್ದಿರಲಿ, ಹೆಂಡವನ್ನು ಕುಡಿದಿರಲಿ, ತಾಯಿ ತಂದೆಗಳನ್ನೂ, ಅಣ್ಣತಮ್ಮಂದಿರನ್ನೂ ಹಿಂಸೆಮಾಡುತ್ತಿರಲಿ, ಯಾವಾಗಲೂ ಕಾಮಿಯೇ ಆಗಿರಲಿ, ಎಂತಹ ಪಾಪಿಯಾದರೂ ಕೂಡ ಈ ಸ್ತೋತ್ರವನ್ನು ನಿತ್ಯವೂ ಹೇಳುತ್ತಾ, ರಾಮಚಂದ್ರನನ್ನು ಹೃದಯದಲ್ಲಿ ಧ್ಯಾನಮಾಡುತ್ತ ಇದ್ದರೆ ಅವನು ಮುಕ್ತಿಯನ್ನು ಹೊಂದುತ್ತಾನೆ. ಹೀಗಿರುವಲ್ಲಿ ಸದಾಚಾರದಿಂದ ಕೂಡಿಕೊಂಡಿರುವವನು ರಾಮನನ್ನು ಸ್ಮರಿಸುತ್ತ ಈ ಸ್ತೋತ್ರವನ್ನು ಓದಿದರೆ ಮುಕ್ತಿಯನ್ನು ಹೊಂದುವುದರಲ್ಲಿ ಸಂಶಯವೇ ನಿರುವುದು !

ಇಂತು ಶ್ರೀಮದಧ್ಯಾತ್ಮರಾಮಾಯಣದ ಬಾಲಕಾಂಡದಲ್ಲಿ ಉಮಾಮಹೇಶ್ವರಸಂವಾದದಲ್ಲಿ
ಅಹಲ್ಯೋದ್ಧರಣವೆಂಬ ಐದನೆಯ ಸರ್ಗವು.

॥ ಶ್ರೀರಸ್ತು ॥

ಅಥ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ಷಷ್ಠಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪ ಕ್ರಮಃ

ಅಧ್ಯಾತ್ಮರಾಮಾಯಣದ ಬಾಲಕಾಂಡದ ಆರನೆಯ ಸರ್ಗದಲ್ಲಿ ಮಾಡಬೇಕಾದ ಸಂಕಲ್ಪ ನ್ಯಾಸ ಧ್ಯಾನ ಜಪಗಳ ಕ್ರಮವು

ಪೂರ್ವೋಕ್ತವಿಧಿನಾ ಬಾಲಕಾಂಡೇ ಷಷ್ಠಸರ್ಗೇ ನ್ಯಾಸಧ್ಯಾನಜಪಮಹಂ ಕರಿಷ್ಯೇ ಇತಿಸಂಕಲ್ಪ್ಯ ॥

ಹಿಂದೆ ಹೇಳಿದ ವಿಧಿಯಂತೆ ಬಾಲಕಾಂಡದ ಆರನೆಯ ಸರ್ಗದಲ್ಲಿ ನ್ಯಾಸ, ಧ್ಯಾನ, ಜಪಗಳನ್ನು ಮಾಡುತ್ತೇನೆ ಎಂಬುದಾಗಿ ಸಂಕಲ್ಪವನ್ನು ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ಶ್ರೀಂ ರಾಂ ಸ್ವಾಂ ಅಂಗುಷ್ಠಾಭ್ಯಾಂ ನಮಃ
ಓಂ ಶ್ರೀಂ ರಾಂ ಸ್ವಾಂ ತರ್ಜನೀಭ್ಯಾಂ ನಮಃ
ಓಂ ಶ್ರೀಂ ರಾಂ ಸ್ವಾಂ ಮಧ್ಯಮಾಭ್ಯಾಂ ನಮಃ
ಓಂ ಶ್ರೀಂ ರಾಂ ಸ್ವಾಂ ಅನಾಮಿಕಾಭ್ಯಾಂ ನಮಃ
ಓಂ ಶ್ರೀಂ ರಾಂ ಸ್ವಾಂ ಕನಿಷ್ಠಿಕಾಭ್ಯಾಂ ನಮಃ
ಓಂ ಶ್ರೀಂ ರಾಂ ಸ್ವಾಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಹೃದಯಾದಿನ್ಯಾಸಃ ॥

ಹೃದಯಾದಿನ್ಯಾಸವು

ಓಂ ಶ್ರೀಂ ರಾಂ ಸ್ವಾಂ ಹೃದಯಾಯ ನಮಃ **ಓಂ ಶ್ರೀಂ ರಾಂ ಸ್ವಾಂ ಕವಚಾಯ ಹುಂ**

ಓಂ ಶ್ರೀಂ ರಾಂ ಸ್ವಾಂ ಶಿರಸೇ ಸ್ವಾಹಾ **ಓಂ ಶ್ರೀಂ ರಾಂ ಸ್ವಾಂ ನೇತ್ರತ್ರಯಾಯ ವೌಷಟ್**

ಓಂ ಶ್ರೀಂ ರಾಂ ಸ್ವಾಂ ಶಿಖಾಯೈ ವಷಟ್ **ಓಂ ಶ್ರೀಂ ರಾಂ ಸ್ವಾಂ ಅಸ್ತ್ರಾಯ ಫಟ್**

ಓಂ ಶ್ರೀ ರಾಮಚಂದ್ರಾಯ ಸ್ವಾಹಾ ಇತಿ ದಿಗ್ಬಂಧಃ

ಓಂ ಶ್ರೀರಾಮಚಂದ್ರಾಯ ಸ್ವಾಹಾ ಎಂದು ದಿಗ್ಬಂಧವನ್ನು ಮಾಡಿಕೊಳ್ಳಬೇಕು.

॥ ಅಥ ಧ್ಯಾನಂ ॥

ಧ್ಯಾನವು

ವಿಶ್ವಾಮಿತ್ರೋಽಥ ತಂ ಪ್ರಾಹ ರಾಘವಂ ಸಹಸಲಕ್ಷ್ಮಣಂ । ಗಚ್ಛಾವೋ ವತ್ಸ ಮಿಥಿಲಾಂ ಜನಕೇನಾಭಿಪಾಲಿತಾಂ ॥

ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಪಾರಾಯಣಾಂತೇ ಹೃದಯಾದಿನ್ಯಾಸಂ ಕೃತ್ವಾ ಶ್ರೀರಾಮಚಂದ್ರಾಯಸ್ವಾಹಾ ಇತಿದಿಗ್ವಿಮೋಕಃ

ಇತ್ಯುಕ್ತ್ವಾ ಧ್ಯಾನಶ್ಲೋಕಂ ಪಠೇತ್

ಸರ್ಗವು ಮುಗಿದ ಮೇಲೆ ಷಡಂಗನ್ಯಾಸವನ್ನು ಮಾಡಿಕೊಂಡು ಶ್ರೀರಾಮಚಂದ್ರಾಯ ಸ್ವಾಹಾ ಇತಿ ದಿಗ್ವಿಮೋಕಃ ಎಂದು ಹೇಳಿ ಧ್ಯಾನ ಶ್ಲೋಕವನ್ನು ಹೇಳಬೇಕು.

॥ ಇತಿ ಶ್ರೀ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ಷಷ್ಠಸರ್ಗೇ ನ್ಯಾಸ ಧ್ಯಾನ ಜಪ ವಿಧಿಃ ॥

ಇಂತು ಬಾಲಕಾಂಡದ ಆರನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಅಥ ಶ್ರೀ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ಷಷ್ಠಸ್ಸರ್ಗಃ

ವಿಶ್ವಾಮಿತ್ರೋಽಥ ತಂ ಪ್ರಾಹ ರಾಘವಂ ಸಹಲಕ್ಷ್ಮಣಂ । ಗಚ್ಛಾವೋ ವತ್ಸ ಮಿಥಿಲಾಂ ಜನಕೇನಾಭಿಪಾಲಿತಾಂ ॥ ೧ ॥

ದೃಷ್ಟ್ವಾ ಕ್ರತುವರಂ ಪಶ್ಚಾದಯೋಧ್ಯಾಂ ಗಂತುಮರ್ಹಸಿ । ಇತ್ಯುಕ್ತ್ವಾ ಪ್ರಯಯೌ ಗಂಗಾಮುತ್ತರ್ತುಂ ಸಹರಾಘವಃ ।
ತಸ್ಮಿನ್ ಕಾಲೇ ನಾವಿಕೇನ ನಿಷಿದ್ಧೋ ರಘುನಂದನಃ ॥ ೨ ॥

ಅಧ್ಯಾತ್ಮರಾಮಾಯಣದ ಬಾಲಕಾಂಡದಲ್ಲಿ ಆರನೆಯ ಸರ್ಗವು

೧. ಅನಂತರ ವಿಶ್ವಾಮಿತ್ರನು ಶ್ರೀರಾಮನನ್ನು ಕುರಿತು ಎಲೈ ರಾಮನೆ! ನಾವು ಜನಕನು ಆಳುತ್ತಿರುವ ಮಿಥಿಲೆಗೆ ಹೋಗೋಣ ಎಂದು ಹೇಳಿದನು.

೨. ಆ ಪಟ್ಟಣದಲ್ಲಿ ನಡೆಯುವ ಯಾಗವನ್ನು ನೋಡಿಕೊಂಡು ಅನಂತರ ಅಯೋಧ್ಯೆಗೆ ಹೋಗುತ್ತೀಯಂತೆ ಎಂದು ಹೇಳಿ ಹೊರಟು ಗಂಗೆಯನ್ನು ದಾಟಲು ದೋಣಿಯ ಬಳಿಗೆ ಹೋದರು. ಆಗ ದೋಣಿ ನಡೆಸುವವನು ರಾಮನನ್ನು ಕುರಿತು ಎಲೈ ರಾಮನೆ! ನೀನು ನನ್ನ ದೋಣಿಯೊಳಕ್ಕೆ ಕಾಲಿಡಕೂಡದು ಎಂದು ತಡೆದನು.

|| ನಾವಿಕ ಉವಾಚ ||

ಕ್ಷಾಲಯಾಮಿ ತವ ಪಾದಪಂಕಜಂ ನಾಥ ದಾರುದೃಷದೋಃ ಕಿಮಂತರಂ |
ಮಾನುಷೀಕರಣಚೂರ್ಣಮಸ್ತಿ ತೇ ಪಾದಯೋರಿತಿ ಕಥಾ ಪ್ರಥೀಯಸೀ || ೩ ||

ಪಾದಾಂಬುಜಂ ತೇ ವಿಮಲಂ ಹಿ ಕೃತ್ವಾ ಪಶ್ಚಾತ್ಪರಂತೀರಮಹಂ ನಯಾಮಿ |
ನೋ ಚೇತ್ತರೀ ಸದ್ಯುವತೀಮಲೇನ ಸ್ಯಾಚ್ಚೇದ್ವಿಭೋ ವಿದ್ಧಿ ಕುಟುಂಬಹಾನಿಃ || ೪ ||

---

೩. ನಾವಿಕನು ಹೇಳಿದನು-ಎಲೈ ಶ್ರೀರಾಮನೇ ! ನಿನ್ನ ಕಾಲುಗಳನ್ನು ತೊಳೆಯುತ್ತೇನೆ. ಅದರಲ್ಲಿರುವ ಧೂಳುಹೋಗಲಿ. ನಿನ್ನ ಪಾದಗಳಲ್ಲಿ ಕಲ್ಲನ್ನು ಮನುಷ್ಯರನ್ನಾಗಿ ಮಾಡುವ ಚೂರ್ಣವಿದೆ. ಎಂದು ಲೋಕದಲ್ಲಿ ಎಲ್ಲರೂ ಹೇಳುತ್ತಾರೆ. ನನ್ನ ಬಳಿಯುಲ್ಲಿರುವ ದೋಣಿಯನ್ನು ನೀನು ಹತ್ತಬೇಕಾಗಿದೆ. ಅದು ಹೆಣ್ಣಾದರೆ ನಾನೇನು ಮಾಡಲಿ ? ಕಲ್ಲನ್ನೂ ಹೆಣ್ಣನ್ನಾಗಿ ಮಾಡಿದ್ದೀಯೆ. ಕಲ್ಲಿಗೂ ಮರಕ್ಕೂ ಏನುತಾನೇ ಭೇದವಿದೆ ?

೪. ನಿನ್ನ ಕಾಲುಗಳನ್ನು ತೊಳೆದು ಅನಂತರ ನನ್ನ ದೋಣಿಯಲ್ಲಿ ಕೂರಿಸಿಕೊಂಡು ಆಚೆಯ ದಡಕ್ಕೆ ಬಿಡುತ್ತೇನೆ. ಹಾಗೆ ತೊಳೆಯದಿದ್ದರೆ ನನ್ನ ದೋಣಿಯು ನಿನ್ನ ಪಾದದ ಧೂಳಿನಿಂದ ಹೆಣ್ಣಾದರೆ ನನ್ನ ಜೀವನ ಹೇತುವಾದ ಈ ದೋಣಿಯು ನಾಶವಾಗಿ ನನ್ನ ಸಂಸಾರವೇ ಉಪವಾಸದಿಂದ ಸಾಯಬೇಕಾಗುವುದು.

ಇತ್ಯುಕ್ತ್ವಾ ಕ್ಷಾಳಿತೌ ಪಾದೌ ಪರಂ ತೀರಂ ತತೋ ಗತೌ । ಕೌಶಿಕೋ ರಘುನಾಥೇನ ಸಹಿತೋ ಮಿಥಿಲಾಂ ಯಯೌ ॥ ೫ ॥

ವಿದೇಹಸ್ಯ ಪುರಂ ಪ್ರಾತಃ ಋಷಿವಾಟಂ ಸಮಾವಿಶತ್ । ಪ್ರಾಪ್ತಂ ಕೌಶಿಕಮಾಕರ್ಣ್ಯ ಜನಕೋತಿಮುದಾನ್ವಿತಃ ॥ ೬ ॥

ಪೂಜಾದ್ರವ್ಯಾಣಿ ಸಂಗೃಹ್ಯ ಸೋಪಾಧ್ಯಾಯಃ ಸಮಾಯಯೌ । ದಂಡವತ್ಪ್ರಣಿಪತ್ಯಾಥ ಪೂಜಯಾಮಾಸ ಕೌಶಿಕಂ ॥ ೭ ॥

ಪಪ್ರಚ್ಛ ರಾಘವೌ ದೃಷ್ಟ್ವಾ ಸರ್ವಲಕ್ಷಣಸಂಯುತೌ । ದ್ಯೋತಯಂತೌ ದಿಶಸ್ಸರ್ವಾಃ ಚಂದ್ರಸೂರ್ಯಾವಿವಾಪರೌ ॥ ೮ ॥

---

೫. ಆ ನಾವಿಕನು ಹೀಗೆಂದು ಹೇಳಿ ಕಾಲುಗಳನ್ನು ತೊಳೆದು ಆಚೆಯದಡಕ್ಕೆ ಬಿಟ್ಟನು. ಅನಂತರ ಕೌಶಿಕನು ಆ ರಾಮನೊಡನೆ ಮಿಥಿಲಾಪಟ್ಟಣಕ್ಕೆ ಹೋದನು.

೬. ಬೆಳಗ್ಗೆ ವಿದೇಹನಪಟ್ಟಣಕ್ಕೆ ಹೋಗಿ ಅಲ್ಲಿ ಋಷಿಗಳು ಇದ್ದ ಸ್ಥಳಕ್ಕೆ ಹೋದರು. ಈ ವಿಶ್ವಾಮಿತ್ರನು ಬಂದಿರುವುದನ್ನು ಕೇಳಿ ಜನಕನಿಗೆ ಬಹು ಸಂತೋಷವಾಯಿತು.

೭. ಅನಂತರ ಜನಕನು ಪೂಜೆಯ ಸಾಮಗ್ರಿಗಳನ್ನು ತೆಗೆದುಕೊಂಡು ಪುರೋಹಿತನನ್ನೂ ಕರೆದುಕೊಂಡು ಬಂದನು. ಕೌಶಿಕನಿಗೆ ದೀರ್ಘದಂಡನಮಸ್ಕಾರವನ್ನು ಮಾಡಿ ಮಧುಪರ್ಕವನ್ನು ಕೊಟ್ಟು ವಿಧಿಯಂತೆ ಪೂಜೆಮಾಡಿದನು.

೮. ಅನಂತರ ಸಕಲ ಲಕ್ಷಣಗಳಿಂದಲೂ ಕೂಡಿರುವ ರಾಮಲಕ್ಷ್ಮಣರನ್ನು ನೋಡಿದನು. ಅವರ ತೇಜಸ್ಸು ದಿಕ್ಕುಗಳಿಗೆಲ್ಲಾ ವ್ಯಾಪಿಸಿದ್ದಿತು ಇವರನ್ನು ನೋಡಿದರೆ ಚಂದ್ರಸೂರ್ಯರಂತೆ ಇದ್ದರು. ಇವರ ವಿಷಯವನ್ನು ಜನಕನು ಇಂತೆಂದು ಕೇಳಿದನು.

ಕಸ್ಯೈತೌ ನರಶಾರ್ದೂಲೌ ಪುತ್ರೌ ದೇವಸುತೋಪಮೌ । ಮನಃಪ್ರೀತಿಕರೌ ಮೇದ್ಯ ನರನಾರಾಯಣಾವಿವ ॥ ೯ ॥

ಪ್ರತ್ಯುವಾಚ ಮುನಿಃ ಪ್ರೀತೋ ಹರ್ಷಯುಕ್ತ ಜನಕಂ ತದಾ । ಪುತ್ರೌ ದಶರಥಸ್ಯೈತೌ ಭ್ರಾತರೌ ರಾಮಲಕ್ಷ್ಮಣೌ ॥ ೧೦ ॥

ಮಖಸಂರಕ್ಷಣಾರ್ಥಾಯ ಮಯಾನೀತೌ ಪಿತುಃ ಪುರಾತ್ । ಆಗಚ್ಛನ್ ರಾಘವೋ ಮಾರ್ಗೇ ತಾಟಕಾಂ ವಿಶ್ವಘಾತನೀಂ ॥ ೧೧ ॥

ಶರೇಣೈಕೇನ ಹತವಾನ್ ನೋದಿತೋ ಮೇತಿವಿಕ್ರಮಃ । ತತೋ ಮಮಾಶ್ರಮಂ ಗತ್ವಾ ಮಮ ಯಜ್ಞವಿಹಿಂಸಕಾನ್ ॥ ೧೨ ॥

---

೯. ಎಲೈ ಕೌಶಿಕನೇ ! ದೇವತೆಗಳ ಕುಮಾರರಂತಿರುವ ಇವರು ಯಾರ ಮಕ್ಕಳು ? ಇವರು ನರನಾರಾಯಣರಂತೆ ಇದ್ದಾರೆ. ಇವರನ್ನು ನೋಡಿದರೆ ನನಗೆ ಬಹಳ ಪ್ರೀತಿಯುಂಟಾಗುತ್ತದೆ.

೧೦. ಆಗ ಆ ಕೌಶಿಕನು ಜನಕನಿಗೆ ಸಂತೋಷವನ್ನುಂಟುಮಾಡುತ್ತಾ ಇಂತೆಂದನು. ಇವರಿಬ್ಬರೂ ಅಣ್ಣತಮ್ಮಂದಿರು. ಇವರು ದಶರಥನ ಮಕ್ಕಳು. ಇವರ ಹೆಸರು ರಾಮಲಕ್ಷ್ಮಣರೆಂದು.

೧೧-೧೨. ಇವರನ್ನು ಇವರ ತಂದೆಯನ್ನು ಕೇಳಿ ಅಯೋಧ್ಯೆಯಿಂದ ನನ್ನ ಯಾಗದ ರಕ್ಷಣೆಗೋಸ್ಕರವಾಗಿ ಕರೆತಂದೆನು ಈ ರಾಮನು ದಾರಿಯಲ್ಲಿ ಬರುತ್ತ ಪ್ರಪಂಚವನ್ನೇ ನಾಶಮಾಡುವ ತಾಟಕೆಯನ್ನು ನನ್ನ ಮಾತಿನಮೇಲೆ ಒಂದೇ ಬಾಣದಿಂದ ಕೊಂದನು. ಇವನು ಬಹು ಶೂರನು. ಆಮೇಲೆ ನನ್ನ ಆಶ್ರಮಕ್ಕೆ ಬಂದನು. ಅಲ್ಲಿ ನನ್ನ ಯಜ್ಞವನ್ನು ನಾಶಪಡಿಸುವ ಸುಬಾಹು ಮುಂತಾದವರನ್ನು ಕೊಂದು ಮಾರೀಚನನ್ನು ಬಾಣದಿಂದ ಸಮುದ್ರಕ್ಕೆ ಎಸೆದನು.

ಸುಬಾಹುಪ್ರಮುಖಾನ್ ಹತ್ವಾ ಮಾರೀಚಂ ಸಾಗರೇಽಕ್ಷಿಪತ್ । ತತೋ ಗಂಗಾತಟೇ ಪುಣ್ಯೇ ಗೌತಮಸ್ಯಾಶ್ರಮೇ ಶುಭೇ ॥ ೧೩ ॥

ಗತ್ವಾ ತತ್ರ ಶಿಲಾರೂಪಾ ಗೌತಮಸ್ಯ ವಧೂಃ ಸ್ಥಿರಾ । ಪಾದಪಂಕಜಸಂಸ್ಪರ್ಶಾತ್ ಕೃತಾ ಮಾನುಷರೂಪಿಣೀ ॥ ೧೪ ॥

ದೃಷ್ಟ್ವಾಽಹಲ್ಯಾಂ ನಮಸ್ಕೃತ್ಯ ತಯಾ ಸಮ್ಯಕ್ ಪ್ರಪೂಜಿತಃ । ಇದಾನೀಂ ದ್ರಷ್ಟುಕಾಮಸ್ತೇ ಗೃಹೇ ಮಾಹೇಶ್ವರಂ ಧನುಃ ॥ ೧೫ ॥

ಪೂಜಿತಂ ರಾಜಭಿಸ್ಸರ್ವೈಃ ದೃಷ್ಟಮಿತ್ಯನುಶುಶ್ರುಮೇ । ಅತೋ ದರ್ಶಯ ರಾಜೇಂದ್ರ ಶೈವಂ ಚಾಪಮನುತ್ತಮಂ ।
ದೃಷ್ಟ್ವಾಽಯೋಧ್ಯಾಂ ಜಿಗಮಿಷುಃ ಪಿತರಂ ದ್ರಷ್ಟುಮಿಚ್ಛತಿ ॥ ೧೬ ॥

೧೩-೧೪. ಅನಂತರ ಗಂಗೆಯ ದಡದಲ್ಲಿರುವ ಪುಣ್ಯಕರವಾದ ಗೌತಮಾಶ್ರಮಕ್ಕೆ ಹೋಗಿ ಅಲ್ಲಿ ಕಲ್ಲಿನರೂಪದಿಂದ ಇದ್ದ ಗೌತಮನ ಹೆಂಡತಿಯಾದ ಅಹಲ್ಯೆಯನ್ನು ತನ್ನ ಪಾದ ಪದ್ಮವನ್ನು ತಗುಲಿಸಿದುದರಿಂದ ಮನುಷ್ಯರೂಪುಳ್ಳವಳನ್ನಾಗಿ ಮಾಡಿದನು.

೧೫. ಆ ಅಹಲ್ಯೆಯು ಈ ರಾಮನನ್ನು ಚೆನ್ನಾಗಿ ಪೂಜಿಸಿದಳು. ಆ ಪೂಜೆಯನ್ನು ಸ್ವೀಕರಿಸಿ ಈಗ ನಿನ್ನ ಮನೆಯಲ್ಲಿರುವ ಆ ಮಹೇಶ್ವರ ಧನುಸ್ಸನ್ನು ನೋಡಬೇಕೆಂದು ಬಂದಿದ್ದಾನೆ.

೧೬. ಉತ್ತಮೋತ್ತಮವಾದ ಆ ಧನುಸ್ಸನ್ನು ಎಲ್ಲರೂ ನೋಡಿ ಗೌರವಿಸಿದ್ದಾರೆ. ಎಂಬುದಾಗಿ ಕೇಳಿದ್ದೇನೆ. ಆದ್ದರಿಂದ ಎಲೈ ರಾಜೇಂದ್ರನೇ! ಆ ಉತ್ತಮವಾದ ಮಾಹೇಶ್ವರ ಧನುಸ್ಸನ್ನು ತೋರಿಸು. ಅದನ್ನು ನೋಡಿದಮೇಲೆ ಅಯೋಧ್ಯೆಗೆ ಹೋಗಿ ತಮ್ಮ ತಂದೆಯನ್ನು ನೋಡಬೇಕೆಂದಿದ್ದಾನೆ.

ಇತ್ಯುಕ್ತೋ ಮುನಿನಾ ರಾಜಾ ಪೂಜಾರ್ಹಾವಿತಿ ಪೂಜಯಾ । ಪೂಜಯಾಮಾಸ ಧರ್ಮಜ್ಞೋ ವಿಧಿದೃಷ್ಟೇನ ಕರ್ಮಣಾ ॥ ೧೭ ॥

ತತಃ ಸಂಪ್ರೇಷಯಾಮಾಸ ಮಂತ್ರಿಣಂ ಬುದ್ಧಿಮತ್ತರಂ ।

॥ ಜನಕ ಉವಾಚ ॥

ಶೀಘ್ರಮಾನಯ ವಿಶ್ವೇಶಚಾಪಂ ರಾಮಾಯ ದರ್ಶಯ ॥ ೧೮ ॥

ತತೋ ಗತೇ ಮಂತ್ರಿವರೇ ರಾಜಾ ಕೌಶಿಕಮಬ್ರವೀತ್ । ಯದಿ ರಾಮೋ ಧನುರ್ಧೃತ್ವಾ ಕೋಟ್ಯಾಮಾರೋಪಯೇದ್ಗುಣಂ ॥ ೧೯ ॥

ತದಾ ಮಯಾತ್ಮಜಾ ಸೀತಾ ದೀಯತೇ ರಾಘವಾಯ ಹಿ । ತಥೇತಿ ಕೌಶಿಕೋಪ್ಯಾಹ ರಾಮಂ ಸಂವೀಕ್ಷ್ಯ ಸಸ್ಮಿತಂ ॥ ೨೦ ॥

---

೧೭. ಇವರ ವಿಷಯವನ್ನು ಆ ಜನಕನು ಕೇಳಿದೊಡನೆಯೇ ಇವರು ಪೂಜೆಗೆ ಯೋಗ್ಯರು ಎಂದು ತಿಳಿದುಬಂದುದರಿಂದಲೂ ಧರ್ಮವನ್ನು ಬಲ್ಲವನಾದುದರಿಂದಲೂ ಶಾಸ್ತ್ರರೀತಿಯಿಂದ ಅವರನ್ನು ಪೂಜಿಸಿದನು ಅನಂತರ ಬುದ್ಧಿವಂತನಾದ ಮಂತ್ರಿಯನ್ನು ಕರೆದು ಇಂತೆಂದು ಹೇಳಿ ಕಳುಹಿಸಿದನು.

೧೮. ಜನಕನು ಹೇಳಿದನು–ಎಲೈ ಮಂತ್ರಿಯೇ ! ಆ ಮಹೇಶ್ವರನ ಧನುಸ್ಸನ್ನು ಬೇಗ ತೆಗೆದುಕೊಂಡು ಬಾ. ಈ ರಾಮನಿಗೆ ತೋರಿಸು. ಎನ್ನಲು ಮಂತ್ರಿಯು ಅತ್ತಹೋದನು. ಮಂತ್ರಿಯು ಧನುಸ್ಸನ್ನು ತರಲು ಅತ್ತ ಹೋದಮೇಲೆ ಇತ್ತ ಜನಕನು ಕೌಶಿಕನನ್ನು ಕುರಿತು ಇಂತೆಂದನು.

೧೯–೨೦. ಎಲೈ ಕೌಶಿಕನೆ ! ಈ ರಾಮನು ಧನುಸ್ಸನ್ನು ಬಗ್ಗಿಸಿ ಅದರ ಹೆದೆಯನ್ನು ಏರಿಸಿದರೆ ಆಗ ಆ ರಾಮನಿಗೆ ನನ್ನ ಮಗಳಾದ ಸೀತೆಯನ್ನು ಕೊಡುತ್ತೇನೆ ಎಂದನು. ಆದಕ್ಕೆ ಕೌಶಿಕನು ರಾಮನ ಮುಖವನ್ನು ನೋಡಿ ನಗುತ್ತ ಹಾಗೆಯೇ ಆಗಲಿ ಎಂದು ಹೇಳಿದನು.

ಶೀಘ್ರಂ ದರ್ಶಯ ಚಾಪಾಗ್ರ್ಯಂ ರಾಮಾಯಾಮಿತತೇಜಸೇ । ಏವಂ ಬ್ರುವತಿ ಮೌನೀಶ ಆಗತಾಶ್ಚಾಪವಾಹಕಾಃ ॥ ೨೧ ॥

ಚಾಪಂ ಗೃಹೀತ್ವಾ ಬಲಿನಃ ಪಂಚಸಾಹಸ್ರಸಂಖ್ಯಕಾಃ । ಘಂಟಾಶತಸಮಾಯುಕ್ತಂ ಮಣಿವಜ್ರಾದಿಭೂಷಿತಂ ॥ ೨೨ ॥

ದರ್ಶಯಾಮಾಸ ರಾಮಾಯ ಮಂತ್ರೀ ಮಂತ್ರಯತಾಂ ವರಃ । ದೃಷ್ಟ್ವಾ ರಾಮಃ ಪ್ರಹೃಷ್ಟಾತ್ಮಾ ಬಧ್ವಾ ಪರಿಕರಂ ದೃಢಂ॥ ೨೩ ॥

ಗೃಹೀತ್ವಾ ವಾಮಹಸ್ತೇನ ಲೀಲಯಾ ತೋಲಯನ್ ಧನುಃ । ಆರೋಪಯಾಮಾಸ ಗುಣಂ ಪಶ್ಯತ್ಸ್ವಖಿಲರಾಜಸು ॥ ೨೪ ॥

---

೨೧ ಅನಂತರ ಎಲೈ ಜನಕನೆ ! ಶೂರನಾದ ರಾಮನಿಗೆ ಬೇಗ ನಿನ್ನ ಧನುಸ್ಸನ್ನು ತೋರಿಸು. ಎನ್ನುವಷ್ಟರಲ್ಲಿಯೇ ಆ ಧನುಸ್ಸನ್ನು ಹೊತ್ತುಕೊಂಡು ಆಳುಗಳು ಅಲ್ಲಿಗೆ ತಂದೇ ಬಿಟ್ಟರು.

೨೨. ನೂರಾರು ಕಿರುಘಂಟೆಗಳಿಂದಲೂ ಮಣಿವಜ್ರ ಮುಂತಾದುವುಗಳಿಂದಲೂ ಅಲಂಕೃತವಾದ ಆ ಧನುಸ್ಸನ್ನು ಬಲಿಷ್ಠರಾದ ಐದುಸಾವಿರ ಜನರು ಹೊತ್ತುಕೊಂಡು ಬಂದರು.

೨೩–೨೪. ಮಂತ್ರಿಯು ಆ ಧನುಸ್ಸನ್ನು ರಾಮನಿಗೆ ತೋರಿಸಿದನು. ರಾಮನು ಆ ಧನುಸ್ಸನ್ನು ನೋಡಿ ಸೊಂಟಕ್ಕೆ ಬಲವಾಗಿ ಬಟ್ಟೆಯನ್ನು ಕಟ್ಟಿಕೊಂಡು ಆ ಧನುಸ್ಸನ್ನು ಎಡಗೈಯಲ್ಲಿ ಹಿಡಿದು ಬಹು ಸುಲಭವಾಗಿ ಅಲ್ಲಾಡಿಸುತ್ತ ಎಲ್ಲಾ ರಾಜರೂ ನೋಡುತ್ತಿದ್ದಂತೆಯೇ ಅದರ ಹೆದೆಯನ್ನು ಏರಿಸಿದನು.

ಈಷದಾಕರ್ಷಯಾಮಾಸ ಪಾಣಿನಾ ದಕ್ಷಿಣೇನ ಸಃ । ಬಭಂಜಾಖಿಲಹೃತ್ಸಾರೋ ದಿಶಃ ಶಬ್ದೇನ ಪೂರಯನ್ ॥ ೨೫ ॥

ದಿಶಶ್ಚ ವಿದಿಶಶ್ಚೈವ ಸ್ವರ್ಗಂ ಮರ್ತ್ಯಂ ರಸಾತಲಂ । ತದುದ್ಭುತಮಭೂತ್ತತ್ರ ದೇವಾನಾಂ ದಿವಿ ಪಶ್ಯತಾಂ ॥ ೨೬ ॥

ಆಚ್ಛಾದಯಂತಃ ಕುಸುಮೈಃ ದೇವಾಃ ಸ್ತುತಿಭಿರೀಡಿರೇ । ದೇವದುಂದುಭಯೋ ನೇದುರ್ನನೃತುಶ್ಚಾಪ್ಸರೋಗಣಾಃ ॥ ೨೭ ॥

ದ್ವಿಧಾ ಭಗ್ನಂ ಧನುರ್ದೃಷ್ಟ್ವಾ ರಾಜಾಲಿಂಗ್ಯ ರಘೂದ್ವಹಂ । ವಿಸ್ಮಯಂ ಲೇಭಿರೇ ಸೀತಾಮಾತರೋಂತಃಪುರಾಜಿರೇ ॥ ೨೮ ॥

---

೨೫. ಅನಂತರ ಆ ಬಿಲ್ಲಿನ ಹೆದೆಯನ್ನು ಬಲಗೈಯ್ಯಿಂದ ಮೆಲ್ಲಗೆ ಎಳೆದನು. ಆಗ ಎಲ್ಲರನ್ನೂ ಸೋಲಿಸಿ ಎಲ್ಲರಿಗೂ ಸಾರಭೂತವಾಗಿದ್ದ ಆ ಧನುಸ್ಸು ಮುರಿದುಹೋಯಿತು. ಅದರ ಧ್ವನಿಯಿಂದ ಎಲ್ಲಾ ದಿಕ್ಕುಗಳೂ ತುಂಬಿಕೊಂಡುವು.

೨೬. ದಿಕ್ಕುಗಳೂ, ವಿದಿಕ್ಕುಗಳೂ, ಸ್ವರ್ಗ, ಮರ್ತ್ಯ ಪಾತಾಳಗಳೂ, ರಸಾತಲವೂ ಎಲ್ಲವೂ ಕೂಡ ಆ ಧ್ವನಿಯಿಂದ ತುಂಬಿಕೊಂಡಿತು. ಇದು ಎಲ್ಲರಿಗೂ ಬಹುವಾದ ಆನಂದವನ್ನುಂಟುಮಾಡಿತು. ಇದನ್ನು ನೋಡುತ್ತ ಅಂತರಿಕ್ಷದಲ್ಲಿ ನಿಂತಿದ್ದ ದೇವತೆಗಳು ಬಹುವಾಗಿ ಆಶ್ಚರ್ಯಪಟ್ಟರು.

೨೭. ಆಗ ಆ ದೇವತೆಗಳು ಆ ರಾಮನು ಮುಳುಗಿಹೋಗುವಂತೆ ಅವನಮೇಲೆ ಹೂಮಳೆಯನ್ನು ಸುರಿಸಿದರು. ಅನಂತರ ಬಹುವಾಗಿ ಸ್ತುತಿಸಿದರು. ದೇವ ದುಂದುಭಿಗಳು ಮೊಳಗಿದುವು. ಅಪ್ಸರ ಸ್ತ್ರೀಯರು ಕುಣಿದರು.

೨೮. ಆ ಜನಕನು ಅಂತಹ ಉತ್ತಮವಾದ ಶಿವಧನಸ್ಸು ಎರಡು ಭಾಗವಾದುದನ್ನು ನೋಡಿ ಸಂತೋಷದಿಂದ ಆ ರಾಮನನ್ನು ಆಲಿಂಗಿಸಿಕೊಂಡನು. ಅಂತಃಪುರದಲ್ಲಿದ್ದ ಸೀತೆಯ ತಾಯಿಯರೆಲ್ಲ ಬಹುವಾಗಿ ಆಶ್ಚರ್ಯಪಟ್ಟರು.

ಸೀತಾ ಸ್ವರ್ಣಮಯೀಂ ಮಾಲಾಂ ಗೃಹೀತ್ವಾ ದಕ್ಷಿಣೇ ಕರೇ | ಸ್ಮಿತವಕ್ತ್ರಾ ಸ್ವರ್ಣವರ್ಣಾ ಸರ್ವಾಭರಣಭೂಷಿತಾ ॥ ೨೯ ॥

ಮುಕ್ತಾಹಾರೈಃ ಕರ್ಣಪತ್ರೈಃ ಕ್ವಣಚ್ಚರಣನೂಪುರಾ | ದುಕೂಲಪರಿಸಂವೀತಾ ವಸ್ತ್ರಾಂತರ್ವ್ಯಂಜಿತಸ್ತನೀ ॥ ೩೦ ॥

ರಾಮಸ್ಯೋಪರಿ ನಿಕ್ಷಿಪ್ಯ ಸ್ಮಯಮಾನಾ ಮುದಂ ಯಯೌ | ತತೋ ಮುಮುದಿರೇ ಸರ್ವೇ ರಾಜದಾರಾಃ ಸ್ವಲಂಕೃತಂ ॥ ೩೧ ॥

ಗವಾಕ್ಷಜಾಲರಂಧ್ರೇಭ್ಯೋ ದೃಷ್ಟ್ವಾ ಲೋಕವಿಮೋಹನಂ | ತತೋಬ್ರವೀನ್ಮುನಿಂ ರಾಜಾ ಸರ್ವಶಾಸ್ತ್ರವಿಶಾರದಃ ॥ ೩೨ ॥

೨೯-೩೦. ಆಗ ಸೀತೆಯು ಬಲಗೈಯ್ಯಲ್ಲಿ ಚಿನ್ನದ ಹೂಮಾಲೆಯನ್ನು ಹಿಡಿದುಕೊಂಡು ಬಂದಳು. ಹುಸಿನಗೆ ನಗುತ್ತಿದ್ದಳು ಚಿನ್ನದ ಬಣ್ಣಕ್ಕೆ ಇದ್ದಳು. ಎಲ್ಲಾ ಆಭರಣಗಳನ್ನೂ ತೊಟ್ಟಿದ್ದಳು. ಮುತ್ತಿನಹಾರಗಳನ್ನೂ ಹಾಕಿಕೊಂಡಿದ್ದಳು. ಕಿವಿಗೆ ಓಲೆಗಳನ್ನೂ ಅಳವಡಿಸಿಕೊಂಡಿದ್ದಳು. ಕಾಲಿಗೆ ಸದ್ದಾಗುವಂತಹ ಕಾಲುಕಡಗಗಳನ್ನು ಧರಿಸಿಕೊಂಡಿದ್ದಳು. ದುಕೂಲವೆಂಬ ರೇಷ್ಮೆಯಬಟ್ಟೆಯನ್ನುಟ್ಟಿದ್ದಳು. ಈ ದುಕೂಲದೊಳಗೆ ಸ್ತನಗಳು ಎದ್ದು ಕಾಣುತ್ತಿದ್ದುವು.

೩೧-೩೨. ಆ ಮಾಲೆಯನ್ನು ಶ್ರೀರಾಮನ ಕತ್ತಿಗೆಹಾಕಿ ನಗುತ್ತಾ ಸಂತೋಷಪಟ್ಟಳು. ಆಗ ಆ ರಾಜನ ಹೆಂಡತಿಯರೆಲ್ಲಾ ಗವಾಕ್ಷದ ಸಂದಿನಿಂದ ಆ ರಾಮನನ್ನು ನೋಡಿ ಇವನೆಷ್ಟು ಶೂರನೂ, ಸುಂದರನೂ ಆಗಿದ್ದಾನೆ. ಎಂದು ಹೇಳುತ್ತಾ ಸಂತೊಷಪಟ್ಟರು ಅನಂತರ ಶಾಸ್ತ್ರಗಳ ವಿಷಯವನ್ನು ಬಲ್ಲ ಜನಕನು ಕೌಶಿಕನನ್ನು ಕುರಿತು ಇಂತೆಂದನು.

ಭೋ ಕೌಶಿಕ ಮುನಿಶ್ರೇಷ್ಠ ಪತ್ರಂ ಪ್ರೇಷಯ ಸತ್ವರಂ । ರಾಜಾ ದಶರಥಃ ಶೀಘ್ರಮಾಗಚ್ಛತು ಸಪುತ್ರಕಃ ॥ ೩೩ ॥

ವಿವಾಹಾರ್ಥಂ ಕುಮಾರಾಣಾಂ ಸದಾರಃ ಸಹ ಮಂತ್ರಿಭಿಃ । ತಥೇತಿ ಪ್ರೇಷಯಾಮಾಸ ದೂತಾಂಸ್ತ್ವರಿತವಿಕ್ರಮಾನ್ ॥ ೩೪ ॥

ತೇ ಗತ್ವಾ ರಾಜಶಾರ್ದೂಲಂ ರಾಮಶ್ರೇಯೋ ನ್ಯವೇದಯನ್ । ಶ್ರುತ್ವಾ ರಾಮಕೃತಂ ರಾಜಾ ಹರ್ಷೇಣ ಮಹತಾ ಪ್ಲುತಃ ॥ ೩೫ ॥

ಮಿಥಿಲಾಗಮನಾರ್ಥಾಯ ತ್ವರಯಾಮಾಸ ಮಂತ್ರಿಣಃ । ಗಚ್ಛಂತು ಮಿಥಿಲಾಂ ಸರ್ವೇ ಗಜಾಶ್ವರಥಪತ್ತಯಃ ॥ ೩೬ ॥

---

೩೩. ಎಲೈ ಮುನಿಶ್ರೇಷ್ಠನಾದ ಕೌಶಿಕನೆ ! ಬೇಗನೆ ಪತ್ರವನ್ನು ಬರೆದು ಕಳುಹಿಸು. ಆ ಕಾಗದದಂತೆ ರಾಜನಾದ ದಶರಥನು ಉಳಿದ ಮಕ್ಕಳನ್ನೂ ಕರೆದುಕೊಂಡು ಬೇಗನೆ ಬರಲಿ.

೩೪. ಮದುವೆಗೋಸ್ಕರವಾಗಿ ಮಂತ್ರಿಗಳನ್ನೂ ತನ್ನ ಹೆಂಡತಿಯರನ್ನೂ ಜೊತೆಯಲ್ಲಿ ಕರೆದುಕೊಂಡು ಬರಲಿ ಎನ್ನಲು ಹಾಗೆಯೇ ಆಗಲೆಂದು ಒಡನೆಯೇ ಜಾಗ್ರತೆಯಾಗಿ ಹೋಗುವಂತಹ ದೂತರನ್ನು ಕರೆಸಿ ಅವರ ಕೈಯ್ಯಲ್ಲಿ ಕಾಗದವನ್ನು ಕೊಟ್ಟು ಕಳುಹಿಸಿದನು.

೩೫. ಆ ದೂತರು ಬೇಗನೆ ಅಯೋಧ್ಯೆಗೆ ಹೋಗಿ ರಾಮನ ಶ್ರೇಯಸ್ಸಿನ ವಿಷಯವಾದ ಈ ಸಂಗತಿಯನ್ನು ದಶರಥನಿಗೆ ತಿಳಿಸಿದರು. ರಾಮನು ಮಾಡಿದ ಈ ಶಿವಧನುರ್ಭಂಗವನ್ನು ಕೇಳಿದ ದಶರಥನು ಬಹು ಸಂತೋಷಪಟ್ಟನು.

೩೬. ಮಂತ್ರಿಗಳನ್ನು ಕರೆಸಿ ಮಿಥಿಲೆಗೆ ಹೋಗುವುದಕ್ಕೋಸ್ಕರ ಅವರನ್ನು ಅವಸರಪಡಿಸಿದನು. ಎಲೈ ಮಂತ್ರಿಗಳೇ ! ಆನೆ ಕುದುರೆ ರಥ ಕಾಲಾಳು ಎಲ್ಲರೂ ಮಿಥಿಲೆಗೆ ಹೋಗಬೇಕು.

ರಥಮಾನಯ ಮೇ ಶೀಘ್ರಂ ಗಚ್ಛಾಮ್ಯದ್ಯೈವ ಮಾ ಚಿರಂ। ವಸಿಷ್ಠಸ್ತ್ವಗ್ರತೋ ಯಾತು ಸದಾರಃ ಸಹಿತೋಗ್ನಿಭಿಃ ॥ ೩೭ ॥
ರಾಮಮಾತೄಃ ಸಮಾದಾಯ ಮುನಿರ್ಮೇ ಭಗವಾನ್ ಗುರುಃ। ಏವಂ ಪ್ರಸ್ಥಾಪ್ಯ ಸಕಲಂ ರಾಜರ್ಷಿರ್ವಿಪುಲಂ ರಥಂ ॥ ೩೮ ॥
ಮಹತ್ಯಾ ಸೇನಯಾ ಸಾರ್ಧಮಾರುಹ್ಯ ತ್ವರಿತೋ ಯಯೌ। ಆಗತಂ ರಾಘವಂ ಶ್ರುತ್ವಾ ರಾಜಾ ಹರ್ಷಸಮಾಕುಲಃ ॥ ೩೯ ॥
ಪ್ರತ್ಯುಜ್ಜಗಾಮ ಜನಕಃ ಶತಾನಂದಪುರೋಧಸಾ। ಯಥೋಕ್ತಪೂಜಯಾ ಪೂಜ್ಯಂ ಪೂಜಯಾಮಾಸ ಸತ್ಕೃತಂ ॥ ೪೦ ॥

---

೩೭. ನನ್ನ ರಥವನ್ನು ತರಿಸು. ನಾನು ಈಗಲೇ ಮಿಥಿಲೆಗೆ ಹೋಗಬೇಕು. ತಡವು ಮಾಡಕೂಡದು. ವಸಿಷ್ಠನು ಅಗ್ನಿಯನ್ನು ತೆಗೆದುಕೊಂಡು ಮುಂದೆ ಮಿಥಿಲೆಗೆ ಹೊರಡಲಿ.

೩೮. ನನ್ನ ಗುರುವಾದ ಆ ವಸಿಷ್ಠನು ರಾಮನ ತಾಯಿಯರನ್ನೂ ಕರೆದುಕೊಂಡು ಮುಂದೆ ಬೇಗ ಹೋಗಲಿ. ಎಂದು ರಾಜರ್ಷಿಯಾದ ದಶರಥನು ಎಲ್ಲರನ್ನೂ ರಥದಲ್ಲಿ ಕುಳ್ಳಿರಿಸಿ ಕಳುಹಿಸಿದನು.

೩೯. ತಾನೂ ಕೂಡ ಬಹುವಾದ ಸೇನೆಯನ್ನು ಕರೆದುಕೊಂಡು ರಥವನ್ನು ಹತ್ತಿ ಹೊರಟನು. ಎಲ್ಲರೂ ಹೊರಟು ಮಿಥಿಲೆಯನ್ನು ಹೊಂದಲು ಅದನ್ನು ಕೇಳಿ ಜನಕನು ಬಹು ಸಂತೋಷಪಟ್ಟನು.

೪೦. ಆ ಜನಕನು ಪುರೋಹಿತನಾದ ಶತಾನಂದನನ್ನು ಮುಂದುಮಾಡಿಕೊಂಡು ಹೋಗಿ ಆ ದಶರಥನನ್ನು ಎದುರುಗೊಂಡನು. ಶಾಸ್ತ್ರೋಕ್ತವಾಗಿ ಆತನನ್ನು ಜನಕನು ಶತಾನಂದನು ಹೇಳಿದಂತೆ ಪೂಜಿಸಿದನು.

ರಾಮಸ್ತು ಲಕ್ಷ್ಮಣೇನಾಶು ವವಂದೇ ಚರಣೌ ಪಿತುಃ । ತತೋ ಹೃಷ್ಟೋ ದಶರಥೋ ರಾಮಂ ವಚನಮಬ್ರವೀತ್ ॥ ೪೧ ॥
ದಿಷ್ಟ್ಯಾ ಪಶ್ಯಾಮಿ ತೇ ರಾಮಂ ಮುಖಂ ಫುಲ್ಲಾಂಬುಜೋಪಮಂ । ಮುನೇರನುಗ್ರಹಾತ್ಸರ್ವಂ ಸಂಪನ್ನಂ ಮಮ ಶೋಭನಂ॥೪೨
ಇತ್ಯುಕ್ತ್ವಾಘ್ರಾಯ ಮೂರ್ಧಾನಮಾಲಿಂಗ್ಯ ಚ ಪುನಃ ಪುನಃ ಹರ್ಷೇಣ ಮಹತಾವಿಷ್ಟೋ ಬ್ರಹ್ಮಾನಂದಂ ಗತೋ ಯಥಾ॥೪೩॥
ತತೋ ಜನಕರಾಜೇನ ಮಂದಿರೇ ಸನ್ನಿವೇಶಿತಃ । ಶೋಭನೇ ಸರ್ವಭೋಗಾಢ್ಯೇ ಸದಾರಃ ಸಸುತಃ ಸುಖೀ ॥ ೪೪ ॥

---

೪೧. ರಾಮನೂ ಲಕ್ಷ್ಮಣನೂ ಹೋಗಿ ತಂದೆಯ ಪಾದಗಳಿಗೆ ನಮಸ್ಕರಿಸಿದರು. ಆಗ ದಶರಥನು ಸಂತೋಷಗೊಂಡು ರಾಮನನು ಕುರಿತು ಇಂತೆಂದನು.

೪೨. ಎಲೈ ರಾಮನೆ! ಅರಳಿರುವ ಕಮಲದಂತಿರುವ ನಿನ್ನ ಮುಖವನ್ನು ನೋಡಿ ಬಹು ಸಂತೋಷವಾಯಿತು. ಈ ಕೌಶಿಕಮುನಿಯ ಅನುಗ್ರಹದಿಂದ ನನಗೆ ಬಹುವಾದ ಮಂಗಳಗಳುಂಟಾದುವು.

೪೩. ಹೀಗೆಂದು ಹೇಳಿ ತಲೆಯನ್ನು ಮೂಸಿನೋಡಿ ಮತ್ತೆ ಮತ್ತೆ ಆ ರಾಮನನ್ನು ಆಲಿಂಗಿಸಿಕೊಂಡು ಬ್ರಹ್ಮಾನಂದವನ್ನು ಹೊಂದಿದ ಯತಿಯಂತೆ ಬಹುವಾದ ಹರ್ಷದಿಂದ ಕೂಡಿಕೊಂಡನು.

೪೪. ಆಮೇಲೆ ಜನಕನು ಮನೋರಂಜಕವಾದ, ಎಲ್ಲಾ ಕಡೆಯಲ್ಲಿಯೂ ಹರ್ಷದಾಯಕವಾದ, ಮಂಗಳಕರವಾದ, ಎಲ್ಲಾ ಪದಾರ್ಥಗಳೂ ಸಿದ್ಧವಾಗಿರುವ ಒಂದು ಮನೆಯಲ್ಲಿ ಆ ದಶರಥನನ್ನೂ ಅವನ ಹೆಂಡಿರು ಮಕ್ಕಳನ್ನೂ ಇಳಿಸಿದನು.

ತತಃ ಶುಭದಿನೇ ಲಗ್ನೇ ಸುಮುಹೂರ್ತೇ ರಘೂತ್ತಮಂ । ಆನಯಾಮಾಸ ಧರ್ಮಜ್ಞೋ ರಾಮಂ ಸಭ್ರಾತೃಕಂ ತದಾ ॥ ೪೫ ॥

ರತ್ನಸ್ತಂಭಸುವಿಸ್ತಾರೇ ಸುವಿತಾನೇ ಸುತೋರಣೇ । ಮಂಟಪೇ ಸರ್ವಶೋಭಾಢ್ಯೇ ಮುಕ್ತಾಪುಷ್ಪಫಲಾನ್ವಿತೇ ॥ ೪೬ ॥

ವೇದವಿದ್ಭಿಃ ಸುಸಂಬಾಧೇ ಬ್ರಾಹ್ಮಣೈಃ ಸ್ವರ್ಣಭೂಷಿತೈಃ । ಸುವಾಸಿನೀಭಿಃ ಪರಿತೋ ನಿಷ್ಕಕಂಠೀಭಿರಾವೃತೇ ॥ ೪೭ ॥

ಭೇರೀದುಂದುಭಿನಿರ್ಘೋಷೈರ್ಗೀತನೃತ್ಯೈಃ ಸಮಾಕುಲೇ । ದಿವ್ಯರತ್ನಾಂಚಿತೇ ಸ್ವರ್ಣಪೀಠೇ ರಾಮಂ ನ್ಯವೇಶಯತ್ ॥ ೪೮ ॥

---

೪೫. ಅನಂತರ ಒಂದು ಶುಭದಿನದ ಶುಭಲಗ್ನದಲ್ಲಿ ಶುಭಮುಹೂರ್ತದಲ್ಲಿ ಆ ರಾಮನನ್ನೂ ಅವನ ತಮ್ಮಂದಿರನ್ನೂ ಧರ್ಮಜ್ಞನಾದ ಜನಕನು ಕರೆಸಿದನು.

೪೬–೪೮. ತನ್ನ ಮನೆಯಲ್ಲಿ ಬಂದು ದಿವ್ಯವಾದ ರತ್ನಗಳನ್ನು ಕೆತ್ತಿರುವ ಪೀಠದಲ್ಲಿ ಆ ರಾಮನನ್ನು ಕೂರಿಸಿದನು. ಆ ಪೀಠವು ರತ್ನದ ಕಂಬಗಳಿಂದ ವಿಸ್ತಾರವಾಗಿ ನಿರ್ಮಿತವಾದ ಮಂಟಪದಲ್ಲಿ ಇಡಲ್ಪಟ್ಟಿದ್ದಿತು. ಮೇಲಕ್ಕೆಲ್ಲಾ ಮೇಲ್ಕಟ್ಟನ್ನು ಕಟ್ಟಿದ್ದರು. ಬಾಗಿಲುಗಳನ್ನು ಅಂದವಾಗಿಟ್ಟು ಅವಕ್ಕೆಲ್ಲಾ ತೋರಣವನ್ನು ಕಟ್ಟಿದ್ದರು. ಆ ಮಂಟಪದ ಸುತ್ತಲೂ ಚಿನ್ನದ ಸರವನ್ನು ಹಾಕಿಕೊಂಡಿದ್ದ ಮುತ್ತೈದೆಯರೂ ವೇದವಿದ್ವಾಂಸರಾದ ಬ್ರಾಹ್ಮಣರೂ ಕುಳಿತಿದ್ದರು. ಭೇರಿಗಳು ಮದ್ದಲೆ ಮುಂತಾದುವುಗಳು ಧ್ವನಿಮಾಡುತ್ತಿದ್ದುವು. ಸಂಗೀತವು ನಡೆಯುತ್ತಿದ್ದಿತು. ನರ್ತನವೂ ಕೂಡ ಜರುಗುತ್ತಿದ್ದಿತು. ಇಂತಹ ಜಾಗದಲ್ಲಿ ಆ ರಾಮನನ್ನು ಕೂರಿಸಿದರು.

ವಸಿಷ್ಠಂ ಕೌಶಿಕಂ ಚೈವ ಶತಾನಂದಃ ಪುರೋಹಿತಃ । ಯಥಾಕ್ರಮಂ ಪೂಜಯಿತ್ವಾ ರಾಮಸ್ಯೋಭಯಪಾರ್ಶ್ವಯೋಃ ॥ ೪೯ ॥
ಸ್ಥಾಪಯಿತ್ವಾ ಸ ತತ್ರಾಗ್ನಿಂ ಜ್ವಾಲಯಿತ್ವಾ ಯಥಾವಿಧಿ । ಸೀತಾಮಾನೀಯ ಶೋಭಾಢ್ಯಾಂ ನಾನಾರತ್ನವಿಭೂಷಿತಾಂ ॥ ೫೦ ॥
ಸಭಾರ್ಯೋ ಜನಕಃ ಪ್ರಾಯಾದ್ರಾಮಂ ರಾಜೀವಲೋಚನಂ । ಪಾದೌ ಪ್ರಕ್ಷಾಳ್ಯ ವಿಧಿವತ್ತದಪೋ ಮೂರ್ಧ್ನ್ಯಧಾರಯತ್ ೫೧ ॥
ಯಾ ಧೃತಾ ಮೂರ್ಧ್ನಿ ಶರ್ವೇಣ ಬ್ರಹ್ಮಣಾ ಮುನಿಭಿಃ ಸದಾ । ತತಃ ಸೀತಾಂ ಕರೇ ಧೃತ್ವಾ ಸಾಕ್ಷತೋದಕಪೂರ್ವಕಂ ॥ ೫೨ ॥

---

೪೯. ಪುರೋಹಿತನಾದ ಶತಾನಂದನು ವಸಿಷ್ಠನನ್ನೂ ಕೌಶಿಕನನ್ನೂ ಪೂಜಿಸಿದನು. ಅವರಿಬ್ಬರೂ ರಾಮನ ಎಡಬಲಗಳಲ್ಲಿ ಕುಳಿತಿದ್ದರು.

೫೦. ಶಾಸ್ತ್ರೋಕ್ತವಾಗಿ ಅಗ್ನಿಪ್ರತಿಷ್ಠೆಯನ್ನು ಮಾಡಿ ಅದನ್ನು ಹತ್ತಿಸಿದರು. ಅನಂತರ ಅನೇಕ ಬಗೆಯ ಒಡವೆಗಳನ್ನು ಹಾಕಿಕೊಂಡಿರುವ ಸುಂದರಿಯಾದ ಸೀತೆಯನ್ನು ಜನಕನೂ ಅವನ ಹೆಂಡತಿಯೂ ಕರೆದುಕೊಂಡು ಬಂದರು.

೫೧. ಅನಂತರ ಜನಕನು ತನ್ನ ಹೆಂಡತಿಯೊಡನೆ ರಾಮನ ಬಳಿಗೆ ಹೋದನು. ಅಲ್ಲಿ ರಾಮನ ಪಾದಗಳನ್ನು ತೊಳೆದು ಆ ನೀರನ್ನು ತಲೆಯಮೇಲೆ ಪ್ರೋಕ್ಷಿಸಿಕೊಂಡನು.

೫೨. ಆ ಸ್ವಾಮಿಯ ಯಾವ ಪಾದಗಳ ನೀರನ್ನು ಹಿಂದೆ ಬ್ರಹ್ಮನೂ, ಶಿವನೂ, ಮುನಿಗಳೂ, ಪ್ರೋಕ್ಷಿಸಿಕೊಂಡಿದ್ದರೋ ಅದನ್ನೇ ಈಗ ಜನಕನು ತಲೆಗೆ ಪ್ರೋಕ್ಷಿಸಿಕೊಂಡನು. ಅನಂತರ ಸೀತೆಯನ್ನು ಕೈಯ್ಯಲ್ಲಿ ಹಿಡಿದುಕೊಂಡು ಅಕ್ಷತೆಯನ್ನೂ ತೆಗೆದು ಕೊಂಡನು.

ರಾಮಾಯ ಪ್ರದದೌ ಪ್ರೀತ್ಯಾ ಪಾಣಿಗ್ರಹವಿಧಾನತಃ । ಸೀತಾ ಕಮಲಪತ್ರಾಕ್ಷೀ ಸ್ವರ್ಣಮುಕ್ತಾದಿಭೂಷಿತಾ ॥ ೫೩ ॥

ದೀಯತೇ ಮೇ ಸುತಾ ತುಭ್ಯಂ ಪ್ರೀತೋ ಭವ ರಘೂತ್ತಮ । ಇತಿ ಪ್ರೀತೇನ ಮನಸಾ ಸೀತಾಂ ರಾಮಕರೇಽರ್ಪಯನ್ ॥ ೫೪ ॥

ಮುಮೋದ ಜನಕೋ ಲಕ್ಷ್ಮೀಂ ಕ್ಷೀರಾಬ್ಧಿರಿವ ವಿಷ್ಣವೇ । ಊರ್ಮಿಲಾಂ ಚೌರಸೀಂ ಕನ್ಯಾಂ ಲಕ್ಷ್ಮಣಾಯ ದದೌ ಮುದಾ ॥ ೫೫ ॥

ತಥೈವ ಶ್ರುತಕೀರ್ತಿಂ ಚ ಮಾಂಡವೀಂ ಭ್ರಾತೃಕನ್ಯಕೇ । ಭರತಾಯ ದದಾವೇಕಾಂ ಶತ್ರುಘ್ನಾಯಾಪರಾಂ ದದೌ ॥ ೫೬ ॥

೫೩-೫೫. ಅನಂತರ ಪ್ರೀತಿಯಿಂದ ಪಾಣಿಗ್ರಹಣ ವಿಧಿಯಿಂದ ಆ ಸೀತೆಯನ್ನು ರಾಮನಿಗೆ ಕೊಟ್ಟನು. ಎಲೈ ರಾಮನೆ! ಕಮಲಾಕ್ಷಿಯಾದ ಸೀತೆಯನ್ನು ಆಭರಣಗಳಿಂದ ಅಲಂಕರಿಸಿ ನಿನಗೆ ಕೊಡುತ್ತೇನೆ. ಈಕೆಯು ನನ್ನ ಮಗಳು. ಎಲೈ ರಘೂತ್ತಮನೆ! ಸಂತೋಷವನ್ನು ಹೊಂದು. ಹೀಗೆಂದು ಹೇಳುತ್ತ ಜನಕನು ಆ ಸೀತೆಯನ್ನು ರಾಮನ ಹಸ್ತದಲ್ಲಿಟ್ಟು, ಕ್ಷೀರಸಮುದ್ರರಾಜನು ಮಗಳನ್ನು (ಲಕ್ಷ್ಮಿಯನ್ನು) ವಿಷ್ಣುವಿಗೆ ಕೊಟ್ಟು ಸಂತೋಷಗೊಂಡಂತೆ ಸಂತೋಷಗೊಂಡನು. ಮತ್ತು ತನ್ನ ಸ್ವಂತಮಗಳಾದ ಊರ್ಮಿಳೆಯನ್ನು ಲಕ್ಷ್ಮಣನಿಗೆ ಕೊಟ್ಟು ಸಂತೋಷಗೊಂಡನು.

೫೬. ಅಂತೆಯೇ ತಮ್ಮನ ಮಕ್ಕಳಾದ ಶ್ರುತಕೀರ್ತಿ, ಮಾಂಡವಿ ಎಂಬವರನ್ನು ಭರತ ಶತ್ರುಘ್ನರಿಗೆ ಕೊಟ್ಟನು.

ಚತ್ವಾರೋ ದಾರಸಂಪನ್ನಾ ಭ್ರಾತರಃ ಶುಭಲಕ್ಷಣಾಃ । ವಿರೇಜುಃ ಪ್ರಭಯಾ ಸರ್ವೇ ಲೋಕಪಾಲಾ ಇವಾಪರೇ ॥ ೫೭ ॥

ತತೋಽಬ್ರವೀದ್ವಸಿಷ್ಠಾಯ ವಿಶ್ವಾಮಿತ್ರಾಯ ಮೈಥಿಲಃ । ಜನಕಃ ಸ್ವಸುತೋದಂತಂ ನಾರದೇನಾಭಿಭಾಷಿತಂ ॥ ೫೮ ॥

ಯಜ್ಞಭೂಮಿವಿಶುದ್ಧ್ಯರ್ಥಂ ಕರ್ಷತೋ ಲಾಂಗಲೇನ ಮೇ । ಸೀತಾಮುಖಾತ್ಸಮುತ್ಪನ್ನಾ ಕನ್ಯಕಾ ಶುಭಲಕ್ಷಣಾ ॥ ೫೯ ॥

ತಾಮುದ್ರಾಕ್ಷಮಹಂ ಪ್ರೀತ್ಯಾ ಪುತ್ರಿಕಾಭಾವಭಾವಿತಾಂ । ಅರ್ಪಿತಾ ಪ್ರಿಯಭಾರ್ಯಾಯೈ ಶರಶ್ಚಂದ್ರನಿಭಾನನಾ ॥ ೬೦ ॥

---

೫೭. ದಶರಥನ ಮಕ್ಕಳಾದ ಈ ನಾಲ್ವರು ಸಹೋದರರೂ ಮದುವೆಯಾಗಿ ಹೆಂಡತಿಯರಿಂದ ಕೂಡಿಕೊಂಡರು. ಇದರಿಂದ ಇವರು ಬೇರೆಯವರಾದ ಲೋಕಪಾಲಕರೋ ಎಂಬಂತೆ ಪ್ರಕಾಶಿಸಿದರು.

೫೮. ಆಮೇಲೆ ಮಿಥಿಲಾಧಿಪತಿಯಾದ ಜನಕನು ವಸಿಷ್ಠನಿಗೂ ವಿಶ್ವಾಮಿತ್ರನಿಗೂ ತನಗೆ ನಾರದನು ಹೇಳಿದ್ದ ತನ್ನ ಮಗಳಾದ ಸೀತೆಯ ವಿಷಯವನ್ನು ಇಂತೆದು ಹೇಳಿದನು.

೫೯. ಎಲೈ ಮಹಾತ್ಮರಿರಾ! ನಾನು ಯಾಗಮಾಡಲು ಶುದ್ಧಿಮಾಡುವುದಕ್ಕೋಸ್ಕರ ಭೂಮಿಯನ್ನು ನೇಗಿಲಿನಿಂದ ಉಳಿಸಿ ಶುದ್ಧಿಮಾಡಿಸುತ್ತಲಿದ್ದೆನು. ಆಗ ನೇಗಿಲಿನ ತುದಿಯಿಂದ ಸರ್ವ ಲಕ್ಷಣ ಸಂಪನ್ನೆಯಾದ ಈ ಸೀತೆಯು ಮೇಲಕ್ಕೆ ಬಂದಳು.

೬೦. ಆಗ ಈಕೆಯನ್ನು ತೆಗೆದುಕೊಂಡು ಮಗಳೆಂದು ಭಾವಿಸಿ ಪ್ರೀತಿಯಿಂದ ನನ್ನ ಹೆಂಡತಿಗೆ ಸಲಹಲು ಕೊಟ್ಟೆನು.

ಏಕದಾ ನಾರದೋಭ್ಯಾಗಾದ್ವಿವಿಕ್ತೇ ಮಯಿ ಸಂಸ್ಥಿತೇ । ರಣಯನ್ ಮಹತೀಂ ವೀಣಾಂ ಗಾಯನ್ನಾರಾಯಣಂ ವಿಭುಂ ॥ ೬೧ ॥

ಪೂಜಿತಃ ಸುಖಮಾಸೀನೋ ಮಾಮುವಾಚ ಸುಖಾನ್ವಿತಃ । ಶೃಣುಷ್ವ ವಚನಂ ಗುಹ್ಯಂ ತವಾಭ್ಯುದಯಕಾರಣಂ ॥ ೬೨ ॥

ಪರಮಾತ್ಮಾ ಹೃಷೀಕೇಶೋ ಭಕ್ತಾನುಗ್ರಹಕಾಮ್ಯಯಾ । ದೇವಕಾರ್ಯಾರ್ಥಸಿಧ್ಯರ್ಥಂ ರಾವಣಸ್ಯ ವಧಾಯ ಚ ॥ ೬೩ ॥

ಜಾತೋ ರಾಮ ಇತಿ ಖ್ಯಾತೋ ಮಾಯಾಮಾನುಷವೇಷಧೃಕ್ । ಆಸ್ತೇ ದಾಶರಥಿರ್ಭೂತ್ವಾ ಚತುರ್ಧಾ ಪರಮೇಶ್ವರಃ ॥ ೬೪ ॥

---

೬೧. ಒಂದುಸಾರಿ ನಾನು ಯಾರೂ ಇಲ್ಲದ ಸ್ಥಳದಲ್ಲಿ ಏಕಾಂತವಾಗಿ ಕುಳಿತಿರಲು ನಾರದನು ತನ್ನ ಮಹತಿಯೆಂಬ ವೀಣೆಯನ್ನು ನುಡಿಸುತ್ತ ನಾರಾಯಣ ಸ್ಮರಣೆಯನ್ನು ಮಾಡುತ್ತ ಬಂದನು.

೬೨. ಶಾಸ್ತ್ರೋಕ್ತವಾಗಿ ಮಧುಪರ್ಕಾದಿಗಳನ್ನು ಕೊಟ್ಟು ಅವನನ್ನು ಪೂಜಿಸಿದಮೇಲೆ ಸುಖವಾಗಿ ಕುಳಿತುಕೊಂಡು ನನ್ನನ್ನು ಕುರಿತು ಎಲೈ ಜನಕನೆ! ಒಂದು ಗುಪ್ತವಾದ ಮಾತನ್ನು ಹೇಳುತ್ತೇನೆ. ಅದು ನಿನ್ನ ಅಭ್ಯುದಯಕ್ಕೆ ಕಾರಣವಾದುದು ಎಂದನು.

೬೩-೬೪. ಅದೇನೆಂದರೆ ಪರಮಾತ್ಮನಾದ ಹೃಷೀಕೇಶನು ಭಕ್ತರಿಗೆ ಅನುಗ್ರಹ ಮಾಡಬೇಕೆಂಬ ಇಚ್ಛೆಯಿಂದಲೂ, ರಾವಣನನ್ನು ಕೊಲ್ಲಬೇಕೆಂಬ ಅಪೇಕ್ಷೆಯಿಂದಲೂ ದೇವಕಾರ್ಯವನ್ನು ಮಾಡಿಕೊಡಬೇಕೆಂಬ ಬುದ್ಧಿಯಿಂದಲೂ, ಮಾಯಾಮಾನುಷನಾಗಿ ರಾಮನೆಂಬ ಹೆಸರಿನಿಂದ ದಶರಥನ ಹೊಟ್ಟೆಯಲ್ಲಿ ನಾಲ್ಕುಭಾಗವಾಗಿ ಹುಟ್ಟಿರುವನು.

ಯೋಗಮಾಯಾಪಿ ಸೀತೇತಿ ಜಾತಾ ವೈ ತವ ವೇಶ್ಮನಿ । ಅತಸ್ತ್ವಂ ರಾಘವಾಯೈವ ದೇಹಿ ಸೀತಾಂ ಪ್ರಯತ್ನತಃ ॥ ೬೫ ॥

ನಾನ್ಯೇಭ್ಯಃ ಪೂರ್ವಭಾರ್ಯೈಷಾ ರಾಮಸ್ಯ ಪರಮಾತ್ಮನಃ । ಇತ್ಯುಕ್ತ್ವಾ ಪ್ರಯಯೌ ದೇವಗತಿಂ ದೇವ ಮುನಿಸ್ತದಾ ॥ ೬೬ ॥

ತದಾರಭ್ಯ ಮಯಾ ಸೀತಾ ವಿಷ್ಣೋರ್ಲಕ್ಷ್ಮೀರ್ವಿಭಾವ್ಯತೇ । ಕಥಂ ಮಯಾ ರಾಘವಾಯ ದೀಯತೇ ಜಾನಕೀ ಶುಭಾ ॥ ೬೭ ॥

ಇತಿ ಚಿಂತಾಸಮಾವಿಷ್ಟಃ ಕಾರ್ಯಮೇಕಮಚಿಂತಯಂ । ಮತ್ಪಿತಾಮಹಗೇಹೇ ತು ನ್ಯಾಸಭೂತಮಿದಂ ಧನುಃ ॥ ೬೮ ॥

---

೬೫. ಯೋಗಮಾಯೆಯು ಸೀತೆಯೆಂಬುದಾಗಿ ಹುಟ್ಟಿ ನಿನ್ನ ಮನೆಯಲ್ಲಿ ಇರುತ್ತಿರುವಳು. ಆದ್ದರಿಂದ ಆ ಸೀತೆಯನ್ನು ಪ್ರಯತ್ನಪಟ್ಟು ರಾಘವನಿಗೆ ಮದುವೆಮಾಡಿಕೊಡು.

೬೬. ಈ ಯೋಗಮಾಯೆಯು ಹಿಂದೆ ಮತ್ತಾವನಿಗೂ ಹೆಂಡತಿಯಾಗಿರಲಿಲ್ಲ. ಆದ್ದರಿಂದ ಈಕೆಯು ಪರಮಾತ್ಮನಾದ ರಾಮನಿಗೆ ಹೆಂಡತಿಯಾಗಲಿ. ಹೀಗೆಂದು ಹೇಳಿ ಆ ದೇವಮುನಿಯು ಹೊರಟುಹೋದನು.

೬೭-೬೮. ಆ ನಾರದನು ಹೇಳಿದ ಮೊದಲುಗೊಂಡು ನಾನು ಸೀತೆಯನ್ನು ವಿಷ್ಣುವಿನ ಹೆಂಡತಿಯಾದ ಲಕ್ಷ್ಮಿಯೆಂದೇ ತಿಳಿದುಕೊಂಡಿರುತ್ತೇನೆ. ನಾನು ಈ ಜಾನಕಿಯನ್ನು ರಾಘವನಿಗೆ ಹೇಗೆ ಕೊಡಲಿ? ಎಂಬುದಾಗಿ ಯೋಚಿಸುತ್ತಿದ್ದು ಕೊನೆಗೆ ಒಂದು ಕೆಲಸ ಮಾಡಬೇಕೆಂದು ಯೋಚಿಸಿದೆನು. ಈ ಧನುಸ್ಸು ನನ್ನ ತಾತನ ಮನೆಯಲ್ಲಿ ನ್ಯಾಸವಾಗಿ ಇಟಲ್ಪಟ್ಟಿದ್ದಿತು.

ಈಶ್ವರೇಣ ಪುರಾ ಕ್ಷಿಪ್ತಂ ಪುರದಾಹಾದನಂತರಂ । ಧನುರೇತತ್ಪಣಂ ಕಾರ್ಯಮಿತಿ ಚಿಂತ್ಯ ಕೃತಂ ತಥಾ ॥ ೧೯ ॥

ಸೀತಾಪಾಣಿಗ್ರಹಾರ್ಥಾಯ ಸರ್ವೇಷಾಂ ಮಾನನಾಶನಂ । ತ್ವತ್ಪ್ರಸಾದಾನ್ಮುನಿಶ್ರೇಷ್ಠ ರಾಮೋ ರಾಜೀವಲೋಚನಃ ॥ ೨೦ ॥

ಆಗತೋತ್ರ ಧನುರ್ದ್ರಷ್ಟುಂ ಫಲಿತೋ ಮೇ ಮನೋರಥಃ । ಅದ್ಯ ಮೇ ಸಫಲಂ ಜನ್ಮ ರಾಮ ತ್ವಾಂ ಸಹ ಸೀತಯಾ ॥ ೨೧ ॥

ಏಕಾಸನಸ್ಥಂ ಪಶ್ಯಾಮಿ ಭ್ರಾಜಮಾನಂ ರವಿಂ ಯಥಾ । ತ್ವತ್ಪಾದಾಂಬುಧರೋ ಬ್ರಹ್ಮಾ ಸೃಷ್ಟಿಚಕ್ರಪ್ರವರ್ತಕಃ ॥ ೨೨ ॥

---

೧೯. ಈ ಧನುಸ್ಸು ಈಶ್ವರನದು. ಅವನು ತ್ರಿಪುರದಹನವನ್ನು ಮಾಡಿದಮೇಲೆ ಅಲ್ಲಿ ಇಟ್ಟುಬಿಟ್ಟಿದ್ದನು. ಈ ಧನುಸ್ಸನ್ನೇ ಸೀತೆಯ ಪಾಣಿಗ್ರಹಣಕ್ಕೆ ಪಣವನ್ನಾಗಿ ಇಡಬೇಕು. ಎಂದು ಯೋಚಿಸಿ ಅಂತೆಯೇ ಮಾಡಿದೆನು.

೨೦-೨೨. ಇದನ್ನು ಬಗ್ಗಿಸಲಾರದೆ ಅನೇಕರಾಜರು ಅವಮಾನವನ್ನು ಹೊಂದಿದರು. ಎಲೈ ಕೌಶಿಕನೆ! ನಿನ್ನ ಅನುಗ್ರಹದಿಂದ ಈ ರಾಜೀವಲೋಚನನಾದ ರಾಮನು ಈ ಧನುಸ್ಸನ್ನು ನೋಡಲುಬಂದನು. ಅವನು ಇದನ್ನು ಬಗ್ಗಿಸಿದುದರಿಂದ ನನ್ನ ಇಷ್ಟಾರ್ಥವು ಕೈಗೂಡಿತು. ಎಲೈ ರಾಮನೆ! ನೀನು ಸೀತೆಯೊಡನೆ ಒಂದೇ ಆಸನದಲ್ಲಿ ಕುಳಿತು ಸೂರ್ಯನಂತೆ ಪ್ರಕಾಶಿಸುತ್ತಿರುವುದನ್ನು ನೋಡುತ್ತಿದ್ದೇನೆ. ಆದ್ದರಿಂದ ಈಗ ನನ್ನ ಜನ್ಮವು ಸಫಲವಾಯಿತು. ನಿನ್ನ ಪಾದದ ತೀರ್ಥವನ್ನು ಬ್ರಹ್ಮನು ಧರಿಸಿರುವುದರಿಂದಲೇ ಸೃಷ್ಟಿಯನ್ನು ಮಾಡಲು ಸಮರ್ಥನಾದನು.

ಬಲಿಸ್ತ್ವತ್ಪಾದಸಲಿಲಂ ಧೃತ್ವಾಭೂದ್ದಿವಿಜಾಧಿಪಃ ತ್ವತ್ಪಾದಪಾಂಸುಸಂಸ್ಪರ್ಶಾದಹಲ್ಯಾ ಭರ್ತೃಶಾಪತಃ ॥ ೭೩ ॥

ಸದ್ಯ ಏವ ವಿನಿರ್ಮುಕ್ತಾ ಕೋಽನ್ಯಸ್ತ್ವತ್ತೋಽಧಿರಕ್ಷಿತಾ ॥ ೭೪ ॥

ಯತ್ಪಾದಪಂಕಜಪರಾಗಸುರಾಗಯೋಗಿವೃಂದೈರ್ಜಿತಂ ಭವಭಯಂ ಜಿತಕಾಲಚಕ್ರೈಃ ।

ಯನ್ನಾಮಕೀರ್ತನಪರಾ ಜಿತದುಃಖಶೋಕಾ ದೇವಾಸ್ತಮೇವ ಶರಣಂ ಸತತಂ ಪ್ರಪದ್ಯೇ ॥ ೭೫ ॥

ಇತಿ ಸ್ತುತ್ವಾ ನೃಪಃ ಪ್ರಾದಾದ್ರಾಘವಾಯ ಮಹಾತ್ಮನೇ । ದೀನಾರಾಣಾಂ ಕೋಟಿಶತಂ ರಥಾನಾಮಯುತಂ ತದಾ ॥ ೭೬ ॥

ಅಶ್ವಾನಾಂ ನಿಯುತಂ ಪ್ರಾದಾತ್ ಗಜಾನಾಂ ಷಟ್ಶತಂ ತಥಾ । ಪತ್ತೀನಾಂ ಲಕ್ಷಮೇಕಂ ತು ದಾಸೀನಾಂ ತ್ರಿಶತಂ ದದೌ ॥ ೭೭ ॥

೭೩–೭೪. ಬಲಿಯು ನಿನ್ನ ಪಾದತೀರ್ಥವನ್ನು ಧರಿಸಿಕೊಂಡುದರಿಂದಲೇ ದೇವತೆಗಳಿಗೆ ಒಡೆಯನಾದನು. ನಿನ್ನಪಾದದ ಧೂಳಿನ ಸ್ಪರ್ಶವಾದುದರಿಂದಲೇ ಅಹಲ್ಯೆಯು ಗಂಡನ ಶಾಪದಿಂದ ಆಕ್ಷಣವಲ್ಲಿಯೇ ಮುಕ್ತಳಾದಳು. ನಿನಗಿಂತಲೂ ದೊಡ್ಡವನು ಲೋಕದಲ್ಲಿ ಮತ್ತಾವನಿರುವನು?

೭೫. ಯಾವ ಸ್ವಾಮಿಯ ಪಾದಕಮಲದ ಧೂಳನ್ನು ಆಶ್ರಯಿಸಿಕೊಂಡಿರುವ ಯೋಗಿಗಳು ಸಂಸಾರಬಂಧನವನ್ನು ಜಯಿಸಿ ಕಾಲಕ್ಕೆ ಅಧೀನರಾಗದೆ ಅದನ್ನೇ ತಮ್ಮ ಅಧೀನವನ್ನಾಗಿ ಮಾಡಿಕೊಂಡಿರುವರೋ ಯಾವ ಸ್ವಾಮಿಯ ನಾಮವನ್ನು ಹೇಳುತ್ತಾ ದೇವತೆಗಳು ದುಃಖಗಳನ್ನು ಕಳೆದುಕೊಳ್ಳುತ್ತಾರೆಯೋ ಆ ಸ್ವಾಮಿಯನ್ನು ಯಾವಾಗಲು ಶರಣು ಹೊಂದುವೆನು.

೭೬–೭೭. ಜನಕನು ಶ್ರೀರಾಮನನ್ನು ಈರೀತಿಯಾಗಿ ಸ್ತುತಿಸಿ ಅವನಿಗೆ ನೂರುಕೋಟಿ ಚಿನ್ನದ ನಾಣ್ಯಗಳನ್ನೂ ಸಾವಿರ ರಥಗಳನೂ ಹತ್ತುಸಾವಿರ ಕುದುರೆಗಳನ್ನೂ ಆರುನೂರು ಆನೆಗಳನ್ನೂ ಒಂದುಲಕ್ಷ ಕಾಲಾಳುಗಳನ್ನೂ ಮುನ್ನೂರುಜನ ದಾಸಿಯರನ್ನೂ ಕೊಟ್ಟನ್ನು.

ದಿವ್ಯಾಂಬರಾಣಿ ಹಾರಾಂಶ್ಚ ಮುಕ್ತಾರತ್ನಮಯೋಜ್ವಲಾನ್ । ಸೀತಾಯೈ ಜನಕಃ ಪ್ರಾದಾತ್ ಪ್ರೀತ್ಯಾ ದುಹಿತೃವತ್ಸಲಃ ॥ ೭೮ ॥

ವಸಿಷ್ಠಾದೀನ್ ಸುಸಂಪೂಜ್ಯ ಭರತಂ ಲಕ್ಷ್ಮಣಂ ತಥಾ । ಪೂಜಯಿತ್ವಾ ಯಥಾನ್ಯಾಯ್ಯಂ ತಥಾ ದಶರಥಂ ನೃಪಂ ॥ ೭೯ ॥

ಪ್ರಸ್ಥಾಪಯಾಮಾಸ ನೃಪೋ ರಾಜಾನಂ ರಘುಸತ್ತಮಂ । ಸೀತಾಮಾಲಿಂಗ್ಯ ರುದತೀಂ ಮಾತರಃ ಸಾಶ್ರುಲೋಚನಾಃ ॥ ೮೦ ॥

ಶ್ವಶ್ರುಶುಶ್ರೂಷಣಪರಾ ನಿತ್ಯಂ ರಾಮಮನುವ್ರತಾ । ಪಾತಿವ್ರತ್ಯಮುಪಾಲಂಬ್ಯ ತಿಷ್ಠ ವತ್ಸೇ ಯಥಾಸುಖಂ ॥ ೮೧ ॥

---

೭೮. ಮಗಳಲ್ಲಿ ಪ್ರೀತಿಯುಳ್ಳ ಈ ಜನಕನು ಆ ಸೀತೆಗೆ ಉತ್ತಮವಾದ ಬಟ್ಟೆಗಳನ್ನೂ, ಮುತ್ತು ರತ್ನಗಳಿಂದ ಪ್ರಕಾಶಮಾನವಾದ ಹಾರಗಳನ್ನೂ ಪ್ರೀತಿಯಿಂದ ಕೊಟ್ಟನು.

೭೯. ವಸಿಷ್ಠನೇ ಮುಂತಾದ ಋಷಿಗಳನ್ನೂ ಭರತ, ಲಕ್ಷ್ಮಣ, ಶತ್ರುಘ್ನರನ್ನೂ ರಾಜನಾದ ದಶರಥನನ್ನೂ ಅವರವರ ಯೋಗ್ಯತೆಗೆ ತಕ್ಕಂತೆ ಪೂಜಿಸಿದನು.

೮೦. ಅನಂತರ ಜನಕನು ರಘುಶ್ರೇಷ್ಠನಾದ ದಶರಥನನ್ನು ಪ್ರಯಾಣಮಾಡಿಸಿ ಕಳುಹಿಸಿಕೊಟ್ಟನು. ಆಗ ಸೀತೆಯ ತಾಯಿಯರು ಸೀತೆಯನ್ನು ಆಲಿಂಗಿಸಿಕೊಂಡು ಕಣ್ಣೀರು ಸುರಿಸುತ್ತಿದ್ದರು.

೮೧ ಮತ್ತು ಎಲ್ಲೈ ಸೀತೆಯೆ! ಅತ್ತೆಯರ ಶುಶ್ರೂಷೆಯನ್ನು ಮಾಡುತ್ತ ಯಾವಾಗಲೂ ರಾಮನನ್ನೇ ಅನುವರ್ತಿಸಿಕೊಂಡಿರು. ಪಾತಿವ್ರತ್ಯವನ್ನು ಸ್ವಲ್ಪವೂ ಬಿಡದೆ ಆಶ್ರಯಿಸಿಕೊಂಡು ಸುಖವಾಗಿರು ಎಂದು ಬುದ್ಧಿ ಹೇಳಿದರು.

ಪ್ರಯಾಣಕಾಲೇ ರಘುನಂದಸ್ಯ ಭೇರೀಮೃದಂಗಾನಕತೂರ್ಯಘೋಷಃ |
ಸ್ವರ್ವಾಸಿಭೇರೀಘನತೂರ್ಯಶಬ್ದೈಃ ಸಂಮೂರ್ಛಿತೋ ಭೂತಭಯಂಕರೋಽಭೂತ್ ॥ ೮೨ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಉಮಾಮಹೇಶ್ವರಸಂವಾದೇ
ಬಾಲಕಾಂಡೇ ಷಷ್ಠಃ ಸರ್ಗಃ

---

೮೨. ರಘುರಾಮನು ಪ್ರಯಾಣಮಾಡುವಾಗ ಭೇರಿ, ಮೃದಂಗ ತಮಟೆಗಳ ಧ್ವನಿಗಳು ಸ್ವರ್ಗದ ದುಂದುಭಿಗಳ ಶಬ್ದಗಳೊಡನೆ ಸೇರಿಕೊಂಡು ಬಹು ಹೆಚ್ಚಾಗಿ ಶಬ್ದವಾಗುತ್ತ ಎಲ್ಲಾ ಪ್ರಾಣಿಗಳಿಗೂ ಭಯವನ್ನುಂಟುಮಾಡುತ್ತಿದ್ದುವು.

ಇಂತು ಶ್ರೀಮದಧ್ಯಾತ್ಮರಾಮಾಯಣದ ಬಾಲಕಾಂಡದ ಉಮಾಮಹೇಶ್ವರಸಂವಾದದಲ್ಲಿ
ಆರನೆಯ ಸರ್ಗವು.

॥ ಶ್ರೀರಸ್ತು ॥

ಅಥ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ಸಪ್ತಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪ ಕ್ರಮಃ

ಅಧ್ಯಾತ್ಮರಾಮಾಯಣದ ಬಾಲಕಾಂಡದ ಏಳನೆಯ ಸರ್ಗದಲ್ಲಿ ಮಾಡಬೇಕಾದ ಸಂಕಲ್ಪ ನ್ಯಾಸ ಧ್ಯಾನ ಜಪಗಳ ಕ್ರಮವು

ಪೂರ್ವೋಕ್ತವಿಧಿನಾ ಬಾಲಕಾಂಡೇ ಸಪ್ತಮಸರ್ಗೇ ನ್ಯಾಸಧ್ಯಾನಜಪಮಹಂ ಕರಿಷ್ಯೇ ಇತಿಸಂಕಲ್ಪ್ಯ ॥

ಹಿಂದೆ ಹೇಳಿದ ವಿಧಿಯಂತೆ ಬಾಲಕಾಂಡದ ಏಳನೆಯ ಸರ್ಗದಲ್ಲಿ ನ್ಯಾಸ, ಧ್ಯಾನ, ಜಪಗಳನ್ನು ಮಾಡುತ್ತೇನೆ ಎಂಬುದಾಗಿ ಸಂಕಲ್ಪವನ್ನು ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ಶ್ರೀಂ ರಾಂ ಹಂ ಅಂಗುಷ್ಠಾಭ್ಯಾಂ ನಮಃ
ಓಂ ಶ್ರೀಂ ರಾಂ ಹಂ ತರ್ಜನೀಭ್ಯಾಂ ನಮಃ
ಓಂ ಶ್ರೀಂ ರಾಂ ಹಂ ಮಧ್ಯಮಾಭ್ಯಾಂ ನಮಃ
ಓಂ ಶ್ರೀಂ ರಾಂ ಹಂ ಅನಾಮಿಕಾಭ್ಯಾಂ ನಮಃ
ಓಂ ಶ್ರೀಂ ರಾಂ ಹಂ ಕನಿಷ್ಠಿಕಾಭ್ಯಾಂ ನಮಃ
ಓಂ ಶ್ರೀಂ ರಾಂ ಹಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಅಂಗನ್ಯಾಸಃ ॥

ಅಂಗನ್ಯಾಸವು

ಓಂ ಶ್ರೀಂ ರಾಂ ಹಂ ಹೃದಯಾಯ ನಮಃ
ಓಂ ಶ್ರೀಂ ರಾಂ ಹಂ ಶಿರಸೇ ಸ್ವಾಹಾ
ಓಂ ಶ್ರೀಂ ರಾಂ ಹಂ ಶಿಖಾಯೈ ವಷಟ್
ಓಂ ಶ್ರೀಂ ರಾಂ ಹಂ ಕವಚಾಯ ಹುಂ
ಓಂ ಶ್ರೀಂ ರಾಂ ಹಂ ನೇತ್ರತ್ರಯಾಯ ವೌಷಟ್
ಓಂ ಶ್ರೀಂ ರಾಂ ಹಂ ಅಸ್ತ್ರಾಯ ಫಟ್

ಓಂ ಶ್ರೀ ರಾಮಚಂದ್ರಾಯ ಸ್ವಾಹಾ ಇತಿ ದಿಗ್ಬಂಧಃ

ಓಂ ಶ್ರೀರಾಮಚಂದ್ರಾಯ ಸ್ವಾಹಾ ಎಂದು ದಿಗ್ಬಂಧವನ್ನು ಮಾಡಿಕೊಳ್ಳಬೇಕು.

॥ ಅಥ ಧ್ಯಾನಂ ॥

ಧ್ಯಾನವು

ಅಥಗಚ್ಛತಿ ಶ್ರೀರಾಮೋ ಮೈಥಿಲಾದ್ಯೋಜನತ್ರಯಂ । ನಿಮಿತ್ತಾನ್ಯತಿಘೋರಾಣಿ ದದರ್ಶ ನೃಪಸತ್ತಮಃ ॥
ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಪಾರಾಯಣಾಂತೇ ಅಂಗನ್ಯಾಸಂ ಕೃತ್ವಾ ಶ್ರೀರಾಮಚಂದ್ರಾಯಸ್ವಾಹಾ ಇತಿದಿಗ್ವಿಮೋಕಃ
ಇತ್ಯುಕ್ತ್ವಾ ಧ್ಯಾನಶ್ಲೋಕಂ ಪಠೇತ್

ಸರ್ಗವು ಮುಗಿದ ಮೇಲೆ ಷಡಂಗನ್ಯಾಸವನ್ನು ಮಾಡಿಕೊಂಡು ಶ್ರೀರಾಮಚಂದ್ರಾಯ ಸ್ವಾಹಾ ಇತಿ ದಿಗ್ವಿಮೋಕಃ ಎಂದು ಹೇಳಿ ಧ್ಯಾನ ಶ್ಲೋಕವನ್ನು ಹೇಳಬೇಕು.

॥ ಇತಿ ಶ್ರೀ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ಸಪ್ತಮಸರ್ಗೇ ನ್ಯಾಸ ಧ್ಯಾನ ಜಪ ವಿಧಿಃ ॥

ಇಂತು ಬಾಲಕಾಂಡದ ಏಳನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಅಥ ಶ್ರೀ ಅಧ್ಯಾತ್ಮರಾಮಾಯಣೇ ಬಾಲಕಾಂಡೇ ಸಪ್ತಮಸರ್ಗಃ

॥ ಸೂತ ಉವಾಚ ॥

ಅಥ ಗಚ್ಛತಿ ಶ್ರೀರಾಮೇ ಮೈಥಿಲಾದ್ಯೋಜನತ್ರಯಂ । ನಿಮಿತ್ತಾನ್ಯತಿಘೋರಾಣಿ ದದರ್ಶ ನೃಪಸತ್ತಮಃ ॥ ೧ ॥

ನತ್ವಾ ವಸಿಷ್ಠಂ ಪಪ್ರಚ್ಛ ಕಿಮಿದಂ ಮುನಿಪುಂಗವ । ನಿಮಿತ್ತಾನೀಹ ದೃಶ್ಯಂತೇ ವಿಷಮಾಣಿ ಸಮಂತತಃ ॥ ೨ ॥

ಅಧ್ಯಾತ್ಮರಾಮಾಯಣದ ಬಾಲಕಾಂಡದಲ್ಲಿ ಏಳನೆಯ ಸರ್ಗವು

೧. ಶ್ರೀರಾಮನು ಪ್ರಯಾಣಮಾಡಿ ಮಿಥಿಲಾಪಟ್ಟಣದಿಂದ ಮೂರು ಯೋಜನಗಳಷ್ಟು ದೂರಹೋದನು. ಆಗ ಬಹುವಾಗಿ ಅಪಶಕುನಗಳಾಗಲು ದಶರಥನು ಆ ಅಪಶಕುನಗಳನ್ನು ನೋಡಿದನು.

೨. ಆಗ ದಶರಥನು ಕಳವಳ ಪಟ್ಟವನಾಗಿ ಗುರುವಾದ ವಸಿಷ್ಠನಿಗೆ ನಮಸ್ಕರಿಸಿ ಎಲೈ ಮುನಿಶ್ರೇಷ್ಠನೆ! ಇದೇನು? ನಮಗೆ ಎಲ್ಲಾ ಕಡೆಯಲ್ಲಿಯೂ ಅಪಶಕುನಗಳು ಕಾಣುತ್ತಿವೆಯಲ್ಲ? ಎಂದನು.

ವಸಿಷ್ಠಸ್ತಮಥ ಪ್ರಾಹ ಭಯಮಾಗಾಮಿ ಸೂಚ್ಯತೇ । ಪುನರಪ್ಯಭಯಂ ತೇದ್ಯ ಶೀಘ್ರಮೇವ ಭವಿಷ್ಯತಿ ॥ ೩ ॥

ಮೃಗಾಃ ಪ್ರದಕ್ಷಿಣಂ ಯಾಂತಿ ಪಶ್ಯತಾಂ ಶುಭಸೂಚಕಾಃ । ಇತ್ಯೇವಂ ವದತಸ್ತಸ್ಯ ವವೌ ಘೋರತರೋನಿಲಃ ॥ ೪ ॥

ಮುಷ್ಣಂಶ್ಚಕ್ಷೂಂಷಿ ಸರ್ವೇಷಾಂ ಪಾಂಸುವೃಷ್ಟಿಭಿರರ್ದಯನ್ । ತತೋ ವ್ರಜನ್ ದದರ್ಶಾಗ್ರೇ ತೇಜೋರಾಶಿಮುಪಸ್ಥಿತಂ ॥ ೫ ॥

ಕೋಟಿಸೂರ್ಯಪ್ರತೀಕಾಶಂ ವಿದ್ಯುತ್ಪುಂಜಸಮಪ್ರಭಂ । ತೇಜೋರಾಶಿಂ ದದರ್ಶಾಥ ಜಾಮದಗ್ನ್ಯಂ ಪ್ರತಾಪವಾನ್ ॥ ೬ ॥

---

೩. ಆಗ ವಸಿಷ್ಠರು ದಶರಥನನ್ನು ಕುರಿತು ಎಲೈ ದೊರೆಯೆ! ಈ ಅಪಶಕುನಗಳು ಮುಂದೆ ಭಯವು ಬರುವುದೆಂದು ತೋರಿಸುತ್ತಿವೆ. ಆದರೆ ಮತ್ತೆ ಒಡನೆಯೇ ಆ ಭಯವು ಹೋಗುತ್ತದೆ ಎಂದು ಸೂಚಿಸುತ್ತವೆ.

೪. ಮೃಗಗಳೆಲ್ಲವೂ ಪ್ರದಕ್ಷಿಣೆಯಾಗಿ ಬಲಗಡೆಗೆ ಬರುತ್ತಿವೆ. ಅದು ನಿನಗೆ ಶುಭಸೂಚಕವು. ಎಂದು ವಸಿಷ್ಠನು ಹೇಳುತ್ತಿರುವಂತೆಯೇ ದೊಡ್ಡ ಬಿರುಗಾಳಿಯು ಬೀಸಿತು.

೫. ಆ ಗಾಳಿಯು ಎಲ್ಲರ ಕಣ್ಣನ್ನೂ ಮುಚ್ಚಿಸುತ್ತ ಕಣ್ಣಿಗೆ ಧೂಳನ್ನೂ ಎರಚುತ್ತಿದ್ದಿತು. ಆದರೂ ಅಂತೆಯೇ ಮುಂದೆ ಹೋಗುತ್ತಿರಲು ಎದುರಿಗೆ ಒಂದು ತೇಜಸ್ಸಿನ ರಾಶಿಯು ಬಂದು ನಿಂತಿತು.

೬. ಅದು ಕೋಟಿ ಸೂರ್ಯರಷ್ಟು ಪ್ರಕಾಶವಾಗಿದ್ದಿತು. ಮಿಂಚಿನ ಗುಂಪಿನಂತೆ ಕಾಂತಿಯುಳ್ಳದ್ದಾಗಿದ್ದಿತು. ಆ ತೇಜೋರಾಶಿ ಯಾವುದೆಂದು ನೋಡಲು ಅದು ಜಾಮದಗ್ನಿಯಾದ ಪರುಶುರಾಮನಾಗಿದ್ದಿತು. ಅವನನ್ನು ನೋಡಿದನು.

ನೀಲಮೇಘನಿಭಂ ಪ್ರಾಂಶುಂ ಜಟಾಮಂಡಲಮಂಡಿತಂ । ಧನುಃಪರಶುಪಾಣಿಂ ಚ ಸಾಕ್ಷಾತ್ಕಾಲಮಿವಾಂತಕಂ ॥ ೭ ॥

ಕಾರ್ತವೀರ್ಯಾಂತಕಂ ರಾಮಂ ದೃಪ್ತಕ್ಷತ್ರಿಯಮರ್ದನಂ । ಪ್ರಾಪ್ತಂ ದಶರಥಸ್ಯಾಗ್ರೇ ಕಾಲಮೃತ್ಯುಮಿವಾಪರಂ ॥ ೮ ॥

ತಂ ದೃಷ್ಟ್ವಾ ಭಯಸಂತ್ರಸ್ತೋ ರಾಜಾ ದಶರಥಸ್ತದಾ । ಅರ್ಘ್ಯಾದಿಪೂಜಾಂ ವಿಸ್ಮೃತ್ಯ ತ್ರಾಹಿ ತ್ರಾಹೀತಿ ಚಾಬ್ರವೀತ್ ॥ ೯ ॥

ದಂಡವತ್ಪ್ರಣಿಪತ್ಯಾಹ ಪುತ್ರಪ್ರಾಣಂ ಪ್ರಯಚ್ಛ ಮೇ । ಇತಿ ಬ್ರುವಂತಂ ರಾಜಾನಮನಾದೃತ್ಯ ರಘೂತ್ತಮಂ ॥ ೧೦ ॥

---

೭. ಆ ವ್ಯಕ್ತಿಯು ನೀಲಮೇಘದಂತಿದ್ದನು. ಎತ್ತರವಾಗಿದ್ದನು. ಜಟೆಗಳನ್ನು ಹೊಂದಿದ್ದನು. ಧನುಸ್ಸನ್ನೂ ಕೊಡಲಿಯನ್ನೂ ಹಿಡಿದಿದ್ದನು. ಇವನನ್ನು ನೋಡಿದರೆ ಪ್ರತ್ಯಕ್ಷನಾದ ಯಮನಂತೆ ಕಾಣುತ್ತಿದ್ದನು.

೮. ಅವನು ಕಾರ್ತವೀರ್ಯನನ್ನು ಕೊಂದವನು. ಕೊಬ್ಬಿದ ಕ್ಷತ್ರಿಯರನ್ನು ಮರ್ದನಮಾಡಿದವನು. ಅವನು ಮತ್ತೊಬ್ಬ ಕಾಲಮೃತ್ಯುವಿನಂತೆ ದಶರಥನ ಎದುರಿನಲ್ಲಿ ನಿಂತನು.

೯. ರಾಜನಾದ ದಶರಥನು ಆ ಪರಶುರಾಮನನ್ನು ನೊಡಿ ಭಯಪಟ್ಟು ಅರ್ಘ್ಯಪಾದ್ಯಾದಿ ಪೂಜೆಗಳನ್ನು ಕೊಡುವುದನ್ನೂ ಮರೆತು ಕಾಪಾಡು, ಕಾಪಾಡು (ತ್ರಾಹಿ, ತ್ರಾಹಿ) ಎಂದು ಬೇಡಿಕೊಂಡನು.

೧೦. ಮತ್ತು ದೀರ್ಘದಂಡ ನಮಸ್ಕಾರವನ್ನುಮಾಡಿ ನನ್ನ ಮಕ್ಕಳ ಪ್ರಾಣಗಳನ್ನು ಉಳಿಸಿಕೊಡು ಎಂದು ಕೇಳಿಕೊಳ್ಳುತ್ತಿದ್ದನು. ರಾಜನು ಹೀಗೆ ಕೇಳುತ್ತಿದ್ದರೂ ಅವನನ್ನು ಈ ಪರುಶುರಾಮನು ತಿರಸ್ಕರಿಸಿದನು.

ಉವಾಚ ನಿಷ್ಠುರಂ ವಾಕ್ಯಂ ಕ್ರೋಧಾತ್ಪ್ರಚಲಿತೇಂದ್ರಿಯಃ । ತ್ವಂ ರಾಮ ಇತಿ ನಾಮ್ನಾ ನೋ ಚರಸಿ ಕ್ಷತ್ರಿಯಾಧಮ ॥ ೧೧ ॥

ದ್ವಂದ್ವಯುದ್ಧಂ ಪ್ರಯಚ್ಛಾಶು ಯದಿ ತ್ವಂ-ಕ್ಷತ್ರಿಯೋಸಿ ವೈ । ಪುರಾಣಂ ಜರ್ಜರಂ ಚಾಪಂ ಭಕ್ತ್ವಾತ್ವಂ ಕತ್ಥಸೇ ಮುಧಾ ೧೨

ಅಸ್ಮಿಂಸ್ತು ವೈಷ್ಣವೇ ಚಾಪೇ ಆರೋಪಯಸಿ ಚೇದ್ಗುಣಂ । ತದಾ ಯುದ್ಧಂ ತ್ವಯಾ ಸಾರ್ಧಂ ಕರೋಮಿ ರಘುವಂಶಜ ॥ ೧೩ ॥

ನೋ ಚೇತ್ಸರ್ವಾನ್ ಹನಿಷ್ಯಾಮಿ ಕ್ಷತ್ರಿಯಾಂತಕರೋ ಹ್ಯಹಂ । ಇತಿ ಬ್ರುವತಿ ವೈ ತಸ್ಮಿಂಶ್ಚಚಾಲ ವಸುಧಾ ಭೃಶಂ ॥ ೧೪ ॥

---

೧೧. ಮತ್ತು ಶ್ರೀರಾಮನನ್ನು ಕುರಿತು ಕೋಪದಿಂದ ಇಂದ್ರಿಯಗಳು ಸ್ವಾಧೀನವಿಲ್ಲದವನಾಗಿ ನಿಷ್ಠುರವಾದ ಮಾತನ್ನು ಇಂತೆಂದು ಆಡಿದನು. ಎಲೈ ಕ್ಷತ್ರಿಯಾಧಮನೆ! ನೀನು ರಾಮನೆಂದು ನನ್ನ ಹೆಸರಿಸಿಂದ ಎಲ್ಲಾ ಕಡೆಯಲ್ಲಿಯೂ ಪ್ರಸಿದ್ಧನಾಗಿದ್ದೀಯೆ.

೧೨. ನೀನು ಕ್ಷತ್ರಿಯನಾಗಿದ್ದರೆ ನನಗೆ ದ್ವಂದ್ವಯುದ್ಧವನ್ನು ಕೊಡು. ಹಳೆಯದಾದ ಆ ಶಿವಧನುಸ್ಸನ್ನು ಮುರಿದು ನಾನು ಬಲಶಾಲಿಯು ಎಂದು ವ್ಯರ್ಥವಾಗಿ ಹೆಮ್ಮೆ ಕೊಚ್ಚಿಕೊಳ್ಳಬೇಡ.

೧೩. ಈ ನನ್ನ ಕೈಯ್ಯಲ್ಲಿರುವ ವೈಷ್ಣವ ಧನುಸ್ಸಿನಲ್ಲಿ ಹೆದೆಯೇರಿಸಿದರೆ ಆಗ ನಿನ್ನೊಡನೆ ನಾನು ಯುದ್ಧವನ್ನು ಮಾಡುತ್ತೇನೆ.

೧೪. ಹಾಗಿಲ್ಲದಿದ್ದರೆ ನಿಮ್ಮೆಲ್ಲರನ್ನೂ ಕೊಂದುಹಾಕುತ್ತೇನೆ. ನಾನು ಕ್ಷತ್ರಿಯರೆಲ್ಲರನ್ನೂ ನಾಶಮಾಡತಕ್ಕವನು. ಇಂತೆಂದು ಆ ಪರುಶುರಾಮನು ಹೇಳಲು ಭೂಮಿಯು ಬಹುವಾಗಿ ನಡುಗಿತು.

ಅಂಧಕಾರೋ ಬಭೂವಾಥ ಸರ್ವೇಷಾಮಪಿ ಚಕ್ಷುಷಾಂ । ರಾಮೋ ದಾಶರಥಿರ್ವೀರೋ ವೀಕ್ಷ್ಯ ತಂ ಭಾರ್ಗವಂ ರುಷಾ ॥ ೧೫ ॥
ಧನುರಾಚ್ಛಿದ್ಯ ತದ್ಧಸ್ತಾದಾರೋಪ್ಯ ಗುಣಮಂಜಸಾ । ತೂಣೀರಾದ್ಬಾಣಮಾದಾಯ ಸಂಧಾಯಾಕೃಷ್ಯ ವೀರ್ಯವಾನ್ ॥ ೧೬ ॥
ಉವಾಚ ಭಾರ್ಗವಂ ರಾಮಂ ಶೃಣು ಬ್ರಹ್ಮನ್ ವಚೋ ಮಮ । ಲಕ್ಷ್ಯಂ ದರ್ಶಯ ಬಾಣಸ್ಯ ಹ್ಯಮೋಘೋ ಮಮ ಸಾಯಕಃ॥೧೭॥
ಲೋಕಾನ್ ಪಾದಯುಗಂ ವಾಪಿ ವದ ಶೀಘ್ರಂ ಮಮಾಜ್ಞಯಾ । ಅಯಂ ಲೋಕಃ ಪರೋ ವಾಥ ತ್ವಯಾ ಗಂತುಂ ನ ಶಕ್ಯತೇ॥೧೮

೧೫. ಎಲ್ಲರಿಗೂ ಕಣ್ಣುಕಾಣದಂತೆ ಕತ್ತಲೆಯು ಕವಿದುಕೊಂಡಿತು. ಆಗ ಶ್ರೀರಾಮನು ಆ ಪರುಶುರಾಮನನ್ನು ಕೋಪದಿಂದ ನೋಡಿದನು.

೧೬. ಒಡನೆಯೇ ಕೋಪದಿಂದ ಪರಶುರಾಮನ ಕೈಯಲ್ಲಿದ್ದ ಧನುಸ್ಸನ್ನು ಕಿತ್ತುಕೊಂಡು ಕೂಡಲೇ ಅದನ್ನು ಬಗ್ಗಿಸಿ ಹೆದೆಯನ್ನು ಏರಿಸಿ ಬತ್ತಳಿಕೆಯಿಂದ ಬಾಣವನ್ನು ತೆಗೆದು ಹೂಡಿ ಬಲವಾಗಿ ಕಿವಿಯವರೆಗೂ ಎಳೆದನು.

೧೭. ಆಗ ಶ್ರೀರಾಮನು ಪರುಶುರಾಮನನ್ನು ನೋಡಿ ಎಲೈ ಬ್ರಾಹ್ಮಣನೇ! ನನ್ನ ಮಾತನ್ನು ಕೇಳು. ನಾನು ಹೂಡಿರುವ ಬಾಣಕ್ಕೆ ಲಕ್ಷ್ಯ (ಹೊಡೆಸಿಕೊಳ್ಳುವ ಪದಾರ್ಥ) ವನ್ನು ತೋರಿಸು. ನನ್ನ ಬಾಣವು ವ್ಯರ್ಥವಾಗತಕ್ಕದ್ದಲ್ಲ.

೧೮. ನನ್ನ ಆಜ್ಞೆಯಿಂದ ನೀನು ಸಂಪಾದಿಸಿಕೊಂಡಿರುವ ಲೋಕಗಳನ್ನಾಗಲಿ ಅಥವಾ ನಿನ್ನ ಕಾಲುಗಳನ್ನಾಗಲಿ ಇದಕ್ಕೆ ಗುರಿಮಾಡು. ನಿನ್ನ ಪರಲೋಕದ ಪುಣ್ಯವನ್ನು ಗುರಿಮಾಡಿದರೆ ಪರಲೋಕಕ್ಕೆ ಹೋಗಲಾರೆ. ಪಾದಗಳನ್ನು ಗುರಿಮಾಡಿದರೆ ಈ ಲೋಕದಲ್ಲಿ ಸಂಚರಿಸಲಾರೆ

ಏವಂ ತ್ವಾಂ ಹಿ ಪ್ರಕರ್ತವ್ಯಂ ವದ ಶೀಘ್ರಂ ಮಮಾಜ್ಞಯಾ । ಏವಂ ವದತಿ ಶ್ರೀರಾಮೇ ಭಾರ್ಗವೋ ವಿಕೃತಾನನಃ ॥ ೧೯ ॥
ಸಂಸ್ಮರ್ಯ ಪೂರ್ವವೃತ್ತಾಂತಮಿದಂ ವಚನಮಬ್ರವೀತ್ । ರಾಮ ರಾಮ ಮಹಾಬಾಹೋ ಜಾನೇ ತ್ವಾಂ ಪರಮೇಶ್ವರಂ ॥ ೨೦ ॥
ಪುರಾಣಪುರುಷಂ ವಿಷ್ಣುಂ ಜಗತ್ಸರ್ಗಲಯೋದ್ಭವಂ । ಬಾಲ್ಯೇಹಂ ತಪಸಾ ವಿಷ್ಣುಮಾರಾಧಯಿತುಮಂಜಸಾ ॥ ೨೧ ॥
ಚಕ್ರತೀರ್ಥಂ ಶುಭಂ ಗತ್ವಾ ತಪಸಾ ವಿಷ್ಣುಮನ್ವಹಂ । ಅತೋಷಯಂ ಮಹಾತ್ಮಾನಂ ನಾರಾಯಣಮನನ್ಯಧೀಃ ॥ ೨೨ ॥
ತತಃ ಪ್ರಸನ್ನೋ ದೇವೇಶಃ ಶಂಖಚಕ್ರಗದಾಯುಧಃ । ಉವಾಚ ಮಾಂ ರಘುಶ್ರೇಷ್ಠ ಪ್ರಸನ್ನಮುಖಪಂಕಜಃ ॥ ೨೩ ॥

---

೧೯. ಇವೆರಡರಲ್ಲಿ ಯಾವುದಾದರೂ ಒಂದು ಆಗಿಯೇ ತೀರಬೇಕು. ನನ್ನ ಅಪ್ಪಣೆಯಂತೆ ಬೇಗ ಹೇಳು. ಶ್ರೀರಾಮನು ಹೀಗೆಂದು ಹೇಳಲು ಆಗ ಭಾರ್ಗವರಾಮನ ಮುಖವು ಕಂಗೆಟ್ಟಿತು.

೨೦–೨೨. ಒಡನೆಯೇ ಹಿಂದಿನ ವಿಷಯವನ್ನು ಸ್ಮರಿಸಿಕೊಂಡನು. ಆಗ ಇಂತೆಂದನು. ಎಲೈ ರಾಮನೆ! ಮಹಾಬಾಹುವೆ! ನೀನು ಪರಮೇಶ್ವರನೆಂದು ತಿಳಿಯಿತು. ನೀನು ಪುರಾಣ ಪುರುಷನಾದ ವಿಷ್ಣುವು. ಜಗತ್ತಿನ ಸೃಷ್ಟಿ ಸ್ಥಿತಿ ನಾಶಗಳಿಗೆ ಕಾರಣನು. ನಾನು ಬಾಲ್ಯದಲ್ಲಿ ವಿಷ್ಣುವನ್ನು ಕುರಿತು ತಪಸ್ಸನ್ನು ಮಾಡಲು ಚಕ್ರತೀರ್ಥಕ್ಕೆ ಹೋದೆನು. ಅಲ್ಲಿ ಆ ಅವ್ಯಯನಾದ ವಿಷ್ಣುವನ್ನು ತಪಸ್ಸಿನಿಂದ ನಿತ್ಯವೂ ಸಂತೋಷಪಡಿಸಿದೆನು.

೨೩. ಅನಂತರ ಆ ಸ್ವಾಮಿಯು ಪ್ರಸನ್ನನಾಗಿ, ಶಂಖ, ಚಕ್ರ, ಗದೆ, ಪದ್ಮಗಳನ್ನು ಧರಿಸಿ ಕಾಣಿಸಿಕೊಂಡು ಸಂತೋಷದಿಂದ ನನ್ನನ್ನು ಕುರಿತು ಇಂತೆಂದನು.

|| ಶ್ರೀ ಭಗವಾನುವಾಚ ||

ಉತ್ತಿಷ್ಠ ತಪಸೋ ಬ್ರಹ್ಮನ್ ಫಲಿತಂ ತೇ ತಪೋ ಮಹತ್ । ಮಚ್ಚಿದಂಶೇನ ಯುಕ್ತಸ್ತ್ವಂ ಜಹಿ ಹೈಹಯಪುಂಗವಂ || ೨೪ ||

ಕಾರ್ತವೀರ್ಯಂ ಪಿತೃಹಣಂ ಯದರ್ಥಂ ತಪಸಃ ಶ್ರಮಃ । ತತಸ್ತ್ರಿಸಪ್ತಕೃತ್ವಸ್ತ್ವಂ ಹತ್ವಾ ಕ್ಷತ್ರಿಯಮಂಡಲಂ || ೨೫ ||

ಕೃತ್ಸ್ನಾಂ ಭೂಮಿಂ ಕಶ್ಯಪಾಯ ದತ್ವಾ ಶಾಂತಿಮುಪಾವಹ । ತ್ರೇತಾಮುಖೇ ದಾಶರಥಿರ್ಭೂತ್ವಾ ರಾಮೋಽಹಮವ್ಯಯಃ || ೨೬ ||

ಉತ್ಪತ್ಸ್ಯೇ ಪರಯಾ ಶಕ್ತ್ಯಾ ತದಾ ದ್ರಕ್ಷ್ಯಸಿ ಮಾಂ ತತಃ । ಮತ್ತೇಜಃ ಪುನರಾದಾಸ್ಯೇ ತ್ವಯಿ ದತ್ತಂ ಮಯಾ ಪುರಾ || ೨೭ ||

---

೨೪. ಶ್ರೀ ಭಗವಂತನು ಹೇಳಿದನು. ಎಲೈ ಬ್ರಾಹ್ಮಣನೆ! ತಪಸ್ಸುಸಾಕು. ಏಳು. ನಿನ್ನ ಮಹತ್ತಾದ ತಪಸ್ಸು ಫಲಿಸಿತು. ನನ್ನ ಚಿದಂಶದಿಂದ ನೀನು ಕೂಡಿದ್ದೀಯೆ. ಆ ಹೈಹಯನೆಂಬ ರಾಜನನ್ನು ಕೊಂದುಹಾಕು.

೨೫–೨೬. ನಿನ್ನ ತಂದೆಯನ್ನು ಕೊಂದ ಆ ಕಾರ್ತವೀರ್ಯನನ್ನು ಕೊಂದುಹಾಕು. ನೀನು ಅದಕ್ಕೋಸ್ಕರಲೇ ತಪಸ್ಸು ಮಾಡುತ್ತಿದ್ದೀಯೆ ಎಂಬುದನ್ನು ಬಲ್ಲೆ. ಅನಂತರ ಇಪ್ಪತ್ತೊಂದುಬಾರಿ ಭೂಮಿಯನ್ನು ಸುತ್ತುತ್ತ ಆ ಕ್ಷತ್ರಿಯ ಸಮೂಹವನ್ನು ಕೊಂದುಹಾಕು. ಕ್ಷತ್ರಿಯರೆಲ್ಲರೂ ನಾಶರಾದಮೇಲೆ ಕಶ್ಯಪನಿಗೆ ಈ ಭೂಮಿಯನ್ನು ದಾನಮಾಡು. ಅನಂತರ ಶಾಂತನಾಗುತ್ತೀಯೆ. ನಾನು ತ್ರೇತಾಯುಗದ ಆದಿಯಲ್ಲಿ ರಾಮನೆಂಬ ಹೆಸರಿನಿಂದ ದಶರಥನ ಹೊಟ್ಟೆಯಲ್ಲಿ ಹುಟ್ಟುತ್ತೇನೆ.

೨೭. ಆ ರಾಮಾವತಾರಮಾಡಿದಾಗ ನೀನು ಮತ್ತೆ ನನ್ನನ್ನು ನೋಡುತ್ತೀಯೆ, ಆಗ ನಾನು ನಿನಗೆ ಹಿಂದೆಕೊಟ್ಟಿರುವ ಆ ನನ್ನ ಶಕ್ತಿಯನ್ನು ಮತ್ತೆ ತೆಗೆದುಕೊಳ್ಳುತ್ತೇನೆ.

ತದಾ ತಪಶ್ಚರ ಲೋಕೇ ತಿಷ್ಠ ತ್ವಂ ಬ್ರಹ್ಮಣೋ ದಿನಂ । ಇತ್ಯುಕ್ತ್ವಾಂತರ್ದಧೇ ದೇವಸ್ತಥಾ ಸರ್ವಂ ಕೃತಂ ಮಯಾ ॥ ೨೮ ॥

ಸ ಏವ ವಿಷ್ಣುಸ್ತ್ವಂ ರಾಮ ಜಾತೋಽಸಿ ಬ್ರಹ್ಮಣಾರ್ಥಿತಃ । ಮಯಿ ಸ್ಥಿತಂ ತು ತ್ವತ್ತೇಜಸ್ತ್ವಯ್ಯೇವ ಪುನರಾಹೃತಂ ॥ ೨೯ ॥

ಅದ್ಯ ಮೇ ಸಫಲಂ ಜನ್ಮ ಪ್ರತೀತೋಽಸಿ ಮಮ ಪ್ರಭೋ । ಬ್ರಹ್ಮಾದಿಭಿರಲಭ್ಯಸ್ತ್ವಂ ಪ್ರಕೃತೇಃ ಪಾರಗೋ ಮತಃ ॥ ೩೦ ॥

ತ್ವಯಿ ಜನ್ಮಾದಿಷಡ್ಭಾವಾ ನ ಸಂತ್ಯಜ್ಞಾನಸಂಭವಾಃ । ನಿರ್ವಿಕಾರೋಽಸಿ ಪೂರ್ಣಸ್ತ್ವಂ ಗಮನಾದಿ ವಿವರ್ಜಿತಃ ॥ ೩೧ ॥

---

೨೮. ಅನಂತರ ನೀನು ಬ್ರಹ್ಮನ ಒಂದು ದಿನದಷ್ಟುಕಾಲ ಭೂಮಿಯಲ್ಲಿ ತಪಸ್ಸನ್ನು ಮಾಡುತ್ತಲಿದ್ದುಕೊಂಡಿರು. ಹೀಗೆಂದು ಹೇಳಿ ಆ ಸ್ವಾಮಿಯು ಅಂತರ್ಧಾನನಾದನು. ಅದರಂತೆಯೇ ನಾನು ಎಲ್ಲವನ್ನೂ ಮಾಡಿದೆನು.

೨೯. ಎಲೈ ರಾಮನೆ! ನೀನು ಆ ವಿಷ್ಣುವೇ ಆಗಿದ್ದೀಯೆ. ಬ್ರಹ್ಮನ ಪ್ರಾರ್ಥನೆಯಂತೆ ಇಲ್ಲಿ ನೀನು ಹುಟ್ಟಿದ್ದೀಯೆ. ನನ್ನಲ್ಲಿದ್ದ ಆ ಸ್ವಾಮಿಯ ತೇಜಸ್ಸನ್ನು ನೀನು ಮತ್ತೆ ತೆಗೆದುಕೊಂಡಿದ್ದೀಯೆ.

೩೦. ಎಲೈ ಪ್ರಭುವೆ! ನನ್ನ ಜನ್ಮವು ಇಂದಿಗೆ ಸಾರ್ಥಕವಾಯಿತು. ನೀನು ಇಂತಹವನೆಂದು ನನಗೆ ತಿಳಿಯಿತು. ನೀನು ಬ್ರಹ್ಮಾದಿಗಳಿಗೂ ಸಿಕ್ಕತಕ್ಕವನಲ್ಲ. ಮಾಯೆಯನ್ನು ಮೀರಿದವನು.

೩೧ ಅಜ್ಞಾನದಿಂದ ಹುಟ್ಟತಕ್ಕ ಜನ್ಮವೇ ಮುಂತಾದ ಷಡ್ಭಾವಗಳು ನಿನಗೆ ಇರುವುದಿಲ್ಲ. ಇದು ನಿಶ್ಚಯವು. ನೀನು ವಿಕಾರಿಯಲ್ಲ. ಪೂರ್ಣನು. ನಿನಗೆ ಹೋಗುವಿಕೆಯಾಗಲೀ, ಬರುವಿಕೆಯಾಗಲೀ ಇರುವುದಿಲ್ಲ.

ಯಥಾ ಜಲೇ ಫೇನಜಾಲಂ ಧೂಮೋ ವಹ್ನೌ ತಥಾ ತ್ವಯಿ । ತ್ವದಾಧಾರಾ ತ್ವದ್ವಿಷಯಾ ಮಾಯಾ ಕಾರ್ಯಂ ಸೃಜತ್ಯಹೋ॥೩೨
ಯಾವನ್ಮಾಯಾವೃತಾ ಲೋಕಾಸ್ತಾವತ್ತ್ವಾಂ ನ ವಿಜಾನತೇ । ಅವಿಚಾರಿತಸಿದ್ಧೈಷಾಽವಿದ್ಯಾ ವಿದ್ಯಾವಿರೋಧಿನೀ ॥ ೩೩ ॥
ಅವಿದ್ಯಾಕೃತ ದೇಹಾದಿಸಂಘಾತೇ ಪ್ರತಿಬಿಂಬಿತಾ । ಚಿಚ್ಛಕ್ತಿರ್ಜೀವಲೋಕೇಽಸ್ಮಿನ್ ಜೀವ ಇತ್ಯಭಿಧೀಯತೇ ॥ ೩೪ ॥
ಯಾವದ್ದೇಹಮನಃಪ್ರಾಣಬುಧ್ಯಾದಿಷ್ವಭಿಮಾನವಾನ್ । ತಾವತ್ಕರ್ತೃತ್ವಭೋಕ್ತೃತ್ವಸುಖದುಃಖಾದಿಭಾಗ್ಭವೇತ್ ॥ ೩೫ ॥

---

೩೨. ನೀರಿನಲ್ಲಿ ನೊರೆಯು ಇರುವಂತೆಯೂ, ಬೆಂಕಿಯಲ್ಲಿ ಹೊಗೆಯು ಇರುವಂತೆಯೂ, ಈ ವಿಕಾರಗಳು ನಿನ್ನಲ್ಲಿ ಕಾಣುತ್ತಿರುತ್ತವೆ. ನಿನ್ನನ್ನೇ ಆಧಾರವನ್ನಾಗಿಟ್ಟುಕೊಂಡು, ನಿನ್ನನ್ನೇ ಗುರಿಮಾಡಿಕೊಂಡು ಮಾಯೆಯು ಈ ಪ್ರಪಂಚರೂಪವಾದ ಮಹಾಕಾರ್ಯವನ್ನು ಮಾಡುತ್ತದೆ. ಇದು ಆಶ್ಚರ್ಯವು.

೩೩. ಲೋಕವು ಮಾಯೆಯಿಂದ ಎಲ್ಲಿಯವರೆಗೆ ಬದ್ಧವಾಗಿರುತ್ತದೆಯೋ ಅಲ್ಲಿಯವರೆಗೆ ನಿನ್ನನ್ನು ನೋಡಲಾರದು. ಜ್ಞಾನನಾಶಕವಾದುದು ಈ ಅಜ್ಞಾನವು ಎಂಬುದನ್ನು ಯಾರಾರೂ ಹೇಳಬೇಕಾಗಿಯೇ ಇಲ್ಲ.

೩೪. ಪ್ರಾಣಿಯು ಅವಿದ್ಯೆ (ಮಾಯೆ) ಯಿಂದ ಹೊಂದಿದ ಈ ದೇಹದಲ್ಲಿ ಪ್ರತಿಬಿಂಬಿತವಾಗಿರುವ ಚಿಚ್ಛಕ್ತಿಯನ್ನೇ ಜೀವ ಎಂದು ಹೇಳುತ್ತದೆ.

೩೫. ಪ್ರಾಣಿಯು ಎಲ್ಲಿಯವರೆಗೂ ಇದು ನನ್ನದೇಹ ಇದು ನನ್ನಪ್ರಾಣ, ಇದು ನನ್ನಬುದ್ಧಿ ಎಂಬುವೇ ಮೊದಲಾದುವುಗಳಲ್ಲಿ ಅಭಿಮಾನವನ್ನು ಇಟ್ಟುಕೊಂಡಿರುವನೋ, ಅಲ್ಲಿಯವರೆಗೂ ಆ ಪ್ರಾಣಿಗೆ ಕರ್ತೃತ್ವ (ಮಾಡುವಿಕೆ) ಭೋಕ್ತೃತ್ವ (ಅನುಭವಿಸುವಿಕೆ) ಇವು ಇದ್ದೇ ಇರುತ್ತನೆ. ಮಾಡಿಯೇ ಮಾಡುತ್ತಾನೆ.

ಆತ್ಮನಃ ಸಂಸೃತಿರ್ನಾಸ್ತಿ ಬುದ್ಧೇರ್ಜ್ಞಾನಂ ನ ಜಾತ್ವಿತಿ । ಅವಿವೇಕಾದ್ದ್ವಯಂ ಯುಂಕ್ತ್ವಾ ಸಂಸಾರೀತಿ ಪ್ರವರ್ತತೇ ॥ ೩೬ ॥

ಜಡಸ್ಯ ಚಿತ್ಸಮಾಯೋಗಾಚ್ಚಿತ್ತ್ವಂ ಭೂಯಾಚ್ಚಿತೇಸ್ತಥಾ । ಜಡಸಂಗಾಜಡತ್ವಂ ಹಿ ಜಲಾಗ್ನ್ಯೋರ್ಮೇಲನಂ ಯಥಾ ॥ ೩೭ ॥

ಯಾವತ್ತ್ವತ್ಪಾದ ಭಕ್ತಾನಾಂ ಸಂಘುಸೌಖ್ಯಂ ನ ವಿಂದತಿ । ತಾವತ್ಸಂಸಾರದುಃಖೌಘಾನ್ನ ನಿವರ್ತೇನ್ನರಃ ಸದಾ ॥ ೩೮ ॥

---

೩೬. ಆತ್ಮನಿಗೆ ಸಂಸಾರವೆಂಬುದಿಲ್ಲ (ಜನನ ಮರಣವಿಲ್ಲ) ಬುದ್ಧಿಗೆ ಜ್ಞಾನವೆಂಬುದಿಲ್ಲ. ಈ ಎರಡೂ ಕೂಡ ಪ್ರಾಣಿಯ ಅವಿವೇಕದಿಂದ ಬರುತ್ತವೆ. ಆಗ ಅವನು ಸಂಸಾರಿಯೆಂದೆನಿಸಿಕೊಳ್ಳುತ್ತಾನೆ.

೩೭. ಜಡಪದಾರ್ಥದೊಡನೆ ಚಿದಂಶವು ಸೇರಿದರೆ ಅದು ಚಿದ್ರೂಪವೇ ಆಗುತ್ತದೆ. ಚಿತ್ತಿನೊಡನೆ ಜಡಪದಾರ್ಥವು ಸೇರಿದರೆ ಅದು ಜಡವೇ ಆಗುತ್ತದೆ. ಇದಕ್ಕೆ ನೀರು ಬೆಂಕಿಗಳೇ ದೃಷ್ಟಾಂತವು. (ಹೆಚ್ಚಾದ ಪದಾರ್ಥದಲ್ಲಿ ಕಡಿಮೆಯಾದ ಪದಾರ್ಥವು ಸೇರಿದರೆ ಹೆಚ್ಚಾದ ಪದಾರ್ಥಕ್ಕೆ ಪ್ರಾಧಾನ್ಯವು. ಹೆಚ್ಚಿನದನ್ನು ಸೇರಿಸಿಕೊಂಡುದೆಂದೂ, ಕಡಿಮೆಯದನ್ನು ಸೇರಿಕೊಂಡುದೆಂದೂ ಹೇಳುತ್ತೇವೆ. ಸಮವಾಗಿರುವ ಪದಾರ್ಥಗಳಲ್ಲಿ ಒಂದರ ಆಶ್ರಯವನ್ನು ಮತ್ತೊಂದು ಅಪೇಕ್ಷಿಸಿದರೆ ಅಪೇಕ್ಷಿಸಿದ ಪದಾರ್ಥವನ್ನು ನಿಕೃಷ್ಟ ಅಥವಾ ಸೇರಿಸಿಕೊಂಡುದು ಎಂದೆನ್ನುತ್ತೇವೆ. ಬೆಂಕಿಗೆ ನೀರು ಸೇರಿದರೆ ಅದು ನಾಶವಾಗಿ, ಬೆಂಕಿಯು ಆರಿಹೋಗಿ ಚಾಕ ಚಕ್ಯವಿರುವುದಿಲ್ಲ ನೀರಿಗೆ ಬೆಂಕಿ ಸೇರಿದರೆ ಆ ನೀರು ಸುಮ್ಮನಿರದೆ ಕುದಿಯುವುದು, ಮುಂತಾದ ಕೆಲಸಗಳನ್ನು ಮಾಡುತ್ತಾ ಎಷ್ಟೋ ಅಮೋಘವಾದಕಾರ್ಯಗಳನ್ನು ಮಾಡಬಲ್ಲುದು.)

೩೮. ಎಲೈ ಸ್ವಾಮಿಯೇ! ನಿನ್ನ ಪಾದಕಮಲದಲ್ಲಿ ಭಕ್ತಿಯನ್ನು ಹೊಂದಿರುವವರ ಸಹವಾಸವು ಎಲ್ಲಿಯವರೆಗೆ ಪ್ರಾಣಿಗೆ ಸಿಕ್ಕುವುದಿಲ್ಲವೋ ಅಲ್ಲಿಯವರಿಗೆ ಅದು ಈ ಸಂಸಾರವೆಂಬ ದುಃಖದಿಂದ ಪಾರಾಗುವುದೇ ಇಲ್ಲವು.

ತತ್ಸಂಗಲಬ್ಧಯಾ ಭಕ್ತ್ಯಾ ಯದಾ ತ್ವಾಂ ಸಮುಪಾಸತೇ । ತದಾ ಮಾಯಾ ಶನೈರ್ಯಾತಿ ತಾನವಂ ಪ್ರತಿಪದ್ಯತೇ ॥ ೩೯ ॥

ತತಸ್ತ್ವತ್ ಜ್ಞಾನಸಂಪನ್ನಃ ಸದ್ಗುರುಸ್ತೇನ ಲಭ್ಯತೇ । ಆತ್ಮಜ್ಞಾನಂ ಗುರೋರ್ಲಬ್ಧ್ವಾ ತ್ವತ್ಪ್ರಸಾದಾದ್ವಿಮುಚ್ಯತೇ ॥ ೪೦ ॥

ತಸ್ಮಾತ್ತ್ವದ್ಭಕ್ತಿಹೀನಾನಾಂ ಕಲ್ಪಕೋಟಿಶತೈರಪಿ । ನ ಮುಕ್ತಿಶಂಕಾ ವಿಜ್ಞಾನಶಂಕಾ ನೈವ ಸುಖಂ ತಥಾ ॥ ೪೧ ॥

ಅತಸ್ತ್ವತ್ಪಾದಯುಗಳೇ ಭಕ್ತಿರ್ಮೇ ಜನ್ಮಜನ್ಮನಿ । ಸ್ಯಾತ್ತ್ವದ್ಭಕ್ತಿಮತಾಂ ಸಂಗೋಽವಿದ್ಯಾ ಯಾಭ್ಯಾಂ ವಿನಶ್ಯತಿ ॥ ೪೨ ॥

---

೩೯. ಆ ಪ್ರಾಣಿಗಳು ಅಂತಹ ಭಕ್ತರ ಸಹವಾಸಕ್ಕೆ ಸಿಕ್ಕಿದನಂತರ ನಿನ್ನನ್ನು ಉಪಾಸನೆ ಮಾಡಿದರೆ ಆಗ ಆ ಮಾಯೆಯು ಹೋಗುತ್ತ ಬಂದು ಸಣ್ಣದಾಗುತ್ತದೆ.

೪೦. ಆ ಮಾಯೆಯು ಕೃಶವಾದಮೇಲೆ ನಿನ್ನ ಸಂಬಂಧವಾದ ಆತ್ಮಜ್ಞಾನವುಳ್ಳ ಸದ್ಗುರುವು ಅವನಿಗೆ ಸಿಕ್ಕುತ್ತಾನೆ. ಅನಂತರ ಅವನ ಮಾತಿನಿಂದ ಜ್ಞಾನವು ಉಂಟಾಗಿ ನಿನ್ನ ಅನುಗ್ರಹವೂ ಸಿಕ್ಕಿದರೆ ಮೋಕ್ಷವು ಬರುತ್ತದೆ.

೪೧. ನಿನ್ನಲ್ಲಿ ಭಕ್ತಿಯಿಲ್ಲದವರಿಗೆ ನೂರಾರುಕೋಟಿ ಕಲ್ಪಗಳಾದರೂ ಮೋಕ್ಷದ ಶಂಕೆಯಾಗಲೀ, ಜ್ಞಾನದ ಶಂಕೆಯಾಗಲೀ, ಸುಖದ ಶಂಕೆಯಾಗಲೀ ಇಲ್ಲವೇ ಇಲ್ಲ.

೪೨. ಆದ್ದರಿಂದ ಎಲೈ ಸ್ವಾಮಿಯೇ! ನಿನ್ನ ಪಾದಪದ್ಮಗಳಲ್ಲಿ ಭಕ್ತಿಯು ನನಗೆ ಜನ್ಮ ಜನ್ಮಕ್ಕೂ ಇರಲಿ. ನಿನ್ನ ಭಕ್ತರ ಸಹವಾಸವೂ ವಿದ್ಯೆಯೂ, ಎರಡೂ ನನಗೆ ಇರಲಿ. ಇವುಗಳಿಂದಲ್ಲವೆ ಈ ಮಾಯೆಯು ಹೋಗಬೇಕಾದುದು!

ಲೋಕೇ ತ್ವದ್ಭಕ್ತಿನಿರತಾಃ ತ್ವದ್ಧರ್ಮಾನ್ಯತವರ್ತಿನಃ । ಪುನಂತಿ ಲೋಕಮಖಿಲಂ ಕಿಂ ಪುನಃ ಸ್ವಕುಲೋದ್ಭವಾನ್ ॥ ೪೩ ॥
ನಮೋಸ್ತು ಜಗತಾಂ ನಾಥ ನಮಸ್ತೇ ಭಕ್ತಿಭಾವನ । ನಮಃ ಕಾರುಣಿಕಾನನ್ತ ರಾಮಚಂದ್ರ ನಮೋಸ್ತು ತೇ ॥ ೪೪ ॥
ದೇವ ಯದ್ಯತ್ಕೃತಂ ಪುಣ್ಯಂ ಮಯಾ ಲೋಕಜಿಗೀಷಯಾ । ತತ್ಸರ್ವಂ ತವ ಬಾಣಾಯ ಭೂಯಾದ್ರಾಮ ನಮೋಸ್ತು ತೇ ೪೫
ತತಃ ಪ್ರಸನ್ನೋ ಭಗವಾನ್ ಶ್ರೀರಾಮಃ ಕರುಣಾಮಯಃ । ಪ್ರಸನ್ನೋಸ್ಮಿ ತವ ಬ್ರಹ್ಮನ್ ಯತ್ತೇ ಮನಸಿ ವರ್ತತೇ ॥ ೪೬ ॥
ದಾಸ್ಯೇ ತದಖಿಲಂ ಕಾಮಂ ಮಾ ಕುರುಷ್ವಾತ್ರ ಸಂಶಯಂ । ತತಃ ಪ್ರೀತೇನ ಮನಸಾ ಭಾರ್ಗವೋ ರಾಮಮಬ್ರವೀತ್ ॥ ೪೭ ॥

---

೪೩ ಲೋಕದಲ್ಲಿ ನಿನ್ನಲ್ಲಿಯೇ ಭಕ್ತಿಯುಳ್ಳವರು ನಿನ್ನ ಸಂಬಂಧವಾದ ಧರ್ಮವನ್ನು ಆಚರಿಸುವವರು ಇವರು ಪ್ರಪಂಚವನ್ನೇ ಪವಿತ್ರವನ್ನಾಗಿ ಮಾಡುವಾಗ ತಮ್ಮ ಕುಲವನ್ನು ಉದ್ಧರಮಾಡಿಕೊಳ್ಳುತ್ತಾರೆ ಎಂಬುದನ್ನು ಹೇಳಬೇಕಾದುದೇ ಇಲ್ಲ

೪೪. ಜಗನ್ನಾಥನೇ! ನಿನಗೆ ನಮಸ್ಕಾರವು. ಭಕ್ತಿಯಿಂದ ಸಿಕ್ಕತಕ್ಕವನೇ! ನಿನಗೆ ನಮಸ್ಕಾರವು. ಅನಂತವಾದ ಕರುಣೆಯುಳ್ಳವನೇ! ನಿನಗೆ ನಮಸ್ಕಾರವು. ಎಲೈ ರಾಮಚಂದ್ರನೇ! ನಿನಗೆ ನಮಸ್ಕಾರವು.

೪೫. ಎಲೈ ದೇವನೇ! ನಾನು ಪರಲೋಕವನ್ನು ಹೊಂದಬೇಕೆಂದು ಯಾವ ಯಾವ ಪುಣ್ಯವನ್ನು ಮಾಡಿರುವನೋ ಅವೆಲ್ಲವೂ ನಿನ್ನ ಬಾಣಕ್ಕೆ ಗ್ರಾಸವಾಗಲಿ. ನಿನಗೆ ನಮಸ್ಕಾರವು.

೪೬-೪೭. ಆಗ ಆ ಕರುಣಾಮಯನಾದ ಶ್ರೀರಾಮನಿಗೆ ಸಂತೋಷವಾಯಿತು. ಎಲೈ ಬ್ರಾಹ್ಮಣನೆ! ನಾನು ನಿನಗೆ ಪ್ರಸನ್ನನಾಗಿದ್ದೇನೆ. ನಿನ್ನ ಮನಸ್ಸಿನಲ್ಲಿರುವುದೆಲ್ಲವನ್ನೂ ಕೇಳಿಕೋ! ಅದೆಲ್ಲವನ್ನೂ ಕೊಡುತ್ತೇನೆ. ಈ ವಿಷಯದಲ್ಲಿ ಸಂಶಯಬೇಡ. ಎನ್ನಲು ಆಗ ಭಾರ್ಗವನು ಸಂತೋಷದಿಂದ ಇಂತೆಂದನು.

ಯದಿ ಮೇಽನುಗ್ರಹೋ ರಾಮ ತವಾಸ್ತಿ ಮಧುಸೂದನ । ತ್ವದ್ಭಕ್ತಸಂಗಸ್ತ್ವತ್ಪಾದೇ ದೃಢಾ ಭಕ್ತಿಃ ಸದಾಸ್ತು ಮೇ ॥ ೪೮ ॥
ಸ್ತೋತ್ರಮೇತತ್ಪಠೇದ್ಯಸ್ತು ಭಕ್ತಿಹೀನೋಽಪಿ ಸರ್ವದಾ । ತ್ವದ್ಭಕ್ತಿಸ್ತಸ್ಯ ವಿಜ್ಞಾನಂ ಭೂಯಾದಂತೇ ಸ್ಮೃತಿಸ್ತವ ॥ ೪೯ ॥
ತಥೇತಿ ರಾಘವೇಣೋಕ್ತಃ ಪರಿಕ್ರಮ್ಯ ಪ್ರಣಮ್ಯ ತಂ । ಪೂಜಿತಸ್ತದನುಜ್ಞಾತೋ ಮಹೇಂದ್ರಾಚಲಮನ್ವಗಾತ್ ॥ ೫೦ ॥
ರಾಜಾ ದಶರಥೋ ಹೃಷ್ಟೋ ರಾಮಂ ಮೃತಮಿವಾಗತಂ । ಆಲಿಂಗ್ಯಾಲಿಂಗ್ಯ ಹರ್ಷೇಣ ನೇತ್ರಾಭ್ಯಾಂ ಜಲಮುತ್ಸೃಜತ್ ॥ ೫೧ ॥

---

೪೮. ಎಲೈ ಮಧುಸೂದನನಾದ ರಾಮನೆ! ನನ್ನಮೇಲೆ ನಿನಗೆ ಅನುಗ್ರಹವಿದ್ದರೆ ನಿನ್ನ ಭಕ್ತರ ಸಂಗವೂ, ನಿನ್ನ ಪಾದಗಳಲ್ಲಿ ಭಕ್ತಿಯೂ ಯಾವಾಗಲೂ ಇರಲಿ.

೪೯. ಭಕ್ತಿಯಿಲ್ಲದಿದ್ದರೂ ಕೂಡ ಯಾವನು ಈ ಸ್ತೋತ್ರವನ್ನು ಹೇಳುತ್ತಾನೆಯೋ ಅವನಿಗೆ ನಿನ್ನಲ್ಲಿ ಭಕ್ತಿಯುಂಟಾಗಿ ಆತ್ಮಜ್ಞಾನವೂ ಉಂಟಾಗಿ ಕೊನೆಗಾಲದಲ್ಲಿ ನಿನ್ನ ಸ್ಮರಣೆಯೂ ಉಂಟಾಗಲಿ.

೫೦. ಭಗವಂತನಾದ ಶ್ರೀರಾಮನು ಹಾಗೆಯೇ ಆಗಲಿ ಎಂದೆನ್ನಲು ಆ ರಾಮನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿದನು. ಆಗ ಶ್ರೀರಾಮನು ಅರ್ಘ್ಯಾದಿಗಳಿಂದ ಭಾರ್ಗವನನ್ನು ಪೂಜಿಸಿದನು. ಅನಂತರ ರಾಮನ ಒಪ್ಪಿಗೆಯನ್ನು ಪಡೆದು ಭಾರ್ಗವನು ಮಹೇಂದ್ರ ಪರ್ವತಕ್ಕೆ ಹೊರಟುಹೋದನು.

೫೧. ರಾಜನಾದ ದಶರಥನು ಈ ಭಾರ್ಗವನ ದೆಸೆಯಿಂದ ಶ್ರೀರಾಮನನ್ನು ಸತ್ತು ಹುಟ್ಟಿದಂತೆ ತಿಳಿದನು. ಇದರಿಂದ ಸಂತೋಷಗೊಂಡು ಅನೇಕಬಾರಿ ಅವನನ್ನು ಆಲಿಂಗಿಸಿ ಕೊಳ್ಳುತ್ತಾ ಸಂತೋಷದಿಂದ ಕಣ್ಣೀರನ್ನು ಸುರಿಸುತ್ತಿದ್ದನು.

ತತಃ ಪ್ರೀತೇನ ಮನಸಾ ಸ್ವಸ್ಥಚಿತ್ತಃ ಪುರಂ ಯಯೌ। ರಾಮಲಕ್ಷ್ಮಣಶತ್ರುಘ್ನಭರತಾ ದೇವಸಂಮಿತಾಃ ॥ ೫೨ ॥

ಸ್ವಾಂ ಸ್ವಾಂ ಭಾರ್ಯಾಂ ಸಮಾದಾಯ ರೇಮಿರೇ ಸ್ವಸ್ವಮಂದಿರೇ। ಮಾತಾಪಿತೃಭ್ಯಾಂ ಸಂಹೃಷ್ಟೋ ರಾಮಃ ಸೀತಾಸಮನ್ವಿತಃ॥೫೩

ರೇಮೇ ವೈಕುಂಠಭವನೇ ಶ್ರಿಯಾ ಸಹ ಯಥಾ ಹರಿಃ। ಯುಧಾಜಿನ್ನಾಮ ಕೈಕೇಯೀಭ್ರಾತಾ ಭರತಮಾತುಲಃ ॥ ೫೪ ॥

ಭರತಂ ನೇತುಮಾಗಚ್ಛತ್ ಸ್ವರಾಜ್ಯಂ ಪ್ರೀತಿಸಂಯುತಃ। ಪ್ರೇಷಯಾಮಾಸ ಭರತಂ ರಾಜಾ ಸ್ನೇಹಸಮನ್ವಿತಃ ॥ ೫೫ ॥

೫೨–೫೩. ಆಮೇಲೆ ಮನಸ್ಸನ್ನು ಸಮಾಧಾನಕ್ಕೆ ತಂದುಕೊಂಡು ತನ್ನ ಪಟ್ಟಣವಾದ ಅಯೋಧ್ಯೆಗೆ ಹೋದನು. ಅಲ್ಲಿ ರಾಮ ಲಕ್ಷ್ಮಣ ಭರತ ಶತ್ರುಘ್ನರು ತಮತಮಗೆ ಕೊಟ್ಟಿರುವ ಬೇರೆ ಬೇರೆ ಮನೆಗಳಲ್ಲಿ ತಮ್ಮ ತಮ್ಮ ಹೆಂಡತಿಯರಲ್ಲಿ ರಮಿಸುತ್ತ ದೇವತೆಗಳಂತೆ ಸುಖದಿಂದಿದ್ದರು.

೫೪. ಶ್ರೀರಾಮನನ್ನು ನೋಡಿ ಆವನ ತಾಯಿತಂದೆಗಳು ಸಂತೋಷಪಡುತ್ತಿರಲು ರಾಮನು ಸೀತೆಯೊಡನೆ ವೈಕುಂಠದಲ್ಲಿ ಲಕ್ಷ್ಮಿಯೊಡನೆ ವಿಷ್ಣುವು ರಮಿಸುತ್ತಿರುವಂತೆ ರಮಿಸುತ್ತಿದ್ದನು.

೫೫. ಹೀಗಿರುತ್ತಿರಲು ಕೈಕೇಯಿಯ ಸಹೋದರನಾದ ಯುಧಾಜಿತ್ತು ಎಂಬುವನು ಸೋದರಳಿಯನಾದ ಭರತನನ್ನು ತನ್ನ ರಾಜ್ಯಕ್ಕೆ ಕರೆದುಕೊಂಡು ಹೋಗಲು ಬಂದನು ಆಗ ದಶರಥನೂ ಕೂಡ ವಿಶ್ವಾಸದಿಂದ ಭರತನನ್ನು ಕಳುಹಿಸಿಕೊಟ್ಟನು. ಯುಧಾಜಿತನು ಭರತನ ಒಡನಾಡಿಯಾದ ಶತ್ರುಘ್ನನನ್ನೂ ಕರೆದುಕೊಂಡು ಹೋದನು.

ಶತ್ರುಘ್ನಂ ಚಾಪಿ ಸಂಪೂಜ್ಯ ಯುಧಾಜಿತಮರಿಂದಮಃ ।
ಕೌಸಲ್ಯಾ ಶುಶುಭೇ ದೇವೀ ರಾಮೇಣ ಸಹ ಸೀತಯಾ ॥
ದೇವಮಾತೇವ ಪೌಲೋಮ್ಯಾ ಶಚ್ಯಾ ಶಕ್ರೇಣ ಶೋಭನಾ ॥ ೫೬ ॥

ಸಾಕೇತೇ ಲೋಕನಾಥಪ್ರಥಿತಗುಣಗಣೋ ಲೋಕಸಂಗೀತಕೀರ್ತಿಃ
ಶ್ರೀರಾಮಃ ಸೀತಯಾಸ್ತೇಽಖಿಲಜನನಿಕರಾನಂದ ಸಂದೋಹಮೂರ್ತಿಃ ।

---

೫೬. ಇತ್ತ ಅಯೋಧ್ಯೆಯಲ್ಲಿ ರಾಮನ ತಾಯಿಯಾದ ಕೌಸಲ್ಯೆಯು ರಾಮನೊಡನೆಯೂ, ಸೀತೆಯೊಡನೆಯೂ ಇದ್ದುಕೊಂಡು ಅವರನ್ನು ನೋಡುತ್ತಾ ದೇವೇಂದ್ರನ ತಾಯಿಯು ಶಚಿಯನ್ನೂ ಇಂದ್ರನನ್ನೂ ನೋಡಿ ಸಂತೋಷಿಸುವಂತೆ ಸಂತೋಷಪಡುತ್ತಿದ್ದಳು.

೫೭. ಲೋಕನಾಥನೂ, ಪ್ರಸಿದ್ಧವಾದ ಗುಣಗಳನ್ನು ಹೊಂದಿದವನೂ, ಜನಗಳಿಂದ ಹೊಗಳಲ್ಪಡುತ್ತಿರುವ ಕೀರ್ತಿಗಳುಳ್ಳವನೂ ಆದ ಶ್ರೀರಾಮನು ಆ ಅಯೋಧ್ಯೆಯಲ್ಲಿ ಸೀತೆಯೊಡನೆ ತನ್ನ ತಾಯಂದಿರೆಲ್ಲರಿಗೂ ಬಹುವಾದ ಆನಂದವನ್ನುಂಟುಮಾಡುತ್ತಿದ್ದನು. ಅಖಿಲರಿಗೂ

ನಿತ್ಯಶ್ರೀರ್ನಿರ್ವಿಕಾರೋ ನಿರವಧಿ ವಿಭವೋ ನಿತ್ಯಮಾಯಾನಿರಾಸೋ
ಮಾಯಾಕಾರ್ಯಾನುಸಾರೀ ಮನುಜ ಇವ ಸದಾ ಭಾತಿ ದೇವೋಽಖಿಲೇಶಃ ॥ ೫೭ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಉಮಾಮಹೇಶ್ವರ ಸಂವಾದೇ
ಬಾಲಕಾಂಡೇ ಸಪ್ತಮಃ ಸರ್ಗಃ

ಅಧ್ಯಾತ್ಮ ಬಾಲಕಾಂಡೇ ಚ ಸರ್ಗಾಃ ಸಪ್ತೈವ ಶಂಭುನಾ । ದಿಷ್ಟಾಃ ಷಷ್ಟ್ಯುತ್ತರತ್ರಿಂಶಚ್ಛ್ಲೋಕಾ ಮೋಕ್ಷಪ್ರದಾ ನೃಣಾಂ ॥
ಬಾಲಕಾಂಡಃ ಸಮಾಪ್ತಃ

ಒಡೆಯನಾದ ಈ ಸ್ವಾಮಿಯು ಯಾವಾಗಲೂ ಸಂಪತ್ತುಳ್ಳವನು. ವಿಕಾರವಿಲ್ಲದವನು. ಅವನ ವೈಭವಗಳಿಗೆ ಕೊನೆ ಮೊದಲೇ ಇಲ್ಲ. ಮಾಯೆಯನ್ನು ಯಾವಾಗಲೂ ಹೊಂದತಕ್ಕವನಲ್ಲ. ಅಖಿಲೇಶನಾದ ಆ ಸ್ವಾಮಿಯು ಮನುಷ್ಯನಂತೆಯೇ ಯಾವಾಗಲೂ ಪ್ರಕಾಶಿಸುತ್ತಲಿದ್ದನು.

ಇಂತು ಶ್ರೀಮದಧ್ಯಾತ್ಮರಾಮಾಯಣದ ಉಮಾಮಹೇಶ್ವರ ಸಂವಾದದ ಬಾಲಕಾಂಡದಲ್ಲಿ ಏಳನೆಯ ಸರ್ಗವು.

ಈ ಅಧ್ಯಾತ್ಮರಾಮಾಯಣದ ಬಾಲಕಾಂಡದಲ್ಲಿ ಶಂಭುವು ಹೇಳಿರುವುದು ಏಳುಸರ್ಗಗಳು. ಮತ್ತು ಮುನ್ನೂರ ಅರವತ್ತು ಶ್ಲೋಕಗಳು. ಇವು ಮನುಷ್ಯರಿಗೆ ಮೋಕ್ಷವನ್ನು ಕೊಡುತ್ತವೆ.

|| ಶ್ರೀ ||

|| ಶಾರದಾ ಗಣೇಶ ಗುರುಭ್ಯೋ ನಮಃ ||

ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡಃ

|| ಅಯೋಧ್ಯಾಕಾಂಡೇ ನ್ಯಾಸ ಧ್ಯಾನ ಜಪ ಕ್ರಮಃ ||

ಅಯೋಧ್ಯಾಕಾಂಡಕ್ಕೆ ನ್ಯಾಸ ಧ್ಯಾನ ಜಪ ಕ್ರಮಗಳು

ತತ್ರಕಾಂಡೇ ಸಂಕಲ್ಪಮಾಹ

ಕಾಂಡಕ್ಕೆ ಸಂಕಲ್ಪವನ್ನು ಹೇಳುವುದು.

ಓಂ ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡ ಮಹಾ ಮಾಲಾಮಂತ್ರಸ್ಯ, ಶ್ರೀಭಗವಾನ್ ಸದಾಶಿವ ಋಷಿಃ, ಅನುಷ್ಟುಪ್ ಛಂದಃ, ಶ್ರೀರಾಮಃ ಪರಮಾತ್ಮಾ ದೇವತಾ. ಓಂ ನಮೋ ನಾರಾಯಣಾಯೇತಿ ಬೀಜಂ. ದಾಶರಥಿರಿತಿ ಶಕ್ತಿಃ. ರಾವಣಘ್ನ ಇತಿ ಕೀಲಕಂ.

ಮಮ ಅಮುಕ ಕಾಮನಾಸಿದ್ಧ್ಯರ್ಥಂ ಅಮುಕ ಸ್ತೋತ್ರಸ್ಯ ಮಂತ್ರಸಂಪುಟೀಕರಣಂ ಕರಿಷ್ಯೇ. ಅಥ ಲೋಮ ವಿಲೋಮ ಮಂತ್ರನ್ಯಾಸಯುಕ್ತಂ ಕರಿಷ್ಯೇ. ವಾ, ಮಂಡಲಯುಕ್ತಂ ಕರಿಷ್ಯೇ. ಇತ್ಯಾದೌ ಸಂಕಲ್ಪನ್ಯಾಸಾನ್ ಚರೇತ್.

ಓಂ ಶ್ರೀಮದಧ್ಯಾತ್ಮರಾಮಾಯಣದಲ್ಲಿ ಅಯೋಧ್ಯಾಕಾಂಡದ ಮಹಾಮಾಲಾಮಂತ್ರಕ್ಕೆ ಶ್ರೀ ಭಗವಂತನಾದ ಸದಾಶಿವನು ಋಷಿಯು, ಅನುಷ್ಟುಪ್ ಛಂದಸ್ಸು, ಶ್ರೀರಾಮ ಪರಮಾತ್ಮನೇ ದೇವತೆಯು. ಓಂ ನಮೋ ನಾರಾಯಣಾಯ ಎಂಬುದು ಬೀಜವು. ದಾಶರಥಿ ಎಂಬುದು ಶಕ್ತಿಯು. ರಾವಣಘ್ನ ಎಂಬುದು ಕೀಲಕವು.

ನನಗೆ ಇಂತಹ ಅಪೇಕ್ಷೆಯು ಸಿದ್ಧಿಸುವುದಕ್ಕೋಸ್ಕರ ಇಂತಹ ಸ್ತೋತ್ರದ ಮಂತ್ರಸಂಪುಟೀಕರಣವನ್ನು ಮಾಡುತ್ತೇನೆ. ಎಂದಾಗಲೀ ಲೋಮ ವಿಲೋಮ ಮಂತ್ರನ್ಯಾಸಸಹಿತವಾಗಿ ಎಂದಾಗಲಿ ಮಂಡಲಯುಕ್ತವಾಗಿ ಎಂದಾಗಲಿ ಯಾವುದಾದರೂ ಒಂದನ್ನು ಅನುಸರಿಸಿ ಸಂಕಲ್ಪಿಸಬೇಕು. (ಇವಕ್ಕೆ ಆಚಾರ ಅಥವಾ ಗುರೂಪದೇಶವೇ ಮುಖ್ಯವು.) ಹೀಗೆಂದು ಆದಿಯಲ್ಲಿ ಸಂಕಲ್ಪಿಸಿ ನ್ಯಾಸಗಳನ್ನು ಮಾಡಿಕೊಳ್ಳಬೇಕು.

॥ ಅಥ ಋಷ್ಯಾದಿನ್ಯಾಸಃ ॥

ಋಷ್ಯಾದಿನ್ಯಾಸವು

ಓಂ ಶ್ರೀ ಭಗವಾನ್ ಸದಾಶಿವ ಋಷಯೇ ನಮಃ ಶಿರಸಿ. ಓಂ ಅನುಷ್ಟುಪ್ ಛಂದಸೇ ನಮಃ ಮುಖೇ. ಓಂ ಶ್ರೀರಾಮ ಪರಮಾತ್ಮ ದೇವತಾಯೈ ನಮಃ ಗುಹ್ಯೇ. ಓಂ ಶ್ರೀ ದಾಶರಥಿರಿತಿ ಶಕ್ತಯೇ ನಮಃ ಪಾದಯೋ. ಓಂ ಶ್ರೀ ರಾವಣಘ್ನ ಇತಿ ಕೀಲಕಾಯ ನಮಃ ಸರ್ವಾಂಗೇ.

ಮಮ ಚತುರ್ವಿಧ ಪುರುಷಾರ್ಥ ಸಿದ್ಧ್ಯರ್ಥೇ ಜಪೇ ವಿನಿಯೋಗಃ

ಧರ್ಮಾರ್ಥ ಕಾಮಮೋಕ್ಷಗಳೆಂಬ ನಾಲ್ಕುಬಗೆಯ ಪುರುಷಪ್ರಯೋಜನಗಳು ನನಗೆ ಸಿದ್ಧಿಸುವುದಕ್ಕೋಸ್ಕರ ಜಪಮಾಡುವುದರಲ್ಲಿ ವಿನಿಯೋಗವು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ರಾಂ ರೀಂ ರೂಂ ರೈಂ ರೌಂ ರಃ ಅಂಗುಷ್ಠಾಭ್ಯಾಂ ನಮಃ, ಓಂ ರಾಂ ರೀಂ ರೂಂ ರೈಂ ರೌಂ ರಃ ತರ್ಜನೀಭ್ಯಾಂ ನಮಃ, ಓಂ ರಾಂ ರೀಂ ರೂಂ ರೈಂ ರೌಂ ರಃ ಮಧ್ಯಮಾಭ್ಯಾಂ ನಮಃ, ಓಂ ರಾಂ ರೀಂ ರೂಂ ರೈಂ ರೌಂ ರಃ ಅನಾಮಿಕಾಭ್ಯಾಂ ನಮಃ, ಓಂ ರಾಂ ರೀಂ ರೂಂ ರೈಂ ರೌಂ ರಃ ಕನಿಷ್ಠಿಕಾಭ್ಯಾಂ ನಮಃ, ಓಂ ರಾಂ ರೀಂ ರೂಂ ರೈಂ ರೌಂ ರಃ ಕರತಲಕರಪೃಷ್ಠಾಭ್ಯಾಂ ನಮಃ,

॥ ಅಥ ಹೃದಯಾದಿನ್ಯಾಸಃ ॥

ಹೃದಯಾದಿನ್ಯಾಸವು

ಓಂ ರಾಂ ರೀಂ ರೂಂ ರೈಂ ರೌಂ ರಃ ಹೃದಯಾಯ ನಮಃ, ಓಂ ರಾಂ ರೀಂ ರೂಂ ರೈಂ ರೌಂ ರಃ ಶಿರಸೇ ಸ್ವಾಹಾ, ಓಂ ರಾಂ ರೀಂ ರೂಂ ರೈಂ ರೌಂ ರಃ ಶಿಖಾಯೈ ವಷಟ್, ಓಂ ರಾಂ ರೀಂ ರೂಂ ರೈಂ ರೌಂ ರಃ ಕವಚಾಯ ಹುಂ, ಓಂ ರಾಂ ರೀಂ ರೂಂ ರೈಂ ರೌಂ ರಃ ನೇತ್ರತ್ರಯಾಯ ವೌಷಟ್, ಓಂ ರಾಂ ರೀಂ ರೂಂ ರೈಂ ರೌಂ ರಃ ಅಸ್ತ್ರಾಯ ಫಟ್,

ಓಂ ರಾಂ ರೀಂ ರೂಂ ರೈಂ ರೌಂ ರಃ ಇತಿ ಮಂತ್ರೇಣ ದಿಗ್ಬಂಧಃ

ಓಂ ರಾಂ ರೀಂ ರೂಂ ರೈಂ ರೌಂ ರಃ ಈ ಮಂತ್ರದಿಂದ ದಿಗ್ಬಂಧವು.

॥ ಅಥ ಧ್ಯಾನಂ ॥

ಧ್ಯಾನವು

ನೀಲೇಂದೀವರತುಲ್ಯಶ್ಯಾಮವದನಂ ಪೀತಾಂಬರಾಲಂಕೃತಂ । ಮುದ್ರಾಂ ಜ್ಞಾನಮಯೀಂ ದಧಾನಮಪರಾಂ ವಿದ್ಯುನ್ನಿಭಾಂ ರಾಘವಂ ॥ ಪಶ್ಯಂತೀಂ ಮುಕುಟಾಂಗದಾದಿವಿವಿಧೈಃ ಕಲ್ಪೋಜ್ಜ್ವಲಾಂಗಂ ಭಜೇ । ಶ್ರೀಮದ್ದಾಶರಥಿಂ ನಮಾಮಿ ಸುತರಾಮುಬ್ಧ್ಯಾಪ್ಲವಂ ದುಸ್ತರೇ ॥

ಇತಿ ಧ್ಯಾತ್ವಾ ಮಾನಸೋಪಚಾರೈಃ ಸಂಪೂಜ್ಯ ಶ್ರೀರಾಮಚರಿತಂ ಪಠ್ಯತೇ ತದಾ

ಇಂತೆಂದು ಧ್ಯಾನಿಸಿ ಮಾನಸೋಪಚಾರಗಳಿಂದ ಪೂಜಿಸಬೇಕು. ಅನಂತರ ರಾಮಾಯಣವನ್ನು ಪಾರಾಯಣಮಾಡಬೇಕು.

ಇದು ಈ ಕಾಂಡಕ್ಕೆ ಪೂರ್ತಿಯಾಗಿ ಸಂಬಂಧಪಟ್ಟ ನ್ಯಾಸವು.

ಅಥ ಅಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಪ್ರಥಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ।

ಓಂ ಅಸ್ಯ ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಪ್ರಥಮಸರ್ಗಸ್ಯ

ಶ್ರೀ ಭಗವಾನ್ ಬಾದರಾಯಣ ಋಷಿಃ, ಗಾಯತ್ರೀ ಛಂದಃ, ಓಂ ಶ್ರೀಮನ್ನಾರಾಯಣೋ ದೇವತಾ, ಶ್ರೀಲಕ್ಷ್ಮೀರ್ಬೀಜಂ, ಪರಮಾಶಕ್ತಿಃ, ಅವ್ಯಕ್ತಂ ಕೀಲಕಂ, ಅಮುಕಸಂಪುಟೀಕರಣ ಸಿದ್ಧ್ಯರ್ಥಂ ಅಮುಕಮಂತ್ರಲೋಮ ವಿಲೋಮಸಂಪುಟೀಕರಣ ನವಾಧ್ಯಾಯೀ ಮಂತ್ರಾಷ್ಟಾಕ್ಷರ ಸಂಯುಕ್ತಂ ಪ್ರಥಮಸರ್ಗೇ ನ್ಯಾಸ ಧ್ಯಾನ ಜಪ ಮಹಂ ಕರಿಷ್ಯೇ.

॥ ಇತಿ ಸಂಕಲ್ಪಃ ॥

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ರಾಂ ರೀಂ ಕ್ಲೀಂ ಅಂಗುಷ್ಠಾಭ್ಯಾಂ ನಮಃ
ಓಂ ರಾಂ ರೀಂ ಕ್ಲೀಂ ತರ್ಜನೀಭ್ಯಾಂ ನಮಃ
ಓಂ ರಾಂ ರೀಂ ಕ್ಲೀಂ ಮಧ್ಯಮಾಭ್ಯಾಂ ನಮಃ
ಓಂ ರಾಂ ರೀಂ ಕ್ಲೀಂ ಅನಾಮಿಕಾಭ್ಯಾಂ ನಮಃ
ಓಂ ರಾಂ ರೀಂ ಕ್ಲೀಂ ಕನಿಷ್ಠಿಕಾಭ್ಯಾಂ ನಮಃ
ಓಂ ರಾಂ ರೀಂ ಕ್ಲೀಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಷಡಂಗನ್ಯಾಸವು

ಓಂ ರಾಂ ರೀಂ ಕ್ಲೀಂ ಹೃದಯಾಯ ನಮಃ

ಓಂ ರಾಂ ರೀಂ ಕ್ಲೀಂ ಶಿರಸೇ ಸ್ವಾಹಾ

ಓಂ ರಾಂ ರೀಂ ಕ್ಲೀಂ ಶಿಖಾಯೈ ವಷಟ್

ಓಂ ರಾಂ ರೀಂ ಕ್ಲೀಂ ಕವಚಾಯ ಹುಂ

ಓಂ ರಾಂ ರೀಂ ಕ್ಲೀಂ ನೇತ್ರತ್ರಯಾಯ ವೌಷಟ್

ಓಂ ರಾಂ ರೀಂ ಕ್ಲೀಂ ಅಸ್ತ್ರಾಯ ಫಟ್

ಓಂ ರಾಂ ರೀಂ ಕ್ಲೀಂ ಇತಿ ಮಂತ್ರೇಣ ದಿಗ್ಬಂಧಃ

ಓಂ ರಾಂ ರೀಂ ಕ್ಲೀಂ ಇಂತೆಂದು ದಿಗ್ಬಂಧವನ್ನು ಮಾಡಿಕೊಳ್ಳಬೇಕು.

॥ ಅಥ ಧ್ಯಾನಂ ॥

ಧ್ಯಾನವು

ಏಕದಾ ಸುಖಮಾಸೀನಂ ರಾಮಂ ಸ್ವಾಂತಃ ಪುರಾಜಿರೇ । ಸರ್ವಾಭರಣಸಂಪನ್ನಂ ರತ್ನಸಿಂಹಾಸನೇ ಸ್ಥಿತಂ ॥

॥ ಇತಿ ಧ್ಯಾತ್ವಾ ಚ ಶ್ರೀ ರಾಮಚರಿತಂ ಪಠ್ಯತೇ ತದಾ ॥

ಇತಿ ಅಯೋಧ್ಯಾಕಾಂಡೇ ಪ್ರಥಮಸರ್ಗೇ ನ್ಯಾಸ ಧ್ಯಾನ ಜಪವಿಧಿಃ

ಈ ರೀತಿಯಾಗಿ ಧ್ಯಾನಿಸಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಅಯೋಧ್ಯಾಕಾಂಡದಲ್ಲಿ ಇಂತು ನ್ಯಾಸ ಧ್ಯಾನ ಜಪವಿಧಿಯನ್ನು ಮಾಡಿಕೊಳ್ಳಬೇಕು.

ಪಾರಾಯಣಾನಂತರಂ ಪುನಃ ಷಡಂಗನ್ಯಾಸಂ ಕೃತ್ವಾ ಓಂ ರಾಂ ರೀಂ ಕ್ಲೀಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾನ ಶ್ಲೋಕಂ ಪಠೇತ್

ಪಾರಾಯಣವನ್ನು ಮಾಡಿದಮೇಲೆ ಮತ್ತೆ ಷಡಂಗನ್ಯಾಸವನ್ನು ಮಾಡಿಕೊಂಡು ಓಂ ರಾಂ ರೀಂ ಕ್ಲೀಂ ಇತಿ ದಿಗ್ವಿಮೋಕಃ ಎಂದು ಹೇಳಿ ಧ್ಯಾನ ಶ್ಲೋಕವನ್ನು ಹೇಳಬೇಕು.

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಪ್ರಥಮಸ್ಸರ್ಗಃ

॥ ಶ್ರೀ ಮಹಾದೇವ ಉವಾಚ ॥

ಏಕದಾ ಸುಖಮಾಸೀನಂ ರಾಮಂ ಸ್ವಾಂತಃಪುರಾಜಿರೇ । ಸರ್ವಾಭರಣಸಂಪನ್ನಂ ರತ್ನಸಿಂಹಾಸನೇ ಸ್ಥಿತಂ ॥ ೧ ॥

ನೀಲೋತ್ಪಲದಳಂಶ್ಯಾಮ ಕೌಸ್ತುಭಾಮುಕ್ತಕಂಧರಂ । ಸೀತಯಾ ರತ್ನದಂಡೇನ ಚಾಮರೇಣಾಥ ವೀಜಿತಂ ॥ ೨ ॥

ಅಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ ಮೊದಲನೆಯ ಸರ್ಗವು

೧. ಮಹಾದೇವನು ಹೇಳಿದನು–ಒಂದುಸಾರಿ ಶ್ರೀರಾಮನು ತನ್ನ ಅಂತಃಪುರದ ಅಂಗಳದಲ್ಲಿ ಎಲ್ಲಾ ಆಭರಣಗಳನ್ನೂ ತೊಟ್ಟುಕೊಂಡು ರತ್ನಸಿಂಹಾಸನದಲ್ಲಿ ಸುಖವಾಗಿ ಕುಳಿತಿದ್ದನು.

೨. ಕನ್ನೆಯದೆಲೆಯ ದಳದಂತೆ ನೀಲಿಯ ಬಣ್ಣಕ್ಕೆ ಇದ್ದನು. ಕೌಸ್ತುಭಮಣಿಯನ್ನು ಕತ್ತಿಗೆ ಹಾಕಿಕೊಂಡಿದ್ದನು ರತ್ನದ ಹಿಡಿಯುಳ್ಳ ಚಾಮರದಿಂದ ಸೀತೆಯು ಬೀಸುತ್ತಿದ್ದಳು.

ವಿನೋದಯಂತಂ ತಾಂಬೂಲಚರ್ವಣಾದಿಭಿರಾದರಾತ್ । ನಾರದೋಽವಾತರದ್ದ್ರಷ್ಟುಮಂಬರಾದ್ಯತ್ರ ರಾಘವಃ ॥ ೩ ॥

ಶುದ್ಧಸ್ಫಟಿಕಸಂಕಾಶಃ ಶರಚ್ಚಂದ್ರ ಇವಾಮಲಃ । ಅತರ್ಕಿತಮುಪಾಯಾತೋ ನಾರದೋ ದಿವ್ಯದರ್ಶನಃ ॥ ೪ ॥

ತಂ ದೃಷ್ಟ್ವಾ ಸಹಸೋತ್ಥಾಯ ರಾಮಃ ಪ್ರೀತ್ಯಾ ಕೃತಾಂಜಲಿಃ । ನನಾಮ ಶಿರಸಾ ಭೂಮೌ ಸೀತಯಾ ಸಹ ಭಕ್ತಿಮಾನ್ ॥ ೫ ॥

ಉವಾಚ ನಾರದಂ ರಾಮಃ ಪ್ರೀತ್ಯಾ ಪರಮಯಾ ಯುತಃ । ಸಂಸಾರಿಣಾಂ ಮುನಿಶ್ರೇಷ್ಠ ದುರ್ಲಭಂ ತವ ದರ್ಶನಂ ॥ ೬ ॥

---

೩. ತಾಂಬೂಲವನ್ನು ಹಾಕಿಕೊಳ್ಳುತ್ತಾ ಸುಖವಾಗಿ ಸರಸ ಸಲ್ಲಾಪದ ಮಾತುಗಳನ್ನು ಆಡುತ್ತಲಿದ್ದನು. ಈರೀತಿ ಇರುತ್ತಿರುವಾಗ ಈ ರಾಮನನ್ನು ನೋಡಲು ನಾರದನು ಅಂತರಿಕ್ಷದಿಂದ ಈ ರಾಮನಿರುವ ಜಾಗಕ್ಕೆ ಇಳಿದು ಬಂದನು.

೪. ಈ ನಾರದನು ನಿರ್ಮಲವಾದ ಸ್ಫಟಿಕದ ಮಣಿಯಂತೆಯೂ, ಕಳಂಕರಹಿತನಾದ ಚಂದ್ರನಂತೆಯೂ ಇದ್ದನು. ಇಂತಹ ದಿವ್ಯ ದರ್ಶನವುಳ್ಳ ನಾರದನು ಯಾರಿಗೂ ತಿಳಿಯದಂತೆ ಇದ್ದಕ್ಕಿದ್ದಂತೆಯೇ ಬಂದನು.

೫. ಆ ನಾರದನನ್ನು ನೋಡಿದ ಶ್ರೀರಾಮನು ಬೇಗನೆಯೆದ್ದು ಸೀತೆಯೊಡನೆ ಭಕ್ತಿಯಿಂದ ಕೈಮುಗಿದುಕೊಂಡು ತಲೆ ತಗ್ಗಿಸಿಕೊಂಡು ನೆಲಕ್ಕೆ ಬಗ್ಗಿ ನಮಸ್ಕರಿಸಿದನು.

೬. ಆಗ ನಾರದನನ್ನು ನೋಡಿ ರಾಮನು ಬಹು ಪ್ರೀತಿಯಿಂದ ಇಂತೆಂದನು. "ಎಲೈ ನಾರದನೆ! ಸಂಸಾರಿಗಳಾದವರಿಗೆ ನಿನ್ನ ದರ್ಶನವು ಬಹುದುರ್ಲಭವು.

ಅಸ್ಮಾಕಂ ವಿಷಯಾಸಕ್ತಚೇತಸಾಂ ನಿತರಾಂ ಮುನೇ । ಅವಾಸ್ತ್ರಂ ಮೇ ಪೂರ್ವಜನ್ಮಕೃತಪುಣ್ಯಮಹೋದಯೈಃ ॥ ೭ ॥

ಸಂಸಾರಿಣಾಪಿ ಹಿ ಮುನೇ ಲಭ್ಯತೇ ಸತ್ಸಮಾಗಮಃ । ಅತಸ್ತ್ವದ್ದರ್ಶನಾದೇವ ಕೃತಾರ್ಥೋಽಸ್ಮಿ ಮುನೀಶ್ವರ ॥ ೮ ॥

ಕಿಂ ಕಾರ್ಯಂ ತೇ ಮಯಾ ಕಾರ್ಯಂ ಬ್ರೂಹಿ ತತ್ಕರವಾಣಿ ಭೋಃ । ಅಥ ತಂ ನಾರದೋಽಪ್ಯಾಹ ರಾಘವಂ ಭಕ್ತವತ್ಸಲಂ ॥ ೯ ॥

ಕಿಂ ಮೋಹಯಸಿ ಮಾಂ ರಾಮ ವಾಕ್ಯೈರ್ಲೋಕಾನುಸಾರಿಭಿಃ । ಸಂಸಾರ್ಯಹಮಿತಿ ಪ್ರೋಕ್ತಂ ಸತ್ಯಮೇತತ್ತ್ವಯಾ ವಿಭೋ ॥೧೦॥

---

೭. ಆದರಲ್ಲೂ ವಿಷಯ ಸುಖಗಳಿಗೆ ಅಧೀನರಾಗಿ ಅದನ್ನು ಎಡೆಬಿಡದೆ ಅನುಭವಿಸುತ್ತಿರುವ ನಮ್ಮಗಳಿಗಂತೂ ಬಹು ದುರ್ಲಭವು. ಅಂತಹ ನಿನ್ನ ಈ ದರ್ಶನವು ನನ್ನ ಪೂರ್ವಜನ್ಮದ ಮಹಾ ಪುಣ್ಯಗಳ ಫಲದಿಂದ ದೊರಕಿದೆ.

೮. ಎಲೈ! ಮುನಿಯೆ! ಸಂಸಾರಿಗಳಾದವರಿಗೂ ಅವರ ಪುಣ್ಯವಿಶೇಷಗಳಿಂದ ಸತ್ಪುರುಷರ ಸಮಾಗಮವು ಉಂಟಾಗುತ್ತದೆ. ಆದ್ದರಿಂದಲೇ ಈ ನಿನ್ನ ದರ್ಶನದಿಂದ ನಾನು ಕೃತಾರ್ಥನಾಗಿದ್ದೇನೆ. ನನ್ನಿಂದ ನಿನಗೇನುಬೇಕು ? ಹೇಳು. ಅದನ್ನು ನಾನು ನಿನಗೆ ಕೊಡುತ್ತೇನೆ.

೯. ಅನಂತರ ನಾರದನು ಭಕ್ತವತ್ಸಲನಾದ ರಾಮನನ್ನು ಕುರಿತು ಇಂತೆಂದನು. ಎಲೈ ಶ್ರೀರಾಮನೆ! ಲೋಕವನ್ನು ಅನುಸರಿಸಿಕೊಂಡು ಆಡುತ್ತಿರುವ ಈ ಮಾತುಗಳಿಂದ ನನ್ನನ್ನೇಕೆ ಭ್ರಾಂತಿಪಡಿಸುತ್ತೀಯೆ?

೧೦. ಎಲೈ ಸ್ವಾಮಿಯೆ! ನೀನು ಸಂಸಾರಿಯೆಂದು ತಿಳಿದುಕೊಂಡು ಈ ಮಾತನ್ನು ಆಡುತ್ತಿದ್ದೀಯೆ. ಅದು ಸತ್ಯವು. ಜಗತ್ತಿಗೆ ಆದಿಭೂತಳಾದ ಆ ಮಾಯೆಯೇ ನಿನ್ನ ಪತ್ನಿಯಾಗಿದ್ದಾಳೆ.

ಜಗತಾಮಾದಿಭೂತಾ ಯಾ ಸಾ ಮಾಯಾ ಗೃಹಿಣೀ ತವ । ತ್ವತ್ಸನ್ನಿಕರ್ಷಾಜ್ಜಾಯಂತೇ ತಸ್ಯಾಂ ಬ್ರಹ್ಮಾದಯಃ ಪ್ರಜಾಃ ॥ ೧೧ ॥

ತ್ವದಾಶ್ರಯಾ ಸದಾ ಭಾತಿ ಮಾಯಾ ಯಾ ತ್ರಿಗುಣಾತ್ಮಿಕಾ । ಸೂತೇಜಸ್ರಂ ಶುಕ್ಲಕೃಷ್ಣಲೋಹಿತಾಸ್ಸರ್ವದಾ ಪ್ರಜಾಃ ॥ ೧೨ ॥

ಲೋಕತ್ರಯಮಹಾಗೇಹೇ ಗೃಹಸ್ಥಸ್ತ್ವಮುದಾಹೃತಃ । ತ್ವಂ ವಿಷ್ಣುರ್ಜಾನಕೀ ಲಕ್ಷ್ಮೀಶ್ಶಿವಸ್ತ್ವಂ ಜಾನಕೀ ಶಿವಾ ॥ ೧೩ ॥

ಬ್ರಹ್ಮಾ ತ್ವಂ ಜಾನಕೀ ವಾಣೀ ಸೂರ್ಯಸ್ತ್ವಂ ಜಾನಕೀ ಪ್ರಭಾ । ಭವಾನ್ ಶಶಾಂಕಸ್ಸೀತಾ ತು ರೋಹಿಣೀ ಶುಭಲಕ್ಷಣಾ ॥ ೧೪ ॥

---

೧೧. ನೀನು ಆ ಮಾಯೆಯಲ್ಲಿ ಸೇರುವುದರಿಂದ ಆ ಮಾಯೆಯಲ್ಲಿ ಬ್ರಹ್ಮನೇ ಮುಂತಾದ ಪ್ರಜೆಗಳು ಹುಟ್ಟುತ್ತಾರೆ. ಸತ್ವ ರಜಸ್ತಮೋ ಗುಣಗಳಿಂದು ಮೂರುಬಗೆಯಾಗಿ ಆ ಮಾಯೆಯು ನಿನ್ನನ್ನು ಆಶ್ರಯಿಸಿಕೊಂಡು ಅವತರಿಸುತ್ತದೆ.

೧೨. ಆ ಮಾಯೆಯು ಸತ್ತ್ವ ರಜ ಸ್ತಮೋಗುಣಗಳುಳ್ಳ ಪ್ರಜೆಗಳನ್ನು ಅಂತೆಯೇ ಹಡೆಯುತ್ತಾಳೆ. ಈ ಮೂರು ಲೋಕವೆಂಬ ದೊಡ್ಡ ಮನೆಗೆ ನೀನೇ ಗೃಹಸ್ಥನೆಂಬುದಾಗಿ ಹೇಳಲ್ಪಟ್ಟಿದ್ದೀಯೆ.

೧೩–೧೭. ಎಲೈ ರಾಮನೆ! ನೀನೇ ವಿಷ್ಣುವು. ಜಾನಕಿಯೇ ಲಕ್ಷ್ಮಿಯು. ನೀನೇ ಶಿವನು. ಜಾನಕಿಯೇ ಪಾರ್ವತಿಯು. ನೀನೇ ಬ್ರಹ್ಮನು. ಜಾನಕಿಯೇ ಸರಸ್ವತಿಯು. ನೀನೇ ಸೂರ್ಯನು. ಜಾನಕಿಯೇ ಅವನ ಹೆಂಡತಿಯಾದ ಪ್ರಭೆಯು. ನೀನೇ ಚಂದ್ರನು. ಸೀತೆಯೇ ರೋಹಿಣಿಯು. ನೀನೇ ಇಂದ್ರನು. ಸೀತೆಯೇ ಆ ಶಚೀದೇವಿಯು. ನೀನೇ ಅಗ್ನಿಯು. ಸೀತೆಯೇ ಸ್ವಾಹಾದೇವಿಯು. ನೀನೇ

ಶಕ್ರಸ್ತ್ವಮೇವ ಪೌಲೋಮೀ ಸೀತಾ ಸ್ವಾಹಾನಲೋ ಭರ್ವಾ । ಯಮಸ್ತ್ವಂ ಕಾಲರೂಪಶ್ಚ ಸೀತಾ ಸಂಯಮಿನೀ ಪ್ರಭೋ॥೧೫॥
ನಿರೃತಿಸ್ತ್ವಂ ಜಗನ್ನಾಥ ತಾಮಸೀ ಜಾನಕೀ ಶುಭಾ । ರಾಮ ತ್ವಮೇವ ವರುಣೋ ಭಾರ್ಗವೀ ಜಾನಕೀ ಶುಭಾ ॥ ೧೬ ॥
ವಾಯುಸ್ತ್ವಂ ರಾಮ ಸೀತಾ ತು ಸದಾಗತಿರಿತೀರಿತಾ । ಕುಬೇರಸ್ತ್ವಂ ರಾಮ ಸೀತಾ ಸರ್ವಸಂಪತ್ಪ್ರಕೀರ್ತಿತಾ ॥ ೧೭ ॥
ರುದ್ರಾಣೀ ಜಾನಕೀ ಪ್ರೋಕ್ತಾ ರುದ್ರಸ್ತ್ವಂ ಲೋಕನಾಶಕೃತ್ । ಲೋಕೇ ಸ್ತ್ರೀವಾಚಕಂ ಯಾವತ್ತತ್ಸರ್ವಂ ಜಾನಕೀ ಶುಭಾ॥೧೮॥
ಪುನ್ನಾಮವಾಚಕಂ ಯಾವತ್ತತ್ಸರ್ವಂ ತ್ವಂ ಹಿ ರಾಘವ । ತಸ್ಮಾಲ್ಲೋಕತ್ರಯೇ ದೇವ ಯುವಾಭ್ಯಾಂ ನಾಸ್ತಿ ಕಿಂಚಿನ ॥ ೧೯ ॥

ಕಾಲರೂಪನಾದ ಯಮನು. ಸೀತೆಯೇ ಆತನ ಹೆಂಡತಿಯಾದ ಸಂಯಮಿನಿಯು. ಜಗನ್ನಾಥನಾದ ನೀನೇ ನಿಋಋತಿಯು. ಆ ಜಾನಕಿಯೇ ತಾಮಸಿಯು. ನೀನೇ ವರುಣನು. ಆ ಜಾನಕಿಯೇ ಅವನ ಹೆಂಡತಿಯಾದ ಭಾರ್ಗವಿಯು. ನೀನೇ ವಾಯುವು. ಜಾನಕಿಯೇ ಅವನ ಹೆಂಡತಿಯಾದ ಸದಾಗತಿಯು. ನೀನೇ ಕುಬೇರನು. ಸೀತೆಯೇ ಸರ್ವಸಂಪತ್ತು. ನೀನೇ ಲೋಕನಾಶಕನಾದ ರುದ್ರನು. ಸೀತೆಯೇ ಆ ರುದ್ರನ ಹೆಂಡತಿಯಾದ ರುದ್ರಾಣಿಯು.

೧೮. ಲೋಕದಲ್ಲಿ ಸ್ತ್ರೀವಾಚಕಗಳು ಯಾವುವಿವೆಯೋ ಅವೆಲ್ಲವೂ ಆ ಮಂಗಳಕರಳಾದ ಸೀತೆಯು. ಪುರುಷವಾಚಕಗಳಾದುವು ಎಷ್ಟಿದೆಯೋ ಅವೆಲ್ಲವೂ ಸ್ವಾಮಿಯಾದ ನೀನೇ ಆಗಿದ್ದೀಯೆ.

೧೯. ಎಲೈ ಸ್ವಾಮಿಯೇ! ಇದರಿಂದ ಲೋಕದಲ್ಲಿ ನಿಮ್ಮಿಬ್ಬರಿಗಿಂತಲೂ ಬೇರೆಯಾದ ಪದಾರ್ಥಗಳೇ ಒಂದೂ ಇಲ್ಲ. ಆದರೆ ನೀನಲ್ಲದೆ ನಿನ್ನಂತೆಯೇ ತೋರುವ ಜ್ಞಾನವು ಆಭಾಸವಾದುದು. ಅದನ್ನೇ ಅಪ್ರಾಕೃತಜ್ಞಾನವೆನ್ನುತ್ತಾರೆ.

ತ್ವದಾಭಾಸೋದಿತಾಜ್ಞಾನಮಪ್ರಾಕೃತಮಿತೀರ್ಯತೇ । ತಸ್ಮಾನ್ಮಹಾಂಸ್ತತಸ್ಸೂತ್ರಂ ಲಿಂಗಂ ಸರ್ವಾತ್ಮಕಂ ತತಃ ॥ ೨೦ ॥

ಅಹಂಕಾರಶ್ಚ ಬುದ್ಧಿಶ್ಚ ಪಂಚಪ್ರಾಣೇಂದ್ರಿಯಾಣಿ ಚ । ಲಿಂಗಮಿತ್ಯುಚ್ಯತೇ ಪ್ರಾಜ್ಞೈರ್ಜನ್ಮಮೃತ್ಯುಸುಖಾದಿಮತ್ ॥ ೨೧ ॥

ಸ ಏವ ಜೀವಸಂಜ್ಞಶ್ಚ ಲೋಕೇ ಭಾತಿ ಜಗನ್ಮಯಃ । ಅವಾಚ್ಯಾನಾದ್ಯವಿದ್ಯೈವ ಕಾರಣೋಪಾಧಿರುಚ್ಯತೇ ॥ ೨೨ ॥

೨೦–೨೨. ಅಪ್ರಾಕೃತಜ್ಞಾನದಿಂದ ಮಹತ್ತತ್ವವು ಹುಟ್ಟುತ್ತದೆ. ಅದರಿಂದ ಎಲ್ಲದಕ್ಕೂ ಕಾರಣಭೂತವಾದ ಈ ಲಿಂಗಶರೀರವು ಉಂಟಾಗುತ್ತದೆ. ಅನಂತರ ಎಲ್ಲಾಕಡೆಯಲ್ಲಿಯೂ ಹರಡಿಕೊಂಡಿರುವ ಅಹಂಕಾರವು ಹುಟ್ಟುತ್ತದೆ. ಅನಂತರ ಬುದ್ಧಿಯೂ ಪಂಚಪ್ರಾಣಗಳೂ ಹುಟ್ಟುತ್ತವೆ. ಇವುಗಳೆಲ್ಲಕ್ಕೂ ಆಧಾರಭೂತವಾದ ದೇಹವು ಅನಂತರ ಉಂಟಾಗುತ್ತದೆ. ಇವರಲ್ಲಿಯೇ ಆ ಸೂತ್ರಧಾರಿಯಾದ ಜೀವನು ಇದ್ದುಕೊಂಡು ಇರುತ್ತಾನೆ. ಇದೇ ಲಿಂಗಶರೀರವು. ಈ ಲಿಂಗಶರೀರಕ್ಕೇನೆ ಜನ್ಮ, ಮೃತ್ಯು, ಸುಖ, ದುಃಖ ಇವುಗಳೆಲ್ಲವೂ ಇರುತ್ತವೆ.

ಈ ಜನ್ಮಾದಿಗಳಿಂದ ಈ ಕಷ್ಟ ಸುಖಗಳಿಗೊಳಗಾಗುವ ಸ್ಥೂಲಶರೀರಾಭಿಮಾನಿಯಾದ ಪರಮಾತ್ಮನೇ ಜೀವನೆಂದು ಹೆಸರನ್ನು ಹೊಂದಿ ಜಗತ್ತಿನಲ್ಲಿ ಕರೆಸಿಕೊಳ್ಳುತ್ತಾನೆ. ಈ ಜಗನ್ಮಯನಾದ ಆತ್ಮನು ಅಹಂಕಾರಗಳಿಗೆ ಒಳಪಡುವನಾದ್ದರಿಂದ ಆ ಆತ್ಮನೇ ಜೀವಸಂಜ್ಞಕನಾಗುವನು. ಆದಿರಹಿತವೂ ಇದು ಇಂತಹದೆಂದು ಹೇಳಲು ಆಗದ ಅವಿದ್ಯೆಯು ಎಂದರೆ ಮಾಯೆಯು ಜೀವನಿಗೆ ಕಾರಣೋಪಾಧಿಯೆಂದೆನಿಸಿಕೊಳ್ಳುತ್ತದೆ. [ಉಪಾಧಿಯೆಂದರೆ ಆಶ್ರಯ, ಪ್ರಕಾಶಮಾನವಾಗಿಯೂ ಬೆಳ್ಳಗೂ ಇರುವ ದೀಪದ ತೇಜಸ್ಸಿಗೆ ಕೆಂಪುಬಣ್ಣದ ಗಾಜನ್ನು ಹಾಕಿದರೆ ಆ ತೇಜಸ್ಸು ಗಾಜಿನದೆಸೆಯಿಂದ ಕೆಂಪಗೂ ಹಸುರುಬಣ್ಣದ ಗಾಜನ್ನು ಹಾಕಿದರೆ ಹಸುರಾಗಿಯೂ ಕಾಣುತ್ತದೆ. ಈ ಗಾಜಿನಂತಹದೇ ಉಪಾಧಿಯು.]

ಸ್ಥೂಲಂ ಸೂಕ್ಷ್ಮಂ ಕಾರಣಾಖ್ಯಮುಪಾಧಿತ್ರಿತಯಂ ಚಿತೇಃ । ಏತೈರ್ವಿಶಿಷ್ಟೋ ಜೀವಸ್ಸ್ಯಾದ್ವಿಯುಕ್ತಃ ಪರಮೇಶ್ವರಃ ॥ ೨೩ ॥

ಜಾಗ್ರತ್ಸ್ವಪ್ನಸುಷುಪ್ತ್ಯಾಖ್ಯಾ ಸಂಸೃತಿರ್ಯಾ ಪ್ರವರ್ತತೇ । ತಸ್ಯಾ ವಿಲಕ್ಷಣಸ್ಸಾಕ್ಷೀ ಚಿನ್ಮಾತ್ರಸ್ತ್ವಂ ರಘೂತ್ತಮ ॥ ೨೪ ॥

ತ್ವತ್ತ ಏವ ಜಗಜ್ಜಾತಂ ತ್ವಯಿ ಸರ್ವಂ ಪ್ರತಿಷ್ಠಿತಂ । ತ್ವಯ್ಯೇವ ಲೀಯತೇ ಕೃತ್ಸ್ನಂ ತಸ್ಮಾತ್ತ್ವಂ ಸರ್ವಕಾರಣಂ ॥ ೨೫ ॥

---

೨೩. ಈ ಉಪಾಧಿಯು ಸ್ಥೂಲ, ಸೂಕ್ಷ್ಮ, ಕಾರಣವೆಂಬುದಾಗಿ ಮೂರು ಬಗೆಯಾಗಿರುತ್ತದೆ. ಆ ಪರಮೇಶ್ವರನಾದ ಪರಮಾತ್ಮನು ಈ ಉಪಾಧಿಗಳಿಂದ ಕೂಡಿಕೊಂಡಾಗ ಜೀವನೆಂದೆನಿಸಿಕೊಳ್ಳುತ್ತಾನೆ. ಇವುಗಳನ್ನು ಬಿಟ್ಟಾಗ ಅವನೇ ಪರಮೇಶ್ವರನಾದ ಪರಮಾತ್ಮನು.

೨೪. ಜಾಗ್ರದವಸ್ಥೆ, ಸುಷುಪ್ತ್ಯವಸ್ಥೆ, ಸ್ವಪ್ನಾವಸ್ಥೆ, ಎಂಬ ಮೂರು ಬಗೆಯಾದ ಅವಸ್ಥೆಗಳಿಂದ ಈ ಸಂಸಾರಿಯು ಕೂಡಿರುವನು. ಎಲೈ ರಘೂತ್ತಮನೆ! ನೀನು ಅವುಗಳನ್ನು ಹೊಂದದ ಅವುಗಳಿಗಿಂತಲೂ ಬೇರೆಯಾದ ಅವುಗಳಿಗೆ ಸಾಕ್ಷಿಯಾದ ಚಿತ್ ಸ್ವರೂಪನು [ಜಾಗ್ರದವಸ್ಥೆ= ಮನುಷ್ಯನಾದವನು ಎಚ್ಚೆತ್ತು ಎಲ್ಲವನ್ನೂ ನೋಡಿ ವ್ಯವಹರಿಸುವ ಕಾಲ, ಸುಷುಪ್ತಿ= ಗಾಢನಿದ್ದೆಬಂದು ಒಂದನ್ನೂ ತಿಳಿಯದಿರುವಕಾಲ, ಸ್ವಪ್ನ= ಎಚ್ಚರವೂ ನಿದ್ದೆಯೂ ಎರಡೂಇಲ್ಲದೆ ಈಗ ಯಾವರೀತಿಯಾದ ವ್ಯವಹಾರಗಳನ್ನು ಅನುಭವಿಸತೊಡಗಿರುವನೋ ಅಂತೆಯೇ ಮಲಗಿರುವಾಗಲೂ ತೊಡಗಿರುವಂತೆ ಕಾಣುವ ಅನುಭವ.]

೨೫. ಈ ಜಗತ್ತೆಲ್ಲವೂ ನಿನ್ನಿಂದಲೇ ಹುಟ್ಟಿರುವುದು. ನಿನ್ನಲ್ಲಿಯೇ ನಿಂತಿರುವುದು. ನಿನ್ನಲ್ಲಿಯೇ ಕೊನೆಗೆ ಅಡಗುವುದು ಆದ್ದರಿಂದಲೇ ನೀನು ಎಲ್ಲಕ್ಕೂ ಕಾರಣನು.

ರಜ್ಞ್ವಾವಹಿಮಿವಾತ್ಮಾನಂ ಜೀವಂ ಜ್ಞಾತ್ವಾ ಭಯಂ ಭವೇತ್ । ಪರಾತ್ಮಾಹಮಿತಿ ಜ್ಞಾತ್ವಾ ಭವದುಃಖೈರ್ವಿಮುಚ್ಯತೇ ‖ ೨೬ ‖
ಚಿನ್ಮಾತ್ರಜ್ಯೋತಿಷಾ ಸರ್ವಾಃ ಸರ್ವದೇಹೇಷು ಬುದ್ಧಯಃ । ತ್ವಯಾ ಯಸ್ಮಾತ್ಪ್ರಕಾಶ್ಯಂತೇ ಸರ್ವಸ್ಯಾತ್ಮಾ ತತೋ ಭವಾನ್ ‖೨೭‖
ಅಜ್ಞಾನಾನ್ಯಶ್ಯತೇ ಸರ್ವಂ ತ್ವಯಿ ರಜ್ಞ್ವಾಂ ಭುಜಂಗವತ್ । ತ್ವದ್ ಜ್ಞಾನಾಲ್ಲೀಯತೇ ಸರ್ವಂ ತಸ್ಮಾದ್ ಜ್ಞಾನಂ ಸದಾಭ್ಯಸೇತ್ ೨೮

---

೨೬. ಹಗ್ಗವನ್ನು ನೋಡಿ ಹಾವು ಎಂದು ತಿಳಿದು ಭಯಪಡುವಂತೆ ಪರಮಾತ್ಮನಾದ ನಿನ್ನನ್ನು ಜೀವನೆಂದು ತಿಳಿದು ಸಂಸಾರಿಯಾಗಿ ಭಯವನ್ನು ಹೊಂದಿ ಸುಖ ದುಃಖಗಳನ್ನು ಅನುಭವಿಸುತ್ತಾನೆ. ಹಗ್ಗವು ಹಾವಿನಂತೆ ಕಂಡರೂ ಅದರ ಯಥಾರ್ಥವನ್ನು ತಿಳಿದು ಹಾವಲ್ಲ ಹಗ್ಗವು ಎಂದು ತಿಳಿದು ಯಥಾರ್ಥಜ್ಞಾನವನ್ನು ಹೊಂದುವಂತೆ ಇವನು ಜೀವನಲ್ಲ, ಪರಮಾತ್ಮನು ಎಂಬ ಜ್ಞಾನವು ಬಂದಾಗ ಈ ಸಂಸಾರ ದುಃಖದಿಂದ ಪಾರಾಗುತ್ತಾನೆ.

೨೭. ನೀನು ಎಲ್ಲಾ ದೇಹದಲ್ಲಿಯೂ ಇದ್ದುಕೊಂಡು ಚಿತ್ ಎಂಬ ಜ್ಯೋತಿಸ್ಸಿನಿಂದ ಬುದ್ಧಿಯನ್ನು ಪ್ರಕಾಶಪಡಿಸುತ್ತೀಯೆ. ಆದ್ದರಿಂದಲೇ ನೀನು ಎಲ್ಲದಕ್ಕೂ ಆತ್ಮನಾಗಿದ್ದೀಯೆ.

೨೮. ಹಗ್ಗವು ಹಾವಾಗಿ ಕಂಡಾಗ ಆ ಹಾವೆಂಬ ಅಜ್ಞಾನವು ಉತ್ತಮಜ್ಞಾನವನ್ನು ನಾಶಮಾಡುತ್ತದೆ. ಹಾವೆಂಬ ಜ್ಞಾನವುಹೋಗಿ ಹಗ್ಗವೆಂಬ ಜ್ಞಾನವು ವಿಮರ್ಶೆಯಿಂದ ಉಂಟಾಗುವಂತೆ ನೀನುಪರಮಾತ್ಮನೆಂಬ ಜ್ಞಾನವು ವಿಮರ್ಶೆಯಿಂದಹುಟ್ಟಿದಾಗ ಆ ಅಜ್ಞಾನಗಳೆಲ್ಲವೂ ನಾಶವಾಗಿಹೋಗುತ್ತವೆ. ಆದ್ದರಿಂದ ಯಾವಾಗಲೂ ಸುಜ್ಞಾನವನ್ನು ಅಭ್ಯಾಸಮಾಡಬೇಕು.

ತ್ವತ್ಪಾದಭಕ್ತಿಯುಕ್ತಾನಾಂ ವಿಜ್ಞಾನಂ ಭವತಿ ಕ್ರಮಾತ್ । ತಸ್ಮಾತ್ವದ್ಭಕ್ತಿಯುಕ್ತಾ ಯೇ ಮುಕ್ತಿಭಾಜಸ್ತ ಏವ ಹಿ ॥ ೨೯ ॥

ಅಹಂ ತ್ವದ್ಭಕ್ತಭಕ್ತಾನಾಂ ತದ್ಭಕ್ತಾನಾಂ ಚ ಕಿಂಕರಃ । ಅತೋ ಮಾಮನುಗೃಹ್ಣೀಷ್ವ ಮೋಹಯಸ್ವ ನ ಮಾಂ ಪ್ರಭೋ ॥ ೩೦ ॥

ತ್ವನ್ನಾಭಿಕಮಲೋತ್ಪನ್ನೋ ಬ್ರಹ್ಮಾ ಮೇ ಜನಕಃ ಪ್ರಭೋ । ಅತಸ್ತವಾಹಂ ಪೌತ್ರೋಽಸ್ಮಿ ಭಕ್ತಂ ಮಾಂ ಪಾಹಿ ರಾಘವ ॥ ೩೧ ॥

ಇತ್ಯುಕ್ತ್ವಾ ಬಹುಶೋ ನತ್ವಾ ಸ್ವಾನಂದಾಶ್ರುಪರಿಪ್ಲುತಃ । ಉವಾಚ ವಚನಂ ರಾಮ ಬ್ರಹ್ಮಣಾ ಚೋದಿತೋಽಸ್ಮ್ಯಹಂ ॥ ೩೨ ॥

---

೨೯. ಯಾರು ನಿನ್ನ ಪಾದದಲ್ಲಿ ಭಕ್ತಿಯನ್ನಿಟ್ಟುಕೊಂಡಿರುವರೋ ಅವರಿಗೆ ಕಾಲಕ್ರಮದಿಂದ ವಿವೇಕಜ್ಞಾನವು ಹುಟ್ಟುತ್ತದೆ. ಆದ್ದರಿಂದ ಯಾರು ನಿನ್ನ ಪಾದಗಳಲ್ಲಿ ಭಕ್ತಿಯನ್ನಿಟ್ಟಿರುವರೋ ಅವರೇ ಮುಕ್ತಿಯನ್ನು ಪಡೆಯತಕ್ಕವರು.

೩೦. ನಾನಾದರೋ ನಿನ್ನ ಭಕ್ತರ ಭಕ್ತರ ಭಕ್ತರಾಗಿರುವವರಿಗೆ ಕಿಂಕರನು. ಆದ್ದರಿಂದ ನನಗೆ ನೀನು ಅನುಗ್ರಹಿಸು. ನನ್ನನ್ನು ಮೋಹದಲ್ಲಿ ಬೀಳುವಂತೆ ಮಾಡಬೇಡ.

೩೧. ನಿನ್ನ ನಾಭಿಕಮಲದಲ್ಲಿ ಹುಟ್ಟಿದ ಬ್ರಹ್ಮನೇ ನನ್ನ ತಂದೆಯು. ಈ ಸಂಬಂಧದಿಂದ ನಾನು ನಿನಗೆ ಮೊಮ್ಮಗನಾಗಿದ್ದೇನೆ. ಅಲ್ಲದೆ ಭಕ್ತನೂ ಆಗಿದ್ದೇನೆ. ಇಂತಹ ನನ್ನನ್ನು ನೀನು ಕಾಪಾಡು.

೩೨. ಆ ನಾರದನು ಇಂತೆಂದು ಬಹುವಾಗಿ ಹೇಳಿ ನಮಸ್ಕರಿಸುತ್ತಾ ಆನಂದದಿಂದ ಕಣ್ಣೀರನ್ನು ಸುರಿಸುತ್ತಿದ್ದನು. ಅಲ್ಲದೆ ಎಲೈ ರಾಮನೆ! ಬ್ರಹ್ಮನು ನನಗೆ ನಿನ್ನೊಡನೆ ಇಂತೆಂದು ಹೇಳು ಎಂದು ಹೇಳಿರುವನು.

ರಾವಣಸ್ಯ ವಧಾರ್ಥಾಯ ಜಾತೋಽಸಿ ರಘುಸತ್ತಮ । ಇದಾನೀಂ ರಾಜ್ಯರಕ್ಷಾರ್ಥಂ ಪಿತಾ ತ್ವಾಮಭಿಷೇಕ್ಷ್ಯತಿ ॥ ೩೩ ॥

ಯದಿ ರಾಜ್ಯಾಭಿಸಂಸಕ್ತೋ ರಾವಣಂ ನ ಹನಿಷ್ಯಸಿ । ಪ್ರತಿಜ್ಞಾ ತೇ ಕೃತಾ ರಾಮ ಭೂಭಾರಹರಣಾಯ ವೈ ॥ ೩೪ ॥

ತತ್ಸತ್ಯಂ ಕುರು ರಾಜೇಂದ್ರ ಸತ್ಯಸಂಧಸ್ತ್ವಮೇವ ಹಿ । ಶ್ರುತ್ವೈತದ್ಗದಿತಂ ರಾಮೋ ನಾರದಂ ಪ್ರಾಹ ಸಸ್ಮಿತಂ ॥ ೩೫ ॥

ಶೃಣು ನಾರದ ಮೇ ಕಿಂಚಿದ್ವಿದ್ಯತೇಽವಿದಿತಂ ಕ್ವಚಿತ್ । ಪ್ರತಿಜ್ಞಾತಂ ಚ ಯತ್ಪೂರ್ವಂ ಕರಿಷ್ಯೇ ತನ್ನ ಸಂಶಯಃ ॥ ೩೬ ॥

---

೩೩. ಎಲೈ ರಾಮನೆ! ನೀನು ರಾವಣನನ್ನು ಕೊಲ್ಲುವುದಕ್ಕೋಸ್ಕರ ಹುಟ್ಟಿದ್ದೀಯೆ. ಈಗಲಾದರೋ ನಿನ್ನ ತಂದೆಯಾದ ದಶರಥನು ರಾಜ್ಯವನ್ನು ರಕ್ಷಿಸಲು ನಿನಗೆ ಪಟ್ಟಾಭಿಷೇಕವನ್ನು ಮಾಡುವನು.

೩೪. ನೀನು ರಾಜ್ಯಾಭಿಷೇಕವನ್ನು ಹೊಂದಿ ರಾಜ್ಯವಾಳುವುದರಲ್ಲಿ ಆಸಕ್ತನಾದರೆ ರಾವಣನನ್ನು ಕೊಲ್ಲುವುದಿಲ್ಲ. ಆದರೆ ನೀನಾದರೋ ಭೂಮಿಯ ಭಾರವನ್ನು ನಾಶಮಾಡುತ್ತೇನೆಂದು ಪ್ರತಿಜ್ಞೆಯನ್ನು ಮಾಡಿದ್ದೀಯೆ.

೩೫. ಎಲೈ ರಾಜೇಂದ್ರನೆ! ನೀನು ಮಾಡಿರುವ ಪ್ರತಿಜ್ಞೆಯನ್ನು ಕಾಪಾಡಿಕೊ. ಪ್ರಪಂಚದಲ್ಲಿ ನೀನು ಸತ್ಯವನ್ನೇ ಆಡತಕ್ಕವನಲ್ಲವೆ! ಎಂದು ನಾರದನು ಹೇಳಲು ಈ ಮಾತನ್ನು ರಾಮನು ಕೇಳಿ ನಾರದನನ್ನು ಕುರಿತು ನಗುತ್ತಾ ಇಂತೆಂದನು.

೩೬. ಎಲೈ ನಾರದನೆ! ಕೇಳು ನನಗೆ ತಿಳಿಯದಿರುವುದು ಎಲ್ಲಿಯೂ ಒಂದೂ ಇಲ್ಲವೇ ಇಲ್ಲ. ನಾನು ಹಿಂದೆ ಪ್ರತಿಜ್ಞೆಯನ್ನು ಮಾಡಿರುವುದನ್ನು ನೆರವೇರಿಸದೆ ಬಿಡುವುದೇ ಇಲ್ಲ. ಇದರಲ್ಲಿ ಸಂಶಯವನ್ನು ಹೊಂದಬೇಡ.

ಕಿಂ ತು ಕಾಲಾನುರೋಧೇನ ತತ್ತತ್ಪ್ರಾರಬ್ಧಸಂಕ್ಷಯಾತ್ । ಹರಿಷ್ಯೇ ಸರ್ವಭೂಭಾರಂ ಕ್ರಮೇಣಾಸುರಮಂಡಲಂ ॥ ೩೭ ॥

ರಾವಣಸ್ಯ ವಿನಾಶಾರ್ಥಂ ಶ್ವೋ ಗಂತಾ ದಂಡಕಾವನಂ । ಚತುರ್ದಶಸಮಾಸ್ತತ್ರ ಹ್ಯುಷಿತ್ವಾ ಮುನಿವೇಷಧೃಕ್ . ॥ ೩೮ ॥

ಸೀತಾಮಿಷೇಣ ತಂ ದುಷ್ಟಂ ಸಕುಲಂ ನಾಶಯಾಮ್ಯಹಂ । ಏವಂ ರಾಮೇ ಪ್ರತಿಜ್ಞಾತೇ ನಾರದಃ ಪ್ರಮುಮೋದ ಹ ॥ ೩೯ ॥

ಪ್ರದಕ್ಷಿಣತ್ರಯಂ ಕೃತ್ವಾ ದಂಡವತ್ಪ್ರಣಿಪತ್ಯ ತಂ । ಅನುಜ್ಞಾತಶ್ಚ ರಾಮೇಣ ಯಯೌ ದೇವಗತಿಂ ಮುನಿಃ ॥ ೪೦ ॥

---

೩೭. ಆದರೆ ಅದಕ್ಕೂ ಕಾಲವನ್ನು ನಿರೀಕ್ಷಿಸಬೇಕು. ನಾನುಮಾಡುವ ಆ ರಾವಣವಧೆಗೂ, ಆ ರಾವಣನು ತನ್ನ ಪ್ರಾರಬ್ಧವನ್ನು ಅನುಭವಿಸಿ ಮುಗಿಯಬೇಕು. ಅನಂತರ ಅವನನ್ನೂ ಅವನ ಕಡೆಯುವರನ್ನೂ ಕ್ರಮವಾಗಿ ಸಂಹರಿಸುತ್ತೇನೆ.

೩೮–೪೦. ರಾವಣನನ್ನು ಸಂಹರಿಸುವುದಕ್ಕೆ ನಾಳೆಯೇ ದಂಡಕಾರಣ್ಯಕ್ಕೆ ಹೋಗುತ್ತೇನೆ. ಆ ದಂಡಕಾರಣ್ಯದಲ್ಲಿ ಮುನಿ ಯುವೇಷದಿಂದ ಹದಿನಾಲ್ಕುವರ್ಷಗಳವರೆಗೆ ಇರುತ್ತೇನೆ. ಸೀತೆಯನ್ನೇ ನೆಪಮಾಡಿಕೊಂಡು ಆ ದುಷ್ಟನನ್ನೂ ಅವನ ಕುಲವನ್ನೂ ನಾಶಮಾಡುತ್ತೇನೆ. ಶ್ರೀರಾಮನು ಈರೀತಿಯಾಗಿ ಪ್ರತಿಜ್ಞೆಮಾಡಲು ನಾರದನಿಗೆ ಬಹುವಾಗಿ ಸಂತೋಷವಾಯಿತು ಅವನಿಗೆ ಮೂರುಬಾರಿಪ್ರದಕ್ಷಿಣೆ ಮಾಡಿದನು. ಅನಂತರ ರಾಮನಿಂದ ಅಪ್ಪಣೆಯನ್ನು ತೆಗೆದುಕೊಂಡು ಆ ನಾರದನು ದೇವಲೋಕಕ್ಕೆ ಹೊರಟುಹೋದನು.

ಸಂವಾದಂ ಪಠತಿ ಶೃಣೋತಿ ಸಂಸ್ಮರೇದ್ವಾ ಯೋ ನಿತ್ಯಂ ಮುನಿವರರಾಮಯೋಸ್ಸ ಭಕ್ತ್ಯಾ,
ಸ ಪ್ರಾಪ್ನೋತ್ಯಮರಸುದುರ್ಲಭಂ ವಿಮೋಕ್ಷಂ ಕೈವಲ್ಯಂ ವಿರತಿಪುರಸ್ಸರಂ ಕ್ರಮೇಣ || ೪೧ ||

ಇತಿ ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ
ಪ್ರಥಮಸ್ಸರ್ಗಃ

---

೪೧. ಯಾವನು ಈ ನಾರದ ರಾಮರ ಸಂವಾದವನ್ನು ಭಕ್ತಿಯಿಂದ ಓದುತ್ತಾನೆಯೋ, ಅಥವಾ ಕೇಳುತ್ತಾನೆಯೋ, ಅಥವಾ ಸ್ಮರಿಸುತ್ತಾನೆಯೋ, ಅವನು ವೈರಾಗ್ಯವನ್ನು ಹೊಂದಿ ದೇವತೆಗಳಿಗೂ ಸಿಕ್ಕದ ಮೋಕ್ಷವನ್ನು ಹೊಂದುತ್ತಾನೆ.

ಇಂತು ಶ್ರೀಮದಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ
ಮೊದಲನೆಯ ಸರ್ಗವು

॥ ಶ್ರೀರಸ್ತು ॥

ಅಥ ಅಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ದ್ವಿತೀಯಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಅಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದ ಎರಡನೆಯಸರ್ಗದಲ್ಲಿ ಮಾಡಬೇಕಾದ ಸಂಕಲ್ಪ ನ್ಯಾಸ ಧ್ಯಾನ ಜಪಗಳ ಕ್ರಮವು.

ಪೂರ್ವೋಕ್ತವಿಧಿನಾ ಅಯೋಧ್ಯಾಕಾಂಡೇ ದ್ವಿತೀಯಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ ಇತಿಸಂಕಲ್ಪ್ಯ ॥

ಹಿಂದೆ ಹೇಳಿದ ವಿಧಿಯಂತೆ ಅಯೋಧ್ಯಾಕಾಂಡದ ಎರಡನೆಯ ಸರ್ಗದಲ್ಲಿ ನ್ಯಾಸ, ಧ್ಯಾನ, ಜಪಗಳನ್ನು ಮಾಡುತ್ತೇನೆ ಎಂಬುದಾಗಿ ಸಂಕಲ್ಪವನ್ನು ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ರಾಂ ರೀಂ ನಂ ಅಂಗುಷ್ಠಾಭ್ಯಾಂ ನಮಃ
ಓಂ ರಾಂ ರೀಂ ನಂ ತರ್ಜನೀಭ್ಯಾಂ ನಮಃ
ಓಂ ರಾಂ ರೀಂ ನಂ ಮಧ್ಯಮಾಭ್ಯಾಂ ನಮಃ
ಓಂ ರಾಂ ರೀಂ ನಂ ಅನಾಮಿಕಾಭ್ಯಾಂ ನಮಃ
ಓಂ ರಾಂ ರೀಂ ನಂ ಕನಿಷ್ಠಿಕಾಭ್ಯಾಂ ನಮಃ
ಓಂ ರಾಂ ರೀಂ ನಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಷಡಂಗನ್ಯಾಸವು

ಓಂ ರಾಂ ರೀಂ ನಂ ಹೃದಯಾಯ ನಮಃ	ಓಂ ರಾಂ ರೀಂ ನಂ ಕವಚಾಯ ಹುಂ
ಓಂ ರಾಂ ರೀಂ ನಂ ಶಿರಸೇ ಸ್ವಾಹಾ	ಓಂ ರಾಂ ರೀಂ ನಂ ನೇತ್ರತ್ರಯಾಯ ವೌಷಟ್
ಓಂ ರಾಂ ರೀಂ ನಂ ಶಿಖಾಯೈ ವಷಟ್	ಓಂ ರಾಂ ರೀಂ ನಂ ಅಸ್ತ್ರಾಯ ಫಟ್

ಓಂ ರಾಂ ರೀಂ ನಂ ಇತಿ ದಿಗ್ಬಂಧಃ

॥ ಅಥ ಧ್ಯಾನಂ ॥

ಧ್ಯಾನವು

ಅಥ ರಾಜಾ ದಶರಥಃ ಕದಾಚಿದ್ರ ಹಸಿ ಸ್ಥಿತಃ । ವಸಿಷ್ಠಂ ಸ್ವಕುಲಾಚಾರ್ಯಮಾಹೂಯೇದಮ ಭಾಷತ
ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಪಾರಾಯಣಾಂತೇ ಷಡಂಗನ್ಯಾಸಂ ಕೃತ್ವಾ ಓಂ ರಾಂ ರೀಂ ನಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್

ಪಾರಾಯಣವಾದಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ರಾಂ ರೀಂ ನಂ ಇತಿ ದಿಗ್ವಿಮೋಕಃ ಎಂದೆನ್ನಬೇಕು,
ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

॥ ಇತಿ ಶ್ರೀಅಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ದ್ವಿತೀಯಸರ್ಗೇ ನ್ಯಾಸ ಧ್ಯಾನ ಜಪಕ್ರಮಃ ॥

ಇಂತು ಅಯೋಧ್ಯಕಾಂಡದ ಎರಡನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ದ್ವಿತೀಯಸ್ಸರ್ಗಃ

॥ ಶ್ರೀ ಮಹಾದೇವ ಉವಾಚ ॥

ಅಥ ರಾಜಾ ದಶರಥಃ ಕದಾಚಿದ್ರಹಸಿ ಸ್ಥಿತಃ । ವಸಿಷ್ಠಂ ಸ್ವಕುಲಾಚಾರ್ಯಮಾಹೂಯೇದಮಭಾಷತ ॥ ೧ ॥

ಭಗವನ್ರಾಮಂ ಮಮಖಿಲಾಃ ಪ್ರಶಂಸಂತಿ ಮುಹುರ್ಮುಹುಃ । ಪೌರಾಶ್ಚ ನೈಗಮಾ ವೃದ್ಧಾ ಮಂತ್ರಿಣಶ್ಚ ವಿಶೇಷತಃ ॥ ೨ ॥

ಅಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ ಎರಡನೆಯ ಸರ್ಗವು.

೧. ಶ್ರೀ ಮಹಾದೇವನು ಹೇಳಿದನು–ಒಂದುಸಾರಿ ರಾಜನಾದ ದಶರಥನು ಏಕಾಂತದಲ್ಲಿ ಕುಳಿತಿರುವಾಗ ತನ್ನವಂಶಕ್ಕೆ ಆಚಾರ್ಯನಾದ ವಸಿಷ್ಠನನ್ನು ಕರೆಸಿ ಅವನೊಡನೆ ಇಂತೆಂದು ಹೇಳಿದನು.

೨. ಎಲೈ ಗುರುವೆ! ರಾಮನನ್ನು ಎಲ್ಲರೂ ಸದಾಕಾಲದಲ್ಲಿಯೂ ಹೊಗಳುತ್ತಲೇ ಇರುತ್ತಾರೆ. ಅವರಲ್ಲಿಯೂ ಪಟ್ಟಣಿಗರೂ, ವೈದಿಕರೂ, ಮಂತ್ರಿಗಳೂ, ಕೂಡಾ ಬಹುವಾಗಿ ಹೊಗಳುತ್ತಾರೆ.

ತತಸ್ಸರ್ವಗುಣೋಪೇತಂ ರಾಮಂ ರಾಜೀವಲೋಚನಂ । ಜ್ಯೇಷ್ಠಂ ರಾಜ್ಯೇಭಿಷೇಮಿ ವೃದ್ಧೋಹಂ ಮುನಿಪುಂಗವ ॥ ೩ ॥

ಭರತೋ ಮಾತುಲಂ ದ್ರಷ್ಟುಂ ಗತಃ ಶತ್ರುಘ್ನಸಂಯುತಃ । ಅಭಿಷೇಕ್ಷ್ಯೇ ಶ್ವ ಏವಾಶು ಭವಾಂಸ್ತಚ್ಚಾನುಮೋದತಾಂ ॥ ೪ ॥

ಸಂಭಾರಾಸ್ಸಂಭ್ರಿಯಂತಾಂ ಚ ಗಚ್ಛ ಮಂತ್ರಯ ರಾಘವಂ । ಉಚ್ಛ್ರೀಯಂತಾಂ ಪತಾಕಾಶ್ಚ ನಾನಾವರ್ಣಾಸ್ಸಮಂತತಃ ॥ ೫ ॥

---

೩. ಆದ್ದರಿಂದ ಸಮಸ್ತಗುಣಗಳಿಂದಲೂ ಕೂಡಿದ ರಾಜೀವಲೋಚನನೂ ಜೇಷ್ಠಪುತ್ರನೂ ಆದ ರಾಮನನ್ನು ರಾಜ್ಯದಲ್ಲಿ ಅಭಿಷೇಕ ಮಾಡುತ್ತೇನೆ. ಎಲೈ ಋಷಿಶ್ರೇಷ್ಠನೆ! ನನಗೆ ಮುಪ್ಪುಬಂದಿದೆ. ಕೈಯ್ಯಲ್ಲಾಗುವುದಿಲ್ಲ.

೪. ಭರತನು ತನ್ನ ಸೋದರಮಾವನನ್ನು ನೋಡಲು ಶತ್ರುಘ್ನನೊಡನೆ ಹೋಗಿರುವನು. ಬೇಗನೆ ಅಂದರೆ ನಾಳೆಯೇ ರಾಮನಿಗೆ ಅಭಿಷೇಕಮಾಡುತ್ತೇನೆ. ನೀನು ಅದಕ್ಕೆ ಒಪ್ಪಿಗೆಯನ್ನು ಕೊಡು.

೫. ಅಭಿಷೇಕದ ಪದಾರ್ಥಗಳೆಲ್ಲವನ್ನೂ ಸಿದ್ಧಪಡಿಸಲಿ. ನೀನು ಹೋಗಿ ಆ ರಾಮನಿಗೆ ತಿಳಿಸು. ನಾನಾ ವರ್ಣದ ಪತಾಕೆಗಳನ್ನೂ ಪಟ್ಟಣದಲ್ಲಿ ಎಲ್ಲಾಕಡೆಯಲ್ಲಿ ಎತ್ತಿಕಟ್ಟಲಿ. ಮುತ್ತಿನಿಂದಲೂ ಮಣಿಗಳಿಂದಲೂ ಕೂಡಿರುವ ನಾನಾಬಗೆಯ ತೋರಣಗಳನ್ನೂ ಎಲ್ಲಾ ಕಡೆಯಲ್ಲಿಯೂ ಕಟ್ಟಲಿ.

ತೋರಣಾನಿ ವಿಚಿತ್ರಾಣಿ ಮಣಿಮುಕ್ತಾಮಯಾನಿ ವೈ | ಆಹೂಯ ಮಂತ್ರಿಣಂ ರಾಜಾ ಸುಮಂತ್ರಂ ಮಂತ್ರಿಸತ್ತಮಂ ॥ ೬ ॥

ಅಜ್ಞಾಪಯತಿ ಯದ್ಯತ್ತ್ವಾಂ ಮುನಿಸ್ತತ್ತತ್ಸಮಾನಯ | ಯೌವರಾಜ್ಯೇಭಿಷೇಕ್ಷ್ಯಾಮಿ ಶ್ವೋ ಭೂತೇ ರಘುನಂದನಂ ॥ ೭ ॥

ತಥೇತಿ ಹರ್ಷಾತ್ಸ ಮುನಿಂ ಕಿಂಕರೋಮೀತ್ಯಭಾಷತ | ತಮುವಾಚ ಮಹಾತೇಜಾ ವಸಿಷ್ಠೋ ಜ್ಞಾನಿನಾಂ ವರಃ ॥ ೮ ॥

ಶ್ವಃ ಪ್ರಭಾತೇ ಮಧ್ಯಕಕ್ಷೇ ಕನ್ಯಕಾಃ ಸ್ವರ್ಣಭೂಷಿತಾಃ | ತಿಷ್ಠಂತು ಷೋಡಶಗಜಾಃ ಸ್ವರ್ಣರತ್ನಾದಿಭೂಷಿತಾಃ ॥ ೯ ॥

೬-೭. ಒಡನೆಯೇ ದಶರಥನು ಮಂತ್ರಿಯಾದ ಸುಮಂತ್ರನನ್ನು ಕರೆಯಿಸಿ ಎಲೈ ಸುಮಂತ್ರನೇ! ಈ ಮುನಿಯಾದ ವಸಿಷ್ಠನು ನಿನಗೆ ಏನೇನನ್ನು ಅಪ್ಪಣೆಮಾಡುತ್ತಾನೆಯೋ ಅದೆಲ್ಲವನ್ನೂ ತಂದುಕೊಡು. ನಾಳೆಯದಿನ ರಘುರಾಮನನ್ನು ಯೌವರಾಜ್ಯದಲ್ಲಿ ಅಭಿಷೇಕ ಮಾಡಬೇಕು.

೮. ಅದನ್ನು ಕೇಳಿ ಸುಮಂತ್ರನು ಎಲೈ ವಸಿಷ್ಠನನ್ನು ನಾನೇನು ಮಾಡಬೇಕೆಂದು ಕೇಳಿದನು. ಜ್ಞಾನಿಗಳಲ್ಲಿ ಶ್ರೇಷ್ಠನಾದ ವಸಿಷ್ಠನು ಅದನ್ನು ಕೇಳಿ ಇಂತೆಂದನು.

೯ ನಾಳೆಯದಿನ ಬೆಳಿಗ್ಗೆ ಮಧ್ಯದ ತೊಟ್ಟಿಯಲ್ಲಿ ಅಲಂಕಾರಮಾಡಿಕೊಂಡಿರುವ ಹದಿನಾರುಜನಕನ್ನಿಕೆಯರೂ ಹದಿನಾರು ಆನೆಗಳೂ ಬಂದಿರಲಿ. ಐರಾವತಕುಲದಲ್ಲಿ ಹುಟ್ಟಿದ ನಾಲ್ಕುಕೊಂಬುಗಳುಳ್ಳ ಆನೆಯು ಅಲಂಕರಿಸಲ್ಪಟ್ಟು ಅಲ್ಲಿಯೇ ಸಿದ್ಧವಾಗಿರಲಿ.

ಚತುರ್ದಂತಸ್ಸಮಾಯಾತು ಐರಾವತಕುಲೋದ್ಭವಃ । ನಾನಾತೀರ್ಥೋದಕೈಃ ಪೂರ್ಣಾಃ ಸ್ವರ್ಣಕುಂಭಾಸ್ಸಹಸ್ರಶಃ ॥ ೧೦ ॥

ಸ್ಥಾಪ್ಯಂತಾಂ ನವ ವೈಯ್ಯಾಘ್ರಚರ್ಮಾಣಿ ತ್ರೀಣಿ ಚಾನಯ । ಶ್ವೇತಚ್ಛತ್ರಂ ರತ್ನದಂಡಂ ಮುಕ್ತಾಮಣಿವಿರಾಜಿತಂ ॥ ೧೧ ॥

ದಿವ್ಯಮಾಲ್ಯಾಣಿ ವಸ್ತ್ರಾಣಿ ದಿವ್ಯಾನ್ಯಾಭರಣಾನಿ ಚ । ಮುನಯಸ್ಸತ್ಕೃತಾಸ್ತತ್ರ ತಿಷ್ಠಂತು ಕುಶಪಾಣಯಃ ॥ ೧೨ ॥

ನರ್ತಕ್ಯೋ ವಾರಮುಖ್ಯಾಶ್ಚ ಗಾಯಕಾ ವೈಣಿಕಾಸ್ತಥಾ । ನಾನಾವಾದಿತ್ರಕುಶಲಾ ವಾದಯಂತು ನೃಪಾಂಗಣೇ ॥ ೧೩ ॥

---

೧೦. ಅನೇಕವಾದ ತೀರ್ಥಗಳಿಂದ ತೀರ್ಥವನ್ನು ತುಂಬಿ ತಂದಿರುವ ಪೂರ್ಣ ಕುಂಭಗಳು ಒಂದುಸಾವಿರ ವಿರಬೇಕು. ಆದನ್ನು ಅಲ್ಲಿಡಿಸಿರು. ಒಂಭತ್ತನ್ನಾಗಲೀ ಅಲ್ಲದಿದ್ದರೆ ಮೂರನ್ನಾಗಲೀ ಹುಲಿಯ ಚರ್ಮಗಳನ್ನು ತರಿಸಿ ಅಲ್ಲಿರಿಸಿರು.

೧೧–೧೨. ಶ್ವೇತಚ್ಛತ್ರವನ್ನು ಅಲ್ಲಿರಿಸಿಸು. ಅದಕ್ಕೆ ರತ್ನದ ಕೋಲಿರಬೇಕು. ಮಣಿಗಳಿಂದ ಸುತ್ತಲೂ ಅಲಂಕರಿಸಿರಬೇಕು. ಉತ್ತಮವಾದ ಮಾಲೆಗಳನ್ನೂ ವಸ್ತ್ರಗಳನ್ನೂ ಆಭರಣಗಳನ್ನೂ ತರಿಸಿ ಅಲ್ಲಿರಿಸಿಸು. ಮುನಿಗಳನ್ನು ಕರೆಸಿ ಅವರಿಗೆ ಸತ್ಕಾರವನ್ನುಮಾಡಿ ಅಲ್ಲಿರುವಂತೆ ಹೇಳು. ಅವರು ಕೈಯಲ್ಲಿ ಧರ್ಭೆಯನ್ನಿಟ್ಟುಕೊಂಡಿರಲಿ.

೧೩. ನರ್ತಕಿಯರೂ, ಸೂಳೆಯರೂ, ಕುಣಿಯುತ್ತಿರಲಿ. ಗಾನಮಾಡುವವರು, ಗಾನಮಾಡುತ್ತಿರಲಿ, ವೀಣೆಯನ್ನು ನುಡಿಸುವವರೂ ಅನೇಕಬಗೆಯ ವಾದ್ಯಗಳನ್ನು ಬಾರಿಸುವುದರಲ್ಲಿ ಕುಶಲರೂ ಆದವರು ಆ ತೊಟ್ಟಿಯಲ್ಲಿ ವಾದ್ಯವನ್ನು ಬಾರಿಸುತ್ತಿರಲಿ.

ಹಸ್ತ್ಯಶ್ವರಥಪಾದಾತಾ ಬಹಿಸ್ತಿಷ್ಠಂತು ಸಾಯುಧಾಃ । ನಗರೇ ಯಾನಿ ತಿಷ್ಠಂತಿ ದೇವತಾಯತನಾನಿ ಚ ॥ ೧೪ ॥

ತೇಷು ಪ್ರವರ್ತತಾಂ ಪೂಜಾ ನಾನಾಬಲಿಭಿರಾವೃತಾ । ರಾಜಾನಃ ಶೀಘ್ರಮಾಯಾಂತು ನಾನೋಪಾಯನಪಾಣಯಃ ॥ ೧೫ ॥

ಇತ್ಯಾದಿಶ್ಯ ಮುನಿಶ್ರೇಷ್ಠಃ ಸುಮಂತ್ರಂ ಮಂತ್ರಿಸತ್ತಮಂ । ಸ್ವಯಂ ಜಗಾಮ ಭವನಂ ರಾಘವಸ್ಯಾತಿಶೋಭನಂ ॥ ೧೬ ॥

ರಥಮಾರುಹ್ಯ ಭಗವಾನ್ವಸಿಷ್ಠೋ ಮುನಿಸತ್ತಮಃ । ತ್ರೀಣಿ ಕಕ್ಷಾಣ್ಯತಿಕ್ರಮ್ಯ ರಥಾತ್ ಕ್ಷಿತಿಮುಪಾತರತ್ ॥ ೧೭ ॥

೧೪-೧೫. ಆನೆ, ಕುದುರೆ, ರಥ, ಪದಾತಿರೂಪವಾದ ಸೇನೆಗಳು ಆಯುಧವನ್ನು ಹಿಡಿದು ಅರಮನೆಯ ಹೊರಗೆ ನಿಲ್ಲಲಿ ಈ ಅಯೋಧ್ಯಾಪಟ್ಟಣದಲ್ಲಿರುವ ದೇವಸ್ಥಾನಗಳಲ್ಲೆಲ್ಲಾ ಅನೇಕವಿಧವಾದ ಪೂಜೆಗಳು ನಡೆಯಲಿ. ಅನೇಕಬಗೆಯ ನಿವೇದನಗಳನ್ನು ಮಾಡಲಿ. ರಾಜರುಗಳು ಬಗೆಬಗೆಯಾದ ಕಪ್ಪಕಾಣಿಕೆಗಳನ್ನು ತೆಗೆದುಕೊಂಡು ಬೇಗನೆ ಬರಲಿ.

೧೬. ಆ ವಸಿಷ್ಠನು ಹೀಗೆ ಸುಮಂತ್ರನಿಗೆ ಅಪ್ಪಣೆಮಾಡಿ ತಾನು ಬಹು ರಮ್ಯವಾದ ಆ ರಾಮನ ಮನೆಗೆ ಹೊರಟನು.

೧೭. ಮುನಿಶ್ರೇಷ್ಠನಾದ ವಸಿಷ್ಠನು ರಥವನ್ನು ಹತ್ತಿಕೊಂಡು ಮಧ್ಯೆ ಇರುವ ಮೂರು ತೊಟ್ಟಿಗಳನ್ನು ದಾಟಿಹೋಗಿ ರಥದಿಂದ ಇಳಿದನು. ಇವನು ಆಚಾರ್ಯನಾದುದರಿಂದ ಯಾರೂ ಇವನನ್ನು ತಡೆಯಲಿಲ್ಲ. ಒಳಕ್ಕೆ ಹೋದನು.

ಅಂತಃ ಪ್ರವಿಶ್ಯ ಭವನಮಾಚಾರ್ಯತ್ವಾದವಾರಿತಃ । ಗುರುಮಾಗತಮಾಜ್ಞಾಯ ರಾಮಸ್ತೂರ್ಣಂ ಕೃತಾಂಜಲಿಃ ॥ ೧೮ ॥

ಪ್ರತ್ಯುದ್ಗಮ್ಯ ನಮಸ್ಕೃತ್ಯ ದಂಡವದ್ಭಕ್ತಿಸಂಯುತಃ । ಸ್ವರ್ಣಪಾತ್ರೇಣ ಪಾನೀಯ ಮಾನಿನಾಯಾಶು ಜಾನಕೀ ॥ ೧೯ ॥

ರತ್ನಾಸನೇ ಸಮಾವೇಶ್ಯ ಪಾದೌ ಪ್ರಕ್ಷಾಳ್ಯ ಭಕ್ತಿತಃ । ತದಪಶ್ಶಿರಸಾ ಧೃತ್ವಾ ಸೀತಯಾ ಸಹ ರಾಘವಃ ॥ ೨೦ ॥

ಧನ್ಯೋಽಸ್ಮೀತ್ಯಬ್ರವೀದ್ರಾಮಸ್ತವ ಪಾದಾಂಬುಧಾರಣಾತ್ । ಶ್ರೀರಾಮೇಣೈವಮುಕ್ತಸ್ತು ಪ್ರಹಸನ್ಮುನಿರಬ್ರವೀತ್ ॥ ೨೧ ॥

೧೮–೧೯. ಗುರುವು ಬಂದುದನ್ನು ರಾಮನು ಕೇಳಿ, ಕೈಮುಗಿದುಕೊಂಡು ಬೇಗನೆ ಅವನನ್ನು ಎದುರುಗೊಂಡು ಭಕ್ತಿಯಿಂದ ದಂಡಪ್ರಣಾಮವನ್ನು ಮಾಡಿದನು. ಜಾನಕಿಯೂ ನಮಸ್ಕರಿಸಿ ಒಡನೆಯೇ ಚಿನ್ನದ ಪಾತ್ರೆಯಲ್ಲಿ ನೀರನ್ನು ತಂದಳು.

೨೦. ರಾಮನು ಆ ಗುರುವನ್ನು ರತ್ನದ ಪೀಠದಲ್ಲಿ ಕುಳ್ಳಿರಿಸಿ ಭಕ್ತಿಯಿಂದ ಕಾಲನ್ನು ತೊಳೆದನು. ಆ ನೀರನ್ನು ತಾನು ತಲೆಯಮೇಲೆ ಪ್ರೋಕ್ಷಿಸಿಕೊಂಡು ಸೀತೆಗೂ ಪ್ರೋಕ್ಷಿಸಿದನು. ಎಲೈ ಋಷಿಯೆ! ನಿನ್ನ ಪಾದದ ತೀರ್ಥವನ್ನು ತಲೆಯಲ್ಲಿ ಧರಿಸಿಕೊಂಡುದರಿಂದ ನಾನು ಧನ್ಯನಾದೆನು ಎಂದು ಹೇಳಿದನು.

೨೧. ರಾಮನು ಹೀಗೆನ್ನುತ್ತಲೂ ಆ ಗುರುವು ನಗುತ್ತ ಇಂತೆಂದು ಹೇಳಿದನು. ಎಲೈ ಪರಮಾತ್ಮನೆ! ನಿನ್ನ ಪಾದದ ತೀರ್ಥವನ್ನು ತಲೆಯಲ್ಲಿ ಧರಿಸಿಕೊಂಡು ಗಿರಿಜಾಪತಿಯಾದ ಶಂಕರನು ಧನ್ಯನಾದನು.

ತ್ವತ್ಪಾದಸಲಿಲಂ ಧೃತ್ವಾ ಧನ್ಯೋಽಭೂದ್ಗಿರಿಜಾಪತಿಃ । ಬ್ರಹ್ಮಾಪಿ ಮತ್ಪಿತಾ ತೇ ಹಿ ಪಾದತೀರ್ಥಹತಾಶುಭಃ ॥ ೨೨ ॥

ಇದಾನೀಂ ಭಾಷಸೇ ಯತ್ತ್ವಂ ಲೋಕಾನಾಮುಪದೇಶಕೃತ್ಃ । ಜಾನಾಮಿ ತ್ವಾಂ ಪರಾತ್ಮಾನಂ ಲಕ್ಷ್ಮ್ಯಾ ಸಂಜಾತಮೀಶ್ವರಂ॥ ೨೩

ದೇವಕಾರ್ಯಾರ್ಥಸಿದ್ಧ್ಯರ್ಥಂ ಭಕ್ತಾನಾಂ ಭಕ್ತಿಸಿದ್ಧಯೇ । ರಾವಣಸ್ಯ ವಧಾರ್ಥಾಯ ಜಾತಂ ಜಾನಾಮಿ ರಾಘವ ॥ ೨೪ ॥

ತಥಾಪಿ ದೇವಕಾರ್ಯಾರ್ಥಂ ಗುಹ್ಯಂ ನೋದ್ಘಾಟಯಾಮ್ಯಹಂ । ಯಥಾ ತ್ವಂ ಮಾಯಯಾ ಸರ್ವಂ ಕರೋಷಿ ರಘುನಂದನ॥ ೨೫ ॥

---

೨೨. ನನ್ನ ತಂದೆಯಾದ ಬ್ರಹ್ಮನು ನಿನ್ನ ಪಾದದ ತೀರ್ಥವನ್ನು ತಲೆಯಲ್ಲಿ ಧರಿಸಿಕೊಂಡು ತನಗೆ ಬಂದ ಅಶುಭವನ್ನು ನಾಶಮಾಡಿಕೊಂಡನು. ಈಗ ನೀನು ಹೇಳುವ ಈ ಮಾತು ಲೋಕಕ್ಕೆಲ್ಲಾ ಉಪದೇಶಮಾಡತಕ್ಕದ್ದಾಗಿರುತ್ತದೆ.

೨೩–೨೪. ನೀನು ಲಕ್ಷ್ಮಿಯೊಡನೆ ಭೂಮಿಯಲ್ಲಿ ಅವತರಿಸಿರುವ ಪರಮಾತ್ಮನೆಂಬುದನ್ನು ನಾನು ಬಲ್ಲೆನು. ದೇವಕಾರ್ಯವನ್ನು ಸಾಧಿಸುವುದಕ್ಕೂ ಭಕ್ತರಿಗೆ ಭಕ್ತಿಯನ್ನುಂಟುಮಾಡಿ ಅನುಗ್ರಹಿಸುವುದಕ್ಕೂ ನೀನು ಅವತರಿಸಿದ್ದೀಯೆ. ರಾವಣನ ವಧೆಗೋಸ್ಕರಲೇ ನೀನು ಹುಟ್ಟಿರುವುದನ್ನೂ ನಾನು ಬಲ್ಲೆನು.

೨೫. ಆದರೂ ಕೂಡ ಇದು ದೇವಕಾರ್ಯವಾದುದರಿಂದ ಅದನ್ನು ನಾನು ಪ್ರಕಾಶಪಡಿಸುವುದಿಲ್ಲ. ಎಲೈ ರಘುನಂದನನೇ! ನೀನು ಮಾಯೆಯಿಂದ ಎಲ್ಲವನ್ನೂ ಹೇಗೆ ಮಾಡುತ್ತೀಯೋ ಅಂತೆಯೇ ನಾನೂ ಎಲ್ಲವನ್ನೂ ಅನುಸರಿಸುತ್ತೇನೆ.

ತಥೈವಾನುವಿಧಾಸ್ಯೇಹಂ ಶಿಷ್ಯಸ್ತ್ವಂ ಗುರುರಪ್ಯಹಂ । ಗುರುರ್ಗುರೂಣಾಂ ತ್ವಂ ದೇವ ಪಿತೄಣಾಂ ತ್ವಂ ಪಿತಾಮಹಃ ॥ ೨೬ ॥

ಅಂತರ್ಯಾಮೀ ಜಗದ್ಯಾತ್ರಾವಾಹಕಸ್ತ್ವಮಗೋಚರಃ । ಶುದ್ಧಸತ್ವಮಯಂ ದೇಹಂ ಧೃತ್ವಾ ಸ್ವಾಧೀನಸಂಭವಂ ॥ ೨೭ ॥

ಮನುಷ್ಯ ಇವ ಲೋಕೇಸ್ಮಿನ್ ಭಾಸಿ ತ್ವಂ ಯೋಗಮಾಯಯಾ । ಪೌರೋಹಿತ್ಯಮಹಂ ಜಾನೇ ವಿಗರ್ಹ್ಯಂ ದೂಷ್ಯಜೀವನಂ ॥೨೮॥

ಇಕ್ಷ್ವಾಕೂಣಾಂ ಕುಲೇ ರಾಮಃ ಪರಮಾತ್ಮಾ ಜನಿಷ್ಯತಿ । ಇತಿ ಜ್ಞಾತಂ ಮಯಾಂ ಪೂರ್ವಂ ಬ್ರಹ್ಮಣಾ ಕಥಿತಂ ಪುರಾ ॥ ೨೯ ॥

---

೨೬. ಈಗ ನೀನು ಶಿಷ್ಯನು. ನಾನು ನಿನಗೆ ಗುರುವು. ಎಲೈ ದೇವನೇ! ನೀನು ಗುರುಗಳಿಗೂ ಗುರುವು. ಪಿತೃಗಳಿಗೂ ಪಿತಾಮಹನು.

೨೭. ನೀನು ಎಲ್ಲರಲ್ಲಿಯೂ ಅಂತರಂಗದಲ್ಲಿದ್ದುಕೊಂಡು ಜಗದ್ಯಾತ್ರೆಯನ್ನು ನಿರ್ವಹಿಸುತ್ತಿದ್ದೀಯೆ. ಆದರೆ ನೀನು ಮಾತ್ರ ಗೋಚರನಾಗುವುದಿಲ್ಲ. ರಜೋಗುಣ ತಮೋಗುಣಗಳ ಸಂಬಂಧವು ಸ್ವಲ್ಪವೂ ಇಲ್ಲದಿರುವ ಸತ್ವಗುಣದಿಂದ ಸ್ವಾಧೀನವಾಗಿರುವ ಈ ದೇಹವನ್ನು ನೀನು ಹೊಂದಿದ್ದೀಯೆ.

೨೮. ಯೋಗಮಾಯೆಯೊಡನೆ ಕೂಡಿಕೊಂಡು ಈ ಲೋಕದಲ್ಲಿ ಮನುಷ್ಯನಂತೆ ಎಲ್ಲರಿಗೂ ಕಾಣುತ್ತಲಿದ್ದೀಯೆ. ಎಲೈ ರಾಮನೇ ಈ ಪುರೋಹಿತತನವು ನಿಂದ್ಯವಾದುದು. ಇದರಿಂದ ಜೀವಿಸುವುದು ಅಯೋಗ್ಯವಾದುದು. ಎಂಬುದನ್ನು ನಾನು ತಿಳಿದಿದ್ದೇನೆ.

೨೯. ಆದರೆ ಇಕ್ಷ್ವಾಕುಗಳ ವಂಶದಲ್ಲಿ ಶ್ರೀರಾಮನು ಹುಟ್ಟುವನು ಎಂದು ಬ್ರಹ್ಮನು ನನಗೆ ಮೊದಲೇ ಹೇಳಿದ್ದುದನ್ನು ನಾನು ತಿಳಿದುಕೊಂಡಿದ್ದೇನೆ. ಆ ರಾಮಾವತಾರವು ಪರಮಾತ್ಮನ ಸಂಭಂಧವಾದುದು ಎಂಬುದನ್ನು ತಿಳಿದಿದ್ದೇನೆ.

ತತೋಽಹಮಾಶಯಾ ರಾಮ ತವ ಸಂಬಂಧಕಾಂಕ್ಷಯಾ । ಅಕಾರ್ಷಂ ಗರ್ಹಿತಮಪಿ ತವಾಚಾರ್ಯತ್ವಸಿದ್ಧಿಯೇ ॥ ೩೦ ॥

ತತೋ ಮನೋರಥೋ ಮೇದ್ಯ ಫಲಿತೋ ರಘುನಂದನ । ತ್ವದಧೀನಾ ಮಹಾಮಾಯಾ ಸರ್ವಲೋಕವಿಮೋಹಿನೀ ॥ ೩೧ ॥

ಮಾಂ ಯಥಾ ಮೋಹಯೇನ್ನೈವ ತಥಾ ಕುರು ರಘೂದ್ವಹ । ಗುರುನಿಷ್ಕೃತಿಕಾಮಸ್ತ್ವಂ ಯದಿ ದೇಹ್ಯೇತದೇವ ಮೇ ॥ ೩೨

ಪ್ರಸಂಗಾತ್ಸರ್ವಮುಪ್ಯುಕ್ತಂ ನ ವಾಚ್ಯಂ ಕುತ್ರ ಚಿನ್ಮಯಾ । ರಾಜ್ಞಾ ದಶರಥೇನಾಹಂ ಪ್ರೇಷಿತೋಽಸ್ಮಿ ರಘೂದ್ವಹ ॥ ೩೩ ॥

---

೩೦ ಎಲೈ ಸ್ವಾಮಿಯೇ! ಹಾಗೆ ತಿಳಿದಿದ್ದರೂಕೂಡ ನೀನು ಹುಟ್ಟಲು ನಿನ್ನ ಸಂಬಂಧವು ನನಗೆ ಸಿಕ್ಕುತ್ತದೆ. ಆಗ ನಾನು ಆ ರಾಮನಿಗೆ ಆಚಾರ್ಯನಾಗುತ್ತೇನೆ ಎಂಬ ಆಶೆಯಿಂದ ಆ ಕೆಟ್ಟವೃತ್ತಿಯಾದ ಪೌರೋಹಿತ್ಯವನ್ನು ಮಾಡುತ್ತ ಬಂದಿರುವೆನು.

೩೧. ನಾನು ನಿನಗೆ ಆಚಾರ್ಯನಾದುದರಿಂದ ಈಗ ನನ್ನ ಇಷ್ಟಾರ್ಥವು ಫಲಿಸಿರುವುದು. ಕೃತಾರ್ಥನಾದೆನು. ಸಮಸ್ತ ಪ್ರಾಣಿಗಳಿಗೂ ಮೋಹಕವಾದ ಈ ಮಹಾಮಾಯೆಯು ನಿನ್ನ ಅಧೀನವಾದುದು.

೩೨. ಆದರೆ ಈ ಮಾಯೆಯು ನನ್ನನ್ನು ಆವರಿಸಿ ಅಜ್ಞಾನಕ್ಕೆ ಒಳಗಾಗದಂತೆ ಮಾಡು. ಎಲೈ ದೇವನೆ! ಅದನ್ನು ಕೇಳಿಕೊಳ್ಳುತ್ತೇನೆ. ನೀನು ಗುರುದಕ್ಷಿಣೆಯನ್ನು ಕೊಡಬೇಕೆಂದು ಮನಸ್ಸಿನಲ್ಲಿಟ್ಟುಕೊಂಡಿದ್ದರೆ ಈರೀತಿಯಾಗಿ ಮಾಡು. ಅದೇ ನೀನು ನನಗೆ ಕೊಡಬೇಕಾದ ಗುರುದಕ್ಷಿಣೆಯು.

೩೩. ಪ್ರಸಂಗ ಬಂದುದರಿಂದ ಎಲ್ಲವನ್ನೂ ಹೇಳಿದ್ದೇನೆ. ಆದರೆ ನಾನು ಇದನ್ನು ಎಲ್ಲಿಯೂ ಹೇಳಕೂಡದು ಎಂಬುದನ್ನು ಬಲ್ಲೆನು. ಎಲೈ ರಾಮನೆ! ರಾಜನಾದ ದಶರಥನು ನನ್ನನ್ನು ನಿನ್ನಬಳಿಗೆ ಕಳುಹಿಸಿರುವನು.

ತ್ವಾಮಾಮಂತ್ರಯಿತುಂ ರಾಜ್ಯೇ ಶ್ವೋಽಭಿಷೇಕ್ಷ್ಯತಿ ರಾಘವ । ಅದ್ಯ ತ್ವಂ ಸೀತಯಾ ಸಾರ್ಧಮುಪವಾಸಂ ಯಥಾವಿಧಿ ॥ ೩೪ ॥

ಕೃತ್ವಾ ಶುಚಿರ್ಭೂಮಿಶಾಯೀ ಭವ ರಾಮ ಜಿತೇಂದ್ರಿಯಃ । ಗಚ್ಛಾಮಿ ರಾಜಸಾನ್ನಿಧ್ಯಂ ತ್ವಂ ತು ಪ್ರಾತರ್ಗಮಿಷ್ಯಸಿ ॥ ೩೫ ॥

ಇತ್ಯುಕ್ತ್ವಾ ರಥಮಾರುಹ್ಯ ಯಯೌ ರಾಜಗುರುರ್ದ್ರುತಂ । ರಾಮೋಽಪಿ ಲಕ್ಷ್ಮಣಂ ದೃಷ್ಟ್ವಾ ಪ್ರಹಸನ್ನಿದಮಬ್ರವೀತ್ ॥ ೩೬ ॥

ಸೌಮಿತ್ರೇ ಯೌವರಾಜ್ಯೇ ಮೇ ಶ್ವೋಽಭಿಷೇಕೋ ಭವಿಷ್ಯತಿ । ನಿಮಿತ್ತಮಾತ್ರಮೇವಾಹಂ ಕರ್ತಾ ಭೋಕ್ತಾ ತ್ವಮೇವ ಹಿ ॥ ೩೭ ॥

೩೪-೩೫. ನಾಳೆಯದಿನ ನಿನಗೆ ರಾಜ್ಯಾಭಿಷೇಕವು ನಡೆಯುತ್ತದೆ. ಅದನ್ನು ನಿನಗೆ ತಿಳಿಸಿಹೋಗಲು ಬಂದಿದ್ದೇನೆ. ಈದಿನ ನೀನು ಸೀತೆಯೊಡನೆ ಶಾಸ್ತ್ರದಲ್ಲಿ ಹೇಳಿರುವಂತೆ ಉಪವಾಸವನ್ನುಮಾಡಿ ಜಿತೇಂದ್ರಿಯನಾಗಿ ನೆಲದಮೇಲೆ ಮಲಗಿಕೊಂಡಿರಬೇಕು. ನಾನು ರಾಜನ ಬಳಿಗೆ ಹೋಗುತ್ತೇನೆ. ನೀನು ರಾಜನ ಬಳಿಗೆ ನಾಳೆ ಬೆಳಿಗ್ಗೆ ಹೋಗುತ್ತೀಯಂತೆ.

೩೬. ಹೀಗೆಂದು ರಾಮನಿಗೆ ಹೇಳಿ ವಸಿಷ್ಠನು ರಾಜನ ಬಳಿಗೆ ಜಾಗ್ರತೆಯಾಗಿ ಹೊರಟುಹೋದನು. ಇತ್ತ ರಾಮನು ಲಕ್ಷ್ಮಣನನ್ನು ನೋಡಿ ನಗುತ್ತ ಇಂತೆಂದು ಹೇಳಿದನು.

೩೭. ಎಲೈ ಸೌಮಿತ್ರಿಯೆ! ನನಗೆ ನಾಳೆಯ ದಿನ ಯೌವರಾಜ್ಯಾಭಿಷೇಕವಾಗುತ್ತದೆ. ನಾನು ಆ ಯುವರಾಜಪದವಿಯಲ್ಲಿ ನೆಪಮಾತ್ರಕ್ಕೆ ಇರತಕ್ಕವನು. ಆ ಯುವರಾಜನ ಕೆಲಸವನ್ನು ಮಾಡುವವನೂ ಅದರ ಸುಖವನ್ನು ಅನುಭವಿಸುವವನೂ ನೀನೇನೇ.

ಮಮ ತ್ವಂ ಹಿ ಬಹಿಃಪ್ರಾಣೋ ನಾತ್ರ ಕಾರ್ಯಾ ವಿಚಾರಣಾ । ತತೋ ವಸಿಷ್ಠೇನ ಯಥಾ ಭಾಷಿತಂ ತತ್ತಥಾಕರೋತ್ ॥ ೩೮ ॥
ವಸಿಷ್ಠೋಽಪಿ ನೃಪಂ ಗತ್ವಾ ಕೃತಂ ಸರ್ವಂ ನ್ಯವೇದಯೇತ್ । ವಸಿಷ್ಠಸ್ಯ ಪುರೋ ರಾಜ್ಞಾ ಹ್ಯುಕ್ತಂ ರಾಮಾಭಿಷೇಚನಂ ॥ ೩೯ ॥
ಯದಾ ತದೈವ ನಗರೇ ಶ್ರುತ್ವಾ ಕಶ್ಚಿತ್ಸ್ವರ್ವಾ ಜಗೌ । ಕೌಸಲ್ಯಾಯೈ ರಾಮಮಾತ್ರೇ ಸುಮಿತ್ರಾಯೈ ತಥೈವ ಚ ॥ ೪೦ ॥
ಶ್ರುತ್ವಾ ತೇ ಹರ್ಷಸಂಪೂರ್ಣೇ ದದತುರ್ಹಾರಮುತ್ತಮಂ । ತಸ್ಮೈ ತತಃ ಪ್ರೀತಮನಾಃ ಕೌಸಲ್ಯಾ ಪುತ್ರವತ್ಸಲಾ ॥ ೪೧ ॥
ಲಕ್ಷ್ಮೀಂ ಪರ್ಯಚರದ್ದೇವೀಂ ರಾಮಸ್ಯಾರ್ಥಪ್ರಸಿದ್ಧಯೇ । ಸತ್ಯವಾದೀ ದಶರಥಃ ಕರೋತ್ಯೇವ ಪ್ರತಿಶ್ರುತಂ ॥ ೪೨ ॥

---

೩೮. ನೀನು ನನಗೆ ಹೊರಗೆ ಸಂಚಾರಮಾಡುವ ಪ್ರಾಣವಾಗಿದ್ದೀಯೆ. ಈ ವಿಷಯದಲ್ಲಿ ವಿಚಾರವೇ ಬೇಕಿರುವುದಿಲ್ಲ ಎಂದುಹೇಳಿ ಅನಂತರ ರಾಮನು ವಸಿಷ್ಠನು ಹೇಳಿದಂತೆಯೇ ಎಲ್ಲವನ್ನೂ ಮಾಡಿದನು.

೩೯–೪೦. ವಸಿಷ್ಠನು ರಾಜನಬಳಿಗೆ ಹೋಗಿ ತಾನು ಮಾಡಿದುದೆಲ್ಲವನ್ನೂ ಹೇಳಿದನು. ರಾಜನು ವಸಿಷ್ಠನ ಎದುರಿನಲ್ಲಿ ರಾಮನಿಗೆ ಅಭಿಷೇಕವಾಗುವುದನ್ನು ಹೇಳಿದಾಗಲೇ ಒಬ್ಬ ಮನುಷ್ಯನು ಆ ಪಟ್ಟಣದಲ್ಲಿರುವ ಜನರಿಗೆಲ್ಲರಿಗೂ ತಿಳಿಸಿಬಿಟ್ಟನು. ಇದನ್ನು ಕೇಳಿದ ಮತ್ತೊಬ್ಬ ಮನುಷ್ಯನು ರಾಮನ ತಾಯಿಯಾದ ಕೌಸಲ್ಯೆಗೂ ಸುಮಿತ್ರೆಗೂ ಹೇಳಿದನು.

೪೧–೪೨. ಅವರಿಬ್ಬರೂ ಈ ಸಂತೋಷಕರವಾದ ಮಾತನ್ನು ಕೇಳಿದೊಡನೆಯೇ ಸಂತೋಷಪಟ್ಟು ಆತನಿಗೆ ಉತ್ತಮವಾದ ಹಾರವನ್ನು ಕೊಟ್ಟರು. ಮಗನಲ್ಲಿ ವಾತ್ಸಲ್ಯವುಳ್ಳ ಕೌಸಲ್ಯೆಯು ರಾಮನಿಗೆ ಈ ವಿಷಯಗಳೆಲ್ಲವೂ ಕೈಗೂಡಲು ಲಕ್ಷ್ಮೀದೇವಿಯನ್ನು ಪೂಜಿಸಿದಳು. ದಶರಥನು ಸುಳ್ಳಾಡತಕ್ಕವನಲ್ಲ. ಸತ್ಯವಂತನು. ಪ್ರತಿಜ್ಞೆಮಾಡಿದುದನ್ನು ನೆರವೇರಿಸಿಯೇ ತೀರುತ್ತಾನೆ.

ಕೈಕೇಯಿೀವಶಗಃ ಕಿಂ ತು ಕಾಮುಕಃ ಕಿಂ ಕರಿಷ್ಯತಿ । ಇತಿ ವ್ಯಾಕುಲಚಿತ್ತಾ ಸಾ ದುರ್ಗಾಂ ದೇವೀಮಪೂಜಯತ್ ॥ ೪೩ ॥

ಏತಸ್ಮಿನ್ನಂತರೇ ದೇವಾ ದೇವೀಂ ವಾಣೀಮಚೋದಯನ್ । ಗಚ್ಛ ದೇವಿ ಭುವೋ ಲೋಕಮಯೋಧ್ಯಾಯಾಂ ಪ್ರಯತ್ನತಃ ॥೪೪॥

ರಾಮಾಭಿಷೇಕ ವಿಘ್ನಾರ್ಥಂ ಯತಸ್ವ ಬ್ರಹ್ಮವಾಕ್ಯತಃ । ಮಂಥರಾಂ ಪ್ರವಿಶಸ್ವಾದೌ ಕೈಕೇಯೀಂ ಚ ತತಃ ಪರಂ ॥ ೪೫ ॥

ತತೋ ವಿಘ್ನೇ ಸಮುತ್ಪನ್ನೇ ಪುನರೇಹಿ ದಿವಂ ಶುಭೇ । ತಥೇತ್ಯುಕ್ತ್ವಾ ತಥಾ ಚಕ್ರೇ ಪ್ರವಿವೇಶಾಥ ಮಂಥರಾಂ ॥ ೪೬ ॥

---

೪೩. ಆದರೆ ಇವನು ಕಾಮುಕನು. ಕೈಕೇಯಿಗೆ ಅಧೀನನಾಗಿದ್ದಾನೆ. ಏನುಮಾಡುವನೋ ಹೇಳುವುದಕ್ಕಾಗುವುದಿಲ್ಲ. ಎಂಬುದಾಗಿ ಯೋಚನೆಗೊಳಗಾಗಿ ಆ ಕೌಸಲ್ಯೆಯು ದುರ್ಗಾದೇವಿಯನ್ನು ಪೂಜಿಸಿದಳು.

೪೪. ಇಷ್ಟು ನಡೆಯುವ ವೇಳೆಗೆ ದೇವತೆಗಳು ದೇವಿಯಾದ ಸರಸ್ವತಿಯನ್ನು ಪ್ರೇರೇಪಿಸಿದರು. ಎಲೈ ದೇವಿಯೇ ! ನೀನು ಭೂಲೋಕದ ಅಯೋಧ್ಯೆಗೆ ಹೋಗು. ಅಲ್ಲಿ ಪ್ರಯತ್ನಪಟ್ಟು ರಾಮನ ಅಭಿಷೇಕಕ್ಕೆ ವಿಘ್ನವನ್ನುಂಟುಮಾಡು.

೪೫. ನಿನ್ನ ಸ್ವಾಮಿಯಾದ ಬ್ರಹ್ಮನಿಗೂ ಅದು ಒಪ್ಪಿಗೆಯುಂಟು. ಅವನೂ ಅಂತೆಯೇ ಹೇಳುತ್ತಾನೆ. ಅವನ ಮಾತಿನಂತೆ ನಡೆ ಮೊದಲು ಮಂಥರೆಯೆಂಬ ದೂತಿಯನ್ನು ಪ್ರವೇಶಿಸು. ಅನಂತರ ಕೈಕೇಯಿಯನ್ನು ಆವರಿಸಿಕೊ.

೪೬. ಆ ರಾಮಾಭಿಷೇಕಕ್ಕೆ ವಿಘ್ನವುಂಟಾದಮೇಲೆ ಮತ್ತೆ ನೀನು ಈ ಸತ್ಯಲೋಕಕ್ಕೆ ಬಂದುಬಿಡು. ಎಂದು ದೇವತೆಗಳು ಪ್ರಾರ್ಥಿಸಲು ಸರಸ್ವತಿಯು ಹಾಗೆಯೇ ಆಗಲೆಂದು ಹೇಳಿ ಮೊದಲು ಮಂಥರೆಯನ್ನು ಪ್ರವೇಶಮಾಡಿದಳು.

ಸಾಪಿ ಕುಬ್ಜಾ ತ್ರಿವಕ್ರಾ ತು ಪ್ರಾಸಾದಾಗ್ರಮುಥಾರುಹತ್ । ನಗರಂ ಪರಿತೋ ದೃಷ್ಟ್ವಾ ಸರ್ವತಸ್ಸಮಲಂಕೃತಂ ॥ ೪೭ ॥
ನಾನಾತೋರಣಸಂಬಾಧಂ ಪತಾಕಾಭಿರಲಂಕೃತಂ । ಸರ್ವೋತ್ಸವಸಮಾಯುಕ್ತಂ ವಿಸ್ಮಿತಾ ಪುನರಾಗಮತ್ ॥ ೪೮ ॥
ಧಾತ್ರೀಂ ಪಪ್ರಚ್ಛ ಮಾತಃ ಕಿಂ ನಗರಂ ಸಮಲಂಕೃತಂ । ನಾನೋತ್ಸವಸಮಾಯುಕ್ತಾ ಕೌಸಲ್ಯಾ ಚಾತಿಹರ್ಷಿತಾ ॥ ೪೯ ॥
ದದಾತಿ ವಿಪ್ರಮುಖ್ಯೇಭ್ಯೋ ವಸ್ತ್ರಾಣಿ ಚ ಧನಾನಿ ಚ । ತಾಮುವಾಚ ತತೋ ಧಾತ್ರೀ ರಾಮಚಂದ್ರಾಭಿಷೇಚನಂ ॥ ೫೦ ॥

---

೪೭. ಕೈಕೇಯಿಗೆ ಒಬ್ಬ ಸಖಿಯಿದ್ದಳು. ಅವಳ ಹೆಸರು ಮಂಥರೆಯು. ಅವಳು ಕುಳ್ಳಿಯು, ಮತ್ತು ಸೊಂಟ, ಎದೆ, ಕತ್ತು, ಈ ಮೂರುಜಾಗದಲ್ಲಿಯೂ ವಕ್ರವಾಗಿದ್ದಳು. ಈಕೆಯು ಆಗ ಉಪ್ಪರಿಗೆಯ ಮೇಲುಭಾಗಕ್ಕೆ ಹತ್ತಿದಳು. ನಗರವನ್ನು ನೋಡಿದಳು. ಆ ನಗರವನ್ನು ಎಲ್ಲೆಲ್ಲಿಯೂ ಅಲಂಕರಿಸಿದ್ದರು.

೪೮. ಎಲ್ಲಾಕಡೆಯಲ್ಲಿಯೂ ತೋರಣವನ್ನು ಕಟ್ಟಿದ್ದರು. ಪತಾಕೆಗಳನ್ನು ಎತ್ತಿಕಟ್ಟಿ ಅಲಂಕರಿಸಿದ್ದರು. ಆ ಪಟ್ಟಣವು ಸಮಸ್ತವಾದ ಸಂತೋಷದ ಕಾರ್ಯಗಳಿಂದಲೂ ಪೂರ್ಣವಾಗಿದ್ದಿತು. ಇದನ್ನು ನೋಡಿ ಆಶ್ಚರ್ಯಪಡುತ್ತಾ ಆ ಮಂದರೆಯು ಕೆಳಗಿಳಿದಳು.

೪೯. ಅಲ್ಲಿದ್ದ ಒಬ್ಬಳು ದಾದಿಯನ್ನು ಕುರಿತು ಎಲೈ ತಾಯೆ! ಇದೇನು? ಪಟ್ಟಣವನ್ನು ಎಲ್ಲಾಕಡೆಯಲ್ಲಿಯೂ ಅಲಂಕರಿಸಿದ್ದಾರಲ್ಲ! ಪಟ್ಟಣದಲ್ಲಿ ಬಗೆಬಗೆಯ ಉತ್ಸವಗಳು ನಡೆಯುತ್ತಿವೆಯಲ್ಲ! ಕೌಸಲ್ಯೆಯು ಬಹು ಸಂತೋಷಗೊಂಡಿದ್ದಾಳೆಯಲ್ಲ! ಬ್ರಾಹ್ಮಣರಿಗೆ ಬಟ್ಟೆಗಳನ್ನೂ ಹಣವನ್ನೂ ಕೊಡುತ್ತಿದ್ದಾಳಲ್ಲ! ಎಂದು ಕೇಳಿದಳು.

೫೦. ಆಗ ಆ ದಾದಿಯು ಮಂದರೆಯನ್ನು ಕುರಿತು ಇಂತೆಂದಳು. ಎಲೈ ದಾದಿಯೆ! ಶ್ರೀರಾಮಚಂದ್ರನಿಗೆ ನಾಳೆಯದಿನ ಪಟ್ಟಾಭಿಷೇಕವಾಗುತ್ತದೆ. ಆದರಿಂದ ಈದಿನ ಪಟ್ಟಣವನ್ನು ಎಲ್ಲಾಕಡೆಯಲ್ಲಿಯೂ ಅಲಂಕರಿಸಿದ್ದಾರೆ.

ಶ್ವೋ ಭವಿಷ್ಯತಿ ತೇನಾದ್ಯ ಸರ್ವತೋಲಂಕೃತಂ ಪುರಂ । ತಚ್ಛ್ರುತ್ವಾ ತ್ವರಿತಂ ಗತ್ವಾ ಕೈಕೇಯೀಂ ವಾಕ್ಯಮಬ್ರವೀತ್ ॥ ೫೧ ॥

ಪರ್ಯಂಕಸ್ಥಾ ವಿಶಾಲಾಕ್ಷೀ ಮೇಕಾಂತೇ ಪರ್ಯವಸ್ಥಿತಾಂ । ಕಿಂ ಶೇಷೇ ದುರ್ಭಗೇ ಮೂಢೇ ಮಹದ್ಭಯಮುಪಸ್ಥಿತಂ ॥ ೫೨ ॥

ನ ಜಾನೀಷೇತಿಸೌದರ್ಯಮಾನಿನಿ ಮತ್ತಗಾಮಿನಿ । ರಾಮಸ್ಯಾನುಗ್ರಹಾದ್ರಾಜ್ಞಾ ಶ್ವೋಽಭಿಷೇಕೋ ಭವಿಷ್ಯತಿ ॥ ೫೩ ॥

ತಚ್ಛ್ರುತ್ವಾ ಸಹಸೋತ್ಥಾಯ ಕೈಕೇಯೀ ಪ್ರಿಯವಾದಿನೀ । ತಸ್ಯೈ ದಿವ್ಯಂ ದದೌ ಸ್ವರ್ಣನೂಪುರಂ ರತ್ನಭೂಷಿತಂ ॥ ೫೪ ॥

೫೧–೫೩. ಮಂಥರೆಯು ಇದನ್ನು ಕೇಳಿ ಬೇಗನೆ ಹೋಗಿ ಮಂಚದಮೇಲೆ ಒಬ್ಬಳೇ ಮಲಗಿರುವ ವಿಶಾಲಾಕ್ಷಿಯಾದ ಆ ಕೈಕೇಯಿಯನ್ನು ಕುರಿತು ಇಂತೆಂದು ಹೇಳಿದಳು. ಎಲೈ ಅದೃಷ್ಟಹೀನಳೆ! ದಡ್ಡಳೆ! ಏತಕ್ಕೆ ಮಲಗಿದ್ದೀಯೆ? ದೊಡ್ಡದಾದ ವಿಪತ್ತು ಬಂದೊದಗಿದೆ. ನೀನು ನಿನ್ನ ಸೌಂದರ್ಯದ ಹೆಮ್ಮೆಯಿಂದಲೂ ಬೆಡಗಿನ ನಡೆಗೆಯಿಂದಲೂ ಕೂಡಿ ಮೈಮರೆತು ಒಂದನ್ನೂ ತಿಳಿದೇ ಇಲ್ಲ. ರಾಜನಾದ ದಶರಥನು ರಾಮನಿಗೆ ಅನುಗ್ರಹಿಸಿರುವನು. ಇದರಿಂದ ಅವನಿಗೆ ನಾಳೆ ಪಟ್ಟಾಭಿಷೇಕವಾಗುತ್ತದೆ.

೫೪. ಯಾವಾಗಲೂ ಒಳ್ಳೆಯ ಮಾತನ್ನೇ ಆಡುವ ಕೈಕೇಯಿಯು ಇದನ್ನು ಕೇಳಿ ಮಂಚದಿಂದ ಬೇಗನೆ ಎದ್ದು ಆ ಮಂಥರೆಗೆ ರತ್ನವನ್ನು ಕೆತ್ತಿರುವ ಚಿನ್ನದ ಕಾಲುಬಳೆಯನ್ನು ಬಹುಮಾನವಾಗಿ ಕೊಟ್ಟಳು.

ಹರ್ಷಸ್ಥಾನೇ ಕಿಮಿತಿ ಮೇ ಕಥ್ಯತೇ ಭಯಮಾಗತಂ । ಭರತಾದಧಿಕೋ ರಾಮಃ ಪ್ರಿಯಕೃನ್ಮೇ ಪ್ರಿಯಂವದಃ || ೫೫ ||

ಕೌಸಲ್ಯಾಂ ಮಾಂ ಸಮಂ ಪಶ್ಯನ್ ಸದಾ ಶುಶ್ರೂಷತೇ ಹಿ ಮಾಂ । ರಾಮಾದ್ಭಯಂ ಕಿಮಾಪನ್ನಂ ತವ ಮೂಢೇ ವದಸ್ವ ಮೇ ೫೬ ||

ತಚ್ಛ್ರುತ್ವಾ ವಿಷಸಾದಾಥ ಕುಬ್ಜಾ ಕಾರಣವೈರಿಣೀ । ಶೃಣು ಮದ್ವಚನಂ ದೇವಿ ಯಥಾರ್ಥಂ ತೇ ಮಹದ್ಭಯಂ || ೫೭ ||

ತ್ವಾಂ ತೋಷಯನ್ ಸದಾ ರಾಜಾ ಪ್ರಿಯವಾಕ್ಯಾನಿ ಭಾಷತೇ । ಕಾಮುಕೋಽ ಕಥ್ಯವಾದೀ ಚ ತ್ವಾಂ ವಾಚಾ ಪರಿತೋಷಯನ್ ೫೮

---

೫೫. ಎಲೈ ಮಂಥರೆಯೇ! ನನಗೆ ಇದು ಹರ್ಷದ ಕಾಲವು. ಈಗ "ನಿನಗೆ ಭಯ ಬಂದಿರುವುದೆಂದು, ಏಕೆ ನನಗೆ ಹೇಳುತ್ತಿದ್ದೀಯೆ? ಭರತನಿಗಿಂತಲೂ ನನಗೆ ರಾಮನೇ ಹೆಚ್ಚು. ಅವನು ಯಾವಾಗಲೂ ನನಗೆ ಪ್ರಿಯವನ್ನೇ ಮಾಡುತ್ತಾನೆ ಪ್ರಿಯವಾದ ಮಾತುಗಳನ್ನೇ ಆಡುತ್ತಾನೆ.

೫೬. ಆ ರಾಮನು ಕೌಸಲ್ಯೆಯನ್ನೂ ನನ್ನನ್ನೂ ಸಮವಾಗಿ ನೋಡುತ್ತ ನನ್ನನ್ನು ಯಾವಾಗಲೂ ಶುಶ್ರೂಷೆಮಾಡುತ್ತಿರುವನು. ಅಂತಹ ರಾಮನಿಂದ ನನಗೆ ಯಾವ ಭಯವುತಾನೆ ಬಂದಿರುವುದು? ಎಲೈ ದಡ್ಡಳೇ! ಅದನ್ನು ನನಗೆ ಹೇಳು.

೫೭. ಕಾರಣವಿಲ್ಲದೆ ವೈರವನ್ನು ಹೊಂದಿರುವ ಆ ಕುಬ್ಜೆಯಾದ ಮಂದರೆಯು ಈಕೆಯು ಹೇಳಿದುದನ್ನು ಕೇಳಿ ದುಃಖಗೊಂಡಳು. ಎಲೈ ದೇವಿಯೆ! ನನ್ನ ಮಾತನ್ನು ಕೇಳು. ನಿನಗೆ ನಿಶ್ಚಯವಾಗಿಯೂ ಮಹತ್ತಾದ ಆಪತ್ತು ಬಂದೊದಗಿದೆ.

೫೮. ಎಲೈ ರಾಣಿಯೇ! ಆ ರಾಜನು ಯಾವಾಗಲೂ ನಿನ್ನೊಡನೆ ಪ್ರಿಯವಾದ ಮಾತುಗಳನ್ನು ಆಡುತ್ತಲೇ ಇರುವನು. ಅವನು ಕಾಮುಕನು. ಆದ್ದರಿಂದಲೇ ಅವನು ಮಾತಿನಿಂದ ನಿನ್ನನ್ನು ಸಂತೋಷಗೊಳಿಸುತ್ತಾನೆ. ಆದರೆ ಆ ಮಾತುಗಳೆಲ್ಲವೂ ಸುಳ್ಳುಮಾತುಗಳು.

ಕಾರ್ಯಂ ಕರೋತಿ ತಸ್ಯಾ ನ್ಯೆ ರಾಮಮಾತುಸ್ಸುಪುಷ್ಕಲಂ । ಮನಸ್ಯೈತನ್ನಿಧಾಯ್ಯೆವ ಪ್ರೇಷಯಾಮಾಸ ತೇ ಸುತಂ ॥ ೫೯ ॥

ಭರತಂ ಮಾತುಲಕುಲೇ ಪ್ರೇಷಯಾಮಾಸ ಸಾನುಜಂ । ಸುಮಿತ್ರಾಯಾಸ್ಸವಿಾಚೀನಂ ಭವಿಷ್ಯತಿ ನ ಸಂಶಯಃ ॥ ೬೦ ॥

ಲಕ್ಷ್ಮಣೋ ರಾಮಮನ್ವೇತಿ ರಾಜ್ಯಂ ಸೋನುಭವಿಷ್ಯತಿ । ಭರತೋ ರಾಘವಸ್ಯಾಗ್ರೇ ಕಿಂಕರೋ ವಾ ಭವಿಷ್ಯತಿ ॥ ೬೧ ॥

ವಿವಾಸ್ಯತೇ ವಾ ನಗರಾತ್ಪ್ರಾಣೈರ್ವಾ ಹಾಪ್ಯತೇ ಚಿರಾತ್ । ತ್ವಂ ತು ದಾಸೀವ ಕೌಸಲ್ಯಾಂ ನಿತ್ಯಂ ಪರಿಚರಿಷ್ಯಸಿ ॥ ೬೨ ॥

೫೯–೬೦. ಆ ರಾಮನ ತಾಯಿಯಾದ ಕೌಸಲ್ಯೆಗೆ ಬೇಕಾದ ಕೆಲಸಗಳೆಲ್ಲವನ್ನೂ ಮಾಡಿಕೊಡುತ್ತಾನೆ ಇದೇ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ನಿನ್ನ ಮಗನಾದ ಭರತನನ್ನೂ ಅವನ ಸೋದರಮಾವನಾದ ಯುಧಾಜಿತ್ತುವಿನೊಡನೆ ಅವನ ಮನೆಗೆ ಶತ್ರುಘ್ನನೊಡನೆ ಕಳುಹಿಸಿರುವನು. ಸುಮಿತ್ರೆಗಾದರೋ ಒಬ್ಬೊಬ್ಬ ಮಗನು ಒಬ್ಬೊಬ್ಬನೊಡನೆ ಇರುವುದರಿಂದ ಹೇಗಾದರೂ ಅನುಕೂಲವಾಗಿ ಆಗಿಯೇ ಆಗುತ್ತದೆ.

೬೧. ಲಕ್ಷ್ಮಣನು ರಾಮನನ್ನು ಅನುಸರಿಸಿಕೊಂಡಿರುವುದರಿಂದ ರಾಜ್ಯವನ್ನು ಲಕ್ಷ್ಮಣನೇ ಅನುಭವಿಸುತ್ತಾನೆ. ರಾಮನಿಗೆ ರಾಜ್ಯವು ಬಂದನಂತರ ಭರತನು ರಾಮನೆದುರಿಗೆ ಆಳಿನಂತೆ ನಿಂತುಕೊಳ್ಳಬೇಕಾಗುತ್ತದೆ.

೬೨. ಅದಿಲ್ಲದಿದ್ದರೆ ರಾಮನು ಈ ಭರತನನ್ನು ರಾಜ್ಯದಿಂದಲೇ ಓಡಿಸುತ್ತಾನೆ. ಅದೂ ಆಗದಿದ್ದರೆ ಕೆಲವು ಕಾಲವಾದಮೇಲೆ ಕೊಂದೇ ಹಾಕುವನು. ನೀನೂಕೂಡ ದಾಸಿಯಂತೆ ಕಾಲವನ್ನು ಕಳೆಯುತ್ತ ಆ ರಾಮಮಾತೃವಾದ ಕೌಸಲ್ಯೆಗೆ ಆಳಿನಂತೆ ಸೇವೆಮಾಡಬೇಕಾಗುತ್ತದೆ.

ತತೋಽಪಿ ಮರಣಂ ಶ್ರೇಯೋ ಯತ್ಸಪತ್ನ್ಯಾಃ ಪರಾಭವಃ । ಅತಶ್ಶೀಘ್ರಂ ಯತಸ್ವಾದ್ಯ ಭರತಸ್ಯಾಭಿಷೇಚನೇ ॥ ೬೩ ॥
ರಾಮಸ್ಯ ವನವಾಸಾರ್ಥಂ ವರ್ಷಾಣಿ ನವ ಪಂಚ ಚ । ತತೋ ರೂಢೋಽಭಯೋ ಪುತ್ರಸ್ತವ ರಾಜ್ಞಿ ಭವಿಷ್ಯತಿ ॥ ೬೪ ॥
ಉಪಾಯಂ ತೇ ಪ್ರವಕ್ಷ್ಯಾಮಿ ಪೂರ್ವಮೇವ ಸುನಿಶ್ಚಿತಂ । ಪುರಾ ದೇವಾಸುರೇ ಯುದ್ಧೇ ರಾಜಾ ದಶರಥಸ್ಸ್ವಯಂ ॥ ೬೫ ॥
ಇಂದ್ರೇಣ ಯಾಚಿತೋ ಧನ್ವೀ ಸಹಾಯಾರ್ಥಂ ಮಹಾರಥಃ । ಜಗಾಮ ಸೇನಯಾ ಸಾರ್ಧಂ ತ್ವಯಾ ಸಹ ಶುಭಾನನೇ ॥ ೬೬ ॥

---

೬೩. ಸವತಿಯಿಂದ ಈ ರೀತಿಯಾದ ಅವಮಾನವನ್ನು ಹೊಂದುವುದಕ್ಕಿಂತಲೂ ಲೋಕದಲ್ಲಿ ಸಾಯುವುದೇ ಮೇಲಲ್ಲವೆ ! ಆದ್ದರಿಂದ ಈಗ ನೀನು ಭರತನಿಗೆ ರಾಜ್ಯಾಭಿಷೇಕವಾಗುವಂತೆ ಮಾಡುವುದಕ್ಕೆ ಬೇಗನೆ ಪ್ರಯತ್ನಿಸು.

೬೪. ಆ ರಾಮನು ಹದಿನಾಲ್ಕುವರ್ಷಗಳಕಾಲ ವನವಾಸಕ್ಕೆ ಹೋಗುವಂತೆಮಾಡು. ರಾಮನು ಹದಿನಾಲ್ಕುವರ್ಷ ವನವಾಸಕ್ಕೆ ಹೋದಮೇಲೆ ಅವನು ಬರುವುದರೊಳಗಾಗಿ ನಿನ್ನ ಮಗನು ರಾಜ್ಯದಲ್ಲಿ ಸ್ಥಿರನಾಗುವನು. ಆಗ ರಾಮನು ಭರತನನ್ನು ಏನೂ ಮಾಡಲಾರದವನಾಗುವನು.

೬೫-೬೬. ಅದಕ್ಕೆ ಬೇಕಾಗುವ ಉಪಾಯವನ್ನು ನಿನಗೆ ಮೊದಲೇ ನಿಶ್ಚಯಮಾಡಿ ಇಟ್ಟಿದ್ದೇನೆ. ಹಿಂದೆ ದೇವಾಸುರರಿಗೆ ಯುದ್ಧವು ಪ್ರಾಪ್ತವಾಯಿತು. ಇಂದ್ರನು ದಶರಥನನ್ನು ತನ್ನ ಸಹಾಯಕ್ಕೆ ಕರಸಿಕೊಳ್ಳಲು ಅವನು ಧನುರ್ಬಾಣಗಳನ್ನು ಧರಿಸಿ ಅವನ ಸಹಾಯಕ್ಕೆ ಹೋದನು. ಆಗ ಬಹುವಾದ ಸೈನ್ಯವನ್ನೂ ತೆಗೆದುಕೊಂಡು ಹೋದನು. ಅವನ ಜೊತೆಯಲ್ಲಿ ನೀನೂ ಹೋಗಿದ್ದೆ.

ಯುದ್ಧಂ ಪ್ರಕುರ್ವತಸ್ತಸ್ಯ ರಾಕ್ಷಸೈಸ್ಸಹ ಧನ್ವಿನಃ । ತದಾಕ್ಷಕೀಲೋ ನ್ಯಪತಚ್ಛಿನ್ನಸ್ತಂ ಚ ನ ವೇದ ಸಃ ॥ ೬೭ ॥

ತ್ವಂ ತು ಹಸ್ತಂ ಸಮಾವೇಶ್ಯ ಕೀಲರಂಧ್ರೇತಿಧೈರ್ಯತಃ । ಸ್ಥಿತವತ್ಯಸಿತಾಪಾಂಗಿ ಪತಿಪ್ರಾಣಪರೀಪ್ಸಯಾ ॥ ೬೮ ॥

ತತೋ ಹತ್ವಾ ಸುರಾಂತ್ಸರ್ವಾನ್ಸದರ್ಶ ತ್ವಾಮರಿಂದಮಃ । ಆಶ್ಚರ್ಯಂ ಪರಮಂ ಲೇಭೇ ತ್ವಾಮಾಲಿಂಗ್ಯ ಮುದಾನ್ವಿತಃ ॥ ೬೯ ॥

ವೃಣೀಷ್ವ ಯತ್ತೇ ಮನಸಿ ವಾಂಛಿತಂ ವರದೋಸ್ಮ್ಯಹಂ । ವರದ್ವಯಂ ವೃಣೀಷ್ವ ತ್ವಮೇವಂ ರಾಜಾವದತ್ಸ್ವಯಂ ॥ ೭೦ ॥

---

೬೭. ಅವನಿಗೂ ರಾಕ್ಷಸರಿಗೂ ಯುದ್ಧವು ಮೊದಲಾಗಲು ಅವನು ಧನುಸ್ಸನ್ನು ಹಿಡಿದು ಅವರೊಡನೆ ಯುದ್ಧಮಾಡುತ್ತಿದ್ದನು. ಆಗ ಹಿಂದಕ್ಕೆ ಮುಂದಕ್ಕೆ ರಥವು ಓಡಾಡುವುದರಿಂದಲೂ ರಾಕ್ಷಸರ ಬಾಣದ ಏಟಿನಿಂದಲೂ ಆ ದಶರಥನ ರಥದ ಅಚ್ಚಿನ ಕಡಾಣಿ ಮೊಳೆಯು ಕತ್ತರಿಸಿ ಬಿದ್ದುಹೋಯಿತು. ಅದು ಅವನಿಗೆ ತಿಳಿಯಲೇ ಇಲ್ಲ.

೬೮. ಆಗ ನೀನು ಅತಿಧೈರ್ಯದಿಂದ ಆ ಅಚ್ಚಿನ ರಂಧ್ರದಲ್ಲಿ ಕೈಯ್ಯನ್ನಿಟ್ಟುಕೊಂಡು ಚಕ್ರವು ಬೀಳದಂತೆಮಾಡಿ ಆ ನಿನ್ನ ಪತಿಯ ಪ್ರಾಣಗಳನ್ನು ಕಾಪಾಡಿಕೊಂಡಿದ್ದೆ.

೬೯. ದಶರಥನು ರಾಕ್ಷಸರೆಲ್ಲರನ್ನೂ ಕೊಂದಮೇಲೆ ನಿನ್ನನ್ನು ನೋಡಿ ನೀನುಮಾಡಿದ ಕೆಲಸಕ್ಕೆ ಬಹುವಾಗಿ ಆಶ್ಚರ್ಯಪಟ್ಟು ಕೊಳ್ಳುತ್ತಾ ಬಂದು ಸಂತೋಷದಿಂದ ನಿನ್ನನ್ನು ಆಲಿಂಗಿಸಿಕೊಂಡನು.

೭೦. ಆಗ ನಿನ್ನನ್ನು ಕುರಿತು ಎಲೈ ಪ್ರಾಣಪ್ರಿಯಳೆ! ನಾನು ಈಗ ಸಂತೋಷಪಟ್ಟು ವರವನ್ನು ಕೊಡುವವನಾಗಿದ್ದೇನೆ. ನಿನ್ನ ಮನಸ್ಸಿನಲ್ಲಿರುವುದನ್ನು ಕೇಳಿಕೋ. ಆದರೆ ಎರಡು ವರಗಳನ್ನುಮಾತ್ರ ಕೇಳಿಕೊಳ್ಳಬೇಕು. ಎಂದು ಆ ದೊರೆಯು ಹೇಳಿದನು.

ತ್ವಯೋಕ್ತೋ ವರದೋ ರಾಜಾನ್ಯದಿ ದತ್ತಂ ವರದ್ವಯಂ । ತ್ವಯ್ಯೇವ ತಿಷ್ಠತು ಚಿರಂ ನ್ಯಾಸಭೂತಂ ಮಯಾನಘ ॥ ೨೧ ॥

ಯದಾ ಮೇವಸರೋ ಭೂಯಾತ್ತದಾ ದೇಹಿ ವರದ್ವಯಂ । ತಥೇತ್ಯುಕ್ತ್ವಾ ಯಯೌ ರಾಜಾ ಮಂದಿರಂ ತವ ಸುವ್ರತೇ ॥ ೨೨ ॥

ತ್ವತ್ತಃ ಶ್ರುತಂ ಮಯಾ ಪೂರ್ವಮಿದಾನೀಂ ಸ್ಮೃತಿಮಾಗತಂ । ಅತಶ್ಶೀಘ್ರಂ ಪ್ರವಿಶ್ಯಾದ್ಯ ಕ್ರೋಧಾಗಾರಂ ರುಷಾನ್ವಿತಂ ॥ ೨೩ ॥

ವಿಮುಚ್ಯ ಸರ್ವಾಭರಣಂ ಸರ್ವತೋ ವಿನಿಕೀರ್ಯ ಚ । ಭೂಮ್ಯಾಮೇವ ಶಯನಾ ತ್ವಂ ತೂಷ್ಣೀಮಾತಿಷ್ಠ ಭಾಮಿನಿ ॥ ೨೪ ॥

---

೨೧. ಎಲೈ ರಾಜನೆ! ನೀನು ಎರಡು ವರಗಳನ್ನು ಕೊಟ್ಟಿದ್ದೀಯೆ. ಹಾಗೆ ಆ ವರಗಳನ್ನು ನೀನು ಕೊಟ್ಟಿರುವ ಪಕ್ಷದಲ್ಲಿ ಆ ಎರಡ್ನು ವರಗಳೂ ನಿನ್ನಲ್ಲಿಯೇ ನ್ಯಾಸಭೂತವಾಗಿ ಬಹುದಿನಗಳವರೆಗೆ ಇರಲಿ.

೨೨. ನನಗೆ ಬೇಕಾದಾಗ ಕೇಳುತ್ತೇನೆ. ಆಗ ಅವನ್ನು ಕೊಡುತ್ತೀಯಂತೆ. ಎನ್ನಲು ದಶರಥನು ಹಾಗೆಯೇ ಆಗಲಿ ಎಂದು ಹೇಳಿ ನಿನ್ನ ಜೊತೆಯಲ್ಲಿಯೇ ನಿನ್ನ ಮನೆಗೇ ಬಂದನು.

೨೩. ನೀನೇ ಇದನ್ನು ನನಗೆ ಹೇಳಿದ್ದೀಯೆ. ಅದು ಈಗ ನನಗೆ ಜ್ಞಾಪಕಕ್ಕೆ ಬಂದಿದೆ. ಆದುದರಿಂದ ಈಗ ಬಹುವಾಗಿ ಕೋಪಗೊಂಡವಳಂತೆ ಕೋಪವನ್ನು ಹೊಂದಿ ನಿನ್ನ ಕೋಪದ ಮನೆಗೆ ಹೊರಟುಹೋಗು.

೨೪. ನಿನ್ನ ಆ ಒಡವೆಗಳನ್ನು ಬಿಚ್ಚಿ ಸಿಕ್ಕಿದಂತೆ ಸಿಕ್ಕಿದ ಕಡೆಯಲ್ಲೆಲ್ಲಾ ಬಿಸಾಡಿಬಿಡು ನೆಲದಮೇಲೆಯೇ ಮಲಗಿಕೋ. ರಾಜನು ನಿನ್ನಲ್ಲಿಗೆ ಬಂದು ನಿನಗೆ ಬೇಕಾದುದನ್ನು ಕೊಡುವೆನೆಂದು ಪ್ರತಿಜ್ಞೆಮಾಡುವವರೆಗೂ ಅವನೊಡನೆ ಮಾತನಾಡದೆ ಸುಮ್ಮನಿರು.

ಯಾವತ್ಸತ್ಯಂ ಪ್ರತಿಜ್ಞಾಯ ರಾಜಾಭೀಷ್ಟಂಕರೋತಿ ತೇ। ಶ್ರುತ್ವಾ ತ್ರಿವಕ್ರಯೋಕ್ತಂತತ್ತದಾ ಕೇಕಯನಂದಿನೀ ॥ ೭೫ ॥

ತಥ್ಯಮೇವಾಖಿಲಂ ಮೇನೇ ದುಸ್ಸಂಗಾಹಿತವಿಭ್ರಮಾ । ತಾಮಾಹ ಕೈಕಯೀ ದುಷ್ಟಾ ಕುತಸ್ತೇ ಬುದ್ಧಿರೀದೃಶೀ ॥ ೭೬ ॥

ಏವಂ ತ್ವಾಂ ಬುದ್ಧಿಸಂಪನ್ನಾಂ ನ ಜಾನೇ ವಕ್ರಸುಂದರಿ । ಭರತೋ ಯದಿ ರಾಜಾ ಮೇ ಭವಿಷ್ಯತಿ ಸುತಃ ಪ್ರಿಯಃ ॥ ೭೭ ॥

ಗ್ರಾಮಾರ್ಣ ಶತಂ ಪ್ರಯಚ್ಛಾಮಿ ಮಮ ತ್ವಂ ಪ್ರಾಣವಲ್ಲಭಾ । ಇತ್ಯುಕ್ತ್ವಾ ಕೋಪಭವನಂ ಪ್ರವಿಶ್ಯ ಸಹಸಾ ರುಷಾ ॥ ೭೮ ॥

ವಿಮುಚ್ಯ ಸರ್ವಾಭರಣಂ ಪರಿಕೀರ್ಯ ಸಮಂತತಃ । ಭೂಮೌ ಶಯಾನಾ ಮಲಿನಾಂ ಮಲಿನಾಂಬರಧಾರಿಣೀ ॥ ೭೯ ॥

---

೭೫. ಆ ಮೂರು ಬಗೆಯಾಗಿ ವಕ್ರಳಾಗಿರುವ ಮಂಥರೆಯ ಮಾತನ್ನು ಕೇಳಿದಳು. ಮತ್ತು ದುಷ್ಟ ಸಹವಾಸದಿಂದ ಅವಳಮಾತಿನಂತೆ ಒಪ್ಪಿದ ಕೈಕೇಯಿಯು ಎಲ್ಲವನ್ನೂ ಅದರಂತೆ ಮಾಡಿದಳು.

೭೬–೭೯. ಆಗ ಆ ದುಷ್ಟಳಾದ ಕೈಕೇಯಿಯು ಎಲೈ ಮಂಥರೆಯೇ! ಈರೀತಿಯಾದ ಉತ್ತಮೋತ್ತಮವಾದ ಬುದ್ಧಿಯು ನಿನಗೆ ಎಲ್ಲಿಂದ ಬಂದಿತು? ಎಲೈ ಸುಂದರಿಯೆ! ನೀನು ಈರೀತಿಯಾದ ಬುದ್ಧಿಯುಳ್ಳವಳೆಂದು ನಾನು ಯಾವಾಗಲೂ ತಿಳಿದೇ ಇರಲಿಲ್ಲ. ಎಲೈ ಮಂಥರೆಯೇ! ನನ್ನ ಮಗನಾದ ಭರತನು ರಾಜನಾದರೆ ಆಗ ನಿನಗೆ ನೂರು ಗ್ರಾಮಗಳನ್ನು ಕೊಡಿಸುತ್ತೇನೆ. ನೀನು ನನಗೆ ಪ್ರಾಣಕ್ಕಿಂತಲೂ ಪ್ರಿಯಳು. ಎಂದು ಹೇಳಿ ಒಡನೆಯೇ ಕೋಪಗೊಂಡು ಜಾಗ್ರತೆಯಾಗಿ ಕೋಪದಮನೆಗೆ ಹೋದಳು. ಅಲ್ಲಿ ತನ್ನ ಒಡವೆಗಳನ್ನೆಲ್ಲಾ ಬಿಚ್ಚಿ ಸಿಕ್ಕಿದಂತೆ ಎಲ್ಲಾ ಕಡೆಗೂ ಬಿಸಾಡಿದಳು. ನೆಲದಮೇಲೆ ಮಲಗಿಕೊಂಡಳು. ಕೊಳೆಯ ಬಟ್ಟೆಯನ್ನುಟ್ಟು ತಾನೂ ಕೊಳಕಳಾದಳು.

ಪ್ರೋವಾಚ ಶೃಣು ಮೇ ಕುಬ್ಜೇ ಯಾವದ್ರಾಮೋ ವನಂ ವ್ರಜೇತ್ । ಪ್ರಾಣಾಂಸ್ತ್ಯಕ್ಷ್ಯೇ ಥವಾ ವಕ್ರೇ ಶಯಿಷ್ಯೇ ತಾವದೇವ ಹಿ೮೦

ನಿಶ್ಚಯಂ ಕುರು ಕಲ್ಯಾಣಿ ಕಲ್ಯಾಣಂ ತೇ ಭವಿಷ್ಯತಿ । ಇತ್ಯುಕ್ತ್ವಾ ಪ್ರಯಯೌ ಕುಬ್ಜಾ ಗೃಹಂ ಸಾಪಿ ತಥಾಕರೋತ್ ॥ ೮೧ ॥

ಧೀರೋತ್ಯಂತ್ಯದಯಾನ್ವಿತೋಪಿ ಸುಗುಣಾಚಾರಾನ್ವಿತೋ ವಾಥವಾ ।
ನೀತಿಜ್ಞೋ ವಿಧಿವಾದದೇಶಿಕಪರೋ ವಿದ್ಯಾವಿವೇಕೋಥವಾ ॥
ದುಷ್ಟಾನಾಮತಿಪಾಪಭಾವಿತಧಿಯಾಂ ಸಂಗಂ ಸದಾ ಚೇದ್ಭಜೇ ।
ತ್ತದ್ಬುಧ್ಯಾ ಪರಿಭಾವಿತೋ ವ್ರಜತಿ ತತ್ಸಾಮ್ಯಂ ಕ್ರಮೇಣ ಸ್ಫುಟಂ ॥ ೮೨ ॥

೮೦–೮೧. ಆಗ ಕುಬ್ಜೆಯನ್ನು ಕುರಿತು, ಎಲೈ ಕುಬ್ಜೆಯೇ! ನನ್ನ ಮಾತನ್ನು ಕೇಳು. ಶ್ರೀರಾಮನು ವನಕ್ಕೆ ಹೋಗುವವರೆಗೂ ಹೀಗೆಯೇ ಮಲಗಿರುತ್ತೇನೆ. ಕೊನೆಗೆ ಪ್ರಾಣಗಳನ್ನೂ ಹೀಗೆಯೇ ಬಿಟ್ಟುಬಿಡುತ್ತೇನೆ ಎಂದಳು. ಇಂತೆನ್ನಲು ಎಲೈ ಕಲ್ಯಾಣಿಯೆ! ಇದೇ ರೀತಿಯಾಗಿ ಮನಸ್ಸನ್ನು ಧೃಢಮಾಡಿಕೋ ನಿನಗೆ ಮಂಗಳವಾಗುತ್ತದೆ. ಎಂದುಹೇಳಿ ಆ ಕುಬ್ಜೆಯು ತನ್ನ ಮನೆಗೆ ಹೊರಟುಹೋದಳು. ಕೈಕೇಯಿಯು ತಾನು ಹೇಳಿದಂತೆಯೇ ಮಾಡಿದಳು.

೮೨. ಮನುಷ್ಯನು ವಿವೇಕಿಯಾಗಿರಲಿ, ದಯೆಯಿಂದ ಕೂಡಿದವನಾಗಿರಲಿ, ಒಳ್ಳೆಯಗುಣ ಮತ್ತು ಆಚಾರಗಳುಳ್ಳವನಾಗಿರಲಿ, ನೀತಿಯನ್ನು ಬಲ್ಲವನಾಗಿರಲಿ, ಎಲ್ಲರಿಗೂ ಶಾಸ್ತ್ರದ ಅರ್ಥವನ್ನು ಹೇಳುವುದರಲ್ಲಿ ಶ್ರೇಷ್ಠನಾದ ಗುರುವಾಗಿರಲಿ, ವಿದ್ಯೆಯಿಂದ ವಿವೇಕವನ್ನು ಹೊಂದಿದವನಾಗಿರಲಿ, ದುಷ್ಟರೂ, ಅತಿ ಪಾಪಿಗಳೂ ಆದವರ ಸಹವಾಸವನ್ನು ಅವನು ಹೊಂದಿದರೆ ಆ ದುಷ್ಟನ ದುರ್ಬುದ್ಧಿಯಿಂದ ತಾನು ತನ್ನ ಬುದ್ಧಿಯನ್ನು ಕಳೆದುಕೊಂಡು ಸೋತವನಾಗಿ ಕಾಲಕ್ರಮದಿಂದ ಆ ದುಷ್ಟನಂತೆಯೇ ಆಗಿಬಿಡುವನು.

ಅತಸ್ಸಂಗಃ ಪರಿತ್ಯಾಜ್ಯೋ ದುಷ್ಟಾನಾಂ ಸರ್ವದೈವ ಹಿ । ದುಸ್ಸಂಗೀ ಚ್ಯವತೇ ಸ್ವಾರ್ಥಾದ್ಯಥೇಯಂ ರಾಜಕನ್ಯಕಾ ॥ ೮೩ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ದ್ವಿತೀಯಸರ್ಗಸ್ಸಮಾಪ್ತಃ

---

೮೩. ಆದ್ದರಿಂದಲೇ ದುಷ್ಟರ ಸಹವಾಸವನ್ನು ಸ್ವಲ್ಪವೂ ಮಾಡಲೇಬಾರದೆಂದೂ, ಬಿಟ್ಟುಬಿಡಬೇಕೆಂದೂ, ದೊಡ್ಡವರು ಹೇಳುವುದು. ದುಷ್ಟರ ಸಹವಾಸವನ್ನು ಮಾಡಿದವರು ಈ ಕೈಕೇಯಿಯಂತೆ ಸ್ವಾರ್ಥಸಾಧನೆಯನ್ನು ಅಪೇಕ್ಷಿಸಿ ಕೆಟ್ಟುಹೋಗುತ್ತಾರೆ.

ಇಂತು ಶ್ರೀಮದಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ ಎರಡನೆಯ ಸರ್ಗವು.

|| ಶ್ರೀರಸ್ತು ||

ಅಥ ಅಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ತೃತೀಯಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಅಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದ ಮೂರನೆಯಸರ್ಗದಲ್ಲಿ ಮಾಡಬೇಕಾದ ಸಂಕಲ್ಪ ನ್ಯಾಸ ಧ್ಯಾನ ಜಪಗಳ ಕ್ರಮವು

ಪೂರ್ವೋಕ್ತವಿಧಿನಾ ಅಯೋಧ್ಯಾಕಾಂಡೇ ತೃತೀಯಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ ಇತಿಸಂಕಲ್ಪ್ಯ ||

ಹಿಂದೆ ಹೇಳಿದ ವಿಧಿಯಂತೆ ಅಯೋಧ್ಯಾಕಾಂಡದ ಮೂರನೆಯ ಸರ್ಗದಲ್ಲಿ ನ್ಯಾಸ, ಧ್ಯಾನ, ಜಪಗಳನ್ನು ಮಾಡುತ್ತೇನೆ. ಎಂಬುದಾಗಿ ಸಂಕಲ್ಪವನ್ನು ಮಾಡಬೇಕು.

|| ಅಥ ಕರನ್ಯಾಸಃ ||

ಕರನ್ಯಾಸವು

ಓಂ ರಾಂ ರೀಂ ಮುಂ ಅಂಗುಷ್ಠಾಭ್ಯಾಂ ನಮಃ
ಓಂ ರಾಂ ರೀಂ ಮುಂ ತರ್ಜನೀಭ್ಯಾಂ ನಮಃ
ಓಂ ರಾಂ ರೀಂ ಮುಂ ಮಧ್ಯಮಾಭ್ಯಾಂ ನಮಃ
ಓಂ ರಾಂ ರೀಂ ಮುಂ ಅನಾಮಿಕಾಭ್ಯಾಂ ನಮಃ
ಓಂ ರಾಂ ರೀಂ ಮುಂ ಕನಿಷ್ಠಿಕಾಭ್ಯಾಂ ನಮಃ
ಓಂ ರಾಂ ರೀಂ ಮುಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಷಡಂಗನ್ಯಾಸವು

ಓಂ ರಾಂ ರೀಂ ಮಂ ಹೃದಯಾಯ ನಮಃ
ಓಂ ರಾಂ ರೀಂ ಮಂ ಶಿರಸೇ ಸ್ವಾಹಾ
ಓಂ ರಾಂ ರೀಂ ಮಂ ಶಿಖಾಯೈ ವಷಟ್
ಓಂ ರಾಂ ರೀಂ ಮಂ ಕವಚಾಯ ಹುಂ
ಓಂ ರಾಂ ರೀಂ ಮಂ ನೇತ್ರತ್ರಯಾಯ ವೌಷಟ್
ಓಂ ರಾಂ ರೀಂ ಮಂ ಅಸ್ತ್ರಾಯ ಫಟ್

ಓಂ ರಾಂ ರೀಂ ಮಂ ಇತಿ ದಿಗ್ಬಂಧಃ
ಓಂ ರಾಂ ರೀಂ ಮಂ ಎಂದು ದಿಗ್ಬಂಧವು

॥ ಅಥ ಧ್ಯಾನಂ ॥

ಧ್ಯಾನವು

ತತೋ ರಾಜಾ ದಶರಥೋ ರಾಮಾಭ್ಯುದಯ ಕಾರಣಾತ್ । ಆದಿಶ್ಯ ಮಂತ್ರಿ ಪ್ರಕೃತೀಃ ಸಾನಂದೋ ಗೃಹಮಾವಿಶತ್ ॥
ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಪಾರಾಯಣಾಂತೇ ಷಡಂಗನ್ಯಾಸಂ ಕೃತ್ವಾ ಓಂ ರಾಂ ರೀಂ ಮಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್

ಪಾರಾಯಣವಾದಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ರಾಂ ರೀಂ ಮಂ ಇತಿ ದಿಗ್ವಿಮೋಕಃ ಎಂದೆನ್ನಬೇಕು,
ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

॥ ಇತಿ ಶ್ರೀಅಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ತೃತೀಯಸರ್ಗೇ ನ್ಯಾಸ ಧ್ಯಾನ ಜಪಕ್ರಮಃ ॥
ಇಂತು ಅಯೋಧ್ಯಕಾಂಡದ ಮೂರನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ತೃತೀಯಸ್ಸರ್ಗಃ

॥ ಶ್ರೀ ಮಹಾದೇವ ಉವಾಚ ॥

ತತೋ ದಶರಥೋ ರಾಜಾ ರಾಮಾಭ್ಯುದಯಕಾರಣಾತ್ । ಆದಿಶ್ಯ ಮಂತ್ರಿಪ್ರಕೃತೀಸ್ಸಾನಂದೋ ಗೃಹಮಾವಿಶತ್ ॥ ೧ ॥
ತತ್ರಾದೃಷ್ಟ್ವಾ ಪ್ರಿಯಾಂ ರಾಜಾ ಕಿಮೇತದಿತಿ ವಿಹ್ವಲಃ । ಯಾ ಪುರಾ ಮಂದಿರಂ ತಸ್ಯಾಃ ಪ್ರವಿಷ್ಟೇ ಮಯಿ ಶೋಭನಾ ॥ ೨ ॥

ಅಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ ಮೂರನೆಯ ಸರ್ಗವು.

೧. ಶ್ರೀ ಮಹಾದೇವನು ಹೇಳಿದನು–ಇತ್ತ ರಾಜನಾದ ದಶರಥನು ರಾಮನಿಗೆ ಪಟ್ಟಾಭಿಷೇಕವನ್ನು ಮಾಡುವ ಕಾರಣದಿಂದ ಮಂತ್ರಿಗಳಿಗೂ ಪ್ರಜೆಗಳಿಗೂ, ಪಟ್ಟಾಭಿಷೇಕಕ್ಕೆ ಮಾಡಬೇಕಾದ ಕೆಲಸಗಳಿಗೆ ಅಪ್ಪಣೆಗಳೆಲ್ಲವನ್ನೂಮಾಡಿ ಸಂತೋಷಪಟ್ಟುಕೊಂಡು ಮನೆಗೆಬಂದನು.

೨. ಆ ಮನೆಯಲ್ಲಿ ಪ್ರೀತಿಪಾತ್ರಳಾದ ಕೈಕೇಯಿಯನ್ನು ಕಾಣದೆ ದಶರಥನು ಇದೇನು? ಕೈಕೇಯಿಯು ಎಲ್ಲಿಹೋದಳು? ಎಂದು ಕಳವಳಗೊಂಡನು. ನಾನು ಈ ಕೈಕೇಯಿಯು ಮನೆಗೆ ಬಂದೊಡನೆಯೇ ಯಾವಾಗಲೂ ಅವಳು ನಗುತ್ತಾ ನನ್ನಬಳಿಗೆ ಬರುತ್ತಿದ್ದಳು. ಈಗ ಅವಳೇನಾದಳು?

ಹಸಂತೀ ಮಾಮುಪಾಯಾತಿ ಸಾ ಕಿಂ ನೈವಾದ್ಯ ದೃಶ್ಯತೇ । ಇತ್ಯಾತ್ಮನ್ಯೇವ ಸಂಚಿಂತ್ಯ ಮನಸಾತಿವಿದೂಯತಾ ॥ ೩ ॥

ಪಪ್ರಚ್ಛ ದಾಸೀನಿಕರಂ ಕುತೋ ವಸ್ಸ್ವಾಮಿನೀ ಶುಭಾ । ನಾಯಾತಿ ಮಾಂ ಯಥಾಪೂರ್ವಂ ಮತ್ಪ್ರಿಯಾ ಪ್ರಿಯದರ್ಶನಾ ॥ ೪ ॥

ತಾ ಊಚುಃ ಕ್ರೋಧಭವನಂ ಪ್ರವಿಷ್ಟಾ ನೈವ ವಿದ್ಮಹೇ । ಕಾರಣಂ ತತ್ರ ದೇವ ತ್ವಂ ಗತ್ವಾ ನಿಶ್ಚೇತುಮರ್ಹಸಿ ॥ ೫ ॥

ಇತ್ಯುಕ್ತೋ ಭಯಸಂತ್ರಸ್ತೋ ರಾಜಾ ತಸ್ಯಾಸ್ಸಮೀಪಗಃ । ಉಪವಿಶ್ಯ ಶನೈರ್ದೇಹಂ ಸ್ಪೃಶನ್ವೈ ಪಾಣಿನಾಬ್ರವೀತ್ ॥ ೬ ॥

೩–೪. ಆ ದಶರಥನು ದುಃಖದ ಮನಸ್ಸಿನಿಂದಲೇ ಹೀಗೆಂದು ಯೋಚಿಸಿದನು. ಅನಂತರ ಆವಳ ದಾಸಿಯರನ್ನು ಕುರಿತು, ಎಲೈ ದಾಸಿಯರಿರಾ! ನಿಮ್ಮ ಒಡತಿಯು ಹಿಂದಿನಂತೆ ಏತಕ್ಕೆ ನನ್ನನ್ನು ನೋಡುವುದಕ್ಕೆ ಬರಲಿಲ್ಲ? ಅವಳು ನನಗೆ ಬಹು ಪ್ರಿಯಳಲ್ಲವೆ! ಎಂದು ಕೇಳಿದನು.

೫. ಎಲೈ ಸ್ವಾಮಿಯೆ! ಆಕೆಯು ಕ್ರೋಧಾಗಾರಕ್ಕೆ ಹೋಗಿರುವಳು. ಅದೇಕೆಂಬುದು ನಮಗೆ ತಿಳಿಯದು. ತಾವೇ ಅಲ್ಲಿಗೆ ದಯಮಾಡಿಸಿ ಅದರ ಕಾರಣವನ್ನು ತಿಳಿದುಕೊಳ್ಳಬೇಕು. ಎಂದರು.

೬. ಅವರೆಲ್ಲರೂ ಹೀಗೆಂದೆನ್ನುತ್ತಲೂ ರಾಜನಿಗೆ ಬಹುವಾಗಿ ಹೆದರಿಕೆಯಾಯಿತು. ಆಗ ಒಡನೆಯೇ ಕೋಪದಮನೆಯಲ್ಲಿರುವ ಅವಳ ಹತ್ತಿರಕ್ಕೆ ಹೋದನು. ಮೆಲ್ಲಗೆ ಅವಳ ಮೈಯನ್ನು ಮುಟ್ಟಿ ಸವರುತ್ತಾ ನಿದಾನವಾಗಿ ಇಂತೆಂದನು.

ಕಿಂ ಶೇಷೆ ವಸುಧಾಪೃಷ್ಠೇ ಪರ್ಯಂಕಾದೀನ್ವಿಹಾಯ ಚ । ಮಾಂ ತ್ವಂ ಖೇದಯಸೇ ಭೀರು ಯತೋ ಮಾಂ ನಾವಭಾಷಸೇ ॥೭॥
ಅಲಂಕಾರಂ ಪರಿತ್ಯಜ್ಯ ಭೂಮೌ ಮಲಿನವಾಸಸಾ । ಕಿಮರ್ಥಂ ಬ್ರೂಹಿ ಸಕಲಂ ವಿಧಾಸ್ಯೇ ತವ ವಾಂಛಿತಂ ॥ ೮ ॥
ಕೋವಾ ತವಾಹಿತಂ ಕರ್ತಾ ನಾರೀ ವಾ ಪುರುಷೋಽಪಿ ವಾ । ಸ ಮೇ ದಂಡ್ಯಶ್ಚ ವಧ್ಯಶ್ಚ ಭವಿಷ್ಯತಿ ನ ಸಂಶಯಃ ॥ ೯ ॥
ಬ್ರೂಹಿ ದೇವಿ ಯಥಾ ಪ್ರೀತಿಸ್ತದವಶ್ಯಂ ಮಮಾಗ್ರತಃ । ತದಿದಾನೀಂ ಸಾಧಯಿಷ್ಯೇ ಸುದುರ್ಲಭಮಪಿ ಕ್ಷಣಾತ್ ॥ ೧೦ ॥

---

೭. ಎಲೈ ಪ್ರಿಯಳೆ! ನೆಲದಮೇಲೇತಕ್ಕೆ ಹೀಗೆ ಮಲಗಿದ್ದೀಯೆ? ಮಂಚವನ್ನೇಕೆ ಬಿಟ್ಟುಬಿಟ್ಟೆ? ನೀನು ನನ್ನನ್ನು ಮಾತನಾಡಿಸದೆ ಇರುವುದರಿಂದ ನನಗೆ ಬಹು ದುಃಖವನ್ನುಂಟುಮಾಡುತ್ತಿದ್ದೀಯೆ.

೮. ಒಡವೆಗಳೆಲ್ಲವನ್ನೂ ತೆಗೆದು ಬಿಸಾಡಿದ್ದೀಯೆ. ಕೊಳಕು ಬಟ್ಟೆಯನ್ನುಟ್ಟು ಕೊಳೆಯಾದ ನೆಲದಮೇಲೆ ಮಲಗಿದ್ದೀಯೆ. ಇದೇತಕ್ಕೆಂಬುದನ್ನು ಹೇಳು. ಅದನ್ನು ತಿಳಿದು ನಿನಗೆ ಬೇಕಾದುವೆಲ್ಲವನ್ನೂ ಮಾಡಿಕೊಡುತ್ತೇನೆ.

೯. ಹೆಂಗಸಾಗಲೀ, ಗಂಡಸಾಗಲೀ ನಿನಗೆ ಅಪಕಾರವನ್ನು ಮಾಡಿರತಕ್ಕವರು ಯಾರಿರುವರು? ಅಂತಹವರನ್ನು ನಾನು ಶಿಕ್ಷಿಸುತ್ತೇನೆ. ಕೊನೆಗೆ ಕೊಂದೇಹಾಕುತ್ತೇನೆ. ಇದರಲ್ಲಿ ಸಂಶಯವನ್ನು ಪಡಬೇಡ.

೧೦. ಎಲೈ ದೇವಿಯೆ! ಅದೆಲ್ಲವನ್ನೂ ಸಂತೋಷದಿಂದ ನೀನು ನನ್ನೊಡನೆ ಹೇಳು. ನಿನಗೆ ಬೇಕಾದುದು ಯಾವುದೋ ಅದೆಲ್ಲವನ್ನೂ ಕ್ಷಣಕಾಲದಲ್ಲಿ ಮಾಡಿಕೊಡುತ್ತೇನೆ.

ಜಾನಾಸಿ ತ್ವಂ ಮಮ ಸ್ವಾಂತಂ ಪ್ರಿಯಂ ಮಾಂ ಸ್ವವಶೇ ಸ್ಥಿತಂ । ತಥಾಪಿ ಮಾಂ ಖೇದಯಸೇ ವೃಥಾ ತವ ಪರಿಶ್ರಮಃ ॥ ೧೧ ॥
ಬ್ರೂಹಿ ಕಂ ಧನಿನಂ ಕುರ್ಯಾಂ ದರಿದ್ರಂ ತೇಽಪ್ರಿಯಂಕರಂ । ಧನಿನಂ ಕ್ಷಣಮಾತ್ರೇಣ ನಿರ್ಧನಂ ಚ ತವಾಹಿತಂ ॥ ೧೨ ॥
ಬ್ರೂಹಿ ಕಂ ವಾ ವಧಿಷ್ಯಾಮಿ ವಧಾರ್ಹೋ ವಾ ವಿಮೋಕ್ಷ್ಯತೇ । ಕಿಮತ್ರ ಬಹುನೋಕ್ತೇನ ಪ್ರಾಣಾನ್ದಾಸ್ಯಾಮಿ ತೇ ಪ್ರಿಯೇ ॥ ೧೩ ॥
ಮಮ ಪ್ರಾಣಾತ್ಪ್ರಿಯತರೋ ರಾಮೋ ರಾಜೀವಲೋಚನಃ । ತಸ್ಯೋಪರಿ ಶಪೇ ಬ್ರೂಹಿ ತ್ವದ್ಧಿತಂ ತತ್ಕರೋಮ್ಯಹಂ ॥ ೧೪ ॥

---

೧೧. ನೀನು ನನ್ನ ಮನಸ್ಸನ್ನು ತಿಳಿದುಕೊಂಡಿದ್ದೀಯೆ. ನಿನ್ನಲ್ಲಿ ನನಗೆ ಬಹುಪ್ರೀತಿಯಿದೆ. ನಾನು ನಿನ್ನ ಅಧೀನದಲ್ಲಿಯೇ ಇದ್ದೇನೆ. ಆದರೂ ನನ್ನನ್ನು ನೀನು ನೋಯಿಸುತ್ತಿದ್ದೀಯೆ. ನೀನು ವ್ಯರ್ಥವಾಗಿ ತೊಂದರೆ ಪಡಬೇಡ. ಹೇಳು.

೧೨. ನಿನಗೆ ಒಳ್ಳೆಯದನ್ನು ಮಾಡಿದ ಯಾವ ದರಿದ್ರನನ್ನು ತಾನೆ ಕ್ಷಣಕಾಲದಲ್ಲಿ ಧನಿಕನನ್ನಾಗಿ ಮಾಡಲಿ? ನಿನಗೆ ಕೆಟ್ಟದ್ದನ್ನು ಹಾರೈಸಿದ ಯಾವ ಧನಿಕನನ್ನುತಾನೆ ಕ್ಷಣಕಾಲದಲ್ಲಿ ದರಿದ್ರನನ್ನಾಗಿ ಮಾಡಲಿ?

೧೩. ಅಪಕಾರಿಯಾದ ಯಾವನನ್ನು ತಾನೆ ಕೊಂದುಹಾಕಲಿ? ವಧಾರ್ಹನಾದ ಯಾವನನ್ನುತಾನೆ ಬಿಟ್ಟುಬಿಡಲಿ? ಎಲೈ ಪ್ರಿಯಳೆ! ಬಹಳ ಹೇಳಿದುದರಿಂದ ಉಪಯೋಗವೇನು? ನನ್ನ ಪ್ರಾಣಗಳನ್ನೇ ನಿನಗೆ ಕೊಡುತ್ತೇನೆ.

೧೪. ರಾಜೀವಲೋಚನನಾದ ರಾಮನು ನನ್ನ ಪ್ರಾಣಗಳಿಗಿಂತಲೂ ನನಗೆ ಪ್ರೀತಿಪಾತ್ರನು. ಅವನ ಆಣೆಗೂ ಹೇಳುತ್ತೇನೆ. ನಿನಗೇನನ್ನುಮಾಡಿಕೊಡಬೇಕು? ಅದನ್ನು ಹೇಳು. ಖಂಡಿತವಾಗಿಯೂ ಮಾಡಿಕೊಡುತ್ತೇನೆ.

ಇತಿ ಬ್ರುವಾಣಂ ರಾಜಾನಂ ಶಪಂಶಂ ರಾಘವೋಪರಿ । ಶನೈರ್ವಿಮೃಜ್ಯ ನೇತ್ರೇ ಸಾ ರಾಜಾನಂ ಪ್ರತ್ಯಭಾಷತ ॥ ೧೫ ॥

ಯದಿ ಸತ್ಯಪ್ರತಿಜ್ಞೋಸಿ ಶಪಥಂ ಕುರುಷೇ ಯದಿ । ಯಾಚ್ಞಾಂ ಮೇ ಸಫಲಾಂ ಕರ್ತುಂ ಶೀಘ್ರಮೇವ ತ್ವಮರ್ಹಸಿ ॥ ೧೬ ॥

ಪೂರ್ವಂ ದೇವಾಸುರೇ ಯುದ್ಧೇ ಮಯಾ ತ್ವಂ ಪರಿರಕ್ಷಿತಃ । ತದಾ ವರದ್ವಯಂ ದತ್ತಂ ತ್ವಯಾ ಮೇ ತುಷ್ಟಚೇತಸಾ ॥ ೧೭ ॥

---

೧೫. ರಾಮನಮೇಲೆ ಆಣೆಯನ್ನಿಟ್ಟುಕೊಂಡು ಆ ರಾಜನು ಹೀಗೆಹೇಳುತ್ತಿರಲು ಆಕೆಯು ಕಣ್ಣುಗಳನ್ನು ನಿಧಾನವಾಗಿ ಉಜ್ಜಿಕೊಳ್ಳುತ್ತ ರಾಜನನ್ನು ಕುರಿತು ಇಂತೆಂದಳು.

೧೬. ಎಲೈ ದೊರೆಯೇ ! ನೀನು ಸತ್ಯವಾದ ಪ್ರತಿಜ್ಞೆಯುಳ್ಳವನೂ, ಪ್ರೀತಿಪಾತ್ರನಾದ ರಾಮನಮೇಲೆ ಆಣೆಯನ್ನಿಟ್ಟು ನಿನ್ನಮಾತನ್ನು ಸ್ಥಿರಪಡಿಸಿಕೊಳ್ಳುವವನೂ ಆದರೆ ಜಾಗ್ರತೆಯಾಗಿ ನನ್ನ ಯಾಚನೆಯನ್ನು ನೆರವೇರಿಸುವವನಾಗು

೧೭. ಪೂರ್ವದಲ್ಲಿ ದೇವಾಸುರರಿಗೆ ಯುದ್ಧವಾದಾಗ ನಿನ್ನನ್ನು ಇಂದ್ರನು ಯುದ್ಧದಲ್ಲಿ ಸಹಾಯಕ್ಕೆ ಕರೆಯಲು, ನೀನು ನನ್ನನ್ನೂ ಕರೆದುಕೊಂಡುಹೋಗಿದ್ದುದು ಸರಿಯಷ್ಟೆ! ಆಗ ಆ ದೇವಾಸುರಯುದ್ಧದಲ್ಲಿ ರಥದ ಅಚ್ಚಿನ ಕಡಾಣಿಯು ಮುರಿದುಹೋಗಲು ಚಕ್ರವು ಬೀಳದಂತೆ ಕೈಯ್ಯನ್ನು ಕೊಟ್ಟುಕೊಂಡು ನಾನು ನಿನ್ನನ್ನು ಕಾಪಾಡಿದೆ. ಆಗ ನೀನು ಸಂತೋಷಗೊಂಡು ನನಗೆ ಎರಡು ವರಗಳನ್ನು ಕೊಟ್ಟೆ.

ತದ್ದ್ವಯಂ ನ್ಯಾಸಭೂತಂ ಮೇ ಸ್ಥಾಪಿತಂ ತ್ವಯಿ ಸುವ್ರತ । ತತ್ರೈಕೇನ ವರೇಣಾಶು ಭರತಂ ಮೇ ಪ್ರಿಯಂ ಸುತಂ ॥ ೧೮ ॥
ಏಭಿಸ್ಸಂಭೃತಸಂಭಾರೈರ್ಯೌವರಾಜ್ಯೇಭಿಷೇಚಯ । ಅಪರೇಣ ವರೇಣಾಶು ರಾಮೋ ಗಚ್ಛತು ದಂಡಕಾನ್ ॥ ೧೯ ॥
ಮುನಿವೇಷಧರಃ ಶ್ರೀಮಾನ್ಜಟಾವಲ್ಕಲಭೂಷಣಃ । ಚತುರ್ದಶಸಮಾಸ್ತತ್ರ ಕಂದಮೂಲಫಲಾಶನಃ ॥ ೨೦ ॥
ಪುನರಾಯಾತು ತಸ್ಯಾಂತೇ ವನೇ ವಾ ತಿಷ್ಠತು ಸ್ವಯಂ । ಪ್ರಭಾತೇ ಗಚ್ಛತು ವನಂ ರಾಮೋ ರಾಜೀವಲೋಚನಃ ॥ ೨೧ ॥
ಯದಿ ಕಿಂಚಿದ್ವಿಳಂಬೇತ ಪ್ರಾಣಾಂಸ್ತ್ಯಕ್ಷ್ಯೇ ತವಾಗ್ರತಃ । ಭವ ಸತ್ಯಪ್ರತಿಜ್ಞಸ್ತ್ವಮೇತದೇವ ಮಮ ಪ್ರಿಯಂ ॥ ೨೨ ॥

೧೮-೨೦. ಅವೆರಡು ವರಗಳು ನಿನ್ನಲ್ಲಿಯೇ ಇರಲಿ. ನಾನು ಕೇಳಿದಾಗ ಕೊಡು ಎಂಬುದಾಗಿ ನಿನ್ನಲ್ಲಿಯೇ ನ್ಯಾಸವಾಗಿಟ್ಟೆನು. ಅವೆರಡರಲ್ಲಿ ಒಂದನ್ನು ಈಗ ನೀನು ಸಿದ್ಧಪಡಿಸಿರುವ ಈ ರಾಜ್ಯಭಾರದ ಸಾಮಗ್ರಿಗಳಿಂದಲೇ ನನ್ನ ಪ್ರಿಯಪುತ್ರನಾದ ಭರತನಿಗೆ ಯೌವ್ವರಾಜ್ಯದಲ್ಲಿ ಅಭಿಷೇಕವನ್ನು ಮಾಡಿ ಸಾರ್ಥಕಪಡಿಸು. ಮತ್ತೊಂದು ವರದಿಂದ ರಾಮನು ಮುನಿಗಳ ವೇಷವನ್ನು ಧರಿಸಿ ಜಟೆಯನ್ನು ಬಿಟ್ಟುಕೊಂಡು ನಾರುಮಡಿಯನ್ನುಟ್ಟು ಹದಿನಾಲ್ಕು ವರ್ಷಗಳಕಾಲ ಗೆಡ್ಡೆಗೆಣಸುಗಳನ್ನು ತಿಂದುಕೊಂಡು ಕಾಡಿನಲ್ಲಿರಲಿ.

೨೧. ಆ ವಾಯಿದೆಯು ಮುಗಿದಮೇಲೆ ಬೇಕಾದರೆ ರಾಜ್ಯಕ್ಕೆ ಬರಲಿ. ಬೇಡವಾದರೆ ಕಾಡಿನಲ್ಲಿಯೇ ಇರಲಿ. ಈರೀತಿಯಾಗಿ ಎರಡು ವರವನ್ನು ಕೊಟ್ಟು ಸಾರ್ಥಕಗೊಳಿಸು. ಶ್ರೀರಾಮನು ನಾಳೆಯದಿವಸ ಬೆಳಿಗ್ಗೆಯೇ ಕಾಡಿಗೆ ಹೊರಡಲಿ.

೨೨. ಹಾಗೆ ಹೋಗುವುದರಲ್ಲಿ ಅವನು ಸಾವಕಾಶಮಾಡಿದರೆ ನಿನ್ನ ಎದುರಿಗೇನೇ ಪ್ರಾಣಗಳನ್ನು ಬಿಟ್ಟುಬಿಡುತ್ತೇನೆ. ಈ ವಿಷಯದಲ್ಲಿ ನೀನು ಸತ್ಯವನ್ನು ಪಾಲಿಸುವವನಾಗು. ಇವೇ ನನಗೆ ಬೇಕಾದ ವರಗಳು.

ಶ್ರುತ್ವೈತದ್ದಾರುಣಂ ವಾಕ್ಯಂ ಕೈಕೇಯ್ಯಾ ರೋಮಹರ್ಷಣಂ । ನಿಪಪಾತ ಮಹೀಪಾಲೋ ವಜ್ರಾಹತ ಇವಾಚಲಃ ॥ ೨೩ ॥

ಶನೈರುನ್ಮೀಲ್ಯ ನಯನೇ ವಿಮೃಜ್ಯ ಪರಯಾ ಭಿಯಾ । ದುಸ್ಸ್ವಪ್ನೋ ವಾ ಮಯಾ ದೃಷ್ಟೋ ಹ್ಯಥವಾ ಚಿತ್ತವಿಭ್ರಮಃ ॥ ೨೪ ॥

ಇತ್ಯಾಲೋಕ್ಯ ಪುನಃ ಪತ್ನೀಂ ವ್ಯಾಘ್ರೀಮಿವ ಪುರಸ್ಥಿತಾಂ । ಕಿಮಿದಂ ಭಾಷಸೇ ಭದ್ರೇ ಮಮ ಪ್ರಾಣಹರಂ ವಚಃ ॥ ೨೫ ॥

ರಾಮಃ ಕಮಪರಾಧಂ ತೇ ಕೃತವಾನ್ ಕಮಲೇಕ್ಷಣಃ । ಮಮಾಗ್ರೇ ರಾಘವಗುಣಾನ್ವರ್ಣಯಸ್ಯನಿಶಂ ಶುಭಾನ್ ॥ ೨೬ ॥

---

೨೩. ದುಃಖದಿಂದ ಮೈಯ್ಯಲ್ಲೆಲ್ಲಾ ಕೂದಲುಗಳು ಎದ್ದುನಿಂತುಕೊಳ್ಳುವಂತಹ ಕೈಕೇಯಿಯ ಈ ಕ್ರೂರವಾದ ಮಾತುಗಳನ್ನು ಕೇಳಿ ಆ ದಶರಥನು ವಜ್ರಾಯುಧದಿಂದ ಏಟನ್ನು ತಿಂದು ರೆಕ್ಕೆಗಳನ್ನು ಕಳೆದುಕೊಂಡು ನೆಲದಮೇಲೆ ಬಿದ್ದ ಪರ್ವತಗಳಂತೆ ನೆಲದಮೇಲೆ ಬಿದ್ದುಬಿಟ್ಟನು.

೨೪. ಅನಂತರ ನಿಧಾನವಾಗಿ ಕಣ್ಣುಗಳನ್ನು ತೆರೆಯುತ್ತಾ ಬಹುವಾದ ಹೆದರಿಕೆಯಿಂದ ಆ ಕಣ್ಣುಗಳನ್ನು ಉಜ್ಜಿಕೊಳ್ಳುತ್ತ ಇದೇನು? ನಾನು ದುಸ್ಸ್ವಪ್ನವನ್ನು ಕಂಡೆನೋ? ಅಥವಾ ಬುದ್ಧಿಭ್ರಮಣೆಯಾಗಿರುವುದೋ? ಎಂದು ಯೋಚಿಸಿದನು.

೨೫. ಈ ರೀತಿಯಾಗಿ ಯೋಚಿಸುತ್ತಾ ಹೆಣ್ಣುಹುಲಿಯಂತೆ ಎದುರಿಗೆ ನಿಂತಿರುವ ಆ ಕೈಕೇಯಿಯನ್ನು ನೋಡಿದನು. ನೋಡಿ ಎಲೈ ಭದ್ರೆಯೆ! ಇದೇನು? ನನ್ನ ಪ್ರಾಣಗಳನ್ನು ಹಾರಿಸಿಕೊಂಡು ಹೋಗುವ ಮಾತುಗಳನ್ನಾಡುತ್ತಿರುವೆಯಲ್ಲ!

೨೬. ಆ ಕಮಲಾಕ್ಷನಾದ ಶ್ರೀರಾಮನು ನಿನಗೆ ಯಾವ ತಪ್ಪನ್ನು ತಾನೆ ಮಾಡಿದನು? ನೀನು ನನ್ನ ಎದುರಿಗೆ ಆ ಶ್ರೀರಾಮನ ಮಂಗಳಕರವೂ ಉತ್ತಮೋತ್ತಮವೂ ಆದ ಗುಣಗಳನ್ನೇ ಯಾವಾಗಲೂ ಹೊಗಳುತ್ತಿದ್ದೆಯಲ್ಲ!

ಕೌಸಲ್ಯಾಂ ಮಾಂ ಸಮಂ ಪಶ್ಯನ್ ಶುಶ್ರೂಷಾಂ ಕುರುತೇ ಸದಾ । ಇತಿ ಬ್ರುವಂತೀ ತ್ವಂ ಪೂರ್ವಮಿದಾನೀಂ ಭಾಷಸೇನ್ಯಥಾ ॥ ೨೭ ॥
ರಾಜ್ಯಂ ಗೃಹಾಣ ಪುತ್ರಾಯ ರಾಮಸ್ತಿಷ್ಠತು ಮಂದಿರೇ । ಅನುಗೃಹ್ಣೀಷ್ವ ಮಾಂ ವಾಮೇ ರಾಮಾನ್ನಾಸ್ತಿ ಭಯಂ ತವ ॥ ೨೮ ॥
ಇತ್ಯುಕ್ತ್ವಾಶ್ರುಪರೀತಾಕ್ಷಃ ಪಾದಯೋರ್ನಿಪಪಾತ ಹ । ಕೈಕೇಯೀ ಪ್ರತ್ಯುವಾಚೇದಂ ಸಾಪಿ ರಕ್ತಾಂತಲೋಚನಾ ॥ ೨೯ ॥

---

೨೭. ಶ್ರೀರಾಮನು ಆ ಕೌಸಲ್ಯೆಯನ್ನೂ ನನ್ನನ್ನೂ ಒಂದೇಸವನಾದ ದೃಷ್ಟಿಯಿಂದ ನೋಡುತ್ತಾನೆ. ಒಂದೇರೀತಿಯಾಗಿ ಯಾವಾಗಲೂ ಸೇವಿಸುತ್ತಾನೆ. ಎಂದು ಹೇಳುತ್ತಿದ್ದೆಯಲ್ಲ! ಇದೇನು? ಈಗ ಅದಕ್ಕೆ ಪೂರ್ತಿಯಾಗಿ ವಿರುದ್ಧವಾಗಿ ಹೇಳುತ್ತಿರುವೆಯಲ್ಲ! ಇದು ಏನೆಂದು ನನಗೆ ತಿಳಿಯದಿರುವುದಲ್ಲ!

೨೮. ನಿನ್ನ ಮಗನಿಗೆ ಬೇಕಾದರೆ ರಾಜ್ಯದಲ್ಲಿ ಪಟ್ಟಾಭಿಷೇಕವನ್ನು ಮಾಡಿಸಿಕೋ! ರಾಮನುಮಾತ್ರ ಮನೆಯಲ್ಲಿಯೇ ಇರಲಿ ಅವನನ್ನು ಕಾಡಿಗೆ ಕಳುಹಿಸಬೇಡ. ನನ್ನ ವಿಷಯಲ್ಲಿ ಇಷ್ಟು ಅನುಗ್ರಹವನ್ನುಮಾಡಿ ದಯೆತೋರಿಸು ಎಲೈ ಚಂಡಿಯೆ! ನಿನಗೆ ರಾಮನಿಂದ ಯಾವ ಕೆಡುಕೂ ಉಂಟಾಗುವುದಿಲ್ಲ.

೨೯. ಆ ದಶರಥನು ಕೈಕೇಯಿಗೆ ಇಂತೆಂದು ಹೇಳುತ್ತಾ ಕಣ್ಣಿನತುಂಬ ಕಂಬನಿಯನ್ನು ತುಂಬಿಕೊಂಡು ಆ ಕೈಕೆಯಿಯ ಪಾದಗಳ ಮೇಲೆಬಿದ್ದನು. ಆಗ ಕೈಕೇಯಿಯು ಕಣ್ಣುಗಳನ್ನು ಕೆಂಡದಂತೆ ಕೆಂಪಗೆ ಮಾಡಿಕೊಂಡು ದಶರಥನನ್ನು ಕುರಿತು ಇಂತೆಂದಳು.

ರಾಜೇಂದ್ರ ಕಿಂ ತ್ವಂ ಭ್ರಾಂತೋಽಸಿ ಉಕ್ತಂ ತದ್ಭಾಷಸೇನ್ಯಥಾ । ಮಿಥ್ಯಾ ಕರೋಷಿ ಚೇತ್ಸ್ವೀಯಂ ಭಾಷಿತಂ ನರಕೋ ಭವೇತ್ ೩೦

ವನಂ ನ ಗಚ್ಛೇದ್ಯದಿ ರಾಮಚಂದ್ರಃ ಪ್ರಭಾತಕಾಲೇಽಜಿನಚೀರಯುಕ್ತಃ ।
ಉದ್ಬಂಧನಂ ವಾ ವಿಷಭಕ್ಷಣಂ ವಾ ಕೃತ್ವಾ ಮರಿಷ್ಯೇ ಪುರತಸ್ತವಾಹಂ ॥ ೩೧ ॥

ಸತ್ಯಪ್ರತಿಜ್ಞೋಽಹಮಿತೀಹ ಲೋಕೇ ವಿಡಂಬಸೇ ಸರ್ವಸಭಾಂತರೇಷು ।
ರಾಮೋಪರಿ ತ್ವಂ ಶಪಥಂ ಚ ಕೃತ್ವಾ ಮಿಥ್ಯಾಪ್ರತಿಜ್ಞೋ ನರಕಂ ಪ್ರಯಾಹಿ ॥ ೩೨ ॥

---

೩೦. ಎಲೈ ದೊರೆಯೆ! ನಿನಗೆ ಬುದ್ಧಿಭ್ರಮಣೆಯಾಗಿರುವುದೇ ಏನು? ಕೊಡುತ್ತೇನೆಂದು ಪ್ರತಿಜ್ಞೆಯನ್ನುಮಾಡಿ ಈಗ ಬೇರೆಯ ರೀತಿಯಾಗಿ ಮಾತನಾಡುತ್ತಿರುವೆಯಲ್ಲ? ನೀನು ನಿನ್ನ ವಾಗ್ದಾನವನ್ನು ಸಾರ್ಥಕಪಡಿಸಿಕೊಳ್ಳದೆ ಸುಳ್ಳನ್ನಾಗಿಮಾಡಿಕೊಂಡರೆ ನಿನಗೆ ನರಕ ಪ್ರಾಪ್ತಿಯಾಗುತ್ತದೆ.

೩೧ ಎಲೈ ದೊರೆಯೆ! ರಾಮಚಂದ್ರನು ನಾಳೆಯ ಬೆಳಗ್ಗೆ ಕೃಷ್ಣಾಜಿನವನ್ನೂ, ನಾರುಬಟ್ಟೆಯನ್ನೂ ಉಟ್ಟುಕೊಂಡು ಕಾಡಿಗೆ ಹೋಗದಿದ್ದರೆ ನಾನು ನೇಣುಹಾಕಿಕೊಂಡಾಗಲೀ, ವಿಷವನ್ನು ಕುಡಿದಾಗಲಿ ನಿನ್ನಎದುರಿಗೇ ನೀನು ನೋಡುತ್ತಿರುವಂತೆಯೇ ಸಾಯುತ್ತೇನೆ.

೩೨. ನಾನು ಸತ್ಯಪ್ರತಿಜ್ಞನು. ಪ್ರತಿಜ್ಞೆಯನ್ನು ಪಾಲಿಸತಕ್ಕವನು. ಎಂದು ಲೋಕದಲ್ಲಿ ಎಲ್ಲಾ ಸಭೆಗಳ ಮಧ್ಯದಲ್ಲಿಯೂ ಹೇಳುತ್ತ ಎಲ್ಲರನ್ನೂ ಮೋಸಪಡಿಸುತ್ತಿರುವೆಯಲ್ಲ! ಅಲ್ಲದೆ ರಾಮನಮೇಲೆ ಆಣೆಯನ್ನು ಇಟ್ಟುಕೊಂಡು ಇರುವೆಯಲ್ಲ! ಈಗ ಆ ಪ್ರತಿಜ್ಞೆಯನ್ನು ಹಾಳುಮಾಡಿಕೊಂಡು ಆ ಸುಳ್ಳಿನಿಂದ ನರಕವನ್ನು ಹೊಂದು.

ಇತ್ಯುಕ್ತಃ ಪ್ರಿಯಯಾ ದೀನೋ ಮಗ್ನೋ ದುಃಖಾರ್ಣವೇ ನೃಪಃ । ಮೂರ್ಛಿತಃ ಪತಿತೋ ಭೂಮೌ ವಿಸಂಜ್ಞೋ ಮೃತೋ ಯಥಾ
ಏವಂ ರಾತ್ರಿರ್ಗತಾ ತಸ್ಯ ದುಃಖಾತ್ಸಂವತ್ಸರೋಪಮಾ । ಅರುಣೋದಯಕಾಲೇ ತು ವಂದಿನೋ ಗಾಯಕಾ ಜಗುಃ ॥ ೩೪ ॥
ನಿವಾರಯಿತ್ವಾ ತಾಂತ್ಸರ್ವಾನ್ಕೈಕೇಯೀರೋಷಮಾಸ್ಥಿತಾ । ತತಃ ಪ್ರಭಾತಸಮಯೇ ಮಧ್ಯಕಕ್ಷಮುಪಸ್ಥಿತಾಃ ॥ ೩೫ ॥
ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ಋಷಯಃ ಕನ್ಯಕಾಸ್ತಥಾ । ಛತ್ರಂ ಚ ಚಾಮರಂ ದಿವ್ಯಂ ಗಜೋ ವಾಜೀ ತಥೈವ ಚ ॥ ೩೬ ॥
ಅನ್ಯಾಶ್ಚ ವಾರಮುಖ್ಯಾ ಯಾಃ ಪೌರಜಾನಪದಾಸ್ತಥಾ । ವಸಿಷ್ಠೇನ ಯಥಾಜ್ಞಪ್ತಂ ತತ್ಸರ್ವಂ ತತ್ರ ಸಂಸ್ಥಿತಂ ॥ ೩೭ ॥

---

೩೩ ಆ ಕೈಕೇಯಿಯು ಹೀಗೆಂದೆನ್ನುತ್ತಲೂ ಈ ದೊರೆಯು ಕಂಗೆಟ್ಟು ದುಃಖವೆಂಬ ಸಮುದ್ರದಲ್ಲಿ ಮುಳುಗಿದನು. ಮೂರ್ಛೆಗೊಂಡು ನೆಲದಮೇಲೆ ಬಿದ್ದು ಹೆಣದಂತೆ ಕೈಕಾಲುಗಳನ್ನೇ ಅಲ್ಲಾಡಿಸದಿದ್ದನು.

೩೪. ಹೀಗೆ ಬಿದ್ದಿರುವಾಗ ಈ ರೀತಿಯಾಗಿ ಆ ರಾತ್ರಿಯು ದುಃಖದಿಂದ ಒಂದುವರ್ಷದಂತೆ ಕಳೆಯಿತು. ಬೆಳಗ್ಗೆ ಅರುಣೋದಯ ವಾಗುತ್ತಲೂ ಹೊಗಳುಭಟರೂ, ಗಾನಮಾಡುವವರೂ ಆ ರಾಜನನ್ನು ಸ್ತುತಿಸಲು ಮೊದಲುಮಾಡಿದರು.

೩೫–೩೭. ಆಗ ಆ ಕೈಕೇಯಿಯು ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಹೊಗಳಬೇಡಿರೆಂದು ತಡೆದಳು. ಅನಂತರ ಬೆಳಗಾಗುತ್ತಲೂ ವಸಿಷ್ಠನು ಅಪ್ಪಣೆಮಾಡಿದ್ದಂತೆ ಆ ಅರಮನೆಯ ಮಧ್ಯದ ತೊಟ್ಟಿಯಲ್ಲಿ ಬ್ರಾಹ್ಮಣರೂ ಕ್ಷತ್ರಿಯರೂ, ವೈಶ್ಯರೂ, ಋಷಿಗಳೂ, ಮುತ್ತೈದೆಯರೂ ಬಂದು ಸೇರಿದರು. ಛತ್ರಗಳೂ, ಚಾಮರಗಳೂ, ಆನೆಗಳೂ, ಕುದುರೆಗಳೂ ಅಂತೆಯೇ ವೇಶ್ಯಾಸ್ತ್ರೀಯರೂ, ಪಟ್ಟಣದಲ್ಲಿರುವ ಮುಖ್ಯಸ್ಥರೂ ಕೂಡ ವಸಿಷ್ಠನ ಅಪ್ಪಣೆಯಂತೆ ಬಂದು ಸಿದ್ಧರಾದರು.

ಸ್ತ್ರೀಯೋ ಬಾಲಾಶ್ಚ ವೃದ್ಧಾಶ್ಚ ರಾತ್ರೌ ನಿದ್ರಾಂ ನ ಲೇಭಿರೇ । ಕದಾ ದ್ರಕ್ಷ್ಯಾಮಹೇ ರಾಮಂ ಪೀತಕೌಶೇಯವಾಸಸಂ ॥ ೩೮ ॥

ಸರ್ವಾಭರಣಸಂಪನ್ನಂ ಕಿರೀಟಕಟಕೋಜ್ವಲಂ । ಕೌಸ್ತುಭಾಭರಣಂ ಶ್ಯಾಮಂ ಕಂದರ್ಪಶತಸುಂದರಂ ॥ ೩೯ ॥

ಅಭಿಷಿಕ್ತಂ ಸಮಾಯಾಂತಂ ಗಜಾರೂಢಂ ಸ್ಮಿತಾನನಂ । ಶ್ವೇತಛತ್ರಧರಂ ತತ್ರ ಲಕ್ಷಣಂ ಲಕ್ಷ್ಮಣಾನ್ವಿತಂ ॥ ೪೦ ॥

ರಾಮಂ ಕದಾ ವಾ ದ್ರಕ್ಷ್ಯಾಮಃ ಪ್ರಭಾತಂ ವಾ ಕದಾ ಭವೇತ್ । ಇತ್ಯುತ್ಸುಕಧಿಯಸ್ಸರ್ವೇ ಬಭೂವುಃ ಪುರವಾಸಿನಃ ॥ ೪೧ ॥

---

೩೮. ಪಟ್ಟಣದಲ್ಲಿರುವ ಹೆಂಗಸರೂ ಮಕ್ಕಳೂ, ಮುದುಕರೂ, ಹೊಂಬಣ್ಣದ ರೇಷ್ಮೆಯ ಬಟ್ಟೆಯನ್ನುಟ್ಟುಕೊಂಡು ಬರುತ್ತಿರುವ ರಾಮನನ್ನು ಯಾವಾಗ ನೋಡುವೆವೋ ! ಎಂದು ಮಾತನಾಡಿಕೊಳ್ಳುತ್ತ ನಿದ್ದೆಯನ್ನೇಮಾಡಲಿಲ್ಲ.

೩೯. ಎಲ್ಲಾ ಆಭರಣಗಳಿಂದ ಕೂಡಿಕೊಂಡು ಕಿರೀಟ, ಕೈಗೆ ಹಾಕಿಕೊಳ್ಳುವಬಳೆ ಇವನ್ನು ತೊಟ್ಟು. ಕೌಸ್ತುಭವನ್ನು ಅಳವಡಿಸಿಕೊಂಡು ನೀಲಮೇಘಶ್ಯಾಮನಾಗಿ ಮನ್ಮಥರಂತೆ ಸುಂದರನಾಗಿರುವ ಆ ರಾಮನನ್ನು ಯಾವಾಗ ನೋಡಿಯೇವು ! ಎಂದೆನ್ನುತ್ತಿದ್ದರು.

೪೦. ರಾಜ್ಯದಲ್ಲಿ ಅಭಿಷೇಕವನ್ನು ಹೊಂದಿ ಆನೆಯಮೇಲೆ ಕುಳಿತುಕೊಂಡು ಮುಗುಳುನಗೆಯನ್ನು ಬೀರುತ್ತಾ ಶ್ವೇತಚ್ಛತ್ರವನ್ನು ಧರಿಸಿಕೊಂಡು ಲಕ್ಷಣವಂತನಾಗಿ ಲಕ್ಷ್ಮಣನಿಂದಲೂ ಕೂಡಿಕೊಂಡಿರುವ ಆ ಸ್ವಾಮಿಯನ್ನು ಯಾವಾಗನೋಡಿಯೇವು !

೪೧. ಅಂತಹ ರಾಮನನ್ನು ನಾವು ಯಾವಾಗ ನೋಡಿ ಕೃತಾರ್ಥರಾದೇವು ? ಬೆಳಗು ಯಾವಾಗ ಆಗುವುದು? ಎಂಬುದಾಗಿ ಆ ಪಟ್ಟಣದ ಜನರು ಆಸೆಯುಳ್ಳವರಾಗಿರುತ್ತಿದ್ದರು.

ನೇದಾನೀಮುತ್ಥಿತೋ ರಾಜಾ ಕಿಮರ್ಥಮಿತಿ ಚಿಂತಯರ್ನ್ । ಸುಮಂತ್ರಶ್ಶನಕ್ಕೈಃ ಪ್ರಾಯಾದ್ಯತ್ರ ರಾಜಾವತಿಷ್ಠತೇ ॥ ೪೨ ॥

ವರ್ಧರ್ಯ್ನ ಜಯಶಬ್ದೇನ ಪ್ರಣಮಂಚ್ಛಿರಸಾ ನೃಪಂ । ಅತಿಖಿನ್ನಂ ನೃಪಂ ದೃಷ್ಟ್ವಾ ಕೈಕೇಯೀಂ ಸಮುಪೃಚ್ಛತ ॥ ೪೩ ॥

ದೇವಿ ಕೈಕೇಯಿ ವರ್ಧಸ್ವ ಕಿಂ ರಾಜಾ ದೃಶ್ಯತೇನ್ಯಥಾ । ತಮಾಹ ಕೈಕೇಯೀ ರಾಜಾ ರಾತ್ರೌ ನಿದ್ರಾಂ ನ ಲಬ್ಧವಾನ್ ॥ ೪೪ ॥

ರಾಮ ರಾಮೇತಿ ರಾಮೇತಿ ರಾಮಮೇವಾನುಚಿಂತರ್ಯ್ನ ಪ್ರಜಾಗರೇಣ ವೈ ।
ರಾಜಾ ಹ್ಯಸ್ವಸ್ಥ ಇವ ಲಕ್ಷ್ಯತೇ ರಾಮಮಾನಯ ಶೀಘ್ರಂ ತ್ವಂ ರಾಜಾ ದ್ರಷ್ಟುಮಿಹೇಚ್ಛತಿ ॥ ೪೫ ॥

---

೪೨. ಆಗ ಸುಮಂತ್ರನು ಎಲ್ಲವೂ ಸಿದ್ಧವಾಗಿರುವುದನ್ನೂ ತಿಳಿದು ಇದೇನು? ರಾಜನು ಇನ್ನೂ ಎದ್ದಿರುವುದಿಲ್ಲವಲ್ಲ? ಕಾರಣವೇನು? ಎಂಬುದಾಗಿ ಯೋಚಿಸುತ್ತ ಆ ರಾಜನಿರುವಲ್ಲಿಗೆ ಹೋದನು.

೪೩. ಸುಮಂತ್ರನು ಆ ರಾಜನಿರುವಲ್ಲಿಗೆ ಹೋಗಿ ಜಯ ಜಯ ಎಂಬುದಾಗಿ ಹೇಳುತ್ತ ತಲೆಬಗ್ಗಿಸಿ ನಮಸ್ಕರಿಸಿ ಆ ರಾಜನು ಬಹುವಾಗಿ ದುಃಖಿತನಾಗಿರುವುದನ್ನು ತಿಳಿದು ಅಲ್ಲಿದ್ದ ಕೈಕೇಯಿಯನ್ನು ನೋಡಿ ಇಂತೆಂದನು.

೪೪. ಎಲೈ ದೇವಿಯೆ! ನಿನಗೆ ಜಯವಾಗಲಿ. ಇದೇನು! ರಾಜನು ಸಂತೋಷಕಾಲದಲ್ಲಿ ಸಂತೋಷದಿಂದಿರದೆ ದುಃಖಗೊಂಡಿರುವನಲ್ಲ? ಕಾರಣವೇನು? ಎಂದು ಕೇಳಿದನು. ಆಗ ಕೈಕೇಯಿಯು ಸುಮಂತ್ರನನ್ನು ಕುರಿತು ಎಲೈ ಸುಮಂತ್ರನೇ! ರಾಜನು ರಾತ್ರಿಯಲ್ಲೆಲ್ಲಾ ನಿದ್ರೆಮಾಡಲಿಲ್ಲ.

೪೫. ರಾಮ, ರಾಮ, ರಾಮ, ರಾಮಎಂದು ರಾಮನನ್ನೇ ಚಿಂತಿಸುತ್ತಿದ್ದನು. ರಾಜನು ನಿದ್ದೆಮಾಡದಿರುವುದರಿಂದ ದುಃಖಿತನಂತೆ ಕಾಣುತ್ತಾನೆ. ನೀನು ಬೇಗಹೋಗಿ ರಾಮನನ್ನು ಕರೆದುಕೊಂಡು ಬಾ ಆ ರಾಮನನ್ನು ರಾಜನು ನೋಡಬೇಕೆಂದೆನ್ನುತ್ತಾನೆ ಎಂದಳು.

॥ ಸುಮಂತ್ರ ಉವಾಚ ॥

ಅಶ್ರುತ್ವಾ ರಾಮವಚನಂ ಕಥಂ ಗಚ್ಛಾಮಿ ಭಾಮಿನಿ । ತಚ್ಛ್ರುತ್ವಾ ಮಂತ್ರಿಣೋ ವಾಕ್ಯಂ ರಾಜಾ ಮಂತ್ರಿಣಮಬ್ರವೀತ್॥ ೪೬ ॥
ಸುಮಂತ್ರ ರಾಮಂ ದ್ರಕ್ಷ್ಯಾಮಿ ಶೀಘ್ರಮಾನಯ ಸುಂದರಂ । ಇತ್ಯುಕ್ತಸ್ತ್ವರಿತಂ ಗತ್ವಾ ಸುಮಂತ್ರೋ ರಾಮಮಂದಿರಂ ॥ ೪೭ ॥
ಅವಾರಿತಃ ಪ್ರವಿಷ್ಟೋಯಂ ತ್ವರಿತಂ ರಾಮಮಬ್ರವೀತ್ । ಶೀಘ್ರಮಾಗಚ್ಛ ಭದ್ರಂ ತೇ ರಾಮ ರಾಜೀವಲೋಚನ ॥ ೪೮ ॥
ಪಿತುರ್ಗೇಹಂ ಮಯಾ ಸಾರ್ಧಂ ರಾಜಾ ತ್ವಾಂ ದ್ರಷ್ಟುಮಿಚ್ಛತಿ । ಇತ್ಯುಕ್ತೋ ರಥಮಾರುಹ್ಯ ಸಂಭ್ರಮಾ ತ್ತ್ವರಿತೋ ಯಯೌ॥೪೯

---

೪೬. ಸುಮಂತ್ರನು ಕೈಕೇಯಿಯ ಈ ಮಾತನ್ನು ಕೇಳಿ ಅನಾದರಿಸಿ ರಾಜನನ್ನು ನೋಡಿ ಎಲೈ ದೊರೆಯೆ ! ಹೋಗಲೇನು ? ಎಂದನು. ಮಂತ್ರಿಯ ಈ ಮಾತನ್ನು ಕೇಳಿ ದೊರೆಯು ಇಂತೆಂದನು.

೪೭. ಎಲೈ ಮಂತ್ರಿಯೆ ! ರಾಮನನ್ನು ನೋಡಬೇಕು. ಬೇಗ ಕರೆದುಕೊಂಡು ಬಾ. ರಾಜನು ಹೀಗೆಂದು ಅಪ್ಪಣೆಮಾಡುತ್ತಲೂ ಸುಮಂತ್ರನು ಬೇಗನೆ ರಾಮನ ಮನೆಗೆ ಹೋದನು.

೪೮. ಸುಮಂತ್ರನು ಮುಖ್ಯಮಂತ್ರಿಯೂ ವೃದ್ಧನೂ ಆದುದರಿಂದ ಯಾರೂ ತಡೆಯಲಿಲ್ಲ. ಅಲ್ಲಿ ರಾಮನನ್ನುನೋಡಿ ಎಲೈ ರಾಜೀವ ಲೋಚನನಾದ ಶ್ರೀರಾಮನೆ! ನಿನಗೆ ಮಂಗಳವಾಗಲಿ.

೪೯. ನನ್ನ ಜೊತೆಯಲ್ಲಿ ಬೇಗನೆ ಬಾ. ನಿನ್ನ ತಂದೆಯಮನೆಗೆ ಹೋಗಬೇಕು. ರಾಜನು ನಿನ್ನನ್ನು ನೋಡಬೇಕಂತೆ. ಸುಮಂತ್ರನು ಹೀಗೆಂದು ಹೇಳುತ್ತಲೂ ರಾಮನು ಅವಸರಪಟ್ಟುಕೊಂಡು ಹೊರಟನು.

ರಾಮಸ್ಸಾರಥಿನಾ ಸಾರ್ಧಂ ಲಕ್ಷ್ಮಣೇನ ಸಮನ್ವಿತಃ । ಮಧ್ಯಕಕ್ಷೇ ವಸಿಷ್ಠಾದೀನ್ಪಶ್ಯನ್ನೇವ ತ್ವರಾನ್ವಿತಃ ॥ ೫೦ ॥

ಪಿತುಸ್ಸಮೀಪಂ ಸಂಗಮ್ಯ ನನಾಮ ಚರಣೌ ಪಿತುಃ । ರಾಮಮಾಲಿಂಗಿತುಂ ರಾಜಾ ಸಮುತ್ಥಾಯ ಸಸಂಭ್ರಮಃ ॥ ೫೧ ॥

ಬಾಹೂ ಪ್ರಸಾರ್ಯ ರಾಮೇತಿ ದುಃಖಾದ್ಭೂಮೌ ಪಪಾತ ಹ । ಹಾಹೇತಿ ರಾಮಸ್ತಂ ಶೀಘ್ರಮಾಲಿಂಗ್ಯಾಂಕೇ ನ್ಯವೇಶಯತ್ ॥ ೫೨ ॥

ರಾಜಾನಂ ಮೂರ್ಛಿತಂ ದೃಷ್ಟ್ವಾ ಚುಕ್ರುಶುಸ್ಸರ್ವಯೋಷಿತಃ । ಕಿಮರ್ಥಂ ರೋದನಮಿತಿ ವಸಿಷ್ಠೋಽಪಿ ಸಮಾವಿಶತ್ ॥ ೫೩ ॥

೫೦–೫೨. ಜೊತೆಯಲ್ಲಿ ಲಕ್ಷ್ಮಣನನ್ನೂ ಕರೆದುಕೊಂಡು ಆ ಸುಮಂತ್ರನೊಡನೆ ತಂದೆಯಮನೆಗೆ ಹೋದನು. ಆ ಮಧ್ಯದ ತೊಟ್ಟಿಯಲ್ಲಿ ನೆರೆದಿದ್ದ ಜನರನ್ನೂ ವಸಿಷ್ಠನನ್ನೂ ನೋಡುತ್ತ ನೋಟದಿಂದಲೇ ಗೌರವಿಸಿ ಜಾಗ್ರತೆಯಾಗಿ ತಂದೆಯಬಳಿಗೆ ಹೋಗಿ ಅವನ ಪಾದಗಳಿಗೆ ನಮಸ್ಕರಿಸಿದನು. ಒಡನೆಯೇ ರಾಜನು ರಾಮನನ್ನು ಆಲಿಂಗಿಸಲು ಅವಸರದಿಂದ ಎದ್ದು ಕೈಗಳನ್ನು ಅಗಲಿಸಿಕೊಂಡು ರಾಮ, ರಾಮ ಎನ್ನುತ್ತ ದುಃಖದಿಂದ ನೆಲದಮೇಲೆ ಬಿದ್ದನು. ಒಡನೆಯೇ ರಾಮನು ಆ ದೊರೆಯನ್ನು ನೋಡಿ ಹಾ ಹಾ ಎಂದೆನ್ನುತ್ತ ಬೇಗ ಹಿಡಿದುಕೊಂಡು ತನ್ನ ತೊಡೆಯಮೇಲೆ ಮಲಗಿಸಿಕೊಂಡನು.

೫೩. ಆಗ ರಾಜನು ಮೂರ್ಛೆಗೊಂಡುದನ್ನು ನೋಡಿ ಅಂತಃಪುರದ ಹೆಂಗಸರೆಲ್ಲರೂ ದುಃಖಿಸಿದರು. ಇದೇತಕ್ಕೆ ಅಳುವಿರಿ? ಎಂದು ಕೇಳುತ್ತ ವಸಿಷ್ಠನೂ ಅಲ್ಲಿಗೆ ಬಂದನು.

ರಾಮಃ ಪಪ್ರಚ್ಛ ಕಿಮಿದಂ ರಾಜ್ಞೋ ದುಃಖಸ್ಯ ಕಾರಣಂ । ಏವಂ ಪೃಚ್ಛತಿ ರಾಮೇಽಸೌ ಕೈಕೇಯೀ ರಾಮಮಬ್ರವೀತ್ ॥ ೫೪ ॥

ತ್ವಮೇವ ಕಾರಣಂ ಹ್ಯತ್ರ ರಾಜ್ಞೋ ದುಃಖೋಪಶಾಂತಯೇ । ಕಿಂಚಿತ್ಕಾರ್ಯಂ ತ್ವಯಾ ಕಾರ್ಯಂ ಕರ್ತವ್ಯಂ ನೃಪತೇರ್ಹಿತಂ ॥೫೫॥

ಕುರು ಸತ್ಯಪ್ರತಿಜ್ಞಸ್ತ್ವಂ ರಾಜಾನಂ ಸತ್ಯವಾದಿನಂ । ರಾಜ್ಞಾ ವರದ್ವಯಂ ದತ್ತಂ ಮಮ ಸಂತುಷ್ಟಚೇತಸಾ ॥ ೫೬ ॥

ತ್ವದಧೀನಂ ತು ತತ್ಸರ್ವಂ ವಕ್ತುಂ ತ್ವಾಂ ಲಜ್ಜತೇ ನೃಪಃ । ಸತ್ಯಪಾಶೇನ ಸಂಬದ್ಧಂ ಪಿತರಂ ತ್ರಾತುಮರ್ಹಸಿ ॥ ೫೭ ॥

---

೫೪. ಆಗ ರಾಮನು ಇದೇನು? ರಾಜನದುಃಖಕ್ಕೆ ಕಾರಣವೇನು? ಎಂದು ಕೇಳಿದನು. ರಾಮನು ಇಂತು ಕೇಳುತ್ತಿರಲು ಕೈಕೇಯಿಯು ಆ ರಾಮನನ್ನು ಕುರಿತು ಇಂತೆಂದಳು.

೫೫. ಎಲೈ ರಾಮನೆ! ರಾಜನಿಗೆ ನಿನ್ನಿಂದಲೇ ದುಃಖವುಂಟಾಗಿದೆ. ಆ ದುಃಖವನ್ನು ನಾಶಪಡಿಸಲು ನೀನೇ ಕಾರಣನು. ನೀನು ಆ ದೊರೆಗೆ ಒಳ್ಳೆಯದನ್ನುಮಾಡಿ ಸಂತೋಷಪಡಿಸಬೇಕಾದರೆ ಒಂದು ಕೆಲಸವನ್ನು ಮಾಡಬೇಕು.

೫೬. ನೀನೂಕೂಡ ಸತ್ಯವನ್ನೇ ಆಡತಕ್ಕವನು. ಮಾಡತಕ್ಕವನು. ಆ ರಾಜನನ್ನು ಸತ್ಯವಾದಿಯನ್ನಾಗಿಮಾಡು. ಒಂದುಸಾರಿ ಸಂತೋಷದಿಂದಿದ್ದಾಗ ನನಗೆ ಈ ರಾಜನು ಎರಡು ವರಗಳನ್ನು ಕೊಟ್ಟನು.

೫೭. ಆ ವರಗಳು ಈಗ ನಿನ್ನ ಅಧೀನವಾಗಿವೆ. ನೀನು ನೆರವೇರಿಸಿದರೆ ನೆರವೇರಿಸಬಹುದು. ಇಲ್ಲದಿದ್ದರೆ ಇಲ್ಲ. ಅದನ್ನು ನಿನಗೆ ಹೇಳಲು ದೊರೆಯು ಸಂಕೋಚಪಡುತ್ತಾನೆ. ಸತ್ಯದ ಮಾತೆಂಬ ಪಾಶದಿಂದ ಕಟ್ಟಲ್ಪಟ್ಟ ದೊರೆಯನ್ನು, ನೀನು ಈಗ ಕಾಪಾಡಬೇಕು.

ಪುತ್ರಶಬ್ದೇನ ಚೈತದ್ಧಿ ನರಕಾತ್ತ್ರಾಯತೇ ಪಿತಾ । ರಾಮಸ್ತಯೋದಿತಂ ಶ್ರುತ್ವಾ ಶೂಲೇನಾಭಿಹತೋ ಯಥಾ ॥ ೫೮ ॥
ವ್ಯಥಿತಃ ಕೈಕೇಯೀಂ ಪ್ರಾಹ ಕಿಂ ಮಾಮೇವಂ ಪ್ರಭಾಷಸೇ । ಪಿತ್ರರ್ಥೇ ಜೀವಿತಂ ದಾಸ್ಯೇ ಪಿಬೇಯಂ ವಿಷಮುಲ್ಬಣಂ ॥ ೫೯ ॥
ಸೀತಾಂ ತ್ಯಜೇಥ ಕೌಸಲ್ಯಾಂ ರಾಜ್ಯಂ ಚಾಪಿ ತ್ಯಜಾಮ್ಯಹಂ । ಅನಾಜ್ಞಪ್ತೋಽಪಿ ಕುರುತೇ ಪಿತುಃ ಕಾರ್ಯಂ ಸ ಉತ್ತಮಃ ॥ ೬೦ ॥
ಉಕ್ತಃ ಕರೋತಿ ಯಃ ಪುತ್ರಸ್ಸ ಮಧ್ಯಮ ಉದಾಹೃತಃ । ಉಕ್ತೋಽಪಿ ಕುರುತೇ ನೈವ ಸ ಪುತ್ರೋ ಮಲ ಉಚ್ಯತೇ ॥ ೬೧ ॥

೫೮–೫೯. ಮಗನು ತಂದೆಯನ್ನು ನರಕದಿಂದ ಕಾಪಾಡುತ್ತಾನೆ. ಎಂಬರ್ಥದಿಂದಲೇ ಪುತ್ರಶಬ್ದವು ಅರ್ಥವನ್ನು ಹೊಂದಿರುತ್ತದೆ. ನೀನು ಅವನ ಮಗನಷ್ಟೆ. ಕೈಕೇಯಿಯು ಹೇಳಿದುದನ್ನು ರಾಮನು ಕೇಳಿ ಶೂಲದಿಂದ ಇರಿಯಲ್ಪಟ್ಟವನಂತೆ ಆಗಿ ಬಹುದುಃಖಗೊಂಡು ಎಲೈ ತಾಯಿಯೆ! ನನ್ನ ವಿಷಯದಲ್ಲೇಕೆ ಈರೀತಿಯಾಗಿ ಮಾತನಾಡುತ್ತೀಯೆ? ನಾನು ನನ್ನ ತಂದೆಗೋಸ್ಕರವಾಗಿ ಪ್ರಾಣವನ್ನೇ ಬೇಕಾದರೂ ಕೊಡುವೆನು. ಕ್ರೂರವಾದ ವಿಷವನ್ನೇ ಬೇಕಾದರೂ ಕುಡಿಯುವೆನು.

೬೦–೬೧. ಸೀತೆಯನ್ನು ಬೇಕಾದರೂ ಬಿಡುತ್ತೇನೆ. ತಾಯಿಯಾದ ಕೌಸಲ್ಯೆಯನ್ನೂ ಬಿಡಲು ಸಿದ್ಧನಾಗಿದ್ದೇನೆ. ಕೊನೆಗೆ ರಾಜ್ಯವನ್ನೂ ಬಿಡುತ್ತೇನೆ. ಯಾವ ಮಗನು ತಂದೆಯು ಅಪ್ಪಣೆ ಮಾಡುವುದಕ್ಕೆ ಮೊದಲೇ ಅವನ ಕೆಲಸವನ್ನು ಮಾಡುತ್ತಾನೆಯೋ ಅವನು ಉತ್ತಮನಾದ ಮಗನು. ತಂದೆಯು ಹೇಳಿದಮೇಲೆ ಆತನ ಕೆಲಸವನ್ನು ಮಾಡುವವನು ಮಧ್ಯಮತರದ ಮಗನು. ತಂದೆಯು ಹೇಳಿದರೂ ಅವನ ಕೆಲಸವನ್ನು ಮಾಡದ ಮಗನು ಅವನ ದೇಹದಿಂದ ಬಿದ್ದ ಮಲದಂತಾಗಿ ಮಲವೆಂದೆನ್ನಿಸಿಕೊಳ್ಳುತ್ತಾನೆ.

ಅತಃ ಕರೋಮಿ ತತ್ಸರ್ವಂ ಯನ್ಮಾಮಾಹ ಪಿತಾ ಮಮ । ಸತ್ಯಂ ಸತ್ಯಂ ಕರೋಮ್ಯೇವ ರಾಮೋ ದ್ವಿರ್ನಾಭಿಭಾಷತೇ ॥ ೬೨ ॥

ಇತಿ ರಾಮಪ್ರತಿಜ್ಞಾಂ ಸಾ ಶ್ರುತ್ವಾ ವಕ್ತುಂ ಪ್ರಚಕ್ರಮೇ । ರಾಮ ತ್ವದಭಿಷೇಕಾರ್ಥಂ ಸಂಭಾರಾಸ್ಸಂಭೃತಾಶ್ಚ ಯೇ ॥ ೬೩ ॥

ತೈರೇವ ಭರತೋಽವಶ್ಯಮಭಿಷೇಚ್ಯಃ ಪ್ರಿಯೋ ಮಮ । ಅಪರೇಣ ವರೇಣಾಶು ಚೀರವಾಸಾ ಜಟಾಧರಃ ॥ ೬೪ ॥

ವನಂ ಪ್ರಯಾಹಿ ಶೀಘ್ರಂ ತ್ವಮದ್ಯೈವ ಪಿತುರಾಜ್ಞಯಾ । ಚತುರ್ದಶಸಮಾಸ್ತತ್ರ ವಸ ಮುನ್ಯನ್ನಭೋಜನಃ ॥ ೬೫ ॥

---

೬೨. ಆದ್ದರಿಂದ ತಂದೆಯು ನನಗೆ ಏನು ಬೇಕಾದರೂ ಅಪ್ಪಣೆಮಾಡಿರಲಿ. ಅಂತಹ ಕೆಲಸವನ್ನು ನಾನು ಮಾಡಿಯೇ ಮಾಡುತ್ತೇನೆ. ಸತ್ಯವಾಗಿಯೂ ಮಾಡಿಯೇ ಮಾಡುತ್ತೇನೆ. ಖಂಡಿತವು. ರಾಮನು ಯಾವಾಗಲೂ ಒಂದು ವಿಷಯದಲ್ಲಿ ಎರಡು ಬಗೆಯಾದ ಮಾತನ್ನು ಆಡುವುದೇ ಇಲ್ಲ.

೬೩. ರಾಮನು ಹೀಗೆ ಪ್ರತಿಜ್ಞೆಮಾಡಿದುದನ್ನು ತಿಳಿದು ಆ ಕೈಕೇಯಿಯು ಇಂತೆಂದಳು. ಎಲೈ ರಾಮನೇ ! ನಿನ್ನ ಪಟ್ಟಾಭಿಷೇಕ ಕ್ಕೋಸ್ಕರ ಸಿದ್ಧಮಾಡಿರುವ ಪದಾರ್ಥಗಳಿಂದಲೇ ಭರತನಿಗೆ ಪಟ್ಟಾಭಿಷೇಕ ಮಾಡಬೇಕು. ಇದೇ ನನಗೆ ಬೇಕಾಗಿರುವುದು. ಇದು ಒಂದು ವರವು

೬೪-೬೬. ಇನ್ನೊಂದು ವರವೇನೆಂದರೆ, ನೀನು ನಾರುಡೆಯನ್ನುಟ್ಟು ಜಟೆಯನ್ನು ಧರಿಸಿಕೊಂಡು, ತಂದೆಯ ಅಪ್ಪಣೆಯಂತೆ ಈಗಲೇನೇ ಕಾಡಿಗೆ ಬೇಗ ಹೊರಡಬೇಕು. ಆ ಕಾಡಿನಲ್ಲಿ ಮುನಿಗಳು ತಿನ್ನುವ ಗೆಡ್ಡೆ ಗೆಣಸುಗಳನ್ನು ತಿಂದುಕೊಂಡು ಹದಿನಾಲ್ಕು ವರ್ಷಗಳ.

ಏತದೇವ ಪಿತುಸ್ತೇದ್ಯ ಕಾರ್ಯಂ ತ್ವಂ ಕರ್ತುಮರ್ಹಸಿ । ರಾಜಾ ತು ಲಜ್ಜತೇ ವಕ್ತುಂ ತ್ವಾಮೇವಂ ರಘುನಂದನ ॥ ೬೬ ॥

ಭರತಸ್ಯೈವ ರಾಜ್ಯಂ ಸ್ಯಾದಹಂ ಗಚ್ಛಾಮಿ ದಂಡಕಾಂ । ಕಿಂ ತು ರಾಜಾ ನ ವಕ್ತೀಹ ಮಾಂ ನ ಜಾನೇತ್ರ ಕಾರಣಂ ॥ ೬೭ ॥

ಶ್ರುತ್ವೈತದ್ರಾಮವಚನಂ ದೃಷ್ಟ್ವಾ ರಾಮಂ ಪುರಸ್ಥಿತಂ । ಪ್ರಾಹ ರಾಜಾ ದಶರಥೋ ದುಃಖಿತೋ ದುಃಖಿತಂ ವಚಃ ॥ ೬೮ ॥

ಸ್ತ್ರೀಜಿತಂ ಭ್ರಾಂತಹೃದಯಮುನ್ಮಾರ್ಗಪರಿವರ್ತಿನಂ । ನಿಗೃಹ್ಯ ಮಾಂ ಗೃಹಾಣೇಂದಂ ರಾಜ್ಯಂ ಪಾಪಂ ನ ತದ್ಭವೇತ್ ॥ ೬೯ ॥

ಕಾಲ ಇರಬೇಕು. ಇವೆರಡು ಕೆಲಸಗಳನ್ನೇ ನೀನು ನಿನ್ನ ತಂದೆಗೆ ಮಾಡಬೇಕಾಗಿರುವುದು. ಅದನ್ನು ನೀನು ಮಾಡು. ಎಲೈ ರಘುನಂದನನೇ! ಈ ಮಾತನ್ನು ರಾಜನು ನಿನಗೆ ಹೇಳಲು ನಾಚಿಕೆಪಡುತ್ತಾನೆ. ಎನ್ನಲು ರಾಮನು ಇಂತೆಂದನು.

೬೭. ಎಲೈ ತಾಯಿಯೆ! ಭರತನಿಗೆ ಅಭಿಷೇಕಮಾಡಿ ರಾಜ್ಯವನ್ನು ಕೊಡಲಿ. ನಾನು ದಂಡಕಾವನಕ್ಕೇ ಹೋಗುತ್ತೇನೆ. ಇದನ್ನು ರಾಜನು ಏತಕ್ಕೆ ಈಗ ಹೇಳಬಾರದು? ಇದರ ಕಾರಣವೇ ನನಗೆ ತಿಳಿಯದಾಗಿದೆಯಲ್ಲ!

೬೮. ರಾಮನ ಮಾತುಗಳನ್ನು ಕೇಳಿ ಎದುರಿಗಿರುವ ರಾಮನನ್ನು ನೋಡುತ್ತ ದಶರಥನು ದುಃಖದಿಂದ ಇಂತೆಂದು ಹೇಳಿದನು.

೬೯. ಎಲೈ ರಾಮನೇ! ನಾನು ಹೆಂಗಸಿಗೆ ಅಧೀನನಾಗಿದ್ದೇನೆ. ಬುದ್ಧಿಯು ಭ್ರಾಂತಿಗೊಂಡಿದೆ ದಾರಿತಪ್ಪಿ ನಡೆದಿದ್ದೇನೆ. ನನ್ನನ್ನು ಶಿಕ್ಷಿಸಿ ನೀನು ರಾಜ್ಯವನ್ನು ತೆಗೆದುಕೋ. ಹೀಗೆ ಶಿಕ್ಷಿಸಿ ತೆಗೆದುಕೊಂಡರೆ ಈ ಕೆಲಸದಿಂದ ನಿನಗೆ ಪಾಪವು ಬರುವುದಿಲ್ಲ.

ಏವಂ ಚೇದನೃತಂ ನೈವ ಮಾಂ ಸ್ಪೃಶೇದ್ರಘುನಂದನ । ಇತ್ಯುಕ್ತ್ವಾ ದುಃಖಸಂತಪ್ತೋ ವಿಲಲಾಪ ನೃಪಸ್ತದಾ ॥ ೨೦ ॥

ಹಾ ರಾಮ ಹಾ ಜಗನ್ನಾಥ ಹಾ ಮಮ ಪ್ರಾಣವಲ್ಲಭ । ಮಾಂ ವಿಸೃಜ್ಯ ಕಥಂ ಘೋರಂ ವಿಪಿನಂ ಗಂತುಮರ್ಹಸಿ ॥ ೨೧ ॥

ಇತಿ ರಾಮಂ ಸಮಾಲಿಂಗ್ಯ ಮುಕ್ತಕಂಠೋ ರುರೋದ ಹ । ವಿಮೃಜ್ಯ ನಯನೇ ರಾಮಃ ಪಿತುಸ್ಸಜಲಪಾಣಿನಾ ॥ ೨೨ ॥

ಆಶ್ವಾಸಯಾಮಾಸ ನೃಪಂ ಶನೈಸ್ಸ ನಯಕೋವಿದಃ । ಕಿಮತ್ರ ದುಃಖೇನ ವಿಭೋ ರಾಜ್ಯಂ ಶಾಸತು ಮೇನುಜಃ ॥ ೨೩ ॥

ಅಹಂ ಪ್ರತಿಜ್ಞಾಂ ನಿಸ್ತೀರ್ಯ ಪುನರ್ಯಾಸ್ಯಾಮಿ ತೇ ಪುರಂ । ರಾಜ್ಯಾತ್ಕೋಟಿಗುಣಂ ಸೌಖ್ಯಂ ಮಮ ರಾಜನ್ ವನೇ ಸತಃ ॥ ೨೪ ॥

---

೨೦. ನೀನು ಹಾಗೆ ಮಾಡಿದರೆ ನನಗೆ ಸುಳ್ಳುಹೇಳಿದ ದೋಷವೂ ಬರುವುದಿಲ್ಲ. ರಾಮನಿಗೆ ಹೀಗೆಂದು ಹೇಳುತ್ತ ಆ ರಾಜನು ಅಳುತ್ತಲಿದ್ದನು.

೨೧. ಹಾ ರಾಮ! ಹಾ ಜಗನ್ನಾಥ! ಹಾ ನನ್ನ ಪ್ರಾಣವಲ್ಲಭ! ನೀನು ನನ್ನನ್ನು ಬಿಟ್ಟು ಘೋರವಾದ ಕಾಡಿಗೆ ಹೇಗೆ ಹೋಗುತ್ತೀಯಪ್ಪಾ! ಎಂದೆನ್ನುತ್ತ ರಾಮನನ್ನು ಆಲಿಂಗಿಸಿಕೊಂಡು ಗಟ್ಟಿಯಾಗಿ ಅತ್ತನು.

೨೨. ಒಡನೆಯೇ ರಾಮನು ನೀರನ್ನು ತಂದು ಆ ನೀರಿನ ಕೈಯ್ಯಿಂದ ರಾಜನ ಕಣ್ಣುಗಳನ್ನು ಒರಸಿ ತೊಳೆದನು.

೨೩-೨೪. ನೀತಿಜ್ಞನಾದ ಅವನು ಆ ರಾಜನನ್ನು ನಿಧಾನವಾಗಿ ಸಮಾಧಾನಪಡಿಸುತ್ತ ಎಲೈ ವಿಭುವೆ! ಈ ವಿಷಯದಲ್ಲಿ ದುಃಖವನ್ನೇಕೆ ಪಡುತ್ತೀಯೆ? ನನ್ನ ತಮ್ಮನಾದ ಭರತನು ರಾಜ್ಯವನ್ನು ಆಳಲಿ. ನಾನು ನಿನ್ನ ಪ್ರತಿಜ್ಞೆಯನ್ನು ಕಾಪಾಡಿ ಅದು ಕಳೆದನಂತರ ಮತ್ತೆ ಊರಿಗೆ ಬರುತ್ತೇನೆ. ಎಲೈ ರಾಜನೆ! ನಾನು ವನದಲ್ಲಿದ್ದುಕೊಂಡಿದ್ದರೆ ರಾಜ್ಯವನ್ನಾಳುವುದಕ್ಕಿಂತಲೂ ಕೋಟಿಪಾಲಿನಷ್ಟು ಸುಖವುಂಟು.

ತ್ವತ್ಸತ್ಯಪಾಲನಂ ದೇವಕಾರ್ಯಂ ಚಾಪಿ ಭವಿಷ್ಯತಿ । ಕೈಕೇಯ್ಯಾಶ್ಚ ಪ್ರಿಯೋ ರಾಜನ್ ವನವಾಸೋ ಮಹಾಗುಣಃ ॥ ೭೫ ॥

ಇದಾನೀಂ ಗಂತುಮಿಚ್ಛಾಮಿ ವ್ಯೇತು ಮಾತುಶ್ಚ ಹೃಜ್ಜ್ವರಃ । ಸಂಭಾರಾಶ್ಚೋಪಹ್ರಿಯಂ ತಾಮಭಿಷೇಕಾರ್ಥಮಾಹೃತಾಃ ॥ ೭೬ ॥

ಮಾತರಂ ಚ ಸಮಾಶ್ವಾಸ್ಯ ಅನುನೀಯ ಚ ಜಾನಕೀಂ । ಆಗತ್ಯ ಪಾದೌ ವಂದಿತ್ವಾ ತವ ಯಾಸ್ಯೇ ಸುಖಂ ವನಂ ॥ ೭೭ ॥

ಇತ್ಯುಕ್ತ್ವಾ ತು ಪರಿಕ್ರಮ್ಯ ಮಾತರಂ ದ್ರಷ್ಟುಮಾಯಯೌ । ಕೌಸಲ್ಯಾಪಿ ಹರೇಃ ಪೂಜಾಂ ಕುರುತೇ ರಾಮಕಾರಣಾತ್ ॥ ೭೮ ॥

---

೭೫. ಹಾಗೆ ಸೌಖ್ಯಪಡುವುದರ ಜೊತೆಗೆ ನಿನ್ನ ಸತ್ಯದ ಮಾತನ್ನು ಕಾಪಾಡಿದಂತೆಯೂ ಆಗುತ್ತದೆ. ಎಲೈ ದೊರೆಯೆ! ಕೈಕೇಯಿಯ ಇಷ್ಟಾರ್ಥವೂ ನೆರವೇರಿದಂತಾಗಿ ಅವಳಿಗೆ ಸಂತೋಷವಾಗುತ್ತದೆ. ವನವಾಸವೂ ಕೂಡ ಬಹುಗುಣದಿಂದ ಕೂಡಿಕೊಂಡಿರುವುದು.

೭೬. ಈಗಲೇ ನಾನು ಕಾಡಿಗೆ ಹೋಗುತ್ತೇನೆ. ತಾಯಿಯಾದ ಕೈಕೇಯಿಯ ಮನಸ್ಸಿನಲ್ಲಿರುವ ದುಃಖವು ಹೋಗಲಿ. ಅಭಿಷೇಕಕ್ಕೋಸ್ಕರ ತಂದಿದ್ದ ಪದಾರ್ಥಗಳನ್ನು ತೆಗೆದುಕೊಂಡು ಹೋಗಲಿ.

೭೭. ಅದಕ್ಕೋಸ್ಕರಬಂದಿರತಕ್ಕವರೆಲ್ಲರೂ ಹೊರಟುಹೋಗಲಿ. ನನ್ನ ತಾಯಿಯಾದ ಕೌಸಲ್ಯೆಯನ್ನು ಸಮಾಧಾನಪಡಿಸಿ ಜಾನಕಿಗೆ ಒಳ್ಳೆಯ ಮಾತುಗಳನ್ನು ಹೇಳಿ ಮತ್ತೆ ಇಲ್ಲಿಗೆ ಬಂದು ನಿನ್ನ ಪಾದಗಳಿಗೆ ನಮಸ್ಕರಿಸಿ ಅನಂತರ ಸುಖವಾಗಿ ಕಾಡಿಗೆ ಹೋಗುತ್ತೇನೆ.

೭೮. ಹೀಗೆಂದು ಹೇಳಿ ರಾಜನಿಗೆ ಪ್ರದಕ್ಷಿಣೆಮಾಡಿ ತಾಯಿಯನ್ನು ನೋಡಲು ಬಂದನು. ಆ ಕೌಸಲ್ಯೆಯು ರಾಮನಿಗೆ ಒಳ್ಳೆಯದಾಗಲೆಂದು ದೇವರ ಮನೆಯಲ್ಲಿ ವಿಷ್ಣುವಿನ ಪೂಜೆಯನ್ನು ಮಾಡುತ್ತಿದ್ದಳು.

ಹೋಮಂ ಚ ಕಾರಯಾಮಾಸ ಬ್ರಾಹ್ಮಣೇಭ್ಯೋ ದದೌ ಧನಂ । ಧ್ಯಾಯತೇ ವಿಷ್ಣುಮೇಕಾಗ್ರಮನಸಾ ಧ್ಯಾನಮಾಸ್ಥಿತಾ ॥ ೭೯ ॥

ಅಂತಸ್ಥಮೇಕಂ ಘನಚಿತ್ಪ್ರಕಾಶಂ ನಿರಸ್ತಸರ್ವಾತಿಶಯಂ ಸ್ವರೂಪಂ ।
ವಿಷ್ಣುಂ ಸದಾನಂದಮಯಂ ಹೃದಬ್ಜೇ ಸಾ ಭಾವಯಂತೀ ನ ದದರ್ಶ ರಾಮಂ ॥ ೮೦ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ತೃತೀಯಸರ್ಗಸ್ಸಮಾಪ್ತಃ

---

೭೯. ಹೋಮವನ್ನೂ ಕೂಡ ಮಾಡಿಸುತ್ತಿದ್ದಳು. ಬ್ರಾಹ್ಮಣರಿಗೆ ಬಹುವಾದ ದಕ್ಷಿಣೆಯನ್ನು ಕೊಟ್ಟಳು. ಧ್ಯಾನದಲ್ಲಿ ಕುಳಿತು ಮನಸ್ಸಿನ ಏಕಾಗ್ರತೆಯಿಂದ ಆ ವಿಷ್ಣುವನ್ನೇ ಧ್ಯಾನಿಸುತ್ತಿದ್ದಳು.

೮೦. ಎಲ್ಲಾ ಪ್ರಾಣಿಗಳ ಹೃದಯದಲ್ಲಿಯೂ ವಾಸಮಾಡುವ ಅದ್ವಿತೀಯನಾದ ಘನಸ್ವರೂಪನೂ, ಚಿತ್‌ಸ್ವರೂಪನೂ ಆದ ಉತ್ತಮವಾದ ಪದಾರ್ಥಗಳೆಲ್ಲಕ್ಕಿಂತಲೂ ಉತ್ತಮನಾದ ಆನಂದಸ್ವರೂಪನಾದ ವಿಷ್ಣುವನ್ನು ಆ ಕೌಸಲ್ಯೆಯು ಹೃತ್ಪುಂಡರೀಕದಲ್ಲಿ ಧ್ಯಾನಮಾಡುತ್ತಿದ್ದುದರಿಂದ ರಾಮನು ಎದುರಿಗೆ ಬಂದು ನಿಂತಿದ್ದರೂ ಬಹಿರಿಂದ್ರಿಯವಾದ ಕಣ್ಣಿಗೆ ಆ ರಾಮನು ಕಾಣಿಸಲಿಲ್ಲ.

ಇಂತು ಶ್ರೀಮದಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ ಮೂರನೆಯ ಸರ್ಗವು.

॥ ಶ್ರೀರಸ್ತು ॥

ಅಥ ಅಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಚತುರ್ಥಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಅಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದ ನಾಲ್ಕನೆಯ ಸರ್ಗದಲ್ಲಿ ಮಾಡಬೇಕಾದ ಸಂಕಲ್ಪ ನ್ಯಾಸ ಧ್ಯಾನ ಜಪಗಳ ಕ್ರಮವು.

ಪೂರ್ವೋಕ್ತವಿಧಿನಾ ಅಯೋಧ್ಯಾಕಾಂಡೇ ಚತುರ್ಥಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ ಇತಿಸಂಕಲ್ಪ್ಯ ॥

ಹಿಂದೆ ಹೇಳಿದ ವಿಧಿಯಂತೆ ಅಯೋಧ್ಯಾಕಾಂಡದ ನಾಲ್ಕನೆಯ ಸರ್ಗದಲ್ಲಿ ನ್ಯಾಸ, ಧ್ಯಾನ, ಜಪಗಳನ್ನು ಮಾಡುತ್ತೇನೆ. ಎಂಬುದಾಗಿ ಸಂಕಲ್ಪವನ್ನು ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ರಾಂ ರೀಂ ಶ್ರೀಂ ಅಂಗುಷ್ಠಾಭ್ಯಾಂ ನಮಃ
ಓಂ ರಾಂ ರೀಂ ಶ್ರೀಂ ತರ್ಜನೀಭ್ಯಾಂ ನಮಃ
ಓಂ ರಾಂ ರೀಂ ಶ್ರೀಂ ಮಧ್ಯಮಾಭ್ಯಾಂ ನಮಃ
ಓಂ ರಾಂ ರೀಂ ಶ್ರೀಂ ಅನಾಮಿಕಾಭ್ಯಾಂ ನಮಃ
ಓಂ ರಾಂ ರೀಂ ಶ್ರೀಂ ಕನಿಷ್ಠಿಕಾಭ್ಯಾಂ ನಮಃ
ಓಂ ರಾಂ ರೀಂ ಶ್ರೀಂ ಕರತಲಕರಪೃಷ್ಠಾಭ್ಯಾಂ ನಮಃ

|| ಅಥ ಷಡಂಗನ್ಯಾಸಃ ||

ಷಡಂಗನ್ಯಾಸವು

ಓಂ ರಾಂ ರೀಂ ಶ್ರೀಂ ಹೃದಯಾಯ ನಮಃ
ಓಂ ರಾಂ ರೀಂ ಶ್ರೀಂ ಶಿರಸೇ ಸ್ವಾಹಾ
ಓಂ ರಾಂ ರೀಂ ಶ್ರೀಂ ಶಿಖಾಯೈ ವಷಟ್
ಓಂ ರಾಂ ರೀಂ ಶ್ರೀಂ ಕವಚಾಯ ಹುಂ
ಓಂ ರಾಂ ರೀಂ ಶ್ರೀಂ ನೇತ್ರತ್ರಯಾಯ ವೌಷಟ್
ಓಂ ರಾಂ ರೀಂ ಶ್ರೀಂ ಅಸ್ತ್ರಾಯ ಫಟ್

ಓಂ ರಾಂ ರೀಂ ಶ್ರೀಂ ಇತಿ ದಿಗ್ಬಂಧಃ

ಓಂ ರಾಂ ರೀಂ ಶ್ರೀಂ ಎಂದು ದಿಗ್ಬಂಧವು

|| ಅಥ ಧ್ಯಾನಂ ||

ಧ್ಯಾನವು

ತತಃ ಸುಮಿತ್ರಾ ದೃಷ್ಟ್ವೈನಂ ರಾಮಂ ರಾಜ್ಞೀಂ ಸಸಂಭ್ರಮಾ । ಕೌಸಲ್ಯಾಂ ಬೋಧಯಾಮಾಸ ರಾಮೋಽಯಂ ಸಮುಪಸ್ಥಿತಃ ॥
ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಪಾರಾಯಣಾಂತೇ ಷಡಂಗನ್ಯಾಸಂ ಕೃತ್ವಾ ಓಂ ರಾಂ ರೀಂ ಶ್ರೀಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್

ಪಾರಾಯಣವಾದಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ರಾಂ ರೀಂ ಶ್ರೀಂ ಇತಿ ದಿಗ್ವಿಮೋಕಃ ಎಂದೆನ್ನಬೇಕು.
ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

|| ಇತಿ ಶ್ರೀಅಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಚತುರ್ಥಸರ್ಗೇ ನ್ಯಾಸ ಧ್ಯಾನ ಜಪಕ್ರಮಃ ||

ಇಂತು ಅಯೋಧ್ಯಕಾಂಡದ ನಾಲ್ಕನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

|| ಶ್ರೀರಸ್ತು ||

ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಚತುರ್ಥಸ್ಸರ್ಗಃ

|| ಶ್ರೀ ಮಹಾದೇವ ಉವಾಚ ||

ತತಸ್ಸುಮಿತ್ರಾ ದೃಷ್ಟ್ವೈನಂ ರಾಮಂ ರಾಜ್ಞೀಂ ಸಸಂಭ್ರಮಾ । ಕೌಸಲ್ಯಾಂ ಬೋಧಯಾಮಾಸ ರಾಮೋಽಯಂ ಸಮುಪಸ್ಥಿತಃ ||೧||

ಶ್ರುತ್ವೈವ ರಾಮನಾಮೈಷಾ ಬಹಿರ್ದೃಷ್ಟಿಪ್ರವಾಹಿತಾ । ರಾಮಂ ದೃಷ್ಟ್ವಾ ವಿಶಾಲಾಕ್ಷಮಾಲಿಂಗ್ಯಾಂಕೇ ನ್ಯವೇಶಯತ್ || ೨ ||

ಅಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ ನಾಲ್ಕನೆಯ ಸರ್ಗವು.

೧. ಶ್ರೀ ಮಹಾದೇವನು ಹೇಳಿದನು-ಶ್ರೀರಾಮನು ಬಂದು ಎದುರಿಗೆ ನಿಂತಿದ್ದರೂ ಕೂಡ ಕೌಸಲ್ಯೆಗೆ ತಿಳಿಯದಿದ್ದುದನ್ನು ನೋಡಿ ಸುಮಿತ್ರೆಯು ಬಹು ಸಡಗರದಿಂದ ಅಕ್ಕಾ! ರಾಮನು ಬಂದು ನಿಂತಿರುವನು ಎಂದು ಕೂಗಿ ಹೇಳಿ ಎಚ್ಚರಿಸಿದಳು.

೨. ಈ ಕೌಸಲ್ಯೆಯು ಆ ರಾಮನೆಂಬ ಹೆಸರನ್ನು ಕೇಳಿದ ಕೂಡಲೇ ಬಹಿರ್ಮುಖಳಾದಳು. ರಾಮನನ್ನು ನೋಡಿ ಆಲಿಂಗಿಸಿಕೊಂಡು ತೊಡೆಯಮೇಲೆ ಕೂಡಿಸಿಕೊಂಡು ಮೈ ಕೈಗಳನ್ನು ತಡವರಿಸಿ ಸವರಿದಳು.

ಮೂರ್ಧ್ನ್ಯವಘ್ರಾಯ ಪಸ್ಪರ್ಶ ಗಾತ್ರಂ ನೀಲೋತ್ಪಲಚ್ಛವಿ । ಭುಂಕ್ಷ್ವ ಪುತ್ರೇತಿ ಚ ಪ್ರಾಹ ಮೃಷ್ಟಮನ್ನಂ ಕ್ಷುಧಾರ್ದಿತಃ ॥ ೩ ॥

ರಾಮಃ ಪ್ರಾಹ ನ ಮೇ ಮಾತರ್ಭೋಜನಾವಸರಃ ಕೃತಃ । ದಂಡಕಾಗಮನೇ ಶೀಘ್ರಂ ಮಮ ಕಾಲೋದ್ಯ ನಿಶ್ಚಿತಃ ॥ ೪ ॥

ಕೈಕೇಯೀವರದಾನೇನ ಸತ್ಯಸಂಧಃ ಪಿತಾ ಮಮ । ಭರತಾಯ ದದೌ ರಾಜ್ಯಂ ಮಮಾಪ್ಯಾರಣ್ಯಮುತ್ತಮಂ ॥ ೫ ॥

ಚತುರ್ದಶಸಮಾಸ್ತತ್ರ ಹ್ಯುಷಿತ್ವಾ ಮುನಿವೇಷಧೃಕ್ । ಆಗಮಿಷ್ಯೇ ಪುನಶ್ಶೀಘ್ರಂ ನ ಚಿಂತಾಂ ಕರ್ತುಮರ್ಹಸಿ ॥ ೬ ॥

---

೩. ಪ್ರೀತಿಯಿಂದ ಆ ರಾಮನ ತಲೆಯನ್ನು ಮೂಸಿನೋಡಿ ಕೈಯಿಂದ ನೀಲಮೇಘದಂತೆ ಕಾಂತಿಯುಳ್ಳ ಮೈಯ್ಯನ್ನು ಸವರುತ್ತಾ ಎಲೈ ರಾಮನೆ! ಹಸಿವುಗೊಂಡಿದ್ದೀಯೆ. ಊಟಮಾಡಪ್ಪ! ಮೃಷ್ಟಾನ್ನವಿದೆ ಎಂದಳು.

೪. ಆಗ ಶ್ರೀರಾಮನು ಅಮ್ಮ! ನಾನು ಹಸಿವಿನಿಂದ ಊಟಮಾಡಲು ಇಲ್ಲಿಗೆ ಅವಸರದಿಂದ ಬರಲಿಲ್ಲ. ದಂಡಕಾರಣ್ಯಕ್ಕೆ ಹೋಗಲು ಕಾಲವು ನಿಯಮಿತವಾಗಿದೆ. ಅಲ್ಲಿಗೆ ಬೇಗನೆ ಹೋಗಬೇಕು

೫. ನನ್ನ ತಂದೆಯು ಕೈಕೇಯಿಗೆ ವರವನ್ನು ಕೊಟ್ಟಿರುವನು. ಅದನ್ನು ನಾನು ನೆರವೇರಿಸುವೆನು. ಆದರಿಂದ ಆ ತಂದೆಯು ಸತ್ಯವನ್ನು ಉಳಿಸಿಕೊಳ್ಳಲಿ. ರಾಜ್ಯವನ್ನು ಭರತನಿಗೆ ಕೊಟ್ಟಿರುವನು. ನನಗೆ ಉತ್ತಮವಾದ ದಂಡಕವೆಂಬ ಅರಣ್ಯರಾಜ್ಯವನ್ನು ಕೊಟ್ಟಿರುವನು.

೬. ನಾನು ಆ ಹದಿನಾಲ್ಕು ವರ್ಷಗಳಕಾಲ ಮುನಿಗಳ ವೇಷದಿಂದ ಕಾಡಿನಲ್ಲಿದ್ದು ಬೇಗನೆ ಬರುತ್ತೇನೆ. ನೀನು ದುಃಖಪಡಬೇಡ.

ತುಚ್ಛ್ರುತ್ವಾ ಸಹಸೋದ್ವಿಗ್ನಾ ಮೂರ್ಛಿತಾ ಪುನರುತ್ಥಿತಾ । ಅಹ ರಾಮಂ ಸುದುಃಖಾರ್ತಾ ದುಃಖಸಾಗರಸಂಪ್ಲುತಾ ॥ ೭ ॥

ಯದಿ ರಾಮ ವನಂ ಸತ್ಯಂ ಯಾಸಿ ಚೇನ್ನಯ ಮಾಮಪಿ । ತ್ವದ್ವಿಹೀನಾ ಕ್ಷಣಾರ್ಧಂ ನಾ ಜೀವಿತಂ ಧಾರಯೇ ಕಥಂ ॥ ೮ ॥

ಯಥಾ ಗೌರ್ಬಾಲಕಂ ವತ್ಸಂ ತ್ಯಕ್ತ್ವಾ ತಿಷ್ಠೇನ್ನ ಕುತ್ರಚಿತ್ । ತಥೈವ ತ್ವಾಂ ನ ಶಕ್ನೋಮಿ ತ್ಯಕ್ತುಂ ಪ್ರಾಣಾತ್ಪ್ರಿಯಂ ಸುತಂ ॥

ಭರತಾಯ ಪ್ರಸನ್ನಶ್ಚೇದ್ರಾಜ್ಯಂ ರಾಜಾ ಪ್ರಯಚ್ಛತು । ಕಿಮರ್ಥಂ ವನವಾಸಾಯ ತ್ವಾಮಾಜ್ಞಾಪತಿ ಪ್ರಿಯಂ ॥ ೧೦ ॥

---

೭. ರಾಮನ ಈ ಮಾತನ್ನು ಕೇಳಿದೊಡನೆಯೇ ಕೌಸಲ್ಯೆಯು ದುಃಖದಿಂದ ಮೂರ್ಛೆಹೋಗಿ ಬಿದ್ದಳು. ಕೊಂಚ ಹೊತ್ತಿನಮೇಲೆ ಮೂರ್ಛೆಯು ತಿಳಿದು ಎಚ್ಚತ್ತಳು. ಆಗ ದುಃಖಸಾಗರದಲ್ಲಿಯೇ ಮುಳುಗಿರುವ ಈಕೆಯು ಅಳುತ್ತಾ ರಾಮನನ್ನು ಕುರಿತು ಇಂತೆಂದಳು.

೮. ಎಲೈ ರಾಮನೆ! ನೀನು ನಿಶ್ಚಯವಾಗಿಯೂ ಕಾಡಿಗೆ ಹೋಗುವುದಾದರೆ ಅಲ್ಲಿಗೇ ನನ್ನನ್ನೂ ಕರೆದುಕೊಂಡು ಹೋಗು. ನೀನಿಲ್ಲದಿದ್ದರೆ ಜೀವವನ್ನು ಒಂದು ಕ್ಷಣಕಾಲವಾದರೂ ಹೇಗೆ ಧರಿಸಿರಲಿ?

೯. ಹಸುವು ಎಳೆಗರುವನ್ನು ಬಿಟ್ಟು ಹೇಗೆ ಒಂದು ಕ್ಷಣವೂ ಹೊರಗೆ ಇರಲಾರದೋ ಅಂತೆಯೇ ಪ್ರಾಣಗಳಿಗಿಂತಲೂ ಪ್ರೀತಿಪಾತ್ರನಾದ ನಿನ್ನನ್ನು ಬಿಟ್ಟು ನನಗೆ ಇರುವುದಕ್ಕೆ ಆಗುವುದೇ ಇಲ್ಲ.

೧೦. ರಾಜನಿಗೆ ಭರತನ ವಿಷಯದಲ್ಲಿ ಪ್ರೀತಿಯಿದ್ದರೆ ರಾಜ್ಯವನ್ನು ಅವನಿಗೆ ಕೊಟ್ಟುಕೊಳ್ಳಲಿ. ಆದರೆ ಅವನಂತೆಯೇ ನೀನೂ ಪ್ರೀತಿಪಾತ್ರನಾಗಿದ್ದೀಯೆ. ನಿನ್ನನ್ನೇಕೆ ಕಾಡಿಗೆ ಕಳುಹಿಸಬೇಕು?

ಕೈಕೇಯ್ಯಾ ವರದೋ ರಾಜಾ ಸರಸ್ವಂ ವಾ ಪ್ರಯಚ್ಛತು । ತ್ವಯಾ ಕಿಮಪರಾಂದ್ಧ ಹಿ ಕೈಕೇಯ್ಯಾ ವಾ ನೃಪಸ್ಯ ವಾ ॥ ೧೧ ॥
ಪಿತಾ ಗುರುರ್ಯಥಾ ರಾಮ ತವಾಹಮಧಿಕಾ ತತಃ । ಪಿತ್ರಾಜ್ಞಪ್ತೋ ವನಂ ಗಂತುಂ ವಾರಯೇಯಮಹಂ ಸುತಂ ॥ ೧೨ ॥
ಯದಿ ಗಚ್ಛಸಿ ಮದ್ವಾಕ್ಯಮುಲ್ಲಂಘ್ಯ ನೃಪವಾಕ್ಯತಃ । ತದಾ ಪ್ರಾಣಾನ್ಪರಿತ್ಯಜ್ಯ ಗಚ್ಛಾಮಿ ಯಮಸಾದನಂ ॥ ೧೩ ॥
ಲಕ್ಷ್ಮಣೋಽಪಿ ತತಶ್ಶ್ರುತ್ವಾ ಕೌಸಲ್ಯಾವಚನಂ ರುಷಾ । ಉವಾಚ ರಾಘವಂ ವೀಕ್ಷ್ಯ ದಹನ್ನಿವ ಜಗತ್ತ್ರಯಂ ॥ ೧೪ ॥

---

೧೧ ರಾಜನು ಕೈಕೇಯಿಗೆ ಪ್ರಸನ್ನನಾಗಿ ವರವನ್ನು ಕೊಡುವುದಾದರೆ ಸಂತೋಷದಿಂದ ಎಲ್ಲವನ್ನೂ ಕೊಟ್ಟುಕೊಳ್ಳಲಿ. ಆದರೆ ಆ ರಾಜನಿಗಾಗಲಿ ಕೈಕೇಯಿಗಾಗಲಿ ನೀನು ಯಾವ ತಪ್ಪನ್ನು ತಾನೆ ಮಾಡಿದ್ದೀಯೆ?

೧೨. ಎಲೈ ರಾಮನೆ! ನಿನಗೆ ನಿನ್ನ ತಂದೆಯು ಅಪ್ಪಣೆಮಾಡಲು ಗುರುವೇನೋ ನಿಜ. ಆದರೂ ಅವನಿಗಿಂತಲೂ ತಾಯಿಯಾದ ನನಗೆ ನಿನ್ನ ವಿಷಯದಲ್ಲಿ ಹೆಚ್ಚು ಅಧಿಕಾರವಿದೆ. ತಂದೆಯು ನಿನಗೆ ಕಾಡಿಗೆ ಹೋಗುವಂತೆ ಅಪ್ಪಣೆಮಾಡಿದರೆ ಅವನಿಗಿಂತಲೂ ಹೆಚ್ಚಾದ ನಾನು ಬೇಡವೆಂದು ತಡೆಯುತ್ತೇನೆ.

೧೩. ನೀನು ನನ್ನ ಮಾತನ್ನು ಮೀರಿ ತಂದೆಯ ಮಾತನ್ನೇ ಮುಖ್ಯವಾಗಿಟ್ಟುಕೊಂಡು ಕಾಡಿಗೆ ಹೋದರೆ ಆಗ ನಾನು ಈ ಪ್ರಾಣವನ್ನು ಕಳೆದುಕೊಂಡು ಯಮನಮನೆಗೆ ಹೋಗುತ್ತೇನೆ.

೧೪. ರಾಮನಿಗೆ ಬಂದಿರುವ ಕಷ್ಟವನ್ನೂ ಕೌಸಲ್ಯೆಯು ದುಃಖದಿಂದ ಹೇಳುತ್ತಿರುವ ಮಾತನ್ನೂ ಲಕ್ಷ್ಮಣನು ಕೇಳಿ ಮೂರುಲೋಕಗಳನ್ನೂ ಸುಡುವವನಂತೆ ಕೋಪವನ್ನು ತಾಳಿ ರಾಮನನ್ನು ಕುರಿತು ಇಂತೆಂದನು.

ಉನ್ಮತ್ತಂ ಭ್ರಾಂತಮನಸಂ ಕೈಕೇಯಿಾವಶವರ್ತಿನಂ । ಬಧ್ವಾ ನಿಹನ್ಮಿ ಭರತಂ ತದ್ಬಂಧೂನ್ಮಾತುಲಾನಪಿ ॥ ೧೫ ॥

ಅದ್ಯ ಪಶ್ಯಂತು ಮೇ ಶೌರ್ಯಂ ಲೋಕಾನ್ಪ್ರದಹತಃ ಪುರಾ । ರಾಮ ತ್ವಧಭಿಷೇಕಾರ್ಥಂ ಕುರು ಯತ್ನಮರಿಂದಮ ॥ ೧೬ ॥

ಧನುಷ್ಪಾಣಿರಹಂ ತತ್ರ ನಿಹನ್ಯಾಂ ವಿಘ್ನಕಾರಿಣಃ । ಇತಿ ಬ್ರುವಂತಂ ಸೌಮಿತ್ರಿಂ ಆಲಿಂಗ್ಯ ರಘುನಂದನಃ ॥ ೧೭ ॥

ಶೂರೋಸಿ ರಘುಶಾರ್ದೂಲ ಮಮಾತ್ಯಂತಹಿತೇ ರತಃ । ಜಾನಾಮಿ ಸತ್ವಂ ತೇ ಸತ್ಯಂ ಕಿಂ ತು ತೇ ಸಮಯೋ ನ ಹಿ ॥ ೧೮ ॥

---

೧೫. ಎಲೈ ರಾಮನೆ ಬಹುವಾದ ಅವಿವೇಕದಿಂದ ಭ್ರಮಿಸುತ್ತಿರುವ ಮನಸ್ಸುಳ್ಳ ಮತ್ತು ಕಾಮಿಯಾಗಿ ಅಧೀನನಾಗಿರುವ ಆ ದಶರಥನನ್ನು ಕಟ್ಟಿಹಾಕಿ ಭರತನನ್ನೂ ಅವನ ಬಂಧುಗಳಾದ ಸೋದರಮಾವನೇ ಮುಂತಾದವರನ್ನೂ ಕ್ಷಣಕಾಲದಲ್ಲಿ ಕೊಂದುಹಾಕುತ್ತೇನೆ.

೧೬. ಲೋಕದ ಜನರೆಲ್ಲರೂಕೂಡ ತಮ್ಮಗಳ ಕಣ್ಣೆದುರಿನಲ್ಲಿಯೇ ಲೋಕಗಳನ್ನು ಭಸ್ಮಮಾಡುವ ನನ್ನ ಪರಾಕ್ರಮವನ್ನು ನೋಡಲಿ. ಶೂರನಾದ ಎಲೈ ರಾಮನೆ! ನೀನು ರಾಜ್ಯಾಭಿಷೇಕಕ್ಕೋಸ್ಕರ ಪ್ರಯತ್ನಪಡು. ಮಾಡಿಸಿಕೊ.

೧೭–೧೮. ನಾನು ಬಿಲ್ಲನ್ನು ಹಿಡಿದು ನಿಂತುಕೊಂಡು ಆ ರಾಜ್ಯಾಭಿಷೇಕಕ್ಕೆ ವಿಘ್ನವನ್ನು ಮಾಡುವವರೆಲ್ಲರನ್ನೂ ಕೊಂದುಹಾಕುತ್ತಿರುತ್ತೇನೆ. ಲಕ್ಷ್ಮಣನು ಕೋಪದಿಂದ ಹೀಗೆನ್ನುತ್ತಿರಲು ರಾಮನು ಆಲಿಂಗಿಸಿಕೊಂಡನು. ಎಲೈ ರಘುಕುಲಶ್ರೇಷ್ಠನಾದ ಲಕ್ಷ್ಮಣನೆ! ನೀನು ಬಹು ಶೂರನಾಗಿದ್ದೀಯೆ. ನನ್ನ ಮಂಗಳಕಾರ್ಯದಲ್ಲಿ ಬಹು ಆಸಕ್ತನಾಗಿದ್ದೀಯೆ. ನಿನ್ನಲ್ಲಿರುವ ಬಲವನ್ನು ನಾನು ನಿಜವಾಗಿಯೂ ಬಲ್ಲೆನು. ಆದರೆ ನೀನು ಆ ಶಕ್ತಿಯನ್ನು ತೋರಿಸಲು ಇದು ಕಾಲವಲ್ಲ!

ಯದಿದಂ ದೃಶ್ಯತೇ ಸರ್ವಂ ರಾಜ್ಯಂ ದೇಹಾದಿಕಂ ಚ ಯತ್ । ಯದಿ ಸತ್ಯಂ ಭವೇತ್ತತ್ರ ಆಯಾಸಸ್ಸಫಲಶ್ಚ ತೇ ॥ ೧೯ ॥
ಭೋಗಾ ಮೇಘವಿತಾನಸ್ಥವಿದ್ಯುಲ್ಲೇಖೇವ ಚಂಚಲಾಃ । ಆಯುರಪ್ಯಗ್ನಿಸಂತಪ್ತಲೋಹಸ್ಥಜಲಬಿಂದುವತ್ ॥ ೨೦ ॥
ಯಥಾವ್ಯಾಳಗಳಸ್ಥೋಽಪಿ ಭೇಕೋ ದಂಶಾನಪೇಕ್ಷತೇ । ತಥಾ ಕಾಲಾಹಿನಾಗ್ರಸ್ತೋ ಲೋಕೋ ಭೋಗಾನಶಾಶ್ವತಾನ್ ॥ ೨೧ ॥
ಕರೋತಿ ದುಃಖೇನ ಹಿ ಕರ್ಮತಂತ್ರಂ ಶರೀರಭೋಗಾರ್ಥಮಹರ್ನಿಶಂ ನರಃ ।
ದೇಹಸ್ತು ಭಿನ್ನಃ ಪುರುಷಾತ್ಸಮೀಕ್ಷ್ಯತೇ ಕೋ ನಾತ್ರ ಭೋಗಃ ಪುರುಷೇಣ ಭುಜ್ಯತೇ ॥ ೨೨ ॥

---

೧೯. ಎಲೈ ಲಕ್ಷ್ಮಣನೆ! ನಮಗೆ ಕಾಣುತ್ತಿರುವ ಈ ರಾಜ್ಯ, ಈ ದೇಹ, ಇವುಗಳು ಸತ್ಯವಾಗಿಯೂ ಶಾಶ್ವತವಾಗಿಯೂ ಇರುವುದಾದರೆ ಆಗ ನಿನ್ನ ಈ ಆಯಾಸಕ್ಕೆ ಫಲವುಂಟು.

೨೦. ಈ ರಾಜ್ಯಾದಿ ಭೋಗಗಳಿರುವುವಲ್ಲಾ! ಇವೆಲ್ಲವೂ ಮೇಘದೊಳಗೆ ಹುದುಗಿರುವ ಮಿಂಚಿನಂತೆ ಚಂಚಲವಾಗಿರುವುವು ಶಾಶ್ವತವಾದುವಲ್ಲ. ಆಯುಸ್ಸಾದರೋ ಬೆಂಕಿಯಿಂದ ಕೆಂಪಗೆ ಕಾದ ಕಬ್ಬಿಣದ ಮೇಲೆಹಾಕಿದ ನೀರಿನ ಬಿಂದುವಿನಂತೆ ಕ್ಷಣದಲ್ಲಿ ನಾಶವಾಗತಕ್ಕದ್ದು.

೨೧. ಸರ್ಪವು ಕಪ್ಪೆಯನ್ನು ಹಿಡಿದು ನುಂಗುತ್ತಿರುವಾಗ ಅರ್ಧಭಾಗ ಒಳಗೆ ಹೋಗಿದ್ದರೂ ಆ ಕಪ್ಪೆಯು ತನ್ನ ಬಾಯಿಯ ಬಳಿಗೆ ಬಂದ ನೊಣ ಸೊಳ್ಳೆಗಳನ್ನು ತಿನ್ನಲು ಆಸೆಪಟ್ಟು ಪ್ರಯತ್ನಪಡುತ್ತದೆ. ಅದರಂತೆಯೇ ಕಾಲವೆಂಬ ಸರ್ಪದಿಂದ ನುಂಗಲ್ಪಟ್ಟ ಈ ಜನವು ಶಾಶ್ವತವಲ್ಲದ ಭೋಗಗಳನ್ನು ಬೇಕೆಂದು ಅಪೇಕ್ಷಿಸುತ್ತಿರುತ್ತದೆ.

೨೨. ಪ್ರಪಂಚದಲ್ಲಿ ಮನುಷ್ಯನಾದವನು ಈ ಶರೀರದ ಸುಖಕ್ಕೋಸ್ಕರ ಅನೇಕವಾದ ಕೆಲಸಗಳನ್ನು ಹಗಲೂ ರಾತ್ರಿಯೂ ಎಡೆಬಿಡದೆ ಮಾಡುವನು. ಆದರೆ ಈ ದೇಹವು ಆತ್ಮರೂಪವಾದ ಪುರುಷನಿಗಿಂತಲೂ ಬೇರೆಯಾದುದೆಂದು ತಿಳಿಯಬರುತ್ತದೆ. ಆದ್ದರಿಂದ ಪುರುಷನಾದ ಆ ಆತ್ಮನು ಯಾವುದನ್ನು ತಾನೆ ಇಲ್ಲಿ ಅನುಭವಿಸುತ್ತಾನೆ? ಒಂದನ್ನೂ ಇಲ್ಲ.

ಪಿತೃಮಾತೃಸುತಭ್ರಾತೃದಾರಬಂಧ್ವಾದಿಸಂಗಮಃ । ಪ್ರಪಾಯಾಮಿವ ಜಂತೂನಾಂ ನದ್ಯಾಂ ಕಾಷ್ಠೌಘವಚ್ಚಲಃ ॥ ೨೩ ॥

ಛಾಯೇವ ಲಕ್ಷ್ಮೀಶ್ಚಪಲಾ ಪ್ರತೀತಾ ತಾರುಣ್ಯಮಂಬೂರ್ಮಿವದಧ್ರುವಂ ಚ ।
ಸ್ವಪ್ನೋಪಮಂ ಸ್ತ್ರೀಸುಖಮಾಯುರಲ್ಪಂ ತಥಾಪಿ ಜಂತೋರಭಿಮಾನ ಏಷಃ ॥ ೨೪ ॥

ಸಂಸೃತಿಸ್ಸ್ವಪ್ನಸದೃಶೀ ಸದಾ ರೋಗಾದಿಸಂಕುಲಾ । ಗಂಧರ್ವನಗರಪ್ರಖ್ಯಾ ಮೂಢಸ್ತಾಮನುವರ್ತತೇ ॥ ೨೫ ॥

---

೨೩. ಮನುಷ್ಯನಿಗೆ ತಾಯಿ, ತಂದೆ, ಹೆಂಡತಿ, ಮಗ, ಬಂಧುಗಳು ಇವರ ಸೇರುವಿಕೆಯು ಅರವಟ್ಟಿಗೆಯಲ್ಲಿ ಜನಗಳು ಕಾರ್ಯವಶದಿಂದ ಒಂದೆಡೆಯಲ್ಲಿ ಸೇರಿ ಅನಂತರ ಚದುರುವಂತೆಯೂ ನದಿಯಲ್ಲ ಕಡ್ಡಿಗಳು ಪ್ರವಾಹದ ಹೊಡೆತದಿಂದ ಒಂದೆಡೆಯಲ್ಲಿ ಸೇರಿ ಅನಂತರ ಕದಲುವಂತೆಯೂ ಚಂಚಲವಾದುದು.

೨೪. ನಾವು ಹೊಂದಿರುವ ಈ ಸಂಪತ್ತು ನೆರಳಿನಂತೆ ಸ್ಥಿರವಿಲ್ಲದಿರುವುದು ಎಂದು ಎಲ್ಲರಿಗೂ ಗೊತ್ತಿದೆ. ಈ ಯೌವ್ವನವು ನೀರಿನ ಮೇಲಿನ ಅಲೆಯಂತೆ ನಿಲ್ಲದಿರತಕ್ಕದ್ದು. ಸ್ತ್ರೀಯರಿಗೆ ಸಂಬಂಧಿಸಿದ ಕಾಮಸುಖವೆಂಬುದು ಸ್ವಪ್ನದಂತೆ ಕ್ಷಣಿಕವು. ನಮಗಿರುವ ಆಯುಸ್ಸು ಬಹು ಸ್ವಲ್ಪವಾದುದು. ಆದರೂ ಕೂಡ ಪ್ರಾಣಿಯು ಇವುಗಳನ್ನು ಶಾಶ್ವತವೆಂದು ತಿಳಿಯುತ್ತದೆ. ಇದು ಅವುಗಳಲ್ಲಿರುವ ಅಭಿಮಾನವು.

೨೫. ಈ ಸಂಸಾರವೆಂಬುದು ಸ್ವಪ್ನಕ್ಕೆ ಸಮವಾದುದು. ಅಲ್ಲದೆ ಯಾವಾಗಲೂ ರೋಗ ಮುಂತಾದುವುಗಳಿಂದ ಕೂಡಿಕೊಂಡಿದೆ. ಅಲ್ಲದೆ ಗಂಧರ್ವನಗರದಂತೆ ಕ್ಷಣಕಾಲದಲ್ಲಿ ಕಂಡು ಮಾಯವಾಗತಕ್ಕದ್ದು. ವಿವೇಕವಿಲ್ಲದ ಮೂಢನಾದವನು ಈ ಸಂಸಾರವನ್ನು ಅನುಸರಿಸಿಕೊಂಡಿರುವನು ಅಷ್ಟೆ. (ಸಾಯಂಕಾಲದ ವೇಳೆಯಲ್ಲಿ ಆಕಾಶದಲ್ಲಿ ಮೋಡಗಳ ಮೇಲೆ ಬೀಳುವ ಸೂರ್ಯನ ಕಿರಣಗಳಿಂದ ಒಂದು ವಿಧವಾದ ಪ್ರಕಾಶವು ಕಂಡುಬರುವುದು ಇದು ಕಂಡ ಕೆಲವು ನಿಮಿಷಗಳಲ್ಲಿಯೇ ನಾಶವಾಗುವುದು. ಇದನ್ನು ಗಂಧರ್ವ ನಗರವೆಂದು ಕರೆಯುತ್ತಾರೆ.)

ಆಯುಷ್ಯಂ ಕ್ಷೀಯತೇ ಯಸ್ಮಾದಾದಿತ್ಯಸ್ಯ ಗತಾಗತೈಃ । ದೃಷ್ಟ್ವಾನ್ಯೇಷಾಂ ಜರಾಮೃತ್ಯೂ ಕಥಂಚಿನ್ನೈವ ಬುಧ್ಯತೇ ॥ ೨೬ ॥

ಸ ಏವ ದಿವಸಸ್ಸೈವ ರಾತ್ರಿರಿತ್ಯೇವ ಮೂಢಧೀಃ । ಭೋಗಾನನುಭವತ್ಯೇವ ಕಾಲವೇಗಂ ನ ಪಶ್ಯತಿ ॥ ೨೭ ॥

ಪ್ರತಿಕ್ಷಣಂ ಕ್ಷರತ್ಯೇತ ದಾಯುರಾಮಘಟಾಂಬುವತ್ । ಸಪತ್ನಾ ಇವ ರೋಗೌಘಾ ಶರೀರಂ ಪ್ರಹರಂತ್ಯಹೋ ॥ ೨೮ ॥

ಜರಾ ವ್ಯಾಘ್ರೀವ ಪುರತಸ್ತರ್ಜಯಂತ್ಯವತಿಷ್ಠತೇ । ಮೃತ್ಯುಸ್ಸಹೈವ ಯಾತ್ಯೇಷ ಸಮಯಂ ಸಂಪ್ರತೀಕ್ಷತೇ ॥ ೨೯ ॥

---

೨೬. ಮನುಷ್ಯನ ಆಯುಸ್ಸು ಎಂಬುದು ಈ ಸೂರ್ಯನ ಬರುವಿಕೆ ಹೋಗುವಿಕೆಗಳಿಂದು ಹೆಸರುಳ್ಳ ಈ ದಿನಗಳಿಂದ ನಾಶವಾಗುತ್ತದೆ. ಮತ್ತೊಬ್ಬರಿಗೆ ಬಂದಿರುವ ಮುಪ್ಪು ಸಾವುಗಳನ್ನು ನೋಡಿದರೂ ಕೂಡ ಪ್ರಾಣಿಯು ವಿವೇಕಜ್ಞಾನವನ್ನು ಹೊಂದುವುದೇ ಇಲ್ಲ.

೨೭. ಸೂರ್ಯನ ಗತಿಯಿಂದ ನಡೆಯುವ ರಾತ್ರಿ ಹಗಲುಗಳು ದಿನ ದಿನಕ್ಕೆ ಭಿನ್ನವಾಗಿ ಕಳೆಯುತ್ತಿದ್ದರೂ ಅದೇರಾತ್ರಿ ಅದೇಹಗಲು ಎಂದು ತಿಳಿಯುತ್ತ ಪ್ರಾಣಿಯು ಭೋಗಗಳನ್ನು ಅನುಭವಿಸುತ್ತಾನೆ ಆದರೆ ಆ ಕಾಲವು ವೇಗದಿಂದ ಕಳೆದು ಆಯುಸ್ಸನ್ನು ಕಳೆಯುವಂತೆ ಮಾಡುತ್ತದೆ. ಎನ್ನುವುದನ್ನು ತಿಳಿಯುವುದೇ ಇಲ್ಲ.

೨೮. ಆವಿಗೆಗೆ ಹಾಕಿ ಬೇಯಿಸದ ಮಡಕೆಗೆ ನೀರನ್ನು ಹಾಕಿದರೆ ಅದು ಪ್ರತಿ ಘಳಿಗೆಯಲ್ಲಿಯೂ, ಸೋರುತ್ತಿರುವಂತೆ ಆಯುಸ್ಸು ಪ್ರತಿ ಕ್ಷಣದಲ್ಲಿಯೂ ನಶಿಸುತ್ತಿರುತ್ತದೆ. ರೋಗಗಳಾದರೋ ಶತ್ರುಗಳಂತೆ ಈ ದೇಹವನ್ನು ಯಾವಾಗಲೂ ತೊಂದರೆ ಪಡಿಸುತ್ತಿರುತ್ತವೆ. ಇದು ಖೇದರವು.

೨೯. ಮುಪ್ಪಾದರೋ ಎದುರಿಗೆ ನಿಂತಿರುವ ಹುಲಿಯಂತೆ ಹೆದರಿಸುತ್ತ ಕಾಣುತ್ತ ನಿಂತಿರುತ್ತದೆ. ಮೃತ್ಯುವು ಸಮಯವನ್ನು ಕಾಯುತ್ತ ಜೊತೆಯಲ್ಲಿಯೇ ಸುತ್ತಿಕೊಂಡು ಬರುತ್ತಿರುತ್ತದೆ.

ದೇಹೇಹಂಭಾವಮಾಪನ್ನೋ ರಾಜಾಹಂ ಲೋಕವಿಶ್ರುತಃ । ಇತ್ಯಸ್ಮಿನ್ಮನುತೇ ಜಂತುಃ ಕ್ರಿಮಿವಿಡ್ಭಸ್ಮಸಂಜ್ಞಿತೇ ॥ ೩೦ ॥

ತ್ವಗಸ್ಥಿಮಾಂಸವಿಣ್ಮೂತ್ರರೇತೋರಕ್ತಾದಿಸಂಯುತಃ । ವಿಕಾರೀ ಪರಿಣಾಮೀ ಚ ದೇಹ ಆತ್ಮಾ ಕಥಂ ವದ ॥ ೩೧ ॥

ಯಮಾಸ್ಥಾಯ ಭವಾನ್ಲೋಕಂ ದಗ್ಧುಮಿಚ್ಛತಿ ಲಕ್ಷ್ಮಣ । ದೇಹಾಭಿಮಾನಿನಸ್ಸರ್ವೇ ದೋಷಾಃ ಪ್ರಾದುರ್ಭವಂತಿ ಹಿ ॥ ೩೨ ॥

---

೩೦. ಜೀವಾತ್ಮನು ಈ ಶರೀರದಿಂದ ತೊಲಗಿದನಂತರ ಈ ಶರೀರವು ಹುಳುಬಿದ್ದು ಹುಳು ತಿನ್ನುವುದರಿಂದ ಹುಳುವೆಂದೆನ್ನುತ್ತಾರೆ. ಹೆಣವು ಮಲದಂತೆ ಅಸ್ಪೃಶ್ಯವಾದುದರಿಂದ ಮಲವೆಂದೆನ್ನಿಸಿಕೊಳ್ಳುತ್ತದೆ. ಆ ಹೆಣರೂಪವಾದ ದೇಹವು ಅಗ್ನಿಯಲ್ಲಿ ಬೆಂದುಹೋಗಿ ಬೂದಿಯಾಗುವುದರಿಂದ ಬೂದಿಯೆನಿಸಿಕೊಳ್ಳುತ್ತದೆ. ಈ ವಿಕಾರಗಳನ್ನು ಹೊಂದತಕ್ಕ ಈ ನಶ್ವರವಾದ ಶರೀರದಲ್ಲಿ ನಾನು ನನ್ನದು ಎಂಬ ಅಹಂಕಾರವನ್ನು ಹೊಂದಿ ನಾನು ರಾಜನು ನಾನು ಪ್ರಸಿದ್ಧ ಪುರುಷನು ಎಂದು ಹೇಳಿಕೊಳ್ಳುತ್ತಾರೆ.

೩೧. ಈ ದೇಹವೆಂಬುದು ಚರ್ಮ, ಮೂಳೆ, ಮಾಂಸ, ಮಲ, ಮೂತ್ರ, ರೇತಸ್ಸು, ರಕ್ತ ಇವೇ ಮುಂತಾದುವುಗಳ ಜೋಡಣೆಯಿಂದ ಉಂಟಾಗಿದೆ. ಮತ್ತು ಮೇಲೆ ಹೇಳಿದುವುಗಳ ಸಂಯೋಗದಿಂದ ದೇಹರೂಪವಾದ ಇದು ವಿಕಾರಾವಸ್ಥೆಯನ್ನು ಹೊಂದುತ್ತಿರುತ್ತದೆ. ದಿನದಿನಕ್ಕೂ ಹೆಚ್ಚುಕಡಿಮೆಯನ್ನು ಹೊಂದುತ್ತಲೇ ಇರುತ್ತದೆ. ಇಂತಹ ದೇಹವು ವಿಕಾರವನ್ನೂ ಪರಿಣಾಮವನ್ನೂ ಹೊಂದದ ಮಲಮೂತ್ರರೂಪನಲ್ಲದೆ ಶುದ್ಧನಾದ ಆತ್ಮನೆಂದು ಹೇಳಲು ಹೇಗೆ ತಾನೆ ಸಾಧ್ಯವು?

೩೨. ಎಲೈ ಲಕ್ಷ್ಮಣನೇ! ನೀನು ಇಂತಹ ಅಯೋಗ್ಯವಾದ ಶರೀರವನ್ನು ಹೊಂದಿ ಅದರಲ್ಲಿ ಅಭಿಮಾನವನ್ನು ಇಟ್ಟುಕೊಂಡು ಲೋಕಗಳನ್ನು ಸುಡಲು ಇಚ್ಛಿಸುತ್ತಿದ್ದೀಯೆ. ಈ ದೇಹದಲ್ಲಿ ಅಭಿಮಾನವನ್ನು ಹೊಂದಿದವನಿಗೆ ಎಲ್ಲಾ ದೋಷಗಳೂ ಉಂಟಾಗುತ್ತವೆ. ಅಲ್ಲದೆ ಬಂದು ಕೂಡಿಯೂಕೊಳ್ಳುತ್ತವೆ.

ದೇಹೇಹಮಿತಿ ಯಾ ಬುದ್ಧಿರವಿದ್ಯಾ ಸಾ ಪ್ರಕೀರ್ತಿತಾ । ನಾಹಂ ದೇಹಶ್ಚಿದಾತ್ಮೇತಿ ಬುದ್ಧಿರ್ವಿದ್ಯೇತಿ ಭಣ್ಯತೇ ॥ ೩೩ ॥

ಅವಿದ್ಯಾ ಸಂಸೃತೇರ್ಹೇತುರ್ವಿದ್ಯಾ ತಸ್ಯಾ ನಿವರ್ತಿಕಾ । ತಸ್ಮಾದ್ಯತ್ನಸ್ಸದಾ ಕಾರ್ಯೋ ವಿದ್ಯಾಭ್ಯಾಸೇ ಮುಮುಕ್ಷುಭಿಃ ॥ ೩೪ ॥

ಕಾಮಕ್ರೋಧಾದಯಸ್ತತ್ರ ಶತ್ರವಶ್ಶತ್ರುಸೂದನ । ತತ್ರಾಪಿ ಕ್ರೋಧ ಏವಾಲಂ ಮೋಕ್ಷವಿಘ್ನಾಯ ಸರ್ವದಾ ॥ ೩೫ ॥

---

೩೩. ಈ ಅನಿತ್ಯವಾದ ಶರೀರದಲ್ಲಿ ನಾನು ಎಂಬುದಾಗಿ ತಿಳಿದಿರುವಿಕೆಯೇ ಅವಿದ್ಯೆ (ಮಾಯೆ) ಎಂದೆನಿಸುವುದು. ಈ ದೇಹವು ಆತ್ಮವಲ್ಲ. ಆತ್ಮವು ಚಿತ್ ಸ್ವರೂಪವಾದುದು. ಎಂಬ ವಿವೇಕ ಜ್ಞಾನವೇ ವಿದ್ಯೆಯು ಎಂದೆನಿಸುತ್ತದೆ.

೩೪. ಈ ಅವಿದ್ಯೆ ಅಥವಾ ಮಾಯೆಯು ಸಂಸಾರಕ್ಕೆ ಎಂದರೆ ಜನನ ಮರಣಗಳಿಗೆ ಕಾರಣವು. ಜ್ಞಾನ ಅಥವಾ ವಿದ್ಯೆಯು ಆ ಜನನ ಮರಣರೂಪವಾದ ಸಂಸಾರವನ್ನು ನಾಶಮಾಡುವುದು. ಆದ್ದರಿಂದ ಮೋಕ್ಷವನ್ನು ಅಪೇಕ್ಷಿಸುವವರು ಜ್ಞಾನರೂಪವಾದ ವಿದ್ಯೆಯನ್ನು ತಿಳಿಯುವುದಕ್ಕೆ ಯಾವಾಗಲೂ ಪ್ರಯತ್ನಿಸಬೇಕು.

೩೫. ಎಲೈ ಶತ್ರುನಾಶಕನಾದ ಲಕ್ಷ್ಮಣನೆ! ಕಾಮ, ಕ್ರೋಧ, ಲೋಭ, ಮೋಹ, ಮದ ಮಾತ್ಸರ್ಯಗಳು ಆ ವಿದ್ಯೆಯನ್ನು ತಿಳಿಯಲೂ ಮೋಕ್ಷವನ್ನು ಸಾಧಿಸಲೂ ಕೂಡ ಶತ್ರುಗಳು. ಈ ಅರಿಷಡ್ವರ್ಗಗಳಲ್ಲಿ ಕ್ರೋಧ ಎಂಬುದು ಒಂದೇನೇ ಮೋಕ್ಷವನ್ನು ನಾಶಮಾಡಲು ಸಾಕಾದಷ್ಟು ಶಕ್ತಿಯನ್ನು ಹೊಂದಿದೆ.

ಯೇನಾವಿಷ್ಟಃ ಪುಮಾನ್ ಹಂತಿ ಪಿತೃಭ್ರಾತೃಸುಹೃತ್ಸಖೀನ್ । ಕ್ರೋಧಮೂಲೋ ಮನಸ್ತಾಪಃ ಕ್ರೋಧಸ್ಸಂಸಾರಬಂಧನಂ ॥ ೩೬ ॥

ಧರ್ಮಕ್ಷಯಕರಂ ಕ್ರೋಧಃ ತಸ್ಮಾತ್ಕ್ರೋಧಂ ಪರಿತ್ಯಜೇತ್ । ಕ್ರೋಧ ಏವ ಯಮುಸ್ಸಾಕ್ಷಾತ್ ತೃಷ್ಣಾ ವೈತರಣೀನದೀ ॥ ೩೭ ॥

ಸಂತೋಷೋ ನಂದನವನಂ ಶಾಂತಿರೇವ ಹಿ ಕಾಮಧುಕ್ । ತಸ್ಮಾಚ್ಛಾಂತಿಂ ಭಜಸ್ವಾದ್ಯ ಶತ್ರುರೇವಂ ಭವೇನ್ನ ತೇ ॥ ೩೮ ॥

ದೇಹೇಂದ್ರಿಯಮನಃಪ್ರಾಣಬುದ್ಧ್ಯಾದಿಭ್ಯೋವಿಲಕ್ಷಣಃ । ಆತ್ಮಾ ಶುದ್ಧಸ್ಸ್ವಯಂಜ್ಯೋತಿರವಿಕಾರೀ ನಿರಾಕೃತಿಃ ॥ ೩೯ ॥

---

೩೬. ಈ ಕ್ರೋಧದಿಂದ ಕೂಡಿದ ಮನುಷ್ಯನು ತಾಯಿ ತಂದೆ, ಸಹೋದರರು, ಸ್ನೇಹಿತರು, ಬಂಧುಗಳು ಯಾರನ್ನಾದರೂ ಕೊಂದು ಬಿಡುವನು. ಮನಸ್ಸಿನಲ್ಲಿ ದುಃಖವು ಉತ್ಪನ್ನವಾಗಬೇಕಾದರೆ ಕ್ರೋಧವೇ ಕಾರಣವು. ಕ್ರೋಧವೇ ಸಂಸಾರದಲ್ಲಿ ಪ್ರಾಣಿಯನ್ನು ಕಟ್ಟಿಸಿ ಮುಳುಗಿಸತಕ್ಕದ್ದು.

೩೭. ಕ್ರೋಧವು ಧರ್ಮವನ್ನು ನಾಶಮಾಡುತ್ತದೆ. ಆದ್ದರಿಂದ ಈ ಕ್ರೋಧವನ್ನು ಬಿಡು. ಕ್ರೋಧವೆಂಬುದೇನೆ ಪ್ರತ್ಯಕ್ಷವಾದ ಯಮನು. ತೃಷೆ (ಆಸೆ) ಎಂಬುದೇ ಉಗ್ರವಾದ ವೈತರಣೀ ನದಿಯು.

೩೮. ಸಂತೋಷವೆಂಬುದು ಮನಸ್ಸಿಗೆ ಆಹ್ಲಾದವನ್ನು ಕೊಡುವ ನಂದನವನವು. ಶಾಂತಿಯೆಂಬುದು ಕೇಳಿದುದನ್ನು ಕೊಡುವ ಕಾಮಧೇನುವು. ಆದ್ದರಿಂದ ಶಾಂತಿ ಗುಣವನ್ನು ಹೊಂದು. ಹಾಗೆ ಮಾಡಿದರೆ ನಿನಗೆ ಲೋಕದಲ್ಲಿ ಶತ್ರುಗಳಿರುವುದಿಲ್ಲ.

೩೯. ಆತ್ಮವೆಂಬುದು ದೇಹ ಇಂದ್ರಿಯ ಮನಸ್ಸು ಪ್ರಾಣಗಳು ಬುದ್ಧಿ ಇವೇ ಮೊದಲಾದುವುಗಳಿಗಿಂತಲೂ ಬೇರೆಯಾದುದು. ಇವುಗಳಿಗಿರುವ ಚಿಹ್ನೆಗಳೇ ಆ ಆತ್ಮನಿಗಿಲ್ಲ. ಅದು ಶುದ್ಧವಾದುದು. ಸ್ವಪ್ರಕಾಶವಾದುದು. ವಿಕಾರವನ್ನು ಹೊಂದುವುದಿಲ್ಲ. ಅದಕ್ಕೆ ಆಕಾರವೂ ಇಲ್ಲ.

ಯಾವದ್ದೇಹೇಂದ್ರಿಯಪ್ರಾಣೈರ್ಭಿನ್ನತ್ವಂ ನಾತ್ಮನೋ ವಿದುಃ । ತಾವತ್ಸಂಸಾರದುಃಖೌಘೈಃ ಪೀಡ್ಯಂತೇ ಮೃತ್ಯುಸಂಯುತಾಃ॥೪೦॥
ತಸ್ಮಾತ್ತ್ವಂ ಸರ್ವದಾ ಭಿನ್ನಮಾತ್ಮಾನಂ ಹೃದಿ ಭಾವಯ । ಬುದ್ಧ್ಯಾದಿಭ್ಯೋ ಬಹಿಸ್ಸರ್ವಮನುವರ್ತಸ್ವ ಮಾ ಖಿದಃ ॥ ೪೧ ॥
ಭುಂಜನ್ ಪ್ರಾರಬ್ಧಮಖಿಲಂ ಸುಖಂ ವಾ ದುಃಖಮೇವ ವಾ । ಪ್ರವಾಹಪತಿತಃ ಕಾರ್ಯಂ ಕುರ್ವನ್ನಪಿ ನ ಲಿಪ್ಯಸೇ ॥ ೪೨ ॥
ಬಾಹ್ಯೇ ಸರ್ವತ್ರ ಕರ್ತೃತ್ವಮಾವಹನ್ನಪಿ ರಾಘವ । ಅಂತಶ್ಶುದ್ಧಸ್ವಭಾವಸ್ತ್ವಂ ಲಿಪ್ಯಸೇ ನ ಚ ಕರ್ಮಭಿಃ ॥ ೪೩ ॥

---

೪೦. ದೇಹ ಇಂದ್ರಿಯ ಪ್ರಾಣಗಳಿಗಿಂತಲೂ ಈ ಆತನು ಬೇರೆಯವನು, ಎಂದು ಎಲ್ಲಿಯವರೆವಿಗೂ ಮನುಷ್ಯನು ತಿಳಿಯುವುದಿಲ್ಲವೋ, ಅಲ್ಲಿಯವರೆಗೂ ಜನನ ಮರಣರೂಪವಾದ ಸಂಸಾರದುಃಖದಿಂದ ತೊಂದರೆ ಪಡುತ್ತಾನೆ.

೪೧. ಎಲೈ ಲಕ್ಷ್ಮಣನೆ! ಇದೆಲ್ಲವನ್ನೂ ನಿನಗೆ ಹೇಳಿದ್ದೇನೆ. ಆದ್ದರಿಂದ ದೇಹ ಇಂದ್ರಿಯಗಳಿಗಿಂತಲೂ ಬೇರೆಯಾದ ಆತ್ಮನನ್ನು ನೀನು ಹೃದಯದಲ್ಲಿ ಯಾವಾಗಲೂ ಧ್ಯಾನಿಸು. ಅಂತರಂಗದಲ್ಲಿ ಆ ಆತ್ಮನನ್ನು ಯೋಚನೆಮಾಡುವುದಲ್ಲದೆ ಬುದ್ಧಿ ಇಂದ್ರಿಯ ಮುಂತಾದುವುಗಳಿಂದ ಹೊರಗೆ ಕಾಣುವುದೆಲ್ಲವನ್ನೂ ಅವವಕ್ಕೆ ತಕ್ಕಂತೆ ಅನುಸರಿಸಿಕೊಂಡಿರು. ಖೇದಗೊಳ್ಳಬೇಡ.

೪೨. ಹಿಂದಿನ ಜನ್ಮದಲ್ಲಿ ಮಾಡಿರುವ ಪಾಪ ಪುಣ್ಯಗಳಿಂದ ಬಂದಿರುವ ಸುಖ ದುಃಖಗಳನ್ನು ಅನುಭವಿಸುತ್ತಾ ಸಂಸಾರವೆಂಬ ಪ್ರವಾಹದಲ್ಲಿ ಬಿದ್ದವನಾಗಿ ನೀನು ಅವುಗಳಿಗೆ ಅಧೀನನಾಗಿ ಅನುಭವಿಸುತ್ತಿದ್ದರೂ ಅವುಗಳು ನಿನ್ನನ್ನು ಬಾಧಿಸುವುದಿಲ್ಲ.

೪೩. ಹೊರಗಡೆ ಪ್ರಾಪಂಚಿಕ ಕೆಲಸಗಳನ್ನು ಮಾಡುತ್ತ ನೀನು ಕರ್ತೃವಾಗಿದ್ದರೂ ಅಂತಃಕರಣದಲ್ಲಿ ಶುದ್ಧನಾಗಿದ್ದರೆ ಆ ಕರ್ಮಗಳಿಂದ ನಿನಗೆ ಯಾವರೀತಿಯಾದ ಲೋಪವೂ ಉಂಟಾಗುವುದಿಲ್ಲ.

ಏತನ್ಮಯೋದಿತಂ ಕೃತ್ಸ್ನಂ ಹೃದಿ ಭಾವಯ ಸರ್ವದಾ । ಸಂಸಾರದುಃಖೈರಖಿಲೈರ್ಬಾಧ್ಯಸೇ ನ ಕದಾಚನ ॥ ೪೪ ॥

ತ್ವಮಪ್ಯಂಬ ಮಯಾ ದಿಷ್ಟಂ ಹೃದಿ ಭಾವಯ ಸರ್ವದಾ । ಸಮಾಗಮಂ ಪ್ರತೀಕ್ಷಸ್ವ ನ ದುಃಖೈಃ ಪೀಡ್ಯಸೇ ಚಿರಂ ॥ ೪೫ ॥

ನ ಸದೈಕತ್ರ ಸಂವಾಸಃ ಕರ್ಮಮಾರ್ಗಾನುವರ್ತಿನಾಂ । ಯಥಾ ಪ್ರವಾಹಪತಿತಪ್ಲವಾನಾಂ ಸರಿತಾಂ ತಥಾ ॥ ೪೬ ॥

ಚತುರ್ದಶಸಮಾ ಸಂಖ್ಯಾ ಕ್ಷಣಾರ್ಧಮಿವ ಜಾಯತೇ । ಅನುಮನ್ಯಸ್ವ ಮಾಮಂಬ ದುಃಖಂ ಸಂತ್ಯಜ್ಯ ದೂರತಃ ॥ ೪೭ ॥

---

೪೪. ಎಲೈ ಲಕ್ಷ್ಮಣನೇ! ನಾನು ಹೇಳಿದುದೆಲ್ಲವನ್ನೂ ನೀನು ಮನಸ್ಸಿನಲ್ಲಿ ಚೆನ್ನಾಗಿ ಯಾವಾಗಲೂ ಯೋಚನೆಮಾಡುತ್ತಿರು. ಹಾಗಾದರೆ ಈ ಸಂಸಾರದಿಂದ ಹುಟ್ಟತಕ್ಕ ಯಾವ ಸುಖ ದುಃಖಗಳೂ ನಿನ್ನನ್ನು ಬಾಧಿಸುವುದಿಲ್ಲ.

೪೫. ಅಮ್ಮ! ನೀನೂಕೂಡ ನಾನು ಹೇಳಿದುದನ್ನು ಮನಸ್ಸಿನಲ್ಲಿ ಯಾವಾಗಲೂ ಇಟ್ಟುಕೊಂಡು ಮನನ ಮಾಡುತ್ತಿರು. ನಾನು ಬರುವಿಕೆಯನ್ನು ಎದುರು ನೋಡುತ್ತಿರು. ಹೀಗೆ ಮಾಡಿಕೊಂಡಿದ್ದರೆ ನೀನು ದುಃಖದಿಂದ ಸ್ವಲ್ಪವೂ ತೊಂದರೆಗೊಳ್ಳುವುದಿಲ್ಲ.

೪೬. ನದಿಯ ಪ್ರವಾಹದ ಸೆಳತಕ್ಕೆ ಬಿದ್ದಿರುವ ದೋಣಿಯಂತೆ ಕರ್ಮಮಾರ್ಗವನ್ನು ಅನುಸರಿಸುತ್ತಿರುವವರು ಒಂದೇ ಜಾಗದಲ್ಲಿ ಒಟ್ಟಿಗೆ ಯಾವಾಗಲೂ ಇರಲು ಆಗುವುದೇ ಇಲ್ಲ.

೪೭. ಹದಿನಾಲ್ಕುವರ್ಷಗಳೆಂಬುದು ಒಂದು ಅರ್ಧಗಳಿಗೆಯಂತೆ ಕಳೆದುಹೋಗುತ್ತದೆ. ಅಮ್ಮ! ನನಗೆ ಒಪ್ಪಿಗೆಯನ್ನುಕೊಡು. ಆ ದುಃಖವೆಂಬುದನ್ನು ದೂರದಲ್ಲಿ ಬಿಟ್ಟು ಬಿಡು.

ಏವಂ ಚೇತ್ಸುಖಸಂವಾಸೋ ಭವಿಷ್ಯತಿ ವನೇ ಮಮ । ಇತ್ಯುಕ್ತ್ವಾ ದಂಡವನ್ಮಾತುಃ ಪಾದಯೋರಪತಚ್ಚಿರಂ ॥ ೪೮ ॥
ಉತ್ಥಾಪ್ಯಾಂಕೇ ಸಮಾವೇಶ್ಯ ಆಶೀರ್ಭಿರಭಿನಂದಯತ್ । ಸರ್ವೇ ದೇವಾಸ್ಸಗಂಧರ್ವಾ ಬ್ರಹ್ಮವಿಷ್ಣುಶಿವಾದಯಃ ॥ ೪೯ ॥
ರಕ್ಷಂತು ತ್ವಾಂ ಸದಾ ಯಾಂತಂ ತಿಷ್ಠಂತಂ ನಿದ್ರಯಾ ಯುತಂ । ಇತಿ ಪ್ರಸ್ಥಾಪಯಾಮಾಸ ಸಮಾಲಿಂಗ್ಯ ಪುನಃ ಪುನಃ ॥ ೫೦ ॥
ಲಕ್ಷ್ಮಣೋಽಪಿ ತದಾ ರಾಮಂ ನತ್ವಾ ಹರ್ಷಾಶ್ರುಗದ್ಗದಃ । ಆಹ ರಾಮ ಮನಾಂತಃಸ್ಥಃ ಸಂಶಯೋಽಯಂ ತ್ವಯಾ ಹೃತಃ ॥ ೫೧ ॥
ಯಾಸ್ಯಾಮಿ ಪೃಷ್ಠತೋ ರಾಮ ಸೇವಾಂ ಕರ್ತುಂ ತದಾದಿಶ । ಅನುಗೃಹ್ಣೀಷ್ವ ಮಾಂ ರಾಮ ನೋ ಚೇತ್ಪ್ರಾಣಾಂಸ್ತ್ಯಜಾಮ್ಯಹಂ

---

೪೮. ನೀನು ನಾನು ಹೇಳಿದಂತೆ ಮಾಡಿದರೆ ಕಾಡಿನಲ್ಲಿ ನಾನೂ ಸುಖವಾಗಿರಬಹುದು. ಹೀಗೆಂದು ಹೇಳುತ್ತಾ ರಾಮನು ಆಕೆಯ ಪಾದಗಳಮೇಲೆ ಬಹುಹೊತ್ತಿನವರೆಗೂ ನಮಸ್ಕಾರಮಾಡಿ ಅಂತೆಯೇ ಮಲಗಿದ್ದನು.

೪೯–೫೦. ಅನಂತರ ಆಕೆಯು ಅವನನ್ನು ಮೇಲಕ್ಕೆಬ್ಬಿಸಿ ತೊಡೆಯಮೇಲೆ ಕೂರಿಸಿಕೊಂಡು ಆಶೀರ್ವಾದಗಳನ್ನು ಮಾಡಿದಳು. ಎಲೈ ರಾಮನೆ! ಬ್ರಹ್ಮ, ವಿಷ್ಣು, ಶಿವನೇ ಮುಂತಾದ ಎಲ್ಲಾ ದೇವತೆಗಳಿಗೂ, ಗಂಧರ್ವರೂ, ನೀನು ಮಲಗಿರುವಾಗಲೂ ಎಚ್ಚತ್ತು ಇರುವಾಗಲೂ ಓಡಾಡುವಾಗಲೂ, ಎಲ್ಲಾ ಕಾಲಗಳಲ್ಲಿಯೂ ಕಾಪಾಡಲಿ. ಹೀಗೆಂದು ಹೇಳಿ ಮತ್ತೆ ಮತ್ತೆ ಆಲಿಂಗಿಸಿಕೊಂಡು ಕಳುಹಿಸಿಕೊಟ್ಟಳು.

೫೧–೫೨. ಆಗ ಲಕ್ಷ್ಮಣನು ರಾಮನಿಗೆ ನಮಸ್ಕರಿಸಿ ಹರ್ಷದಿಂದ ಕಣ್ಣೀರನ್ನು ತುಂಬಿಕೊಂಡು ಮಾತನಾಡಲು ತಡೆವರಿಸುತ್ತಾ ಎಲೈ ರಾಮನೆ! ನೀನು ನನ್ನಲ್ಲಿ ಉಂಟಾಗಿದ್ದ ಸಂಶಯವನ್ನು ನಾಶಮಾಡಿದೆ. ನಿನ್ನ ಹಿಂದೆಯೇ ನಿನ್ನ ಸೇವೆಯನ್ನು ಮಾಡಲು ಬರುತ್ತೇನೆ. ಅದಕ್ಕೆ ಅನುಮತಿಯನ್ನು ಕೊಡು. ಇಲ್ಲದಿದ್ದರೆ ನಾನು ಪ್ರಾಣಗಳನ್ನು ಬಿಟ್ಟುಬಿಡುತ್ತೇನೆ ಎಂದನು.

ತಥೇತಿ ರಾಘವೋಪ್ಯಾಹ ಲಕ್ಷ್ಮಣಂ ಯಾಹಿ ಮಾ ಚಿರಂ । ಪ್ರತಸ್ಥೇ ತಾಂ ಸಮಾಧಾತುಂ ಗತಸ್ಸೀತಾಪತಿರ್ವಿಭುಃ ॥ ೫೩ ॥

ಆಗತಂ ಪತಿಮಾಲೋಕ್ಯ ಸೀತಾ ಸುಸ್ಮಿತಭಾಷಿಣೀ । ಸ್ವರ್ಣಪಾತ್ರಸ್ಥಸಲಿಲೈಃ ಪಾದೌ ಪ್ರಕ್ಷಾಳ್ಯ ಭಕ್ತಿತಃ ॥ ೫೪ ॥

ಪಪ್ರಚ್ಛ ಪತಿಮಾಲೋಕ್ಯ ದೇವ ಕಿಂ ಸೇನಯಾ ವಿನಾ । ಆಗತೋಽಸಿ ಗತಃ ಕುತ್ರ ಶ್ವೇತಚ್ಛತ್ರಂ ಚ ತೇ ಕುತಃ ॥ ೫೫ ॥

ವಾದಿತ್ರಾಣಿ ನ ವಾದ್ಯಂತೇ ಕಿರೀಟಾದಿವಿವರ್ಜಿತಃ । ಸಾಮಂತರಾಜಸಹಿತಃ ಸಂಭ್ರಮಾನ್ನಾಗತೋಽಸಿ ಕಿಂ ॥ ೫೬ ॥

---

೫೩. ಅದನ್ನು ಕೇಳಿದ ರಾಮನು ಲಕ್ಷ್ಮಣನನ್ನು ಕುರಿತು ಹಾಗೆಯೇ ಆಗಲಿ, ಸಾವಕಾಶಮಾಡಬೇಡ. ಹೊರಡು ಎಂದನು. ಮತ್ತು ತನ್ನ ಹೆಂಡತಿಯಾದ ಸೀತೆಗೆ ಸಮಾಧಾನವನ್ನು ಹೇಳಲು ಅಲ್ಲಿಗೆ ಹೊರಟನು.

೫೪. ಗಂಡನು ಬಂದುದನ್ನು ನೋಡಿ ಸೀತೆಯು ನಗುತ್ತಾ ಚಿನ್ನದ ಪಾತ್ರೆಯಲ್ಲಿ ನೀರನ್ನು ತಂದು ಕಾಲನ್ನು ಭಕ್ತಿಯಿಂದ ತೊಳೆದು ಇಂತೆಂದಳು.

೫೫–೫೬. ಎಲೈ ಸ್ವಾಮಿಯೇ! ನಿನ್ನ ಅಂಗರಕ್ಷಕರಾದ ಸೇವೆಯವರೆಲ್ಲಿ? ಅವರನ್ನು ಬಿಟ್ಟು ಇದೆಲ್ಲಿಗೆ ಹೊರಟೆ? ನಿನ್ನ ಶ್ವೇತಚ್ಛತ್ರವೆಲ್ಲಿ ಹೋಯಿತು? ನಿನ್ನೆದುರಿಗೆ ವಾದ್ಯಗಳು ಧ್ವನಿಮಾಡತ್ತಿಲ್ಲವಲ್ಲ? ಕಿರೀಟ ಮುಂತಾದುವನ್ನು ಹಾಕಿಕೊಂಡಿಲ್ಲವಲ್ಲ? ಜೊತೆಯಲ್ಲಿ ಸಾಮಂತ ರಾಜರು ಇಲ್ಲವಲ್ಲ? ಇದೇನು ಅವಸರದಿಂದ ಇದೊಂದೂ ಇಲ್ಲದೆ ಬಂದೆಯಾ ?

ಇತಿ ಸ್ಮ ಸೀತಯಾ ಪೃಷ್ಟೋ ರಾಮಸ್ಸಸ್ಮಿತಮಬ್ರವೀತ್ । ರಾಜ್ಞಾ ಮೇ ದಂಡಕಾರಣ್ಯೇ ರಾಜ್ಯಂ ದತ್ತಂ ಶುಭೇಽಖಿಲಂ ॥ ೫೭ ॥
ಅತಸ್ತತ್ಪಾಲನಾರ್ಥಾಯ ಶೀಘ್ರಂ ಯಾಸ್ಯಾಮಿ ಭಾಮಿನಿ । ಅದ್ಯೈವ ಯಾಸ್ಯಾಮಿ ವನಂ ತ್ವಂ ತು ಶ್ವಶ್ರೂಸಮೀಪಗಾ ॥ ೫೮ ॥
ಶುಶ್ರೂಷಾಂ ಕುರು ಮೇ ಮಾತುರ್ನ ಮಿಥ್ಯಾವಾದಿನೋ ವಯಂ । ಇತಿ ಬ್ರುವಂತಂ ಶ್ರೀರಾಮಂ ಸೀತಾ ಭೀತಾಬ್ರವೀದ್ವಚಃ ॥
ಕಿಮರ್ಥಂ ವನರಾಜ್ಯಂ ತೇ ಪಿತ್ರಾ ದತ್ತಂ ಮಹಾತ್ಮನಾ । ತಮಾಹ ರಾಮಃ ಕೈಕೆಯ್ಯೈ ರಾಜಾ ಪ್ರೀತೋ ವರಂ ದದೌ ॥ ೬೦ ॥

೫೭–೫೮. ರಾಮನನ್ನು ಕುರಿತು ಸೀತೆಯು ಹೀಗೆಂದು ಕೇಳಲು ಆಗ ರಾಮನು ನಗುತ್ತ ಇಂತೆಂದನು. ಎಲೈ ಮಂಗಳಾಂಗಿಯೆ ! ರಾಜನು ನನಗೆ ದಂಡಕಾರಣ್ಯದಲ್ಲಿ ರಾಜ್ಯವನ್ನು ಕೊಟ್ಟಿರುವನು. ಆದ್ದರಿಂದ ಅದನ್ನು ಕಾಪಾಡಲು ಬೇಗ ಹೋಗುತ್ತಿದ್ದೇನೆ. ಆದ್ದರಿಂದ ನಾನು ಇಂದೇ ಕಾಡಿಗೆ ಹೋಗುತ್ತೇನೆ. ನೀನು ನಿನ್ನ ಅತ್ತೆಯ ಸಮೀಪದಲ್ಲಿರು.

೫೯. ಅಲ್ಲಿ ನನ್ನ ತಾಯಿಯಾದ ನಿನ್ನ ಅತ್ತೆಯನ್ನು ಸೇವಿಸಿಕೊಂಡಿರು. ನಾನು ಸುಳ್ಳು ಹೇಳುವುದಿಲ್ಲ. ಕಾಡಿಗೆ ಹೋಗುತ್ತೇನೆ. ರಾಮನು ಹೀಗೆ ಹೇಳಲು ಸೀತೆಯು ಹೆದರಿದವಳಾಗಿ ಅವನನ್ನು ಕುರಿತು ಇಂತೆಂದಳು.

೬೦. ಎಲೈ ರಾಮನೆ! ಮಹಾತ್ಮನಾದ ನಿನ್ನ ತಂದೆಯು ವನರಾಜ್ಯವನ್ನು ನಿನಗೇಕೆಕೊಟ್ಟನು? ಎಂದೆನ್ನಲು ಅದಕ್ಕೆ ರಾಮನು ಅವಳಿಗೆ ಇಂತೆಂದು ಹೇಳಿದನು.

ಭರತಾಯ ದದೌ ರಾಜ್ಯಂ ವನವಾಸಂ ಮಮಾನಘೇ । ಚತುರ್ದಶಸಮಾಸ್ತತ್ರ ವಾಸೋ ಮೇ ಕಿಲ ಯಾಚಿತಃ ॥ ೬೧ ॥

ತಯಾ ದೇವ್ಯಾ ದದೌ ರಾಜಾ ಸತ್ಯವಾದೀ ದಯಾಪರಃ । ಅತಶ್ಶೀಘ್ರಂ ಗಮಿಷ್ಯಾಮಿ ಮಾ ವಿಘ್ನಂ ಕುರು ಭಾಮಿನಿ ॥ ೬೨ ॥

ಶ್ರುತ್ವಾ ತದ್ರಾಮವಚನಂ ಜಾನಕೀ ಪ್ರೀತಿಸಂಯುತಾ । ಅಹಮಗ್ರೇ ಗಮಿಷ್ಯಾಮಿ ವನಂ ಪಶ್ಚಾತ್ತ್ವಮೇಷ್ಯಸಿ ॥ ೬೩ ॥

ಇತ್ಯಾಹ ಮಾಂ ವಿನಾ ಗಂತುಂ ತವ ರಾಘವ ನೋಚಿತಂ । ತಾಮಾಹ ರಾಘವಃ ಪ್ರೀತಃ ಸ್ವಪ್ರಿಯಾಂ ಪ್ರಿಯವಾದಿನೀಂ ॥ ೬೪ ॥

---

೬೧. ರಾಜನು ಸಂತೋಷಗೊಂಡು ಕೈಕೇಯಿಗೆ ವರವನ್ನು ಕೊಟ್ಟನು. ಆ ವರಕ್ಕೋಸ್ಕರ ಆಕೆಯು ಭರತನಿಗೆ ರಾಜ್ಯವನ್ನೂ, ರಾಮನಿಗೆ ಹದಿನಾಲ್ಕುವರ್ಷಕಾಲ ವನವಾಸವನ್ನೂ ಕೇಳಿದಳು.

೬೨. ದಯಾವಂತನೂ, ಸತ್ಯವಂತನೂ, ಆದ ಆ ದಶರಥನು ಆ ವರಗಳನ್ನು ಆವಳಿಗೆ ಕೊಟ್ಟನು. ಆದ್ದರಿಂದ ನಾನು ಬೇಗನೆ ಕಾಡಿಗೆ ಹೋಗಬೇಕಾಗಿದೆ. ನೀನು ಇದಕ್ಕೆ ವಿಘ್ನವನ್ನುಂಟುಮಾಡಬೇಡ.

೬೩-೬೪. ರಾಮನ ಈ ಮಾತನ್ನು ಸೀತೆಯು ಕೇಳಿ ಸಂತೋಷದಿಂದ ಎಲೈ ರಾಮನೇ! ನಾನು ಮುಂದೆ ಮುಂದೆ ಹೋಗುತ್ತೇನೆ. ನೀನು ನನ್ನಹಿಂದೆ ಬಾ. ಎಲೈ ರಾಮನೆ! ನನ್ನನ್ನು ಬಿಟ್ಟು ನೀನು ಕಾಡಿಗೆ ಹೋಗುವುದು ಯುಕ್ತವಲ್ಲ. ಎಂದೆನ್ನಲು ರಾಮನು ಪ್ರಿಯಳೂ ಪ್ರಿಯವಾದಿನಿಯೂ ಆದ ಸೀತೆಯನ್ನು ಕುರಿತು ಇಂತೆಂದನು.

ಕಥಂ ವನಂ ತ್ವಾಂ ನೇಷ್ಯೇऽಹಂ ಬಹುವ್ಯಾಘ್ರಮೃಗಾಕುಲಂ । ರಾಕ್ಷಸಾ ಘೋರರೂಪಾಶ್ಚ ಸಂತಿ ಮಾನುಷಭೋಜನಾಃ ॥ ೬೫ ॥
ಸಿಂಹವ್ಯಾಘ್ರವರಾಹಾಶ್ಚ ಸಂಚರಂತಿ ಸಮಂತತಃ । ಕಟ್ವಮ್ಲಫಲಮೂಲಾನಿ ಭೋಜನಾರ್ಥಂ ಸುಮಧ್ಯಮೇ ॥ ೬೬ ॥
ಅಪೂಪಾನಿ ವ್ಯಂಜನಾನಿ ವಿದ್ಯಂತೇ ನ ಕದಾಚನ । ಕಾಲೇ ಕಾಲೇ ಫಲಂ ನಾಪಿ ವಿದ್ಯತೇ ಕುತ್ರ ಸುಂದರಿ ॥ ೬೭ ॥
ಮಾರ್ಗೋ ನ ದೃಶ್ಯತೇ ಕ್ವಾಪಿ ಶರ್ಕರಾಕಂಟಕಾನ್ವಿತಃ । ಗುಹಾಗಹ್ವರಸಂಬಾಧಂ ಝಿಲ್ಲೀದಂಶಾದಿಭಿರ್ಯುತಂ ॥ ೬೮ ॥
ಏವಂ ಬಹುವಿಧಂ ದೋಷಂ ವನಂ ದಂಡಕಸಂಜ್ಞಿಕಂ । ಪಾದಚಾರೇಣ ಗಂತವ್ಯಂ ಶೀತಾವಾತಪಾದಿಮತ್ ॥ ೬೯ ॥

೬೫–೬೬ ಎಲೈ ಸೀತೆಯೆ! ನಿನ್ನನ್ನು ಕಾಡಿಗೆ ಹೇಗೆತಾನೆ ನಾನು ಕರೆದುಕೊಂಡು ಹೋಗಲಿ? ಆ ಕಾಡಿನಲ್ಲಿ ಹುಲಿಯೇ ಮುಂತಾದ ಕ್ರೂರಜಂತುಗಳು ಬಹಳವಾಗಿವೆ. ಮನುಷ್ಯರನ್ನು ತಿನ್ನುವ ರಾಕ್ಷಸರು ಬಹುವಾಗಿ ಅಲ್ಲಿರುತ್ತಾರೆ. ಸಿಂಹ, ಹುಲಿ, ಹಂದಿ, ಮುಂತಾದುವು ಅಲ್ಲಿ ಎಲ್ಲೆಲ್ಲಿಯೂ ಸಂಚರಿಸುತ್ತವೆ. ಕಹಿ, ಹುಳಿಯಾದ ರುಚಿಯಾಗಿರದ ಗೆಡ್ಡೆ ಗೆಣಸುಗಳನ್ನು ತಿನ್ನಬೇಕು.

೬೭–೬೯. ಸಿಹಿಯಾದ ತಿಂಡಿಗಳಾಗಲೀ, ನೆಂಜಿಕೊಳ್ಳುವ ಉತ್ತಮಪದಾರ್ಥವಾಗಲಿ ಅಲ್ಲಿ ಸಿಕ್ಕುವಂತೆಯೇ ಇಲ್ಲ. ಅಲ್ಲಿರುವ ಗೆಡ್ಡೆ ಗೆಣಸುಗಳಾಗಲೀ, ಹಣ್ಣುಗಳಾಗಲೀ, ನಾವು ತಿನ್ನುವಂತೆ ಕಾಲಕಾಲಕ್ಕೆ ಸಿಕ್ಕುವಂತಿಲ್ಲ. ಅಲ್ಲಿ ದಾರಿಯೆಂಬುದೇ ತಿಳಿಯುವಂತಿಲ್ಲ ಕಾಣ್ಬುವುದೂ ಇಲ್ಲ. ಕಾಣುವ ಸ್ವಲ್ಪ ದಾರಿಯೂ ಕೂಡ ಕಲ್ಲುಗಳಿಂದಲೂ, ಮುಳ್ಳುಗಳಿಂದಲೂ ಕೂಡಿ ನಡೆಯಲಸಾಧ್ಯವಾಗಿರುವುವು. ಬಹುವಾಗಿ ಹೆದರಿಕೆಯನ್ನುಂಟುಮಾಡುವ ಗುಹೆಗಳೂ ಅಲ್ಲಿ ಭಯಂಕರವಾಗಿ ಆಳವಾಗಿವೆ. ದೂರದವರೆಗೂ ಹೋಗಿವೆ. ಮತ್ತು ರೆಕ್ಕೆಗಳುಳ್ಳ ಇರುವೆಗಳೂ ಅನೇಕವಾಗಿದ್ದು ಕಡಿಯುತ್ತವೆ. ಮೂಳೆಗಳು ಬಹುವಾಗಿ ಅಲ್ಲಲ್ಲಿಯೇ ಬಿದ್ದಿರುವುವು. ಈ ರೀತಿಯಾದ ಇನ್ನೂ ಅನೇಕ ತೊಂದರೆಗಳನ್ನು ಕೊಡತಕ್ಕ ಪದಾರ್ಥಗಳಿಂದ ಆ ದಂಡಕಾವನವು ಕೂಡಿಕೊಂಡು ಬಹು ಭಯಂಕರವಾಗಿದೆ. ಎಲ್ಲಾ ಜಾಗದಲ್ಲಿಯೂ ಕಾಲುನಡಗೆಯಲ್ಲಿಯೇ ಹೋಗಬೇಕು. ಗಾಳಿ, ಬಿಸಿಲು, ಛಳಿಗಳು ಬಹಳ ಹೆಚ್ಚು.

ರಾಕ್ಷಸಾದೀನ್ವನೇ ದೃಷ್ಟ್ವಾ ಜೀವಿತಂ ಹಾಸ್ಯತೇ ಚಿರಾತ್ | ಯಸ್ಮಾದ್ಭದ್ರೇ ಗೃಹೇ ತಿಷ್ಠ ಶೀಘ್ರಂ ದ್ರಕ್ಷ್ಯಸಿ ಮಾಂ ಪುನಃ ‖ ೭೦ ‖

ರಾಮಸ್ಯ ವಚನಂ ಶ್ರುತ್ವಾ ಸೀತಾ ದುಃಖಸಮನ್ವಿತಾ | ಪ್ರತ್ಯುವಾಚ ಸ್ಫುರದ್ವಕ್ತ್ರಾ ಕಿಂಚಿತ್ಕೋಪಸಮನ್ವಿತಾ ‖ ೭೧ ‖

ಕಥಂ ಮಾಮಿಚ್ಛಸಿ ತ್ಯಕ್ತುಂ ಧರ್ಮಪತ್ನೀಂ ಪತಿವ್ರತಾಂ | ತ್ವದನನ್ಯಾಮದೋಷಾಂ ಮಾಂ ಧರ್ಮಜ್ಞೋಸಿ ದಯಾಪರಃ ‖ ೭೨ ‖

---

೭೦. ಆ ಕಾಡಿನಲ್ಲಿ ರಾಕ್ಷಸರನ್ನಾಗಲೀ ಕ್ರೂರಮೃಗಗಳನ್ನಾಗಲೀ ನೀನು ನೋಡಿದರೆ ಕೂಡಲೇ ಪ್ರಾಣವನ್ನು ಬಿಟ್ಟು ಬಿಡುತ್ತೀಯೆ. ಆದ್ದರಿಂದ ಎಲೈ ಸೀತೆಯೇ! ನೀನು ಮನೆಯಲ್ಲಿಯೇ ಇರು. ನಾನು ಮತ್ತೆ ಬೇಗ ಬರುತ್ತೇನೆ.

೭೧. ರಾಮನ ಈ ಮಾತನ್ನು ಕೇಳಿ ಸೀತೆಗೆ ಬಹಳ ದುಃಖಬಂದಿತು. ಒಡನೆಯೇ ಸ್ವಲ್ಪಕೋಪವೂ ಬಂದಿತು. ಇದರಿಂದ ತುಟಿಗಳು ನಡುಗುತ್ತಿರಲು ಇಂತೆಂದು ಹೇಳಿದಳು.

೭೨ ಏನು! ನನ್ನನ್ನು ಇಲ್ಲಿ ಬಿಟ್ಟುಹೋಗಲು ಆಪೇಕ್ಷಿಸುವೆಯಾ? ನಾನು ನಿನ್ನ ಧರ್ಮಪತ್ನಿಯಲ್ಲವೆ? ಪತಿವ್ರತೆಯಲ್ಲವೆ? ನಿನ್ನನ್ನು ಹೊರತು ನನಗೆ ಬೇರೆಯವರಿಲ್ಲ? ನನ್ನಲ್ಲಿ ದೋಷವೆಂಬುದು ಸ್ವಲ್ಪವೂ ಇಲ್ಲ. ಇಂತಹ ನನ್ನನ್ನು ದಯಾವಂತನೂ ಧರ್ಮದ ಮರ್ಮವನ್ನು ಬಲ್ಲವನೂ ಆದ ನೀನು ಬಿಟ್ಟು ಹೋಗುವುದೆಂದರೇನು?

ತ್ವತ್ಸಮೀಪೇ ಸ್ಥಿತಾಂ ರಾಮ ಕೋ ವಾ ಮಾಂ ಧರ್ಷಯೇದ್ವನೇ । ಫಲಮೂಲಾದಿಕಂ ಯದ್ಯತ್ ತವ ಭುಕ್ತ್ವಾವಶೇಷಿತಂ॥ ೭೩ ॥

ತದೇವಾಮೃತತುಲ್ಯಂ ಮೇ ತೇನ ತುಷ್ಟಾ ರಮಾಮ್ಯಹಂ । ತ್ವಯಾ ಸಹ ಚರಂತ್ಯಾ ಮೇ ಕುಶಾಃ ಕಾಶಾಶ್ಚ ಕಂಟಕಾಃ ॥ ೭೪ ॥

ಪುಷ್ಪಾಸ್ತರಣತುಲ್ಯಾ ಮೇ ಭವಿಷ್ಯಂತಿ ನ ಸಂಶಯಃ । ಅಹಂ ತ್ವಾ ಕ್ಲೇಶಯೇ ನೈವ ಭವೇಯಂ ಕಾರ್ಯಸಾಧಿನೀ ॥ ೭೫ ॥

ಬಾಲ್ಯೇಽಪಿ ಕಶ್ಚಿನ್ಮಾಂ ವೀಕ್ಷ್ಯ ಜ್ಯೋತಿಶ್ಶಾಸ್ತ್ರವಿಶಾರದಃ । ಪ್ರಾಹ ತೇ ವಿಪಿನೇ ವಾಸಃ ಪತ್ಯಾ ಸಹ ಭವಿಷ್ಯತಿ ॥ ೭೬ ॥

ಸತ್ಯವಾದೀ ದ್ವಿಜೋ ಭೂಯಾದ್ಗಮಿಷ್ಯಾಮಿ ತ್ವಯಾ ಸಹ । ಅನ್ಯತ್ಕಿಂಚಿತ್ಪ್ರವಕ್ಷ್ಯಾಮಿ ಶ್ರುತ್ವಾ ಮಾಂ ನಯ ಕಾನನಂ ॥ ೭೭ ॥

೭೩–೭೫. ಎಲೈ ರಾಮನೆ! ನಿನ್ನ ಹತ್ತಿರದಲ್ಲಿ ನಾನಿದ್ದುಕೊಂಡಿದ್ದರೆ ನನ್ನನ್ನು ಆ ಕಾಡಿನಲ್ಲಿ ಮುಟ್ಟುವುದಕ್ಕೆ ಯಾರಿಗೆ ಶಕ್ತಿಯುಂಟು? ಅಲ್ಲಿ ನೀನು ತಿಂದುಮಿಕ್ಕಿರುವ ಹಣ್ಣು ಗೆಡ್ಡೆ ಗೆಣಸು ಮುತ್ತು ಅವಾವುವು ಇರುವುವೋ ಅವೇ ನನಗೆ ಅಮೃತದಂತೆ ರುಚಿಯಾಗಿರುತ್ತವೆ. ಅದರಿಂದಲೇ ತೃಪ್ತಿಗೊಂಡು ಸಂತೋಷಪಡುತ್ತೇನೆ. ನಿನ್ನಸಂಗಡ ನಾನು ಓಡಾಡಿಕೊಂಡಿದ್ದರೆ ದರ್ಭೆಯಾಗಲೀ ಹಂಚಿಯಾಗಲೀ, ಮುಳ್ಳಾಗಲೀ ಯಾವುದೇ ಇರಲಿ, ಅವೆಲ್ಲವೂ ಕೂಡ ಹೂವಿನ ಹಾಸಿಗೆಗಳಾಗುತ್ತವೆ ಇದರಲ್ಲಿ ಸಂಶಯವಿಲ್ಲ. ಎಲೈ ರಾಮನೆ! ನಾನು ನಿನಗೆ ಕಷ್ಟವನ್ನು ಕೊಡುವುದಿಲ್ಲ. ಅಲ್ಲದೆ ನಿನ್ನ ಕೆಲಸದಲ್ಲಿ ಸಹಾಯಕಳಾಗುತ್ತೇನೆ.

೭೬–೭೭. ಬಾಲ್ಯದಲ್ಲಿಯೇ ನನ್ನ ಜಾತಕವನ್ನು ನೋಡಿದ ಒಬ್ಬ ಜೋಯಿಸನು ನೀನು ಕಾಡಿನಲ್ಲಿ ಗಂಡನೊಡನೆ ಇರುತ್ತೀಯೆ ಎಂದು ಹೇಳಿರುವನು. ಆ ಜ್ಯೋತಿಶ್ಶಾಸ್ತ್ರದ ಫಲವನ್ನು ಹೇಳಿದ ಬ್ರಾಹ್ಮಣನು ನಿಜವನ್ನು ಹೇಳಿದಂತಾಗಲಿ ಅದ್ದರಿಂದ ನಿನ್ನೊಡನೆ ಕಾಡಿಗೆ ಬರುತ್ತೇನೆ. ಅಲ್ಲದೆ ಇನ್ನೂ ಒಂದು ವಿಷಯವನ್ನು ಹೇಳುತ್ತೇನೆ. ಅದನ್ನು ಕೇಳಿ ಅದರಂತೆ ನನ್ನನ್ನು ಕಾಡಿಗೆ ಕರೆದುಕೊಂಡು ಹೋಗು.

ರಾಮಾಯಣಾನಿ ಬಹುಶಃ ಶ್ರುತಾನಿ ಬಹುಭಿರ್ದ್ವಿಜೈಃ । ಸೀತಾಂ ವಿನಾ ವನಂ ರಾಮೋ ಗತಃ ಕಿಂ ಕುತ್ರ ಚಿದ್ವದ ॥ ೭೮ ॥

ಅತಸ್ತ್ವಯಾ ಗಮಿಷ್ಯಾಮಿ ಸರ್ವದಾ ತ್ವತ್ಸಹಾಯಿನೀ । ಯದಿ ಗಚ್ಛಸಿ ಮಾಂ ತ್ಯಕ್ತ್ವಾ ಪ್ರಾಣಾಂಸ್ತ್ಯಕ್ಷ್ಯಾಮಿ ತೇಗ್ರತಃ ॥ ೭೯ ॥

ಇತಿ ತಂ ನಿಶ್ಚಯಂ ಜ್ಞಾತ್ವಾ ಸೀತಾಯಾ ರಘುನಂದನಃ । ಅಬ್ರವೀದ್ದೇವಿ ಗಚ್ಛ ತ್ವಂ ವನಂ ಶೀಘ್ರಂ ಮಯಾ ಸಹ ॥ ೮೦ ॥

ಅರುಂಧತ್ಯೈ ಪ್ರಯಚ್ಛಾಶು ಹಾರಾನಾಭರಣಾನಿ ಚ ।
ಬ್ರಾಹ್ಮಣೇಭ್ಯೋ ಧನಂ ಸರ್ವಂ ದತ್ವಾ ಗಚ್ಛಾಮಹೇ ವನಂ ।
ಇತ್ಯುಕ್ತ್ವಾ ಲಕ್ಷ್ಮಣೇನಾಶು ದ್ವಿಜಾನಾಹೂಯ ಭಕ್ತಿತಃ ॥ ೮೧ ॥

---

೭೮. ಬ್ರಾಹ್ಮಣರಿಂದ ಅನೇಕ ರಾಮಾಯಣಗಳನ್ನು ಅನೇಕಬಾರಿ ಕೇಳಿರುವೆನು. ಅವುಗಳಲ್ಲಿ ಸೀತೆಯನ್ನು ಬಿಟ್ಟು ರಾಮನು ಕಾಡಿಗೆ ಹೋದನು, ಎಂಬುದು ಯಾವುದರಲ್ಲಿ. ಎಲ್ಲಿ ಇದೆ ? ಹೇಳು.

೭೯. ಆದ್ದರಿಂದ ನಾನೂ ನಿನ್ನೊಡನೆಯೇ ಬರುತ್ತೇನೆ. ನಿನಗೆ ಯಾವಾಗಲೂ ಸಹಾಯಕಳಾಗಿರುತ್ತೇನೆ. ನನ್ನನ್ನು ಬಿಟ್ಟು ನೀನು ಹೋಗುವ ಪಕ್ಷದಲ್ಲಿ ನಿನ್ನೆದುರಿಗೇ ಈ ಪ್ರಾಣಗಳ್ನು ಬಿಟ್ಟುಬಿಡುತ್ತೇನೆ.

೮೦–೮೧. ರಾಮನು ಸೀತೆಯು ಈರೀತಿಯಾಗಿ ನಿಶ್ಚಯಿಸಿಕೊಂಡಿರುವುದನ್ನು ತಿಳಿದನು. ಆಗ ಎಲೈ ಸೀತೆಯೇ ! ಹಾಗಾದರೆ ನನ್ನೊಡನೆ ಕಾಡಿಗೆ ಬೇಗ ಹೊರಡು ಎಂದನು. ನಿನ್ನ ಹಾರಗಳನ್ನೂ ಆಭರಣಗಳನ್ನೂ ಅರುಂಧತಿಗೆ ಕೊಡು. ಬ್ರಾಹ್ಮಣರಿಗೆಲ್ಲಾ ಬೇಕಾದಂತೆ ಹಣವನ್ನು ದಾನಮಾಡು. ಕಾಡಿಗೆ ಹೋಗೋಣ. ಎಂದು ರಾಮನು ಸೀತೆಗೆ ಹೇಳಿ ಲಕ್ಷ್ಮಣನಿಗೆ ಹೇಳಿ ಆ ಬ್ರಾಹ್ಮಣರನ್ನು ಕರೆಸಿದನು.

ದದೌ ಗವಾಂ ಬೃಂದಶತಂ ಧನಾನಿ ವಸ್ತ್ರಾಣಿ ದಿವ್ಯಾನಿ ವಿಭೂಷಣಾನಿ ।
ಕುಟುಂಬಿಭ್ಯಶ್ಶ್ರುತಶೀಲವದ್ಭ್ಯೋ ಮುದಾದ್ವಿಜೇಭ್ಯೋ ರಘುವಂಶಕೇತುಃ ॥ ೮೨ ॥
ಅರುಂಧತ್ಯೈ ದದೌ ಸೀತಾ ಮುಖ್ಯಾನ್ಯಾಭರಣಾನಿ ಚ । ರಾಮೋ ಮಾತುಃ ಸೇವಕೇಭ್ಯೋ ದದೌ ಧನಮನೇಕಧಾ ॥ ೮೩ ॥
ಸ್ವಕಾಂತಃಪುರವಾಸಿಭ್ಯಃ ಸೇವಕೇಭ್ಯಸ್ತಥೈವ ಚ । ಪೌರಜಾನಪದೇಭ್ಯಶ್ಚ ಬ್ರಾಹ್ಮಣೇಭ್ಯಸ್ಸಹಸ್ರಶಃ ॥ ೮೪ ॥
ಲಕ್ಷ್ಮಣೋಽಪಿ ಸುಮಿತ್ರಾಂ ತು ಕೌಸಲ್ಯಾಯೈ ಸಮರ್ಪಯತ್ । ಧನುಷ್ಪಾಣಿಸ್ಸಮಾಗತ್ಯ ರಾಮಸ್ಯಾಗ್ರೇ ವ್ಯವಸ್ಥಿತಃ ॥ ೮೫ ॥
ರಾಮಸ್ಸೀತಾಲಕ್ಷ್ಮಣೌ ಚ ಜಗ್ಮುಸ್ಸರ್ವೇ ನೃಪಾಲಯಂ ॥ ೮೬ ॥

---

೮೨. ಸಂಸಾರಿಗಳಾದ ವೇದಾಭ್ಯಾಸವನ್ನು ಮಾಡಿ ಆಚಾರದಿಂದ ಕೂಡಿರುವ ಬ್ರಾಹ್ಮಣರಿಗೆ ಆ ಶ್ರೀರಾಮನು ಸಂತೋಷದಿಂದ ಅನೇಕವಾದ ಗೋವುಗಳ ಹಿಂಡನ್ನೂ ಹಣವನ್ನೂ ಬಟ್ಟೆಗಳನ್ನೂ ಉತ್ತಮವಾದ ಒಡವೆಗಳನ್ನೂ ಕೊಟ್ಟನು.

೮೩–೮೪. ಸೀತೆಯು ಅರುಂಧತಿಗೆ ಅನೇಕವಾದ ಒಳ್ಳೊಳ್ಳೆಯ ಒಡವೆಗಳನ್ನು ಕೊಟ್ಟಳು. ರಾಮನು ತನ್ನ ತಾಯಿಯ ಸೇವಕರಿಗೂ ತನ್ನ ಸೇವಕರಿಗೂ ಬಹುವಾಗಿ ಹಣವನ್ನು ಮತ್ತೆ ಮತ್ತೆ ಕೊಟ್ಟನು. ಅಲ್ಲದೆ ತನ್ನ ಪಟ್ಟಣದ ಮತ್ತು ಹೊರಗಿನಿಂದ ಬಂದ ಬ್ರಾಹ್ಮಣರಿಗೆ ಬಹುವಾದ ಹಣವನ್ನು ದಾನಮಾಡಿದನು.

೮೫–೮೬. ಲಕ್ಷ್ಮಣನು ಸುಮಿತ್ರೆಯನ್ನು ಕೌಸಲ್ಯೆಗೆ ನೋಡಿಕೊಳ್ಳುವಂತೆ ಹೇಳಿದನು. ಅನಂತರ ಕೈಯ್ಯಲ್ಲಿ ಬಿಲ್ಲು ಬಾಣಗಳನ್ನು ಹಿಡಿದು ರಾಮನ ಮುಂದೆ ನಿಂತನು. ಅನಂತರ ರಾಮ, ಸೀತೆ, ಲಕ್ಷ್ಮಣ, ಮೂವರೂ ರಾಜನಿರುವಲ್ಲಿಗೆ ಹೊರಟರು.

ಶ್ರೀರಾಮಸ್ಸಹ ಸೀತಯಾ ನೃಪಪಥೇ ಗಚ್ಛನ್ ಶನೈಸ್ಸಾನುಜಃ ।
ಪೌರಾನ್ ಜಾನಪದಾನ್ ಕುತೂಹಲದೃಶಸ್ಸಾನಂದಮುದ್ವೀಕ್ಷಯನ್ ।
ಶ್ಯಾಮಃ ಕಾಮಸಹಸ್ರಸುಂದರವಪುಃ ಕಾಂತ್ಯಾ ದಿಶೋ ಭಾಸಯನ್ ।
ಪಾದನ್ಯಾಸಪವಿತ್ರಿತಾಖಿಲಜಗತ್ಪ್ರಾಪಾಲಯಂ ತತ್ಪಿತುಃ ॥ ೮೭ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ
ಚತುರ್ಥಸ್ಸರ್ಗಃ ಸಮಾಪ್ತಃ

---

೮೭. ಆ ಶ್ರೀರಾಮನು ಸೀತೆ ಲಕ್ಷ್ಮಣರೊಂದಿಗೆ ರಾಜಮಾರ್ಗದಲ್ಲಿ ಮೆಲ್ಲಗೆ ಹೋಗುತ್ತಿರಲು ಪಟ್ಟಣಿಗರೂ ಪರಸ್ಥಳದವರೂ ಕುತೂಹಲದಿಂದ ನೋಡುತ್ತಿದ್ದರು. ಅವರನ್ನು ತಾವೂ ಕೂಡ ಸಂತೋಷದಿಂದ ನೋಡುತ್ತಿದ್ದರು. ನೀಲಮೇಘಶ್ಯಾಮನೂ ಸಾವಿರಾರು ಮನ್ಮಥರಂತೆ ಸುಂದರವಾದ ದೇಹವುಳ್ಳವನೂ ಆದ ಆ ಶ್ರೀರಾಮನು ತನ್ನ ಕಾಂತಿಯಿಂದ ದಿಕ್ಕುಗಳನ್ನು ಬೆಳಗುತ್ತ ಹೆಜ್ಜೆಗಳನ್ನು ನೆಲದಮೇಲೆ ಇಡುವುದರಿಂದಲೇ ಪ್ರಪಂಚವನ್ನೆಲ್ಲಾ ಪಾವನವನ್ನಾಗಿ ಮಾಡುತ್ತಾ ತನ್ನ ತಂದೆಯ ಮನೆಗೆ ಹೋದನು.

ಇಂತು ಶ್ರೀಮದಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ ನಾಲ್ಕನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಅಥ ಅಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಪಂಚಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಅಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದ ಐದನೆಯ ಸರ್ಗದಲ್ಲಿ ಮಾಡಬೇಕಾದ ಸಂಕಲ್ಪ ನ್ಯಾಸ ಧ್ಯಾನ ಜಪಗಳ ಕ್ರಮವು.

ಪೂರ್ವೋಕ್ತವಿಧಿನಾ ಅಯೋಧ್ಯಾಕಾಂಡೇ ಪಂಚಮಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ ಇತಿಸಂಕಲ್ಪ್ಯ ॥

ಹಿಂದೆ ಹೇಳಿದ ವಿಧಿಯಂತೆ ಅಯೋಧ್ಯಾಕಾಂಡದ ಐದನೆಯ ಸರ್ಗದಲ್ಲಿ ನ್ಯಾಸ, ಧ್ಯಾನ, ಜಪಗಳನ್ನು ಮಾಡುತ್ತೇನೆ. ಎಂಬುದಾಗಿ ಸಂಕಲ್ಪವನ್ನು ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ರಾಂ ರೀಂ ರಂ ಅಂಗುಷ್ಠಾಭ್ಯಾಂ ನಮಃ
ಓಂ ರಾಂ ರೀಂ ರಂ ತರ್ಜನೀಭ್ಯಾಂ ನಮಃ
ಓಂ ರಾಂ ರೀಂ ರಂ ಮಧ್ಯಮಾಭ್ಯಾಂ ನಮಃ
ಓಂ ರಾಂ ರೀಂ ರಂ ಅನಾಮಿಕಾಭ್ಯಾಂ ನಮಃ
ಓಂ ರಾಂ ರೀಂ ರಂ ಕನಿಷ್ಠಿಕಾಭ್ಯಾಂ ನಮಃ
ಓಂ ರಾಂ ರೀಂ ರಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಷಡಂಗನ್ಯಾಸವು

ಓಂ ಶಾಂ ರೀಂ ರಂ ಹೃದಯಾಯ ನಮಃ
ಓಂ ಶಾಂ ರೀಂ ರಂ ಶಿರಸೇ ಸ್ವಾಹಾ
ಓಂ ರಾಂ ರೀಂ ರಂ ಶಿಖಾಯೈ ವಷಟ್
ಓಂ ಶಾಂ ರೀಂ ರಂ ಕವಚಾಯ ಹುಂ
ಓಂ ರಾಂ ರೀಂ ರಂ ನೇತ್ರತ್ರಯಾಯ ವೌಷಟ್
ಓಂ ರಾಂ ರೀಂ ರಂ ಅಸ್ತ್ರಾಯ ಫಟ್

ಓಂ ರಾಂ ರೀಂ ರಂ ಇತಿ ದಿಗ್ಬಂಧಃ

ಓಂ ರಾಂ ರೀಂ ರಂ ಎಂದು ದಿಗ್ಬಂಧವು

॥ ಅಥ ಧ್ಯಾನಂ ॥

ಧ್ಯಾನವು

ಆಯಾಂತಂ ನಾಗರಾ ದೃಷ್ಟ್ವಾ ಮಾರ್ಗೇ ರಾಮಂ ಸಜಾನಕಿಂ । ಲಕ್ಷ್ಮಣೇನ ಸಮಂ ವೀಕ್ಷ್ಯ ಊಚುಃ ಸರ್ವೇ ಪರಸ್ಪರಂ ॥

ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಪಾರಾಯಣಾಂತೇ ಷಡಂಗನ್ಯಾಸಂ ಕೃತ್ವಾ ಓಂ ರಾಂ ರೀಂ ರಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್

ಪಾರಾಯಣವಾದಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ರಾಂ ರೀಂ ರಂ ಇತಿ ದಿಗ್ವಿಮೋಕಃ ಎಂದೆನ್ನಬೇಕು.

ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

॥ ಇತಿ ಶ್ರೀಅಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಪಂಚಮಸರ್ಗೇ ನ್ಯಾಸ ಧ್ಯಾನ ಜಪಕ್ರಮಃ ॥

ಇಂತು ಅಯೋಧ್ಯಾಕಾಂಡದ ಐದನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಪಂಚಮಸ್ಸರ್ಗಃ

॥ ಮಹಾದೇವ ಉವಾಚ ॥

ಆಯಾಂತಂ ನಾಗರಾ ದೃಷ್ಟ್ವಾ ಮಾರ್ಗೇ ರಾಮಂ ಸಜಾನಕಿಂ । ಲಕ್ಷ್ಮಣೇನ ಸಮಂ ವೀಕ್ಷ್ಯ ಊಚುಸ್ಸರ್ವೇ ಪರಸ್ಪರಂ ॥ ೧ ॥

ಕೈಕೇಯ್ಯಾ ವರದಾನಾದಿ ಶ್ರುತ್ವಾ ದುಃಖಸಮಾವೃತಾಃ । ಬತ ರಾಜಾ ದಶರಥಸ್ಸತ್ಯಸಂಧಃ ಪ್ರಿಯಂ ಸುತಂ ॥ ೨ ॥

ಅಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ ಐದನೆಯ ಸರ್ಗವು.

೧. ಮಹಾದೇವನು ಹೇಳಿದನು–ಆ ಪಟ್ಟಣಿಗರು ರಾಮನು ಸೀತಾ ಲಕ್ಷ್ಮಣರೊಡನೆ ದಾರಿಯಲ್ಲಿ ರಾಜನ ಮನೆಗೆ ನಡೆದುಕೊಂಡು ಹೋಗುತ್ತಿದ್ದುದನ್ನು ನೋಡಿ ರಾಜನು ಕೈಕೇಯಿಗೆ ಕೊಟ್ಟ ವರದಾನವನ್ನು ಕೇಳಿ ದುಃಖಗೊಂಡು ಒಬ್ಬರಿಗೊಬ್ಬರು ಇಂತೆಂದು ಮಾತನಾಡಿಕೊಳ್ಳುತ್ತಿದ್ದರು.

೨. ರಾಜನಾದ ದಶರಥನು ಸತ್ಯವಂತನು. ಆದರೆ ಅವನು ಕಾಮದಿಂದ ಹೆಂಗಸಿಗೆ ಅಧೀನನಾಗಿ ಪ್ರೀತಿಪಾತ್ರನಾದ ಮಗನನ್ನೂ ಕಾಡಿಗೆ ಕಳುಹಿಸಿದನು. ಸ್ತ್ರೀಯರಲ್ಲಿ ಆಸಕ್ತನಾದವನಿಗೆ ಸತ್ಯವೆಲ್ಲಿಂದ ಬಂದೀತು ?

ಸ್ತ್ರೀಹೇತೋರತ್ಯಜತ್ಕಾಮೀ ತಸ್ಯ ಸತ್ಯವತಾ ಕುತಃ । ಕೈಕೇಯೀ ವಾ ಕಥಂ ದುಷ್ಟಾ ರಾಮಂ ಸತ್ಯಂ ಪ್ರಿಯಂಕರಂ ॥ ೩ ॥

ವಿವಾಸಯಾಮಾಸ ಕಥಂ ಕ್ರೂರಕರ್ಮಾತಿಮೂಢಧೀಃ । ಹೇ ಜನಾ ನಾತ್ರ ವಸ್ತವ್ಯಂ ಗಚ್ಛಾಮೋಽದ್ಯೈವ ಕಾನನಂ ॥ ೪ ॥

ಯತ್ರ ರಾಮಸ್ಸಭಾರ್ಯಶ್ಚ ಸಾನುಜೋ ಗಂತುಮಿಚ್ಛತಿ । ಪಶ್ಯಂತು ಜಾನಕೀಂ ಸರ್ವೇ ಪಾದಚಾರೇಣ ಗಚ್ಛತೀಂ ॥ ೫ ॥

ಪುಂಭಿಃ ಕದಾಚಿದ್ದೃಷ್ಟಾ ನಾ ಜಾನಕೀ ಲೋಕಸುಂದರೀ । ಸಾಪಿ ಪಾದೇನ ಗಚ್ಛಂತೀ ಜನಸಂಘೇಷ್ವನಾವೃತಾ ॥ ೬ ॥

೩-೪. ರಾಮನು ಸತ್ಯವನ್ನಾಡುವವನು. ತನಗೆ ಬೇಕಾದ ಕೆಲಸಗಳೆಲ್ಲವನ್ನೂ ಮಾಡಿಕೊಡುತ್ತಿರುವನು ಎಂಬುದನ್ನು ತಿಳಿದು ಕೈಕೇಯಿಯೂ ಕೂಡ ಆ ರಾಮನನ್ನು ಹೇಗೆ ಕಾಡಿಗೆ ಕಳುಹಿಸಿದಳು? ಅವಳು ಮೂಢಳು, ಬಹು ಕೆಟ್ಟವಳು. ಎಲೈ ಜನಗಳಿರ! ನಾವೂಕೂಡ ಈಊರಿನಲ್ಲಿರಲೇಬಾರದು ಈಗಲೇ ಇವನಜೊತೆಯಲ್ಲಿಯೇ ಕಾಡಿಗೆ ಹೋಗೋಣ.

೫. ರಾಮನೂ, ಲಕ್ಷ್ಮಣನೂ, ಸೀತೆಯೂ, ಎಲ್ಲಿ ಹೋಗುವರೋ ಅಲ್ಲಿಗೇ ನಾವೂ ಹೋಗೋಣ. ಕಾಲುನಡಿಗೆಯಿಂದ ನಡೆದು ಹೋಗುತ್ತಿರುವ ಈ ಸೀತೆಯನ್ನು ನೀವೆಲ್ಲರೂ ನೋಡಿರಿ.

೬. ಈ ಲೋಕಸುಂದರಿಯಾದ ಸೀತೆಯು ಯಾರ ಕಣ್ಣಿಗಾದರೂ ಹೊರಗಡೆಯಲ್ಲಿ ಕಂಡಿದ್ದಳೆ? ಅಂತಹವಳೂ ಕೂಡ ಈಗ ಬುರುಕಿಯನ್ನು ಹಾಕಿಕೊಳ್ಳದೆ ಜನಗಳ ಗುಂಪಿನಲ್ಲಿ ಕಾಲುನಡಿಗೆಯಲ್ಲಿ ನಡೆದುಕೊಂಡೇ ಹೋಗುತ್ತಿರುವಳಲ್ಲ!

ರಾಮೋಽಪಿ ಪಾದಚಾರೇಣ ಗಜಾಶ್ವಾದಿವಿವರ್ಜಿತಃ । ಗಚ್ಛತಿ ದ್ರಕ್ಷ್ಯಥ ವಿಭುಂ ಸರ್ವಲೋಕೈಕಸುಂದರಂ ॥ ೭ ॥

ರಾಕ್ಷಸೀ ಕೈಕಯೀ ನಾಮ್ನಾ ಜಾತಾ ಸರ್ವವಿನಾಶಿನೀ । ರಾಮಸ್ಯಾಪಿ ಭವೇದ್ದುಃಖಂ ಸೀತಾಯಾಃ ಪಾದಯಾನತಃ ॥ ೮ ॥

ಬಲವಾನ್ವಿಧಿರೇವಾತ್ರ ಪುಂಪ್ರಯತ್ನೋ ಹಿ ದುರ್ಬಲಃ । ಇತಿ ದುಃಖಾಕುಲೇ ಬೃಂದೇ ಸಾಧೂನಾಂ ಮುನಿಪುಂಗವಃ ॥ ೯ ॥

ಅಬ್ರವೀದ್ವಾಮದೇವೋಽಥ ಸಾಧೂನಾಂ ಸಂಗಮಧ್ಯಗಃ । ಮಾನುಶೋಚಥ ರಾಮಂ ವಾ ಸೀತಾಂ ವಾ ವಚ್ಮಿ ತತ್ತ್ವತಃ ॥ ೧೦ ॥

---

೭. ರಾಮನೂಕೂಡ ಕಾಲುನಡಿಗೆಯಿಂದಲೇ ಹೋಗುತ್ತಿರುವನು. ಆನೆ, ಕುದುರೆ, ಕಾಲಾಳುಗಳೊಂದೂ ಜೊತೆಯಲ್ಲಿಲ್ಲವಲ್ಲ! ಸರ್ವಲೋಕಸುಂದರನಾದ ಆ ಪ್ರಭುವು ನಡೆದುಹೋಗುತ್ತಿರುವನು. ನೋಡಿರಿ.

೮. ಸರ್ವವನ್ನೂ ನಾಶಮಾಡುವ ರಾಕ್ಷಸಿಯೇ ಕೈಕೇಯಿ ಎಂಬ ಹೆಸರಿನಿಂದ ಹುಟ್ಟಿದ್ದಾಳೆ. ಸೀತೆಯು ಕಾಲಿನಿಂದ ನಡೆದು ಹೋಗುತ್ತಿರುವುದನ್ನು ನೋಡಿದರೆ ರಾಮನಿಗೂ ಕೂಡ ಬಹು ದುಃಖವಾಗುತ್ತಿದೆ.

೯–೧೦. ಇದನ್ನು ನೋಡಿದರೆ ದೈವಬಲವೇ ಪ್ರಬಲವಾದುದು. ಮನುಷ್ಯಬಲವು ಬಹು ಕೀಳಾದುದು ಎಂದು ದೃಢಪಡುತ್ತದೆ ಎಂದೆನ್ನುತ್ತಿದ್ದರು ಸಜ್ಜನರೆಲ್ಲರೂ ಹೀಗೆ ದುಃಖದಿಂದ ಕೂಡಿರುತ್ತಿರಲಾಗಿ, ಅವರೊಳಗಿದ್ದ ಮುನಿಶ್ರೇಷ್ಠನಾದ ವಾಮದೇವನು ಎಲ್ಲರನ್ನೂ ಕುರಿತು ಇಂತೆಂದು ಹೇಳಿದನು. ಎಲೈ ಜನಗಳಿರ! ಸೀತೆಯನ್ನು ಕುರಿತಾಗಲೀ, ರಾಮನನ್ನು ಕುರಿತಾಗಲೀ, ದುಃಖಪಡಬೇಡಿರಿ. ರಾಮನಾರು? ಸೀತೆಯಾರು? ಎಂಬ ವಿಷಯವನ್ನು ಯತಾರ್ಥವಾಗಿ ಹೇಳುತ್ತೇನೆ. ಕೇಳಿರಿ.

ಏಷ ರಾಮಃ ಪರೋ ವಿಷ್ಣುರಾದಿನಾರಾಯಣಃ ಸ್ಮೃತಃ । ಏಷಾ ಸಾ ಜಾನಕೀ ಲಕ್ಷ್ಮೀರ್ಯೋಗಮಾಯೇತಿ ವಿಶ್ರುತಾ ॥ ೧೧ ॥

ಅಸೌ ಶೇಷಸ್ತಮನ್ವೇತಿ ಲಕ್ಷ್ಮಣಾಖ್ಯಶ್ಚ ಸಾಂಪ್ರತಂ । ಏಷ ಮಾಯಾಗುಣೈರ್ಯುಕ್ತಸ್ತತ್ತದಾಕಾರವಾನಿವ ॥ ೧೨ ॥

ಏಷ ಏವ ರಜೋಯುಕ್ತೋ ಬ್ರಹ್ಮಾಭೂದ್ವಿಶ್ವಭಾವನಃ । ಸತ್ವಾವಿಷ್ಟಸ್ತಥಾ ವಿಷ್ಣುಸ್ತ್ರಿಜಗತ್ಪರಿಪಾಲಕಃ ॥ ೧೩ ॥

ಏಷ ರುದ್ರಸ್ತಾಮಸೋಂತೇ ಜಗತ್ಪ್ರಳಯಕಾರಣಂ । ಏಷ ಮತ್ಸ್ಯಃ ಪುರಾ ಭೂತ್ವಾ ಭಕ್ತಂ ವೈವಸ್ವತಂ ಮನುಂ ॥ ೧೪ ॥

---

೧೧. ಈ ರಾಮನೆಂಬುವನೇ ಮಹಾವಿಷ್ಣುವು. ಆದಿನಾರಾಯಣನು ಎಂದು ತಿಳಿಯಿರಿ. ಈ ಸೀತೆಯೇ ಲಕ್ಷ್ಮಿಯು. ಇವಳನ್ನೇ ಎಲ್ಲರೂ ಯೋಗಮಾಯೆ ಯೆಂದು ಹೇಳುತ್ತಾರೆ.

೧೨. ಆದಿಶೇಷನೇ ಲಕ್ಷ್ಮಣನೆಂದು ಎನ್ನಿಸಿಕೊಂಡು ಈಗ ಇವರಿಬ್ಬರನ್ನೂ ಅನುಸರಿಸುತ್ತಲಿದ್ದಾನೆ. ಈ ರಾಮನೇ ಮಾಯೆಯ ಗುಣಗಳಿಂದ ಕೂಡಿ ಅವತರಿಸಿದಾಗ ಆಯಾಯ ಗುಣವುಳ್ಳವನಂತೆ ಕಂಡುಬರುವನು.

೧೩. ಇವನೇ ರಜೋಗುಣದಿಂದ ಕೂಡಿಕೊಂಡಾಗ ಪ್ರಪಂಚವನ್ನು ಸೃಷ್ಟಿಮಾಡುವ ಬ್ರಹ್ಮನೆಂಬುದಾಗಿ ಕಂಡುಬರುವನು. ಇವನೇ ಸತ್ವಗುಣದಿಂದ ಕೂಡಿಕೊಂಡಾಗ ಮೂರುಲೋಕವನ್ನೂ ಪಾಲಿಸುವ ವಿಷ್ಣುವೆಂದೆನಿಸಿಕೊಳ್ಳುತ್ತಾನೆ.

೧೪-೧೭. ಇವನೇ ತಮೋಗುಣವನ್ನು ಹೊಂದಿ ರುದ್ರನೆಂದು ಎನ್ನಿಸಿಕೊಂಡು ಜಗತ್ತಿನ ಪ್ರಳಯಕ್ಕೆ ಕಾರಣನಾಗುವನು. ಈ ರಾಮನೇ ಪೂರ್ವದಲ್ಲಿ ಮತ್ಸ್ಯಾವತಾರವನ್ನುತಾಳಿ ಭಕ್ತನಾದ ವೈವಸ್ವತಮನುವನ್ನು ನಾವೆಯಲ್ಲಿ ಕೂರಿಸಿಕೊಂಡು ಪ್ರಳಯಕಾಲವು

ನಾವ್ಯಾರೋಪ್ಯ ಲಯಸ್ಯಾಂತಂ ಪಾಲಯಾಮಾಸ ರಾಘವಃ । ಸಮುದ್ರಮಥನೇ ಪೂರ್ವಂ ಮಂದರೇ ಸುತಲಂ ಗತೇ ॥ ೧೫ ॥

ಅಧಾರಯತ್ಸ್ವಪೃಷ್ಠೇದ್ರಿಂ ಕೂರ್ಮರೂಪೀ ರಘೂತ್ತಮಃ । ಮಹೀಂ ರಸಾತಲಂ ಯಾತಾ ಪ್ರಳಯೇ ಸೂಕರೋಭವತ್ ॥ ೧೬ ॥

ತೋಲಯಾಮಾಸ ದಂಷ್ಟ್ರಾಗ್ರೇ ತಾಂ ಕ್ಷೋಣೀಂ ರಘುನಂದನಃ । ನಾರಸಿಂಹವಪುಃ ಕೃತ್ವಾ ಪ್ರಹ್ಲಾದವರದಃ ಪುರಾ ॥ ೧೭ ॥

ತ್ರಿಲೋಕಕಂಟಕಂ ರಕ್ಷಃ ಪಾಟಯಾಮಾಸ ತನ್ನಖೈಃ । ಪುತ್ರರಾಜ್ಯಂ ಹೃತಂ ದೃಷ್ಟ್ವಾ ಹ್ಯದಿತ್ಯಾ ಯಾಚಿತಃ ಪುರಾ ॥ ೧೮ ॥

ಮುಗಿಯುವವರೆಗೂ ಕಾಪಾಡಿದನು. ಈ ರಾಮನೇ ಪೂರ್ವದಲ್ಲಿ ಸಮುದ್ರಮಥನಮಾಡುವಾಗ ಮಂದರಪರ್ವತವು ಸಮುದ್ರದೊಳಗೆ ಸುತಲಕ್ಕೆ ಬಿದ್ದುಹೋಗಲು ಕೂರ್ಮಾವತಾರವನ್ನುಮಾಡಿ ಆ ಬೆಟ್ಟವನ್ನು ತನ್ನ ಬೆನ್ನಿನಮೇಲೆ ಇಟ್ಟುಕೊಂಡನು. ಈ ಶ್ರೀರಾಮನು ಪ್ರಳಯಕಾಲದಲ್ಲಿ ಭೂಮಿಯು ರಸಾತಲಕ್ಕೆ ಹೋದಾಗ ಹಂದಿಯಾಗಿ ಭೂಮಿಯನ್ನು ತನ್ನ ಎರಡು ಕೋರೆದಾಡೆಗಳಮೇಲೆ ಹೊತ್ತುಕೊಂಡು ತೂಗಾಡಿಸುತ್ತಿದ್ದನು. ಈ ಶ್ರೀರಾಮನು ನರಸಿಂಹಾವತಾರವನ್ನು ಮಾಡಿ ಮೂರುಲೋಕಕ್ಕೂ ಕಂಟಕನಾದ ಹಿರಣ್ಯಕಶಿಪುವನ್ನು ಉಗುರುಗಳಿಂದ ಸೀಳಿಕೊಂದು ಭಕ್ತನಾದ ಪ್ರಹ್ಲಾದನಿಗೆ ವರವನ್ನು ಕೊಟ್ಟನು.

೧೮–೨೦. ಪೂರ್ವದಲ್ಲಿ ಅದಿತಿಯು ತನ್ನ ಮಗನಾದ ಇಂದ್ರನ ರಾಜ್ಯವನ್ನು ಬಲಿಯು ಕಿತ್ತುಕೊಳ್ಳಲು. ಆಕೆಯು ಈ ರಾಮನನ್ನು ಯಾಚಿಸಲು ಇವನು ವಾಮನಾವತಾರವನ್ನುಮಾಡಿ ಯಾಚನೆಯಿಂದ ಆ ರಾಜ್ಯವನ್ನು ಮತ್ತೆ ತೆಗೆದುಕೊಂಡನು. ಈ ರಾಮನೇ ದುಷ್ಟರಾದ

ವಾಮನತ್ವಮುಪಾಗಮ್ಯ ಯಾಚ್ಞಯಾ ಚಾಹರತ್ಪುನಃ । ದುಷ್ಟಕ್ಷತ್ರಿಯಭೂಭಾರನಿವೃತ್ತ್ಯೈ ಭಾರ್ಗವೋಽಭವತ್ ॥ ೧೯ ॥

ಸ ಏವ ಜಗತಾಂ ನಾಥ ಇದಾನೀಂ ರಾಮತಾಂ ಗತಃ । ರಾವಣಾದೀನಿ ರಕ್ಷಾಂಸಿ ಕೋಟಿಶೋ ನಿಹನಿಷ್ಯತಿ ॥ ೨೦ ॥

ಮಾನುಷೇಣೈವ ಮರಣಂ ತಸ್ಯ ದೃಷ್ಟಂ ದುರಾತ್ಮನಃ । ರಾಜ್ಞಾ ದಶರಥೇನಾಪಿ ತಪಸಾರಾಧಿತೋ ಹರಿಃ ॥ ೨೧ ॥

ಪುತ್ರತ್ವಾಕಾಂಕ್ಷಯಾ ವಿಷ್ಣೋಸ್ತಥಾ ಪುತ್ರೋಽಭವದ್ಧರಿಃ । ಸ ಏವ ವಿಷ್ಣುಃ ಶ್ರೀರಾಮೋ ರಾವಣಾದಿವಧಾಯ ಹಿ ॥ ೨೨ ॥

ಗಂತಾದ್ಯೈವ ವನಂ ರಾಮೋ ಲಕ್ಷ್ಮಣೇನ ಸಹಾಯವಾನ್ । ಏಷಾ ಸೀತಾ ಹರೇರ್ಮಾಯಾ ಸೃಷ್ಟಿಸ್ಥಿತ್ಯಂತಕಾರಿಣೀ ॥ ೨೩ ॥

ಕ್ಷತ್ರಿಯರನ್ನು ನಾಶಮಾಡಿ ಭೂಭಾರವನ್ನು ಇಳಿಸಲೋಸುಗ ಭಾರ್ಗವರಾಮನಾಗಿ ಹುಟ್ಟಿದನು. ಈರೀತಿಯಾಗಿ ಅವತಾರಗಳನ್ನು ಮಾಡಿದ ಜಗನ್ನಾಥನೇ ಈಗ ರಾಮನಾಗಿ ಹುಟ್ಟಿರುವನು. ಈಗ ರಾವಣನೇ ಮುಂತಾದ ಬಹುಜನ ರಾಕ್ಷಸರನ್ನು, ಕೊಲ್ಲುವನು.

೨೧. ಆ ದುರಾತ್ಮನಾದ ರಾವಣನು ಮನುಷ್ಯರಿಂದ ಮರಣವನ್ನು ಹೊಂದಬೇಕಾಗಿದೆ. ರಾಜನಾದ ದಶರಥನು ಪೂರ್ವದಲ್ಲಿ ತಪಸ್ಸಿನಿಂದ ಹರಿಯನ್ನು ಪೂಜಿಸಿದನು.

೨೨–೨೩. ಆಗ ಆ ದಶರಥನು ಆ ಸ್ವಾಮಿಯು ತನಗೆ ಮಗನಾಗಬೇಕೆಂದು ಕೇಳಿದನು. ಅದರಂತೆ ಈಗ ಆ ಹರಿಯು ದಶರಥನಿಗೆ ಮಗನಾಗಿ ಹುಟ್ಟಿರುವನು. ಆ ವಿಷ್ಣುವೇ ಈಗ ರಾಮಾವತಾರವನ್ನುಮಾಡಿ ರಾವಣನ ವಧೆಯನ್ನು ಮಾಡಲು ಲಕ್ಷ್ಮಣನನ್ನು ಸಹಾಯಕ್ಕೆ ಇಟ್ಟುಕೊಂಡು ಈಗಲೇ ಹೊರಡುವವನಾಗಿದ್ದಾನೆ. ಈ ಸೀತೆಯು ಹರಿಯ ಮಾಯಾಸ್ವರೂಪ ಅವತಾರಳು. ಸೃಷ್ಟಿಸ್ಥಿತಿ ಲಯಗಳನ್ನು ಮಾಡತಕ್ಕವಳು.

ರಾಜಾ ವಾ ಕೈಕಯೀ ವಾಪಿ ನಾತ್ರ ಕಾರಣಮಣ್ವಪಿ । ಪೂರ್ವೇದ್ಯುರ್ನಾರದಃ ಪ್ರಾಹ ಭೂಭಾರಹರಣಾಯ ಚ ॥ ೨೪ ॥

ರಾಮೋಪ್ಯಾಹ ಸ್ವಯಂ ಸಾಕ್ಷಾಚ್ಛ್ವೋಗಮಿಷ್ಯಾಮ್ಯಹಂ ವನಂ । ಅತೋ ರಾಮಂ ಸಮುದ್ದಿಶ್ಯ ಚಿಂತಾಂ ತ್ಯಜತ ಬಾಲಿಶಾಃ ॥

ರಾಮ ರಾಮೇತಿ ಯೇ ನಿತ್ಯಂ ಜಪಂತಿ ಮನುಜಾ ಭುವಿ । ತೇಷಾಂ ಮೃತ್ಯುಭಯಾದೀನಿ ನ ಭವಂತಿ ಕದಾಚನ ॥ ೨೬ ॥

ಕಾ ಪುನಸ್ತಸ್ಯ ರಾಮಸ್ಯ ದುಃಖಶಂಕಾ ಮಹಾತ್ಮನಃ । ರಾಮನಾಮ್ನೈವ ಮುಕ್ತಿಸ್ಸ್ಯಾತ್ಕಲೌ ನಾನ್ಯೇನ ಕೇನ ಚಿತ್ ॥ ೨೭ ॥

---

೨೪. ರಾಜನಾದ ದಶರಥನಾಗಲೀ, ಕೈಕೇಯಿಯಾಗಲೀ ಇದರಲ್ಲಿ ಸ್ವಲ್ಪವೂ ಕಾರಣರಲ್ಲ. ನಿನ್ನೆಯದಿನ ತಾನೇ ಮುನಿಯಾದ ನಾರದನು ಬಂದು ಸ್ವಾಮಿಯಾದ ನೀನು ಭೂಭಾರವನ್ನು ನಾಶಮಾಡಬೇಕೆಂದು ಹೇಳಿದನು.

೨೫. ಈ ರಾಮನು ತಾನೇ ಹೇಳಿದನು. ನಾಳೆಯೇ ನಾನು ಇದೇ ಕೆಲಸಕ್ಕೋಸ್ಕರ ವನಕ್ಕೆ ಹೊರಡುತ್ತೇನೆಂದು. ಆದ್ದರಿಂದ ನೀವು ತಿಳಿವಳಿಕೆಯಿಲ್ಲದೆ ರಾಮನು ರಾಜ್ಯವನ್ನು ಬಿಟ್ಟು ಕಾಡಿಗೆ ಹೋಗುವನಲ್ಲ! ಎಂದು ಯೋಚಿಸಬೇಡಿರಿ.

೨೬. ಯಾವನು ರಾಮ, ರಾಮ, ರಾಮ, ಎಂಬುದಾಗಿ ನಿತ್ಯವೂ ಭೂಮಿಯಲ್ಲಿ ಜಪಿಸುತ್ತಾನೆಯೋ ಅವನಿಗೆ ಮರಣಭಯವೇ ಮುಂತಾದುವು ಯಾವುವೂ ಉಂಟಾಗುವುದಿಲ್ಲ.

೨೭. ಅವನನ್ನು ಧ್ಯಾನಿಸಿದವರಿಗೇ ಈರೀತಿಯಾಗಿ ಉತ್ತಮಗತಿಯನ್ನು ಕೊಡುವಾಗ ಮಹಾತ್ಮನಾದ ಆ ರಾಮನ ವಿಷಯದಲ್ಲಿ ನೀವು ದುಃಖವನ್ನೇ ಪಡಬೇಡಿರಿ. ಈ ಕಲಿಯುಗದಲ್ಲಿ ರಾಮನಾಮದ ಧ್ಯಾನವೊಂದರಿಂದಲೇ ಲೋಕದ ಜನರಿಗೆ ಮುಕ್ತಿಯು ಬರುವುದು. ಮತ್ತಾವುದರಿಂದಲೂ ಮುಕ್ತಿಯು ಬರುವುದಿಲ್ಲ.

ಮಾಯಾಮಾನುಷರೂಪೇಣ ವಿಡಂಬಯತಿ ಲೋಕಕೃತ್ । ಭಕ್ತಾನಾಂ ಭಜನಾರ್ಥಾಯ ರಾವಣಸ್ಯ ವಧಾಯ ಚ ॥ ೨೮ ॥
ರಾಜ್ಞಶ್ಚಾಭೀಷ್ಟಸಿಧ್ಯರ್ಥಂ ಮಾನುಷಂ ವಪುರಾಸ್ಥಿತಃ । ಇತ್ಯುಕ್ತ್ವಾ ವಿರರಾಮಾಥ ವಾಮದೇವೋ ಮಹಾಮುನಿಃ ॥ ೨೯ ॥
ಶ್ರುತ್ವಾ ತೇಽಪಿ ದ್ವಿಜಾಸ್ಸರ್ವೇ ರಾಮಂ ಜ್ಞಾತ್ವಾ ಹರಿಂ ವಿಭುಂ । ಜಹುರ್ಹೃತ್ಸಂಶಯಗ್ರಂಥಿಂ ರಾಮಮೇವಾನುಚಿಂತಯನ್ ॥ ೩೦ ॥
ಯ ಇದಂ ಚಿಂತಯೇನ್ನಿತ್ಯಂ ರಹಸ್ಯಂ ರಾಮಸೀತಯೋಃ । ತಸ್ಯ ರಾಮೋ ದೃಢಾಭಕ್ತಿರ್ಭವೇದ್ವಿಜ್ಞಾನಪೂರ್ವಿಕಾ ॥ ೩೧ ॥

---

೨೮. ಈ ಸೃಷ್ಟಿಕರ್ತನು ಮಾಯಾ ಮನುಷ್ಯನ ರೂಪದಿಂದ ಲೋಕವನ್ನು ಭ್ರಾಂತಿಗೊಳಿಸುತ್ತಾನೆ ಭಕ್ತರು ಭಜಿಸುವುದಕ್ಕೋಸ್ಕರವೂ, ರಾವಣನನ್ನು ಕೊಲ್ಲುವುದಕ್ಕೋಸ್ಕರವೂ ಆ ಸ್ವಾಮಿಯು ಈರೀತಿಯಾಗಿ ಮಾಯಾರೂಪದಿಂದ ಬಂದಿದ್ದಾನೆ.

೨೯. ಈ ರಾಜನಿಗೆ ಇಷ್ಟಾರ್ಥವನ್ನು ಪೂರ್ತಿಮಾಡುವುದಕ್ಕೆ ಮನುಷ್ಯರ ರೂಪವನ್ನು ಹೊಂದಿದ್ದಾನೆ. ಮಹಾಮುನಿಯಾದ ವಾಮದೇವನು ಈರೀತಿಯಾಗಿ ಹೇಳಿ ಸುಮ್ಮನಾದನು.

೩೦. ಈ ವಿಷಯವನ್ನು ಬ್ರಾಹ್ಮಣರೆಲ್ಲರೂ ಕೇಳಿ ರಾಮನು ಸಾಕ್ಷಾದ್ವಿಭುವಾದ ಹರಿಯು ಎಂದು ತಿಳಿದುಕೊಂಡರು. ಆ ರಾಮನನ್ನೇ ಧ್ಯಾನಿಸುತ್ತ ಹೃದಯದಲ್ಲಿದ್ದ ಸಂಶಯವೆಂಬ ಗಂಟನ್ನು ನಾಶಮಾಡಿಕೊಂಡರು.

೩೧. ಯಾವನು ಈ ಮೇಲೆ ಹೇಳಿದ ರಾಮನ ಮತ್ತು ಸೀತೆಯ ವಿಷಯವನ್ನು ಸ್ಮರಿಸುತ್ತಾನೆಯೋ ಅವನಿಗೆ ರಾಮನಲ್ಲಿ ಜ್ಞಾನಪೂರ್ವಕವಾದ ಭಕ್ತಿಯುಂಟಾಗುತ್ತದೆ.

ರಹಸ್ಯಂ ಗೋಪನೀಯಂ ವೋ ಯೂಯಂ ವೈ ರಾಘವಪ್ರಿಯಾಃ । ಇತ್ಯುಕ್ತ್ವಾ ಪ್ರಯಯೌ ವಿಪ್ರಸ್ತೇಽಪಿ ರಾಮಂ ಪರಂ ವಿದುಃ ॥
ತತೋ ರಾಮಸ್ಸಮಾವಿಶ್ಯ ಪಿತುರ್ಗೇಹಮವಾರಿತಃ । ಸಾನುಜಸ್ಸೀತಯಾ ಗತ್ವಾ ಕೈಕೇಯೀಮಿದಮಬ್ರವೀತ್ ॥ ೩೩ ॥
ಆಗತಾಸ್ಮೋ ವಯಂ ಮಾತಸ್ತ್ರಯಸ್ತೇ ಸಮ್ಮತಂ ವನಂ । ಗಂತುಂ ಕೃತಧಿಯಶ್ಶೀಘ್ರಮಾಜ್ಞಾಪಯತು ನಃ ಪಿತಾ ॥ ೩೪ ॥
ಇತ್ಯುಕ್ತಾ ಸಹಸೋತ್ಥಾಯ ಚೀರಾಣಿ ಪ್ರದದೌ ಸ್ವಯಂ । ರಾಮಾಯ ಲಕ್ಷ್ಮಣಾಯಾಥ ಸೀತಾಯೈ ಚ ಪೃಥಕ್ ಪೃಥಕ್ ॥೩೫॥

---

೩೨. ರಾಮನಲ್ಲಿ ಭಕ್ತಿಯುಳ್ಳ ಎಲೈ ಜನಗಳಿರಾ! ಇದನ್ನು ನೀವು ಪ್ರಯತ್ನಪಟ್ಟು ಗುಟ್ಟಾಗಿಟ್ಟುಕೊಳ್ಳಿರಿ. ಎಂದು ಆ ವಾಮದೇವನು ಹೇಳಿ ಹೊರಟುಹೋದನು. ಜನರೂಕೂಡ ರಾಮನನ್ನು ಪರಬ್ರಹ್ಮವಸ್ತುವೆಂದು ತಿಳಿದುಕೊಂಡರು.

೩೩. ಅನಂತರ ರಾಮನು ಲಕ್ಷ್ಮಣನೊಡನೆ ತಂದೆಯಮನೆಗೆ ಹೋದನು. ಯಾರೂ ಅವನನ್ನು ತಡೆಯಲೇ ಇಲ್ಲ. ಜೊತೆಯಲ್ಲಿ ಲಕ್ಷ್ಮಣನೂ ಸೀತೆಯೂ ಹೋದರು. ಇವರೊಡನೆ ಹೋದ ರಾಮನು ಕೈಕೇಯಿಯನ್ನು ಕುರಿತು ಇಂತೆಂದನು.

೩೪. ಅಮ್ಮಾ ಕೈಕೇಯಿಯೆ! ನಾವು ಮೂರು ಜನರೂ ನೀನು ಹೇಳಿದಂತೆ ಕಾಡಿಗೆ ಹೋಗಲು ಮನಸ್ಸನ್ನು ಧೃಡಮಾಡಿಕೊಂಡು ಬಂದಿದ್ದೇವೆ. ನಮ್ಮಗಳಿಗೆ ತಂದೆಯಾದ ದಶರಥನು ಬೇಗನೆ ಅಪ್ಪಣೆಯನ್ನು ಕೊಡಲಿ.

೩೫. ರಾಮನು ಹೀಗೆಂದು ಆ ಕೈಕೇಯಿಗೆ ಹೇಳಲು ಆಕೆಯು ಬೇಗನೆ ಎದ್ದು ಅವರಿಗೆ ತಾನಾಗಿಯೇ ನಾರುಬಟ್ಟೆಗಳನ್ನು ರಾಮ, ಸೀತೆ, ಲಕ್ಷ್ಮಣರಿಗೆ ಬೇರೆ ಬೇರೆಯಾಗಿ ಒಬ್ಬೊಬ್ಬರಿಗೂ ಕೊಟ್ಟಳು.

ರಾಮಸ್ತು ವಸ್ತ್ರಾಣ್ಯುತ್ಸೃಜ್ಯ ವನ್ಯಚೀರಾಣಿ ಪರ್ಯಧಾತ್ । ಲಕ್ಷ್ಮಣೋಽಪಿ ತಥಾ ಚಕ್ರೇ ಸೀತಾ ತನ್ನವಿಜಾನತೀ ॥ ೩೬ ॥

ಹಸ್ತೇ ಗೃಹೀತ್ವಾ ರಾಮಸ್ಯ ಲಜ್ಜಯಾ ಮುಖಮೈಕ್ಷತ । ರಾಮೋ ಗೃಹೀತ್ವಾ ತಚ್ಚೀರಮಂಶುಕೇ ಪರ್ಯವೇಷಯತ್ ॥ ೩೭ ॥

ತದ್ದೃಷ್ಟ್ವಾ ರುರುದುಸ್ಸರ್ವಾ ರಾಜದಾರಾಸ್ಸಮಂತತಃ । ವಸಿಷ್ಠಸ್ತು ತದಾಕರ್ಣ್ಯ ರುದಿತಂ ಭರ್ತ್ಸಯನ್ ರುಷಾ ॥ ೩೮ ॥

ಕೈಕೇಯೀಂ ಪ್ರಾಹ ದುರ್ವೃತ್ತೇ ರಾಮ ಏವ ತ್ವಯಾ ವೃತಃ । ವನವಾಸಾಯ ದುಷ್ಟೇ ತ್ವಂ ಸೀತಾಯೈ ಕಿಂ ಪ್ರಯಚ್ಛಸಿ ॥ ೩೯ ॥

೩೬-೩೭. ರಾಮನು ತನ್ನ ಬಟ್ಟೆಗಳನ್ನು ತೆಗೆದುಹಾಕಿ ಕೈಕೇಯಿಯುಕೊಟ್ಟ ನಾರುಡೆಯನ್ನುಟ್ಟುಕೊಂಡನು. ಲಕ್ಷ್ಮಣನೂ ಹಾಗೆಯೇ ತೆಗೆದುಕೊಂಡು ಉಟ್ಟುಕೊಂಡನು ಸೀತೆಯು ಆ ಬಟ್ಟೆಯನ್ನುಟ್ಟುಕೊಳ್ಳುವುದಕ್ಕೆ ಬಾರದೆ ಅದನ್ನು ಕೈಯ್ಯಲ್ಲಿ ಹಿಡಿದುಕೊಂಡು ನಾಚಿಕೆಯಿಂದ ರಾಮನ ಮುಖವನ್ನು ನೋಡಿದಳು. ರಾಮನು ಆ ಬಟ್ಟೆಯನ್ನು ತನ್ನ ಕೈಗೆ ತೆಗೆದು ಕೊಂಡು ಆಕೆಯು ಉಟ್ಟಿದ್ದ ಬಟ್ಟೆಗಳ ಮೇಲೆಯೇ ಉಡಿಸಿದನು.

೩೮-೩೯. ಸೀತೆಯು ಆ ನಾರುಡೆಯನ್ನುಟ್ಟುದನ್ನು ನೋಡಿ ಆ ರಾಜನ ಅಂತಃಪುರದವರೆಲ್ಲರೂ ದುಃಖಪಟ್ಟರು. ಅವರುಗಳು ಹಾಗೆ ಅಳುವುದನ್ನು ವಸಿಷ್ಠನು ನೋಡಿ ಕೈಕೇಯಿಯನ್ನು ಕೋಪದಿಂದ ಗದರಿಸುತ್ತ ಎಲೈ ದುರ್ವೃತ್ತಳೇ! ನೀನು ರಾಮನೊಬ್ಬನನ್ನೇ ಕಾಡಿಗೆ ಹೋಗಬೇಕೆಂದು ಕೇಳಿರುವುದು. ಸೀತೆಗೇಕೆ ನಾರುಡೆಗಳನ್ನು ಕೊಡುತ್ತೀಯೆ? ಎಂದು ಕೇಳಿದನು

ಯದಿ ರಾಮಂ ಸಮನ್ವೇತಿ ಸೀತಾ ಭಕ್ತ್ಯಾ ಪತಿವ್ರತಾ । ದಿವ್ಯಾಂಬರಧರಾ ನಿತ್ಯಂ ಸರ್ವಾಭರಣಭೂಷಿತಾ ॥ ೪೦ ॥

ರಮಯತ್ವನಿಶಂ ರಾಮಂ ವನದುಃಖನಿವಾರಿಣೀ । ರಾಜಾ ಧಶರಥೋಽಪ್ಯಾಹ ಸುಮಂತ್ರಂ ರಥಮಾನಯ ॥ ೪೧ ॥

ರಥಮಾರುಹ್ಯ ಗಚ್ಛಂತು ವನಂ ವನಚರಪ್ರಿಯಾಃ । ಇತ್ಯುಕ್ತ್ವಾ ರಾಮಮಾಲೋಕ್ಯ ಸೀತಾಂ ಚೈವ ಸಲಕ್ಷ್ಮಣಂ ॥ ೪೨ ॥

ದುಃಖಾನ್ನಿಪತಿತೋ ಭೂಮೌ ರುರೋದಾಶ್ರುಪರಿಪ್ಲುತಃ । ಆರುರೋಹ ರಥಂ ಸೀತಾ ಶೀಘ್ರಂ ರಾಮಸ್ಯ ಪಶ್ಯತಃ ॥ ೪೩ ॥

---

೪೦. ಸೀತೆಯು ಭಕ್ತಿಯಿಂದಲೂ, ಪಾತಿವ್ರತ್ಯದಿಂದಲೂ, ರಾಮನನ್ನು ಅನುಸರಿಸಿ ಹೋಗುತ್ತೇನೆಂದು ಅವಳು ಕಾಡಿಗೆ ಹೋದರೆ, ಒಳ್ಳೆಯ ಬಟ್ಟೆಗಳನ್ನೂ, ಆಭರಣಗಳನ್ನೂ ಯಾವಾಗಲೂ ಹಾಕಿಕೊಂಡು ರಾಮನಿಗುಂಟಾದ ವನವಾಸ ದುಃಖವನ್ನು ನಾಶಮಾಡುತ್ತ ಸಂತೋಷಪಡಿಸಲಿ ಎಂಬುದಾಗಿಯೂ ಹೇಳಿದನು.

೪೧. ರಾಜನಾದ ದಶರಥನು ಸುಮಂತ್ರನನ್ನು ಕುರಿತು ಎಲೈ ಸುಮಂತ್ರನೇ! ರಥವನ್ನು ತೆಗೆದುಕೊಂಡು ಬಾ ಕಾಡಿಗೆ ಹೋಗಬೇಕಾದ ಇವರು ರಥದಲ್ಲಿ ಕುಳಿತುಕೊಂಡು ಹೋಗಲಿ ಎಂದು ಹೇಳಿದನು.

೪೨. ಹೀಗೆಂದು ಹೇಳುತ್ತ, ರಾಮ, ಲಕ್ಷ್ಮಣ, ಸೀತೆಯರನ್ನು ನೋಡಿ ದುಃಖವನ್ನು ಸಹಿಸಲಾರದೆ ನೆಲದಮೇಲೆ ಬಿದ್ದು ಕಣ್ಣೀರನ್ನು ಸುರಿಸುತ್ತ ಅತ್ತನು.

೪೩. ರಥವು ಬರಲು ಸೀತೆಯು ರಾಮನು ನಿಂತಿರುವಂತೆಯೇ ಅವನ ಎದುರಿಗೆ ಅವನಿಗಿಂತ ತಾನೇ ಮುಂದೆ ರಥವನ್ನು ಹತ್ತಿದಳು.

ರಾಮಃ ಪ್ರದಕ್ಷಿಣಂ ಕೃತ್ವಾ ಪಿತರಂ ರಥಮಾರುಹತ್ । ಲಕ್ಷ್ಮಣಃ ಖಡ್ಗಯುಗಳಂ ಧನುಸ್ತೂಣೀಯುಗಂ ತಥಾ ॥ ೪೪ ॥

ಗೃಹೀತ್ವಾ ರಥಮಾರುಹ್ಯ ನೋದಯಾಮಾಸ ಸಾರಥಿಂ । ತಿಷ್ಠ ತಿಷ್ಠ ಸುಮಂತ್ರೇತಿ ರಾಜಾ ದಶರಥೋಽಬ್ರವೀತ್ ॥ ೪೫ ॥

ಗಚ್ಛ ಗಚ್ಛೇತಿ ರಾಮೇಣ ಚೋದಿತೋ ಚೋದಯದ್ರಥಂ । ರಾಮೇ ದೂರಂ ಗತೇ ರಾಜಾ ಮೂರ್ಛಿತಃ ಪ್ರಾಪತದ್ಭುವಿ ॥ ೪೬ ॥

ಪೌರಾಸ್ತು ಬಾಲವೃದ್ಧಾಶ್ಚ ವೃದ್ಧಾ ಬ್ರಾಹ್ಮಣಸತ್ತಮಾಃ । ತಿಷ್ಠ ತಿಷ್ಠೇತಿ ರಾಮೇತಿ ಕ್ರೋಶಂತೋ ರಥಮನ್ವಯುಃ ॥ ೪೭ ॥

---

೪೪. ರಾಮನು ತಂದೆಗೆ ಪ್ರದಕ್ಷಿಣೆಮಾಡಿ ರಥವನ್ನು ಹತ್ತಿದನು. ಲಕ್ಷ್ಮಣನು ಎರಡು ಕತ್ತಿಗಳನ್ನೂ, ಎರಡು ಬತ್ತಳಿಕೆಗಳನ್ನೂ ತೆಗೆದುಕೊಂಡು ರಥವನ್ನು ಹತ್ತಿದನು.

೪೫. ಅನಂತರ ಸಾರಥಿಯಾದ ಸುಮಂತ್ರನನ್ನು ರಥವನ್ನು ನಡೆಸೆಂದನು. ಆಗ ದಶರಥನು ಎಲೈ ಸುಮಂತ್ರನೇ! ನಿಲ್ಲು, ನಿಲ್ಲು, ಎಂದೆನ್ನುತ್ತಿದ್ದನು.

೪೬. ರಾಮನು ರಥವನ್ನು ನಡೆಸು, ನಡೆಸು ಎಂದು ಹೇಳುತ್ತ ರಥವನ್ನು ನಡೆಸಿಸಿದನು. ರಾಮನು ದೂರವಾಗಿ ಹೊರಟುಹೋದ ಮೇಲೆ ಇತ್ತ ದಶರಥನು ಮೂರ್ಛೆಬಿದ್ದನು.

೪೭. ಹುಡುಗರು, ಮುದುಕರು ಮೊದಲುಗೊಂಡು ಪಟ್ಟಣಿಗರೆಲ್ಲರೂ, ಮುದುಕರಾದ ಬ್ರಾಹ್ಮಣರೂ, ರಾಮ! ನಿಲ್ಲು, ನಿಲ್ಲು, ಎಂದೆನ್ನುತ್ತ ರಥದ ಹಿಂದೆ ಓಡಿದರು.

ರಾಜಾ ರುದಿತ್ವಾ ಸುಚಿರಂ ಮಾಂ ನಯಂತು ಗೃಹಂ ಪ್ರತಿ । ಕೌಸಲ್ಯಾಯಾ ರಾಮಮಾತುರಿತ್ಯಾಹ ಪರಿಚಾರಕಾನ್ ॥ ೪೮ ॥
ಕಿಂಚಿತ್ಕಾಲಂ ಭವೇತ್ತತ್ರ ಜೀವನಂ ದುಃಖಿತಸ್ಯ ಮೇ । ಅತ ಊರ್ಧ್ವಂ ನ ಜೀವಾಮಿ ಚಿರಂ ರಾಮಂ ವಿನಾ ಕೃತಃ ॥ ೪೯ ॥
ತತೋ ಗೃಹಂ ಪ್ರವಿಶ್ಯೈವ ಕೌಸಲ್ಯಾಯಾಃ ಪಪಾತ ಹ । ಮೂರ್ಛಿತಶ್ಚಾಚಿರಾದ್ಬುಧ್ವಾ ತೂಷ್ಣೀಮೇವಾವತಸ್ಥಿವಾನ್ ॥ ೫೦ ॥
ರಾಮಸ್ತು ತಮಸಾತೀರಂ ಗತ್ವಾ ತತ್ರಾವಸತ್ಸುಖೀ । ಜಲಂ ಪ್ರಾಶ್ಯ ನಿರಾಹಾರೋ ವೃಕ್ಷಮೂಲೇಽಸ್ವಪದ್ವಿಭುಃ ॥ ೫೧ ॥

---

೪೮. ರಾಜನು ಬಹಳ ಹೊತ್ತು ಅತ್ತು ರಾಮನ ತಾಯಿಯಾದ ಕೌಸಲ್ಯೆಯದ ಮನೆಗೆ ನನ್ನನ್ನು ಕರೆದುಕೊಂಡು ಹೋಗಿರಿ. ಸಾವಕಾಶ ಮಾಡಬೇಡಿರಿ.

೪೯. ಅಲ್ಲಿಯೂಕೂಡ ದುಃಖಗೊಂಡೇ ಆ ಸ್ವಲ್ಪಕಾಲವಾದರೂ ಇರುತ್ತೇನೆ. ರಾಮನು ನನ್ನನ್ನು ಬಿಟ್ಟು ಹೋದುದರಿಂದ ಬಹುದಿನಗಳು ನಾನು ಬದುಕಲಾರೆ.

೫೦. ಅನಂತರ ಪರಿಚಾರಕರು ಹಾಗೆಯೇ ಕರೆದುಕೊಂಡು ಕೌಸಲ್ಯೆಯ ಮನೆಗೆ ಹೋಗಲು, ಅಲ್ಲಿಗೆ ಹೋಗಿ ಬಿದ್ದುಬಿಟ್ಟನು. ಮತ್ತು ಮೂರ್ಛೆಗೊಂಡನು. ಬಹುಹೊತ್ತಿನಮೇಲೆ ಎಚ್ಚತ್ತರೂ ಯಾವ ಮಾತನ್ನೂ ಆಡದೆ ಸುಮ್ಮನಿದ್ದನು.

೫೧. ಇತ್ತ ರಾಮನು ಕಾಡಿಗೆ ಹೋಗುತ್ತ ತಮಸಾ ನದಿಯ ದಡಕ್ಕೆ ಹೋಗಿ ಆಲ್ಲಿ ಆ ದಿನ ನೀರನ್ನುಮಾತ್ರ ಕುಡಿದು ಆಹಾರವಿಲ್ಲದೆ ಒಂದು ಮರದ ಬುಡದಲ್ಲಿ ಸುಖವಾಗಿ ಮಲಗಿಕೊಂಡನು.

ಸೀತಯಾ ಸಹ ಧರ್ಮಾತ್ಮಾ ಧನುಷ್ಪಾಣಿಸ್ತು ಲಕ್ಷ್ಮಣಃ । ಪಾಲಯಾಮಾಸ ಧರ್ಮಜ್ಞಸ್ಸುಮಂತ್ರೇಣ ಸಮನ್ವಿತಃ ॥ ೫೨ ॥
ಪೌರಾಸ್ಸರ್ವೇ ಸಮಾಗತ್ಯ ಸ್ಥಿತಾಸ್ತಸ್ಯಾವಿದೂರತಃ । ಶಕ್ತಾ ರಾಮಂ ಪುರಂ ನೇತುಂ ನೋ ಚೇದ್ಗಚ್ಛಾಮಹೇ ವನಂ ॥ ೫೩ ॥
ಇತಿ ನಿಶ್ಚಯಮಾಜ್ಞಾಯ ತೇಷಾಂ ರಾಮೋತಿವಿಸ್ಮಿತಃ । ನಾಹಂ ಗಚ್ಛಾಮಿ ನಗರಮೇತೇ ವೈ ಕ್ಲೇಶಭಾಗಿನಃ ॥ ೫೪ ॥
ಭವಿಷ್ಯಂತೀತಿ ನಿಶ್ಚಿತ್ಯ ಸುಮಂತ್ರಮಿದಮಬ್ರವೀತ್ । ಇದಾನೀಮೇವ ಗಚ್ಛಾಮಸ್ಸುಮಂತ್ರ ರಥಮಾನಯ ॥ ೫೫ ॥

---

೫೨ ಈ ರಾಮನ ಜೊತೆಯಲ್ಲಿ ಸೀತೆಯೂ ಮಲಗಿದಳು. ಧರ್ಮವನ್ನು ಬಲ್ಲ ಲಕ್ಷ್ಮಣನು ಧನುಸ್ಸನ್ನು ಹಿಡಿದು ಸಿದ್ಧನಾಗಿ, ಅವರಿಗೆ ಯಾವ ತೊಂದರೆಯೂ ಬಾರದಂತೆ ಕಾಪಾಡುತ್ತಿದ್ದನು. ಸುಮಂತ್ರನೂ ಈ ಲಕ್ಷ್ಮಣನ ಜೊತೆಯಲ್ಲಿದ್ದನು.

೫೩. ಬಹುಮಂದಿ ಪಟ್ಟಣಿಗರೂ ಅವನ ಜೊತೆಯಲ್ಲಿ ಬಂದು ಅವನಿಗಿಂತಲೂ ಸ್ವಲ್ಪ ದೂರದಲ್ಲಿ ನಿಂತರು. ನಾವೆಲ್ಲರೂ ಸೇರಿ ರಾಮನನ್ನು ಊರಿಗೆ ಕರೆದುಕೊಂಡು ಹೋಗೋಣ. ಅದಾಗದಿದ್ದರೆ ನಾವೂ ಕಾಡಿಗೇ ಹೋಗೋಣ ಎಂದುಕೊಳ್ಳುತ್ತಿದ್ದರು.

೫೪-೫೫. ಈ ಪಟ್ಟಣಿಗರ ಈ ಧೃಡವಾದ ಮನಸ್ಸನ್ನು ರಾಮನು ತಿಳಿದು ಬಹು ಆಶ್ಚರ್ಯಗೊಂಡನು. ನಾನು ಪಟ್ಟಣಕ್ಕೆ ಹೋಗುವುದೇಇಲ್ಲ. ಪಾಪ! ಇವರುಮಾತ್ರ ಕಷ್ಟಪಡುತ್ತಾರೆಯಲ್ಲ! ಎಂದು ನಿಶ್ಚಯಿಸಿಕೊಂಡು ಸುಮಂತ್ರನನ್ನು ಕುರಿತು ಇಂತೆಂದನು. ಎಲೈ ಸುಮಂತ್ರನೇ! ರಥವನ್ನು ಸಿದ್ಧಪಡಿಸಿ ತೆಗೆದುಕೊಂಡು ಬಾ. ಈಗಲೇ ಕಾಡಿಗೆ ಹೋಗೋಣ ಎಂದನು.

ಇತ್ಯಾಜ್ಞಪ್ತಸ್ಸುಮಂತ್ರೋಽಪಿ ರಥಂ ವಾಹೈರಯೋಜಯತ್ । ಆರುಹ್ಯ ರಾಮಸ್ಸೀತಾ ಚ ಲಕ್ಷ್ಮಣೋಽಪಿ ಯಯುರ್ದ್ರುತಂ ॥೫೬॥

ಅಯೋಧ್ಯಾಭಿಮುಖಂ ಗತ್ವಾ ಕಿಂಚಿದ್ದೂರಂ ತತೋ ಯಯುಃ । ತೇಽಪಿ ರಾಮಮದೃಷ್ಟ್ವೈವ ಪ್ರಾತರುತ್ಥಾಯ ದುಃಖಿತಾಃ ॥೫೭॥

ರಥನೇಮಿಗತಂ ಮಾರ್ಗಂ ಪಶ್ಯಂತಸ್ತೇ ಪುರಂ ಯಯುಃ । ಹೃದಿ ರಾಮಂ ಸಸೀತಂ ತೇ ಧ್ಯಾಯಂತಸ್ತಸ್ಥುರನ್ವಹಂ ॥ ೫೮ ॥

ಸುಮಂತ್ರೋಽಪಿ ರಥಂ ಶೀಘ್ರಂ ಚೋದಯಾಮಾಸ ಸಾದರಂ । ಸ್ಫೀತಾನ್ಜನಪದಾನ್ ಪಶ್ಯನ್ ರಾಮಸ್ಸೀತಾಸಮನ್ವಿತಃ ॥ ೫೯ ॥

---

೫೬. ಸುಮಂತ್ರನು ಅವನ ಅಪ್ಪಣೆಯಂತೆ ರಥಕ್ಕೆ ಕುದುರೆಗಳನ್ನು ಕಟ್ಟಿ ಸಿದ್ಧಪಡಿಸಿದನು. ರಾಮ, ಲಕ್ಷ್ಮಣ, ಸೀತೆಯರು ಆ ರಥವನ್ನು ಹತ್ತಿ ಬೇಗನೆ ಕಾಡಿಗೆ ಹೊರಟರು.

೫೭. ಅಯೋಧ್ಯೆಗೆ ಹೋಗುವಂತೆಯೇ ಸ್ವಲ್ಪದೂರ ಹೋಗಿ ಹಿಂದಿರುಗಿ ಹೋದರು. ಆನಂತರ ಬೇರೆಯ ಕಡೆಗೆ ಹೊರಟು ಹೋದರು. ಆ ಪಟ್ಟಣಿಗರು ಬೆಳಿಗ್ಗೆ ಎದ್ದು ರಾಮನನ್ನು ಕಾಣದೆ ದುಃಖಗೊಂಡರು.

೫೮. ರಥವು ಹೋದ ಚಕ್ರದ ಗುರುತನ್ನು ಹಿಡಿದುಕೊಂಡು ಅದೇ ದಾರಿಯಲ್ಲಿ ಊರಿಗೆ ಹೋಗುತ್ತ ಕೊನೆಗೆ ಊರನ್ನು ಸೇರಿದರು. ಆದರೂ ಆ ಪಟ್ಟಣಿಗರು ರಾಮ, ಲಕ್ಷ್ಮಣ, ಸೀತೆಯರನ್ನೇ ದಿನವೂ ನೆನೆಸಿಕೊಳ್ಳುತ್ತ ಇದ್ದುಕೊಂಡಿರುತ್ತಿದ್ದರು.

೫೯. ಇತ್ತ ಸುಮಂತ್ರನು ರಥವನ್ನು ಮುಂದಕ್ಕೆ ಸರಾಗವಾಗಿ ಬೇಗನೆ ನಡೆಸಿಕೊಂಡು ಹೋದನು. ರಾಮನು ಸೀತಾ ಲಕ್ಷ್ಮಣರೊಡನೆ ಹೋಗುತ್ತ ಪೈರುಪಚ್ಚೆಗಳಿಂದ ತುಂಬಿ ಉತ್ಕೃಷ್ಟವಾಗಿರುವ ಅಲ್ಲಿ ಕಾಣುವ ದೇಶಗಳನ್ನು ನೋಡುತ್ತ ಹೊರಟರು.

ಗಂಗಾತೀರಂ ಸಮಾಗಚ್ಛಚ್ಛೃಂಗಿವೇರಾವಿದೂರತಃ । ಗಂಗಾಂ ದೃಷ್ಟ್ವಾ ನಮಸ್ಕೃತ್ಯ ಸ್ನಾತ್ವಾ ಸಾನಂದಮಾನಸಃ ॥ ೬೦ ॥

ಶಿಂಶುಪಾವೃಕ್ಷಮೂಲೇ ಸ ನಿಷಸಾದ ರಘೂತ್ತಮಃ । ತತೋ ಗುಹೋ ಜನೈಃ ಶ್ರುತ್ವಾ ರಾಮಾಗಮಮಹೋತ್ಸವಂ ॥ ೬೧ ॥

ಸಖಾಯಂ ಸ್ವಾಮಿನಂ ದ್ರಷ್ಟುಂ ಹರ್ಷಾತ್ತೂರ್ಣಂ ಸಮಾಪತತ್ । ಫಲಾನಿ ಮಧುಪುಷ್ಪಾದಿ ಗೃಹೀತ್ವಾ ಭಕ್ತಿಸಂಯುತಃ ॥ ೬೨ ॥

ರಾಮಸ್ಯಾಗ್ರೇ ವಿನಿಕ್ಷಿಪ್ಯ ದಂಡವತ್ಪ್ರಾಪತದ್ಭುವಿ । ಗುಹಮುತ್ಥಾಪ್ಯ ತಂ ತೂರ್ಣಂ ರಾಘವಃ ಪರಿಷಸ್ವಜೇ ॥ ೬೩ ॥

---

೬೦. ಶೃಂಗಬೇರ ಪುರಕ್ಕೆ ಸ್ವಲ್ಪ ಹತ್ತಿರದಲ್ಲಿರುವ ಗಂಗೆಯ ತಡಿಗೆ ಹೋದನು. ಅಲ್ಲಿ ಗಂಗೆಯನ್ನು ನೋಡಿ ಅದಕ್ಕೆ ನಮಸ್ಕರಿಸಿದನು.

೬೧–೬೨. ಮತ್ತು ಅದರಲ್ಲಿ ಸ್ನಾನಮಾಡಿ ಬಹು ಸಂತೋಷಗೊಂಡು ಒಂದು ಆಲದ ಮರದ ಕೆಳಗೆ ಕುಳಿತನು. ನಿಷಾದ ರಾಜನಾದ ಗುಹನು ರಾಮನು ಬಂದಿರುವುದನ್ನು ತಿಳಿದು ಸ್ನೇಹಿತನೂ, ಸ್ವಾಮಿಯೂ ಆದ ರಾಮನನ್ನು ನೋಡಲು ಸಂತೋಷದಿಂದ ಬೇಗ ಬಂದನು. ಬರುವಾಗ ಭಕ್ತಿಯಿಂದ ಹಣ್ಣುಗಳನ್ನೂ, ಜೇನನ್ನೂ, ಹೂವನ್ನೂ ತಂದನು.

೬೩. ಇವೆಲ್ಲವನ್ನೂ ರಾಮನ ಮುಂದಿಟ್ಟು ಭಕ್ತಿಯಿಂದ ದೀರ್ಘದಂಡನಮಸ್ಕಾರವನ್ನು ಮಾಡಿದನು. ರಾಮನು ಗುಹನನ್ನು ಮೇಲಕ್ಕೆಬ್ಬಿಸಿ ಆಲಿಂಗಿಸಿಕೊಂಡನು. ಮತ್ತು ಕುಶಲಪ್ರಶ್ನೆಯನ್ನು ಮಾಡಿದನು.

ಸಂಪೃಷ್ಟಕುಶಲೋ ರಾಮಂ ಗುಹಃ ಪ್ರಾಂಜಲಿರಬ್ರವೀತ್ । ಧನ್ಯೋಽಹಮದ್ಯ ಮೇ ಜನ್ಮ ನೈಷಾದಂ ಲೋಕಪಾವನಂ ॥ ೬೪ ॥

ಬಭೂವ ಪರಮಾನಂದಸ್ಸ್ಪೃಷ್ಟ್ವಾ ತೇಽಂಗಂ ರಘೂತ್ತಮ । ನೈಷಾದರಾಜ್ಯಮೇತತ್ತೇ ಕಿಂಕರಸ್ಯ ರಘೂದ್ವಹ ॥ ೬೫ ॥

ತ್ವದಧೀನಂ ವಸನ್ನತ್ರ ಪಾಲಯಾಸ್ಮಾನ್ರಘೂತ್ತಮ । ಆಗಚ್ಛ ಯಾಮೋ ನಗರಂ ಪಾವನಂ ಕುರು ಮೇ ಗೃಹಂ ॥ ೬೬ ॥

ಗೃಹಾಣ ಫಲಮೂಲಾನಿ ತ್ವದರ್ಥಂ ಸಂಚಿತಾನಿ ಮೇ । ಅನುಗೃಹ್ಣೀಷ್ವ ಭಗವನ್ದಾಸಸ್ತೇಽಹಂ ಸುರೋತ್ತಮ ॥ ೬೭ ॥

---

೬೪. ಆಗ ಗುಹನು ರಾಮನನ್ನು ಕುರಿತು ಇಂತೆಂದನು. ಎಲೈ ರಾಮನೆ! ನಾನು ಈಗ ಧನ್ಯನು. ನಿಷಾದರ ಜಾತಿಯಲ್ಲಿ ಹುಟ್ಟಿದ ಈ ಜನ್ಮವು ಈಗ ಲೋಕಪಾವನವಾಯಿತು.

೬೫. ಆಲಿಂಗನವನ್ನು ಮಾಡಿ ನಿನ್ನ ಅವಯವಗಳನ್ನು ಮುಟ್ಟಿದುದರಿಂದ ಆನಂದಭರಿತನಾದೆನು. ಎಲೈ ರಘೂತ್ತಮನೆ! ಈ ನೈಷಾದ ರಾಜ್ಯವು ನಿನ್ನ ಅಧೀನವಾಗಿದೆ. ನಾನು ನಿನ್ನ ಸೇವಕನಾಗಿದ್ದೇನೆ.

೬೬. ಇಲ್ಲೇ ರಾಜ್ಯಭಾರಮಾಡುತ್ತ ನಮ್ಮನ್ನು ರಕ್ಷಿಸುತ್ತ ಸುಖವಾಗಿರು. ಬಾ. ನಮ್ಮೂರಿಗೆ ಹೋಗೋಣ. ನನ್ನ ಮನೆಯನ್ನು ಹೊಂದಿ ನಿನ್ನ ಪಾದದ ಧೂಳಿನಿಂದ ಪವಿತ್ರವನ್ನಾಗಿ ಮಾಡು.

೬೭. ನಿನಗೋಸ್ಕರ ತಂದಿರುವ ಈ ಗೆಡ್ಡೆ ಗೆಣಸುಗಳನ್ನು ತೆಗೆದುಕೋ. ನನ್ನ ಮೇಲೆ ಅನುಗ್ರಹವನ್ನುಮಾಡು. ಎಲೈ ರಾಮನೇ! ನಾನು ನಿನಗೆ ದಾಸನು

ರಾಮಸ್ತಮಾಹ ಸುಪ್ರೀತೋ ವಚನಂ ಶೃಣು ಮೇ ಸಖೇ । ನ ವೇಕ್ಷ್ಯಾಮಿ ಗೃಹಂ ಗ್ರಾಮಂ ನವ ವರ್ಷಾಣಿ ಪಂಚ ಚ ॥ ೬೮ ॥

ದತ್ತಮನ್ಯೇನ ನೋ ಭುಂಜೇ ಫಲಮೂಲಾದಿ ಕಿಂಚನ । ರಾಜ್ಯಂ ಮಮೈತತ್ತೇ ಸರ್ವಂ ತ್ವಂ ಸಖಾ ಮೇತಿವಲ್ಲಭಃ ॥ ೬೯ ॥

ವಟಕ್ಷೀರಂ ಸಮಾನಾಯ್ಯ ಜಟಾಮುಕುಟಮಾದರಾತ್ । ಬಬಂಧ ಲಕ್ಷ್ಮಣೇನಾಥ ಸಹಿತೋ ರಘುನಂದನಃ ॥ ೭೦ ॥

ಜಲಮಾತ್ರಂ ತು ಸಂಪ್ರಾಶ್ಯ ಸೀತಯಾ ಸಹ ರಾಘವಃ । ಆಸ್ತೃತಂ ಕುಶಪರ್ಣಾದ್ಯೈಶ್ಶಯನಂ ಲಕ್ಷ್ಮಣೇನ ಹಿ ॥ ೭೧ ॥

---

೬೮. ಆಗ ರಾಮನು ಅವನನ್ನು ಕುರಿತು ಇಂತೆಂದನು. ಎಲೈ ಸ್ನೇಹಿತನೇ! ನನ್ನಮಾತನ್ನು ಕೇಳು. ನಾನು ಗ್ರಾಮವನ್ನಾಗಲೀ, ಮನೆಯನ್ನಾಗಲೀ, ಹದಿನಾಲ್ಕುವರುಷಗಳವರೆಗೂ ಪ್ರವೇಶಿಸುವಂತಿಲ್ಲ.

೬೯. ಬೇರೆಯವರು ಕೊಟ್ಟ ಹಣ್ಣು ಹಂಪಲು ಪದಾರ್ಥಗಳನ್ನು ತಿನ್ನುವುದೂ ಇಲ್ಲ. ನಿನ್ನ ರಾಜ್ಯ ಮೊದಲಾದುವೆಲ್ಲವೂ ನನ್ನದೇಸರಿ. ನೀನು ನನಗೆ ಬಹು ಪ್ರೀತಿಪಾತ್ರನಾದ ಸ್ನೇಹಿತನು ಎಂದನು.

೭೦. ಅನಂತರ ರಾಮನು ಆಲದ ಹಾಲನ್ನು ತಂದು ತಲೆಯ ಕೂದಲಿಗೆ ಹಾಕಿ ಜಟೆಗಳನ್ನು ಕಟ್ಟಿಕೊಂಡನು. ಲಕ್ಷ್ಮಣನೂ ಕೂಡ ಅವನಂತೆಯೇ ಮಾಡಿಕೊಂಡನು.

೭೧. ರಾಮನು ಅಲ್ಲಿ ನೀರನ್ನು ಮಾತ್ರ ಕುಡಿದು ಸೀತೆಯೊಡನೆ ಇದ್ದನು. ಲಕ್ಷ್ಮಣನು ಆ ರಾಮನಿಗೆ ಎಲೆ, ಹುಲ್ಲು ಇವುಗಳನ್ನು ತಂದು ಹಾಸಿಗೆಯನ್ನು ಮಾಡಿಕೊಟ್ಟನು.

ಉವಾಸ ತತ್ರ ನಗರಪ್ರಾಸಾದಾಗ್ರೇ ಯಥಾ ಪುರಾ । ಸುಷ್ವಾಪ ತತ್ರ ವೈದೇಹ್ಯಾ ಪರ್ಯಂಕ ಇವ ಸಂಸ್ಕೃತೇ ॥ ೭೨ ॥

ತತೋ ವಿದುರೇ ಪರಿಗೃಹ್ಯ ಚಾಪಂ ಸಬಾಣತೂಣೀರಧನುಸ್ಸ ಲಕ್ಷ್ಮಣಃ ।
ರರಕ್ಷ ರಾಮಂ ಪರಿತೋ ವಿಪಶ್ಯ ಗುಹೇನ ಸಾರ್ಧಂ ಸಶರಾಸನೇನ ॥ ೭೩ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ
ಪಂಚಮಸ್ಸರ್ಗ ಸಮಾಪ್ತಃ

---

೭೨. ಆ ಜಾಗದಲ್ಲಿ ತಾನು ಹಿಂದೆ ಅರಮನೆಯ ಮಹಡಿಯಮೇಲೆ ಹೇಗೆ ಸುಖದಿಂದಿದ್ದನೋ ಅಂತೆಯೇ ಇದ್ದನು. ಅಲ್ಲಿನ ಹುಲ್ಲು ಹಾಸಿಗೆಯಮೇಲೆ ಊರಿನಲ್ಲಿದ್ದ ಮಂಚದಮೇಲೆ ಸುಪ್ಪತ್ತಿಗೆಯಲ್ಲಿ ಮಲಗಿದ್ದಂತೆಯೇ ಇಲ್ಲಿಯೂ ಸೀತೆಯೊಡನೆ ಮಲಗಿದನು.

೭೩. ಲಕ್ಷ್ಮಣನು ಧನುರ್ಬಾಣಗಳನ್ನು ಸಿದ್ಧಮಾಡಿಕೊಂಡು ಸ್ವಲ್ಪದೂರದಲ್ಲಿಯೇ ಇದ್ದುಕೊಂಡು ಎಲ್ಲಕಡೆಯಲ್ಲಿಯೂ ನೋಡಿಕೊಳ್ಳುತ್ತಾ ಗುಹನೊಡನೆ ಆ ರಾಮನನ್ನು ಬಹುಜಾಗರೂಕತೆಯಿಂದ ರಕ್ಷಿಸುತ್ತಿದ್ದನು.

ಇಂತು ಶ್ರೀಮದಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ ಐದನೆಯ ಸರ್ಗವು.

॥ ಶ್ರೀರಸ್ತು ॥

ಅಥ ಅಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಷಷ್ಠಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಅಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದ ಆರನೆಯ ಸರ್ಗದಲ್ಲಿ ಮಾಡಬೇಕಾದ ಸಂಕಲ್ಪ ನ್ಯಾಸ ಧ್ಯಾನ ಜಪಗಳ ಕ್ರಮವು.

ಪೂರ್ವೋಕ್ತವಿಧಿನಾ ಅಯೋಧ್ಯಾಕಾಂಡೇ ಷಷ್ಠಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ ಇತಿಸಂಕಲ್ಪ್ಯ ॥

ಹಿಂದೆ ಹೇಳಿದ ವಿಧಿಯಂತೆ ಅಯೋಧ್ಯಾಕಾಂಡದ ಆರನೆಯ ಸರ್ಗದಲ್ಲಿ ನ್ಯಾಸ, ಧ್ಯಾನ, ಜಪಗಳನ್ನು ಮಾಡುತ್ತೇನೆ. ಎಂಬುದಾಗಿ ಸಂಕಲ್ಪವನ್ನು ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ರಾಂ ರೀಂ ಘುಂ ಅಂಗುಷ್ಠಾಭ್ಯಾಂ ನಮಃ
ಓಂ ರಾಂ ರೀಂ ಘುಂ ತರ್ಜನೀಭ್ಯಾಂ ನಮಃ
ಓಂ ರಾಂ ರೀಂ ಘುಂ ಮಧ್ಯಮಾಭ್ಯಾಂ ನಮಃ
ಓಂ ರಾಂ ರೀಂ ಘುಂ ಅನಾಮಿಕಾಭ್ಯಾಂ ನಮಃ
ಓಂ ರಾಂ ರೀಂ ಘುಂ ಕನಿಷ್ಠಿಕಾಭ್ಯಾಂ ನಮಃ
ಓಂ ರಾಂ ರೀಂ ಘುಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಷಡಂಗನ್ಯಾಸವು

ಓಂ ರಾಂ ರೀಂ ಘುಂ ಹೃದಯಾಯ ನಮಃ
ಓಂ ರಾಂ ರೀಂ ಘುಂ ಶಿರಸೇ ಸ್ವಾಹಾ
ಓಂ ರಾಂ ರೀಂ ಘುಂ ಶಿಖಾಯೈ ವಷಟ್
ಓಂ ರಾಂ ರೀಂ ಘುಂ ಕವಚಾಯ ಹುಂ
ಓಂ ರಾಂ ರೀಂ ಘುಂ ನೇತ್ರತ್ರಯಾಯ ವೌಷಟ್
ಓಂ ರಾಂ ರೀಂ ಘುಂ ಅಸ್ತ್ರಾಯ ಫಟ್

ಓಂ ರಾಂ ರೀಂ ಘುಂ ಇತಿ ದಿಗ್ಬಂಧಃ

ಓಂ ರಾಂ ರೀಂ ಘುಂ ಎಂದು ದಿಗ್ಬಂಧವು

॥ ಅಥ ಧ್ಯಾನಂ ॥

ಧ್ಯಾನವು

ಸುಪ್ತಂ ರಾಮಂ ಸಮಾಲೋಕ್ಯ ಗುಹಃ ಸೋಽಶ್ರುಪರಿಪ್ಲುತಃ । ಲಕ್ಷ್ಮಣಂ ಪ್ರಾಹ ವಿನಯಾತ್ ಭ್ರಾತಃ ಪಶ್ಯಸಿ ರಾಘವಂ ॥

ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಪಾರಾಯಣಾಂತೇ ಪುನಃ ಷಡಂಗನ್ಯಾಸಂ ಕೃತ್ವಾ ಓಂ ರಾಂ ರೀಂ ಘುಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್

ಪಾರಾಯಣವಾದಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ರಾಂ ರೀಂ ಘುಂ ಇತಿ ದಿಗ್ವಿಮೋಕಃ ಎಂದೆನ್ನಬೇಕು.
ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

॥ ಇತಿ ಶ್ರೀ ಅಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಷಷ್ಠಸರ್ಗೇ ನ್ಯಾಸ ಧ್ಯಾನ ಜಪಕ್ರಮಃ ॥

ಇಂತು ಅಯೋಧ್ಯಾಕಾಂಡದ ಆರನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಷಷ್ಠಸ್ಸರ್ಗಃ

॥ ಶ್ರೀ ಮಹಾದೇವ ಉವಾಚ ॥

ಸುಪ್ತಂ ರಾಮಂ ಸಮಾಲೋಕ್ಯ ಗುಹಸ್ಸೋಽಶ್ರುಪರಿಪ್ಲುತಃ । ಲಕ್ಷ್ಮಣಂ ಪ್ರಾಹ ವಿನಯಾದ್ಭ್ರಾತಃ ಪಶ್ಯಸಿ ರಾಘವಂ ॥ ೧ ॥

ಶಯಾನಂ ಕುಶಪತ್ರೌಘಸಂಸ್ತರೇ ಸೀತಯಾ ಸಹ । ಯಶ್ಶೇತೇ ಸ್ವರ್ಣಪರ್ಯಂಕೇ ಸ್ವಾಸ್ತೀರ್ಣೇ ಭವನೋತ್ತಮೇ ॥ ೨ ॥

ಅಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ ಆರನೆಯ ಸರ್ಗವು.

೧. ಮಹಾದೇವನು ಹೇಳಿದನು-ಶ್ರೀರಾಮನು ಹೀಗೆ ಮಲಗಿರುವುದನ್ನು ನೋಡಿ ಗುಹನು ದುಃಖದಿಂದ ಕಣ್ಣೀರು ಬಿಟ್ಟನು. ಮತ್ತು ಲಕ್ಷ್ಮಣನನ್ನು ಕುರಿತು ಅಣ್ಣ! ರಾಮನನ್ನು ನೋಡಿದೆಯಾ.

೨. ಉತ್ತಮವಾದ ಮಹಡಿಯಮನೆಯಲ್ಲಿ ಚೆನ್ನಾಗಿ ಮೆತ್ತೆ ಮುಂತಾದುವನ್ನು ಹಾಸಿರುವ ಚಿನ್ನದ ಮಂಚದಮೇಲೆ ಮಲಗಿರುತ್ತಿದ್ದ ರಾಮನು, ಈಗ ದರ್ಭೆ, ಎಲೆಗಳು ಇವುಗಳಿಂದ ಮಾಡಲ್ಪಟ್ಟ ಹಾಸಿಗೆಯಮೇಲೆ ಸೀತೆಯೊಡನೆ ಮಲಗಿರುವನು ಎಂದು ಬಹು ದುಃಖಪಟ್ಟನು.

ಕೈಕೇಯಿಃ ರಾಮದುಃಖಸ್ಯ ಕಾರಣಂ ವಿಧಿನಾ ಕೃತಾ । ಮಂಥರಾಬುದ್ಧಿಮಾಸ್ಥಾಯ ಕೈಕೇಯೀ ಪಾಪಮಾಚರತ್ ॥ ೩ ॥

ತಚ್ಛ್ರುತ್ವಾ ಲಕ್ಷ್ಮಣಃ ಪ್ರಾಹ ಸಖೇ ಶೃಣು ವಚೋ ಮಮ । ಕಃ ಕಸ್ಯ ಹೇತುರ್ದುಃಖಸ್ಯ ಕಶ್ಚ ಹೇತುಸ್ಸುಖಸ್ಯ ವಾ ।
ಸ್ವಪೂರ್ವಾರ್ಜಿತಕರ್ಮೈವ ಕಾರಣಂ ಸುಖದುಃಖಯೋಃ ॥ ೪ ॥

ಸುಖಸ್ಯ ದುಃಖಸ್ಯ ನ ಕೋಽಪಿ ದಾತಾ ಪರೋ ದದಾತೀತಿ ಕುಬುದ್ಧಿರೇಷಾ ।
ಅಹಂ ಕರೋಮೀತಿ ವೃಥಾಭಿಮಾನಃ ಸ್ವಕರ್ಮಸೂತ್ರಗ್ರಥಿತೋ ಹಿ ಲೋಕಃ ॥ ೫ ॥

---

೩. ಮತ್ತೆ ಗುಹನು ಲಕ್ಷ್ಮಣನನ್ನು ಕುರಿತು ಎಲೈ ಲಕ್ಷ್ಮಣನೇ! ರಾಮನ ದುಃಖಕ್ಕೆ ದೇವರು ಕೈಕೇಯಿಯನ್ನೇ ಕಾರಣವನ್ನಾಗಿ ಮಾಡಿದನು. ಆ ಕೈಕೇಯಿಯು ಈ ಮಂಥರೆಯ ಮಾತಿನಿಂದ ದುಷ್ಟಳಾಗಿ ರಾಮನಿಗೆ ಈರೀತಿಯಾದ ದುಃಖವನ್ನು ಕೊಟ್ಟಳು. ಎಂದನು.

೪. ಅದನ್ನು ಕೇಳಿ ಲಕ್ಷ್ಮಣನು ಇಂತೆಂದನು:—ಎಲೈ ಸ್ನೇಹಿತನಾದ ಗುಹನೆ! ನನ್ನ ಮಾತನ್ನು ಕೇಳು, ಯಾವನು ಯಾವನ ದುಃಖಕ್ಕೆ ಕಾರಣನು? ಯಾವನು ಯಾವನ ಸುಖಕ್ಕೆ ಕಾರಣನು? ಯಾವನು ಯಾವನಿಗೆ ಏನನ್ನು ಕೊಡಬಲ್ಲನು? ಮನುಷ್ಯನಿಗೆ ಅವನ ಹಿಂದಿನ ಜನ್ಮದ ಪಾಪ ಪುಣ್ಯಗಳೇ ಸುಖದುಃಖಗಳಿಗೆ ಕಾರಣಗಳು.

೫. ಸುಖವನ್ನಾಗಲೀ ದುಃಖವನ್ನಾಗಲೀ ಯಾವನೂ ಕೊಡಲಾರನು. ಮತ್ತೊಬ್ಬನು ಅದನ್ನು ಕೊಡುವನು ಎಂಬುದು ದಡ್ಡತನದ ಮಾತು. ನಾನು ಮಾಡುತ್ತೇನೆ. ನಾನು ಕೊಡುತ್ತೇನೆ. ಎಂಬುದು ಉಪಯೋಗವಿಲ್ಲದ ಅಭಿಮಾನದ ಮಾತು. ಪ್ರಾಣಿಯು ತಾನುಮಾಡಿದ ಕರ್ಮಗಳಿಗೆ ಅಧೀನವಾಗಿದೆ. ಎಂದು ತಿಳಿ. ಅದು ಅದರಂತೆಯೇ ನಡೆಯಬೇಕು.

ಸುಹೃನ್ಮಿತ್ರಾರ್ಯುದಾಸೀನದ್ವೇಷ್ಯಮಧ್ಯಸ್ಥಬಾಂಧವಾಃ । ಸ್ವಯಮೇವಾಚರನ್ಕರ್ಮ ತಥಾ ತತ್ರ ವಿಭಾವ್ಯತೇ ॥ ೬ ॥

ಸುಖಂ ವಾ ಯದಿ ವಾ ದುಃಖಂ ಸ್ವಕರ್ಮವಶಗೋ ನರಃ । ಯದ್ಯದ್ಯಥಾಗತಂ ತತ್ತದ್ಭುಕ್ತ್ವಾ ಸ್ವಸ್ಥಮನಾ ಭವೇತ್ ॥ ೭ ॥

ನ ಮೇ ಭೋಗಾಗಮೇ ವಾಂಛಾ ನ ಮೇ ಭೋಗವಿವರ್ಜನೇ । ಆಗಚ್ಛತ್ವಥ ಮಾ ಗಚ್ಛತ್ವಭೋಗವಶಗೋ ಭವೇ ॥ ೮ ॥

ಯಸ್ಮಿನ್ದೇಶೇ ಚ ಕಾಲೇ ಚ ಯಸ್ಮಾದ್ವಾ ಯೇನ ಕೇನ ವಾ । ಕೃತಂ ಶುಭಾಶುಭಂ ಕರ್ಮ ಭೋಜ್ಯಂ ತತ್ತತ್ರ ನಾನ್ಯಥಾ ॥ ೯ ॥

---

೬. ಸ್ನೇಹಿತ, ಮಿತ್ರ, ಶತ್ರು, ಉದಾಸೀನ, ದ್ವೇಷ್ಯ, ಮಧ್ಯಸ್ಥ, ಬಂಧುಗಳು ಇವರೆಲ್ಲರೂ ಅವರವರು ಅವರವರ ಪಾಪಪುಣ್ಯಗಳಿಗನುಸಾರವಾಗಿ ಕೆಲಸಮಾಡುತ್ತಾರೆ ಆದರೆ ನಾವು ಅವರು ಮಾಡಿದುದೆಂದು ಅಭಿಮಾನದಿಂದ ತಿಳಿದುಕೊಳ್ಳುತ್ತೇವೆ.

೭. ಮನುಷ್ಯನು ಸುಖವನ್ನಾಗಲೀ ದುಃಖವನ್ನಾಗಲೀ ತನ್ನ ತನ್ನ ಕರ್ಮಕ್ಕೆ ಅಧೀನನಾಗಿ ಅನುಭವಿಸುತ್ತಾನೆ. ಯಾವ ಯಾವ ಕಾಲದಲ್ಲಿ ದುಃಖಗಳು ಸುಖಗಳು ಬರುತ್ತವೆಯೋ ಆಗಾಗ ಅವನ್ನು ಅನುಭವಿಸಿಸುತ್ತಾ ಯೋಚನೆ ಮಾಡದೆ ಇರಬೇಕು.

೮. ನನಗೆ ಸುಖ ಬರಬೇಕೆಂಬ ಅಪೇಕ್ಷೆಯೂ ಇರುವುದಿಲ್ಲ. ಅಂತೆಯೇ ಅದು ಹೋಗಲಿ ಅದನ್ನು ಬಿಟ್ಟುಬಿಡಬೇಕು. ಎಂಬ ಬುದ್ಧಿಯೂ ಇಲ್ಲ. ಅದು ಬಂದಾಗ ಬರಲಿ, ಬಿಟ್ಟಾಗ ಬಿಡಲಿ. ಆ ಸುಖದುಃಖಗಳ ಭೋಗಗಳಿಗೆ ನಾನು ಅಧೀನನಾಗಿಲ್ಲ.

೯. ಯಾವನು ಯಾವಾಗ ಯಾವದೇಶದಲ್ಲಿ ಯಾವಕಾರಣದಿಂದ ಯಾವ ಯಾವ ಪುಣ್ಯಪಾಪಗಳನ್ನು ಮಾಡುತ್ತಾನೆಯೋ ಅವನು ಅಲ್ಲಿ ಆಗಾಗ ಅದೇಕಾರಣದಿಂದ ಆಯಾಯ ಪುಣ್ಯ ಪಾಪಗಣನ್ನು ಅನುಭವಿಸಬೇಕು. ಬೇರೆರೀತಿಯಾಗಿ ಸಾಧ್ಯವೇ ಇಲ್ಲ.

ಅಲಂ ಹರ್ಷವಿಷಾದಾಭ್ಯಾಂ ಶುಭಾಶುಭಫಲೋದಯೇ । ವಿಧಾತ್ರಾ ವಿಹಿತಂ ಯದ್ಯತ್ತದಲಂಘ್ಯಂ ಸುರಾಸುರೈಃ ॥ ೧೦ ॥

ಸರ್ವದಾ ಸುಖದುಃಖಾಭ್ಯಾಂ ನರಃ ಪ್ರತ್ಯವರುಧ್ಯತೇ । ಶರೀರಂ ಪುಣ್ಯಪಾಪಾಭ್ಯಾಮುತ್ಪನ್ನಂ ಸುಖದುಃಖವತ್ ॥ ೧೧ ॥

ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ । ದ್ವಯಮೇತದ್ಧಿ ಜಂತೂನಾಮಲಂಘ್ಯಂ ದಿನರಾತ್ರಿವತ್ ॥ ೧೨ ॥

ಸುಖಮಧ್ಯೇ ಸ್ಥಿತಂ ದುಃಖಂ ದುಃಖಮಧ್ಯೇ ಸ್ಥಿತಂ ಸುಖಂ । ದ್ವಯಮನ್ಯೋನ್ಯಸಂಯುಕ್ತಂ ಪ್ರೋಚ್ಯತೇ ಜಲಪಂಕವತ್॥ ೧೩ ॥

---

೧೦. ಎಲೈ ಗುಹನೆ ! ಒಳ್ಳೆಯದು ಬಂದಾಗ ಹರ್ಷಪಡುವುದೂ ಬೇಡ. ಕೆಟ್ಟದ್ದು ಬಂದಾಗ ದುಃಖಪಡುವುದೂ ಬೇಡ. ಬ್ರಹ್ಮನು ಯಾವು ಯಾವುದನ್ನು ಯಾವ ಯಾವ ಕಾಲಕ್ಕೆ ಬರುವಂತೆ ಮಾಡಿರುವನೋ ಅವುಗಳು ಆಯಾಕಾಲಕ್ಕೆ ಬರುತ್ತವೆ. ಅದನ್ನು ಸುರರಾಗಲೀ, ಅಸುರರೇ ಆಗಲೀ ತಪ್ಪಿಸಿ ಕೊಳ್ಳಲಾರರು.

೧೧. ಮನುಷ್ಯನಾದವನು ಯಾವಾಗಲೂ ಸುಖದುಃಖಗಳಿಂದಲೇ ಆಕ್ರಮಿಸಲ್ಪಟ್ಟಿರುವನು. ಈ ಶರೀರವು ಪಾಪಪುಣ್ಯಗಳಿಂದಲೇ ಹುಟ್ಟಿರುವುದು ಅದರಿಂದ ಆ ಶರೀರವು ಆ ಪಾಪಪುಣ್ಯಗಳ ರೂಪವಾದ ಸುಖದುಃಖಗಳಿಂದ ಕೂಡಿದುದು.

೧೨. ಸುಖವಾದ ಮೇಲೆ ದುಃಖವೂ ದುಃಖವಾದ ಮೇಲೆ ಸುಖವೂ ಎಡೆಬಿಡದೆ ಬಂದೇ ಬರುತ್ತವೆ. ಪ್ರಾಣಿಗಳು ಈ ಸುಖ ದುಃಖಗಳೆರಡನ್ನೂ ರಾತ್ರಿ ಹಗಲುಗಳಂತೆ ಅನುಭವಿಸದೆ ಮೀರಲಾಗುವುದಿಲ್ಲ.

೧೩. ಸುಖದ ಮಧ್ಯದಲ್ಲಿ ದುಃಖವೂ ದುಃಖದ ಮಧ್ಯದಲ್ಲಿಯೇ ಸುಖವೂ ಇರುವುವು. ಈ ಸುಖ ದುಃಖಗಳೆರಡೂ ನೀರೂ ಕೆಸರೂ ಸೇರಿಕೊಂಡಿರುವಂತೆ ಒಂದಕ್ಕೊಂದು ಯಾವಾಗಲೂ ಸೇರಿಕೊಂಡೇ ಇವೆ.

ತಸ್ಮಾದ್ಧೈರ್ಯೇಣ ವಿದ್ವಾಂಸ ಇಷ್ಟಾನಿಷ್ಟೋಪಪತ್ತಿಷು । ನ ಹೃಷ್ಯಂತಿ ನ ಮುಹ್ಯಂತಿ ಸರ್ವಂ ಮಾಯೇತಿ ಭಾವನಾತ್ ॥ ೧೪ ॥

ಗುಹಲಕ್ಷ್ಮಣಯೋರೇವಂ ಭಾಷತೋರ್ವಿಮಲಂ ನಭಃ । ಬಭೂವ ರಾಮಸ್ಸಲಿಲಂ ಸ್ಪೃಷ್ಟ್ವಾ ಪ್ರಾತಸ್ಸಮಾಹಿತಃ ॥ ೧೫ ॥

ಉವಾಚ ಶೀಘ್ರಂ ಸುದೃಢಾಂ ನಾವಮಾನಯ ಮೇ ಸಖೇ । ಶ್ರುತ್ವಾ ರಾಮಸ್ಯ ವಚನಂ ನಿಷದಾಧಿಪತಿರ್ಗುಹಃ ॥ ೧೬ ॥

ಸ್ವಯಮೇವ ದೃಢಾಂ ನಾವಮಾನಿನಾಯ ಸುಲಕ್ಷಣಾಂ । ಸ್ವಾಮಿನ್ನಾರುಹ್ಯತಾಂ ನೌಕಾ ಸೀತಯಾ ಲಕ್ಷ್ಮಣೇನ ಚ ॥ ೧೭ ॥

---

೧೪. ಹೀಗಿರುವುದರಿಂದ ವಿವೇಕಿಗಳು ಒಳ್ಳೆಯದಾಗಲೀ ಕೆಟ್ಟದ್ದೇ ಆಗಲೀ ಅವು ಬಂದಾಗ ಧೈರ್ಯದಿಂದಿರುತ್ತಾರೆ. ಅವೆಲ್ಲವೂ ಮಾಯೆಯೆಂದು ತಿಳಿದುಕೊಂಡು ಅವರು ವಿವೇಕದಿಂದ ವರ್ತಿಸುತ್ತಾ ದುಃಖಪಡುವುದೂ ಇಲ್ಲ ಸಂತೋಷವನ್ನು ಹೊಂದುವುದೂ ಇಲ್ಲ.

೧೫. ರಾತ್ರಿಯೆಲ್ಲಾ ಗುಹನೂ ಲಕ್ಷ್ಮಣನೂ ಈರೀತಿಯಾಗಿ ಮಾತನಾಡುತ್ತಿದ್ದಂತೆಯೇ ಆಕಾಶವು ನಿರ್ಮಲವಾಗಿ ಬೆಳ್ಳಗಾಯಿತು. ರಾಮನು ಬೆಳಿಗ್ಗೆ ಎದ್ದು ಸ್ನಾನವನ್ನುಮಾಡಿ ಸಂಧ್ಯಾವಂದನೆಯನ್ನು ಮುಗಿಸಿಕೊಂಡು ಗುಹನನ್ನು ಕುರಿತು ಎಲೈ ಸ್ನೇಹಿತನಾದ ಗುಹನೇ! ಗಟ್ಟಿಯಾಗಿರುವ ಒಂದು ದೋಣಿಯನ್ನು ಬೇಗನೆ ತೆಗೆದು ಕೊಂಡು ಬಾ ಎಂದು ಹೇಳಿದನು.

೧೬–೧೭. ನಿಷಾದರಿಗೆ ಒಡೆಯನಾದ ಆ ಗುಹನು ರಾಮನ ಈ ಮಾತನ್ನು ಕೇಳಿ ತಾನೇಹೋಗಿ ಗಟ್ಟಿಯಾಗಿಯೂ, ಚೆನ್ನಾಗಿಯೂ ಇರುವ ಒಂದು ದೋಣಿಯನ್ನು ತಂದನು. ಸ್ವಾಮಿಯೇ! ಇಗೋ ದೋಣಿಯನ್ನು ತಂದಿರುತ್ತೇನೆ. ಲಕ್ಷ್ಮಣ ಸೀತೆಯರೊಡನೆ ಈ ದೋಣಿಗೆ ಹತ್ತು.

ನಾಹಯೇ ಜ್ಞಾತಿಭಿಸ್ಸಾರ್ಧಮಹಮೇವ ಸಮಾಹಿತಃ । ತಥೇತಿ ರಾಘವಸ್ಸೀತಾಮಾರೋಪ್ಯ ಶುಭಲಕ್ಷಣಾಂ ॥ ೧೮ ॥

ಗುಹಸ್ಯ ಹಸ್ತಾವಾಲಂಬ್ಯ ಸ್ವಯಂ ಚಾರುಹದಚ್ಯುತಃ । ಆಯುಧಾದೀ ಸಮಾರೋಪ್ಯ ಲಕ್ಷ್ಮಣೋಪ್ಯಾರೋಹ ಚ ॥ ೧೯ ॥

ಗುಹಸ್ತ್ವರ್ನಾಹಯಾಮಾಸ ಜ್ಞಾತಿಭಿಸ್ಸಹಿತಸ್ಸ್ವಯಂ । ಗಂಗಾಮಧ್ಯಗತಾ ಗಂಗಾಂ ಪ್ರಾರ್ಥಯಾಮಾಸ ಜಾನಕೀ ॥ ೨೦ ॥

ದೇವಿ ಗಂಗೇ ನಮಸ್ತುಭ್ಯಂ ನಿವೃತ್ತಾ ವನವಾಸತಃ । ರಾಮೇಣ ಸಹಿತಾಹಂ ತ್ವಾಂ ಲಕ್ಷ್ಮಣೇನ ಚ ಪೂಜಯೇ ॥ ೨೧ ॥

---

೧೮. ನನ್ನ ಬಂಧುಗಳನ್ನು ಸಹಾಯಕ್ಕೆ ಕರೆದುಕೊಂಡು ನಾನೇನೇ ಆ ದೋಣಿಯನ್ನು ಜಾಗರೂಕತೆಯಿಂದ ನಡೆಸುತ್ತೇನೆ. ಎನ್ನಲು ಶ್ರೀರಾಮನು ಹಾಗೆಯೇ ಆಗಲಿ ಎಂದು ಶುಭಲಕ್ಷಣಗಳುಳ್ಳ ಮಂಗಳಾಂಗಿಯಾದ ಸೀತೆಯನ್ನು ಮೊದಲು ದೋಣಿಯಲ್ಲಿ ಹತ್ತಿಸಿ ಕೂರಿಸಿದನು.

೧೯. ಅನಂತರ ಗುಹನ ಕೈಗಳನ್ನು ಹಿಡಿದುಕೊಂಡು ರಾಮನು ತಾನೂ ಹತ್ತಿದನು. ಲಕ್ಷ್ಮಣನು ತನ್ನ ಮತ್ತು ರಾಮನ ಆಯುಧಗಳನ್ನು ಮೊದಲು ಅದರಲ್ಲಿ ಇರಿಸಿ ಅನಂತರ ತಾನೂ ಹತ್ತಿದನು.

೨೦. ಅನಂತರ ಗುಹನು ತನ್ನ ಹತ್ತಿರದ ಬಂಧುಗಳೊಡನೆ ಸೇರಿಕೊಂಡು ತಾನೇ ಹುಟ್ಟನ್ನು ಹಾಕುತ್ತಾ ದೋಣಿಯನ್ನು ನಡೆಯಿಸಿದನು. ಹೀಗೆ ನಡೆಸುತ್ತಿರುವಲ್ಲಿ ಆ ದೋಣಿಯು ಗಂಗೆಯ ಮಧ್ಯದ ಪ್ರವಾಹಕ್ಕೆ ಹೋಯಿತು. ಆಗ ಜಾನಕಿಯು ಆ ಗಂಗೆಯನ್ನು ಈರೀತಿಯಾಗಿ ಪ್ರಾರ್ಥಿಸಿದಳು.

೨೧. ದೇವಿ ಗಂಗೆಯೇ! ನಿನಗೆ ನಮಸ್ಕಾರವು. ನಾನು ವನವಾಸದಿಂದ ಹಿಂದಿರುಗಿ ಬಂದಮೇಲೆ ರಾಮನನ್ನೂ ಲಕ್ಷ್ಮಣನನ್ನೂ ಜೊತೆಯಲ್ಲಿಟ್ಟುಕೊಂಡು ಅವರೊಡನೆ ನಿನ್ನನ್ನು ಪೂಜಿಸುತ್ತೇನೆ.

ಸುರಾಮಾಂಸೋಪಹಾರೈಶ್ಚ ನಾನಾಬಲಿಭಿರಾದೃತಾ । ಇತ್ಯುಕ್ತ್ವಾ ಪರಕೂಲಂ ತೌ ಶನೈರುತ್ತೀರ್ಯ ಜಗ್ಮತುಃ ॥ ೨೨ ॥
ಗುಹೋಽಪಿ ರಾಘವಂ ಪ್ರಾಹ ಗಮಿಷ್ಯಾಮಿ ತ್ವಯಾ ಸಹ । ಅನುಜ್ಞಾಂ ದೇಹಿ ರಾಜೇಂದ್ರ ನೋ ಚೇತ್ಪ್ರಾಣಾಂಸ್ತ್ಯಜಾಮ್ಯಹಂ ॥
ಶ್ರುತ್ವಾ ನೈಷಾದಿವಚನಂ ಶ್ರೀರಾಮಸ್ತಮಥಾಬ್ರವೀತ್ । ಚತುರ್ದಶಸಮಾಸ್ಸ್ಥಿತ್ವಾ ದಂಡಕೇ ಪುನರಪ್ಯಹಂ ॥ ೨೪ ॥
ಆಯಾಸ್ಯಾಮ್ಯುದಿತಂ ಸತ್ಯಂ ನಾಸತ್ಯಂ ರಾಮಭಾಷಿತಂ । ಇತ್ಯುಕ್ತ್ವಾಲಿಂಗ್ಯ ಭಕ್ತಂ ತಂ ಸಮಾಶ್ವಾಸ್ಯ ಪುನಃ ಪುನಃ ॥ ೨೫ ॥

---

೨೨. ಹೆಂಡ, ಮಾಂಸ, ಭಕ್ಷ್ಯ, ಭೋಜ್ಯ, ಇನ್ನೂ ಅನೇಕವಾದ ನಿವೇದನ ಪದಾರ್ಥಗಳು, ಇವುಗಳನ್ನು ಭಕ್ತಿಯಿಂದಲೂ, ಅಕ್ಕರೆಯಿಂದಲೂ ಸಮರ್ಪಿಸುತ್ತೇನೆ. ಸೀತೆಯು ಹೀಗೆಂದು ಹೇಳುತ್ತಿರುವಂತೆಯೇ ಆ ದೋಣಿಯು ಆಚೆಯ ದಡಕ್ಕೆ ಹೋಯಿತು. ಆಗ ಅವರೆಲ್ಲರೂ ದೋಣಿಯಿಂದ ಮೆತ್ತಗೆ ಇಳಿದು ಹೊರಟರು.

೨೩. ಆಗ ಗುಹನು ಶ್ರೀರಾಮನನ್ನು ಕುರಿತು ಎಲೈ ರಾಜೇಂದ್ರನೆ! ನಿನ್ನೊಡನೆಯೇ ನಾನೂ ಕಾಡಿಗೆ ಬರುತ್ತೇನೆ. ಅದಕ್ಕೆ ಒಪ್ಪಿಗೆಯನ್ನು ಕೊಡು. ಹಾಗೆ ನೀನು ಒಪ್ಪಿಕೊಳ್ಳದಿದ್ದರೆ ನಾನು ಪ್ರಾಣಗಳನ್ನು ಬಿಟ್ಟುಬಿಡುತ್ತೇನೆ. ಎಂದು ವಿಜ್ಞಾಪಿಸಿಕೊಂಡನು.

೨೪. ಶ್ರೀರಾಮನು ಆ ನಿಷಾದನಾದ ಗುಹನ ಮಾತನ್ನುಕೇಳಿ ಎಲೈ ಗುಹನೇ ! ನಾನು ದಂಡಕಾರಣ್ಯದಲ್ಲಿ ಹದಿನಾಲ್ಕುವರ್ಷಗಳ ಕಾಲ ಇದ್ದು ಆ ವನವಾಸವು ಮುಗಿದಮೇಲೆ ಸತ್ಯವಾಗಿಯೂ ಹಿಂದಿರುಗಿಬರುತ್ತೇನೆ. ರಾಮನ ಮಾತು ಸುಳ್ಳಾಗುವುದಿಲ್ಲವೆಂದುತಿಳಿ. ಎಂದುಹೇಳಿದನು.

೨೫. ಈರೀತಿಯಾಗಿ ಹೇಳುತ್ತ ಆತನನ್ನು ಆಲಿಂಗಿಸಿಕೊಂಡು ಮತ್ತೆ ಮತ್ತೆ ಸಮಾಧಾನಪಡಿಸುತ್ತ ಹಿಂದಿರುಗಿಸಿ ಕಳುಹಿಸಿದನು. ಗುಹನೂ ಕೂಡ ಒಲ್ಲದ ಮನಸ್ಸಿನಿಂದ ಬಹಳ ಕಷ್ಟದಿಂದ ಒಪ್ಪಿಕೊಂಡು ಹಿಂದಕ್ಕೆ ಹೋದನು.

ನಿವರ್ತಯಾಮಾಸ ಗುಹಂ ಸೋಽಪಿ ಕೃಚ್ಛ್ರಾದ್ಯಯೌ ಗೃಹಂ | ತತ್ರ ಮೇಧ್ಯಂ ಮೃಗಂ ಹತ್ವಾ ಪಕ್ತ್ವಾ ಹುತ್ವಾ ಚ ತೇ ತ್ರಯಃ ||

ಭುಕ್ತ್ವಾ ವೃಕ್ಷದಳೇ ಸುಪ್ತ್ವಾ ಸುಖಮಾಸತ ತಾಂ ನಿಶಾಂ | ತತೋ ರಾಮಸ್ತು ವೈದೇಹ್ಯಾ ಲಕ್ಷ್ಮಣೇನ ಸಮನ್ವಿತಃ || ೨೭ ||

ಭರದ್ವಾಜಾಶ್ರಮಪದಂ ಗತ್ವಾ ಬಹಿರುಪಸ್ಥಿತಃ | ತತ್ರೈಕಂ ವಟುಕಂ ದೃಷ್ಟ್ವಾ ರಾಮಃ ಪ್ರಾಹ ಚ ಹೇ ವಟೋ || ೨೮ ||

ರಾಮೋ ದಾಶರಥಿಸ್ಸೀತಾಲಕ್ಷ್ಮಣಾಭ್ಯಾಂ ಸಮನ್ವಿತಃ | ಆಸ್ತೇ ಬಹಿರ್ವನಸ್ಯೇತಿ ಹ್ಯುಚ್ಯತಾಂ ಮುನಿಸನ್ನಿಧೌ || ೨೯ ||

ತಚ್ಛ್ರುತ್ವಾ ಸಹಸಾ ಗತ್ವಾ ಪಾದಯೋಃ ಪತಿತೋ ಮುನೇಃ | ಸ್ವಾಮಿನ್ರಾಮಸ್ಸಮಾಗತ್ಯ ವನಾದ್ಬಹಿರವಸ್ಥಿತಃ || ೩೦ ||

---

೨೬. ಆ ಸೀತಾ ರಾಮ ಲಕ್ಷ್ಮಣರು ಮೂರುಜನರೂ ದಂಡಕಾರಣ್ಯದಲ್ಲಿ ಅಲ್ಲಿಯೇ ನಿಂತು ಶ್ರೇಷ್ಠವಾದ ಮೃಗವನ್ನು ಕೊಂದು ಅದನ್ನು ಬೇಯಿಸಿ ಹೋಮ ಮುಂತಾದುವನ್ನು ಮಾಡಿ ಎಲೆಯಲ್ಲಿ ಹಾಕಿಕೊಂಡು ಊಟಮಾಡಿ ಅಲ್ಲಿಯೇ ಮಲಗಿದ್ದು ಆರಾತ್ರಿಯನ್ನು ಅಲ್ಲಿ ಸುಖವಾಗಿ ಕಳೆದರು.

೨೭. ಅನಂತರ ರಾಮನು ಸೀತಾ ಲಕ್ಷ್ಮಣರೊಡನೆ ಕೂಡಿಕೊಂಡು ಭರದ್ವಾಜಾಶ್ರಮದ ಬಳಿಗೆಹೋಗಿ ಅಲ್ಲಿ ಹೊರಗಡೆಯಲ್ಲಿ ನಿಂತನು.

೨೮-೨೯. ಅಲ್ಲಿ ಒಬ್ಬ ಬ್ರಹ್ಮಚಾರಿಯಾದ ಶಿಷ್ಯನು ಓಡಿಯಾಡುತ್ತಿದ್ದುದನ್ನು ನೋಡಿ ಅವನನ್ನು ಕರೆದು. ಎಲೈ ವಟುವೆ! ನೀನು ಆ ಮುನಿಶ್ರೇಷ್ಠನ ಬಳಿಗೆ ಹೋಗಿ ದಶರಥನ ಮಗನಾದ ರಾಮನು ಸೀತಾ ಲಕ್ಷ್ಮಣರೊಡಗೂಡಿಕೊಂಡು ಬಂದು ನಿನ್ನ ಈ ಆಶ್ರಮದ ಹೊರಗಡೆಯಲ್ಲಿ ನಿಂತಿದ್ದಾನೆ. ಎಂಬುದಾಗಿ ಹೇಳು ಎಂದನು

೩೦. ರಾಮನ ಈ ಮಾತನ್ನು ಕೇಳಿ ಆ ವಟುವು ಬೇಗನೆ ಮುನಿಯಬಳಿಗೆ ಹೋಗಿ ಅವನ ಪಾದಗಳಿಗೆ ನಮಸ್ಕರಿಸಿ ಸ್ವಾಮಿ! ದಶರಥ ಪುತ್ರನಾದ ರಾಮಚಂದ್ರನು ಬಂದು ಆಶ್ರಮದ ಹೊರಗಡೆಯಲ್ಲಿ ನಿಂತಿರುವನು

ಸಭಾರ್ಯಸ್ಸಾನುಜಶ್ಶ್ರೀಮಾನಾಹ ಮಾಂ ದೇವಸನ್ನಿಭಃ । ಭರದ್ವಾಜಾಯ ಮುನಯೇ ಜ್ಞಾಪಯಸ್ವ ಯಥೋಚಿತಂ ॥ ೩೧ ॥

ತಚ್ಛ್ರುತ್ವಾ ಸಹಸೋತ್ಥಾಯ ಭರದ್ವಾಜೋ ಮುನೀಶ್ವರಃ । ಗೃಹೀತ್ವಾರ್ಘ್ಯಂ ಚ ಪಾದ್ಯಂ ಚ ರಾಮಸಾಮೀಪ್ಯಮಾಯಯೌ ॥

ದೃಷ್ಟ್ವಾ ರಾಮಂ ಯಥಾನ್ಯಾಯ್ಯಂ ಪೂಜಯಿತ್ವಾ ಸಲಕ್ಷ್ಮಣಂ । ಆಹ ಮೇ ಪರ್ಣಶಾಲಾಂ ಭೋ ರಾಮ ರಾಜೀವಲೋಚನ ॥

ಆಗಚ್ಛ ಪಾದರಜಸಾ ಪುನೀಹಿ ರಘುನಂದನ । ಇತ್ಯುಕ್ತ್ವೋಟಜಮಾನೀಯ ಸೀತಯಾ ಸಹ ರಾಘವೌ ॥ ೩೪ ॥

ಭಕ್ತ್ಯಾ ಪುನಃ ಪೂಜಯಿತ್ವಾ ಚಕಾರಾತಿಥ್ಯಮುತ್ತಮಂ । ಅದ್ಯಾಹಂ ತಪಸಃ ಪಾರಂ ಗತೋಽಸ್ಮಿ ತವ ಸಂಗಮಾತ್ ॥ ೩೫ ॥

---

೩೧. ಜೊತೆಯಲ್ಲಿ ತಮ್ಮನೂ ಹೆಂಡತಿಯೂ ಬಂದಿರುವರು. ದೇವಸನ್ನಿಭನಾದ ಆತನು ಎಲೈ ವಟುವೆ! ನೀನುಹೋಗಿ ಆ ಮುನಿಯಾದ ಭರದ್ವಾಜನಿಗೆ ಅವನ ಕಾಲವನ್ನು ಅನುಸರಿಸಿ ನೋಡಿ ಹೇಗೆ ಹೇಳಬೇಕೋ ಹಾಗೆ ಹೇಳಿ ಜ್ಞಾಪಿಸು.

೩೨. ಮುನೀಶ್ವರನಾದ ಭರದ್ವಾಜನು ಅದನ್ನುಕೇಳಿ ಬೇಗನೆಎದ್ದು ಅರ್ಘ್ಯಪಾದ್ಯಗಳನ್ನು ತೆಗೆದುಕೊಂಡು ರಾಮನ ಬಳಿಗೆ ಹೋದನು.

೩೩. ಅಲ್ಲಿ ರಾಮನನ್ನು ನೋಡಿ ಶಾಸ್ತ್ರೋಕ್ತವಾಗಿ ಅರ್ಘ್ಯಾದಿಗಳನ್ನು ಕೊಟ್ಟು ಪೂಜಿಸಿ ಲಕ್ಷ್ಮಣನನ್ನೂ ಪೂಜಿಸಿ ಎಲೈ ರಾಜೀವಲೋಚನನಾದ ರಾಮನೆ! ನನ್ನ ಪರ್ಣಶಾಲೆಗೆ ಬಾ ಬಂದು ನಿನ್ನ ಪಾದದ ಧೂಳಿನಿಂದ ಆ ಪರ್ಣಶಾಲೆಯನ್ನು ಪವಿತ್ರವನ್ನಾಗಿ ಮಾಡು.

೩೪–೩೫. ಭರದ್ವಾಜನು ಈರೀತಿಯಾಗಿ ಹೇಳಿ ಸೀತೆಯೊಡನೆ ಆ ರಾಮ ಲಕ್ಷ್ಮಣರನ್ನು ಕರೆತಂದು ಪರ್ಣಶಾಲೆಯಲ್ಲಿಯೂ ಅವರನ್ನೂ ಪೂಜಿಸಿ ಆದರದಿಂದ ಉತ್ತಮವಾದ ಆತಿಥಿ ಸತ್ಕಾರವನ್ನು ಮಾಡಿದನು. ಅನಂತರ ಎಲೈ ರಾಮನೇ! ನೀನು ನನ್ನಬಳಿಗೆ ಬಂದು ದರ್ಶನವನ್ನು ಕೊಟ್ಟುದರಿಂದ ಈದಿನ ನನ್ನ ತಪಸ್ಸು ಪೂರ್ಣವಾಯಿತು.

ಜ್ಞಾತಂ ರಾಮ ತವೋದಂತಂ ಭೂತಂ ಚಾಗಾಮಿಕಂ ಚ ಯತ್ । ಜಾನಾಮಿ ತ್ವಾಂ ಪರಾತ್ಮಾನಂ ಮಾಯಯಾ ಕಾರ್ಯಮಾನುಷಂ
ಯದರ್ಥಮವತೀರ್ಣೋಽಸಿ ಬ್ರಹ್ಮಣಾ ಪ್ರಾರ್ಥಿತಃ ಪುರಾ । ಯದರ್ಥಂ ವನವಾಸಸ್ತೇ ಯತ್ಕರಿಷ್ಯಸಿ ತ್ವಂ ಪುರಃ ॥ ೩೭ ॥
ಜಾನಾಮಿ ಜ್ಞಾನದೃಷ್ಟ್ಯಾಽಹಂ ಜಾತಯಾ ತ್ವದುಪಾಸನಾತ್ । ಇತಃ ಪರಂ ತ್ವಾಂ ಕಿಂ ವಕ್ಷ್ಯೇ ಕೃತಾರ್ಥೋಽಹಂ ರಘೂತ್ತಮ ॥
ಯಸ್ತ್ವಾಂ ಪಶ್ಯಾಮಿ ಕಾಕುತ್ಸ್ಥಂ ಪುರುಷಂ ಪ್ರಕೃತೇಃ ಪರಂ । ರಾಮಸ್ತಮಭಿವಾದ್ಯಾಹ ಸೀತಾಲಕ್ಷ್ಮಣಸಂಯುತಃ ॥ ೩೯ ॥
ಅನುಗ್ರಾಹ್ಯಾಸ್ತ್ವಯಾ ಬ್ರಹ್ಮನ್ವಯಂ ಕ್ಷತ್ರಿಯಬಾಂಧವಾಃ । ಇತಿ ಸಂಭಾಷ್ಯ ತೇಽನ್ಯೋನ್ಯಮುಷಿತ್ವಾ ಮುನಿಸನ್ನಿಧೌ ॥ ೪೦ ॥

---

೩೬. ಎಲೈ ರಾಮನೇ! ನಿನ್ನ ಈಗಿನ ಹಿಂದಿನ ಮುಂದಿನ ವಿಷಯಗಳನ್ನು ನಾನು ತಿಳಿದಿದ್ದೇನೆ. ನೀನು ಪರಮಾತ್ಮನೆಂಬುದನ್ನೂ ಕಾರ್ಯಸಾಧನೆಗೋಸ್ಕರ ಮಾಯೆಯಿಂದ ಮನುಷ್ಯನಾಗಿ ಹುಟ್ಟಿದ್ದೀಯೆ ಎಂಬುದನ್ನೂ ಬಲ್ಲೆನು.

೩೭–೩೮. ಪೂರ್ವದಲ್ಲಿ ಬ್ರಹ್ಮನು ಪ್ರಾರ್ಥಿಸಿದ್ದುದರಿಂದ ಭೂಮಿಯಲ್ಲಿ ಅವತರಿಸಿದ್ದೀಯೆ ಎಂಬುದನ್ನೂ ಬಲ್ಲೆನು. ಎಲೈ ರಾಮನೆ! ನೀನು ವನವಾಸಕ್ಕೆ ಹೋಗಲು ಕಾರಣವೇನು? ನೀನು ಮುಂದೆ ಏನುಮಾಡುತ್ತೀಯೆ ಎಂಬುದನ್ನು ನಿನ್ನನ್ನು ಧ್ಯಾನಿಸಿ ಅದರಿಂದ ಪಡೆದಿರುವ ಜ್ಞಾನದೃಷ್ಟಿಯಿಂದ ಚೆನ್ನಾಗಿ ತಿಳಿದಿದ್ದೇನೆ. ಎಲೈ ರಘೂತ್ತಮನೆ! ಇದಕ್ಕಿಂತಲೂ ಹೆಚ್ಚಾಗಿ ನಿನಗೇನನ್ನು ಹೇಳಲಿ!

೩೯–೪೦. ಪ್ರಕೃತಿಗಿಂತಲೂ ಬೇರೆಯವನೂ, ಉತ್ತಮನೂ, ಆದ ನಿನ್ನನ್ನು ನೋಡಿದುದರಿಂದ ನಾನು ಕೃತಾರ್ಥನಾದೆನು ಎಂದೆನಲು ಅನಂತರ ರಾಮನು ಆ ಭರದ್ವಾಜನಿಗೆ ನಮಸ್ಕರಿಸಿದನು. ಮತ್ತು ಸೀತೆಯೂ ಲಕ್ಷ್ಮಣನೂ ನಮಸ್ಕರಿಸಿದರು. ಆಮೇಲೆ ರಾಮನು ಎಲೈ ಋಷಿಯೆ! ನಾವು ಕ್ಷತ್ರಿಯರು. ನೀನು ಬ್ರಾಹ್ಮಣರು. ನಮಗೆ ಅನುಗ್ರಹಮಾಡಿರಿ ಎಂದನು.

ಪ್ರಾತರುತ್ಥಾಯ ಯಮುನಾಮುತ್ತೀರ್ಯ ಮುನಿದಾರಕೈಃ । ಕೃತಾಪ್ಲವೇನ ಮುನಿನಾ ದೃಷ್ಟಮಾರ್ಗೇಣ ರಾಘವಃ ॥ ೪೧ ॥
ಪ್ರಯಯೌ ಚಿತ್ರಕೂಟಾದ್ರಿಂ ವಾಲ್ಮೀಕೇರ್ಯತ್ರ ಚಾಶ್ರಮಃ । ಗತ್ವಾ ರಾಮೋಥ ವಾಲ್ಮೀಕೇರಾಶ್ರಮಂ ಮುನಿಸಂಕುಲಂ ॥ ೪೨ ॥
ನಾನಾಮೃಗದ್ವಿಜಾಕೀರ್ಣಂ ನಿತ್ಯಪುಷ್ಪಫಲಾಕುಲಂ । ತತ್ರ ದೃಷ್ಟ್ವಾ ಸಮಾಸೀನಂ ವಾಲ್ಮೀಕಿಂ ಮುನಿಸತ್ತಮಂ ॥ ೪೩ ॥
ನನಾಮ ಶಿರಸಾ ರಾಮೋ ಲಕ್ಷ್ಮಣೇನ ಚ ಸೀತಯಾ । ದೃಷ್ಟ್ವಾ ರಾಮಂ ರಮಾನಾಥಂ ವಾಲ್ಮೀಕಿರ್ಲೋಕಸುಂದರಂ ॥ ೪೪ ॥
ಜಾನಕೀಲಕ್ಷ್ಮಣೋಪೇತಂ ಜಟಾಮುಕುಟಮಂಡಿತಂ । ಕಂದರ್ಪಸದೃಶಾಕಾರಂ ಕಮನೀಯಾಂಬುಜೇಕ್ಷಣಂ ॥ ೪೫ ॥

---

೪೧. ಅನಂತರ ಅವರು ಲೋಕದರೀತಿಯಾದ ಅನೇಕ ಮಾತುಗಳನ್ನು ಆಡುತ್ತಿದ್ದು ಆದಿನ ಆ ಋಷಿಯ ಬಳಿಯಲ್ಲಿಯೇ ಇದ್ದನು. ಬೆಳಿಗ್ಗೆ ಎದ್ದು ಆ ಋಷಿಯು ಕಳುಹಿಸಿದ ಮುನಿಪುತ್ರರ ಸಹಾಯದಿಂದ ದೋಣಿಯಲ್ಲಿ ಚೆನ್ನಾಗಿ ಗೊತ್ತಿರುವ ಸ್ಥಳದಲ್ಲಿ ಯಮುನೆಯನ್ನು ದಾಟಿದರು.

೪೨. ಅನಂತರ ಚಿತ್ರಕೂಟಪರ್ವತಕ್ಕೆ ಹೋದರು. ಅಲ್ಲಿ ವಾಲ್ಮೀಕಿಯ ಆಶ್ರಮವಿದ್ದಿತು. ರಾಮನು ಅನೇಕ ಮುನಿಗಳಿಂದ ಕೂಡಿರುವ ಆ ವಾಲ್ಮೀಕಿಯ ಆಶ್ರಮಕ್ಕೆ ಹೋದನು.

೪೩. ಆ ಆಶ್ರಮವು ಅನೇಕ ಮೃಗಗಳಿಂದ ಕೂಡಿದ್ದಿತು. ಅನೇಕವಾದ ಪಕ್ಷಿಗಳೂ ಅಲ್ಲಿ ಇದ್ದುವು. ಅಲ್ಲಿರುವ ಮರಗಳು ಯಾವಾಗಲೂ ಹೂವು ಹಣ್ಣುಗಳಿಂದ ಕೂಡಿ ಪ್ರಕಾಶಿಸುತ್ತಿದ್ದುವು. ಆ ಆಶ್ರಮಕ್ಕೆ ಹೋಗಿ ಅಲ್ಲಿ ಕುಳಿತಿದ್ದ ವಾಲ್ಮೀಕಿಯನ್ನು ನೋಡಿದನು.

೪೪-೪೫. ಅನಂತರ ಸೀತೆಯೂ, ರಾಮನೂ, ಲಕ್ಷ್ಮಣನೂ, ಅವನಿಗೆ ನಮಸ್ಕರಿಸಿದರು. ಲೋಕಸುಂದರನೂ, ಲಕ್ಷ್ಮೀಪತಿಯೂ ಆದ ಆ ಶ್ರೀರಾಮನನ್ನು ವಾಲ್ಮೀಕಿಯು ನೋಡಿದನು. ಜೊತೆಯಲ್ಲಿ ಸೀತೆಯೂ, ಲಕ್ಷ್ಮಣನೂ ಇದ್ದರು. ಜಟೆಯನ್ನೂ ನಾರುಡೆಯನ್ನೂ ಧರಿಸಿದ್ದರು. ಆಕಾರವು ಮನ್ಮಥನಂತೆ ಇದ್ದಿತು ಮನೋಹರವಾದ ಕಮಲದಂತೆ ಆತನ ಕಣ್ಣುಗಳಿದ್ದುವು.

ದೃಷ್ಟ್ವೈವ ಸಹಸೋತ್ಥಾಯ ವಿಸ್ಮಯಾನಿಮಿಷೇಕ್ಷಣಃ । ಆಲಿಂಗ್ಯ ಪರಮಾನಂದಂ ರಾಮಂ ಹರ್ಷಾಶ್ರುಲೋಚನಃ ॥ ೪೬ ॥

ಪೂಜಯಿತ್ವಾ ಜಗತ್ಪೂಜ್ಯಂ ಭಕ್ತ್ಯಾರ್ಘ್ಯಾದಿಭಿರಾದೃತಃ । ಫಲಮೂಲೈಸ್ಸುಮಧುರೈರ್ಭೋಜಯಿತ್ವಾ ಚ ಲಾಲಿತಃ ॥ ೪೭ ॥

ರಾಘವಃ ಪ್ರಾಂಜಲಿಃ ಪ್ರಾಹ ವಾಲ್ಮೀಕಿಂ ವಿನಯಾನ್ವಿತಃ । ಪಿತುರಾಜ್ಞಾಂ ಪುರಸ್ಕೃತ್ಯ ದಂಡಕಾನಾಗತಾ ವಯಂ ॥ ೪೮ ॥

ಭವಂತೋ ಯದಿ ಜಾನಂತಿ ಕಿಂ ವಕ್ಷ್ಯಾಮೋತ್ರ ಕಾರಣಂ । ಯತ್ರ ಮೇ ಸುಖವಾಸಾಯ ಭವೇತ್ಸ್ಥಾನಂ ವದಸ್ವ ತತ್ ॥ ೪೯ ॥

೪೬-೪೭ ಇಂತಹ ರಾಮನನ್ನು ನೋಡಿದೊಡನೆಯೇ ವಾಲ್ಮೀಕಿಯು ಆಶ್ಚರ್ಯಪಡುತ್ತಾ ಬೇಗನೆ ಎದ್ದನು. ಒಡನೆಯೇ ಎದುರಿಗೆ ಹೋಗಿ ಸಂತೋಷದಿಂದ ಕಣ್ಣೀರನ್ನು ಸುರಿಸುತ್ತ ಆಲಿಂಗಿಸಿಕೊಂಡನು. ಅನಂತರ ಜಗತ್ಪೂಜ್ಯನಾದ ಆ ರಾಮನನ್ನು ಅರ್ಘ್ಯಪಾದ್ಯಗಳಿಂದ ಭಕ್ತಿಪೂರ್ವಕವಾಗಿ ಪೂಜಿಸಿದನು. ಮಧುರವಾದ ಹಣ್ಣುಗಳಿಂದಲೂ ಗೆಡ್ಡೆಗೆಣಸುಗಳಿಂದಲೂ ತೃಪ್ತಿಪಡಿಸಿದನು.

೪೮. ಈರೀತಿಯಾಗಿ ಪೂಜೆಯನ್ನು ಹೊಂದಿದ ಶ್ರೀರಾಮನು ವಿನಯದಿಂದ ಕೈಮುಗಿದುಕೊಂಡು ತನ್ನನ್ನು ಕುಶಲಪ್ರಶ್ನೆ ಮಾಡುತ್ತಿದ್ದಾಗ ವಾಲ್ಮೀಕಿಯನ್ನುಕುರಿತು ಎಲೈ ಮುನಿಯೇ! ನಾನು ತಂದೆಯ ಅಪ್ಪಣೆಯನ್ನು ಪಾಲಿಸಲು ದಂಡಕಾರಣ್ಯಕ್ಕೆ ಸೀತಾ ಲಕ್ಷ್ಮಣರೊಡನೆ ಬಂದಿದ್ದೇನೆ.

೪೯. ಇದಕ್ಕೆ ಕಾರಣವು ನಿಮಗೆ ಗೊತ್ತಿದ್ದರೆ ನಾನು ಹೇಳಬೇಕಾದುದೇನಿರುವುದು ? ಈ ಅರಣ್ಯದಲ್ಲಿ ನಾನು ಎಲ್ಲಿ ವಾಸಮಾಡಿಕೊಂಡಿದ್ದರೆ ಸುಖವಾಗಿರಬಹುದೋ ಆ ಸ್ಥಾನವಾವುದು ? ಎಂಬುದನ್ನು ನನಗೆ ಹೇಳು.

ಸೀತಯಾ ಸಹಿತಃ ಕಾಲಂ ಕಿಂಚಿತ್ತತ್ರ ನಯಾಮ್ಯಹಂ । ಇತ್ಯುಕ್ತೋ ರಾಘವೇಣಾಸೌ ಮುನಿಸ್ಸಸ್ಮಿತಮಬ್ರವೀತ್ ॥೫೦॥
ತ್ವಮೇವ ಸರ್ವಲೋಕಾನಾಂ ನಿವಾಸಸ್ಥಾನಮುತ್ತಮಂ । ತವಾಪಿ ಸರ್ವಭೂತಾನಿ ನಿವಾಸಸದನಾನಿ ಹಿ ॥ ೫೧ ॥
ಏವಂ ಸಾಧಾರಣಂ ಸ್ಥಾನಮುಕ್ತಂ ತೇ ರಘುನಂದನ । ಸೀತಯಾ ಸಹಿತಸ್ಯೇತಿ ವಿಶೇಷಂ ಪೃಚ್ಛತಸ್ತವ ॥ ೫೨ ॥
ತದ್ವಕ್ಷ್ಯಾಮಿ ರಘುಶ್ರೇಷ್ಠ ಯತ್ತೇ ನಿಯತಮಂದಿರಂ । ಶಾಂತಾನಾಂ ಸಮದೃಷ್ಟೀನಾಮದ್ವೇಷ್ಟೄಣಾಂ ಚ ಜಂತುಷು ॥ ೫೩ ॥

---

೫೦. ಇಲ್ಲಿ ಕೆಲವುಕಾಲ ಸೀತೆಯೊಡನೆ ಇರಬೇಕೆಂದಿದ್ದೇನೆ. ಎಂದನು. ರಾಮನು ಆ ಋಷಿಯನ್ನು ಕುರಿತು ಇಂತೆನ್ನಲು ಅದಕ್ಕೆ ಋಷಿಯು ಹುಸಿನಗೆ ನಗುತ್ತ ಇಂತೆಂದನು.

೫೧. ಎಲೈ ರಾಮನೆ! ಲೋಕಕ್ಕೆಲ್ಲಾ ನೀನೇ ಉತ್ತಮವಾದ ವಾಸಸ್ಥಾನವು ನಿನ್ನಲ್ಲಿ ಪ್ರಾಣಿಗಳು ವಾಸಿಸಿದರೆ ಅವಕ್ಕೆ ಯಾವ ಭೀತಿಯೂ ಇರುವುದೇ ಇಲ್ಲ. ಅಂತಹ ನಿನಗೆ ಎಲ್ಲಾ ಭೂತಗಳೂ ಮನೆಯೇ ಆಗಿವೆ. ಎಲ್ಲಾಪ್ರಾಣಿಗಳಲ್ಲೂ ನೀನಿದ್ದೀಯೆ. ನಿನಗೆ ಒಳ್ಳೆಯ್ದಾವುದು ? ಕೆಟ್ಟುದು ಯಾವುದು ?

೫೨. ಎಲೈ ರಘುನಂದನನೇ! ಲೋಕರೂಢಿಯಾಗಿ ನಿನ್ನ ಸ್ವರೂಪವನ್ನು ತಿಳಿದು ಈ ಸ್ಥಾನವನ್ನು ಹೇಳಿರುವೆನು. (ಎಂದರೆ ಪರಮಾತ್ಮನು ಎಲ್ಲದರಲ್ಲಿಯೂ ಇರುವುದರಿಂದ ಎಲ್ಲವೂ ಅವನಿಗೆ ವಾಸಸ್ಥಾನವೆಂದು ತಿಳಿಯಬೇಕು) ಈ ರಾಮನೆಂಬ ಅವತಾರದಿಂದ, ನೀನು ವಿಶೇಷರೀತಿಯಿಂದ ಕೇಳಿದರೆ ಅದಕ್ಕೆ ಅನುಕೂಲವಾಗಿರುವ ಸ್ಥಳವನ್ನು ಹೇಳುತ್ತೇನೆ ಅದನ್ನು ಕೇಳು.

೫೩. ಶಾಂತರಾಗಿಯೂ, ಎಲ್ಲರಲ್ಲಿಯೂ ಒಂದೇದೃಷ್ಟಿಯುಳ್ಳವರಾಗಿಯೂ, ಪ್ರಾಣಿಗಳನ್ನು ದ್ವೇಷಿಸದೆಯೂ, ಇದ್ದುಕೊಂಡು ಯಾರ ನಿನ್ನನ್ನೇ ಯಾವಾಗಲೂ ಭಜಿಸುತ್ತಾರೆಯೋ ಅವರ ಹೃದಯವೇ ನಿನಗೆ ವಾಸದ ಮನೆಯು.

ತ್ವಾಮೇವ ಭಜತಾಂ ನಿತ್ಯಂ ಹೃದಯಂ ತೇಧಿಮಂದಿರಂ । ಧರ್ಮಾಧರ್ಮಾನ್ಪರಿತ್ಯಜ್ಯ ತ್ವಾಮೇವ ಭಜತೋನಿಶಂ ॥ ೫೪ ॥

ಸೀತಯಾ ಸಹ ತೇ ರಾಮ ತಸ್ಯ ಹೃತ್ಸುಖಮಂದಿರಂ । ತ್ವನ್ಮಂತ್ರಜಾಪಕೋ ಯಸ್ತು ತ್ವಾಮೇವ ಶರಣಂಗತಃ ॥ ೫೫ ॥

ನಿರ್ದ್ವಂದ್ವೋ ನಿಃಸ್ಪೃಹಸ್ತಸ್ಯ ಹೃದಯಂ ತೇ ಸುಮಂದಿರಂ । ನಿರಹಂಕಾರಿಣಶ್ಶಾಂತಾ ರಾಗದ್ವೇಷವಿವರ್ಜಿತಾಃ ॥ ೫೬ ॥

ಸಮಲೋಷ್ಟಾಶ್ಮಕನಕಾಸ್ತೇಷಾಂ ತೇ ಹೃದಯಂ ಗೃಹಂ । ತ್ವಯಿ ದತ್ತಮನೋಬುದ್ಧಿರ್ಯಸ್ಸಂತುಷ್ಟಸ್ಸದಾ ಭವೇತ್ ॥ ೫೭ ॥

---

೫೪. ಧರ್ಮ ಅಧರ್ಮಗಳನ್ನು ಬಿಟ್ಟು ಯಾರು ನಿನ್ನನ್ನೇ ಯಾವಾಗಲೂ ಭಜಿಸುತ್ತಾರೆಯೋ ಅವರ ಹೃದಯವು ಸೀತೆಯೊಡನೆ ಇರಲು ನಿನಗೆ ಉತ್ತಮಸ್ಥಾನವು.

೫೫. ಯಾವನು ನಿನ್ನನ್ನೇ ಶರಣುಹೊಂದಿ ನಿನ್ನ ಮಂತ್ರವನ್ನೇ ಜಪಿಸುತ್ತಾನೆಯೋ, ಅಂತಹವನ ಮತ್ತು ಶೀತೋಷ್ಣರೂಪವಾದ ದ್ವಂದ್ವಗಳಿಗೆ ಒಳಗಾಗದೆ ಆಸೆಯನ್ನು ಬಿಟ್ಟಿರುವವನ ಹೃದಯವೇ ನಿನಗೆ ಒಳ್ಳೆಯ ವಾಸದ ಮನೆಯು.

೫೬. ಅಹಂಕಾರವನ್ನು ತೊರೆದು ಶಾಂತಗುಣವನ್ನು ಹೊಂದಿ ರಾಗದ್ವೇಷಗಳನ್ನು ಬಿಟ್ಟು ಹೆಣ್ಣು ಹೊನ್ನು ಮಣ್ಣುಗಳಲ್ಲಿ ಒಂದೇ ಬುದ್ಧಿಯುಳ್ಳವರ ಹೃದಯವು ನಿನಗೆ ವಾಸಸ್ಥಾನವು.

೫೭. ಯಾವನು ನಿನ್ನಲ್ಲಿಯೇ ಮನಸ್ಸನ್ನಿಟ್ಟು ಯಾವಾಗಲೂ ಸಂತೋಷದಿಂದಿರುವನೋ ಅವನೂ ಮತ್ತು ಯಾವನು ತಾನುಮಾಡಿದ ಕರ್ಮವನ್ನೆಲ್ಲಾ ನಿನಗೆ ಅರ್ಪಣೆಮಾಡುವನೋ ಅವನ ಹೃದಯವೂ ನಿನಗೆ ಒಳ್ಳೆಯ ವಾಸಸ್ಥಾನವು.

ತ್ವಯಿ ಸಂತ್ಯಕ್ತಕರ್ಮಾ ಯಸ್ತನ್ಮನಸ್ತೇ ಶುಭಂ ಗೃಹಂ । ಯೋ ನ ದ್ವೇಷ್ಟ್ಯಪ್ರಿಯಂ ಪ್ರಾಪ್ಯ ಪ್ರಿಯಂ ಪ್ರಾಪ್ಯ ನ ಹೃಷ್ಯತಿ॥೫೮॥
ಸರ್ವಂ ಮಾಯೇತಿ ನಿಶ್ಚಿತ್ಯ ತ್ವಾಂ ಭಜೇತ್ತನ್ಮನೋ ಗೃಹಂ । ಷಡ್ಭಾವಾದಿವಿಕಾರಾನ್ಯೋ ದೇಹೇ ಪಶ್ಯತಿ ನಾತ್ಮನಿ ॥ ೫೯ ॥
ಕ್ಷುತ್ತೃಟ್ಸುಖಂ ಭಯಂ ದುಃಖಂ ಪ್ರಾಣಬುದ್ಧ್ಯೋರ್ನಿರೀಕ್ಷತೇ । ಸಂಸಾರದುಃಖೈರ್ನಿರ್ಮುಕ್ತಸ್ತಸ್ಯ ತೇ ಮಾನಸಂ ಗೃಹಂ ॥ ೬೦ ॥
ಪಶ್ಯಂತಿ ಯೇ ಸರ್ವಗುಹಾಶಯಸ್ಥಂ ತ್ವಾಂ ಚಿದ್ಘನಂ ಸತ್ಯಮನಂತಮೇಕಂ ।
ಅಲೇಪಕಂ ಸರ್ವಗತಂ ವರೇಣ್ಯಂ ತೇಷಾಂ ಹೃದಬ್ಜೇ ಸಹ ಸೀತಯಾ ವಸ ॥ ೬೧ ॥

---

೫೮. ಯಾವನು ಶತ್ರುವನ್ನು ಕಂಡರೆ ದ್ವೇಷಿಸದೆಯೂ ಸ್ನೇಹಿತನನ್ನು ಕಂಡರೆ ಸಂತೋಷಗೊಳ್ಳದೆಯೂ ಎಲ್ಲವೂ ನಿನ್ನ ಮಾಯೆಯೆಂದು ನಿಶ್ಚಯಿಸಿಕೊಂಡು ನಿನ್ನನ್ನೇ ಭಜಿಸುತ್ತಿರುವನೋ ಅವನ ಮನಸ್ಸೇ ನಿನಗೆ ವಾಸಸ್ಥಾನವು.

೫೯-೬೦. ಆರುಬಗೆಯಾದ ವಿಕಾರಗಳನ್ನು ಯಾವನು ದೇಹಕ್ಕೆ ಸೇರಿದ್ದೆಂದೂ, ಆತ್ಮನಿಗೆ ಸೇರಿದ್ದಲ್ಲವೆಂದೂ, ತಿಳಿದು ಹಸಿವು ಬಾಯಾರಿಕೆಗಳನ್ನು ಪ್ರಾಣಕ್ಕೆ ಸೇರಿದ್ದೆಂದೂ, ಸುಖ, ದುಃಖ, ಭಯಗಳು, ಬುದ್ಧಿಗೆ ಸೇರಿದ್ದೆಂದೂ ತಿಳಿದು ಸಂಸಾರದ ದುಃಖದಿಂದ ನಿವೃತ್ತನಾಗುತ್ತಾನೆಯೋ ಅವನ ಮನಸ್ಸೇ ನಿನ್ನ ಮನೆಯು (ಹುಟ್ಟುವುದು, ಬೆಳೆಯುವುದು, ವಿಕಾರವಾಗುವುದು, ಗಳಿತವಾಗುವುದು, ಕ್ಷಯಿಸುವುದು, ನಾಶವಾಗುವುದು, ಇವೇ ಆರು ವಿಕಾರಳು.)

೬೧. ನೀನು ಚಿತ್ ಸ್ವರೂಪನು. ಘನರೂಪನು, ಸತ್ಯರೂಪನು, ಅನಂತನು, ಒಬ್ಬನೇ ಆಗಿರುವವನು. ಮತ್ತೊಂದರಲ್ಲಿ ಲಿಪ್ತನಲ್ಲದವನು. ಎಲ್ಲಾಕಡೆಯಲ್ಲಿಯೂ ಇರುವವನು. ಇಂತಹ ನಿನ್ನನ್ನು ಯಾವನು ಎಲ್ಲರ ಹೃದಯವೆಂಬ ಗುಹೆಯಲ್ಲಿಯೂ ನೋಡುತ್ತಾನೆಯೋ ಅವನ ಹೃದಯ ಪಂಕಜದಲ್ಲಿ ನೀನು ಸೀತೆಯೊಡನೆ ವಾಸಮಾಡಿಕೊಂಡಿರು

ನಿರಂತರಾಭ್ಯಾಸದೃಢೀಕೃತಾತ್ಮನಾಂ ತ್ವತ್ಪಾದಸೇವಾಪರಿನಿಷ್ಠಿತಾನಾಂ |
ತ್ವನ್ನಾಮಕೀರ್ತ್ಯಾ ಹತಕಲ್ಮಷಾಣಾಂ ಸೀತಾಸಮೇತಸ್ಯ ಗೃಹಂ ಹೃದಬ್ಜೇ ‖ ೬೨ ‖

ರಾಮ ತ್ವನ್ನಾಮಮಹಿಮಾ ವರ್ಣ್ಯತೇ ಕೇನ ವಾ ಕಥಂ | ಯತ್ಪ್ರಭಾವಾದಹಂ ರಾಮ ಬ್ರಹ್ಮರ್ಷಿತ್ವಮವಾಪ್ತವಾನ್ ‖ ೬೩ ‖

ಅಹಂ ಪುರಾ ಕಿರಾತೇಷು ಕಿರಾತೈಸ್ಸಹ ವರ್ಧಿತಃ | ಜನ್ಮಮಾತ್ರದ್ವಿಜತ್ವಂ ಮೇ ಶೂದ್ರಾಚಾರರತಸ್ಸದಾ ‖ ೬೪ ‖

ಶೂದ್ರಾಯಾಂ ಬಹವಃ ಪುತ್ರಾ ಉತ್ಪನ್ನಾ ಮೇಽಜಿತಾತ್ಮನಃ | ತತಶ್ಚೋರೈಶ್ಚ ಸಂಗಮ್ಯ ಚೋರೋಽಹಮಭವಂ ಪುರಾ ‖ ೬೫ ‖

---

೬೨. ಯಾವಾಗಲೂ ಯಾರು ಯೋಗದಿಂದ ನಿನ್ನನ್ನೇ ನೋಡುವ ಅಭ್ಯಾಸವನ್ನು ಹೊಂದಿ ಅದನ್ನೇ ದೃಢಮಾಡಿಕೊಂಡು ಇರುವರೋ ಮತ್ತು ನಿನ್ನ ಪಾದಸೇವೆಯಲ್ಲಿಯೇ ಆಸಕ್ತರಾಗಿರುವರೋ, ಅಲ್ಲದೆ ನಿನ್ನ ನಾಮಸಂಕೀರ್ತನೆಯನ್ನು ಮಾಡುತ್ತ, ತಮ್ಮ ಪಾಪಗಳನ್ನೆಲ್ಲಾ ನಾಶಮಾಡಿಕೊಂಡಿರುವರೋ ಅವರ ಹೃದಯಕಮಲದಲ್ಲಿ ಸೀತೆಯೊಡನೆ ವಾಸಿಸು.

೬೩. ಎಲೈ ರಾಮನೇ! ನಿನ್ನ ನಾಮಗಳ ಮಹಿಮೆಯನ್ನು ಯಾವನು ಹೇಗೆತಾನೇ ವರ್ಣಿಸಲು ಸಾಧ್ಯವಾದೀತು. ಆ ನಾಮಗಳ ಮಹಿಮೆಯಿಂದಲೇ ನಾನೂಕೂಡ ಬ್ರಹ್ಮರ್ಷಿಯಾದೆನಲ್ಲ!

೬೪. ನಾನು ಹಿಂದೆ ಕಿರಾತರಲ್ಲಿಯೇ ಇದ್ದುಕೊಂಡು ಅವರಲ್ಲಿಯೇ ತಿಂದು ಉಂಡು ಬೆಳೆದು, ಅವರಿಂದಲೇ ವೃದ್ಧಿಹೊಂದಿದೆನು. ನನ್ನ ಹುಟ್ಟುವಿಕೆಯು ಮಾತ್ರ ಬ್ರಾಹ್ಮಣರಲ್ಲಿ ಆಗಿದೆಯೇ ಹೊರತು ಆಚಾರವೆಲ್ಲವೂ ಶೂದ್ರರ ಆಚಾರವೇ ಆಗಿದ್ದಿತು.

೬೫. ಇಂದ್ರಿಯಗಳ ಲೋಲುಪತೆಯಿಂದ ಅವುಗಳಿಗೆ ಅಧೀನನಾಗಿ ಶೂದ್ರರ ಹೆಂಗಸರಲ್ಲಿ ರಮಿಸಿದೆನು. ಅವರಲ್ಲಿ ನನಗೆ ಬಹುಜನ ಮಕ್ಕಳಾದರು. ಅನಂತರ ಅವರನ್ನು ಸಾಕಲು ನಾನು ಕಳ್ಳರೊಡನೆ ಸೇರಿಕೊಂಡು ಕಳ್ಳನೇ ಆದೆನು.

ಧನುರ್ಬಾಣಧರೋ ನಿತ್ಯಂ ಜೀವಾನಾಮಂತಕೋಪಮಃ । ಏಕದಾಮುನಯಸ್ಸಪ್ತ ದೃಷ್ಟ್ವಾ ಮಹತಿ ಕಾನನೇ ॥ ೬೬ ॥
ಸಾಕ್ಷಾನ್ಮಯಾ ಪ್ರಕಾಶಂತೋ ಜ್ವಲನಾರ್ಕಸಮಪ್ರಭಾಃ । ತಾನನ್ವಧಾವಂ ಲೋಭೇನ ತೇಷಾಂ ಸರ್ವಪರಿಚ್ಛದಾನ್ ॥ ೬೭ ॥
ಗ್ರಹೀತುಕಾಮಸ್ತತ್ರಾಹಂ ತಿಷ್ಠ ತಿಷ್ಠೇತಿ ಚಾಬ್ರವಂ । ದೃಷ್ಟ್ವಾತು ಮಾಂ ಮುನಯೋ ಪೃಚ್ಛನ್ಕಿಮಾಯಾಸಿ ದ್ವಿಜಾಧಮ ॥ ೬೮ ॥
ಅಹಂ ತಾನಬ್ರವಂ ಕಿಂ ಚಿದಾದಾತುಂ ಮುನಿಸತ್ತಮಾಃ । ಪುತ್ರದಾರಾದಯಸ್ಸಂತಿ ಬಹವೋ ಮೇ ಬುಭುಕ್ಷಿತಾಃ ॥ ೬೯ ॥

---

೬೬. ಬಿಲ್ಲು ಬಾಣಗಳನ್ನು ಧರಿಸಿಕೊಂಡು ಪ್ರಾಣಿಗಳನ್ನು ಕೊಲ್ಲುತ್ತ ಅವಕ್ಕೆ ಯಮನಂತೆ ಆಗಿದ್ದೆನು. ಈರೀತಿಯಾಗಿ ಕಳ್ಳತನ ಮಾಡುತ್ತ ದೊಡ್ಡಕಾಡಿನಲ್ಲಿದ್ದುಕೊಂಡಿದ್ದೆನು. ಆಗ ಸಪ್ತಋಷಿಗಳು ಆ ಮಾರ್ಗದಲ್ಲಿ ಬಂದರು.

೬೭. ಅವರು ಪ್ರಕಾಶಿಸುತ್ತಾ ಸೂರ್ಯ ಅಗ್ನಿಗಳಂತೆ ಜ್ವಲಿಸುತ್ತಿದ್ದರು. ಅಂತಹವರನ್ನು ಅಲ್ಲಿ ಕಳ್ಳತನಮಾಡುತ್ತಿದ್ದ ನಾನು ನೋಡಿದೆನು. ನೋಡಿದೊಡನೆಯೇ ನಾನು ಅವರ ಬಟ್ಟೆಬರೆಗಳನ್ನೆಲ್ಲಾ ಕಿತ್ತುಕೊಳ್ಳಬೇಕೆಂಬ ಆಸೆಯಿಂದ ಅವರನ್ನು ಹಿಡಿಯಲು ಅವರಹಿಂದೆ ಹೋದೆನು. ಮತ್ತು ನಿಲ್ಲು ನಿಲ್ಲು ಎಂದು ಕೂಗಿಕೊಂಡೆನು.

೬೮. ತಮ್ಮನ್ನು ಅನುಸರಿಸುತ್ತಿರುವ ನನ್ನನ್ನು ನೋಡಿ ಆ ಋಷಿಗಳು ಎಲೈ ದ್ವಿಜಾಧಮನೆ! ನೀನು ಏಕೆ ನಮ್ಮನ್ನು ಹಿಂಬಾಲಿಸಿ ಬರುತ್ತಿದ್ದೀಯೆ? ಎಂದರು.

೬೯. ನಾನು ಅವರನ್ನು ಕುರಿತು ನಿಮ್ಮ ಹತ್ತಿರದಲ್ಲಿ ಏನಾದರೂ ಇದ್ದರೆ ಅದನ್ನು ಕಸಿದುಕೊಳ್ಳಲು ಬರುತ್ತಿದ್ದೇನೆ. ನನಗೆ ಬಹುಜನ ಹೆಂಡಿರೂ ಮಕ್ಕಳೂ ಇದ್ದಾರೆ. ಅವರಿಗೆ ಹೊಟ್ಟೆಗಿಲ್ಲ.

ತೇಷಾಂ ಸಂರಕ್ಷಣಾರ್ಥಾಯ ಚರಾಮಿ ಗಿರಿಕಾನನೇ । ತತೋ ಮಾಮೂಚುರವ್ಯಗ್ರಾಃ ಪೃಚ್ಛ ಗತ್ವಾ ಕುಟುಂಬಕಂ ॥ ೭೦ ॥
ಯೋ ಯೋ ಮಯಾ ಪ್ರತಿದಿನಂ ಕ್ರಿಯತೇ ಪಾಪಸಂಚಯಃ । ಯೂಯಂ ತದ್ಭಾಗಿನಃ ಕಿಂ ವಾ ನೇತಿ ಪೃಚ್ಛ ಪೃಥಕ್ ಪೃಥಕ್
ವಯಂ ಸ್ಥಾಸ್ಯಾಮಹೇ ತಾವದಾಗಮಿಷ್ಯಸಿ ನಿಶ್ಚಯಃ । ತಥೇತ್ಯುಕ್ತ್ವಾ ಗೃಹಂ ಗತ್ವಾ ಮುನಿಭಿರ್ಯದುದೀರಿತಂ ॥ ೭೨ ॥
ಅಪೃಚ್ಛಂ ಪುತ್ರದಾರಾದೀಂಸ್ತೈರುಕ್ತೋಽಹಂ ರಘೂತ್ತಮ । ಪಾಪಂ ತವೈವ ತತ್ಸರ್ವಂ ವಯಂ ತು ಫಲಭಾಗಿನಃ ॥ ೭೩ ॥

---

೭೦. ಅವರನ್ನು ಕಾಪಾಡಲು ಹೀಗೆ ಕಳ್ಳತನ ಮಾಡುತ್ತ ಈ ಬೆಟ್ಟದಲ್ಲಿಯೂ, ಕಾಡಿನಲ್ಲಿಯೂ, ಸಂಚರಿಸುತ್ತಿದ್ದೇನೆ ಎಂದೆನು. ಆಮೇಲೆ ಅವರು ನನಗೆ ಭಯಪಡದೆ ಅಯ್ಯಾ! ನೀನು ನಿನ್ನ ಮನೆಗೆ ಹೋಗು. ಅಲ್ಲಿ ನಿನ್ನ ಮನೆಯವರನ್ನು ಒಬ್ಬೊಬ್ಬರನ್ನಾಗಿ ಕರೆದು ಕೇಳು.

೭೧. ನಾನು ದಿನವೂ ಯಾವ ಯಾವ ಪಾಪಗಳನ್ನು ಮಾಡುತ್ತೇನೆಯೋ ಅದರಲ್ಲಿ ನೀವು ಪಾಲುದಾರರಾಗುವಿರಾ? ಅಥವಾ ಇಲ್ಲವೆ? ಎಂಬುದಾಗಿ ಬೇರೆ ಬೇರೆಯಾಗಿ ಕೇಳು ಎಂಬುದಾಗಿ ಹೇಳಿದರು.

೭೨. ಮತ್ತು ಅವರು ನೀನು ಮನೆಗೆ ಹೋಗಿ ಕೇಳಿಕೊಂಡು ಬರುವವರೆಗೂ, ನಾವು ಖಂಡಿತವಾಗಿಯೂ ಇಲ್ಲಿಯೇ ಇರುತ್ತೇವೆ ಎಂದು ವಾಗ್ದಾನಮಾಡಲು ಹಾಗೆಯೇ ಆಗಲೆಂದು ಹೇಳಿ ಮನೆಗೆ ಹೋದೆನು.

೭೩. ಅಲ್ಲಿ ಒಬ್ಬೊಬ್ಬರನ್ನೂ ಕರೆದು ಬೇರೆ ಬೇರೆಯಾಗಿ ಆ ಮುನಿಗಳು ಹೇಳಿದಂತೆ ಕೇಳಿದೆನು. ಎಲೈ ರಾಮನೆ! ಆಗ ಅವರು ನನ್ನನ್ನು ಕುರಿತು ನೀನು ಮಾಡುವ ಪಾಪರೂಪವಾದ ಫಲವು ನಿನಗೆ ಇರುತ್ತದೆ. ನಾವು ಆ ಪದಾರ್ಥವನ್ನು ಅನುಭವಿಸುವ ರೂಪವಾದ ಫಲವನ್ನು ಅನುಭವಿಸುತ್ತೇವೆ. ಎಂದರು.

ತಚ್ಛ್ರುತ್ವಾ ಜಾತನಿರ್ವೇದೋ ವಿಚಾರ್ಯ ಪುನರಾಗಮಂ । ಮುನಯೋ ಯತ್ರ ತಿಷ್ಠಂತಿ ಕರುಣಾಪೂರ್ಣಮಾನಸಾಃ ॥ ೭೪ ॥

ಮುನೀನಾಂ ದರ್ಶನಾದೇವ ಶುದ್ಧಾಂತಃಕರಣೋಽಭವಂ । ಧನುರ್ಶರಾದೀಂ ಪರಿತ್ಯಜ್ಯ ದಂಡವತ್ಪತಿತೋಽಸ್ಮ್ಯಹಂ ॥ ೭೫ ॥

ರಕ್ಷಧ್ವಂ ಮಾಂ ಮುನಿಶ್ರೇಷ್ಠಾ ಗಚ್ಛಂತಂ ನಿರಯಾರ್ಣವಂ । ಇತ್ಯಗ್ರೇ ಪತಿತಂ ದೃಷ್ಟ್ವಾ ಮಾಮೂಚುರ್ಮುನಿಸತ್ತಮಾಃ ॥ ೭೬ ॥

ಉತ್ತಿಷ್ಠೋತ್ತಿಷ್ಠ ಭದ್ರಂ ತೇ ಸಫಲಸ್ಸತ್ಸಮಾಗಮಃ । ಉಪದೇಕ್ಷ್ಯಾಮಹೇ ತುಭ್ಯಂ ಕಿಂಚಿತ್ತೇನೈವ ಮೋಕ್ಷ್ಯಸೇ ॥ ೭೭ ॥

---

೭೪. ಅವರು ಹಾಗೆ ಹೇಳಿದೊಡನೆಯೇ ನನಗೆ ಬಹುದುಃಖವಾಗಿ ವೈರಾಗ್ಯವು ಬಂದಿತು. ಅವರು ಹೇಳಿದುದನ್ನೂ, ನಾನು ಮಾಡುತ್ತಿರುವುದನ್ನೂ ಮತ್ತೆ ಮತ್ತೆ ಯೋಚಿಸಿನೋಡಿದೆನು ಅನಂತರ ಆ ಕರುಣಾಮೂರ್ತಿಗಳಾದ ಋಷಿಗಳಿರುವಲ್ಲಿಗೆ ಮತ್ತೆಬಂದೆನು.

೭೫. ಅಲ್ಲಿ ಆ ಮುನಿಗಳನ್ನು ನೋಡಿದೊಡನೆಯೇ ನನ್ನ ಮನಸ್ಸು ಶುದ್ಧವಾಯಿತು. ಒಡನೆಯೇ ಬಿಲ್ಲು ಬಾಣಗಳನ್ನು ಬಿಸುಟು ಅವರಿಗೆ ದೀರ್ಘದಂಡ ನಮಸ್ಕಾರವನ್ನು ಮಾಡಿದೆನು.

೭೬. ಎಲೈ ಋಷಿಗಳಿರ! ನರಕವೆಂಬ ಸಮುದ್ರವನ್ನು ಹೊಂದುತ್ತಿರುವ ನನ್ನನ್ನು ತಾವುಗಳು ಕಾಪಾಡಿರಿ. ಎಂಬುದಾಗಿ ಅವರ ಮುಂದೆ ಬಿದ್ದೆನು. ಆಗ ನನ್ನನ್ನು ನೋಡಿ ಆ ಮುನಿಗಳು ಇಂತೆಂದು ಹೇಳಿದರು.

೭೭. ಎಲೈ ಚೋರನೇ! ಎದ್ದೇಳು. ನಿನಗೆ ಒಳ್ಳೆಯದಾಗುತ್ತದೆ. ಸತ್ಪುರುಷರ ಸಮಾಗಮವು ಫಲವನ್ನು ಕೊಡುತ್ತದೆ. ನಿನಗೆ ನಾವು ಒಂದು ವಿಷಯವನ್ನು ಉಪದೇಶಿಸುತ್ತೇವೆ. ಅದರಿಂದಲೇ ನಿನಗೆ ಮೋಕ್ಷವು ಬರುತ್ತದೆ.

ಪರಸ್ಪರಂ ಸಮಾಲೋಚ್ಯ ದುರ್ವೃತ್ತೋಽಯಂ ದ್ವಿಜಾಧಮಃ । ಉಪೇಕ್ಷ್ಯ ಏವ ಸದ್ವೃತ್ತೈಸ್ತಥಾಪಿ ಶರಣಂ ಗತಃ ॥ ೭೮ ॥

ರಕ್ಷಣೀಯಃ ಪ್ರಯತ್ನೇನ ಮೋಕ್ಷಮಾರ್ಗೋಪದೇಶತಃ । ಇತ್ಯುಕ್ತ್ವಾ ರಾಮ ತೇ ನಾಮ ವ್ಯತ್ಯಸ್ತಾಕ್ಷರ ಪೂರ್ವಕಂ ॥ ೭೯ ॥

ಏಕಾಗ್ರಮನಸಾತ್ರೈವ ಮರೇತಿ ಜಪ ಸರ್ವದಾ । ಆಗಚ್ಛಾಮಃ ಪುನರ್ಯಾವತ್ತಾವದುಕ್ತಂ ಸದಾ ಜಪ ॥ ೮೦ ॥

ಇತ್ಯುಕ್ತ್ವಾ ಪ್ರಯಯುಸ್ಸರ್ವೇ ಮುನಯೋ ದಿವ್ಯದರ್ಶನಾಃ । ಅಹಂ ಯಥೋಪದಿಷ್ಟಂ ತೈಸ್ತಥಾಕರವಮಂಜಸಾ ॥ ೮೧ ॥

---

೭೮. ಆಗ ಅವರು ಒಬ್ಬರ ಮುಖವನ್ನು ಒಬ್ಬರು ನೋಡಿದರು. ಈ ಬ್ರಾಹ್ಮಣಾಧಮನು ದುಷ್ಟನು. ಇವನ ವಿಷಯದಲ್ಲಿ ನಾವು ಕನಿಕರವನ್ನು ತೋರಿಸಬಾರದು. ಒಳ್ಳೆಯ ಆಚಾರದಲ್ಲಿರುವವರು ಇಂತಹವರನ್ನು ನ್ಯಾಯವಾಗಿ ಉಪೇಕ್ಷಿಸಬೇಕು. ಆದರೆ ಇವನಾದರೋ ನಮ್ಮನ್ನೇ ಶರಣುಹೊಂದಿದ್ದಾನೆ.

೭೯. ಆದ್ದರಿಂದ ಇವನಿಗೆ ನಾವು ಮೋಕ್ಷಮಾರ್ಗವನ್ನು ಉಪದೇಶಿಸಿ ಕಾಪಾಡಬೇಕು. ಎಂದುಕೊಂಡು ಎಲೈ ರಾಮನೆ! ನಿನ್ನ ಹೆಸರಿನ ಅಕ್ಷರವನ್ನು ವ್ಯತ್ಯಾಸವಾಗಿ ಮರಾ ಎಂಬುದಾಗಿ ಉಪದೇಶಿಸಿದರು.

೮೦. ಮತ್ತು ಈ ಮರಾ ಎಂಬುದನ್ನೇ ಯಾವಾಗಲೂ ನೀನು ಜಪಿಸುತ್ತಿರು. ಮತ್ತೆ ನಾವು ಇಲ್ಲಿಗೆ ಬರುವವರೆವಿಗೂ ಯಾವಾಗಲೂ ಬಿಡದೆ ಜಪಿಸುತ್ತಿರು.

೮೧. ಹೀಗೆಂದುಹೇಳಿ ಆ ದಿವ್ಯದರ್ಶನವುಳ್ಳ ಮುನಿಗಳು ಹೊರಟುಹೋದರು. ನಾನೂ ಕೂಡ ಆ ಮುನಿಗಳು ಹೇಳಿದಂತೆ ಆಲಸ್ಯಪಡದೆ ಶೀಘ್ರವಾಗಿ ಮಾಡಿದೆನು.

ಜಪನ್ ಏಕಾಗ್ರಮನಸಾ ಬಾಹ್ಯಂ ವಿಸ್ಮೃತವಾನಹಂ । ಏವಂ ಬಹುತಿಥೇ ಕಾಲೇ ಗತೇ ನಿಶ್ಚಲರೂಪಿಣಃ ॥ ೮೨ ॥

ಸರ್ವಸಂಗವಿಹೀನಸ್ಯ ವಲ್ಮೀಕೋಭೂನ್ಮಮೋಪರಿ । ತತೋ ಯುಗಸಹಸ್ರಾಂತೇ ಋಷಯಃ ಪುನರಾಗಮನ್ ॥ ೮೩ ॥

ಮಾಮೂಚುರ್ನಿಷ್ಕ್ರಮಸ್ವೇತಿ ತಚ್ಛ್ರುತ್ವಾ ತೂರ್ಣಮುತ್ಥಿತಃ । ವಲ್ಮೀಕಾನ್ನಿರ್ಗತಶ್ಚಾಹಂ ನೀಹಾರಾದಿವ ಭಾಸ್ಕರಃ ॥ ೮೪ ॥

ಮಾಮಪ್ಯಾಹುರ್ಮುನಿಗಣಾ ವಾಲ್ಮೀಕಿಸ್ತ್ವಂ ಮುನೀಶ್ವರ । ವಲ್ಮೀಕಾತ್ಸಂಭವೋ ಯಸ್ಮಾದ್ದ್ವಿತೀಯಂ ಜನ್ಮ ತೇಭವತ್ ॥ ೮೫ ॥

---

೮೨. ಆ ರೀತಿಯಾಗಿ ಜಪಿಸುತ್ತಿರುವಾಗ ಮನಸ್ಸನ್ನು ಆ ಜಪದಲ್ಲಿಯೇ ನಿಲ್ಲಿಸಿಕೊಂಡು ಹೊರಗಿನ ಪ್ರಪಂಚವನ್ನೇ ಮರೆಯುತ್ತಿದ್ದೆನು. ಕೊನೆ ಕೊನೆಗೆ ಹೊರಗಿನ ವಿಷಯವನ್ನೇ ಮರೆತು ಚಲಿಸದೆ ಇದ್ದುಬಿಟ್ಟೆನು.

೮೩. ಈರೀತಿಯಾಗಿ ಚಲಿಸದಂತಿರುತ್ತ ಧ್ಯಾನಮಾಡುತ್ತಿರಲು ಬಹುದಿನಗಳು ಕಳೆದುವು. ಎಲ್ಲಾ ವಿಷಯಗಳನ್ನೂ ಬಿಟ್ಟು ಮೇಲಕ್ಕೇಳದೇನೇ ಜಪಿಸುತ್ತಿದ್ದುದರಿಂದ ನನ್ನಮೇಲೆ ಹುತ್ತವು ಕಟ್ಟಿಕೊಂಡು ಬೆಳೆಯಿತು. ಹೀಗಿರುತ್ತಿರಲು ಸಾವಿರಾರು ಯುಗಗಳು ಕಳೆದಮೇಲೆ ಆ ಮುನಿಗಳು ಮತ್ತೆ ಅಲ್ಲಿಗೆ ಬಂದರು.

೮೪. ಅಲ್ಲಿ ನನ್ನನ್ನು ನೋಡಿ ಎಲೈ ಬೇಡನೆ! ಎದ್ದೇಳು, ಈ ಹುತ್ತದಿಂದ ಹೊರಗೆ ಬಾ ಎಂದರು. ಆ ಮಾತನ್ನು ಕೇಳಿ ನಾನು ಜಾಗ್ರತೆಯಾಗಿ ಹೊರಕ್ಕೆ ಬಂದೆನು. ಸೂರ್ಯನು ಮಂಜಿನೊಳಗಿನಿಂದ ಹೊರಕ್ಕೆ ಬಂದಂತೆ ನಾನು ಆ ಹುತ್ತದಿಂದ ಹೊರಗೆ ಬಂದೆನು.

೮೫. ಇದನ್ನು ನೋಡಿ ಆ ಸಪ್ತಋಷಿಗಳು ನೀನು ವಲ್ಮೀಕದ (ಹುತ್ತದ) ದೆಸೆಯಿಂದ ಹೊರಕ್ಕೆ ಬಂದುದರಿಂದ ವಾಲ್ಮೀಕಿ ಎಂಬ ಹೆಸರನ್ನು ಹೊಂದು. ಇದೇ ನಿನಗೆ ಎರಡನೆಯ ಜನ್ಮವಾಗಿರುವುದು.

ಇತ್ಯುಕ್ತ್ವಾ ತೇ ಯಯುರ್ದಿವ್ಯ ಗತಿಂ ರಘುಕುಲೋತ್ತಮ । ಅಹಂ ತೇ ರಾಮ ನಾಮ್ನಶ್ಚ ಪ್ರಭಾವಾದೀದೃಶೋಽಭವಂ ॥ ೮೬ ॥

ಅದ್ಯ ಸಾಕ್ಷಾತ್ಪ್ರಪಶ್ಯಾಮಿ ಸಸೀತಂ ಲಕ್ಷ್ಮಣೇನ ಚ । ರಾಮಂ ರಾಜೀವಪತ್ರಾಕ್ಷಂ ತ್ವಾಂ ಮುಕ್ತೋ ನಾತ್ರ ಸಂಶಯಃ ॥ ೮೭ ॥

ಆಗಚ್ಛ ರಾಮ ಭದ್ರಂ ತೇ ಸ್ಥಲಂ ವೈ ದರ್ಶಯಾಮ್ಯಹಂ । ಏವ ಮುಕ್ತ್ವಾ ಮುನಿಃ ಶ್ರೀಮಾಂಲ್ಲಕ್ಷ್ಮಣೇನ ಸಮನ್ವಿತಃ ॥ ೮೮ ॥

ಶಿಷ್ಯೈಃ ಪರಿವೃತೋ ಗತ್ವಾ ಮಧ್ಯೇ ಪರ್ವತಗಂಗಯೋಃ । ತತ್ರ ಶಾಲಾಂ ಸುವಿಸ್ತೀರ್ಣಾಂ ಕಾರಯಾಮಾಸ ವಾಸಭೂಃ ॥ ೮೯ ॥

---

೮೬. ಎಂದು ಹೇಳಿ ಅವರು ಹೊರಟುಹೋದರು. ನಾನೂಕೂಡ ಆ ರಾಮನಾಗಿರುವ ನಿನ್ನ ಹೆಸರಿನ ಪ್ರಭಾವದಿಂದ ಈ ರೀತಿಯಾದ ಬ್ರಹ್ಮರ್ಷಿಯಾದೆನು.

೮೭. ನೀನೇ ಲಕ್ಷ್ಮಣ, ಸೀತೆಯರೊಡನೆ ಬಂದಿದ್ದೀಯೆ. ಈಗ ನಾನು ಜಪಿಸುತ್ತಿದ್ದ ಮಂತ್ರದ ದೇವತೆಯನ್ನೇ ಪ್ರತ್ಯಕ್ಷವಾಗಿ ಕಾಣುತ್ತಿದ್ದೇನೆ. ಕಮಲದಂತೆ ಕಣ್ಣುಗಳುಳ್ಳ ಸ್ವಾಮಿಯಾದ ನಿನ್ನನ್ನು ನೋಡಿದುದರಿಂದ ಮುಕ್ತಿಯು ಬಂದಿತು. ಇದರಲ್ಲಿ ಸಂಶಯವಿಲ್ಲ.

೮೮. ಎಲೈ ರಾಮನೇ! ಬಾ. ನಿನಗೆ ಮಂಗಳವಾಗಲಿ, ತಪಸ್ಸುಮಾಡಲು ಅನುಕೂಲವಾದ ಸ್ಥಳವನ್ನು ತೋರಿಸುತ್ತೇನೆ. ಈ ರೀತಿಯಾಗಿ ವಾಲ್ಮೀಕಿಯು ಹೇಳಿ ಲಕ್ಷ್ಮಣನೊಡನೆಯೂ ತನ್ನ ಶಿಷ್ಯರೊಡನೆಯೂ ಕೂಡಿಕೊಂಡು ಗಂಗೆ ಮತ್ತು ಬೆಟ್ಟಗಳ ಮಧ್ಯಭಾಗಕ್ಕೆ ಹೋದನು.

೮೯–೯೦. ಅಲ್ಲಿ ಜಾಗವನ್ನು ಸರಿಮಾಡಿ ದೊಡ್ಡದಾಗಿ ವಿಸ್ತಾರವಾಗಿರುವ ಎರಡು ಪರ್ಣಶಾಲೆಗಳನ್ನು ನಿರ್ಮಿಸಿದರು. ಒಂದು ಪೂರ್ವ

ಪ್ರಾಕ್ಪಶ್ಚಿಮಂ ದಕ್ಷಿಣೋದಕ್ ಶೋಭನಂ ಮಂದಿರದ್ವಯಂ । ಜಾನಕ್ಯಾ ಸಹಿತೋ ರಾಮೋ ಲಕ್ಷ್ಮಣೇನ ಸಮನ್ವಿತಃ ॥
ತತ್ರ ತೇ ದೇವಸದೃಶಾ ಹ್ಯವಸನ್ಭವನೋತ್ತಮೇ ॥ ೯೦ ॥

ವಾಲ್ಮೀಕಿನಾ ತತ್ರ ಸುಪೂಜಿತೋಽಯಂ ರಾಮಸ್ಸಸೀತಸ್ಸಹಲಕ್ಷ್ಮಣೇನ ।
ದೇವೈರ್ಮುನೀಂದ್ರೈಸ್ಸಹಿತೋ ಮುದಾಸ್ತೇ ಸ್ವರ್ಗೇ ಯಥಾ ದೇವಪತಿಸ್ಸಶಚ್ಯಾ ॥ ೯೧ ॥

ಇತಿ ಶ್ರೀ ಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ
ಷಷ್ಠಸ್ಸರ್ಗಃ ಸಮಾಪ್ತಃ

ಪಶ್ಚಿಮವಾಗಿಯೂ, ಮತ್ತೊಂದು ದಕ್ಷಿಣೋತ್ತರವಾಗಿಯೂ ಇದ್ದಿತು. ಆ ಶ್ರೀರಾಮನು ಲಕ್ಷ್ಮಣ ಸೀತೆಯರೊಡನೆ ಆ ಮನೆಗಳಲ್ಲಿ ದೇವತೆಗಳಂತಿರುತ್ತ ಸುಖವಾಗಿದ್ದನು.

೯೧. ವಾಲ್ಮೀಕಿಯು ಆಗಾಗ ಅವರ ಮನೆಗೆ ಹೋಗುತ್ತಿದ್ದನು. ಮತ್ತು ಗೌರವಿಸುತ್ತಲೂ ಇದ್ದನು. ಇಂತಹ ರಾಮನು ಸೀತೆ ಲಕ್ಷ್ಮಣ ಮುನಿಗಳ ಸಂಗಡ ದೇವತೆಗಳಿಂದಲೂ ಮುನಿಗಳಿಂದಲೂ ಕೂಡಿ, ಇಂದ್ರನು ಶಚಿಯೊಡನೆ ಸ್ವರ್ಗದಲ್ಲಿರುವಂತೆ ಇರುತ್ತಿದ್ದನು.

ಇಂತು ಶ್ರೀಮದಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ ಆರನೆಯ ಸರ್ಗವು.

॥ ಶ್ರೀರಸ್ತು ॥

ಅಥ ಅಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಸಪ್ತಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಅಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದ ಏಳನೆಯ ಸರ್ಗದಲ್ಲಿ ಮಾಡಬೇಕಾದ ಸಂಕಲ್ಪ ನ್ಯಾಸ ಧ್ಯಾನ ಜಪಗಳ ಕ್ರಮವು

ಪೂರ್ವೋಕ್ತವಿಧಿನಾ ಅಯೋಧ್ಯಾಕಾಂಡೇ ಸಪ್ತಮಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ ಇತಿಸಂಕಲ್ಪ್ಯ ॥

ಹಿಂದೆ ಹೇಳಿದ ವಿಧಿಯಂತೆ ಅಯೋಧ್ಯಾಕಾಂಡದ ಏಳನೆಯ ಸರ್ಗದಲ್ಲಿ ನ್ಯಾಸ, ಧ್ಯಾನ, ಜಪಗಳನ್ನು ಮಾಡುತ್ತೇನೆ. ಎಂಬುದಾಗಿ ಸಂಕಲ್ಪವನ್ನು ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ರಾಂ ರೀಂ ನಾಂ ಅಂಗುಷ್ಠಾಭ್ಯಾಂ ನಮಃ
ಓಂ ರಾಂ ರೀಂ ನಾಂ ತರ್ಜನೀಭ್ಯಾಂ ನಮಃ
ಓಂ ರಾಂ ರೀಂ ನಾಂ ಮಧ್ಯಮಾಭ್ಯಾಂ ನಮಃ
ಓಂ ರಾಂ ರೀಂ ನಾಂ ಅನಾಮಿಕಾಭ್ಯಾಂ ನಮಃ
ಓಂ ರಾಂ ರೀಂ ನಾಂ ಕನಿಷ್ಠಿಕಾಭ್ಯಾಂ ನಮಃ
ಓಂ ರಾಂ ರೀಂ ನಾಂ ಕರತಲಕರಪೃಷ್ಠಾಭ್ಯಾಂ ನಮಃ

|| ಅಥ ಷಡಂಗನ್ಯಾಸಃ ||

ಷಡಂಗನ್ಯಾಸವು

ಓಂ ರಾಂ ರೀಂ ನಾಂ ಹೃದಯಾಯ ನಮಃ

ಓಂ ರಾಂ ರೀಂ ನಾಂ ಶಿರಸೇ ಸ್ವಾಹಾ

ಓಂ ರಾಂ ರೀಂ ನಾಂ ಶಿಖಾಯೈ ವಷಟ್

ಓಂ ರಾಂ ರೀಂ ನಾಂ ಕವಚಾಯ ಹುಂ

ಓಂ ರಾಂ ರೀಂ ನಾಂ ನೇತ್ರತ್ರಯಾಯ ವೌಷಟ್

ಓಂ ರಾಂ ರೀಂ ನಾಂ ಅಸ್ತ್ರಾಯ ಫಟ್

ಓಂ ರಾಂ ರೀಂ ನಾಂ ಇತಿ ದಿಗ್ಬಂಧಃ

ಓಂ ರಾಂ ರೀಂ ನಾಂ ಎಂದು ದಿಗ್ಬಂಧವು

|| ಅಥ ಧ್ಯಾನಂ ||

ಧ್ಯಾನವು

ಸುಮಂತ್ರೋಽಪಿ ತದಾಯೋಧ್ಯಾಂ ದಿನಾಂತೇ ಪ್ರವಿವೇಶ ಹ । ವಸ್ತ್ರೇಣ ಮುಖಮಾಚ್ಛಾದ್ಯ ಬಾಷ್ಪಾಕುಲಿತ ಲೋಚನಃ ||

ಇತಿ ಧ್ಯಾತ್ವಾ ಚ ಶ್ರೀರಾಮುಚರಿತಂ ಪಠ್ಯತೇ ತದಾ || ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಪಾರಾಯಣಾಂತೇ ಪುನಃ ಷಡಂಗನ್ಯಾಸಂ ಕೃತ್ವಾ ಓಂ ರಾಂ ರೀಂ ನಾಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್

ಪಾರಾಯಣವಾದಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ರಾಂ ರೀಂ ನಾಂ ಇತಿ ದಿಗ್ವಿಮೋಕಃ ಎಂದೆನ್ನಬೇಕು.

ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

|| ಇತಿ ಶ್ರೀ ಅಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಸಪ್ತಮಸರ್ಗೇ ನ್ಯಾಸ ಧ್ಯಾನ ಜಪಕ್ರಮಃ ||

ಇಂತು ಅಯೋಧ್ಯಾಕಾಂಡದ ಏಳನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಸಪ್ತಮಸ್ಸರ್ಗಃ

॥ ಮಹಾದೇವ ಉವಾಚ ॥

ಸುಮಂತ್ರೋಽಪಿ ತದಾಯೋಧ್ಯಾಂ ದಿನಾಂತೇ ಪ್ರವಿವೇಶ ಹ । ವಸ್ತ್ರೇಣ ಮುಖಮಾಚ್ಛಾದ್ಯ ಬಾಷ್ಪಾಕುಲಿತಲೋಚನಃ ॥ ೧ ॥

ಬಹಿರೇವ ರಥಂ ಸ್ಥಾಪ್ಯ ರಾಜಾನಂ ದ್ರಷ್ಟುಮಾಯಯೌ । ಜಯಶಬ್ದೇನ ರಾಜಾನಂ ಸ್ತುತ್ವಾ ತಂ ಪ್ರಣನಾಮ ಚ ॥ ೨ ॥

ಅಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ ಏಳನೆಯ ಸರ್ಗವು.

೧. ಮಹಾದೇವನು ಹೇಳಿದನು—ಇತ್ತ ಸುಮಂತ್ರನು ಸಾಯಂಕಾಲದ ಹೊತ್ತಿನಲ್ಲಿ ಅಯೋಧ್ಯೆಗೆ ಹೋದನು. ತಾನು ಊರಿಗೆ ಹೋಗುವಾಗ ಬಟ್ಟೆಯಿಂದ ಮುಖವನ್ನು ಮುಚ್ಚಿಕೊಂಡು ಕಣ್ಣಿನಲ್ಲಿ ನೀರನ್ನು ಸುರಿಸುತ್ತಿದ್ದನು.

೨. ಹೀಗೆ ಊರಿಗೆ ಬಂದ ಸುಮಂತ್ರನು ಅರಮನೆಯ ಹೊರಗಡೆಯಲ್ಲಿಯೇ ರಥವನ್ನು ನಿಲ್ಲಿಸಿ ರಾಜನಾದ ದಶರಥನನ್ನು ನೋಡಲು ಬಂದನು. ಬಂದು ಜಯ ಜಯ ಎಂದು ಹೇಳಿ ರಾಜನನ್ನು ಸ್ತುತಿಸಿ ಅವನಿಗೆ ನಮಸ್ಕರಿಸಿದನು.

ತತೋ ರಾಜಾ ನಮಂತಂ ತಂ ಸುಮಂತ್ರಂ ವಿಹ್ವಲೋಽಬ್ರವೀತ್ । ಸುಮಂತ್ರ ರಾಮಃ ಕುತ್ರಾಸ್ತೇ ಸೀತಯಾ ಲಕ್ಷ್ಮಣೇನ ಚ ॥
ಕುತ್ರ ತ್ಯಕ್ತಸ್ತ್ವಯಾ ರಾಮಃ ಕಿಂ ಮಾಂ ಪಾಪಿನಮಬ್ರವೀತ್ । ಸೀತಾ ವಾ ಲಕ್ಷ್ಮಣೋ ವಾಪಿ ನಿರ್ದಯಂ ಮಾಂ ಕಿಮಬ್ರವೀತ್
ಹಾ ರಾಮ ಹಾ ಗುಣನಿಧೇ ಹಾ ಸೀತೇ ಪ್ರಿಯವಾದಿನಿ । ದುಃಖಾರ್ಣವೇ ನಿಮಗ್ನಂ ಮಾಂ ಮ್ರಿಯಮಾಣಂ ನ ಪಶ್ಯಸಿ ॥ ೫ ॥
ವಿಲಪ್ಯೈವಂ ಚಿರಂ ರಾಜಾ ನಿಮಗ್ನೋ ದುಃಖಸಾಗರೇ । ಏವಂ ಮಂತ್ರೀ ರುದಂತಂ ತಂ ಪ್ರಾಂಜಲಿರ್ವಾಕ್ಯಮಬ್ರವೀತ್ ॥ ೬ ॥

---

೩. ಸುಮಂತ್ರನು ನಮಸ್ಕರಿಸಿದುದನ್ನು ನೋಡಿದ ದಶರಥನು ಬಹು ದುಃಖಪಡುತ್ತ ಇಂತೆಂದನು. ಎಲೈ ಸುಮಂತ್ರನೇ ! ರಾಮನು ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ಎಲ್ಲಿರುವನು ?

೪. ಆ ರಾಮನನ್ನು ನೀನೆಲ್ಲಿ ಬಿಟ್ಟೆ ? ಮತ್ತು ಅವನು ಪಾಪಿಯಾದ ನನ್ನನ್ನು ಕುರಿತು ಏನನ್ನು ಹೇಳಿದನು ? ಸೀತೆಯಾಗಲೀ ಲಕ್ಷ್ಮಣನಾಗಲೀ ದಯಾಶೂನ್ಯನಾದ ನನ್ನನ್ನು ಕುರಿತು ಏನೆಂದು ಹೇಳಿದರು ?

೫. ಹಾ ರಾಮನೆ ! ಹಾ ಗುಣನಿಧಿಯೆ ! ಹಾ ಸೀತೆಯೇ ! ಎಲೈ ಪ್ರಿಯವಾದಿನಿಯೆ ! ನಾನು ದುಃಖವೆಂಬ ಸಮುದ್ರದಲ್ಲಿ ಮುಳುಗಿ ಸಾಯುತ್ತಿರುವೆನು. ನನ್ನನ್ನು ನೀವು ನೋಡಲಾರಿರಿ.

೬. ರಾಜನು ಹೀಗೆಂದು ಗಟ್ಟಿಯಾಗಿ ಬಹು ಹೊತ್ತು ಅಳುತ್ತಲಿದ್ದು ದುಃಖವೆಂಬ ಸಮುದ್ರದಲ್ಲಿ ಮುಳುಗಿದ್ದನು. ಹೀಗೆ ಅಳುತ್ತಿರುವ ರಾಜನನ್ನು ಕುರಿತು ಮಂತ್ರಿಯು ಕೈಮುಗಿದುಕೊಂಡು ಇಂತೆಂದನು.

ರಾಮಸ್ಸೀತಾ ಚ ಸೌಮಿತ್ರಿರ್ಮಯಾ ನೀತಾ ರಥೇನ ತೇ । ಶೃಂಗಿಬೇರಪುರಾಭ್ಯಾಶೇ ಗಂಗಾಕೂಲೇ ವ್ಯವಸ್ಥಿತಾಃ ॥ ೭ ॥

ಗುಹೇನ ಕಿಂಚಿದಾನೀತಂ ಫಲಮೂಲಾದಿಕಂ ಚ ಯತ್ । ಸ್ಪೃಷ್ಟ್ವಾ ಹಸ್ತೇನ ಸಂಪ್ರೀತ್ಯಾ ನಾಗ್ರಹೀದ್ವಿಸಸರ್ಜ ತತ್ ॥ ೮ ॥

ವಟಕ್ಷೀರಂ ಸಮಾನಾಯ್ಯ ಗುಹೇನ ರಘುನಂದನಃ । ಜಟಾಮುಕುಟಮಾಬಧ್ಯ ಮಾಮಾಹ ವಿಹಸನ್ಮುಖಃ ॥ ೯ ॥

ಸುಮಂತ್ರ ಬ್ರೂಹಿ ರಾಜಾನಂ ಶೋಕಸ್ತೇ ಮಾಸ್ತು ಮತ್ಕೃತೇ । ಸಾಕೇತಾದಧಿಕಂ ಸೌಖ್ಯಂ ವಿಪಿನೇ ನೋ ಭವಿಷ್ಯತಿ ॥ ೧೦ ॥

---

೭. ಎಲೈ ರಾಜನೆ ! ರಾಮನನ್ನೂ ಸೀತೆಯನ್ನೂ ಲಕ್ಷ್ಮಣನನ್ನೂ ನಾನು ನಿನ್ನ ರಥದಲ್ಲಿಯೇ ಕರೆದುಕೊಂಡು ಹೋದೆನು. ಹೀಗೆ ಅವರು ಹೊರಟು ಶೃಂಗಬೇರಪುರದ ಬಳಿ ಗಂಗೆಯ ದಡದಲ್ಲಿ ಹೋಗಿ ಅಲ್ಲಿ ನಿಂತರು.

೮. ಆ ಗಂಗಾನದಿಯ ದಡದಲ್ಲಿ ಗುಹನು ಸ್ವಲ್ಪ ಹಣ್ಣು ಗೆಡ್ಡೆ ಗೆಣಸುಗಳನ್ನು ತಂದನು. ಅದನ್ನು ರಾಮನು ಕೈಯ್ಯಿಂದ ಪ್ರೀತಿಯಿಂದ ಮುಟ್ಟಿದನೇ ಹೊರತು ತೆಗೆದುಕೊಳ್ಳದೇ ಬಿಟ್ಟು ಬಿಟ್ಟನು.

೯. ಆಗ ಗುಹನಿಗೆ ಹೇಳಿ ಅವನ ಕೈಯ್ಯಿಂದ ಆಲದ ಹಾಲನ್ನು ತರಿಸಿ ಅದನ್ನು ತಲೆಯಕೂದಲಿಗೆ ಸವರಿ ಜಟೆಯನ್ನು ಮಾಡಿಕೊಂಡು ತಲೆಯಮೇಲುಗಡೆಗೆ ಕಟ್ಟಿಕೊಂಡನು. ಅನಂತರ ನಗುತ್ತ ನನ್ನನ್ನು ಕುರಿತು ಇಂತೆಂದನು.

೧೦. ಎಲೈ ಸುಮಂತ್ರನೆ ! ನೀನು ಹೋಗಿ ರಾಜನಿಗೆ ಹೇಳು. ಎಲೈ ದೊರೆಯೇ ! ನನಗೋಸ್ಕರ ದುಃಖಪಡಬೇಡ. ಅಯೋಧ್ಯೆಗಿಂತಲೂ ಹೆಚ್ಚಾದ ಸೌಖ್ಯವು ನನಗೆ ಕಾಡಿನಲ್ಲಿ ಉಂಟಾಗುತ್ತದೆ.

ಮಾತುರ್ಮೇ ವಂದನಂ ಬ್ರೂಹಿ ಶೋಕಂ ತ್ಯಜತು ಮತ್ಕೃತೇ । ಆಶ್ವಾಸಯತು ರಾಜಾನಂ ವೃದ್ಧಂ ಶೋಕಪರಿಪ್ಲುತಂ ॥ ೧೧ ॥

ಸೀತಾ ಚಾಶ್ರುಪರೀತಾಕ್ಷೀ ಮಾಮಾಹ ನೃಪಸತ್ತಮ । ದುಃಖಗದ್ಗದಯಾ ವಾಚಾ ರಾಮಂ ಕಿಂಚಿದವೇಕ್ಷತೀ ॥ ೧೨ ॥

ಸಾಷ್ಟಾಂಗಪ್ರಣಿಪಾತಂ ಮೇ ಬ್ರೂಹಿ ಶ್ವಶ್ರ್ವೋಃ ಪದಾಂಬುಜೇ । ಇತಿ ಪ್ರರುದತೀ ಸೀತಾ ಗತಾ ಕಿಂಚಿದವಾಙ್ಮುಖೀ ॥ ೧೩ ॥

ತತಸ್ತೇಶ್ರುಪರೀತಾಕ್ಷಾಃ ನಾವಮಾರುರುಹುಸ್ತದಾ । ಯಾವದ್ಗಂಗಾಂ ಸಮುತ್ತೀರ್ಯ ಗತಾಸ್ತಾವದಹಂ ಸ್ಥಿತಃ ॥ ೧೪ ॥

---

೧೧. ನನ್ನ ತಾಯಿಗೆ ನನ್ನ ನಮಸ್ಕಾರವನ್ನು ಹೇಳು. ನನಗೋಸ್ಕರ ಅವಳು ದುಃಖಪಡಬೇಡ. ಮುದುಕನಾಗಿಯೂ ದುಃಖಪಡುತ್ತಲೂ ಇರುವ ಆ ರಾಜನನ್ನು ಆಕೆಯು ಸಮಾಧಾನಪಡಿಸಲಿ.

೧೨. ಅನಂತರ ಸೀತೆಯು ಕಣ್ಣಿನತುಂಬ ಕಣ್ಣೀರನ್ನು ತುಂಬಿಕೊಂಡು ರಾಮನನ್ನು ಓರೆಗಣ್ಣಿನಿಂದ ನೋಡುತ್ತ ಗದ್ಗದವಾಗಿ ಮಾತನಾಡುತ್ತ ನನ್ನನ್ನು ಕುರಿತು ಇಂತೆಂದಳು.

೧೩. ಎಲೈ ಸುಮಂತ್ರನೆ! ನಿಮ್ಮ ಪಾದಾಂಬುಜಕ್ಕೆ ನಮಸ್ಕರಿಸಿದಳೆಂದು ಅತ್ತೆಯವರಿಗೆ ತಿಳಿಸು. ಹೀಗೆಂದು ಹೇಳಿ ಸೀತೆಯು ಅಳುತ್ತ ತಲೆಯನ್ನು ತಗ್ಗಿಸಿಕೊಂಡು ಮುಂದಕ್ಕೆ ಮಾತನಾಡಲಾರದೆ ಹೊರಟು ಹೋದಳು.

೧೪. ಅನಂತರ ಅವರೆಲ್ಲರೂ ಕಣ್ಣೀರನ್ನು ಸುರಿಸುತ್ತಾ ಗಂಗಾನದಿಯನ್ನು ದಾಟಲು ದೋಣಿಗೆ ಹತ್ತಿದರು. ಅವರೆಲ್ಲರೂ ದೋಣಿಯಿಂದ ಗಂಗೆಯನ್ನು ದಾಟಿ ಆಚೆಯ ದಡಕ್ಕೆ ಹೋಗುವವರೆಗೂ ನಾನು ಅಲ್ಲಿದ್ದೆನು.

ತತೋ ದುಃಖೇನ ಮಹತಾ ಪುನರೇವಾಹವಮಾಗತಃ । ತತೋ ರುದಂತೀ ಕೌಸಲ್ಯಾ ರಾಜಾನಮಿದಮಬ್ರವೀತ್ ॥ ೧೫ ॥

ಕೈಕೇಯ್ಯೈ ಪ್ರಿಯಭಾರ್ಯಾಯೈ ಪ್ರಸನ್ನೋ ದತ್ತವಾನ್ವರಂ । ತ್ವಂ ರಾಜ್ಯಂ ದೇಹಿ ತಸ್ಯೈವ ಮತ್ಪುತ್ರಃ ಕಿಂ ವಿವಾಸಿತಃ ॥ ೧೬ ॥

ಕೃತ್ವಾ ತ್ವಮೇವ ತತ್ಸರ್ವಮಿದಾನೀಂ ಕಿನ್ನು ಶೋಚಸಿ । ಕೌಸಲ್ಯಾವಚನಂ ಶ್ರುತ್ವಾ ಕ್ಷತೇ ಸ್ಪೃಷ್ಟ ಇವಾಗ್ನಿನಾ ॥ ೧೭ ॥

ಪುನಶ್ಶೋಕಾಶ್ರುಪೂರ್ಣಾಕ್ಷಃ ಕೌಸಲ್ಯಾಮಿದಮಬ್ರವೀತ್ । ದುಃಖೇನ ಮ್ರಿಯಮಾಣಂ ಮಾಂ ಕಿಂ ಪುನರ್ದುಃಖಯಸ್ಯಲಂ॥೧೮॥

---

೧೫. ಆಮೇಲೆ ನಾನು ಬಹುವಾದ ದುಃಖದಿಂದ ಕೂಡಿಕೊಂಡು ಹಿಂದಿರುಗಿ ಬಂದೆನು. ಎಂದು ಹೇಳಿದನು. ಆಗ ಕೌಸಲ್ಯೆಯು ಬಹುವಾದ ದುಃಖದಿಂದ ಅಳುತ್ತಾ ರಾಜನನ್ನು ಕುರಿತು ಇಂತೆಂದಳು.

೧೬. ಎಲೈ ದೊರೆಯೇ ! ನಿನಗೆ ಕೈಕೇಯಿಯು ಪ್ರೀತಿಪಾತ್ರಳಾದ ಹೆಂಡತಿಯು. ನೀನು ಸಂತೋಷಪಟ್ಟು ಆಕೆಗೆ ವರವನ್ನೇನೋ ಕೊಟ್ಟೆ ಕೊಡು. ಆದಕ್ಕೆ ನನಗೆ ದುಃಖವಿಲ್ಲ. ನೀನು ಆ ಮಾತಿನಂತೆ ಅವಳ ಮಗನಿಗೇ ರಾಜ್ಯವನ್ನು ಕೊಡು. ಆದರೆ ನನ್ನ ಮಗನನ್ನು ಏಕೆ ಓಡಿಸಿದೆ ? ಇದೆಲ್ಲವನ್ನೂ ನೀನೇ ಸ್ವತಃಮಾಡಿ ಈಗೇತಕ್ಕೆ ದುಃಖಪಡುತ್ತೀಯೆ ? ಎಂದಳು.

೧೭–೧೮. ದಶರಥನು ಕೌಸಲ್ಯೆಯ ಮಾತನ್ನು ಕೇಳಿ ಗಾಯಕ್ಕೆ ಬೆಂಕಿತಗಲಿದಂತೆ ಮತ್ತೆ ಕಣ್ಣಿನ ತುಂಬ ಕಣ್ಣೀರನ್ನು ಹೊಂದಿ ಕೌಸಲ್ಯೆಯನ್ನು ಕುರಿತು ಎಲೈ ಕೌಸಲ್ಯೆಯೆ ! ನಾನು ಮೊದಲೇ ದುಃಖದಿಂದ ಸಾಯುತ್ತಿದ್ದೇನೆ. ಅಂತಹ ನನ್ನನ್ನು ಮತ್ತೆ ನೀನು ಮಾತುಗಳಿಂದ ಹೊಡೆದು ಇನ್ನೂ ಹೆಚ್ಚಾಗಿ ದುಃಖಪಡಿಸುತ್ತೀಯೆ. ಈರೀತಿ ದುಃಖಗೊಂಡ ಈ ಪ್ರಾಣಗಳು ಈಗಲೇನೇ ಹೊರಟು ಹೋಗುತ್ತವೆ ನಿಶ್ಚಯವು.

ಇದಾನೀಮೇವ ಮೇ ಪ್ರಾಣಾಃ ಉತ್ಕ್ರಮಿಷ್ಯಂತಿ ನಿಶ್ಚಯಂ । ಶೃಣು ಭದ್ರೇ ಪುರಾವೃತ್ತಮಿದಾನೀಂ ಸ್ಮೃತಿಮಾಗತಂ ॥ ೧೯ ॥

ಶಪ್ತೋಽಹಂ ಬಾಲಭಾವೇನ ಕೇನಚಿನ್ಮುನಿನಾ ಪುರಾ । ಪುರಾಹಂ ಯೌವನೋದ್ರಿಕ್ತಶ್ಚಾಪಬಾಣಧರೋ ನಿಶಿ ॥ ೨೦ ॥

ಅಚರನ್ಮೃಗಯಾಸಕ್ತೋ ನದ್ಯಾಸ್ತೀರೇ ಮಹಾವನೇ । ತತ್ರಾರ್ಧರಾತ್ರಸಮಯೇ ಮುನಿಃ ಕಶ್ಚಿತ್ತೃಷಾರ್ದಿತಃ ॥ ೨೧ ॥

ಪಿಪಾಸಾರ್ದಿತಯೋಃ ಪಿತ್ರೋರ್ಜಲಮಾನೇತುಮುದ್ಯತಃ । ಅಪೂರಯಜ್ಜಲೇ ಕುಂಭಂ ತದಾ ಶಬ್ದೋಽಭವನ್ಮಹಾನ್ ॥ ೨೨ ॥

---

೧೯. ಎಲೈ ಭದ್ರೆಯೆ ! ಹಿಂದೆ ನಡೆದ ಒಂದು ವಿಷಯವನ್ನು ಹೇಳುತ್ತೇನೆ. ಕೇಳು ! ಈಗ ಅದು ಜ್ಞಾಪಕಕ್ಕೆ ಬಂದಿತು. ಹಿಂದೆ ನಾನು ಬಾಲಭಾವದಿಂದ ತಪ್ಪನ್ನು ಮಾಡಲು ಒಬ್ಬ ಮುನಿಯು ನನಗೆ ಶಾಪವನ್ನು ಕೊಟ್ಟನು.

೨೦. ಪೂರ್ವದಲ್ಲಿ ನಾನು ಯೌವನದ ಭರವನ್ನು ಹೊಂದಿದ್ದಾಗ ಬಿಲ್ಲು ಬಾಣಗಳನ್ನು ಧರಿಸಿಕೊಂಡು ಬೇಟೆಯಾಡುವುದರಲ್ಲಿ ಮನಸ್ಸು ಹುಟ್ಟಿ ರಾತ್ರಿಯಲ್ಲಿ ಒಂದಾನೊಂದು ದೊಡ್ಡ ಕಾಡಿಗೆ ಹೋಗಿ ಅಲ್ಲಿರುವ ನದಿಯ ದಡದಲ್ಲಿ ಬೇಟೆಯಾಡಲು ಕಾದುಕೊಂಡಿದ್ದೆನು.

೨೧–೨೨. ಅಲ್ಲಿಗೆ ಒಬ್ಬ ಬಾಯಾರಿದ ಋಷಿಯು ಬಂದನು. ಅವನು ತಾನು ನೀರನ್ನು ಕುಡಿದು ಬಾಯಾರಿರುವ ತನ್ನ ತಾಯಿ ತಂದೆಗಳಿಗೂ ನೀರನ್ನು ತೆಗೆದುಕೊಂಡು ಹೋಗಲು ಸಿದ್ಧನಾಗಿ ತಾನು ತಂದಿದ್ದ ಪಾತ್ರೆಗೆ ನೀರನ್ನು ತುಂಬಿದನು. ಆ ನೀರನ್ನು ತುಂಬುವ ಶಬ್ದವು ಬಹು ಹೆಚ್ಚಾಗಿ ಕೇಳಿಸಿತು.

ಗಜಃ ಪಿಬತಿ ಪಾನೀಯಮಿತಿ ಮತ್ವಾ ಮಹಾನಿಶಿ । ಬಾಣಂ ಧನುಷಿ ಸಂಧಾಯ ಶಬ್ದವೇಧಿನಮುಕ್ಷಿಪಂ || ೨೩ ||
ಹಾ ಹತೋಽಸ್ಮೀತಿ ಶಬ್ದೋಽಭೂತ್ತದಾ ಮಾನುಷಸೂಚಕಃ । ಕಸ್ಯಾಪಿ ನ ಕೃತೋ ದೋಷೋ ಮಯಾ ಕೇನ ಹತೋ ವಿಧೇ ||
ಪ್ರತೀಕ್ಷತೇ ಮಾಂ ಮಾತಾ ಪಿತಾ ಚ ಜಲಕಾಂಕ್ಷಯಾ । ತಚ್ಛ್ರುತ್ವಾ ಭಯಸಂತ್ರಸ್ತಸ್ತತೋಽಹಂ ಪೌರುಷಂ ವಚಃ || ೨೪ ||
ಶನೈರ್ಗತ್ವಾಥ ತತ್ಪಾರ್ಶ್ವಂ ಸ್ವಾಮಿನ್ ದಶರಥೋಽಸ್ಮ್ಯಹಂ । ಅಜಾನತಾ ಮಯಾ ವಿದ್ಧಸ್ತ್ರಾತುಮರ್ಹಸಿ ಮಾಂ ಮುನೇ || ೨೬ ||

---

೨೩. ಆ ಶಬ್ದವನ್ನು ಕೇಳಿ ನಾನು ಈಗ ಇಲ್ಲಿಗೆ ಆನೆಯು ಬಂದು ನೀರನ್ನು ಕುಡಿಯುತ್ತಿದೆ. ಅದರಿಂದಲೇ ಈ ದೊಡ್ಡ ಶಬ್ದವು ಬರುತ್ತಿರುವುದು. ಎಂದು ತಿಳಿದು ಆ ಅರ್ಧರಾತ್ರಿಯಲ್ಲಿ ಧನುಸ್ಸಿಗೆ ಬಾಣವನ್ನು ಹೂಡಿ ಶಬ್ದವು ಬರುವಕಡೆಗೆ ಅದನ್ನು ಬಿಟ್ಟೆನು.

೨೪. ಒಡನೆಯೇ ಅಯ್ಯೋ ಕೆಟ್ಟೆನು ಸತ್ತೆನು ಎಂಬ ಮನುಷ್ಯನ ಧ್ವನಿಯು ಕೇಳಿಸಿತು. ಮತ್ತು ಅಯ್ಯೋ ! ನಾನು ಒಬ್ಬರಿಗೂ ಕೆಟ್ಟದ್ದನ್ನು ಮಾಡಲಿಲ್ಲವಲ್ಲ ! ದೇವರೇ ನನ್ನನ್ನು ಯಾವನು ಯಾಕೆ ತಾನೆ ಹೊಡೆದನು ?

೨೫. ನನ್ನ ತಾಯಿತಂದೆಗಳು ಬಾಯಾರಿ ನೀರನ್ನು ತರುತ್ತಾನೆಂದು ಕಾದುಕೊಂಡಿರುವರಲ್ಲಾ ! ಎಂದನು. ಈ ಮನುಷ್ಯನು ಆಡುವ ಮಾತನ್ನು ಕೇಳಿದಕೂಡಲೇ ನನಗೆ ಹೆದರಿಕೆಯುಂಟಾಯಿತು.

೨೬. ಅನಂತರ ಆ ಮಾತುಬಂದ ಜಾಗವನ್ನೇ ಅನುಸರಿಸಿಕೊಂಡು ಹೋಗಿ ಅಲ್ಲಿ ಅಳುತ್ತಿದ್ದವನ ಬಳಿಗೆ ಹೋಗಿ ಮೆಲ್ಲನೆ ಅವನ ಹತ್ತಿರಕ್ಕೂ ಹೋಗಿ ಸ್ವಾಮಿ ! ನಾನು ದಶರಥನು. ನನಗೆ ಮನುಷ್ಯನೆಂಬುದು ತಿಳಿಯಲಿಲ್ಲ. ಆದ್ದರಿಂದ ನಾನು ಸದ್ದಿನ ನಿರೀಕ್ಷಣೆಯಮೇಲೆ ಬಾಣದಿಂದ ಹೊಡೆದನು. ನನ್ನ ತಪ್ಪನ್ನು ಕ್ಷಮಿಸು.

ಇತ್ಯುಕ್ತ್ವಾ ಪಾದಯೋಸ್ತಸ್ಯ ಪತಿತೋ ಗದ್ಗದಾಕ್ಷರಃ । ತದಾ ಮಾಮಾಹ ಸ ಮುನಿರ್ಮಾಭೈಷೀರ್ನೃಪಸತ್ತಮ ॥ ೨೭ ॥
ಬ್ರಹ್ಮಹತ್ಯಾ ಸ್ಪೃಶೇನ್ನ ತ್ವಾಂ ವೈಶ್ಯೋಽಹಂ ತಪಸಿ ಸ್ಥಿತಃ । ಪಿತರೌ ಮಾಂ ಪ್ರತೀಕ್ಷೇತೇ ಕ್ಷುತ್ತೃಡ್ಭ್ಯಾಂ ಪರಿಪೀಡಿತೌ ॥ ೨೮ ॥
ತಯೋಸ್ತ್ವಮುದಕಂ ದೇಹಿ ಶೀಘ್ರಮೇವಾವಿಚಾರಯನ್ । ನೋ ಚೇತ್ತ್ವಾಂ ಭಸ್ಮಸಾತ್ಕುರ್ಯಾತ್ಪಿತಾ ಮೇ ಯದಿ ಕುಪ್ಯತಿ ॥
ಜಲಂ ದತ್ವಾ ತು ತೌ ನತ್ವಾ ಕೃತಂ ಸರ್ವಂ ನಿವೇದಯ । ಶಲ್ಯಮುದ್ಧರ ಮದ್ದೇಹಾತ್ಪ್ರಾಣಾಂಸ್ತ್ಯಕ್ಷ್ಯಾಮಿ ಪೀಡಿತಃ ॥ ೩೦ ॥

೨೭–೨೮. ಎಂದು ಹೆದರಿಕೆಯಿಂದ ತೊದಲು ಮಾತುಗಳನ್ನು ಆಡುತ್ತ ಆವನ ಪಾದಗಳಮೇಲೆ ಬಿದ್ದೆನು. ಆಗ ಆ ಮುನಿಯು ನನ್ನನ್ನು ಕುರಿತು ಎಲೈ ರಾಜಶ್ರೇಷ್ಠನೆ! ಹೆದರಬೇಡ. ನಿನಗೆ ಬ್ರಹ್ಮಹತ್ಯೆಯ ದೋಷವುಂಟಾಗುವುದಿಲ್ಲ. ನಾನು ವೈಶ್ಯನು. ತಪಸ್ವಿಯಾಗಿದ್ದೇನೆ. ನನ್ನ ತಾಯಿತಂದೆಗಳು ಬಾಯಾರಿಕೆಯಿಂದ ಬಳಲುತ್ತಾ ನನ್ನನ್ನು ಎದುರು ನೋಡುತ್ತಿದ್ದಾರೆ.

೨೯. ಈ ನೀರನ್ನು ಬೇಗನೆ ತೆಗೆದುಕೊಂಡು ಹೋಗಿ ಅವರಿಗೆ ಕುಡಿಯಲು ಕೊಡು. ನೀನು ಯಾವ ವಿಷಯವನ್ನೂ ಯೋಚಿಸಲೇ ಬೇಡ. ಹಾಗೆ ನೀನು ನೀರನ್ನು ತೆಗೆದುಕೊಂಡು ಹೋಗದಿದ್ದರೆ ನನ್ನ ತಂದೆಗೆ ಕೋಪ ಬಂದೀತು! ಆಗ ಅವನು ನಿನ್ನನ್ನು ಶಾಪದಿಂದ ಸುಟ್ಟು ಬೂದಿಯನ್ನಾಗಿ ಮಾಡಿಯಾನು!

೩೦. ನೀನು ನೀರನ್ನು ತೆಗೆದುಕೊಂಡು ಹೋಗಿ ಅವರಿಗೆ ಕೊಟ್ಟು ನಡೆದುದೆಲ್ಲವನ್ನೂ ತಿಳಿಸು. ನನ್ನ ದೇಹದಲ್ಲಿ ಚುಚ್ಚಿಕೊಂಡಿರುವ ಈ ಬಾಣವನ್ನು ಕಿತ್ತುಬಿಡು. ನೋವಿನಿಂದ ಪ್ರಾಣಗಳು ಹೋಗುತ್ತಿವೆ. ಈ ನೋವಿನಿಂದಲೇ ಪ್ರಾಣಗಳನ್ನೂ ಬಿಟ್ಟು ಬಿಡುತ್ತೇನೆ.

ಇತ್ಯುಕ್ತೋ ಮುನಿನಾ ಶೀಘ್ರಂ ಬಾಣಮುತ್ಪಾಟ್ಯ ದೇಹತಃ । ಸಜಲಂ ಕಲಶಂ ಧೃತ್ವಾ ಗತೋಽಹಂ ಯತ್ರ ದಂಪತೀ ॥ ೩೧ ॥

ಅತಿವೃದ್ಧಾವಂಧದೃಶೌ ಕ್ಷುತ್ಪಿಪಾಸಾರ್ದಿತೌ ನಿಶಿ । ನಾಯಾತಿ ಸಲಿಲಂ ಗೃಹ್ಯ ಪುತ್ರಃ ಕಿಂ ವಾತ್ರ ಕಾರಣಂ ॥ ೩೨ ॥

ಅನನ್ಯಗತಿಕೌ ವೃದ್ಧೌ ಶೋಚ್ಯೌ ತೃಟ್ಪರಿಪೀಡಿತೌ । ಆವಾಮುಪೇಕ್ಷತೇ ಕಿಂ ವಾ ಭಕ್ತಿಮಾನಾವಯೋಃ ಸುತಃ ॥ ೩೩ ॥

ಇತಿ ಚಿಂತಾವ್ಯಾಕುಲೌ ತೌ ಮತ್ಪಾದನ್ಯಾಸಜಂ ಧ್ವನಿಂ । ಶ್ರುತ್ವಾ ಪ್ರಾಹ ಪಿತಾ ಪುತ್ರ ಕಿಂ ವಿಲಂಬಃ ಕೃತಸ್ತ್ವಯಾ ॥ ೩೪ ॥

---

೩೧. ಆ ಮುನಿಯು ಹೀಗೆಂದು ಹೇಳುತ್ತಲೂ ಅವನ ದೇಹದಿಂದ ಬೇಗನೆ ಆ ಬಾಣವನ್ನು ತೆಗೆದೆನು. ಮತ್ತು ಆ ಪಾತ್ರೆಯಲ್ಲಿ ನೀರನ್ನು ತುಂಬಿಕೊಂಡು ಆತನ ತಾಯಿತಂದೆಗಳಿರುವಲ್ಲಿಗೆ ಬೇಗನೆ ನೀರನ್ನು ತೆಗೆದುಕೊಂಡು ಹೋದೆನು.

೩೨. ಅವರು ಬಹಳ ಮುದುಕರು. ಇಬ್ಬರೂ ಕುರುಡರು. ಬಹುವಾಗಿ ಆ ರಾತ್ರಿಯಲ್ಲಿ ಬಾಯಾರಿಕೆಯನ್ನು ಹೊಂದಿದ್ದರು. ಅವರ ಬಳಿಗೆ ಹೋದೆನು. ಅವರು ಬಾಯಾರಿಕೆಯಿಂದ ಬಳಲಿ ಅದನ್ನು ತಡೆಯಲಾರದೆ ಮಗನು ನೀರನ್ನು ತೆಗೆದುಕೊಂಡು ಇನ್ನೂ ಬರಲಿಲ್ಲವಲ್ಲ! ಕಾರಣವೇನಿರಬಹುದು?

೩೩. ನಮ್ಮನ್ನು ನೋಡತಕ್ಕವರು ಮತ್ತೊಬ್ಬರು ಯಾರೂ ಇಲ್ಲವಲ್ಲ! ನಾವು ಕುರುಡರೂ ಮುದುಕರೂ ಆಗಿರುವೆವಲ್ಲ! ಬಹಳವಾಗಿ ಬಾಯಾರಿರುವೆವಲ್ಲ! ನಮ್ಮಲ್ಲಿ ಅವನಿಗೆ ಬಹು ಭಕ್ತಿಯಿರುವುದಲ್ಲ! ಬರದಿರಲು ಕಾರಣವೇನು? ಎಂದೆನ್ನುತ್ತಿದ್ದರು.

೩೪. ಈ ರೀತಿಯಾಗಿ ಅವರು ದುಃಖಪಡುತ್ತಿರುವಾಗ ನಾನು ಹೋಗಲು ನನ್ನ ಹೆಜ್ಜೆಯ ಧ್ವನಿಯನ್ನು ಕೇಳಿ ಅಪ್ಪಾ ಮಗೂ! ಏತಕ್ಕೆ ಇಷ್ಟು ಸಾವಕಾಶಮಾಡಿದೆಯಪ್ಪಾ? ಬಾ.

ದೇಹ್ಯಾ ವಯಯೋಃ ಸುಪಾನೀಯಂ ಪಿಬತ್ವಮಪಿ ಪುತ್ರಕ । ಇತ್ಯೇವಂ ಲಪತೋರ್ಭೀತ್ವಾ ಸಕಾಶಮಗಮಂ ಶನೈಃ ॥ ೩೫ ॥
ಪಾದಯೋಃ ಪ್ರಣಿಪತ್ಯಾಹಮಬ್ರುವಂ ವಿನಯಾನ್ವಿತಃ । ನಾಹಂ ಪುತ್ರಸ್ತ್ವಯೋಧ್ಯಾಯಾ ರಾಜಾ ದಶರಥೋಸ್ಮ್ಯಹಂ ॥ ೩೬ ॥
ಪಾಪೋಹಂ ಮೃಗಯಾಸಕ್ತೋ ರಾತ್ರೌ ಮೃಗವಿಹಿಂಸಕಃ । ಜಲಾವತಾರಾದ್ದೂರೇಹಂ ಸ್ಥಿತ್ವಾ ಜಲಗತಂ ಧ್ವನಿಂ ॥ ೩೭ ॥
ಶ್ರುತ್ವಾಹಂ ಶಬ್ದವೇಧಿತ್ವಾದೇಕಂ ಬಾಣಮಥಾತ್ಯಜಂ । ಹತೋಸ್ಮೀತಿ ಧ್ವನಿಂ ಶ್ರುತ್ವಾ ಭಯಾತ್ತತ್ರಾಹಮಾಗತಃ ॥ ೩೮ ॥

---

೩೫. ನಮ್ಮಿಬ್ಬರಿಗೂ ಕುಡಿಯಲು ನೀರನ್ನು ಕೊಡು. ನೀನೂ ಕುಡಿ. ಎಂಬುದಾಗಿ ಅವರು ಹೇಳುತ್ತಿರಲು ನಾನು ಹೆದರಿಕೆಯಿಂದ ಅವರ ಹತ್ತಿರಕ್ಕೆ ಮೆಲ್ಲಗೆ ಹೋದೆನು.

೩೬. ಮತ್ತು ಅವರ ಪಾದಗಳಿಗೆ ನಮಸ್ಕರಿಸಿ ವಿನಯದಿಂದ ಇಂತೆಂದನು. ಅಯ್ಯಾ ! ನಾನು ನಿಮ್ಮ ಮಗನಲ್ಲ. ಅಯೋಧ್ಯೆಗೆ ರಾಜನಾದ ದಶರಥನು.

೩೭–೩೮. ಪಾಪಿಯು. ಬೇಟೆಯಲ್ಲಿಯೇ ಆಸೆಯುಳ್ಳವನು. ಆದುದರಿಂದ ಮೃಗಗಳನ್ನು ಹೊಡೆಯಬೇಕೆಂದು ರಾತ್ರಿಯಲ್ಲಿ ನೀರಿನ ಬಳಿ ಹೋಗಿ ಕಾದಿದ್ದೆನು. ಮೃಗಗಳು ನೀರು ಕುಡಿಯುವುದಕ್ಕೆ ಇಳಿಯುವ ಸ್ಥಳವನ್ನು ನೋಡಿ ಅದಕ್ಕೆ ದೂರದಲ್ಲಿ ಇದ್ದುಕೊಂಡಿದ್ದೆನು. ಆಗ ನೀರಿನ ಬಳಿಯಲ್ಲಿ ಧ್ವನಿಯುಂಟಾಗಲು ಅದನ್ನು ಕೇಳಿ ಅದರ ನಿರೀಕ್ಷಣೆಯಿಂದಲೇ ಮೃಗಗಳನ್ನು ಹೊಡೆಯಲು ಶಕ್ತಿಯುಳ್ಳ ನಾನು ಒಂದು ಬಾಣವನ್ನು ಬಿಟ್ಟೆನು. ಒಡನೆಯೇ ಕೆಟ್ಟೆನಲ್ಲ ! ಎಂಬ ಧ್ವನಿಯು ಬರಲು ಅದನ್ನು ಕೇಳಿ ಭಯಗೊಂಡು ಅಲ್ಲಿಗೆ ಓಡಿದೆನು.

ಜಟಾ ವಿಕೀರ್ಯ ಪತಿತಂ ದೃಷ್ಟ್ವಾಹಂ ಮುನಿದಾರಕಂ । ಭೀತೋ ಗೃಹೀತ್ವಾ ತತ್ಪಾದೌ ರಕ್ಷ ರಕ್ಷೇತಿ ಚಾಬ್ರವಂ ॥ ೩೯ ॥

ಮಾ ಭೈಷೀರಿತಿ ಮಾಂ ಪ್ರಾಹ ಬ್ರಹ್ಮಹತ್ಯಾಭಯಂ ನ ತೇ । ಮತ್ಪಿತ್ರೋಃ ಸಲಿಲಂ ದತ್ವಾ ನತ್ವಾ ಪ್ರಾರ್ಥಯ ಜೀವಿತಂ ॥ ೪೦ ॥

ಇತ್ಯುಕ್ತೋ ಮುನಿನಾ ತೇನ ಹ್ಯಾಗತೋ ಮುನಿಹಿಂಸಕಃ । ರಕ್ಷೇತಾಂ ಮಾಂ ದಯಾಯುಕ್ತೌ ಯುವಾಂ ಹಿ ಶರಣಾಗತಂ ॥ ೪೧ ॥

ಇತಿ ಶ್ರುತ್ವಾ ತು ದುಃಖಾರ್ತೌ ವಿಲಪ್ಯ ಬಹುಶೋಽಚ್ಯ ತಂ । ಪತಿತೋ ನೌ ಸುತೋ ಯತ್ರ ನಯ ತತ್ರಾವಿಲಂಬಯನ್ ॥ ೪೨ ॥

---

೩೯. ಅಲ್ಲಿ ಜಟೆಗಳನ್ನು ಕೆದರಿಕೊಂಡು ಬಿದ್ದಿರುವ ಋಷಿಪುತ್ರನನ್ನು ನೋಡಿದೆನು. ಹೆದರಿಕೆಯಾಯಿತು. ಆಗ ಕಾಪಾಡು ಕಾಪಾಡು ಎಂದು ಅವನ ಪಾದಗಳಿಗೆ ಬಿದ್ದೆನು.

೪೦. ಆಗ ಅವನು ಅಯ್ಯಾ! ನೀನು ಹೆದರಬೇಡ. ನಿನಗೆ ಬ್ರಹ್ಮಹತ್ಯೆಯು ಬರುವುದಿಲ್ಲ. ನನ್ನ ತಂದೆತಾಯಿಗಳು ಬಾಯಾರಿ ಅಲ್ಲಿ ಕುಳಿತಿರುವರು. ಅಲ್ಲಿಗೆ ಹೋಗಿ ಅವರಿಗೆ ಕುಡಿಯಲು ನೀರನ್ನು ಕೊಟ್ಟು ಅವರನ್ನು ಬೇಡಿಕೊಂಡು ನಿನ್ನ ಜೀವವನ್ನು ಉಳಿಸಿಕೋ.

೪೧. ಅವನು ಹೀಗೆನ್ನಲು ಆ ಮುನಿಯನ್ನು ಹೊಡೆದ ನಾನು ಇಲ್ಲಿಗೆ ಆದರಿಂದ ಓಡಿಬಂದಿರುವೆನು. ನೀವು ದಯೆಯನ್ನು ಇಟ್ಟು ನನ್ನನ್ನು ಕಾಪಾಡಿರಿ. ನಿಮ್ಮನ್ನು ಶರಣು ಹೊಂದಿದ್ದೇನೆ ಎಂದೆನು.

೪೨. ನಾನು ಹೀಗೆ ಹೇಳಿದುದನ್ನು ಕೇಳಿ ಆವರು ಬಹು ದುಃಖಗೊಂಡರು. ಮಗನನ್ನು ಕುರಿತು ಬಹುವಾಗಿ ಅತ್ತರು. ಎಲೈ ದೊರೆಯೇ ! ನನ್ನ ಮಗನು ಏಟುತಿಂದು ಸತ್ತುಬಿದ್ದಿರುವ ಜಾಗಕ್ಕೆ ಜಾಗ್ರತೆಯಾಗಿ ಕರೆದುಕೊಂಡು ಹೋಗು ಎಂದರು.

ತತೋ ನೀತೌ ಸುತೋ ಯತ್ರ ಮಯಾ ತೌ ವೃದ್ಧದಂಪತೀ । ಸ್ಪೃಷ್ಟ್ವಾ ಸುತಂ ತೌ ಹಸ್ತಾಭ್ಯಾಂ ಬಹುಶೋಥ ವಿಲೇಪತುಃ ||

ಹಾ ಹೇತಿ ಕ್ರಂದಮಾನೌ ತೌ ಪುತ್ರ ಪುತ್ರೇತ್ಯವೋಚತಾಂ । ಜಲಂ ದೇಹೀತಿ ಪುತ್ರೇತಿ ಕಿಮರ್ಥಂ ನ ದದಾಸ್ಯಲಂ || ೪೪ ||

ತತೋ ಮಾಮೂಚತುಃ ಶೀಘ್ರಂ ಚಿತಿಂ ರಚಯ ಭೂಪತೇ । ಮಯಾ ತಥೈವ ರಚಿತಾ ಚಿತಿಸ್ತತ್ರ ನಿವೇಶಿತಾಃ || ೪೫ ||

ತ್ರಯಸ್ತತ್ರಾಗ್ನಿರುತ್ಸೃಷ್ಟೋ ದಗ್ಧಾಸ್ತೇ ತ್ರಿದಿವಂ ಯಯುಃ । ತತ್ರ ವೃದ್ಧಃ ಪಿತಾ ಪ್ರಾಹ ತ್ವಮಪ್ಯೇವಂ ಭವಿಷ್ಯಸಿ || ೪೬ ||

---

೪೩. ಆಗ ಆ ಮುದುಕರಾದ ದಂಪತಿಗಳನ್ನು ಆ ಮಗನು ಸತ್ತುಬಿದ್ದಿರುವ ಜಾಗಕ್ಕೆ ಕರೆದುಕೊಂಡು ಹೋದೆನು. ಆ ಕುರುಡರಿಬ್ಬರೂ ಆ ಮಗನನ್ನು ಕೈಯಿಂದ ಮುಟ್ಟುತ್ತಾ ಬಹುವಾಗಿ ಅತ್ತರು.

೪೪. ಆ ಹಾ, ಹಾ, ಪುತ್ರನೆ, ಪುತ್ರನೆ, ಎಂಬುದಾಗಿಯೂ ನೀರನ್ನು ತಂದುಕೊಡು. ಏಕೆ ನೀರನ್ನು ಕೊಡದೆ ಸುಮ್ಮನಿದ್ದೀಯೆ. ಎಂದೂ ಬಹುವಾಗಿ ಅತ್ತರು.

೪೫. ಅನಂತರ ನನ್ನನ್ನು ಕುರಿತು ಎಲೈ ದೊರೆಯೆ ! ಬೇಗ ಒಂದು ಚಿತಿಯನ್ನು ರಚಿಸು ಎಂದರು ಒಡನೆಯೇ ನಾನು ಒಂದು ಚಿತಿಯನ್ನು ಮಾಡಿದೆನು. ಮತ್ತು ಆ ದಂಪತಿಗಳನ್ನು ಆ ಮಗನನ್ನು ಮೂವರನ್ನೂ ಆ ಚಿತಿಯಮೇಲಿಟ್ಟೆನು.

೪೬. ಮತ್ತು ಆ ಚಿತಿಗೆ ಬೆಂಕಿಯನ್ನು ಹಾಕಿದೆನು. ಅವರು ಸುಟ್ಟು ಸ್ವರ್ಗವನ್ನೂ ಸೇರಿದರು. ಆಗ ಆ ವೃದ್ಧನಾದ ತಂದೆಯು ನನ್ನನ್ನು ಕುರಿತು ನಿನಗೂ ಹೀಗೇ ಆಗಲಿ.

ಪುತ್ರಶೋಕೇನ ಮರಣಂ ಪ್ರಾಪ್ಸ್ಯಸೇ ವಚನಾನ್ಮಮ । ಸ ಇದಾನೀಂ ಮಮ ಪ್ರಾಪ್ತಃ ಶಾಪಕಾಲೋನಿವಾರಿತಃ ॥ ೪೭ ॥

ಇತ್ಯುಕ್ತ್ವಾ ವಿಲಲಾಪಾಥ ರಾಜಾ ಶೋಕಸಮಾಕುಲಃ । ಹಾ ರಾಮ ಪುತ್ರ ಹಾ ಸೀತೇ ಹಾ ಲಕ್ಷ್ಮಣ ಮಹಾಮತೇ ॥ ೪೮ ॥

ತ್ವದ್ವಿಯೋಗಾದಹಂ ಪ್ರಾಪ್ತೋ ಮೃತ್ಯುಂ ಕೈಕೇಯಿಸಂಭವಂ । ಬ್ರುವನ್ನೇವಂ ದಶರಥಃ ಪ್ರಾಣಾಂಸ್ತ್ಯಕ್ತ್ವಾ ದಿವಂ ಗತಃ ॥

ಕೌಸಲ್ಯಾ ಚ ಸುಮಿತ್ರಾ ಚ ತಥಾನ್ಯಾ ರಾಜಯೋಷಿತಃ । ಚುಕ್ರುಶುಶ್ಚ ವಿಲೇಪುಶ್ಚ ಉರಸ್ತಾಡನಪೂರ್ವಕಂ ॥ ೫೦ ॥

---

೪೭. ನನ್ನ ಶಾಪದಿಂದ ನಿನಗೆ ಮಗನ ದುಃಖದಿಂದಲೇ ಮರಣವು ಉಂಟಾಗಲಿ ಎಂದನು. ಆ ಶಾಪವು ಈಗ ನನಗೆ ಫಲವನ್ನು ಕೊಟ್ಟಿದೆ. ಈ ಶಾಪಕಾಲವನ್ನು ತಡೆಯಲು ಆಗುವುದಿಲ್ಲ.

೪೮–೪೯. ಹೀಗೆಂದು ಹೇಳುತ್ತಾ ಆ ರಾಜನು ದುಃಖಗೊಂಡು ಬಹುವಾಗಿ ಅತ್ತನು. ಹಾ ರಾಮ ! ಹಾ ಪುತ್ರನೇ ! ಹಾ ಸೀತೆಯೇ ! ಮಹಾಬುದ್ಧಿಯುಳ್ಳ ಹಾ ಲಕ್ಷ್ಮಣನೇ ! ನಿಮ್ಮಗಳ ಅಗಲುವಿಕೆಯಿಂದ ನಾನು ಮರಣವನ್ನು ಹೊಂದುತ್ತೇನೆ. ಈ ಮರಣವು ಕೈಕೇಯಿಯಿಂದ ಬಂದುದು. ಇಷ್ಟಕ್ಕೂ ಆಕೆಯೇ ಕಾರಣಳು ಎಂದು ಹೇಳುತ್ತಾ ದಶರಥನು ಪ್ರಾಣಗಳನ್ನು ಬಿಟ್ಟು ಸ್ವರ್ಗವನ್ನು ಸೇರಿದನು.

೫೦. ಅನಂತರ ಕೌಸಲ್ಯೆ ಸುಮಿತ್ರೆಯೇ ಮುಂತಾದ ರಾಜಮಹಿಷಿಯರು ಎದೆಯನ್ನು ಬಡಿದುಕೊಳ್ಳುತ್ತಾ ಕೂಗಿಕೊಂಡು ಅಳಲು ಮೊದಲಿಟ್ಟರು.

ವಸಿಷ್ಠಃ ಪ್ರಯಯೌ ತತ್ರ ಸ್ವಾರ್ತನರ್ಮಂತ್ರಿಭಿರಾವೃತಃ । ತೈಲದ್ರೋಣ್ಯಾಂ ದಶರಥಂ ಕ್ಷಿಪ್ತ್ವಾ ದೂತಾನಥಾಬ್ರವೀತ್ ॥ ೫೧ ॥

ಗಚ್ಛತ ತ್ವರಿತಂ ಸಾಶ್ವಾ ಯುಧಾಜಿನ್ನಗರಂ ಪ್ರತಿ । ತತ್ರಾಸ್ತೇ ಭರತಃ ಶ್ರೀಮಾನ್ ಶತ್ರುಘ್ನಸಹಿತಃ ಪ್ರಭುಃ ॥ ೫೨ ॥

ಉಚ್ಯತಾಂ ಭರತಃ ಶೀಘ್ರಮಾಗಚ್ಛೇತಿ ಮಮಾಜ್ಞಯಾ । ಅಯೋಧ್ಯಾಂ ಪ್ರತಿ ರಾಜಾನಂ ಕೈಕೇಯಿಂ ಚಾಪಿ ಪಶ್ಯತು ॥ ೫೩ ॥

ಇತ್ಯುಕ್ತಾಸ್ತ್ವರಿತಂ ದೂತಾ ಗತ್ವಾ ಭರತಮಾತುಲಂ । ಯುಧಾಜಿತಂ ಪ್ರಣಮ್ಯೋಚುರ್ಭರತಂ ಸಾನುಜಂ ಪ್ರತಿ ॥ ೫೪ ॥

---

೫೧. ಬೆಳಗಾಗುತ್ತಲೂ ವಸಿಷ್ಠನು ಮಂತ್ರಿಗಳೊಡನೆ ಕೂಡಿಕೊಂಡು ಅಲ್ಲಿಗೆ ಹೋದನು. ಎಣ್ಣೆಯ ಕೊಪ್ಪರಿಗೆಯಲ್ಲಿ ಆ ರಾಜನ ಹೆಣವನ್ನು ಇಡಿಸಿ ದೂತರನ್ನು ಕರೆದು ಅವರಿಗೆ ಇಂತೆಂದು ಹೇಳಿದನು.

೫೨. ಎಲೈ ದೂತರಿರಾ! ನೀವು ಕುದುರೆಯಮೇಲೆ ಜಾಗ್ರತೆಯಾಗಿ ತಡಮಾಡದೆ ಯುಧಾಜಿತ್ತಿನ ಪಟ್ಟಣಕ್ಕೆ ಹೋಗಿರಿ. ಅಲ್ಲಿ ಶ್ರೀಮಂತನಾದ ಭರತನು ಶತ್ರುಘ್ನನೊಡನೆ ಇರುವನು.

೫೩. ನನ್ನ ಅಪ್ಪಣೆಯಂತೆ ನೀವು ಆ ಭರತನ ಬಳಿಗೆ ಹೋಗಿರಿ. ಆ ಭರತನನ್ನು ಬೇಗನೆ ಅಯೋಧ್ಯೆಗೆ ಬರಬೇಕೆಂದು ಹೇಳಿರಿ. ಬಂದು ರಾಜನನ್ನೂ ಕೈಕೇಯಿಯನ್ನೂ ನೋಡಬೇಕೆಂದು ಹೇಳಿರಿ.

೫೪. ಈ ರೀತಿಯಾಗಿ ಅಪ್ಪಣೆಯನ್ನು ಹೊಂದಿದ ಆ ದೂತರು ಬೇಗನೆ ಆ ಭರತನ ಸೋದರಮಾವನ ಮನೆಗೆ ಹೋದರು. ಅಲ್ಲಿಗೆ ಹೋಗಿ ಯುಧಾಜಿತ್ತಿಗೂ ಭರತ ಶತ್ರುಘ್ನರಿಗೂ ನಮಸ್ಕರಿಸಿ ಅವರನ್ನು ಕುರಿತು ಇಂತೆಂದರು.

ವಸಿಷ್ಠಸ್ತ್ವಬ್ರವೀದ್ರಾಜನ್ ಭರತಃ ಸಾನುಜಃ ಪ್ರಭುಃ । ಶೀಘ್ರಮಾಗಚ್ಛತು ಪುರೀಮಯೋಧ್ಯಾಮವಿಚಾರಯನ್ ॥ ೫೫ ॥

ಇತ್ಯಾಜ್ಞಪ್ತೋಽಥ ಭರತಸ್ತ್ವರಿತಂ ಭಯವಿಹ್ವಲಃ । ಆಯಯೌ ಗುರುಣಾದಿಷ್ಟಃ ಸಹ ದೂತೈಸ್ತು ಸಾನುಜಃ ॥ ೫೬ ॥

ರಾಜ್ಞೋ ವಾ ರಾಘವಸ್ಯಾಪಿ ದುಃಖಂ ಕಿಂಚಿದುಪಸ್ಥಿತಂ । ಇತಿ ಚಿಂತಾಪರೋ ಮಾರ್ಗೇ ಚಿಂತಯನ್ನಗರಂ ಯಯೌ ॥ ೫೭ ॥

ನಗರಂ ಭ್ರಷ್ಟಲಕ್ಷ್ಮೀಕಂ ಜನಸಂಬಾಧವರ್ಜಿತಂ । ಉತ್ಸವೈಶ್ಚ ಪರಿತ್ಯಕ್ತಂ ದೃಷ್ಟ್ವಾ ಚಿಂತಾಪರೋಽಭವತ್ ॥ ೫೮ ॥

---

೫೫. ಎಲೈ ಯುಧಾಜಿದ್ರಾಜನೇ ! ಭರತನು ತಮ್ಮನೊಡನೆ ಅಯೋಧ್ಯೆಗೆ ಬೇಗ ಬರಬೇಕು. ಸಾವಕಾಶಮಾಡಕೂಡದು ಸ್ವಲ್ಪವೂ ಯೋಚನೆಮಾಡದೆ ಬರಲೇಬೇಕು. ಎಂಬುದಾಗಿ ವಸಿಷ್ಠನು ಅಪ್ಪಣೆಮಾಡಿರುವನು.

೫೬. ಭರತನು ಈ ಆಜ್ಞೆಯನ್ನು ಕೇಳುತ್ತಲೂ ಬಹುವಾಗಿ ಹೆದರಿದನು. ಗುರುವಿನ ಈ ಅಪ್ಪಣೆಯನ್ನು ಶಿರಸಾವಹಿಸಿ ಶತ್ರುಘ್ನನನ್ನೂ ಕರೆದುಕೊಂಡು ದೂತರ ಜೊತೆಯಲ್ಲಿ ಬೇಗನೆ ಬಂದನು.

೫೭. ರಾಜನಾದ ದಶರಥನಿಗಾಗಲೀ ಶ್ರೀರಾಮನಿಗಾಗಲೀ ಯಾವುದೋ ಕಷ್ಟವು ಬಂದಿರಬೇಕು. ಇಲ್ಲದಿದ್ದರೆ ಈ ರೀತಿಯಾಗಿ ಆತುರಪಡಿಸುತ್ತಿರಲಿಲ್ಲ. ಎಂಬುದಾಗಿ ದಾರಿಯುದ್ದಕ್ಕೂ ಯೋಚಿಸುತ್ತ ಅಯೋಧ್ಯೆಗೆ ಬಂದನು.

೫೮. ಆ ಪಟ್ಟಣದ ಬಳಿಗೆ ಬರುತ್ತಲೂ ದೂರದಿಂದಲೇ ನೋಡಿದನು. ಆ ಪಟ್ಟಣದಲ್ಲಿ ಕಾಂತಿಯೇ ಇರಲಿಲ್ಲ. ಜನಗಳು ಓಡಾಡುತ್ತಿರಲಿಲ್ಲ. ಗಲಭೆಯೇ ಇರಲಿಲ್ಲ. ಸಂತೋಷಕರವಾದ ಕೂಟಗಳಾಗಲೀ ಉತ್ಸವಗಳಾಗಲೀ ನಡೆಯುತ್ತಿರಲಿಲ್ಲ. ಇದನ್ನು ನೋಡಿ ಹೆಚ್ಚು ಚಿಂತೆಗೊಳಗಾದನು.

ಪ್ರವಿಶ್ಯ ರಾಜಭವನಂ ರಾಜಲಕ್ಷ್ಮೀವಿವರ್ಜಿತಂ । ಅಪಶ್ಯತ್ಕೈಕಯೀಂ ತತ್ರ ಏಕಾಮೇವಾಸನೇ ಸ್ಥಿತಾಂ ॥ ೫೯ ॥

ನನಾಮ ಶಿರಸಾ ಪಾದೌ ಮಾತುರ್ಭಕ್ತಿಸಮನ್ವಿತಃ । ಆಗತಂ ಭರತಂ ದೃಷ್ಟ್ವಾ ಕೈಕೇಯೀ ಪ್ರೇಮಸಂಭ್ರಮಾತ್ ॥ ೬೦ ॥

ಉತ್ಥಾಯಾಲಿಂಗ್ಯ ರಭಸಾ ಸ್ವಾಂಕಮಾರೋಪ್ಯ ಸಂಸ್ಥಿತಾ । ಮೂರ್ಧ್ನ್ಯವಘ್ರಾಯ ಪಪ್ರಚ್ಛ ಕುಶಲಂ ಸ್ವಕುಲಸ್ಯ ಸಾ ॥ ೬೧ ॥

ಪಿತಾ ಮೇ ಕುಶಲೀ ಭ್ರಾತಾ ಮಾತಾ ಚ ಶುಭಲಕ್ಷಣಾ । ದಿಷ್ಟ್ಯಾ ತ್ವಮದ್ಯ ಕುಶಲೀ ಮಯಾ ದೃಷ್ಟೋಽಸಿ ಪುತ್ರಕ ॥ ೬೨ ॥

---

೫೯. ಊರಿನೊಳಕ್ಕೆ ಬಂದು ಅರಮನೆಗೂ ಹೋದನು. ಆ ಅರಮನೆಯು ರಾಜಕಳೆಯೇ ಇಲ್ಲದಿದ್ದಿತು. ಅಲ್ಲಿಂದ ರಾಜನು ಇರುತ್ತಿದ್ದ ಮನೆಗೆ ಹೋದನು. ಅಲ್ಲಿ ಕೈಕೇಯಿಯೊಬ್ಬಳೇ ಆಸನದಲ್ಲಿ ಕುಳಿತಿರುವುದನ್ನು ನೋಡಿದನು.

೬೦–೬೧. ಮಾತೃಭಕ್ತಿಯುಳ್ಳ ಈ ಭರತನು ಆಕೆಗೆ ತಲೆಯನ್ನು ಬಗ್ಗಿಸಿ ನಮಸ್ಕರಿಸಿದನು. ಭರತನು ಬಂದುದನ್ನು ನೋಡಿ ಕೈಕೇಯಿಯು ಸಡಗರದಿಂದ ಮೇಲಕ್ಕೆದ್ದು ಪುತ್ರವಾತ್ಸಲ್ಯದಿಂದ ಅವನನ್ನು ಆಲಿಂಗಿಸಿಕೊಂಡು ತೊಡೆಯಮೇಲೆ ಕುಳ್ಳಿರಿಸಿಕೊಂಡಳು. ಮತ್ತು ಪ್ರೀತಿಯಿಂದ ತಲೆಯನ್ನು ಮೂಸಿನೋಡಿ ಅವನ ಮತ್ತು ಅವನ ಸೋದರಮಾವನ ಮನೆಯವರ ಕ್ಷೇಮಸಮಾಚಾರವನ್ನು ಕೇಳಿದಳು.

೬೨. ಎಲೈ ಭರತನೆ! ನನ್ನ ತಮ್ಮನು ಆರೋಗ್ಯದಿಂದಿರುವನೆ? ನನ್ನ ತಂದೆಯು ಕುಶಲಿಯೆ? ಸೌಭಾಗ್ಯವತಿಯಾದ ನನ್ನ ತಾಯಿಯು ಕ್ಷೇಮದಿಂದಿರುವಳೆ? ನೀನು ಆರೋಗ್ಯವಾಗಿದ್ದೀಯಾ? ನೀನು ಬೇಗಬಂದು ನನ್ನನ್ನು ನೋಡಿದೆಯಲ್ಲ? ಎಂದಳು.

ಇತಿ ಪೃಷ್ಟಃ ಸ ಭರತೋ ಮಾತ್ರಾ ಚಿಂತಾಕುಲೇಂದ್ರಿಯಃ । ದೂಯಮಾನೇನ ಮನಸಾ ಮಾತರಂ ಸಮಪೃಚ್ಛತ ॥ ೬೩ ॥
ಮಾತಃ ಪಿತಾ ಮೇ ಕುತ್ರಾಸ್ತೇ ಏಕಾ ತ್ವಮಿಹ ಸಂಸ್ಥಿತಾ । ತ್ವಯಾ ವಿನಾ ನ ಮೇ ತಾತಃ ಕದಾಚಿದ್ರಹಸಿ ಸ್ಥಿತಃ ॥ ೬೪ ॥
ಇದಾನೀಂ ದೃಶ್ಯತೇ ನೈವ ಕುತ್ರ ತಿಷ್ಠತಿ ಮೇ ವದ । ಅದೃಷ್ಟ್ವಾ ಪಿತರಂ ಮೇಽದ್ಯ ಭಯಂ ದುಃಖಂ ಚ ಜಾಯತೇ ॥ ೬೫ ॥
ಅಥಾಹ ಕೈಕೇಯೀ ಪುತ್ರಂ ಕಿಂ ದುಃಖೇನ ತವಾನಘ । ಯಾ ಗತಿರ್ಧರ್ಮಶೀಲಾನಾಮಶ್ವಮೇಧಾದಿಯಾಜಿನಾಂ ॥ ೬೬ ॥

---

೬೩. ತಾಯಿಯು ಭರತನನ್ನು ಇಂತೆಂದು ಕೇಳಲು ದುಃಖದಿಂದ ಬೇಗುದಿಯುಳ್ಳ ಭರತನು ತಾಯಿಯನ್ನು ಕುರಿತು ಇಂತೆಂದು ಕೇಳಿದನು.

೬೪. ಅಮ್ಮಾ! ನನ್ನ ತಂದೆಯೆಲ್ಲಿದ್ದಾನೆ? ನೀನೊಬ್ಬಳೇ ಇಲ್ಲಿರುವೆಯಲ್ಲ! ಕಾರಣವೇನು? ನಿನ್ನನ್ನು ಬಿಟ್ಟು ನನ್ನ ತಂದೆಯು ಯಾವಾಗಲೂ ಒಬ್ಬಂಟಿಗನಾಗಿರುತ್ತಿರಲಿಲ್ಲವಲ್ಲ!

೬೫. ಈಗ ಅವನನ್ನು ಕಾಣುತ್ತಿಲ್ಲವಲ್ಲ? ಅವನೆಲ್ಲಿರುವನು? ನನಗೆ ಈಗಲೇ ಹೇಳು. ಅವನನ್ನು ಕಾಣದಿರುವುದರಿಂದ ನನಗೆ ಭಯವೂ ದುಃಖವೂ ಉಂಟಾಗುತ್ತಿವೆ ಎಂದನು.

೬೬-೬೭. ಅನಂತರ ಕೈಕೇಯಿಯು ಮಗನನ್ನು ಕುರಿತು ಇಂತೆಂದಳು. ಅಪ್ಪಾ ನೀನು ದುಃಖವನ್ನೇತಕ್ಕೆ ಹೊಂದಬೇಕು? ದುಃಖಪಡಬೇಡ. ಧರ್ಮಿಷ್ಠರಾದವರೂ ಅಶ್ವಮೇಧಾದಿಯಾಗಗಳನ್ನು ಮಾಡಿದವರೂ ಯಾವಗತಿಯನ್ನು ಹೊಂದುತ್ತಾರೆಯೋ ಅಂತಹವರು

ತಾಂ ಗತಿಂ ಗತವಾನದ್ಯ ಪಿತಾ ತೇ ಪಿತೃವತ್ಸಲ । ತಚ್ಛ್ರುತ್ವಾ ನಿಪಪಾತೋರ್ವ್ಯಾಂ ಭರತಃ ಶೋಕವಿಹ್ವಲಃ ॥ ೬೭ ॥

ಹಾ ತಾತ ಕ್ವ ಗತೋಽಸಿ ತ್ವಂ ತ್ಯಕ್ತ್ವಾ ಮಾಂ ವೃಜಿನಾರ್ಣವೇ । ಅಸಮರ್ಪ್ಯೈವ ರಾಮಾಯ ರಾಜ್ಞೇ ಮಾಂ ಕ್ವ ಗತೋಽಸಿ ಭೋ ॥

ಇತಿ ವಿಹ್ವಲಿತಂ ಪುತ್ರಂ ಪತಿತಂ ಮುಕ್ತಮೂರ್ಧಜಂ । ಉತ್ಥಾಪ್ಯಾಮೃಜ್ಯ ನಯನೇ ಕೈಕೇಯೀ ವಾಕ್ಯಮಬ್ರವೀತ್ ॥ ೬೯ ॥

ಸಮಾಶ್ವಸಿಹಿ ಭದ್ರಂ ತೇ ಸರ್ವಂ ಸಂಪಾದಿತಂ ಮಯಾ । ತಮಾಹ ಭರತಸ್ತಾತೋ ಮ್ರಿಯಮಾಣಃ ಕಿಮಬ್ರವೀತ್ ॥ ೭೦ ॥

ಹೊಂದುವ ಗತಿಯನ್ನು ನಿನ್ನ ತಂದೆಯು ಹೊಂದಿದನು. ಆ ಮಾತನ್ನು ಕೇಳಿ ತಂದೆಯಲ್ಲಿ ಭಕ್ತಿಯುಳ್ಳ ಆ ಭರತನು ದುಃಖದಿಂದ ನೆಲದಮೇಲೆ ಬಿದ್ದನು.

೬೮. ಹಾ ತಾತ! ಪಾಪಿಯಾದ ನನ್ನನ್ನು ಬಿಟ್ಟು ನೀನೆಲ್ಲಿ ಹೋದೆ? ರಾಜನಾದ ರಾಮನ ಕೈಯ್ಯಲ್ಲಿ ನನ್ನನ್ನು ಒಪ್ಪಿಸದೆ ನೀನೆಲ್ಲಿಗೆ ಹೋಗಿ ಬಿಟ್ಟಿ? ಎಂದು ಅಳುತ್ತಾ ನೆಲದಮೇಲೆ ಬಿದ್ದು ಬಿಟ್ಟನು.

೬೯. ಭರತನು ಹೀಗೆಂದು ದುಃಖಿಸುತ್ತ ಕೆಳಗೆ ಬಿದ್ದನು. ಅವನ ತಲೆಗೂದಲೆಲ್ಲವೂ ಕೆದರಿಕೊಂಡು ಚೆಲ್ಲಾಡುತ್ತಿದ್ದುವು. ಇಂತಹ ಮಗನನ್ನು ಕೈಕೇಯಿಯು ಎಬ್ಬಿಸಿ ಕಣ್ಣೀರನ್ನು ಒರೆಸಿ ಅವನನ್ನು ಕುರಿತು ಇಂತೆಂದಳು.

೭೦. ಅಪ್ಪ ಮಗನೆ! ಸಮಾಧಾನವನ್ನು ತಂದುಕೋ. ನಿನಗೆ ಬೇಕಾದುದೆಲ್ಲವನ್ನೂ ನಾನೇ ಕೇಳಿ ತೆಗೆದುಕೊಂಡಿದ್ದೇನೆ ಎಂದಳು. ಅನಂತರ ಭರತನು ತಾಯಿಯನ್ನು ಕುರಿತು ಅಮ್ಮ ಅಪ್ಪನು ಸಾಯುತ್ತಿರುವಾಗ ಏನೆಂದು ಹೇಳಿದನು? ಎಂದು ಕೇಳಿದನು.

ತವಾಹ ಕೈಕೆಯೀ ದೇವೀ ಭರತಂ ಭಯವರ್ಜಿತಾ । ಹಾ ರಾಮ ರಾಮ ಸೀತೇತಿ ಲಕ್ಷ್ಮಣೇತಿ ಪುನಃ ಪುನಃ ॥ ೨೧ ॥

ವಿಲಪನ್ನೇವ ಸುಚಿರಂ ದೇಹಂ ತ್ಯಕ್ತ್ವಾ ದಿವಂ ಯಯೌ । ತವಾಹ ಭರತೋ ಹೇಂಬ ರಾಮಃ ಸನ್ನಿಹಿತೋ ನ ಕಿಂ ॥ ೨೨ ॥

ತದಾನೀಂ ಲಕ್ಷ್ಮಣೋ ವಾಪಿ ಸೀತಾ ವಾ ಕುತ್ರ ತೇ ಗತಾಃ ॥ ೨೩ ॥

॥ ಕೈಕೇಯ್ಯುವಾಚ ॥

ರಾಮಸ್ಯ ಯೌವರಾಜ್ಯಾರ್ಥಂ ಪಿತ್ರಾ ತೇ ಸಂಭ್ರಮಃ ಕೃತಃ । ತವ ರಾಜ್ಯಪ್ರದಾನಾಯ ಕದಾಹಂ ವಿಘ್ನಮಾಚರಂ ॥ ೨೪ ॥

೨೧–೨೩. ಸ್ವಲ್ಪವೂ ಭಯವಿಲ್ಲದೆ ಆ ಕೈಕೇಯಿಯು ಭರತನನ್ನು ಕುರಿತು ಇಂತೆಂದಳು. ಹಾ ರಾಮ ರಾಮ ! ಹಾ ಸೀತೆ ಸೀತೆ ! ಹಾ ಲಕ್ಷ್ಮಣ ಲಕ್ಷ್ಮಣ ! ಎಂದು ಮತ್ತೆ ಮತ್ತೆ ಹೇಳುತ್ತ ಬಹುಹೊತ್ತು ಅಳುತ್ತಲಿದ್ದು ಈ ಪಾಂಚಭೌತಿಕ ದೇಹವನ್ನು ಬಿಟ್ಟು ಸ್ವರ್ಗವನ್ನು ಹೊಂದಿದನು. ಇಂತೆನ್ನಲು ಕೇಳಿ ಭರತನು ಅಮ್ಮ ! ದಶರಥನು ಸಾಯುವಾಗ ರಾಮನು ಹತ್ತಿರದಲ್ಲಿ ಇರಲಿಲ್ಲವೇನು ? ಆಗ ಲಕ್ಷ್ಮಣನಾಗಲೀ ಸೀತೆಯಾಗಲೀ ಇರಲಿಲ್ಲವೆ ? ಅವರು ಎಲ್ಲಿಗೆ ಹೋಗಿದ್ದರು ? ಎಂದು ಕೇಳಿದನು.

೨೪. ಕೈಕೇಯಿಯು ಹೇಳಿದಳು–ಎಲೈ ಪುತ್ರನೆ ! ಶ್ರೀರಾಮನಿಗೆ ಯುವರಾಜಪದವಿಯನ್ನು ಕೊಡಲು ನಿನ್ನ ತಂದೆಯು ಎಲ್ಲವನ್ನೂ ಸಿದ್ಧಮಾಡಿದನು. ಅದನ್ನು ನೋಡಿ ನಾನು ನಿನಗೆ ರಾಜ್ಯವನ್ನು ಕೊಡಿಸಬೇಕೆಂದು ಅದಕ್ಕೆ ವಿಘ್ನವನ್ನುಂಟುಮಾಡಿದೆನು.

ರಾಜ್ಞಾ ದತ್ತಂ ಹಿ ಮೇ ಪೂರ್ವಂ ವರದೇನ ವರದ್ವಯಂ । ಯಾಚಿತಂ ತದಿದಾನೀಂ ಮೇ ತಯೋರೇಕೇನ ತೇಖಿಲಂ ॥ ೭೫ ॥

ರಾಜ್ಯಂ ರಾಮುಸ್ಯ ಚೈಕೇನ ವನವಾಸೋ ಮುನಿವ್ರತಂ । ತತಃ ಸತ್ಯಪರೋ ರಾಜಾ ರಾಜ್ಯಂ ದತ್ವಾ ತವೈವ ಹಿ ॥ ೭೬ ॥

ರಾಮಂ ಸಂಪ್ರೇಷಯಾಮಾಸ ವನಮೇವ ಪಿತಾ ತವ । ಸೀತಾಪ್ಯನುಗತಾ ರಾಮಂ ಪಾತಿವ್ರತ್ಯಮುಪಾಶ್ರಿತಾ ॥ ೭೭ ॥

ಸೌಭ್ರಾತ್ರಂ ದರ್ಶಯನ್ ರಾಮಮನುಯಾತಸ್ಸ ಲಕ್ಷ್ಮಣಃ । ವನಂ ಗತೇಷು ಸರ್ವೇಷು ರಾಜಾ ತಾನೇವ ಚಿಂತಯನ್ ॥ ೭೮ ॥

೭೫–೭೬. ರಾಜನು ಪೂರ್ವದಲ್ಲಿ ಸಂತೋಷಪಟ್ಟಿದ್ದಾಗ ನನಗೆ ಎರಡು ವರಗಳನ್ನು ಕೊಟ್ಟಿದ್ದನು. ಆವೆರಡನ್ನೂ ಈಗ ನಾನು ಕೇಳಿಕೊಂಡೆನು. ಅವೆರಡರಲ್ಲಿ ಒಂದಕ್ಕೆ ನಿನಗೆ ರಾಜ್ಯವೆಲ್ಲವನ್ನೂ ಕೊಡಬೇಕೆಂದೂ ಮತ್ತೊಂದಕ್ಕೆ ರಾಮನು ಮುನಿವೇಷವನ್ನು ಧರಿಸಿ ಕಾಡಿಗೆ ಹೋಗಬೇಕೆಂದೂ ಕೇಳಿಕೊಂಡೆನು. ಅನಂತರ ಸತ್ಯಸಂಧನಾದ ರಾಜನು ರಾಜ್ಯವೆಲ್ಲವನ್ನೂ ನಿನಗೇ ಕೊಟ್ಟುಬಿಟ್ಟನು.

೭೭–೭೮. ರಾಮನನ್ನು ಕಾಡಿಗೆ ಕಳುಹಿಸಿ ಬಿಟ್ಟನು. ರಾಮನ ಹೆಂಡತಿಯಾದ ಸೀತೆಯು ಪಾತಿವ್ರತ್ಯವನ್ನು ಅನುಸರಿಸಿ ಆ ರಾಮನೊಡನೆಯೇ ಹೋದಳು. ತನ್ನ ಸಹೋದರ ಪ್ರೀತಿಯನ್ನು ತೋರಿಸುತ್ತ ಲಕ್ಷ್ಮಣನು ಆ ರಾಮನೊಡನೆಯೇ ಹೋದನು. ಆ ಮೂವರೂ ಕಾಡಿಗೆ ಹೊರಟು ಹೋದಮೇಲೆ ರಾಜನಾದ ದಶರಥನು ಅವರನ್ನೇ ಕುರಿತು ದುಃಖಿಸುತ್ತಲಿದ್ದನು.

ಪ್ರಲಪ್ಯ ರಾಮ ರಾಮೇತಿ ಮಮಾರ ನೃಪಸತ್ತಮಃ । ಇತಿ ಮಾತುರ್ವಚಃ ಶ್ರುತ್ವಾ ವಜ್ರಾಹತ ಇವ ದ್ರುಮಃ ॥ ೭೯ ॥

ಪಪಾತ ಭೂಮೌ ನಿಸ್ಸಂಜ್ಞಸ್ತಂ ದೃಷ್ಟ್ವಾ ದುಃಖಿತಾ ತದಾ । ಕೈಕೇಯೀ ಪುನರಪ್ಯಾಹ ವತ್ಸ ಶೋಕೇನ ಕಿಂ ತವ ॥ ೮೦ ॥

ರಾಜ್ಯೇ ಮಹತಿ ಸಂಪ್ರಾಪ್ತೇ ದುಃಖಸ್ಯಾವಸರಃ ಕುತಃ । ಇತಿ ಬ್ರುವಂತೀಮಾಲೋಕ್ಯ ಮಾತರಂ ಪ್ರದಹನ್ನಿವ ॥ ೮೧ ॥

ಅಸಂಭಾಷ್ಯಾ ಮಯಾ ಪಾಪೇ ಘೋರೇ ತ್ವಂ ಭರ್ತೃಘಾತಿನೀ । ಪಾಪೇ ತ್ವದ್ಗರ್ಭಸಂಜಾತಃ ಪಾಪವಾನಸ್ಮಿ ಸಾಂಪ್ರತಂ ॥ ೮೨ ॥

---

೭೯. ರಾಮ ರಾಮ ಎಂದು ಹೇಳುತ್ತ ದುಃಖಿಸುತ್ತಲಿದ್ದು ಮೃತಪಟ್ಟನು. ಎಂದಳು. ತಾಯಿಯು ಹೀಗೆ ಹೇಳಿದುದನ್ನು ಕೇಳಿ ಭರತನು ಸಿಡಿಲುಬಡಿದ ಮರದಂತೆ ಭೂಮಿಯಲ್ಲಿ ಬಿದ್ದು ಬಿಟ್ಟನು.

೮೦. ಮತ್ತು ಮೂರ್ಛೆಹೋದನು. ಇದನ್ನು ನೋಡಿ ಆ ಕೈಕೇಯಿಯು ಬಹುವಾಗಿ ದುಃಖಿಸಿದಳು. ಅನಂತರ ಕೈಕೇಯಿಯು ಭರತನನ್ನು ಕುರಿತು ಎಲೈ ಭರತನೆ ! ನೀನೇಕೆ ದುಃಖಪಡುತ್ತೀಯೆ ? ದುಃಖದಿಂದ ಪ್ರಯೋಜನವೇನು ?

೮೧. ದೊಡ್ಡದಾದ ರಾಜ್ಯವೇ ನಿನಗೆ ಸಿಕ್ಕಿರುವಾಗ ದುಃಖಕ್ಕೆ ಕಾರಣವೇನಿರುವುದು ? ತಾಯಿಯು ಹೀಗೆ ಹೇಳುತ್ತಿರಲು ಅದನ್ನು ಕೇಳಿ ತಾಯಿಯನ್ನು ಸುಟ್ಟುಬಿಡುವಂತೆ ಕ್ರೂರವಾದ ಕಣ್ಣುಗಳಿಂದ ನೋಡಿದನು.

೮೨. ಮತ್ತು ಆಕೆಯನ್ನು ಕುರಿತು ಇಂತೆಂದನು. ಎಲೈ ಪಾಪಿನಿಯೆ ! ನಿನ್ನನ್ನು ಮಾತನಾಡಿಸಬಾರದು. ನೀನು ಕ್ರೂರಿಣಿಯು ಗಂಡನನ್ನು ಕೊಂದವಳು. ಎಲೈ ಪಾಪಿಷ್ಠಳೆ ! ನಿನ್ನ ಹೊಟ್ಟೆಯಲ್ಲಿ ಹುಟ್ಟಿದುದರಿಂದ ನಾನು ಈಗ ಪಾಪಿಷ್ಠನಾಗಿದ್ದೇನೆ.

ಅಹಮಗ್ನಿಂ ಪ್ರವೇಕ್ಷ್ಯಾಮಿ ವಿಷಂ ವಾ ಭಕ್ಷಯಾಮ್ಯಹಂ । ಖಡ್ಗೇನ ವಾಥ ಚಾತ್ಮಾನಂ ಹತ್ವಾ ಯಾಮಿ ಯಮಾಲಯಂ ॥ ೮೩ ॥

ಭರ್ತೃಘಾತಿನಿ ದುಷ್ಟೇ ತ್ವಂ ಕುಂಭೀಪಾಕಂ ಗಮಿಷ್ಯಸಿ । ಇತಿ ನಿರ್ಭರ್ತ್ಸ್ಯ ಕೈಕೇಯೀಂ ಕೌಸಲ್ಯಾಭವನಂ ಯಯೌ ॥ ೮೪ ॥

ಸಾಪಿ ತಂ ಭರತಂ ದೃಷ್ಟ್ವಾ ಮುಕ್ತಕಂಠಾ ರುರೋದ ಹ । ಪಾದಯೋಃ ಪತಿತಸ್ತಸ್ಯಾ ಭರತೋಽಪಿ ತದಾರುದತ್ ॥ ೮೫ ॥

ಆಲಿಂಗ್ಯ ಭರತಂ ಸಾಧ್ವೀ ರಾಮಮಾತಾ ಯಶಸ್ವಿನೀ । ಕೃಶಾತಿದೀನವದನಾ ಸಾಶ್ರುನೇತ್ರೇದಮಬ್ರವೀತ್ ॥ ೮೬ ॥

---

೮೩. ಈ ರೀತಿಯಾದ ದೇಹವನ್ನು ನಾನು ಇಟ್ಟುಕೊಳ್ಳಲಾರೆ. ಬೆಂಕಿಗೆ ಬೀಳುತ್ತೇನೆ. ಇಲ್ಲದೆ ಇದ್ದರೆ ವಿಷವನ್ನಾದರೂ ಕುಡಿಯುತ್ತೇನೆ. ಬದುಕಿರಲಾರೆ. ಕೊನೆಗೆ ಕತ್ತಿಯಿಂದ ಕತ್ತನ್ನು ಕತ್ತರಿಸಿಕೊಂಡು ಪ್ರಾಣವನ್ನು ಕಳೆದುಕೊಂಡು ಯಮನ ಮನೆಗೆ ಹೋಗುತ್ತೇನೆ.

೮೪. ಗಂಡನನ್ನು ಕೊಂದ ಎಲೈ ದುಷ್ಟಳೆ! ನೀನು ಕುಂಭೀಪಾಕವೆಂಬ ನರಕಕ್ಕೆ ಬೀಳುತ್ತೀಯೆ. ಇವೇ ಮುಂತಾದ ಮಾತುಗಳನ್ನು ಆಡಿ ಆಕೆಯನ್ನು ತಿರಸ್ಕರಿಸಿ ಅನಂತರ ಕೌಸಲ್ಯೆಯ ಮನೆಗೆ ಹೋದನು.

೮೫. ಅಲ್ಲಿ ಕೌಸಲ್ಯೆಯು ಈ ಭರತನನ್ನು ನೋಡಿ ಗಟ್ಟಿಯಾಗಿ ಅಳಲು ಮೊದಲಿಟ್ಟಳು. ಈ ಭರತನೂ ಕೂಡ ಆಕೆಯ ಪಾದಗಳಮೇಲೆ ಬಿದ್ದು ಅತ್ತನು.

೮೬. ಅನಂತರ ರಾಮನ ತಾಯಿಯಾದ ಆ ಕೌಸಲ್ಯೆಯು ಭರತನನ್ನು ಆಲಿಂಗಿಸಿಕೊಂಡು ಕಣ್ಣಿನತುಂಬ ದುಃಖದ ನೀರನ್ನು ತುಂಬಿಕೊಂಡು ಇಂತೆಂದು ಹೇಳಿದಳು.

ಪುತ್ರ ತ್ವಯಿ ಗತೇ ದೂರಮೇವಂ ಸರ್ವಮಭೂದಿದಂ । ಉಕ್ತಂ ಮಾತ್ರಾ ಶ್ರುತಂ ಸರ್ವಂ ತ್ವಯಾ ತೇ ಮಾತೃಚೇಷ್ಟಿತಂ ॥ ೮೭ ॥

ಪುತ್ರಃ ಸಭಾರ್ಯೋ ವನಮೇವ ಯಾತಃ ಸಲಕ್ಷ್ಮಣೋ ಮೇ ರಘುರಾಮಚಂದ್ರಃ ।
ಚೀರಾಂಬರೋ ಬದ್ಧಜಟಾಕಲಾಪಃ ಸಂತಜ್ಯ ಮಾಂ ದುಃಖಸಮುದ್ರಮಗ್ನಾಂ ॥ ೮೮ ॥

ಹಾ ರಾಮ ಹಾ ಮೇ ರಘುವಂಶನಾಥ ಜಾತೋಽಸಿ ಮೇ ತ್ವಂ ಪರತಃ ಪರಾತ್ಮಾ ।
ತಥಾಪಿ ದುಃಖಂ ನ ಜಹಾತಿ ಮಾಂ ವೈ ವಿಧಿರ್ಬಲೀಯಾನಿತಿ ಮೇ ವಿಷಾದಃ ॥ ೮೯ ॥

---

೮೭. ಅಪ್ಪ ಮಗುವೇ ! ನೀನು ದೂರದೇಶಕ್ಕೆ ಹೋದಮೇಲೆ ಇದೆಲ್ಲವೂ ಈ ರೀತಿಯಾಗಿ ನಡೆದು ಹೋಯಿತು ನಿನ್ನ ತಾಯಿ ಮಾಡಿದ ಕೆಲಸಗಳೆಲ್ಲವನ್ನೂ ಅವಳು ನಿನಗೆ ಹೇಳಿರಬೇಕು. ಅದೆಲ್ಲವನ್ನೂ ನೀನೇ ಹೇಳಿದ್ದೀಯೆ.

೮೮. ಎಲೈ ಭರತನೇ 'ನನ್ನ ಮಗನಾದ ರಾಮಚಂದ್ರನು ನನ್ನನ್ನು ಬಿಟ್ಟು ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ಕಾಡಿಗೆ ಹೊರಟು ಹೋದನು. ನಾರುಡೆಯನ್ನುಟ್ಟು ಜಟೆಗಳನ್ನು ಧರಿಸಿ ನಾನು ದುಃಖಸಮುದ್ರದಲ್ಲಿ ಮುಳುಗಿದ್ದರೂ ನನ್ನನ್ನು ಲಕ್ಷಿಸದೆ ಬಿಟ್ಟು ಬಿಟ್ಟು ಹೊರಟು ಹೋದನು.

೮೯. ಹಾ ರಾಮ ! ಹಾ ರಘುವಂಶನಾಥ! ನೀನು ಉತ್ತಮೋತ್ತಮನಾದ ಪರಮಾತ್ಮನು. ನನ್ನ ಹೊಟ್ಟೆಯಲ್ಲಿ ಹುಟ್ಟಿದ್ದೀಯೆ ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿದ್ದರೂ ಕೂಡ ನನ್ನನ್ನು ದುಃಖವು ಬಿಡಲಿಲ್ಲವಲ್ಲ ! ಪರಮಾತ್ಮನಿಗಿಂತಲೂ ಹಣೆಯ ಬರಹವೇ ಬಲವಾಯಿತಲ್ಲ, ಎಂಬುದೇ ನನಗೆ ಬಂದಿರುವ ದುಃಖವು.

ಸ ಏವಂ ಭರತೋ ವೀಕ್ಷ್ಯ ವಿಲಪಂತೀಂ ಶುಚಾ ಭೃಶಂ । ಪಾದೌ ಗೃಹೀತ್ವಾ ಸ್ರಾಹೇದಂ ಶೃಣು ಮಾತರ್ವಚೋ ಮಮ ॥ ೯೦ ॥

ಕೈಕೇಯ್ಯಾ ಯತ್ಕೃತಂ ಕರ್ಮ ರಾಮರಾಜ್ಯಾಭಿಷೇಚನೇ । ಅನ್ಯದ್ವಾ ಯದಿ ಜಾನಾಮಿ ಸಾ ಮಯಾ ಚೋದಿತಾ ಯದಿ ॥ ೯೧ ॥

ಪಾಪಂ ಮೇಸ್ತು ತದಾ ಮಾತರ್ಬ್ರಹ್ಮಹತ್ಯಾಶತೋದ್ಭವಂ । ಹತ್ವಾ ವಸಿಷ್ಠಂ ಖಡ್ಗೇನ ಅರುಂಧತ್ಯಾ ಸಮನ್ವಿತಂ ॥ ೯೨ ॥

ಭೂಯಾತ್ತತ್ಪಾಪಮಖಿಲಂ ಮಮ ಜಾನಾಮಿ ಯದ್ಯಪಿ । ಇತ್ಯೇವಂ ಶಪಥಂ ಕೃತ್ವಾ ರುರೋದ ಭರತಸ್ತದಾ ॥ ೯೩ ॥

---

೯೦. ಬಹುವಾದ ಖೇದವನ್ನು ಹೊಂದಿ ಅಳುತ್ತಿರುವ ಆ ಕೌಸಲ್ಯೆಯನ್ನು ಭರತನು ನೋಡಿ ಆಕೆಯ ಪಾದಗಳನ್ನು ಹಿಡಿದುಕೊಂಡು ಅಮ್ಮ! ನಾನು ಹೇಳುವ ಮಾತನ್ನು ಕೇಳು.

೯೧–೯೩. ರಾಮರಾಜ್ಯಾಭಿಷೇಚನ ವಿಷಯದಲ್ಲಿ ಕೈಕೇಯಿಯು ಮಾಡಿರುವ ಕೆಲಸವೇ ಆಗಲೀ ಅದಕ್ಕೆ ಸಂಬಂಧಪಟ್ಟ ಮತ್ತೆ ಯಾವುದಾದರೂ ವಿಷಯ ನನಗೆ ಗೊತ್ತಿದ್ದರೆ ಅದಲ್ಲದೆ ನಾನು ಅವಳನ್ನು ಪ್ರೇರೇಪಿಸಿದ್ದಾವರೂ ಇದ್ದರೇ ಆಗಲಿ ಆಗ್ಯೆ ನೂರು ಬಹ್ಮಹತ್ಯೆಗಳನ್ನು ಮಾಡಿದಷ್ಟು ಪಾಪವು ನನಗೆ ಬರಲಿ. ಅರುಂಧತಿಯನ್ನೂ ವಸಿಷ್ಠನನ್ನೂ ಕತ್ತಿಯಿಂದ ಕೊಂದರೆ ಯಾವ ಪಾಪವು ಬರುವುದೋ ಆ ಪಾಪವು ರಾಮಪಟ್ಟಾಭಿಷೇಕದ ವಿಷಯವು ನನಗೆ ತಿಳಿದಿದ್ದರೆ ಬರಲಿ. ಇವೇ ಮುಂತಾದ ಪ್ರಮಾಣಗಳನ್ನು ಮಾಡುತ್ತಾ ಭರತನು ಅಳುತ್ತಿದ್ದನು.

ಕೌಸಲ್ಯಾ ತಮಥಾಲಿಂಗ್ಯ ಪುತ್ರ ಜಾನಾಮಿ ಮಾ ಶುಚಃ । ಏತಸ್ಮಿನ್ನಂತರೇ ಶ್ರುತ್ವಾ ಭರತಸ್ಯ ಸಮಾಗಮಂ ॥ ೯೪ ॥

ವಸಿಷ್ಠೋ ಮಂತ್ರಿಭಿಃ ಸಾರ್ಧಂ ಪ್ರಯಯೌ ರಾಜಮಂದಿರಂ । ರುದಂತಂ ಭರತಂ ದೃಷ್ಟ್ವಾ ವಸಿಷ್ಠಃ ಪ್ರಾಹ ಸಾದರಂ ॥ ೯೫ ॥

ವೃದ್ಧೋ ರಾಜಾ ದಶರಥೋ ಜ್ಞಾನೀ ಸತ್ಯಪರಾಕ್ರಮಃ । ಭುಕ್ತ್ವಾ ಮರ್ತ್ಯಸುಖಂ ಸರ್ವಮಿಷ್ಟ್ವಾ ವಿಪುಲದಕ್ಷಿಣೈಃ ॥ ೯೬ ॥

ಅಶ್ವಮೇಧಾದಿಭಿರ್ಯಜ್ಞೈರ್ಲಬ್ಧ್ವಾ ರಾಮಂ ಹರಿಂ ಸುತಂ । ಅಂತೇ ಜಗಾಮ ತ್ರಿದಿವಂ ದೇವೇಂದ್ರಾರ್ಧಾಸನಂ ಪ್ರಭುಃ ॥ ೯೭ ॥

೯೪-೯೫. ಆಗ ಕೌಸಲ್ಯೆಯು ಆ ಭರತನನ್ನು ಆಲಿಂಗಿಸಿಕೊಂಡು ಅಪ್ಪ ಮಗನೇ! ಆ ವಿಷಯವನ್ನು ನಾನು ತಿಳಿದಿದ್ದೇನೆ. ದುಃಖಿಸಬೇಡ! ಎಂದಳು. ಇಷ್ಟರೊಳಗೆ ಭರತನು ಬಂದಿರುವ ವಿಷಯವು ವಸಿಷ್ಠನಿಗೆ ತಿಳಿಯಲು ಮಂತ್ರಿಗಳೊಡನೆ ಆ ವಸಿಷ್ಠನು ಅರಮನೆಗೆ ಹೋದನು. ಅಲ್ಲಿ ಭರತನು ಅಳುತ್ತಿರುವುದನ್ನು ನೋಡಿ ವಸಿಷ್ಠನು ಪ್ರೀತಿಯಿಂದ ಇಂತೆಂದನು.

೯೬. ಎಲೈ ಭರತನೆ! ಆ ದಶರಥರಾಜನು ಮುದುಕನು. ಜ್ಞಾನಿಯು ಪರಾಕ್ರಮಿಯು ಈ ಲೋಕದಲ್ಲಿರುವ ಮನುಷ್ಯರ ಸುಖವೆಲ್ಲವನ್ನೂ ಅನುಭವಿಸಿದವನು. ಬಹುವಾದ ದಕ್ಷಿಣೆಗಳನ್ನು ಕೊಟ್ಟು ಅಶ್ವಮೇಧವೇ ಮುಂತಾದ ಯಾಗಗಳನ್ನು ಮಾಡಿದನು.

೯೭. ಕೊನೆಯಲ್ಲಿ ಸ್ವರ್ಗವನ್ನು ಹೊಂದಿದನು. ಅಲ್ಲಿಯೂ ಕೂಡ ದೇವೇಂದ್ರನ ಅರ್ಧಾಸನವನ್ನೇ ಹೊಂದಿರುವನು.

ತಂ ಶೋಚಸಿ ವೃಥೈವ ತ್ವಮಶೋಚ್ಯಂ ಮೋಕ್ಷಭಾಜನಂ । ಆತ್ಮಾ ನಿತ್ಯೋಽವ್ಯಯಃ ಶುದ್ಧೋ ಜನ್ಮನಾಶಾದಿವರ್ಜಿತಃ ॥ ೯೮ ॥

ನಿರ್ವಿಕಾರೋ ನಿರಾಕಾರೋ ನಿಷ್ಪ್ರಕಾಶೋ ನಿರಂಜನಃ । ಶರೀರಂ ಜಡಮತ್ಯರ್ಥಮಪವಿತ್ರಂ ವಿಡಶ್ವರಂ ॥ ೯೯ ॥

ವಿಚಾರ್ಯಮಾಣೇ ಶೋಕಸ್ಯ ನಾವಕಾಶಃ ಕಥಂಚನ । ಪಿತಾ ವಾ ತನಯೋ ವಾಪಿ ಯದಿ ಮೃತ್ಯುವಶಂ ಗತಃ ॥ ೧೦೦ ॥

ಮೂಢಾಸ್ತಮನುಶೋಚಂತಿ ಸ್ವಾತ್ಮತಾಡನಪೂರ್ವಕಂ । ನಿಸ್ಸಾರೇ ಖಲು ಸಂಸಾರೇ ವಿಯೋಗೋ ಜ್ಞಾನಿನಾಂ ಯದಾ ॥ ೧೦೧ ॥

---

೯೮. ಪುತ್ರಕಾಮೇಷ್ಟಿಯಾಗವನ್ನು ಮಾಡಿ ಆ ಹರಿಯನ್ನೇ ಮಗನನ್ನಾಗಿ ಪಡೆದನು. ಅವನ ವಿಷಯದಲ್ಲಿ ಯಾವ ಯೋಚನೆಗೂ ಅವಕಾಶವೇ ಇರುವುದಿಲ್ಲ. ಅವನ ವಿಷಯವನ್ನು ಕುರಿತು ನೀನು ದುಃಖಿಸುತ್ತಿರುವೆಯಲ್ಲ! ಆತ್ಮನು ನಿತ್ಯನು. ಅವ್ಯಯನು. ಶುದ್ಧನು. ಅವನಿಗೆ ಹುಟ್ಟು ಸಾವುಗಳಿಲ್ಲವು.

೯೯. ಅವನಿಗೆ ವಿಕಾರಗಳಿಲ್ಲ. ಆಕಾರವಿಲ್ಲ. ಈ ರೀತಿಯಾದವನೆಂದು ಹೇಳಲು ಆಗದವನು. ಯಾವ ಲೋಪವೂ ಇಲ್ಲದವನು. ಈ ಶರೀರವಾದರೋ ಜಡವಾದುದು. ಪವಿತ್ರವಲ್ಲದುದು. ನಾಶವಾಗತಕ್ಕದ್ದು.

೧೦೦–೧೦೧. ಇದೆಲ್ಲವನ್ನೂ ವಿಚಾರಮಾಡಿದರೆ ಶೋಕಪಡುವುಕ್ಕೆ ಸ್ವಲ್ಪವೂ ಕಾರಣವೇ ಇರುವುದಿಲ್ಲ. ತಂದೆಯಾಗಲೀ ಮಗನಾಗಲೀ ಸತ್ತುಹೋದರೆ ಮೂಢರಾದವರು ಎದೆ ಎದೆಯನ್ನು ಹೊಡೆದುಕೊಂಡು ಅಳುತ್ತಾರೆ. ನಿಸ್ಸಾರವಾದ ಈ ಸಂಸಾರದಲ್ಲಿ ವಿಯೋಗವೆಂಬುದು ಜ್ಞಾನಿಗಳಿಗೆ ಉಂಟಾದರೆ ಅದೇ ಅವರಿಗೆ ವೈರಾಗ್ಯಕ್ಕೆ ಕಾರಣವಾಗುತ್ತದೆ. ಆ ವೈರಾಗ್ಯವು ಶಾಂತಿಯನ್ನೂ ಸೌಖ್ಯವನ್ನೂ ಉಂಟುಮಾಡುತ್ತದೆ.

ಭವೇದ್ವೈರಾಗ್ಯಹೇತುಸ್ಸಃ ಶಾಂತಿಸೌಖ್ಯಂ ತನೋತಿ ಚ | ಜನ್ಮವಾನ್ಯದಿ ಲೋಕೇಸ್ಮಿಂಸ್ತರ್ಹಿ ತಂ ಮೃತ್ಯುರನ್ವಗಾತ್ ॥ ೧೦೨ ॥
ತಸ್ಮಾದಪರಿಹಾರ್ಯೋಽಯಂ ಮೃತ್ಯುರ್ಜನ್ಮವತಾಂ ಸದಾ | ಸ್ವಕರ್ಮವಶತಃ ಸರ್ವಜಂತೂನಾಂ ಪ್ರಭವಾಪ್ಯಯೌ ॥ ೧೦೩ ॥
ವಿಜ್ಞಾನತೋಽಪಿ ವಿದ್ವಾಂಸಃ ಕಥಂ ಶೋಚಂತಿ ಬಾಂಧವಾನ್ | ಬ್ರಹ್ಮಾಂಡಕೋಟಯೋ ನಷ್ಟಾಃ ಸೃಷ್ಟಯೋ ಬಹುಶೋಗತಾಃ ॥
ಶುಷ್ಯಂತಿ ಸಾಗರಾಃ ಸರ್ವೇ ಕೈವಾಸ್ಥಾ ಕ್ಷಣಜೀವಿತೇ | ಜಲಪತ್ರಾಂತಲಗ್ನಾಂಬುಬಿಂದುವತ್ ಕ್ಷಣಭಂಗುರಂ ॥ ೧೦೫ ॥

೧೦೨-೧೦೩. ಈ ಲೋಕದಲ್ಲಿ ಜನ್ಮವನ್ನು ಹೊಂದಿದವನು ಮರಣವನ್ನು ಹೊಂದಲೇ ಬೇಕು. ಆ ಮರಣವು ತಡೆಯುವುದಕ್ಕೆ ಆಗದಿರತಕ್ಕದ್ದು. ಯಾವನು ಜನ್ಮವನ್ನು ತಾಳುತ್ತಾನೆಯೋ ಅವನು ಮೃತ್ಯುವಿಗೆ ಅಧೀನನಾಗಿಯೇ ಇರುತ್ತಾನೆ. ಅಲ್ಲದೆ ಈ ಹುಟ್ಟುವುದು ಸಾಯುವುದು ಎಂಬುದು ಜಂತುಗಳಿಗೆ ಅವುಗಳ ಪಾಪಪುಣ್ಯರೂಪವಾದ ಕರ್ಮಗಳಿಂದಲೇ ಬರತಕ್ಕದ್ದು.

೧೦೪. ವಿಚಾರಮಾಡಿ ಈ ವಿಷಯವನ್ನು ತಿಳಿದ ಜಾಣರು ತಮ್ಮ ವಿಷಯದಲ್ಲಿಯೇ ಆಗಲಿ ಬಂಧುಗಳ ವಿಷಯದಲ್ಲಿಯೇ ಆಗಲೀ ದುಃಖಿಸುವುದಿಲ್ಲ. ಕೋಟಿ ಕೋಟಿಗಳ ಸಂಖ್ಯೆಯುಳ್ಳ ಬ್ರಹ್ಮಾಂಡಗಳು ಹುಟ್ಟಿದುವು. ಅಂತೆಯೇ ಅವು ನಾಶವಾದುವು. ಸೃಷ್ಟಿಗಳೂ ಕೂಡ ಬಹುವಾಗಿ ಆಗಿಹೋದುವು.

೧೦೫. ಸಮುದ್ರಗಳೂ ಕೂಡ ಒಣಗಿ ಮರುಭೂಮಿಯಾಗುತ್ತವೆ. ಹೀಗಿರುವಾಗ ಕ್ಷಣಕಾಲ ಜೀವಿಸಿರುವ ಈ ದೇಹದಲ್ಲಿ ಅಕ್ಕರೆಯನ್ನೇಕೆ ಇಡಬೇಕು ? ಇಡಬಾರದು. ನೀರಿನಲ್ಲಿ ಬೆಳದಿರುವ ಗಿಡದ ಎಲೆಯ ತುದಿಯಲ್ಲಿ ಅಂಟಿಕೊಂಡಿರುವ ನೀರು ಕ್ಷಣಕಾಲದಲ್ಲಿಯೇ ಬಿದ್ದುಹೋಗುವಂತೆ ಈ ಆಯುಸ್ಸೆಂಬುದು ಕಾಲವಲ್ಲದ ಕಾಲದಲ್ಲಿ ಅಕಸ್ಮಾತ್ತಾಗಿ ಕಳೆದುಹೋಗುತ್ತದೆ.

ಆಯುಸ್ತ್ಯಜತ್ಯವೇಲಾಯಾಂ ಕಸ್ತತ್ರ ಪ್ರತ್ಯಯಸ್ತವ । ದೇಹೀ ಪ್ರಾಕ್ತನದೇಹೋತ್ಥಕರ್ಮಣಾ ದೇಹವಾನ್ಪುನಃ ॥ ೧೦೬ ॥
ತದ್ದೇಹೋತ್ಥೇನ ಚ ಪುನರೇವಂ ದೇಹಃ ಸದಾತ್ಮನಃ । ಯಥಾ ತ್ಯಜತಿ ವೈ ಜೀರ್ಣಂ ವಾಸೋ ಗೃಹ್ಣಾತಿ ನೂತನಂ ॥ ೧೦೭ ॥
ತಥಾ ಜೀರ್ಣಂ ಪರಿತ್ಯಜ್ಯ ದೇಹೀ ದೇಹಂ ಪುನರ್ನವಂ । ಭಜತ್ಯೇವ ಸದಾ ತತ್ರ ಶೋಕಸ್ಯಾವಸರಃ ಕುತಃ ॥ ೧೦೮ ॥
ಆತ್ಮಾ ನ ಮ್ರಿಯತೇ ಜಾತು ಜಾಯತೇ ವರ್ಧತೇ ನ ಚ । ಷಡ್ಭಾವರಹಿತೋಽನಂತಃ ಸತ್ಯಪ್ರಜ್ಞಾನವಿಗ್ರಹಃ ॥ ೧೦೯ ॥

---

೧೦೬. ಇಂತಹ ಆಯುಸ್ಸನ್ನು ಹೊಂದಿರುವ ಈ ದೇಹದಲ್ಲಿ ನಿನಗೆ ನಂಬಿಕೆ ಯಾವ ರೀತಿಯಾದುದು ? ದೇಹವನ್ನು ಹೊಂದಿರುವ ಈ ಪ್ರಾಣಿಯು ಪೂರ್ವಜನ್ಮದಲ್ಲಿ ಮಾಡಿರುವ ಪಾಪ ಪುಣ್ಯಗಳಿಗನುಸಾರವಾದ ದೇಹವನ್ನು ಹೊಂದುತ್ತಾನೆ. ಅಂತೆಯೇ ಈ ದೇಹದಲ್ಲಿ ಮಾಡಿದ ಪುಣ್ಯಪಾಪಗಳಿಗೋಸ್ಕರ ಮತ್ತೊಂದು ಜನ್ಮವನ್ನೆತ್ತಬೇಕು.

೧೦೭-೧೦೮. ಈ ರೀತಿಯಾಗಿ ಈ ಜೀವಾತ್ಮನು ಯಾವಾಗಲೂ ದೇಹವನ್ನು ಹೊಂದಿಯೇ ಹೊಂದುತ್ತಾನೆ. ಮನುಷ್ಯನಾದವನು ಹಳೆಯ ಬಟ್ಟೆಗಳನ್ನು ಬಿಟ್ಟು ಹೊಸವನ್ನು ಸ್ವೀಕರಿಸುವಂತೆ ಜೀವನು ಈ ಹಳೆಯ ದೇಹವನ್ನು ಬಿಟ್ಟು ಹೊಸದೇಹವನ್ನು ತೆಗೆದು ಕೊಳ್ಳುತ್ತಾನೆ. ಹೀಗೆ ಹೊಂದಿಯೇ ಹೊಂದಬೇಕಾಗಿರುವಲ್ಲಿ ದುಃಖಕ್ಕೆ ಕಾರಣವು ತಾನೇ ಏನಿದೆ ?

೧೦೯. ದೇಹಾಂತರ್ಗತವಾದ ಆತ್ಮನು ಸಾಯುವುದಿಲ್ಲ. ಹುಟ್ಟುವುದೂ ಇಲ್ಲ. ಹೆಚ್ಚುವುದೂ ಇಲ್ಲ. ಕುಂದುವುದೂ ಇಲ್ಲ. ಸಣ್ಣಗಾಗುವುದು ದೊಡ್ಡದಾಗುವುದು ಮುಂತಾದ ಆರುಭಾವಗಳೂ ಇವನಿಗಿರುವುದಿಲ್ಲ. ಮತ್ತು ಸತ್ಯಸ್ವರೂಪನೂ ಜ್ಞಾನಸ್ವರೂಪನೂ ಆಗಿರುವನು.

ಆನಂದರೂಪೋ ಬುದ್ಧ್ಯಾದಿಸರ್ವೋಪಾಧಿವಿವರ್ಜಿತಃ । ಏಕ ಏವ ಪರೋ ಹ್ಯಾತ್ಮಾ ಹ್ಯದ್ವಿತೀಯಃ ಸಮಃ ಸ್ಥಿತಃ ॥ ೧೧೦ ॥

ಇತ್ಯಾತ್ಮಾನಂ ದೃಢಂ ಜ್ಞಾತ್ವಾ ತ್ಯಕ್ತ್ವಾ ಶೋಕಂ ಕುರು ಕ್ರಿಯಾಃ । ತೈಲದ್ರೋಣ್ಯಾಂ ಪಿತುರ್ದೇಹಮುದ್ಧೃತ್ಯ ಸಚಿವೈಸ್ಸಹ ॥

ಕೃತ್ಯಂ ಕುರು ಯಥಾನ್ಯಾಯ್ಯಮಸ್ಮಾಭಿಃ ಕುಲನಂದನ । ಇತಿ ಸಂಬೋಧಿತಸ್ಸಾಕ್ಷಾದ್ಗುರುಣಾ ಭರತಸ್ತದಾ ॥ ೧೧೨ ॥

ವಿಸೃಜ್ಯಾಜ್ಞಾನಜಂ ಶೋಕಂ ಚಕ್ರೇ ಸ ವಿಧಿವತ್ಕ್ರಿಯಾಂ । ಗುರುಣೋಕ್ತಪ್ರಕಾರೇಣ ಚಾಹಿತಾಗ್ನೇರ್ಯಥಾವಿಧಿ ॥ ೧೧೩ ॥

---

೧೧೦. ಆನಂದರೂಪನು. ಉಪಾಧಿಗಳೊಂದೂ ಇವನಿಗೆ ಇರುವುದಿಲ್ಲ. ಈ ಆತ್ಮನು ಒಬ್ಬನೇ. ಇವನ ಜೊತೆಯದು ಮತ್ತೊಂದಿಲ್ಲ. ಇವನು ಎಲ್ಲರಲ್ಲಿಯೂ ಸಮನು.

೧೧೧. ಎಲೈ ಭರತನೇ ! ಈ ರೀತಿಯಾಗಿ ಯೋಚಿಸಿ ನೋಡಿ ಮನಸ್ಸಿನಲ್ಲಿ ಧೈರ್ಯವನ್ನು ತಂದುಕೊಂಡು ದುಃಖಪಡುವುದನ್ನು ಬಿಟ್ಟು ಬಿಟ್ಟು ಉತ್ತರಕ್ರಿಯೆಗಳನ್ನು ಮಾಡು. ಆ ನಿನ್ನ ತಂದೆಯ ದೇಹವನ್ನು ಎಣ್ಣೆಯದೋಣಿಯಿಂದ ಹೊರಕ್ಕೆ ತೆಗೆದು ಆದಕ್ಕೆ ಏನುಮಾಡಬೇಕೋ ಅವೆಲ್ಲವನ್ನೂ ಮಾಡು. ನಾನೂ ಮಂತ್ರಿಗಳೂ ನಿನ್ನ ಸಹಾಯಕ್ಕಿದ್ದೇವೆ

೧೧೨-೧೧೩. ಗುರುವಾದ ವಸಿಷ್ಠನು ಈ ರೀತಿಯಾಗಿ ಆ ಭರತನಿಗೆ ಬುದ್ಧಿ ಹೇಳಿದನು. ಇದರಿಂದ ಭರತನು ಜ್ಞಾನವನ್ನು ಹೊಂದಿ ಅಜ್ಞಾನದಿಂದ ಬಂದಿರುವ ದುಃಖವನ್ನು ಬಿಟ್ಟು ಬಿಟ್ಟು ಶಾಸ್ತ್ರರೀತಿಯಾಗಿ ತಂದೆಗೆ ಮಾಡಬೇಕಾದ ಕೆಲಸಗಳನ್ನು ಮಾಡಿದನು. ಗುರುವು ಹೇಳಿದ ರೀತಿಯಾಗಿ ಆಹಿತಾಗ್ನಿಗೆ ಕ್ರಿಯೆಯನ್ನು ಮಾಡುವ ರೀತಿಯಿಂದ ತಂದೆಯ ದೇಹಕ್ಕೆ ಸಂಸ್ಕಾರವನ್ನು ಮಾಡಿ ಕ್ರಿಯೆಗಳನ್ನು ಮಾಡಿದನು.

ಸಂಸ್ಕೃತ್ಯ ಸ ಪಿತುರ್ದೇಹಂ ವಿಧಿದೃಷ್ಟೇನ ಕರ್ಮಣಾ । ಏಕಾದಶೇಹನಿ ಪ್ರಾಪ್ತೇ ಬ್ರಾಹ್ಮಣಾನ್ವೇದಪಾರಗಾ್ ॥ ೧೧೪ ॥

ಭೋಜಯಾಮಾಸ ವಿಧಿವಚ್ಛತಶೋಥ ಸಹಸ್ರಶಃ । ಉದ್ದಿಶ್ಯ ಪಿತರಂ ತತ್ರ ಬ್ರಾಹ್ಮಣೇಭ್ಯೋ ಧನಂ ಬಹು ॥ ೧೧೫ ॥

ದದೌ ಗವಾಂ ಸಹಸ್ರಾಣಿ ಗ್ರಾಮಾನ್ರತ್ನಾಂಬಕಾಣಿ ಚ ॥ ೧೧೬ ॥

ಅವಸತ್ಸ್ವ ಗೃಹೇ ತತ್ರ ರಾಮಮೇವಾನುಚಿಂತಯ್ । ವಸಿಷ್ಠೇನ ಸಹ ಭ್ರಾತ್ರಾ ಮಂತ್ರಿಭಿಃ ಪರಿವಾರಿತಃ ॥ ೧೧೭ ॥

೧೧೪-೧೧೫. ಸ್ವಲ್ಪವೂ ನ್ಯೂನತೆಯಿಲ್ಲದಂತೆ ಕ್ರಮವಾಗಿ ಮಾಡುತ್ತ ಬಂದನು. ಹನ್ನೊಂದನೆಯ ದಿನವು ಬರಲು ಆ ದಿನ ವೇದಾಧ್ಯಯನ ಮಾಡಿದ ಬ್ರಾಹ್ಮಣರನ್ನು ಸಾವಿರಾರು ಜನರನ್ನು ಕರೆದು ಭೋಜನಮಾಡಿಸಿದನು. ಮತ್ತು ತಂದೆಯನ್ನುದ್ದೇಶಿಸಿ ಬ್ರಾಹ್ಮಣರಿಗೆ ಬಹುವಾಗಿ ದಾನವನ್ನು ಮಾಡಿದನು.

೧೧೬-೧೧೭ ಅನೇಕವಾಗಿ ಗ್ರಾಮಗಳನ್ನು ಸಾವಿರಾರು ಗೋವುಗಳನ್ನೂ ದಾನಮಾಡಿದನು. ರತ್ನಗಳನ್ನೂ ಬಟ್ಟೆಯನ್ನೂ ಬಹುವಾಗಿ ಬಹುವಾಗಿ ದಾನಮಾಡಿದನು. ಅನಂತರ ರಾಮನನ್ನೇ ಧ್ಯಾನಿಸುತ್ತ ವಸಿಷ್ಠ ತಮ್ಮನಾದ ಶತ್ರುಘ್ನ ಮಂತ್ರಿಗಳು ಇವರೊಡನೆ ಮನೆಯಲ್ಲಿಯೇ ಇದ್ದುಕೊಂಡಿದ್ದನು.

ರಾಮೋರಣ್ಯಂ ಪ್ರಯಾತೇ ಸಹ ಜನಕಸುತಾಲಕ್ಷ್ಮಣಾಭ್ಯಾಂ ಸುಘೋರಂ ।
ಮಾತಾ ಮೇ ರಾಕ್ಷಸೀವ ಪ್ರದಹತಿ ಹೃದಯಂ ದರ್ಶನಾದೇವ ಸದ್ಯಃ ॥
ಗಚ್ಛಾಮ್ಯಾರಣ್ಯಮದ್ಯ ಸ್ಥಿರಮತಿರಖಿಲಂ ದೂರತೋಪಾಸ್ಯ ರಾಜ್ಯಂ ।
ರಾಮಂ ಸೀತಾಸಮೇತಂ ಸ್ಮಿತರುಚಿರಮುಖಂ ನಿತ್ಯಮೇವಾನುಸೇವೆ ॥ ೧೧೮ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ
ಸಪ್ತಮಸ್ಸರ್ಗಃ ಸಮಾಪ್ತಃ

---

೧೧೮. ರಾಮನು ಸೀತಾಲಕ್ಷ್ಮಣರೊಡನೆ ಘೋರವಾದ ಅರಣ್ಯಕ್ಕೆ ಹೊರಟು ಹೋದನು. ನನ್ನ ತಾಯಿಯು ಮನೆಯಲ್ಲಿಯೇ ಉಳಿದುಕೊಂಡಿರುವಳು. ಇವಳನ್ನು ನಾನು ನೋಡುತ್ತಿದ್ದಾಗಲೆಲ್ಲಾ ನನ್ನ ಮನಸ್ಸನ್ನು ಬಹುವಾಗಿ ಸುಡುತ್ತಿರುವಳು. ನಾನೂ ಈ ರಾಜ್ಯವನ್ನು ಬಿಟ್ಟು ದೂರವಾಗಿ ಅರಣ್ಯಕ್ಕೇ ಹೋಗುತ್ತೇನೆ. ಎಂಬದಾಗಿ ಮನಸ್ಸಿನಲ್ಲಿ ಸ್ಥಿರಮಾಡಿಕೊಂಡನು. ಈ ರೀತಿಯಾಗಿ ಮನಸ್ಸಿನಲ್ಲಿ ಸ್ಥಿರಮಾಡಿಕೊಂಡು ನಗುಮುಖವುಳ್ಳ ಆ ಸೀತಾಸಮೇತನಾದ ಶ್ರೀರಾಮನನ್ನೇ ಯಾವಾಗಲೂ ನಾನೂ ಕಾಡಿನಲ್ಲಿ ಸೇವೆಮಾಡಿಕೊಂಡಿರುತ್ತೇನೆ. ಎಂದು ಉದ್ದೇಶಮಾಡಿಕೊಂಡನು.

ಇಂತು ಶ್ರೀಮದಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ ಏಳನೆಯ ಸರ್ಗವು.

॥ ಶ್ರೀರಸ್ತು ॥

ಅಥ ಅಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಅಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದ ಎಂಟನೆಯ ಸರ್ಗದಲ್ಲಿ ಮಾಡಬೇಕಾದ ಸಂಕಲ್ಪ ನ್ಯಾಸ ಧ್ಯಾನ ಜಪಗಳ ಕ್ರಮವು.

ಪೂರ್ವೋಕ್ತವಿಧಿನಾ ಅಯೋಧ್ಯಾಕಾಂಡೇ ಅಷ್ಟಮಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ ಇತಿಸಂಕಲ್ಪ್ಯ ॥

ಹಿಂದೆ ಹೇಳಿದ ವಿಧಿಯಂತೆ ಅಯೋಧ್ಯಾಕಾಂಡದ ಎಂಟನೆಯ ಸರ್ಗದಲ್ಲಿ ನ್ಯಾಸ, ಧ್ಯಾನ, ಜಪಗಳನ್ನು ಮಾಡುತ್ತೇನೆ. ಎಂಬುದಾಗಿ ಸಂಕಲ್ಪವನ್ನು ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ರಾಂ ರೀಂ ಥಾಂ ಅಂಗುಷ್ಠಾಭ್ಯಾಂ ನಮಃ
ಓಂ ರಾಂ ರೀಂ ಥಾಂ ತರ್ಜನೀಭ್ಯಾಂ ನಮಃ
ಓಂ ರಾಂ ರೀಂ ಥಾಂ ಮಧ್ಯಮಾಭ್ಯಾಂ ನಮಃ
ಓಂ ರಾಂ ರೀಂ ಥಾಂ ಅನಾಮಿಕಾಭ್ಯಾಂ ನಮಃ
ಓಂ ರಾಂ ರೀಂ ಥಾಂ ಕನಿಷ್ಠಿಕಾಭ್ಯಾಂ ನಮಃ
ಓಂ ರಾಂ ರೀಂ ಥಾಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಷಡಂಗನ್ಯಾಸವು

ಓಂ ರಾಂ ರೀಂ ಥಾಂ ಹೃದಯಾಯ ನಮಃ ಓಂ ರಾಂ ರೀಂ ಥಾಂ ಕವಚಾಯ ಹುಂ

ಓಂ ರಾಂ ರೀಂ ಥಾಂ ಶಿರಸೇ ಸ್ವಾಹಾ ಓಂ ರಾಂ ರೀಂ ಥಾಂ ನೇತ್ರತ್ರಯಾಯ ವೌಷಟ್

ಓಂ ರಾಂ ರೀಂ ಥಾಂ ಶಿಖಾಯೈ ವಷಟ್ ಓಂ ರಾಂ ರೀಂ ಥಾಂ ಅಸ್ತ್ರಾಯ ಫಟ್

ಓಂ ರಾಂ ರೀಂ ಥಾಂ ಇತಿ ದಿಗ್ಬಂಧಃ

ಓಂ ರಾಂ ರೀಂ ಥಾಂ ಎಂದು ದಿಗ್ಬಂಧವು

॥ ಅಥ ಧ್ಯಾನಂ ॥

ಧ್ಯಾನವು

ವಸಿಷ್ಠೋ ಮುನಿಭಿಸ್ಸಾರ್ಧಂ ಮಂತ್ರಿಭಿಃ ಪರಿವಾರಿತಃ । ರಾಜ್ಞಸ್ಸಭಾಂ ದೇವಸಭಾ ಸನ್ನಿಭಾಮವಿಶ ದ್ವಿಭುಃ ॥

ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು

ಪಾರಾಯಣಾಂತೇ ಪುನಃ ಷಡಂಗನ್ಯಾಸಂ ಕೃತ್ವಾ ಓಂ ರಾಂ ರೀಂ ಥಾಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್

ಪಾರಾಯಣವಾದಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ರಾಂ ರೀಂ ಥಾಂ ಇತಿ ದಿಗ್ವಿಮೋಕಃ ಎಂದೆನ್ನಬೇಕು. ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

॥ ಇತಿ ಶ್ರೀ ಅಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಮಸರ್ಗೇ ನ್ಯಾಸ ಧ್ಯಾನ ಜಪಕ್ರಮಃ ॥

ಇಂತು ಅಯೋಧ್ಯಾಕಾಂಡದ ಎಂಟನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ಅಷ್ಟಮಸ್ಸರ್ಗಃ

॥ ಮಹಾದೇವ ಉವಾಚ ॥

ವಸಿಷ್ಠೋ ಮುನಿಭಿಸ್ಸಾರ್ಧಂ ಮಂತ್ರಿಭಿಃ ಪರಿವಾರಿತಃ । ರಾಜ್ಞಸ್ಸಭಾಂ ದೇವಸಭಾಸನ್ನಿಭಾಮುವಿಶದ್ವಿಭುಃ ॥ ೧ ॥

ತತ್ರಾಸನೇ ಸಮಾಸೀನಶ್ಚತುರ್ಮುಖ ಇವಾಪರಃ । ಆನೀಯ ಭರತಂ ತತ್ರ ಉಪವೇಶ್ಯ ಸಹಾನುಜಂ ॥ ೨ ॥

ಅಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಂಟನೆಯ ಸರ್ಗವು.

೧. ಮಹಾದೇವನು ಹೇಳಿದನು–ವಸಿಷ್ಠನು ಒಂದುದಿವಸ ದೇವಸಭೆಯಂತಿರುವ ದಶರಥನ ಸಭಾಮಂಟಪವನ್ನು ಪ್ರವೇಶಿಸಿ ಮಂತ್ರಿಗಳನ್ನೂ ಮುನಿಗಳನ್ನೂ ಅಲ್ಲಿಗೆ ಕರೆಸಿದನು. ಮತ್ತು ಪುರವೃದ್ಧರನ್ನೂ ಮುಖ್ಯ ಮುಖ್ಯರಾದವರನ್ನೂ ಕರೆಸಿದನು.

೨. ಅವರೆಲ್ಲರನ್ನೂ ಕರೆಸಿ ಅವರ ಮಧ್ಯದಲ್ಲಿ ಎರಡನೆಯ ಬ್ರಹ್ಮನಂತೆ ಆಸನದಲ್ಲಿ ಕುಳಿತಿದ್ದನು. ಅನಂತರ ಭರತ ಶತ್ರುಘ್ನರನ್ನು ಆ ಸಭೆಗೆ ಕರೆಸಿದನು. ಅಲ್ಲಿ ಅವರನ್ನು ರಾಜರಿಗೆ ಯೋಗ್ಯವಾದ ಆಸನದಲ್ಲಿ ಕೂರಿಸಿದನು.

ಅಬ್ರವೀದ್ವಚನಂ ದೇಶಕಾಲೋಚಿತಮರಿಂದಮಃ । ವತ್ಸ ರಾಜ್ಯೇಭಿಷೇಕ್ಷ್ಯಾಮಸ್ತ್ವಾಮದ್ಯ ಪಿತೃಶಾಸನಾತ್ ॥ ೩ ॥

ಕೈಕೇಯ್ಯಾ ಯಾಚಿತಂ ರಾಜ್ಯಂ ತ್ವದರ್ಥೇ ಪುರುಷರ್ಷಭ । ಸತ್ಯಸಂಧೋ ದಶರಥಃ ಪ್ರತಿಜ್ಞಾಯ ದದೌ ಕಿಲ ॥ ೪ ॥

ಅಭಿಷೇಕೋ ಭವತ್ವದ್ಯ ಮುನಿಭಿರ್ಮಂತ್ರಪೂರ್ವಕಂ । ತಚ್ಛ್ರುತ್ವಾ ಭರತೋಪ್ಯಾಹ ಮಮ ರಾಜ್ಯೇನ ಕಿಂ ಮುನೇ ॥ ೫ ॥

ರಾಮೋ ರಾಜಾಧಿರಾಜಶ್ಚ ವಯಂ ತಸ್ಯೈವ ಕಿಂಕರಾಃ । ಶ್ವಃ ಪ್ರಭಾತೇ ಗಮಿಷ್ಯಾಮೋ ರಾಮಮಾನೇತುಮಂಜಸಾ ॥ ೬ ॥

---

೩. ಅನಂತರ ಆ ಶತ್ರುನಾಶಕನಾದ ಭರತನನ್ನು ಕುರಿತು ಕಾಲಯೋಗ್ಯವಾದ ರೀತಿಯಿಂದ ಈ ರೀತಿಯಾಗಿ ಹೇಳಿದನು ಎಲೈ ವತ್ಸನೆ ! ನಿನ್ನ ತಂದೆಯ ಅಪ್ಪಣೆಯಂತೆ ನಿನ್ನನ್ನು ಈ ರಾಜ್ಯದಲ್ಲಿ ಅಭಿಷೇಕಮಾಡುತ್ತೇವೆ.

೪. ಕೈಕೇಯಿಯು ನಿನಗೋಸ್ಕರವಾಗಿ ಆ ರಾಜನಿಂದ ರಾಜ್ಯವನ್ನು ತೆಗೆದುಕೊಂಡಿರುವಳು. ಸತ್ಯಸಂಧನಾದ ಆ ದಶರಥನು ಪ್ರತಿಜ್ಞೆಮಾಡಿ ಅದನ್ನು ನಿನಗೆ ಕೊಟ್ಟಿರುವನು.

೫. ಆದುದರಿಂದ ಮಂತ್ರಪೂರ್ವಕವಾಗಿ ನಿನಗೆ ರಾಜ್ಯದಲ್ಲಿ ಅಭಿಷೇಕವಾಗಲಿ. ಎಂದು ಹೇಳಲು ಅದನ್ನು ಕೇಳಿ ಭರತನು ಎಲೈ ಋಷಿಯೆ ! ನನಗೆ ರಾಜ್ಯದಿಂದ ಉಪಯೋಗವೇನು ? ಎಂದನು.

೬. ಆ ಶ್ರೀರಾಮನೇ ರಾಜಾಧಿರಾಜನು. ನಾವು ಅವನ ಕಿಂಕರರು. ರಾಮನನ್ನು ಇಲ್ಲಿಗೆ ಕರತರಲು ನಾಳೆಯೇ ಜಾಗ್ರತೆಯಾಗಿ ಹೋಗೋಣ !

ಅಹಂ ಯೂಯಂ ಮಾತರಶ್ಚ ಕೈಕೇಯಿಾಂ ರಾಕ್ಷಸೀಂ ವಿನಾ । ಹನಿಷ್ಯಾಮ್ಯಧುನೈವಾಹಂ ಕೈಕೇಯೀಂ ಮಾತೃಗಂಧಿನೀಂ ॥ ೭ ॥

ಕಿಂ ತು ಮಾಂ ನೋ ರಘುಶ್ರೇಷ್ಠಃ ಸ್ತ್ರೀಹಂತಾರಂ ಸಹಿಷ್ಯತೇ । ತಚ್ಛ್ವೋಭೂತೇ ಗಮಿಷ್ಯಾಮಿ ಪಾದಚಾರೇಣ ದಂಡಕಾಣ ॥ ೮ ॥

ಶತ್ರುಘ್ನಸಹಿತಸ್ತೂರ್ಣಂ ಯೂಯಮಾಯಾಂತು ವಾ ನ ವಾ । ರಾಮೋ ಯಥಾ ವನಂ ಯಾತಸ್ತಥಾಹಂ ವಲ್ಕಲಾಂಬರಃ ॥ ೯ ॥

ಫಲಮೂಲಕೃತಾಹಾರಶ್ಶತ್ರುಘ್ನಸಹಿತೋ ಮುನೇ । ಭೂಮಿಶಾಯೀ ಜಟಾಧಾರೀ ಯಾವದ್ರಾಮೋ ನಿವರ್ತತೇ ॥ ೧೦ ॥

---

೭. ನಾವೂ ನೀವೂ ತಾಯಿಯರೆಲ್ಲರೂ ಹೋಗೋಣ ! ಆ ರಾಕ್ಷಸಿಯಾದಕೈಕೇಯಿಯು ಬರುವುದು ಬೇಡ.

೮. ತಾಯಿಯೆಂಬ ಹೆಸರನ್ನು ನೆಪಮಾತ್ರಕ್ಕೆ ಹೊಂದಿರುವ ಆ ಕೈಕೇಯಿಯನ್ನು ಈಗಲೇ ಕೊಂದುಹಾಕಿಯೇನು ! ಆದರೆ ನಾನು ಸ್ತ್ರೀಹತ್ಯೆಯನ್ನು ಮಾಡಿದರೆ ಆ ಶ್ರೀರಾಮನು ನನ್ನನ್ನು ಸಹಿಸುವುದಿಲ್ಲ. ಅದರಿಂದ ಸುಮ್ಮನಿರಬೇಕಾಗಿದೆ.

೯. ಆದುದರಿಂದ ನಾಳೆಯೇ ದಂಡಕಾರಣ್ಯಕ್ಕೆ ಕಾಲಿಂದಲೇ ನಡೆದುಕೊಂಡು ಹೋಗೋಣ. ನಾನೂ ಶತ್ರುಘ್ನನೂ ಹೋಗಿಯೇ ಹೋಗುತ್ತೇವೆ. ನೀವು ಬೇಕಾದರೆ ಬನ್ನಿರಿ ಬೇಡದಿದ್ದರೆ ಬಿಡಿರಿ. ರಾಮನು ನಾರುಡೆಯನ್ನುಟ್ಟು ಹೇಗೆ ಕಾಡಿಗೆ ಹೋದನೋ ? ಅದೇ ರೀತಿಯಾಗಿ ನಾವೂ ನಾರುಡೆಯನ್ನುಟ್ಟು ಕಾಡಿಗೆ ಹೋಗುತ್ತೇವೆ.

೧೦. ಹಣ್ಣು ಹಂಪಲುಗಳನ್ನೂ ಗೆಡ್ಡೆಗೆಣಸುಗಳನ್ನೂ ತಿಂದುಕೊಂಡು ಇರುತ್ತೇವೆ. ಜಟೆಯನ್ನು ಧರಿಸಿಕೊಂಡು ನೆಲದಮೇಲೆ ಮಲಗುತ್ತೇವೆ. ರಾಮನು ಹಿಂದಿರುಗಿ ಬರುವವರೆಗೂ ಹೀಗೆಯೇ ಮಾಡುತ್ತೇವೆ.

ಇತಿ ನಿಶ್ಚಿತ್ಯ ಭರತಸ್ತೂಷ್ಣೀಮೇವಾವತಸ್ಥಿವಾನ್ । ಸಾಧು ಸಾಧ್ವಿತಿ ತಂ ಸರ್ವೇ ಪ್ರಶಶಂ ಸುಮುರ್ಮುದಾನ್ವಿತಾಃ ॥ ೧೧ ॥

ತತಃ ಪ್ರಭಾತೇ ಭರತಂ ಗಚ್ಛಂತಂ ಸರ್ವಸೈನಿಕಾಃ । ಅನುಜಗ್ಮುಸ್ಸುಮಂತ್ರೇಣ ನೋದಿತಾಃ ಸಾಶ್ವಕುಂಜರಾಃ ॥ ೧೨ ॥

ಕೌಸಲ್ಯಾದ್ಯಾ ರಾಜದಾರಾ ವಸಿಷ್ಠಪ್ರಮುಖಾ ದ್ವಿಜಾಃ । ಛಾದಯಂತೋ ಭುವಂ ಸರ್ವೇ ಪೃಷ್ಠತಃ ಪಾರ್ಶ್ವತೋಗ್ರತಃ ॥ ೧೩ ॥

ಶೃಂಗಿಬೇರಪುರಂ ಗತ್ವಾ ಗಂಗಾಕೂಲೇ ಸಮಂತತಃ । ಉವಾಸ ಮಹತೀ ಸೇನಾ ಶತ್ರುಘ್ನಪರಿಚೋದಿತಾ ॥ ೧೪ ॥

---

೧೧. ಭರತನು ಈ ರೀತಿಯಾಗಿ ನಿಶ್ಚಯಿಸಿಕೊಂಡು ಹೇಳಿ ಸುಮ್ಮನೆ ಇದ್ದುಬಿಟ್ಟನು. ಆಗ ಎಲ್ಲರೂ ಆತನ ಜಾಣತನಕ್ಕೆ ಸಂತೋಷಪಟ್ಟು "ಸಾಧು, ಸಾಧು" ಎಂಬುದಾಗಿ ಹೇಳುತ್ತಾ ಹೊಗಳಿದರು.

೧೨. ಬೆಳಗಾಗುತ್ತಲೂ ಭರತನು ರಾಮನನ್ನು ಕರೆತರಲು ಕಾಡಿಗೆ ಹೊರಟನು. ಇದನ್ನು ನೋಡಿ ಸುಮಂತ್ರನು ಸೈನಿಕರನ್ನು ಹೊರಡಿಸಲು ರಥ, ಕುದುರೆ, ಆನೆ, ಕಾಲಾಳುಗಳು ಎಲ್ಲರೂ ಅವನನ್ನು ಅನುಸರಿಸಿ ಹೊರಟರು.

೧೩. ಕೌಸಲ್ಯೆಯೇ ಮೊದಲಾದ ರಾಜಮಹಿಷಿಯರೂ ವಸಿಷ್ಠನೇ ಮುಂತಾದ ಬ್ರಾಹ್ಮಣರೂ ಎಲ್ಲರೂ ಹೊರಟರು. ಇವರೆಲ್ಲರೂ ಆ ಭರತನ ಹಿಂದುಮುಂದೆಯೂ ಪಾರ್ಶ್ವಗಳಲ್ಲಿಯೂ ಹೋಗುತ್ತ ಭೂಮಿಯನ್ನು ಮುಚ್ಚಿಕೊಂಡು ಹೊರಟರು.

೧೪. ಶೃಂಗಬೇರಪುರಕ್ಕೆ ಹೋಗಿ ಗಂಗೆಯ ದಡದಲ್ಲಿ ಉದ್ದಕ್ಕೂ ನಿಂತರು. ಅಲ್ಲಿ ಶತ್ರುಘ್ನನ ಅಪ್ಪಣೆಯಂತೆ ಅಲ್ಲಿ ಸೈನ್ಯವೆಲ್ಲವೂ ನಿಂತಿತು.

ಆಗತಂ ಭರತಂ ಶ್ರುತ್ವಾ ಗುಹಶ್ಶಂಕಿತಮಾನಸಃ । ಮಹತ್ಯಾ ಸೇನಯಾ ಸಾರ್ಧಮಾಗತೋ ಭರತಃ ಕಿಲ ॥ ೧೫ ॥

ಪಾಪಂ ಕರ್ತುಂ ನ ವಾಯಾತಿ ರಾಮಸ್ಯಾವಿದಿತಾತ್ಮನಃ । ಗತ್ವಾ ತದ್ಧೃದಯಂ ಜ್ಞೇಯಂ ಯದಿ ಶುದ್ಧಸ್ತರಿಷ್ಯತಿ ॥ ೧೬ ॥

ಗಂಗಾಂ ನೋ ಚೇತ್ಸಮಾಕೃಷ್ಯ ನಾವಸ್ತಿಷ್ಠಂತು ಸಾಯುಧಾಃ । ಜ್ಞಾತಯೋ ಮೇ ಸಮಾಯತ್ತಾಃ ಪಶ್ಯಂತಸ್ಸರ್ವತೋ ದಿಶಂ ॥

ಇತಿ ಸರ್ವಾನ್ಸಮಾದಿಶ್ಯ ಗುಹೋ ಭರತಮಾಗತಃ । ಉಪಾಯನಾನಿ ಸಂಗೃಹ್ಯ ವಿವಿಧಾನಿ ಬಹೂನಪಿ ॥ ೧೮ ॥

---

೧೫. ಗಂಗೆದಡಕ್ಕೆ ಭರತನೂ ಶತ್ರುಘ್ನನೂ ಸೈನ್ಯದೊಡನೆ ಬಂದುದನ್ನು ನೋಡಿ ಗುಹನಿಗೆ ರಾಮನ ವಿಷಯವು ಜ್ಞಾಪಕಕ್ಕೆ ಬಂದು ಸಂದೇಹಪಟ್ಟನು. ಈ ಭರತನು ಬಹುವಾದ ಸೈನ್ಯಗಳನ್ನು ಕಟ್ಟಿಕೊಂಡು ಬಂದಿರುವನು.

೧೬. ಪುಣ್ಯಾತ್ಮನೂ ಸತ್ಯಸಂಧನೂ ಆದ ರಾಮನಿಗೆ ಏನಾದರೂ ತೊಂದರೆಪಡಿಸಲು ಬಂದಿರಬಹುದೆ? ಅಥವಾ ಇಲ್ಲವೆ? ಇರಲಿ! ಹೋಗಿ ಅವನ ಮನಸ್ಸನ್ನು ತಿಳಿಯುತ್ತೇನೆ. ಅವನ ಮನಸ್ಸು ರಾಮನ ವಿಷಯದಲ್ಲಿ ಶುದ್ಧವಾಗಿದ್ದರೆ ಈ ಗಂಗಾನದಿಯನ್ನು ದಾಟಲಿ. ದಾಟಿಸುತ್ತೇನೆ.

೧೭. ಹಾಗೆ ಇಲ್ಲದೆ ಭರತನು ಕೆಟ್ಟಮನಸ್ಸನ್ನು ಹೊಂದಿದ್ದರೆ ನಮ್ಮವರೆಲ್ಲರೂ ನಾವೆಯನ್ನು ದಡಕ್ಕೆ ಬಿಡದೆ ದೂರದಲ್ಲಿರುತ್ತಾ ಆಯುಧಗಳನ್ನು ಹಿಡಿದು ಯುದ್ಧಕ್ಕೆ ಸಿದ್ಧರಾಗಲಿ. ನನ್ನ ಕಡೆಯವರೆಲ್ಲರೂ ಜಾಗರೂಕರಾಗಿದ್ದುಕೊಂಡು ಎಲ್ಲಾ ಕಡೆಯಲ್ಲಿಯೂ ನೋಡುತ್ತಿರಲಿ.

೧೮. ಎಂಬುದಾಗಿ ಎಲ್ಲರಿಗೂ ಗುಹನು ಅಪ್ಪಣೆಮಾಡಿ ಅನೇಕ ವಿಧವಾದ ಕಪ್ಪದ ಪದಾರ್ಥಗಳನ್ನು ತೆಗೆದುಕೊಂಡು ಭರತನ ಬಳಿಗೆ ಹೋದನು.

ಪ್ರಯಯೌ ಜ್ಞಾತಿಭಿಸ್ಸಾರ್ಧಂ ಬಹುಭಿರ್ವಿವಿಧಾಯುಧೈಃ । ನಿವೇದ್ಯೋಪಾಯನಾನ್ಯಗ್ರೇ ಭರತಸ್ಯ ಸಮಂತತಃ ॥ ೧೯ ॥

ದೃಷ್ಟ್ವಾ ಭರತಮಾಸೀನಂ ಸಾನುಜಂ ಸಹ ಮಂತ್ರಿಭಿಃ । ಚೀರಾಂಬರಂ ಘನಶ್ಯಾಮಂ ಜಟಾಮುಕುಟಧಾರಿಣಂ ॥ ೨೦ ॥

ರಾಮಮೇವಾನುಶೋಚಂತಂ ರಾಮ ರಾಮೇತಿ ವಾದಿನಂ । ನನಾಮ ಶಿರಸಾ ಭೂಮೌ ಗುಹೋಽಹಮಿತಿ ಚಾಬ್ರವೀತ್ ॥ ೨೧ ॥

ಶೀಘ್ರಮುತ್ಥಾಪ್ಯ ಭರತೋ ಗಾಢಮಾಲಿಂಗ್ಯ ಸಾದರಂ । ಪೃಷ್ಟ್ವಾನಾಮಯಮವ್ಯಗ್ರಃ ಸಖಾಯಮಿದಮಬ್ರವೀತ್ ॥ ೨೨ ॥

---

೧೯. ಅಲ್ಲದೆ ತನ್ನ ಜೊತೆಯಲ್ಲಿ ಬಹು ಜನ ಆಯುಧವನ್ನು ಹಿಡಿದಿರುವ ಭಟರನ್ನೂ ಕರೆದುಕೊಂಡು ಹೋಗಿ ಭರತನಿಗೆ ಆ ಉಪಾಯನ ಪದಾರ್ಥಗಳನ್ನು ಕೊಟ್ಟು ಎಲ್ಲಾ ಕಡೆಗೂ ದೃಷ್ಟಿಸಿ ನೋಡಿದನು.

೨೦. ಅಲ್ಲಿ ಭರತನು ಮಂತ್ರಿಗಳೊಡನೆಯೂ ತಮ್ಮನೊಡನೆಯೂ ಕುಳಿತಿದ್ದನು. ನಾರುಬಟ್ಟೆಯನ್ನುಟ್ಟಿದ್ದನು. ಕಪ್ಪಗಿದ್ದನು, ತಲೆಗೂದಲನ್ನು ಜಟೆಯನ್ನು ಮಾಡಿಕೊಂಡು ತಲೆಯಮೇಲಕ್ಕೆ ಕಟ್ಟಿಕೊಂಡಿದ್ದನು.

೨೧. ರಾಮನನ್ನೇ ಕುರಿತು ಯೋಚಿಸುತ್ತಿದ್ದನು. ಮತ್ತು ರಾಮ ರಾಮ ಎಂದು ಹೇಳುತ್ತಿದ್ದನು. ಅಂತಹ ಭರತನನ್ನು ನೋಡಿ ಈಗ ಗುಹನು ನಾನು ಗುಹನೆಂದು ಹೇಳುತ್ತಾ ಅವನಿಗೆ ನಮಸ್ಕರಿಸಿದನು.

೨೨. ಭರತನು ಒಡನೆಯೇ ಆ ಗುಹನನ್ನು ಮೇಲಕ್ಕೆಬ್ಬಿಸಿ ಪ್ರೀತಿಯಿಂದ ಗಾಢವಾಗಿ ಆಲಿಂಗಿಸಿಕೊಂಡು ಕುಶಲವನ್ನು ಕೇಳಿ ಸಾವಧಾನವಾಗಿ ಆ ಸ್ನೇಹಿತನಾದ ಗುಹನನ್ನು ಕುರಿತು ಇಂತೆಂದನು.

ಭ್ರಾತಸ್ತ್ವಂ ರಾಘವೇಣಾತ್ರ ಸಮೇತಸ್ಸಮುಪಸ್ಥಿತಃ | ರಾಮೇಣಾಲಿಂಗಿತಸ್ಸಾರ್ದ್ರನಯನೇನಾಮಲಾತ್ಮನಾ || ೨೩ ||

ಧನ್ಯೋಽಸಿ ಕೃತಕೃತ್ಯೋಽಸಿ ಯತ್ತ್ವಯಾ ಪರಿಭಾಷಿತಃ । ರಾಮೋ ರಾಜೀವಪತ್ರಾಕ್ಷೋ ಲಕ್ಷ್ಮಣೇನ ಚ ಸೀತಯಾ || ೨೪ ||

ಯತ್ರ ರಾಮಸ್ತ್ವಯಾ ದೃಷ್ಟಸ್ತತ್ರ ಮಾಂ ನಯ ಸುವ್ರತ | ಸೀತಯಾ ಸಹಿತೋ ಯತ್ರ ಸುಪ್ತಸ್ತದ್ದರ್ಶಯಸ್ವ ಮೇ || ೨೫ ||

ತ್ವಂ ರಾಮಸ್ಯ ಪ್ರಿಯತಮೋ ಭಕ್ತಿಮಾನಸಿ ಭಾಗ್ಯವಾನ್ | ಇತಿ ಸಂಸ್ಮೃತ್ಯ ಸಂಸ್ಮೃತ್ಯ ರಾಮಂ ಸಾಶ್ರುವಿಲೋಚನಃ || ೨೬ ||

---

೨೩. ಎಲೈ ಸಹೋದರನಾದ ಗುಹನೇ ? ನೀನು ಇಲ್ಲಿ ಶ್ರೀರಾಮನೊಡನೆ ಕೂಡಿಕೊಂಡಿದ್ದೆ. ರಾಮನು ನಿನ್ನನ್ನು ದಯೆಯಿಂದ ಕೂಡಿಕೊಂಡು ಪ್ರೀತಿಯಿಂದ ಆಲಿಂಗಿಸಿ ಕೊಂಡಿದನು.

೨೪–೨೫. ಅವನು ನಿನ್ನನ್ನು ಸ್ನೇಹದಿಂದ ಮಾತನಾಡಿಸಿರುವನು. ಇಂತಹ ನೀನೇ ಧನ್ಯನು. ಮತ್ತು ಕೃತ ಕೃತ್ಯನು. ಕಮಲದಂತೆ ಕಣ್ಣುಗಳುಳ್ಳ ರಾಮನನ್ನು ಲಕ್ಷ್ಮಣ ಸೀತೆಯೊಡನೆ ನೀನು ಎಲ್ಲಿ ನೋಡಿದೆಯೋ ಅಲ್ಲಿಗೆ ನನ್ನನ್ನೂ ಕರೆದುಕೊಂಡು ಹೋಗು. ಆ ರಾಮನು ಸೀತೆಯೊಡನೆ ಎಲ್ಲಿ ಮಲಗಿದ್ದನೋ ಅಲ್ಲಿಗೆ ನನ್ನನ್ನೂ ಕರೆದುಕೊಂಡು ಹೋಗು.

೨೬. ನೀನು ರಾಮನಿಗೆ ಬಹು ಪ್ರೀತಿಪಾತ್ರನೂ ಭಕ್ತಿಯುಳ್ಳವನೂ ಆಗಿದ್ದೀಯೆ ನೀನೇ ಭಾಗ್ಯವಂತನು. ಈ ರೀತಿಯಾಗಿ ರಾಮನನ್ನು ಜ್ಞಾಪಿಸಿಕೊಳ್ಳುತ್ತ ಜ್ಞಾಪಿಸಿಕೊಳ್ಳುತ್ತ ದುಃಖದಿಂದ ಕಣ್ಣೀರನ್ನು ತುಂಬಿಕೊಂಡನು.

ಗುಹೇನ ಸಹಿತಸ್ತತ್ರ ಯತ್ರ ರಾಮಃ ಸ್ಥಿತೋ ನಿಶಿ । ಯಯೌ ದದರ್ಶ ಶಯನಸ್ಥಲಂ ಕುಶಸಮಾಸ್ತೃತಂ ॥ ೨೭ ॥

ಸೀತಾಭರಣಸಂಲಗ್ನ ಸ್ವರ್ಣಬಿಂದುಭಿರಂಜಿತಂ । ದುಃಖಸಂತಪ್ತಹೃದಯೋ ಭರತಃ ಪರ್ಯದೇವಯತ್ ॥ ೨೮ ॥

ಅಹೋತಿಸುಕುಮಾರೀ ಯಾ ಸೀತಾ ಜನಕನಂದಿನೀ । ಪ್ರಾಸಾದೇ ರತ್ನಪರ್ಯಂಕೇ ಕೋಮಲಾಸ್ತರಣೇ ಶುಭೇ ॥ ೨೯ ॥

ರಾಮೇಣ ಸಹಿತಾ ಶೇತೇ ಸಾ ಕಥಂ ಕುಶವಿಷ್ಟರೇ । ಸೀತಾ ರಾಮೇಣ ಸಹಿತಾ ದುಃಖೇನ ಮಮ ದೋಷತಃ ॥ ೩೦ ॥

---

೨೭. ರಾಮನು ರಾತ್ರಿಯಲ್ಲಿ ಎಲ್ಲಿ ಮಲಗಿದ್ದನೋ ಅಲ್ಲಿಗೆ ಗುಹನೊಡನೆ ಈ ಭರತನು ಹೋದನು. ಅಲ್ಲಿ ದರ್ಭೆಯ ಹಾಸಿಗೆಯನ್ನು ಮಾಡಿ ಹಾಸಿಕೊಂಡಿದ್ದ ಆ ಜಾಗವನ್ನು ನೋಡಿದನು.

೨೮. ಆ ದರ್ಭೆಗಳು ಸೀತೆಯ ಒಡವೆಗಳು ಒತ್ತಿರುವುದರಿಂದ ಅಲ್ಲಲ್ಲಿಯೇ ಹಳ್ಳಗಳಾಗಿ ಅವು ಚುಕ್ಕೆಯಂತಿದ್ದುವು. ಇದನ್ನು ನೋಡಿ ಭರತನು ದುಃಖಪಡುತ್ತ ಕಣ್ಣೀರನ್ನು ಸುರಿಸಿದನು.

೨೯–೩೦. ಜನಕನ ಮಗಳಾದ ಯಾವ ಸೀತೆಯು ಮಹಡಿಯ ಮನೆಯಲ್ಲಿ ರತ್ನದ ಮಂಚದಮೇಲೆ ರಾಮನೊಡನೆ ಮೃದುವಾದ ಹಾಸಿಗೆಯಮೇಲೆ ಮಲಗುವುದು ಊಟಮಾಡುವುದು ಮುಂತಾದುವನ್ನು ಮಾಡುತ್ತಿದ್ದಳೋ ಅಂತಹ ಸೀತೆಯು ಈಗ ಅದೇ ರಾಮನೊಡನೆ ನನ್ನ ಸಲುವಾಗಿ ಉಂಟಾದ ದೋಷದಿಂದ ಈ ದರ್ಭೆಯ ಹಾಸಿಗೆಯಲ್ಲಿ ಹೇಗೆ ತಾನೇ ಕಷ್ಟದಿಂದ ಮಲಗಿಯಾಳು !

ಧಿಜ್ಮಾಂ ಜಾತೋಸ್ಮಿ ಕೈಕೇಯ್ಯಾಂ ಪಾಪರಾಶಿಸಮಾನತಃ । ಮನ್ನಿಮಿತ್ತಮಿದಂ ಕ್ಲೇಶಂ ರಾಮಸ್ಯ ಪರಮಾತ್ಮನಃ ॥ ೩೧ ॥
ಅಹೋತಿಸಫಲಂ ಜನ್ಮ ಲಕ್ಷ್ಮಣಸ್ಯ ಮಹಾತ್ಮನಃ । ರಾಮಮೇವ ಸದಾನ್ವೇತಿ ವನಸ್ಥಮಪಿ ಹೃಷ್ಟಧೀಃ ॥ ೩೨ ॥
ಅಹಂ ರಾಮಸ್ಯ ದಾಸಾ ಯೇ ತೇಷಾಂ ದಾಸಸ್ಯ ಕಿಂಕರಃ । ಯದಿ ಸ್ಯಾಂ ಸಫಲಂ ಜನ್ಮ ಮಮ ಭೂಯಾನ್ನ ಸಂಶಯಃ ॥ ೩೩ ॥
ಭ್ರಾತರ್ಜಾನಾಸಿ ಯದಿ ತತ್ಕಥಯಸ್ವ ಮಮಾಖಿಲಂ । ಯತ್ರ ತಿಷ್ಠತಿ ತತ್ರಾಹಂ ಗಚ್ಛಾಮ್ಯಾನೇತುಮಂಜಸಾ ॥ ೩೪ ॥

---

೩೧. ಅಯ್ಯೋ ! ಇಂತಹ ನನಗೆ ಧಿಕ್ಕಾರವಿರಲಿ. ಪಾಪದ ರಾಶಿಯಂತಿರುವ ಈ ಕೈಕೇಯಿಯ ಹೊಟ್ಟೆಯಲ್ಲಿ ಹುಟ್ಟಿದೆನಲ್ಲ ಪರಮಾತ್ಮನಾದ ರಾಮನಿಗೆ ನನ್ನ ದೆಸೆಯಿಂದ ಇಂತಹ ಕಷ್ಟವು ಪ್ರಾಪ್ತವಾಯಿತಲ್ಲ !

೩೨. ಲಕ್ಷ್ಮಣನ ಜನ್ಮವೇ ಸಫಲವಾದುದು. ಆ ಲಕ್ಷ್ಮಣನೇ ಮಹಾತ್ಮನು. ರಾಮನು ಕಾಡಿನಲ್ಲಿದ್ದರೂ ಸಂತೋಷದಿಂದ ಅವನನ್ನು ಯಾವಾಗಲೂ ಅನುಸರಿಸುತ್ತಿರುವನಲ್ಲ ?

೩೩. ರಾಮನ ದಾಸರು ಯಾರಿರುವರೋ ಆ ದಾಸರಿಗೆ ದಾಸರಾದವರಿಗೆ ನಾನು ಒಂದುವೇಳೆ ದಾಸನಾದರೆ ಆಗ ನನ್ನ ಜನ್ಮವು ಸಾರ್ಥಕವಾಗುವುದು. ಸಂಶಯವಿಲ್ಲ.

೩೪. ಎಲೈ ಸಹೋದರನಾದ ಗುಹನೆ ! ಆ ರಾಮನು ಇರುವ ಸ್ಥಳವು ನಿನಗೆ ತಿಳಿದಿದ್ದರೆ ಅದನ್ನು ಹೇಳು. ಅವನೆಲ್ಲಿರುವನೊ ಅಲ್ಲಿಗೆ ನಾನು ಅವನನ್ನು ಕರೆತರಲು ಹೋಗುತ್ತೇನೆ.

ಗುಹಸ್ತಂ ಶುದ್ಧಹೃದಯಂ ಜ್ಞಾತ್ವಾ ಸಸ್ನೇಹಮಬ್ರವೀತ್ । ದೇವ ತ್ವಮೇವ ಧನ್ಯೋಽಸಿ ಯಸ್ಯ ತೇ ಭಕ್ತಿರೀದೃಶೀ ॥ ೩೫ ॥

ರಾಮೇ ರಾಜೀವಪತ್ರಾಕ್ಷೇ ಸೀತಾಯಾಂ ಲಕ್ಷ್ಮಣೇ ತಥಾ । ಚಿತ್ರಕೂಟಾದ್ರಿನಿಕಟೇ ಮಂದಾಕಿನ್ಯಾವಿದೂರತಃ ॥ ೩೬ ॥

ಮುನೀನಾಮಾಶ್ರಮಪದೇ ರಾಮಸ್ತಿಷ್ಠತಿ ಸಾನುಜಃ । ಜಾನಕ್ಯಾ ಸಹಿತೋಽನಂದಾತ್ಸುಖಮಾಸ್ತೇ ಕಿಲ ಪ್ರಭುಃ ॥ ೩೭ ॥

ತತ್ರ ಗಚ್ಛಾಮಹೇ ಶೀಘ್ರಂ ಗಂಗಾಂ ತರ್ತುಮಿಹಾರ್ಹಸಿ । ಇತ್ಯುಕ್ತ್ವಾ ತ್ವರಿತಂ ಗತ್ವಾ ನಾವಃ ಪಂಚಶತಾನಿ ಹ ॥ ೩೮ ॥

ಸಮಾನಯತ್ಸ ಸೈನ್ಯಸ್ಯ ತರ್ತುಂ ಗಂಗಾಂ ಮಹಾನದೀಂ । ಸ್ವಯಮೇವಾನಿನಾಯೈಕಾಂ ರಾಜನಾವಂ ಗುಹಸ್ತದಾ ॥ ೩೯ ॥

---

೩೫. ಆಗ ಗುಹನಿಗೆ ಈ ಭರತನು ಶುದ್ಧವಾದ ಹೃದಯದಿಂದ ಬಂದಿರುವನೆಂದು ತಿಳಿಯಿತು. ಆಗ ಸ್ನೇಹದಿಂದ ಇಂತೆಂದನು. ಎಲೈ ದೇವನೆ? ಆ ಶ್ರೀರಾಮನಲ್ಲಿ ನಿನಗೆ ಈ ರೀತಿಯಾದ ಭಕ್ತಿ ಇರುವುದರಿಂದ ನೀನೇ ಧನ್ಯನು.

೩೬–೩೭. ಆ ಶ್ರೀರಾಮನಲ್ಲಿಯೂ ಸೀತೆಯಲ್ಲಿಯೂ ಲಕ್ಷ್ಮಣನಲ್ಲಿಯೂ ನಿನಗೆ ಒಂದೇ ವಿಧವಾದ ಭಕ್ತಿ ಇರುವುದಲ್ಲ! ಇದು ಬಹು ಸಂತೋಷ ಜನಕವಾದುದು. ಚಿತ್ರಕೂಟ ಪರ್ವತದಲ್ಲಿ ಗಂಗಾನದಿಯ ಹತ್ತಿರ ಮುನಿಗಳ ಆಶ್ರಮವಿರುವುದು. ಅಲ್ಲಿ ಆ ಶ್ರೀರಾಮನು ಆಶ್ರಮವನ್ನು ಮಾಡಿಕೊಂಡು ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ಇದ್ದಾನೆ. ಅಲ್ಲಿ ರಾಮನು ಸ್ವಲ್ಪವೂ ದುಃಖವಿಲ್ಲದೆ ಸೀತೆಯೊಡನೆ ಆನಂದದಿಂದ ಇರುವನು.

೩೮–೩೯. ಎನ್ನಲು ಭರತನು ಎಲೈ ಗುಹನೆ! ಅಲ್ಲಿಗೆ ಹೋಗೋಣ! ನೀನು ಬೇಗನೆ ನಮ್ಮೆಲ್ಲರನ್ನೂ ಈ ಗಂಗಾನದಿಯಿಂದ ಆಚೆಗೆ ದಾಟಿಸಿಕೊಡು. ಎಂದನು. ಭರತನು ಹೀಗೆ ಹೇಳಲು ಗುಹನು ಹೋಗಿ ಐದುನೂರು ದೋಣಿಗಳನ್ನು ಸಿದ್ಧಪಡಿಸಿ ಅವನ ಸೈನ್ಯವು ಆ ಗಂಗಾನದಿಯನ್ನು ದಾಟಲು ಅನುಕೂಲಪಡಿಸಿದನು. ಮತ್ತು ರಾಜಯೋಗ್ಯವಾದ ಒಂದು ನಾವೆಯನ್ನು ತಾನೇ ತಂದನು.

ಆರೋಪ್ಯ ಭರತಂ ತತ್ರ ಶತ್ರುಘ್ನಂ ರಾಮಮಾತರಂ । ವಸಿಷ್ಠಂ ಚ ತಥಾನ್ಯತ್ರ ಕೈಕೇಯೀ ಚಾನ್ಯಯೋಷಿತಃ ॥ ೪೦ ॥
ತೀರ್ತ್ವಾ ಗಂಗಾಂ ಯಯೌ ಶೀಘ್ರಂ ಭರದ್ವಾಜಾಶ್ರಮಂ ಪ್ರತಿ । ದೂರೇ ಸ್ಥಾಪ್ಯ ಮಹಾಸೈನ್ಯಂ ಭರತಃ ಸಾನುಜೋ ಯಯೌ
ಆಶ್ರಮೇ ಮುನಿಮಾಸೀನಂ ಜ್ವಲಂತಮಿವ ಪಾವಕಂ । ದೃಷ್ಟ್ವಾ ನನಾಮ ಭರತಃ ಸಾಷ್ಟಾಂಗಮತಿಭಕ್ತಿತಃ ॥ ೪೨ ॥

---

೪೦. ರಾಜಪುತ್ರರನ್ನು ಕೂರಿಸಿಕೊಂಡು ಒಂದು ದೋಣಿಯನ್ನು ಆ ಗುಹನು ತಾನೇ ನಡೆಸಿದನು. ಆ ದೋಣಿಯಲ್ಲಿ ಭರತ ಶತ್ರುಘ್ನರೂ ರಾಮನ ತಾಯಿಯಾದ ಕೌಸಲ್ಯೆಯೂ ವಸಿಷ್ಠನೂ ಒಂದು ಕಡೆಯಲ್ಲಿ ಕುಳಿತಿದ್ದರು. ಮತ್ತೊಂದು ಕಡೆಯಲ್ಲಿ ಕೈಕೇಯಿಯೂ ಮಿಕ್ಕ ಹೆಂಗಸರೂ ಕುಳಿತಿದ್ದರು.

೪೧. ಈ ರೀತಿಯಾಗಿ ಗುಹನು ಎಲ್ಲರನ್ನೂ ತಾನೂ ತನ್ನ ಕಡೆಯವರೂ ಆ ಗಂಗಾನದಿಯನ್ನು ದಾಟಿಸಿದರು. ಈ ಗಂಗೆಯನ್ನು ದಾಟಿ ಇವರೆಲ್ಲರೂ ಭರದ್ವಾಜಾಶ್ರಮಕ್ಕೆ ಹೋದರು. ಅಲ್ಲಿ ಭರತನು ಸೈನ್ಯವನ್ನೆಲ್ಲಾ ಆಶ್ರಮದ ಹೊರಗಡೆಯಲ್ಲಿಯೇ ನಿಲ್ಲಿಸಿ ಶತ್ರುಘ್ನನನ್ನು ಕರೆದುಕೊಂಡು ಆಶ್ರಮದೊಳಕ್ಕೆ ಹೋದನು.

೪೨. ಆ ಆಶ್ರಮದಲ್ಲಿ ಅಗ್ನಿಯಂತೆ ಪ್ರಕಾಶಮಾನನಾಗಿ ಕುಳಿತಿದ್ದ ಆ ಭರದ್ವಾಜ ಋಷಿಯನ್ನು ನೋಡಿ ಬಹು ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರಮಾಡಿದನು.

ಜ್ಞಾತ್ವಾ ದಾಶರಥಿಂ ಪ್ರೀತ್ಯಾ ಪೂಜಯಾಮಾಸ ಮೌನಿರಾಟ್ । ಪಪ್ರಚ್ಛ ಕುಶಲಂ ದೃಷ್ಟ್ವಾ ಜಟಾವಲ್ಕಲಧಾರಿಣಂ ॥ ೪೩ ॥

ರಾಜ್ಯಂ ಪ್ರಶಾಸತಸ್ತೇಽದ್ಯ ಕಿಮೇತದ್ವಲ್ಕಲಾದಿಕಂ । ಆಗತೋಽಸಿ ಕಿಮರ್ಥಂ ತ್ವಂ ವಿಪಿನಂ ಮುನಿಸೇವಿತಂ ॥ ೪೪ ॥

ಭರದ್ವಾಜವಚಃ ಶ್ರುತ್ವಾ ಭರತಃ ಸಾಶ್ರುಲೋಚನಃ । ಸರ್ವಂ ಜಾನಾಸಿ ಭಗವನ್ ಸರ್ವಭೂತಾಶಯಸ್ಥಿತಃ ॥ ೪೫ ॥

---

೪೩. ಆಗ ಆ ಭರದ್ವಾಜನು ಇವನು ದಶರಥನ ಮಗನಾದ ಭರತನು ಎಂದು ತಿಳಿದು ಪ್ರೀತಿಯಿಂದ ಕರೆದು ಕುಳ್ಳಿರಿಸಿ ಗೌರವಿಸಿ ಪೂಜಿಸಿದನು. ಅವನ ಕುಶಲವನ್ನೂ ಕೇಳಿದನು. ಅಂತೆಯೇ ಅವನು ನಾರುಡೆಯನ್ನುಟ್ಟು ಜಡೆಯನ್ನು ಧರಿಸಿರುವುದನ್ನೂ ನೋಡಿದನು.

೪೪. ಆಗ ಎಲೈ ಭರತನೆ! ರಾಜ್ಯಭಾರವನ್ನು ಮಾಡುತ್ತಿರುವ ನೀನೇಕೆ ಈ ನಾರುಡೆಯನ್ನುಟ್ಟಿದ್ದೀಯೆ? ಮುನಿಗಳಿರಲು ಯೋಗ್ಯವಾದ ಈ ಕಾಡಿಗೆ ನೀನೇಕೆ ಬಂದಿದ್ದೀಯೆ? ಎಂದನು.

೪೫. ಭರದ್ವಾಜನ ಈ ಮಾತನ್ನು ಕೇಳಿ ಭರತನು ಕಣ್ಣಿನಲ್ಲಿ ದುಃಖದಿಂದ ನೀರನ್ನು ಸುರಿಸುತ್ತ ಎಲೈ ಭಗವಂತನೆ! ನೀನು ಎಲ್ಲರ ಮನಸ್ಸಿನಲ್ಲಿಯೂ ಇರತಕ್ಕವನು. ಆದುದರಿಂದ ನೀನೇ ಎಲ್ಲವನ್ನೂ ತಿಳಿದಿದ್ದೀಯೆ.

ತಥಾಪಿ ಪೃಚ್ಛಸೇ ಕಿಂಚಿತ್ತದನುಗ್ರಹ ಏವ ಮೇ । ಕೈಕೇಯ್ಯಾ ಯತ್ಕೃತಂ ಕರ್ಮ ರಾಮರಾಜ್ಯನಿಘಾತನಂ ॥ ೪೬ ॥

ವನವಾಸಾದಿಕಂ ವಾಪಿ ನ ಹಿ ಜಾನಾಮಿ ಕಿಂಚನ । ಭವತ್ಪಾದಯುಗಂ ಮೇದ್ಯ ಪ್ರಮಾಣಂ ಮುನಿಸತ್ತಮ ॥ ೪೭ ॥

ಇತ್ಯುಕ್ತ್ವಾ ಪಾದಯುಗಳಂ ಮುನೇಃ ಸ್ಪೃಷ್ಟ್ವಾರ್ತಮಾನಸಃ । ಜ್ಞಾತುಮರ್ಹಸಿ ಮಾಂ ದೇವ ಶುದ್ಧೋ ವಾಶುದ್ಧ ಏವ ವಾ ॥

ಮಮ ರಾಜ್ಯೇನ ಕಿಂ ಸ್ವಾಮಿನ್ರಾಮೇ ತಿಷ್ಠತಿ ರಾಜನಿ । ಕಿಂಕರೋಽಹಂ ಮುನಿಶ್ರೇಷ್ಠ ರಾಮಚಂದ್ರಸ್ಯ ಶಾಶ್ವತಃ ॥ ೪೯ ॥

೪೬-೪೭ ಆದರೂ ನೀನು ಕೇಳುತ್ತಿದ್ದೀಯೆ! ಅದು ನನಗೆ ದೊಡ್ಡ ಅನುಗ್ರಹಮಾಡಿದಂತೆಯೇ ಆಗಿರುವುದು. ಕೈಕೇಯಿಯು ರಾಮನ ರಾಜ್ಯಾಭಿಷೇಕಕ್ಕೆ ವಿಘಾತಮಾಡಿದುದನ್ನಾಗಲಿ ಅವನನ್ನು ವನವಾಸಕ್ಕೆ ಹೋಗಬೇಕೆಂದು ಕೇಳಿದುದನ್ನಾಗಲೀ ಅವೊಂದನ್ನೂ ನಾನೂ ತಿಳಿಯೆ. ಈ ವಿಷಯದಲ್ಲಿ ತಮ್ಮ ಪಾದವೇ ನನಗೆ ಸಾಕ್ಷಿ. ಅವುಗಳ ಆಣೆಯಾಗಿಯೂ ನನಗೆ ಗೊತ್ತಿಲ್ಲ.

೪೮. ಹೀಗೆಂದು ಹೇಳಿ ಆತನ ಪಾದಗಳನ್ನು ಮುಟ್ಟಿ ದುಃಖಪಡುತ್ತಾ ಸ್ವಾಮಿ! ಇದರಿಂದ ನಾನು ಶುದ್ಧನಾಗಿರುವೆನೋ ಕಪಟಿಯಾಗಿರುವೆನೋ ಎಂಬುದನ್ನು ನೀನು ತಿಳಿಯಲು ಶಕ್ತನಾಗಿದ್ದೀಯೆ.

೪೯. ಎಲೈ ಮುನಿಯೆ! ರಾಮನು ರಾಜನಾಗಿರುವಾಗ ನನಗೆ ರಾಜ್ಯವೇತಕ್ಕೆ? ನಾನು ಆ ರಾಮಚಂದ್ರನಿಗೆ ಯಾವಾಗಲೂ ಆಳಾಗಿರತಕ್ಕವನು.

ಅತೋ ಗತ್ವಾ ಮುನಿಶ್ರೇಷ್ಠ ರಾಮಸ್ಯ ಚರಣಾಂತಿಕೇ । ಪತಿತ್ವಾ ರಾಜ್ಯಸಂಭಾರಾನ್ಸಮರ್ಪ್ಯೈತ್ರೈವ ರಾಘವಂ ॥ ೫೦ ॥

ಅಭಿಷೇಕ್ಷ್ಯೇ ವಸಿಷ್ಠಾದ್ಯೈಃ ಪೌರಜಾನಪದೈಃ ಸಹ । ನೇಷ್ಯೇಯೋಧ್ಯಾಂ ರಮಾನಾಥಂ ದಾಸಸ್ಸೇವೇತಿನೀಚವತ್ ॥ ೫೧ ॥

ಇತ್ಯುದೀರಿತಮಾಕರ್ಣ್ಯ ಭರತಸ್ಯ ವಚೋ ಮುನಿಃ । ಆಲಿಂಗ್ಯ ಮೂರ್ಧ್ನ್ಯವಘ್ರಾಯ ಪ್ರಶಶಂಸ ಸವಿಸ್ಮಯಃ ॥ ೫೨ ॥

ವತ್ಸ ಜ್ಞಾತಂ ಪುರೈವೈತದ್ಭವಿಷ್ಯಂ ಜ್ಞಾನಚಕ್ಷುಷಾ । ಮಾ ಶುಚಸ್ತ್ವಂ ಪರೋ ಭಕ್ತಃ ಶ್ರೀರಾಮೇ ಲಕ್ಷ್ಮಣಾದಪಿ ॥ ೫೩ ॥

---

೫೦. ಆದುದರಿಂದ ಆ ರಾಮುನ ಬಳಿಗೆ ಹೋಗಿ ಅವನ ಪಾದಗಳಿಗೆ ನಮಸ್ಕರಿಸಿ ಅವನಿಗೆ ಈ ರಾಜ್ಯದ ಸಕಲಸಂಪತ್ತುಗಳನ್ನು ಕೊಟ್ಟು ಅಲ್ಲಿಯೇ ಅವನಿಗೆ ರಾಜ್ಯಾಭಿಷೇಕವನ್ನು ಮಾಡುತ್ತೇನೆ.

೫೧. ವಸಿಷ್ಠನೂ ಪಟ್ಟಣದವರೂ ನನ್ನ ಜೊತೆಯಲ್ಲಿಯೇ ಬಂದಿದ್ದಾರೆ. ಅವರೊಡನೆ ಆ ರಾಮುನನ್ನು ಕರೆದುಕೊಂಡು ಬಂದು ನಾನು ಆ ಸ್ವಾಮಿಗೆ ಕೀಳುತರದ ಆಳಿನಂತೆ ಇರುತ್ತ ಅಯೋಧ್ಯೆಗೆ ಕರೆದುಕೊಂಡು ಹೋಗುತ್ತೇನೆ. ಎಂದನು.

೫೨. ಭರತನು ಹೀಗೆ ಹೇಳಿದುದನ್ನು ಆ ಭರದ್ವಾಜನು ಕೇಳಿ ಅವನನ್ನು ಆಲಿಂಗಿಸಿಕೊಂಡು ತಲೆಯನ್ನು ಸ್ನೇಹದಿಂದ ಮೂಸಿನೋಡಿ ಆಶ್ಚರ್ಯಪಡುತ್ತ ಹೊಗಳಿದನು.

೫೩. ಎಲೈ ವತ್ಸನೆ! ನಾನು ಜ್ಞಾನಚಕ್ಷುಸ್ಸಿನಿಂದ ಮೊದಲೇ ಇದೆಲ್ಲವನ್ನೂ ತಿಳಿದಿದ್ದೇನೆ. ನೀನು ದುಃಖಪಡಬೇಡ. ನೀನು ಲಕ್ಷ್ಮಣನಿಗಿಂತಲೂ ರಾಮುನಿಗೆ ಪರಮಭಕ್ತನು.

ಆತಿಥ್ಯಂ ಕರ್ತುಮಿಚ್ಛಾಮಿ ಸಸೈನ್ಯಸ್ಯ ತವಾನಘ । ಅದ್ಯ ಭುಕ್ತ್ವಾ ಸಸೈನ್ಯಸ್ತ್ವಂ ಶ್ವೋ ಗಂತಾ ರಾಮಸನ್ನಿಧಿಂ ॥ ೫೪ ॥

ಯಥಾಜ್ಞಾಪಯತಿ ಭವಾಂಸ್ತಥೇತಿ ಭರತೋಽಬ್ರವೀತ್ । ಭರದ್ವಾಜಸ್ತ್ವಪಃ ಸ್ಪೃಷ್ಟ್ವಾ ಮೌನೀ ಹೋಮಗೃಹೇ ಸ್ಥಿತಃ ॥ ೫೫ ॥

ದಧ್ಯೌ ಕಾಮದುಘಾಂ ಕಾಮವರ್ಷಿಣೀಂ ಕಾಮದೋ ಮುನಿಃ । ಅಸೃಜತ್ಕಾಮಧುಕ್ಸರ್ವಂ ಯಥಾಕಾಮಮಲೌಕಿಕಂ ॥ ೫೬ ॥

ಭರತಸ್ಯ ಸಸೈನ್ಯಸ್ಯ ಯಥೇಷ್ಟಂ ಚ ಮನೋರಥಂ । ಯಥಾ ವವರ್ಷ ಸಕಲಂ ತೃಪ್ತಾಸ್ತೇ ಸರ್ವಸೈನಿಕಾಃ ॥ ೫೭ ॥

---

೫೪. ಎಲೈ ಭರತನೇ ! ನಿನಗೂ ನಿನ್ನ ಸೈನ್ಯಕ್ಕೂ ಆತಿಥ್ಯವನ್ನು ಮಾಡಬೇಕೆಂದಿದ್ದೇನೆ. ನೀನೂ ನಿನ್ನ ಸೈನ್ಯದವರೂ ಈದಿನ ಇಲ್ಲಿದ್ದು ಭೋಜನವನ್ನು ಮಾಡಿಕೊಂಡು ನಾಳೆಯ ದಿನ ರಾಮನ ಬಳಿಗೆ ಹೋಗಿರಿ.

೫೫–೫೬. ಎಂದು ಮುನಿಯು ಹೇಳಲು ಭರತನು ತಾವು ಹೇಳಿದಂತೆಯೇ ಆಗಲಿ ! ಎಂದನು. ಅನಂತರ ಭರದ್ವಾಜನು ಆಚಮನವನ್ನು ಮಾಡಿ ಶುದ್ಧನಾಗಿ ಹೋಮಗೃಹಕ್ಕೆ ಹೋಗಿ ಮೌನವನ್ನು ಹೊಂದಿ ಬೇಕಾದ ಇಷ್ಟಾರ್ಥಗಳನ್ನು ಕೊಡುವ ಆ ಕಾಮಧೇನುವನ್ನು ತನಗೆ ಬೇಕಾದುದನ್ನು ಕೊಡಲು ಸ್ಮರಿಸಿದನು. ಅನಂತರ ಆ ಕಾಮಧೇನುವು ಈ ಲೋಕದಲ್ಲಿ ಬೆಳೆಯದ ಜನರು ಮಾಡಲಾಗದ ಪದಾರ್ಥಗಳನ್ನೂ ಕೂಡ ಸೃಷ್ಟಿಸಿತು.

೫೭. ಭರತನಿಗೂ ಅವನ ಸೈನಿಕರಿಗೂ ಇಷ್ಟವಾದುವೆಲ್ಲವೂ ಸಿಕ್ಕಿ ತೃಪ್ತಿಹೊಂದುವವರೆಗೂ ಸೃಷ್ಟಿಸಿ ಕೊಟ್ಟಿತು. ಆ ರೀತಿಯಾಗಿ ಮೇಲಿನಿಂದ ಎಲ್ಲವೂ ಸುರಿಯುತ್ತಿದ್ದಿತು. ಆದರಿಂದ ಸೈನಿಕರೆಲ್ಲರೂ ತೃಪ್ತರಾದರು.

ವಸಿಷ್ಠಂ ಪೂಜಯಿತ್ವಾಗ್ರೇ ಶಾಸ್ತ್ರದೃಷ್ಟೇನ ಕರ್ಮಣಾ । ಪಶ್ಚಾತ್ತಸ್ಸೈನ್ಯಂ ಭರತಂ ತರ್ಪಯಾಮಾಸ ಯೋಗಿರಾಟ್ ॥ ೫೮ ॥

ಉಷಿತ್ವಾ ದಿನಮೇಕಂ ತು ಆಶ್ರಮೇ ಸ್ವರ್ಗಸನ್ನಿಭೇ । ಅಭಿವಾದ್ಯ ಪುನಃ ಪ್ರಾತರ್ಭರದ್ವಾಜಂ ಸಹಾನುಜಃ ॥ ೫೯ ॥

ಭರತಸ್ತು ಕೃತಾನುಜ್ಞಃ ಪ್ರಯಯೌ ರಾಮಸನ್ನಿಧಿಂ । ಚಿತ್ರಕೂಟಮನುಪ್ರಾಪ್ಯ ದೂರೇ ಸಂಸ್ಥಾಪ್ಯ ಸೈನಿಕಾನ್ ॥ ೬೦ ॥

ರಾಮಸಂದರ್ಶನಾಕಾಂಕ್ಷೀ ಪ್ರಯಯೌ ಭರತಸ್ಸ್ವಯಂ । ಶತ್ರುಘ್ನೇನ ಸುಮಂತ್ರೇಣ ಗುಹೇನ ಚ ಪರಂತಪಃ ॥ ೬೧ ॥

---

೫೮. ಆ ಭರದ್ವಾಜನು ಶಾಸ್ತ್ರರೀತಿಯಿಂದ ವಸಿಷ್ಠನನ್ನು ಮೊದಲು ಪೂಜಿಸಿ ಆಮೇಲೆ ಆ ಭರತನ ಸೈನ್ಯವನ್ನೂ ತೃಪ್ತಿಪಡಿಸಿದನು.

೫೯. ಭರತನು ಆ ಸೈನ್ಯದೊಡನೆ ಸ್ವರ್ಗಕ್ಕೆ ಸಮಾನವಾದ ಆ ಆಶ್ರಮದಲ್ಲಿ ಒಂದುದಿನ ಇದ್ದನು. ಮರುದಿನ ಬೆಳಗಾಗುತ್ತಲೂ ಎದು ತಮ್ಮನೊಡನೆ ಹೋಗಿ ಆ ಭರದ್ವಾಜನಿಗೆ ನಮಸ್ಕರಿಸಿದನು.

೬೦–೬೧. ಅವನ ಅಪ್ಪಣೆಯನ್ನು ಹೊಂದಿ ಅನಂತರ ರಾಮನಿರುವಲ್ಲಿಗೆ ಹೊರಟನು. ಅಲ್ಲಿಂದ ಹೊರಟು ಚಿತ್ರಕೂಟಕ್ಕೆ ಹೋಗಿ ಸೈನ್ಯದವರನ್ನು ಹೊರಗೆ ದೂರದಲ್ಲಿಯೇ ನಿಲ್ಲಿಸಿ ರಾಮನನ್ನು ನೋಡಲು ಭರತನು ತಾನೇ ಹೊರಟನು. ಜೊತೆಯಲ್ಲಿ ಶತ್ರುಘ್ನನೂ ಸುಮಂತ್ರನೂ ಗುಹನೂ ಹೊರಟರು.

ತಪಸ್ವಿಮಂಡಲಂ ಸರ್ವಂ ವಿಚಿನ್ವಾನೋ ನ್ಯವರ್ತತ । ಅದೃಷ್ಟ್ವಾ ರಾಮಭವನಮಪೃಚ್ಛದೃಷಿಮಂಡಲಂ ॥ ೬೨ ॥

ಕುತ್ರಾಸ್ತೇ ಸೀತಯಾ ಸಾರ್ಧಂ ಲಕ್ಷ್ಮಣೇನ ರಘೂತ್ತಮಃ । ಊಚುರಗ್ರೇ ಗಿರೇಃ ಪಶ್ಚಾದ್ಗಂಗಾಯಾ ಉತ್ತರೇ ತಟೆ ॥ ೬೩ ॥

ವಿವಿಕ್ತಂ ರಾಮಸದನಂ ರಮ್ಯಂ ಕಾನನಮಂಡಿತಂ । ಸಫಲೈರಾಮ್ರಪನಸೈಃ ಕದಳೀಖಂಡಮಂಡಿತಂ ॥ ೬೪ ॥

ಚಂಪಕೈಃ ಕೋವಿದಾರೈಶ್ಚ ಪುನ್ನಾಗೈರ್ವಕುಳೈಸ್ತಥಾ । ಏವಂ ದರ್ಶಿತಮಾಲೋಕ್ಯ ಮುನಿಭಿರ್ಭರತೋಗ್ರತಃ ॥ ೬೫ ॥

---

೬೨. ಅವರೆಲ್ಲರೂ ಅಲ್ಲಿರುವ ಋಷಿಗಳ ಗುಂಪುಗಳನ್ನು ನೋಡುತ್ತ ಅಲ್ಲಲ್ಲಿ ಹುಡುಕುತ್ತ ಹೊರಟರು. ಅಲ್ಲಿ ಎಲ್ಲೂ ರಾಮನ ಮನೆಯನ್ನು ಕಾಣದೆ ಋಷಿಗಳನ್ನು ನೋಡಿ ಪ್ರಶ್ನಿಸುತ್ತಿದ್ದರು.

೬೩. ರಾಮನು ಲಕ್ಷ್ಮಣ ಸೀತೆಯರೊಡನೆ ಯಾವ ಜಾಗದಲ್ಲಿ ಆಶ್ರಮವನ್ನು ಮಾಡಿಕೊಂಡಿರುವನು ? ಎಂದು ಕೇಳುತ್ತಿದ್ದರು. ಆಗ ಅವರು ಇಲ್ಲಿಂದ ಮುಂದಕ್ಕೆ ಹೋಗಿರಿ. ಬೆಟ್ಟದ ಹಿಂದುಗಡೆಯಲ್ಲಿ ಗಂಗಾನದಿಯ ಉತ್ತರದಡದಲ್ಲಿ ಮನೋಹರವಾದ ಒಂದು ವನವಿರುವುದು.

೬೪. ಅಲ್ಲಿ ಮುಕ್ತಿಯಾರೂ ಇಲ್ಲ. ಅದೇ ಬೇರೆಯಾಗಿರುವುದು. ಅದೇ ರಾಮನ ಆಶ್ರಮವು. ಅಲ್ಲಿ ಮಾವು ಹಲಸು ಬಾಳೆ ಮುಂತಾದುವು ಬೇಕಾದಂತೆ ಹಣ್ಣುಗಳನ್ನು ಬಿಟ್ಟುಕೊಂಡಿರುವುವು

೬೫. ಸಂಪಿಗೆಯಮರವು ಬೇಕಾದಂತೆ ಹೂಬಿಟ್ಟುಕೊಂಡಿರುವುದು. ಕಂಚುವಾಳ ಸುರಹೊನ್ನೆ ಪಗಡೆ ಮುಂತಾದ ಮರಗಳು ಹೂವಿನಿಂದ ಕೂಡಿ ಯಾವಾಗಲೂ ಕಂಗೊಳಿಸುತ್ತಿರುವುವು.

ಹರ್ಷಾದ್ವ್ಯಯೌ ರಘುಶ್ರೇಷ್ಠ ಭವನಂ ಮಂತ್ರಿಣಾ ಸಹ ॥ ೬೬ ॥

ದದರ್ಶ ದೂರಾದತಿಭಾಸುರಂ ಶುಭಂ ರಾಮಸ್ಯ ಗೇಹಂ ಮುನಿಬೃಂದಸೇವಿತಂ ।

ವೃಕ್ಷಾಗ್ರಸಂಲಗ್ನಸುವಲ್ಕಲಾಜಿನಂ ರಾಮಾಭಿರಾಮಂ ಭರತಸ್ಸಹಾನುಜಃ ॥ ೬೭ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ

ಅಷ್ಟಮಸ್ಸರ್ಗ ಸಮಾಪ್ತಃ

---

೬೬. ಎಂದು ಹೇಳಿ ಋಷಿಗಳು ಎದುರುಗಡೆಯಲ್ಲಿ ತೋರಿಸುತ್ತ ಗುರುತನ್ನು ಹೇಳಿದರು. ಅನಂತರ ಭರತನು ತಮ್ಮನೊಡನೆಯೂ ಮಂತ್ರಿಗಳೊಡನೆಯೂ ಸಂತೋಷದಿಂದ ಅಲ್ಲಿಗೆ ಹೋದನು.

೬೭. ದೂರದಿಂದಲೇ ಆ ಶ್ರೀರಾಮನ ಆಶ್ರಮವನ್ನು ನೋಡಿದನು. ಅದು ಅತ್ಯಂತ ಮನೋಹರವಾಗಿದ್ದಿತು. ಅಲ್ಲಿ ಎರಡು ಮನೆಗಳಿದ್ದುವು. ಆನೇಕಜನ ಋಷಿಗಳು ಅಲ್ಲಿದ್ದರು. ಅಲ್ಲಿರುವ ಮರಗಳಿಗೆ ನಾರುಮಡಿಗಳನ್ನೂ ಕೃಷ್ಣಾಜಿನಗಳನ್ನೂ ನೇತುಹಾಕಿದ್ದರು ಇಂತಹ ಮನೋಹರವಾದ ಆಶ್ರಮಕ್ಕೆ ಭರತನು ಶತ್ರುಘ್ನನೊಡನೆ ಹೋದನು.

ಇಂತು ಶ್ರೀಮದಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ ಎಂಟನೆಯ ಸರ್ಗವು ಮುಗಿದುದು.

॥ ಶ್ರೀರಸ್ತು ॥

ಅಥ ಅಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ನವಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಅಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದ ಒಂಭತ್ತನೆಯ ಸರ್ಗದಲ್ಲಿ ಮಾಡಬೇಕಾದ ಸಂಕಲ್ಪ ನ್ಯಾಸ ಧ್ಯಾನ ಜಪಗಳ ಕ್ರಮವು.

ಪೂರ್ವೋಕ್ತವಿಧಿನಾ ಅಯೋಧ್ಯಾಕಾಂಡೇ ನವಮಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ ಇತಿಸಂಕಲ್ಪ್ಯ ॥

ಹಿಂದೆ ಹೇಳಿದ ವಿಧಿಯಂತೆ ಅಯೋಧ್ಯಾಕಾಂಡದ ಒಂಭತ್ತನೆಯ ಸರ್ಗದಲ್ಲಿ ನ್ಯಾಸ, ಧ್ಯಾನ, ಜಪಗಳನ್ನು ಮಾಡುತ್ತೇನೆ. ಎಂಬುದಾಗಿ ಸಂಕಲ್ಪವನ್ನು ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ರಾಂ ರೀಂ ಯಂ ಅಂಗುಷ್ಠಾಭ್ಯಾಂ ನಮಃ
ಓಂ ರಾಂ ರೀಂ ಯಂ ತರ್ಜನೀಭ್ಯಾಂ ನಮಃ
ಓಂ ರಾಂ ರೀಂ ಯಂ ಮಧ್ಯಮಾಭ್ಯಾಂ ನಮಃ
ಓಂ ರಾಂ ರೀಂ ಯಂ ಅನಾಮಿಕಾಭ್ಯಾಂ ನಮಃ
ಓಂ ರಾಂ ರೀಂ ಯಂ ಕನಿಷ್ಠಿಕಾಭ್ಯಾಂ ನಮಃ
ಓಂ ರಾಂ ರೀಂ ಯಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಷಡಂಗನ್ಯಾಸವು

ಓಂ ರಾಂ ರೀಂ ಯಂ ಹೃದಯಾಯ ನಮಃ
ಓಂ ರಾಂ ರೀಂ ಯಂ ಶಿರಸೇ ಸ್ವಾಹಾ
ಓಂ ರಾಂ ರೀಂ ಯಂ ಶಿಖಾಯೈ ವಷಟ್
ಓಂ ರಾಂ ರೀಂ ಯಂ ಕವಚಾಯ ಹುಂ
ಓಂ ರಾಂ ರೀಂ ಯಂ ನೇತ್ರತ್ರಯಾಯ ವೌಷಟ್
ಓಂ ರಾಂ ರೀಂ ಯಂ ಅಸ್ತ್ರಾಯ ಫಟ್

ಓಂ ರಾಂ ರೀಂಯಂ ಇತಿ ದಿಗ್ಬಂಧಃ

ಓಂ ರಾಂ ರೀಂ ಯಂ ಎಂದು ದಿಗ್ಬಂಧವು

॥ ಅಥ ಧ್ಯಾನಂ ॥

ಧ್ಯಾನವು

ಅಥ ಗತ್ವಾ ಶ್ರಮಪದಸಮೀಪಂ ಭರತೋ ಮುದಾ । ಸೀತಾರಾಮುಪದ್ವೈರ್ಯುಕ್ತಂ ಪವಿತ್ರಮತಿಶೋಭನಂ ॥

ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಪಾರಾಯಣಾಂತೇ ಪುನಃ ಷಡಂಗನ್ಯಾಸಂ ಕೃತ್ವಾ ಓಂ ರಾಂ ರೀಂ ಯಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್

ಪಾರಾಯಣವಾದಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ರಾಂ ರೀಂ ಯಂ ಇತಿ ದಿಗ್ವಿಮೋಕಃ ಎಂದೆನ್ನಬೇಕು.

ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

॥ ಇತಿ ಶ್ರೀ ಅಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ನವಮಸರ್ಗೇ ನ್ಯಾಸ ಧ್ಯಾನ ಜಪಕ್ರಮಃ ॥

ಇಂತು ಅಯೋಧ್ಯಾಕಾಂಡದ ಒಂಭತ್ತನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ ನವಮಸ್ಸರ್ಗಃ

॥ ಶ್ರೀ ಮಹಾದೇವ ಉವಾಚ ॥

ಅಥ ಗತ್ವಾಶ್ರಮಪದಸಮೀಪಂ ಭರತೋ ಮುದಾ । ಸೀತಾರಾಮಪದೈರ್ಯುಕ್ತಂ ಪವಿತ್ರಮತಿಶೋಭನಂ ॥ ೧ ॥

ಸ ತತ್ರ ವಜ್ರಾಂಕುಶವಾರಿಜಾಂಚಿತಧ್ವಜಾದಿಚಿಹ್ನಾನಿ ಪದಾನಿ ಸರ್ವತಃ ।
ದದರ್ಶ ರಾಮಸ್ಯ ಭುವೋತಿಮಂಗಳಾನ್ಯಚೇಷ್ಟಯತ್ಪಾದರಜಸ್ಸು ಸಾನುಜಃ ॥ ೨ ॥

ಅಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ ಒಂಭತ್ತನೆಯ ಸರ್ಗವು.

೧. ಮಹಾದೇವನು ಹೇಳಿದನು–ಭರತನು ರಾಮನ ಆಶ್ರಮದ ಹತ್ತಿರಕ್ಕೆ ಹೋಗಿ ನೋಡಿದನು. ಅದು ಪವಿತ್ರವಾಗಿದ್ದಿತು. ಅಲ್ಲಿ ಸೀತಾರಾಮರ ಹೆಜ್ಜೆಯ ಗುರುತುಗಳಿದ್ದುವು. ಇದನ್ನು ನೋಡಿ ಬಹುವಾಗಿ ಸಂತೋಷಪಟ್ಟನು.

೨. ಆ ಹೆಜ್ಜೆಗಳನ್ನು ನೋಡಲು ಅವು ವಜ್ರ ಅಂಕುಶ ಪದ್ಮ ಮುಂತಾದ ಚಿಹ್ನೆಗಳಿಂದ ಕೂಡಿ ಬಹು ರಮ್ಯವಾಗಿದ್ದುವು. ಈ ಪಾದಗಳು ಪ್ರಪಂಚಕ್ಕೇ ಮಂಗಳ ಪ್ರಾಯವಾಗಿದ್ದುವು. ಇಂತಹ ರಾಮನ ಪಾದದ ಧೂಳಿನಲ್ಲಿ ಭರತನು ತಮ್ಮನೊಡನೆ ಹೊರಳಿದನು.

ಅಹೋ ಸುಧನ್ಯೋಽಹಮಮೂನಿ ರಾಮಪಾದಾರವಿಂದಾಂಕಿತಭೂತಲಾನಿ ।
ಪಶ್ಯಾಮಿ ಯತ್ಪಾದರಜೋವಿಮೃಗ್ಯಂ ಬ್ರಹ್ಮಾದಿದೇವೈಃ ಶ್ರುತಿಭಿಶ್ಚ ನಿತ್ಯಂ ॥ ೩ ॥
ಇತ್ಯದ್ಭುತಪ್ರೇಮರಸಾಪ್ಲುತಾಶಯೋ ವಿಗಾಢಚೇತಾ ರಘುನಾಥಭಾವನೇ ।
ಆನಂದಜಾಶ್ರುಸ್ನಪಿತಸ್ತನಾಂತಶ್ಶನೈರವಾಪಾಶ್ರಮಸನ್ನಿಧಿಂ ಹರೇಃ ॥ ೪ ॥
ಸ ತತ್ರ ದೃಷ್ಟ್ವಾ ರಘುನಾಥಮಾಸ್ಥಿತಂ ದೂರ್ವಾದಳಶ್ಯಾಮಲಮಾಯತೇಕ್ಷಣಂ ।
ಜಟಾಕಿರೀಟಂ ನವವಲ್ಕಲಾಂಬರಂ ಪ್ರಸನ್ನವಕ್ತ್ರಂ ತರುಣಾರುಣದ್ಯುತಿಂ ॥ ೫ ॥

---

೩. ಓಹೋ ! ನಾನು ಧನ್ಯನು. ರಾಮನ ಪಾದಗಳಿಂದ ಗುರುತುಮಾಡಲ್ಪಟ್ಟ ಈ ಭೂಮಿಗಳನ್ನು ನೋಡುತ್ತಿರುವೆನಲ್ಲ ! ಇಂತಹ ಯಾವ ಸ್ವಾಮಿಯ ಪಾದದ ಧೂಳನ್ನು ಬ್ರಹ್ಮಾದಿದೇವತೆಗಳೂ ಶ್ರುತಿಗಳೂ ಕೂಡ ತಿಳಿಯಲು ಆಗುವುದಿಲ್ಲವೋ ಅಂತಹದನ್ನು ನಾನು ನೋಡುತ್ತಿದ್ದೇನೆ. ಆದ್ದರಿಂದ ನಾನೇ ಧನ್ಯನು.

೪. ರಘುನಾಥನು ಈ ರೀತಿಯಾದ ಉತ್ತಮನೆಂದು ಭಾವಿಸಿಕೊಳ್ಳುತ್ತಾ ಬಹುವಾಗಿ ಅವನ ವಿಷಯದಲ್ಲಿ ಗೌರವವನ್ನೂ ಪ್ರೀತಿಯನ್ನೂ ಹೊಂದಿದನು. ಮತ್ತು ಆನಂದದಿಂದ ಕಣ್ಣೀರನ್ನು ಸುರಿಸುತ್ತಿದ್ದನು. ಎದೆಯಮೇಲೆ ಆ ಕಣ್ಣೀರು ಸುರಿದುಬೀಳುತ್ತಿರಲು ನಿಧಾನವಾಗಿ ಆ ರಾಮಾಶ್ರಮದೊಳಕ್ಕೆ ಹೋದನು.

೫. ಆ ಆಶ್ರಮದೊಳಗೆ ಕುಳಿತಿದ್ದ ರಾಮನನ್ನು ನೋಡಿದನು. ಅವನು ಎಳೆಯದಾದ ಗರಿಕೆಯ ದಳದಂತೆ ಬಣ್ಣವನ್ನು ಹೊಂದಿದ್ದನು. ಕಣ್ಣುಗಳು ಉದ್ದವಾಗಿದ್ದುವು. ಜಟೆಗಳನ್ನು ಕಿರೀಟದಂತೆ ಹಾಕಿಕೊಂಡಿದ್ದನು. ಹೊಸದಾಗಿರುವ ನಾರುಮಡಿಯನ್ನು ಉಟ್ಟಿದ್ದನು. ಮುಖವು ಸಂತೋಷದಿಂದ ಕೂಡಿದ್ದಿತು. ಆಗ ಹುಟ್ಟುತ್ತಿರುವ ಬಾಲಸೂರ್ಯನಂತೆ ಕಾಂತಿಯುಳ್ಳವನಾಗಿದ್ದನು.

ವಿಲೋಕಯಂತಂ ಜನಕಾತ್ಮಜಾಂ ಶುಭಾಂ ಸೌಮಿತ್ರಿಣಾ ಸೇವಿತಪಾದಪಂಕಜಂ ।
ತದಾಭಿದುದ್ರಾವ ರಘೂತ್ತಮಂ ಶುಚಾ ಹರ್ಷಾಚ್ಚ ತತ್ಪಾದಯುಗಂ ತ್ವರಾಗ್ರಹೀತ್ ॥ ೬ ॥

ರಾಮಸ್ತಮಾಕೃಷ್ಯ ಸುದೀರ್ಘಬಾಹುದೋರ್ಭ್ಯಾಂ ಪರಿಷ್ವಜ್ಯ ಸಿಷಿಂಚ ನೇತ್ರಜೈಃ ।
ಜಲೈರಥಾಂಕೋಪರಿ ಸನ್ನ್ಯವೇಶಯತ್ಪುನಃ ಪುನಸ್ಸಂ ಪರಿಷಸ್ವಜೇ ವಿಭುಃ ॥ ೭ ॥

ಅಥ ತಾ ಮಾತರಸ್ಸರ್ವಾಸ್ಸಮಾಜಗ್ಮುಸ್ತ್ವರಾನ್ವಿತಾಃ । ರಾಘವಂ ದ್ರಷ್ಟುಕಾಮಾಸ್ತಾಸ್ತೃಷಾರ್ತಾ ಗೌರ್ಯಥಾ ಜಲಂ ॥ ೮ ॥

---

೬. ಮಂಗಳಕರಳಾದ ಜನಕನಂದಿನಿಯನ್ನು ನೋಡುತ್ತಿದ್ದನು. ಲಕ್ಷ್ಮಣನು ಆ ರಾಮನ ಪಾದಪದ್ಮಗಳನ್ನು ಸೇವಿಸುತ್ತಿದ್ದನು. ಅವನನ್ನು ನೋಡಿದೊಡನೆಯೇ ಭರತನು ಆ ರಾಮನ ಬಳಿಗೆ ದುಃಖ ಸಂತೋಷಗಳೆರಡನ್ನೂ ಹೊಂದಿ ಓಡಿಹೋದನು. ಮತ್ತು ಅವನ ಪಾದಗಳಿಗೆ ನಮಸ್ಕರಿಸಿ ಅವನ್ನು ಅತಿ ಜಾಗ್ರತೆಯಾಗಿ ಹಿಡಿದುಕೊಂಡನು.

೭. ಆ ರಾಮನು ತನ್ನ ಉದ್ದವಾದ ತೋಳುಗಳಿಂದ ಆ ಭರತನನ್ನು ಎಳೆದುಕೊಂಡು ಆಲಿಂಗಿಸಿಕೊಂಡನು. ಅಲ್ಲದೆ ಕಣ್ಣೀರಿನಿಂದ ಅವನನ್ನು ಸ್ನಾನಮಾಡಿಸಿದನು. ಮತ್ತು ತನ್ನ ತೊಡೆಯಮೇಲೆ ಕೂರಿಸಿಕೊಂಡು ಮತ್ತೆ ಮತ್ತೆ ಆಲಿಂಗಿಸಿಕೊಳ್ಳುತ್ತಿದ್ದನು.

೮. ಆಮೇಲೆ ಆ ರಾಮನ ತಾಯಿಯರೆಲ್ಲಾ ಅವಸರಪಟ್ಟುಕೊಂಡು ಬಾಯಾರಿದ ಹಸುವು ನೀರಿನ ಬಳಿಗೆ ಹೇಗೆ ಆತುರದಿಂದ ಓಡಿಬರುವುದೋ ಆ ರೀತಿಯಾಗಿ ಆ ರಾಮನನ್ನು ನೋಡಲು ಓಡಿಬಂದರು.

ರಾಮಸ್ಸ್ವಮಾತರಂ ವೀಕ್ಷ್ಯದ್ರುತಂ ಉತ್ಥಾಯ ಪಾದಯೋಃ ವವಂದೇ ಸಾಶ್ರು ಸಾ ಪುತ್ರಮಾಲಿಂಗ್ಯಾತೀವದುಃಖಿತಾ ‖ ೯ ‖
ಇತರಾಶ್ಚ ತಥಾ ನತ್ವಾ ಜನನೀ ರಘುನಂದನಃ । ತತಸ್ಸಮಾಗತಂ ದೃಷ್ಟ್ವಾ ವಸಿಷ್ಠಂ ಮುನಿಪುಂಗವಂ ‖ ೧೦ ‖
ಸಾಷ್ಟಾಂಗಂ ಪ್ರಣಿಪತ್ಯಾಹ ಧನ್ಯೋಽಸ್ಮೀತಿ ಪುನಃ ಪುನಃ । ಯಥಾರ್ಹಮುಪವೇಶ್ಯಾಹ ಸರ್ವಾನೇನ ರಘೂದ್ವಹಃ ‖ ೧೧ ‖
ಪಿತಾ ಮೇ ಕುಶಲೀ ಕಿಂ ವಾ ಮಾಂ ಕಿಮಾಹಾತಿದುಃಖಿತಃ । ವಸಿಷ್ಠಸ್ತಮುವಾಚೇದಂ ಪಿತಾ ತೇ ರಘುನಂದನ ‖ ೧೨ ‖
ತ್ವದ್ವಿಯೋಗಾಭಿತಪ್ತಾತ್ಮಾ ತ್ವಾಮೇವ ಪರಿಚಿಂತಯನ್ । ರಾಮ ರಾಮೇತಿ ಸೀತೇತಿ ಲಕ್ಷ್ಮಣೇತಿ ಮಮಾರ ಹ ‖ ೧೩ ‖

---

೯. ತಾಯಿಯು ಬಂದುದನ್ನು ನೋಡಿ ರಾಮನು ಬೇಗನೆ ಎದ್ದು ಆಕೆಯ ಪಾದಗಳಿಗೆ ನಮಸ್ಕರಿಸಿದನು. ದುಃಖದಿಂದ ಕಣ್ಣೀರನ್ನು ತುಂಬಿಕೊಂಡಿದ್ದ ಆಕೆಯು ಮಗನನ್ನು ಆಲಿಂಗಿಸಿಕೊಂಡು ಬಹುವಾಗಿ ಅತ್ತಳು.

೧೦. ಆ ರಾಮನು ಉಳಿದ ತಾಯಿಯರಿಗೂ ಕ್ರಮವಾಗಿ ನಮಸ್ಕರಿಸಿದನು. ಅನಂತರ ವಸಿಷ್ಠನು ಬರಲು ಅವನನ್ನು ನೋಡಿ ಅವನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಧನ್ಯನಾದೆನು ಧನ್ಯನಾದೆನು ಎಂದು ಬಾರಿ ಬಾರಿಗೂ ಹೇಳುತ್ತಿದ್ದನು.

೧೧. ಬಂದ ಅವರನ್ನೆಲ್ಲಾ ಅವರವರ ಯೋಗ್ಯತೆಗೆ ತಕ್ಕಂತೆ ಕೂರಿಸಿ ಆ ಶ್ರೀರಾಮನು ನನ್ನ ತಂದೆಯು ಕುಶಲದಿಂದಿರುವನೆ? ದುಃಖಗೊಂಡಿರುವ ಅವನು ನನ್ನನ್ನು ಕುರಿತು ಏನನ್ನು ಹೇಳಿದನು ಎಂದನು,

೧೨-೧೩. ಆಗ ವಸಿಷ್ಠನು ರಾಮನನ್ನು ಕುರಿತು ಎಲೈ ರಘುನಂದನನೇ? ನೀನು ಬಂದಮೇಲೆ ನಿನ್ನ ಅಗಲಿಕೆಯಿಂದಲೇ ದುಃಖಪಡುತ್ತ ನಿನ್ನನ್ನೇ ಚಿಂತಿಸುತ್ತ ರಾಮ ರಾಮ ಸೀತೆ ಸೀತೆ ಲಕ್ಷ್ಮಣ ಲಕ್ಷ್ಮಣ ಎಂದೆನ್ನುತ್ತಲೇ ಸತ್ತುಹೋದನು.

ಶ್ರುತ್ವಾ ತತ್ಕರ್ಣಶೂಲಾಭಂ ಗುರೋರ್ವಚನಮಂಜಸಾ । ಹಾ ಹತೋಽಸ್ಮೀತಿ ಪತಿತೋ ರುದನ್ ರಾಮಸ್ಸಲಕ್ಷ್ಮಣಃ ॥ ೧೪ ॥

ತತೋಽಸುರುರುದುಸ್ಸರ್ವಾ ಮಾತರಶ್ಚ ತಥಾಪರೇ । ಹಾ ತಾತ ಮಾಂ ಪರಿತ್ಯಜ್ಯ ಕ್ವ ಗತೋಽಸಿ ಘೃಣಾಕರ ॥ ೧೫ ॥

ಅನಾಥೋಽಸ್ಮಿ ಮಹಾಬಾಹೋ ಮಾಂ ಕೋ ವಾ ಲಾಲಯೇದಿತಃ । ಸೀತಾ ಚ ಲಕ್ಷ್ಮಣಶ್ಚೈವ ವಿಲೇಪತುರತೋಽಭೃಶಂ ॥ ೧೬ ॥

ವಸಿಷ್ಠಶ್ಶಾಂತವಚನೈಶ್ಶಮಯಾಮಾಸ ತಾಂ ಶುಚಂ । ತತೋ ಮಂದಾಕಿನೀಂ ಗತ್ವಾ ಸ್ನಾತ್ವಾ ತೇ ವೀತಕಲ್ಮಷಾಃ ॥ ೧೭ ॥

---

೧೪. ಕಿವಿಗಳಿಗೆ ಶೂಲಪ್ರಾಯವಾದ ಗುರುವು ಹೇಳಿದ ಈ ಮಾತನ್ನು ಕೇಳಿದನು. ಒಡನೆಯೇ ಅಯ್ಯೋ ಕೆಟ್ಟನು: ಎಂದೆನ್ನುತ್ತ ನೆಲದಮೇಲೆ ಬಿದ್ದು ಬಿಟ್ಟನು. ಲಕ್ಷ್ಮಣನೂ ಕೂಡ ಅಂತೆಯೇ ದುಃಖದಿಂದ ಬಿದ್ದು ಬಿಟ್ಟನು.

೧೫. ಇದನ್ನು ನೋಡಿದ ಆ ರಾಮನ ತಾಯಿಯರೆಲ್ಲರೂ ಅಳಲು ಮೊದಲಿಟ್ಟರು. ಇತರರೂ ಕೂಡ ಬಹು ದುಃಖಿತರಾದರು. ಅಯ್ಯೋ ತಾತನೆ! ಕೃಪಾಶಾಲಿಯೇ! ನನ್ನನ್ನು ಬಿಟ್ಟು ನೀನೆಲ್ಲಿಗೆ ಹೋದೆ ?

೧೬. ಎಲೈ ಮಹಾಬಾಹುವೆ? ನಾನು ಅನಾಥನಾದೆನು ಇನ್ನುಮೇಲೆ ನನ್ನನ್ನು ಲಾಲಿಸುವರು ಯಾರು ಇರುವರು? ಎಂದು ರಾಮನು ಅತ್ತನು. ಸೀತಿಯೂ ಲಕ್ಷ್ಮಣನೂ ಕೂಡ ಬಹುವಾಗಿ ಅತ್ತರು.

೧೭. ಅನಂತರ ವಸಿಷ್ಠನು ಸಮಾಧಾನಕರವಾದ ಮಾತುಗಳನ್ನಾಡಿ ಆ ದುಃಖವನ್ನು ಕಡಿಮೆ ಮಾಡಿದನು. ಅನಂತರ ಅವರು ಮೂವರೂ ಗಂಗಾನದಿಗೆ ಹೋಗಿ ಸ್ನಾನಮಾಡಿ ಶುದ್ಧರಾದರು.

ರಾಜ್ಞೀ ದದುರ್ಜಲಂ ತತ್ರ ಸರ್ವೇ ತೇ ಜಲಕಾಂಕ್ಷಿಣೇ । ಪಿಂಡಾನ್ನಿರ್ವಾಪಯಾಮಾಸ ರಾಮೋ ಲಕ್ಷ್ಮಣಸಂಯುತಃ ॥ ೧೮ ॥
ಇಂಗುದೀಫಲಪಿಣ್ಯಾಕರಚಿತಾನ್ಮಧುಸಂಪ್ಲುತಾನ್ । ವಯಂ ಯದನ್ನಾಃ ಪಿತರಸ್ತದನ್ನಾಃ ಸ್ಮೃತಿಚೋದಿತಾಃ ॥ ೧೯ ॥
ಇತಿ ದುಃಖಾಶ್ರುಪೂರ್ಣಾಕ್ಷಃ ಪುನಸ್ಸ್ನಾತ್ವಾ ಗೃಹಂ ಯಯೌ । ಸರ್ವೇ ರುದಿತ್ವಾ ಸುಚಿರಂ ಸ್ನಾತ್ವಾ ಜಗ್ಮುಸ್ತದಾಶ್ರಮಂ ॥ ೨೦ ॥
ತಸ್ಮಿಂಸ್ತು ದಿವಸೇ ಸರ್ವೇ ಉಪವಾಸಂ ಪ್ರಚಕ್ರಿರೇ । ತತಃ ಪರೇದ್ಯುರ್ವಿಮಲೇ ಸ್ನಾತ್ವಾ ಮಂದಾಕಿನೀಜಲೇ ॥ ೨೧ ॥

---

೧೮. ಬಾಯಾರಿರುವ ಆ ದಶರಥನಿಗೆ ಅವರೆಲ್ಲರೂ ತರ್ಪಣವನ್ನು ಕೊಟ್ಟರು. ರಾಮನೂ ಲಕ್ಷ್ಮಣನೂ ಆ ರಾಜನಿಗೆ ಪಿಂಡಗಳನ್ನು ಹಾಕಿದರು.

೧೯. ಆ ಪಿಂಡಗಳನ್ನು ಇಂಗಳದ ಕಾಯಿನಲ್ಲಿ ಮಾಡಿ ಅದಕ್ಕೆ ಜೇನನ್ನು ಸವರಿದ್ದರು. ಯಾರು ಯಾವ ಅನ್ನವನ್ನು ತಿನ್ನುತ್ತಾರೆಯೋ ಅದರಲ್ಲಿ ಮಾಡಿದ ಪಿಂಡವನ್ನೇ ಪಿತೃಗಳಿಗೆ ಕೊಡಬೇಕು. ಎಂದು ಸ್ಮೃತಿಯಲ್ಲಿ ಹೇಳಿರುವುದರಿಂದ ರಾಮನು ಕಾಡಿನಲ್ಲಿ ತಾನು ಅವುಗಳನ್ನು ತಿನ್ನುತ್ತಿದ್ದುದರಿಂದ ಅದರಲ್ಲಿ ಮಾಡಿದ ಪಿಂಡವನ್ನೇ ಕೊಟ್ಟನು.

೨೦. ಎಲೈ ದೊರೆಯೆ ! ನಾನು ಇಂತಹದನ್ನು ತಿಂದುಕೊಂಡಿರುವುದರಿಂದ ಇದರಿಂದ ಮಾಡಿದ ಪಿಂಡವನ್ನೇ ಕೊಟ್ಟದ್ದೇನೆ. ಎಂದು ದುಃಖದಿಂದ ಕಣ್ಣಿನಲ್ಲಿ ನೀರನ್ನು ತುಂಬಿಕೊಂಡವನಾಗಿ ಮತ್ತೆ ಸ್ನಾನಮಾಡಿ ಮನೆಗೆ ಹೋದನು. ಇದನ್ನು ನೋಡಿ ಎಲ್ಲರೂ ಬಹಳ ಹೊತ್ತು ದುಃಖಪಟ್ಟು ಆನಂತರ ಸ್ನಾನಮಾಡಿ ಆ ರಾಮಾಶ್ರಮಕ್ಕೆ ಹೋದರು.

೨೧–೨೨. ಆ ದಿವಸ ಎಲ್ಲರೂ ಉಪವಾಸವಿದ್ದರು. ಮಾರನೆಯದಿನ ಅವರೆಲ್ಲರೂ ಆ ಗಂಗಾನದಿಯಲ್ಲಿ ಸ್ನಾನಮಾಡಿದರು. ಅನಂತರ

ಉಪವಿಷ್ಟಂ ಸಮಾಗಮ್ಯ ಭರತೋ ರಾಮಮಬ್ರವೀತ್ । ರಾಮ ರಾಮ ಮಹಾಭಾಗ ಸ್ವಾತ್ಮಾನಮಭಿಷೇಚಯ ॥ ೨೨ ॥

ರಾಜ್ಯಂ ಪಾಲಯ ಪಿತ್ರ್ಯಂ ತೇ ಜ್ಯೇಷ್ಠಸ್ತ್ವಂ ಮೇ ಪಿತಾ ತಥಾ । ಕ್ಷತ್ರಿಯಾಣಾಮಯಂ ಧರ್ಮೋ ಯದ್ರಾಜ್ಯಪರಿಪಾಲನಂ ॥

ಇಷ್ಟ್ವಾ ಯಜ್ಞೈರ್ಬಹುವಿಧೈಃ ಪುತ್ರಾನುತ್ಪಾದ್ಯ ತಂತವೇ । ರಾಜ್ಯೇ ಪುತ್ರಂ ಸಮಾರೋಪ್ಯ ಗಮಿಷ್ಯಸಿ ತತೋ ವನಂ ॥ ೨೪ ॥

ಇದಾನೀಂ ವನವಾಸಸ್ಯ ಕಾಲೋ ನೈವ ಪ್ರಸೀದ ಮೇ । ಮಾತುರ್ಮೇ ದುಷ್ಕೃತಂ ಕಿಂಚಿತ್ಸ್ಮರ್ತುಂ ನಾರ್ಹಸಿ ಪಾಹಿ ನಃ ॥ ೨೫ ॥

ಆಶ್ರಮದಲ್ಲಿ ಕುಳಿತಿದ್ದ ರಾಮನ ಬಳಿಗೆ ಭರತನು ಹೋಗಿ ಇಂತೆಂದನು. ಮಹಾ ಮಹಿಮನಾದ ಎಲೈ ರಾಮನೆ? ನೀನು ರಾಜ್ಯದಲ್ಲಿ ಅಭಿಷೇಕವನ್ನು ಮಾಡಿಸಿಕೋ.

೨೩. ನೀನೇ ನಿನ್ನ ತಂದೆಯ ರಾಜ್ಯವನ್ನು ಕಾಪಾಡು. ನೀನೇ ನಮಗೆಲ್ಲಾ ಜ್ಯೇಷ್ಠನು. ಅಂತೆಯೇ ತಂದೆಗೆ ಸಮಾನನು. ಜ್ಯೇಷ್ಠನಾದವನು ರಾಜ್ಯಪರಿಪಾಲನೆ ಮಾಡತಕ್ಕದ್ದು ಕ್ಷತ್ರಿಯರಿಗೆ ಧರ್ಮವು.

೨೪. ಕ್ಷತ್ರಿಯನಾದವನು ರಾಜ್ಯವನ್ನು ಪಾಲಿಸಬೇಕು. ಅನೇಕ ವಿಧವಾದ ಯಜ್ಞಗಳನ್ನು ಮಾಡಬೇಕು. ಕುಲವು ನಿಲ್ಲುವುದ ಕೋಸ್ಕರವಾಗಿ ಮಕ್ಕಳನ್ನು ಪಡೆಯಬೇಕು. ಆ ಮಗನನ್ನು ರಾಜ್ಯದಲ್ಲಿ ನಿಲ್ಲಿಸಿ ಅನಂತರ ಕಾಡಿಗೆ ಹೋಗಬೇಕು. ಇದು ಕ್ಷತ್ರಿಯರಿಗೆ ಧರ್ಮವು. ನೀನೂ ಹಾಗೆ ಮಾಡಿ ಅನಂತರ ಕಾಡಿಗೆ ಹೋಗುತ್ತೀಯಂತೆ.

೨೫. ಈಗ ನೀನು ವನದಲ್ಲಿ ವಾಸವನ್ನು ಮಾಡಲು ಕಾಲವಲ್ಲ. ನನ್ನ ಮೇಲೆ ದಯೆಯಿಡು ನನ್ನ ತಾಯಿಯು ಮಾಡಿದ ಕೆಡುಕನ್ನು ಮನಸ್ಸಿಗೆ ತಂದುಕೊಳ್ಳಬೇಡ. ನಮ್ಮನ್ನು ಕಾಪಾಡು.

ಇತ್ಯುಕ್ತ್ವಾ ಚರಣೌ ಭ್ರಾತುಃ ಶಿರಸ್ಯಾಧಾಯ ಭಕ್ತಿತಃ | ರಾಮಸ್ಯ ಪುರತಃ ಸಾಕ್ಷಾದ್ದಂಡವತ್ಪತಿತೋ ಭುವಿ ॥ ೧೬ ॥

ಉತ್ಥಾಪ್ಯ ರಾಘವಃ ಶೀಘ್ರಮಾರೋಪ್ಯಾಂಕೇಽತಿಭಕ್ತಿತಃ । ಉವಾಚ ಭರತಂ ರಾಮಃ ಸ್ನೇಹಾರ್ದ್ರನಯನಃ ಶನೈಃ ॥ ೧೭ ॥

ಶೃಣು ವತ್ಸ ಪ್ರವಕ್ಷ್ಯಾಮಿ ಯತ್ತ್ವಯೋಕ್ತಂ ತಥೈವ ತತ್ । ಕಿಂ ತು ಮಾಮಬ್ರವೀತ್ತಾತೋ ನವ ವರ್ಷಾಣಿ ಪಂಚ ಚ ॥ ೧೮ ॥

ಉಷಿತ್ವಾ ದಂಡಕಾರಣ್ಯೇ ಪುರಂ ಪಶ್ಚಾತ್ಸಮಾವಿಶ | ಇದಾನೀಂ ಭರತಾಯೇದಂ ರಾಜ್ಯಂ ದತ್ತಂ ಮಯಾಖಿಲಂ ॥ ೧೯ ॥

---

೧೬. ಹೀಗೆಂದು ಹೇಳಿ ಭರತನು ಅಣ್ಣನಾದ ರಾಮನ ಪಾದಗಳಮೇಲೆ ತಲೆಯನ್ನು ಇಟ್ಟು ಭೂಮಿಯಮೇಲೆ ಉದ್ದಕ್ಕೂ ನಮಸ್ಕರಿಸಿದನು.

೧೭. ಅನಂತರ ರಾಮನು ಬೇಗನೆ ಅವನನ್ನು ಮೇಲಕ್ಕೆ ಎಬ್ಬಿಸಿ ತೊಡೆಯಮೇಲೆ ಕೂರಿಸಿಕೊಂಡು ಸ್ನೇಹದಿಂದ ಕಣ್ಣಿನಲ್ಲಿ ನೀರನು ಸುರಿಸುತ್ತ ಭರತನನ್ನು ಕುರಿತು ನಿಧಾನವಾಗಿ ಇಂತೆಂದನು.

೧೮–೧೯. ಎಲೈ ವತ್ಸನೆ! ನೀನು ಹೇಳಿದುದು ಸರಿ. ಆದರೆ ನಾನು ಹೇಳುವುದನ್ನು ಕೇಳು. ನನ್ನ ತಂದೆಯು ಎಲೈ ರಾಮನೆ? ನೀನು ಹದಿನಾಲ್ಕು ವರ್ಷಗಳವರೆಗೆ ದಂಡಕಾರಣ್ಯದಲ್ಲಿ ವಾಸಮಾಡಿಕೊಂಡಿದ್ದು ಅನಂತರ ಪಟ್ಟಣವನ್ನು ಪ್ರವೇಶಿಸಬೇಕು. ಈಗ ನಾನು ನನ್ನ ರಾಜ್ಯವನ್ನೆಲ್ಲಾ ಭರತನಿಗೆ ಕೊಟ್ಟಿದ್ದೇನೆ ಎಂದನು.

ತತಃ ಪಿತ್ರೈವ ಸುವ್ಯಕ್ತಂ ರಾಜ್ಯಂ ದತ್ತಂ ತವೈವ ಹಿ | ದಂಡಕಾರಣ್ಯರಾಜ್ಯಂ ಮೇ ಪಿತ್ರಾ ದತ್ತಂ ತಥೈವ ಚ ॥ ೩೦ ॥

ಅತಃ ಪಿತುರ್ವಚಃ ಕಾರ್ಯಮಾವಾಭ್ಯಾಮತಿಯತ್ನತಃ । ಪಿತುರ್ವಚನಮುಲ್ಲಂಘ್ಯ ಸ್ವತಂತ್ರೋ ಯಸ್ತು ವರ್ತತೇ ॥ ೩೧ ॥

ಸ ಜೀವನ್ನೇವ ಮೃತಕೋ ದೇಹಾಂತೇ ನಿರಯಂ ವ್ರಜೇತ್ । ತಸ್ಮಾದ್ರಾಜ್ಯಂ ಪ್ರಶಾಧಿ ತ್ವಂ ವಯಂ ದಂಡಕಪಾಲಕಾಃ ॥ ೩೨ ॥

ಭರತಸ್ತ್ವಬ್ರವೀದ್ರಾಮಂ ಕಾಮುಕೋ ಮೂಢಧೀಃ ಪಿತಾ | ಸ್ತ್ರೀಜಿತೋ ಭ್ರಾಂತಹೃದಯ ಉನ್ಮತ್ತೋ ಯದಿ ವಕ್ಷ್ಯತಿ ।
ತತ್ಸತ್ಯಮಿತಿ ನ ಗ್ರಾಹ್ಯಂ ಭ್ರಾಂತವಾಕ್ಯಂ ಯಥಾ ಸುಧೀಃ ॥ ೩೩ ॥

---

೩೦. ಇದರಿಂದ ತಂದೆಯೇ ನಿನಗೆ ರಾಜ್ಯವನ್ನು ಕೊಟ್ಟಿರುವನೆಂಬುದು ಚೆನ್ನಾಗಿ ಗೊತ್ತಾಗುತ್ತದೆ. ಅದೇ ರೀತಿಯಾಗಿ ದಂಡಕಾರಣ್ಯ ರಾಜ್ಯವನ್ನು ತಂದೆಯೇ ನನಗೆ ಕೊಟ್ಟಿರುವನು.

೩೧-೩೨. ಆದ್ದರಿಂದ ನಾವಿಬ್ಬರೂ ತಂದೆಯ ಮಾತನ್ನು ಪ್ರಯತ್ನಪಟ್ಟು ನಡೆಸಬೇಕು. ತಂದೆಯ ಅಪ್ಪಣೆಯನ್ನು ನೆರವೇರಿಸದೆ ಯಾವನು ಸ್ವತಂತ್ರನಾಗಿರುವನೋ ಅವನು ಜೀವಿಸಿದ್ದರೂ ಸತ್ತವನಂತೆಯೇ. ಸತ್ತಮೇಲೆ ನರಕವನ್ನೂ ಹೊಂದುತ್ತಾನೆ. ಆದ್ದರಿಂದ ನೀನು ರಾಜ್ಯವನ್ನು ಆಳು. ನಾನು ದಂಡಕಾರಣ್ಯವನ್ನು ರಕ್ಷಿಸುತ್ತೇನೆ.

೩೩. ಅನಂತರ ಭರತನು ರಾಮನನ್ನು ಕುರಿತು ಇಂತೆಂದನು. ಎಲೈ ರಾಮನೆ! ನಮ್ಮ ತಂದೆಯು ಕಾಮುಕನು. ಕಾರ್ಯವನ್ನು ವಿವೇಕದಿಂದ ಯೋಚಿಸಲಿಲ್ಲ. ಹೆಂಗಸಿಗೆ ಅಧೀನನಾಗಿ ಭ್ರಾಂತಿಗೊಂಡ ಮನಸ್ಸುಳ್ಳವನಾಗಿದ್ದನು. ಹುಚ್ಚನಂತಿದ್ದನು. ಅಂತಹವನು ಹೇಳಿದ ಮಾತು ಸತ್ಯವೆಂದು ಗ್ರಹಿಸಬಾರದು. ಅದು ಹುಚ್ಚರಮಾತಿನಂತೆ ಅರ್ಥವಿಲ್ಲದೆ ಇರತಕ್ಕದೆಂದು ತಿಳಿದು ಬಿಟ್ಟುಬಿಡಬೇಕು.

॥ ರಾಮ ಉವಾಚ ॥

ನ ಸ್ತ್ರೀಜಿತಃ ಪಿತಾ ಬ್ರೂಯಾನ್ನ ಕಾಮೀ ನೈವ ಮೂಢಧೀಃ । ಪೂರ್ವಂ ಪ್ರತಿಶ್ರುತಂ ತಸ್ಯೈ ಸತ್ಯವಾದೀ ದದೌ ಭಯಾತ್ ॥

ಅಸತ್ಯಾದ್ಭೀತಿರಧಿಕಾ ಮಹತಾಂ ನರಕಾದಪಿ । ಕರೋಮೀತ್ಯಹಮಪ್ಯೇತತ್ಸತ್ಯಂ ತಸ್ಯೈ ಪ್ರತಿಶ್ರುತಂ ॥ ೩೫ ॥

ಕಥಂ ವಾಕ್ಯಮಹಂ ಕುರ್ಯಾಮಸತ್ಯಂ ರಾಘವೋಽಹಿ ಸರ್ । ಇತ್ಯುದೀರಿತಮಾಕರ್ಣ್ಯ ರಾಮಸ್ಯ ಭರತೋಽಬ್ರವೀತ್ ॥ ೩೬ ॥

ತಥೈವ ಚೀರವಸನೋ ವನೇ ವತ್ಸ್ಯಾಮಿ ಸುವ್ರತ । ಚತುರ್ದಶ ಸಮಾಸ್ತ್ವಂ ತು ರಾಜ್ಯಂ ಕುರು ಯಥಾಸುಖಂ ॥ ೩೭ ॥

---

೩೪. ರಾಮನು ಹೇಳಿದನು—ನಮ್ಮ ತಂದೆಯು ಹೆಂಗಸಿಗೆ ಅಧೀನನಾಗಿ ಹೇಳಿದ ಮಾತಲ್ಲ. ಕಾಮಿಯಾಗಿಯೂ ಹೇಳಿದ ಮಾತೂ ಅಲ್ಲ. ದಡ್ಡತನದಿಂದಲೂ ಹೇಳಿದುದೂ ಅಲ್ಲ. ಅವನು ಹಿಂದೆ ಆಕೆಗೆ ಮಾತುಕೊಟ್ಟಿದ್ದನು. ಸತ್ಯವು ಹೋಗುವುದೆಂಬ ಭಯದಿಂದ ಅದನ್ನು ಆಕೆಗೆ ಕೊಟ್ಟನು.

೩೫. ಮಹಾತ್ಮರಿಗೆ ನರಕಕ್ಕೆ ಹೋಗುವುದಕ್ಕಿಂತಲೂ ಸುಳ್ಳುಹೇಳುವುದರಲ್ಲಿ ಹೆದರಿಕೆಯು ಹೆಚ್ಚು. ನಾನೂ ಕೂಡ ತಂದೆಯು ಹೇಳಿದಂತೆ ಮಾಡುತ್ತೇನೆಂದು ಕೈಕೇಯಿಗೆ ಮಾಡುಕೊಟ್ಟಿರುವೆನು.

೩೬. ರಘುವಂಶದಲ್ಲಿ ಹುಟ್ಟಿದ ನಾನು ಆಕೆಗೆ ಕೊಟ್ಟಿರುವ ಮಾತನ್ನು ಹೇಗೆತಾನೇ ಅಸತ್ಯವನ್ನಾಗಿ ಮಾಡಲಿ! ರಾಮನು ಹೀಗೆ ಹೇಳಿದುದನ್ನು ಕೇಳಿ ಭರತನು ಇಂತೆಂದು ಹೇಳಿದನು.

೩೭. ಎಲೈ ರಾಮನೆ! ಹಾಗಾದರೆ ನಾನು ನಾರುಡೆಯನ್ನುಟ್ಟು ಕಾಡಿನಲ್ಲಿ ಹದಿನಾಲ್ಕು ವರ್ಷಕಾಲ ವಾಸಮಾಡುತ್ತೇನೆ. ನೀನು ಸುಖವಾಗಿ ರಾಜ್ಯಭಾರವನ್ನು ಮಾಡು.

॥ ರಾಮ ಉವಾಚ ॥

ಪಿತ್ರಾ ದತ್ತಂ ತವೈವೈತದ್ರಾಜ್ಯಂ ಮಹ್ಯಂ ವನಂ ದದೌ । ವ್ಯತ್ಯಯಂ ಯದ್ಯಹಂ ಕುರ್ಯಾಮಸತ್ಯಂ ಪೂರ್ವವತ್ಸ್ಥಿತಂ ॥ ೩೮ ॥

॥ ಭರತ ಉವಾಚ ॥

ಅಹಮಪ್ಯಾಗಮಿಷ್ಯಾಮಿ ಸೇವೇ ತ್ವಾಂ ಲಕ್ಷ್ಮಣೋ ಯಥಾ । ನೋ ಚೇತ್ಪ್ರಾಯೋಪವೇಶೇನ ತ್ಯಜಾಮ್ಯೇ ತತ್ಕಳೇಬರಂ ॥ ೩೯ ॥

ಇತ್ಯೇವಂ ನಿಶ್ಚಯಂ ಕೃತ್ವಾ ದರ್ಭಾನಾಸ್ತೀರ್ಯ ಚಾತಗೇ । ಮನಸಾಪಿ ವಿನಿಶ್ಚಿತ್ಯ ಪ್ರಾಙ್ಮುಖೋಪವಿವೇಶ ಸಃ ॥ ೪೦ ॥

---

೩೮. ರಾಮನು ಹೇಳಿದನು....ಎಲೈ ಭರತನೆ? ತಂದೆಯು ನಿನಗೆ ರಾಜ್ಯವನ್ನು ಕೊಟ್ಟಿರುವನು. ಅಂತೆಯೇ ನನಗೆ ಕಾಡನ್ನು ಕೊಟ್ಟಿರುವನು. ಇವನ್ನು ಅದಲುಬದಲನ್ನು ತಾನೇ ಹೇಗೆ ಮಾಡಲಿ? ಹಾಗೆ ಮಾಡಿದರೂ ಅಸತ್ಯವೆಂಬುದು ಹಾಗೆಯೇ ನಿಲ್ಲುವುದು.

೩೯. ಭರತನು ಹೇಳಿದನು--ಹಾಗೆಯೇ ಮಾಡುವುದಾದರೆ ಕಾಡಿನಲ್ಲಿಯೇ ಇರು. ನಾನೂ ಕೂಡ ಕಾಡಿಗೆ ಬಂದು ಲಕ್ಷ್ಮಣನಂತೆ ನಿನ್ನ ಸೇವೆಯನ್ನು ಮಾಡಿಕೊಂಡಿರುತ್ತೇನೆ. ಅದಕ್ಕೂ ನೀನು ಅವಕಾಶವನ್ನು ಕೊಡದಿದ್ದರೆ ಪ್ರಾಯೋಪವೇಶವನ್ನು ಮಾಡಿ ಈ ದೇಹವನ್ನು ಬಿಟ್ಟು ಬಿಡುತ್ತೇನೆ.

೪೦. ಎಂದು ಹೇಳಿ ಹೀಗೆಂದು ಸಿದ್ಧಾಂತವನ್ನೂ ಮಾಡಿಕೊಂಡು ಬಿಸಿಲಿನಲ್ಲಿ ದರ್ಭೆಗಳನ್ನಿಟ್ಟು ಹರವಿ ಮನಃಪೂರ್ವಕವಾಗಿ ನಿಶ್ಚಯಿಸಿಕೊಂಡು ಪೂರ್ವಮುಖವಾಗಿ ಕುಳಿತುಕೊಂಡನು.

ಭರತಸ್ಯಾಪಿ ನಿರ್ಬಂಧಂ ದೃಷ್ಟ್ವಾ ರಾಮೋಽತಿವಿಸ್ಮಿತಃ । ನೇತ್ರಾಂತಸಂಜ್ಞಾಂ ಗುರವೇ ಚಕಾರ ರಘುನಂದನಃ ॥ ೪೧ ॥

ಏಕಾಂತೇ ಭರತಂ ಪ್ರಾಹ ವಸಿಷ್ಠೋ ಜ್ಞಾನಿನಾಂ ವರಃ । ವತ್ಸ ಗುಹ್ಯಂ ಶೃಣುಷ್ವೇದಂ ಮಮ ವಾಕ್ಯಾತ್ಸುನಿಶ್ಚಿತಂ ॥ ೪೨ ॥

ರಾಮೋ ನಾರಾಯಣಸ್ಸಾಕ್ಷಾದ್ಬ್ರಹ್ಮಣಾ ಯಾಚಿತಃ ಪುರಾ । ರಾವಣಸ್ಯ ವಧಾರ್ಥಾಯ ಜಾತೋ ದಶರಥಾತ್ಮಜಃ ॥ ೪೩ ॥

ಯೋಗಮಾಯಾಪಿ ಸೀತೇತಿ ಜಾತಾ ಜನಕನಂದಿನೀ । ಶೇಷೋಽಪಿ ಲಕ್ಷ್ಮಣೋ ಜಾತೋ ರಾಮಮನ್ವೇತಿ ಸರ್ವದಾ ॥ ೪೪ ॥

---

೪೧. ಭರತನು ಹೀಗೆ ಮಾಡುತ್ತ ನಿರ್ಬಂಧಪಡಿಸುತ್ತಿರುವುದನ್ನು ನೋಡಿ ರಾಮನು ಬಹು ಆಶ್ಚರ್ಯಗೊಂಡನು. ಆಗ ಆ ರಾಮನು ಗುರುವಾದ ವಸಿಷ್ಠನಿಗೆ ಕಣ್ಣು ಸನ್ನೆಯನ್ನು ಮಾಡಿದನು.

೪೨. ಆಗ ಜ್ಞಾನಿಗಳಲ್ಲಿ ಮೊದಲನೆಯವನಾದ ವಸಿಷ್ಠನು ಭರತನನ್ನು ಕುರಿತು ಒಬ್ಬರಿಗೂ ತಿಳಿಯದಂತೆ ಇಂತೆಂದನು. ಎಲೈ ವತ್ಸನೆ ! ಒಂದು ಗುಟ್ಟಾದ ವಿಷಯವನ್ನು ಹೇಳುತ್ತೇನೆ. ಕೇಳು. ನನ್ನ ಮಾತಿನಲ್ಲಿ ನಂಬಿಕೆಯನ್ನೂ ಗೌರವವನ್ನೂ ಇಟ್ಟು ನಿಶ್ಚಯಮಾಡಿಕೋ.

೪೩. ಈ ರಾಮನು ಸಾಕ್ಷಾನ್ನಾರಾಯಣನ ಅವತಾರಪುರುಷನು ಪೂರ್ವದಲ್ಲಿ ಬ್ರಹ್ಮನಿಂದ ಆ ನಾರಾಯಣನು ಯಾಚಿಸಲ್ಪಟ್ಟವನಾಗಿ ಭೂಭಾರವನ್ನು ನಾಶಮಾಡಲು ರಾವಣನ ವಧೆಗೋಸ್ಕರ ದಶರಥನ ಹೊಟ್ಟೆಯಲ್ಲಿ ಅವತರಿಸಿರುವನು.

೪೪. ಆ ಯೋಗಮಾಯೆಯೇ ಜನಕನ ಮಗಳಾದ ಸೀತೆಯಾಗಿ ಹುಟ್ಟಿರುವಳು. ಆದಿಶೇಷನೂ ಲಕ್ಷ್ಮಣನಾಗಿ ಅವತರಿಸಿ ಯಾವಾಗಲೂ ರಾಮನನ್ನೇ ಅನುಸರಿಸಿಕೊಂಡಿರುವನು.

ರಾವಣಂ ಹಂತುಕಾಮಸ್ತೇ ಗಮಿಷ್ಯಂತಿ ನ ಸಂಶಯಃ । ಕೈಕೇಯ್ಯಾ ವರದಾನಾದಿ ಯದ್ಯನ್ನಿಷ್ಠುರಭಾಷಣಂ ॥ ೪೫ ॥

ಸರ್ವಂ ದೇವಕೃತಂ ನೋ ಚೇದೇವಂ ಸಾ ಭಾಷಯೇತ್ಕಥಂ । ತಸ್ಮಾತ್ತ್ಯಜಾಗ್ರಹಂ ತಾತ ರಾಮಸ್ಯ ವಿನಿವರ್ತನೇ ॥ ೪೬ ॥

ನಿವರ್ತಸ್ವ ಮಹಾಸೈನ್ಯೈರ್ಮಾತೃಭಿಸ್ಸಹಿತಃ ಪುರಂ । ರಾವಣಂ ಸಕುಲಂ ಹತ್ವಾ ಶೀಘ್ರಮೇವಾಗಮಿಷ್ಯತಿ ॥ ೪೭ ॥

ಇತಿ ಶ್ರುತ್ವಾ ಗುರೋರ್ವಾಕ್ಯಂ ಭರತೋ ವಿಸ್ಮಯಾನ್ವಿತಃ । ಗತ್ವಾ ಸಮೀಪಂ ರಾಮಸ್ಯ ವಿಸ್ಮಯೋತ್ಫುಲ್ಲಲೋಚನಃ ॥ ೪೮ ॥

೪೫–೪೬. ಅವರುಗಳು ಆ ರಾವಣನನ್ನು ಕೊಲ್ಲುವುದಕ್ಕೆ ಹೋಗುತ್ತಿರುವರು. ಅದರಲ್ಲಿ ಸಂಶಯವಿಲ್ಲ. ಕೈಕೇಯಿಗೆ ವರವನ್ನು ಕೊಟ್ಟುದೂ ಅವಳು ನಿಷ್ಠುರವಾಗಿ ಮಾತನಾಡಿದುದೂ ಇವೆಲ್ಲವೂ ಕೂಡ ದೇವತೆಗಳಿಂದ ಮಾಡಿದ ಕೆಲಸಗಳೇ ಆಗಿವೆ. ಹಾಗಿಲ್ಲದಿದ್ದರೆ ಆ ಕೈಕೇಯಿಯು ಈ ರೀತಿಯಾಗಿ ಮಾತನಾಡುತ್ತಿರಲೇ ಇಲ್ಲ. ಆದುದರಿಂದ ರಾಮನನ್ನು ಮತ್ತೆ ಹಿಂದಕ್ಕೆ ಕರೆದುಕೊಂಡು ಹೋಗುವುದರಲ್ಲಿ ಬಲಾತ್ಕಾರವನ್ನು ಬಿಟ್ಟು ಬಿಡು.

೪೭. ಸೈನ್ಯವನ್ನು ಕರೆದುಕೊಂಡು ತಾಯಿಯನ್ನೂ ಕರೆದುಕೊಂಡು ಪಟ್ಟಣಕ್ಕೆ ನೀನು ಹಿಂದಿರುಗು. ಈ ರಾಮನು ರಾವಣನನ್ನು ಕೊಂದು ಬೇಗನೆ ಹಿಂದಕ್ಕೆ ಬರುವನು.

೪೮. ಎಂಬುದಾಗಿ ಗುರುವು ಹೇಳಲು ಭರತನು ಅವನ ಮಾತನ್ನು ಕೇಳಿ ಬಹುವಾಗಿ ಆಶ್ಚರ್ಯಭರಿತನಾದನು. ಅನಂತರ ಆ ಭರತನು ಆಶ್ಚರ್ಯದಿಂದ ಕಣ್ಣುಗಳನ್ನು ಬಿಡುತ್ತ ರಾಮನ ಬಳಿಗೆ ಹೋದನು.

ಪಾದುಕೇ ದೇಹಿ ರಾಜೇಂದ್ರ ರಾಜ್ಯಾಯ ತವ ಪೂಜಿತೇ । ತಯೋಸ್ಸೇವಾಂ ಕರೋಮ್ಯೇವ ಯಾವದಾಗಮನಂ ತವ ॥ ೪೯ ॥

ಇತ್ಯುಕ್ತ್ವಾ ಪಾದುಕೇ ದಿವ್ಯೇ ಯೋಜಯಾಮಾಸ ಪಾದಯೋಃ । ರಾಮಸ್ಯ ತೇ ದದೌ ರಾಮೋ ಭರತಾಯಾತಿಭಕ್ತಿತಃ ॥ ೫೦ ॥

ಗೃಹೀತ್ವಾ ಪಾದುಕೇ ದಿವ್ಯೇ ಭರತೋ ರತ್ನಭೂಷಿತೇ । ರಾಮಂ ಪುನಃ ಪರಿಕ್ರಮ್ಯ ಪ್ರಣನಾಮ ಪುನಃ ಪುನಃ ॥ ೫೧ ॥

ಭರತಃ ಪುನರಾಹೇದಂ ಭಕ್ತ್ಯಾ ಗದ್ಗದಯಾ ಗಿರಾ । ನವ ಪಂಚ ಸಮಾಂತೇ ತು ಪ್ರಥಮೇ ದಿವಸೇ ಯದಿ ॥ ೫೨ ॥

---

೪೯. ಎಲೈ ರಾಜೇಂದ್ರನೆ! ನಿನ್ನ ಪಾದುಕೆಗಳನ್ನು ಕೊಡು. ಅವುಗಳನ್ನೇ ರಾಜ್ಯದಲ್ಲಿಟ್ಟು ಪೂಜಿಸುತ್ತೇನೆ. ನೀನು ಬರುವವರೆಗೂ ಅವುಗಳ ಸೇವೆಯನ್ನೇ ಮಾಡುತ್ತಿರುತ್ತೇನೆ.

೫೦. ಹೀಗೆಂದು ಹೇಳುತ್ತಾ ಒಂದು ಜೊತೆ ಪಾದುಕೆಗಳನ್ನು ಅವನ ಕಾಲುಗಳಿಗೆ ಹಾಕಿದನು. ಅನಂತರ ಅವನ್ನೇ ಭರತನಿಗೆ ಅತಿ ಪ್ರೀತಿಯಿಂದ ಶ್ರೀರಾಮನು ತೊಟ್ಟನು.

೫೧. ಭರತನು ರತ್ನಭೂಷಿತವಾದ ಆ ಪಾದುಕೆಗಳನ್ನು ತೆಗೆದುಕೊಂಡನು. ಅನಂತರ ರಾಮನಿಗೆ ಪ್ರದಕ್ಷಿಣೆಯನ್ನು ಮಾಡಿ ಮತ್ತೆ ಮತ್ತೆ ನಮಸ್ಕರಿಸಿದನು.

೫೨–೫೩. ಅನಂತರ ಭರತನು ಭಕ್ತಿಯಿಂದ ಕೂಡಿ ಗದ್ಗದ ಧ್ವನಿಯಿಂದ ಎಲೈ ರಾಮನೆ! ಹದಿನಾಲ್ಕು ವರ್ಷಗಳು ಕಳೆದಮೇಲೆ

ನಾಗಮಿಷ್ಯಸಿ ಚೇದ್ರಾಮ ಪ್ರವಿಶಾಮಿ ಮಹಾನಲಂ । ಬಾಢಮಿತ್ಯೇವ ತಂ ರಾಮೋ ಭರತಂ ಸ ನ್ಯವರ್ತಯತ್ ॥ ೫೩ ॥

ಸಸೈನ್ಯಃ ಸವಸಿಷ್ಠಶ್ಚ ಶತ್ರುಘ್ನಸಹಿತಸ್ಸುಧೀಃ । ಮಾತೃಭಿರ್ಮಂತ್ರಿಭಿಸ್ಸಾರ್ಧಂ ಗಮನಾಯೋಪಚಕ್ರಮೇ ॥ ೫೪ ॥

ಕೈಕೇಯೀ ರಾಮಮೇಕಾಂತೇ ಸ್ರವನ್ನೇತ್ರಜಲಾಕುಲಾ । ಪ್ರಾಂಜಲಿಃ ಪ್ರಾಹ ಹೇ ರಾಮ ತವ ರಾಜ್ಯವಿಘಾತನಂ ॥ ೫೫ ॥

ಕೃತಂ ಮಯಾ ದುಷ್ಟಧಿಯಾ ಮಾಯಾಮೋಹಿತಚೇತಸಾ । ಕ್ಷಮಸ್ವ ಮಮ ದೌರಾತ್ಮ್ಯಂ ಕ್ಷಮಾಸಾರಾ ಹಿ ಸಾಧವಃ ॥ ೫೬ ॥

ಮೊದನೆಲಯ ದಿನವೇ ನೀನು ಪಟ್ಟಣಕ್ಕೆ ಬರದಿದ್ದರೆ ನಾನು ಅಗ್ನಿಪ್ರವೇಶವನ್ನು ಮಾಡುತ್ತೇನೆ. ಎಂದನು. ರಾಮನು ಹಾಗೆಯೇ ಆಗಲೆಂದು ಹೇಳಿ ಭರತನನ್ನು ಹಿಂತಿರುಗಿಸಿದನು.

೫೪. ಅನಂತರ ಭರತನು ಸೈನ್ಯದೊಡನೆಯೂ ವಸಿಷ್ಠನೊಡನೆಯೂ ಶತ್ರುಘ್ನನೊಡನೆಯೂ ತಾಯಿಯರೊಡನೆಯೂ ಹಿಂದಿರುಗಿ ಪ್ರಯಾಣಕ್ಕೆ ಸಿದ್ಧನಾದನು.

೫೫. ಅನಂತರ ಕೈಕೇಯಿಯು ಏಕಾಂತದಲ್ಲಿ ರಾಮನನ್ನು ಕುರಿತು ಕಣ್ಣೀರನ್ನು ಸುರಿಸುತ್ತ ಕೈಮುಗಿದುಕೊಂಡು ಎಲೈ ರಾಮನೆ! ನಿನಗೆ ರಾಜ್ಯಾಭಿಷೇಕಕ್ಕೆ ತೊಂದರೆಯನ್ನು ಮಾಡಿದೆನು.

೫೬. ಯಾವುದೋ ಅಜ್ಞಾನವು ನನ್ನನ್ನು ಆವರಿಸಿಕೊಂಡಿದ್ದುದರಿಂದ ದುಷ್ಟತನದಿಂದ ನಿನಗೆ ಹಾಗೆ ಮಾಡಿದೆನು. ಆ ನನ್ನ ದುಷ್ಟತನವನ್ನು ಕ್ಷಮಿಸು. ಸಾಧುಗಳು ಯಾವಾಗಲೂ ಕ್ಷಮಿಸತಕ್ಕ ಸ್ವಭಾವವುಳ್ಳವರು. ನೀನು ಪರಮ ಸಾಧುವಾಗಿದ್ದೀಯೆ!

ತ್ವಂ ಸಾಕ್ಷಾದ್ವಿಷ್ಣುರವ್ಯಕ್ತಃ ಪರಮಾತ್ಮಾ ಸನಾತನಃ । ಮಾಯಾಮಾನುಷರೂಪೇಣ ಮೋಹಯನ್ನಖಿಲಂ ಜಗತ್ ॥ ೫೭ ॥

ತ್ವಯೈವ ಪ್ರೇರಿತೋ ಲೋಕಃ ಕುರುತೇ ಸಾಧ್ವಸಾಧು ವಾ । ತ್ವದಧೀನಮಿದಂ ವಿಶ್ವಮಸ್ವತಂತ್ರಂ ಕರೋತಿ ಕಿಂ ॥ ೫೮ ॥

ಯಥಾ ಕೃತ್ರಿಮನರ್ತಕ್ಯೋ ನೃತ್ಯಂತಿ ಕುಹಕೇಚ್ಛಯಾ । ತ್ವದಧೀನಾ ತಥಾ ಮಾಯಾ ನರ್ತಕೀ ಬಹುರೂಪಿಣೀ ॥ ೫೯ ॥

ತ್ವಯೈವ ಪ್ರೇರಿತಾಹಂ ಚ ದೇವಕಾರ್ಯಂ ಕರಿಷ್ಯತಾ । ಪಾಪಿಷ್ಠಂ ಪಾಪಮನಸಾ ಕರ್ಮಾಚರಮರಿಂದಮ ॥ ೬೦ ॥

---

೫೭. ನೀನೇ ಪ್ರತ್ಯಕ್ಷನಾದ ವಿಷ್ಣುವು. ಅವ್ಯಕ್ತನು. ಪರಮಾತ್ಮನನ್ನು ಸನಾತನು ಮಾಯೆಯಿಂದ ಮನುಷ್ಯನಾಗಿ ಜಗತ್ತೆಲ್ಲವನ್ನೂ ಅಜ್ಞಾನದಲ್ಲಿ ಬೀಳುವಂತೆ ಮಾಡುತ್ತಿದ್ದೀಯೆ.

೫೮. ಲೋಕವು ನಿನ್ನಿಂದ ಪ್ರೇರಿಸಲ್ಪಟ್ಟಿದ್ದಾಗಿ ಒಳ್ಳೆಯದನ್ನಾಗಲಿ ಕೆಟ್ಟದ್ದನ್ನಾಗಲಿ ಮಾಡುತ್ತದೆ. ಈ ಪ್ರಪಂಚವೇ ನಿನ್ನ ಅಧೀನವಾಗಿರುವುದು. ನಿನ್ನ ಅಧೀನವಾಗಿ ಸ್ವಾತಂತ್ರ್ಯವಿಲ್ಲದಿರುವ ಈ ಪ್ರಪಂಚವು ಏನನ್ನು ತಾನೇ ಮಾಡಬಲ್ಲುದು ?

೫೯. ಆಟವಾಡಿಸುವವರು ಮರದ ಬೊಂಬೆಗಳನ್ನು ಮಾಡಿ ಅದನ್ನು ತಮ್ಮ ಇಚ್ಛೆಯಂತೆ ಹೇಗೆ ತಿರುಗಿಸುತ್ತಾರೆಯೋ ಆ ರೀತಿಯಾಗಿ ಮಾಯೆಯು ನಿನ್ನ ಅಧೀನವಾಗಿ ಅನೇಕ ರೀತಿಯಿಂದ ಕುಣಿಯುತ್ತಿರುವುದು.

೬೦. ದೇವಕಾರ್ಯವನ್ನು ಮಾಡಲು ಇಚ್ಛಿಸಿದ ನಿನ್ನ ಪ್ರೇರಣೆಯಿಂದಲೇ ನಾನೂ ಪ್ರೇರಿತಳಾಗಿ ಈ ಪಾಪರೂಪವಾದ ಕೆಲಸವನ್ನು ಮಾಡಿದೆನು.

ಅದ್ಯ ಪ್ರತೀತೋಸಿ ಮಮ ದೇವಾನಾಮಪ್ಯಗೋಚರಃ । ಪಾಹಿ ವಿಶ್ವೇಶ್ವರಾನಂತ ಜಗನ್ನಾಥ ನಮೋಸ್ತು ತೇ ॥ ೬೧ ॥
ಛಿಂಧಿ ಸ್ನೇಹಮಯಂ ಪಾಶಂ ಪುತ್ರವಿತ್ತಾದಿಗೋಚರಂ । ತ್ವದ್‌ಜ್ಞಾನಾಮಲಖಡ್ಗೇನ ತ್ವಾಮಹಂ ಶರಣಂ ಗತಾ ॥ ೬೨ ॥
ಕೈಕೇಯ್ಯಾ ವಚನಂ ಶ್ರುತ್ವಾ ರಾಮಸ್ಸಸ್ಮಿತಮಬ್ರವೀತ್ । ಯದಾಹ ಮಾಂ ಮಹಾಭಾಗೇ ನಾನೃತಂ ಸತ್ಯಮೇವ ತತ್ ॥ ೬೩ ॥
ಮಯೈವ ಪ್ರೇರಿತಾ ವಾಣೀ ತವ ವಕ್ತ್ರಾದ್ವಿನಿರ್ಗತಾ । ದೇವಕಾರ್ಯಾರ್ಥಸಿದ್ಧ್ಯರ್ಥಮತ್ರ ದೋಷಃ ಕುತಸ್ತವ ॥ ೬೪ ॥

---

೬೧. ದೇವತೆಗಳಿಗೂ ತಿಳಿಯಲು ಅಶಕ್ಯನಾದ ನಿನ್ನನ್ನು ಈಗ ನಾನು ಜ್ಞಾನಚಕ್ಷುಸ್ಸಿನಿಂದ ತಿಳಿದುಕೊಂಡೆನು. ಎಲೈ ವಿಶ್ವೇಶ್ವರನೆ! ಅನಂತನೆ! ಜಗನ್ನಾಥನೆ! ನನ್ನನ್ನು ಕಾಪಾಡು. ನಿನಗೆ ನಮಸ್ಕಾರವು.

೬೨. ಮಕ್ಕಳು ಧನ, ಪಶು, ಮುಂತಾದುವುಗಳಲ್ಲಿ ಆಸಕ್ತಿಗೊಳ್ಳುವ ಈ ಸ್ನೇಹರೂಪವಾದ ಪಾಶವನ್ನು ನಿನ್ನ ಸಂಬಂಧವಾದ ಪವಿತ್ರವಾದ ಜ್ಞಾನವೆಂಬ ಕತ್ತಿಯಿಂದ ಕತ್ತರಿಸಿ ನಾಶಮಾಡು. ನಿನ್ನನ್ನು ಶರಣುಹೊಂದಿದ್ದೇನೆ.

೬೩. ರಾಮನು ಕೈಕೇಯಿಯು ಹೇಳಿದ ಈ ಮಾತನ್ನು ಕೇಳಿ ನಗುತ್ತ ಎಲೈ ಮಹಾನುಭಾವಳೆ! ನೀನು ನನ್ನನ್ನು ಕುರಿತು ಹೇಳಿದುದು ಸತ್ಯವಾದುದೆ? ಅದೆಂದಿಗೂ ಸುಳ್ಳಲ್ಲ.

೬೪. ನನ್ನಿಂದ ಪ್ರೇರಿಸಲ್ಪಟ್ಟ ಸರಸ್ವತಿಯೇ ನಿನ್ನ ನಾಲಿಗೆಯಿಂದ ಹೊರಗೆ ಬಂದಳು. ಇದನ್ನು ಹೀಗೆ ಮಾಡಿದುದು ದೇವತೆಗಳ ಕಾರ್ಯಸಿದ್ಧಿಗೋಸ್ಕರವಾಗಿ. ಈ ವಿಷಯದಲ್ಲಿ ನಿನ್ನ ದೋಷವು ಯಾವುದೂ ಇರುವುದಿಲ್ಲವು.

ಗಚ್ಛ ತ್ವಂ ಹೃದಿ ಮಾಂ ನಿತ್ಯಂ ಭಾವಯಂತೀ ದಿವಾನಿಶಂ । ಸರ್ವತ್ರ ವಿಗತಸ್ನೇಹಾ ಮದ್ಭಕ್ತ್ಯಾ ಮೋಕ್ಷ್ಯಸೇ ಚಿರಾತ್ ॥ ೬೫ ॥
ಅಹಂ ಸರ್ವತ್ರ ಸಮದೃಕ್ ದ್ವೇಷ್ಯೋ ವಾ ಪ್ರಿಯ ಏವ ವಾ । ನಾಸ್ತಿ ಮೇ ಕಲ್ಪಕಸ್ಯೇವ ಭಜತೋಽನುಭಜಾಮ್ಯಹಂ ॥ ೬೬ ॥
ಮನ್ಮಾಯಾಮೋಹಿತಧಿಯೋ ಮಾಮಂಬ ಮನುಜಾಕೃತಿಂ । ಸುಖದುಃಖಾದ್ಯನುಗತಂ ಜಾನಂತಿ ನ ತು ತತ್ತ್ವತಃ ॥ ೬೭ ॥
ದಿಷ್ಟ್ಯಾ ಮದ್ಗೋಚರಂ ಜ್ಞಾನಮುತ್ಪನ್ನಂ ತೇ ಭವಾಪಹಂ । ಸ್ಮರಂತೀ ತಿಷ್ಠ ಭವನೇ ಲಿಪ್ಯಸೇ ನ ಚ ಕರ್ಮಭಿಃ ॥ ೬೮ ॥

---

೬೫. ನೀನು ಹೋಗು. ನನ್ನನ್ನೇ ಹಗಲೂ ರಾತ್ರಿಯೂ ಯಾವಾಗಲೂ ಹೃದಯದಲ್ಲಿ ಧ್ಯಾನಿಸುತ್ತಿರು ಯಾರಲ್ಲಿಯೂ ಸ್ನೇಹವೆಂಬುದನ್ನೇ ಇಡಬೇಡ. ನಶ್ವರವಾದುವುಗಳಲ್ಲಿ ಸ್ನೇಹವನ್ನು ಬಿಟ್ಟು ನನ್ನಲ್ಲಿ ಭಕ್ತಿಯನ್ನಿಟ್ಟು ಧ್ಯಾನಿಸುತ್ತಿದ್ದರೆ ನಿನಗೆ ಬೇಗನೆ ಮೋಕ್ಷವು ಸಿಕ್ಕುತ್ತದೆ.

೬೬. ನಾನು ಎಲ್ಲದರಲ್ಲಿಯೂ ಸಮನಾದ ಬುದ್ಧಿಯುಳ್ಳವನಾಗಿದ್ದೇನೆ. ನಾನು ಯಾರನ್ನೂ ದ್ವೇಷಿಸುವುದೂ ಇಲ್ಲ. ಪ್ರೀತಿಸುವುದೂ ಇಲ್ಲ. ಶಿಲ್ಪಿಯಾದವನು ತಾನು ಮಾಡಿದ ಪದಾರ್ಥಗಳಲ್ಲಿ ಹೇಗೆ ಒಂದನ್ನು ಪ್ರೀತಿಸುವುದಾಗಲೀ ಒಂದನ್ನು ದ್ವೇಷಿಸುವುದಾಗಲೀ ಮಾಡುವುದಿಲ್ಲವೋ ಅಂತೆಯೇ ನಾನು ಇರುವೆನು. ನನ್ನನ್ನು ಯಾವನು ಭಜಿಸುವನೊ ಅವನನ್ನೇ ನಾನು ಅನುಸರಿಸುವೆನು.

೬೭. ಎಲೈ ತಾಯಿಯೆ! ನನ್ನ ಮಾಯೆಯಿಂದ ಮೋಹಗೊಂಡವರು ನನ್ನನ್ನು ಮನುಷ್ಯನೆಂದೂ ಸುಖದುಃಖಗಳಿಗೆ ಒಳಪಟ್ಟಿರುವನೆಂದೂ ತಿಳಿಯುತ್ತಾರೆ. ನನ್ನ ನಿಜಸ್ವರೂಪವನ್ನು ತಿಳಿಯುವುದಿಲ್ಲ.

೬೮. ಎಲೈ ತಾಯಿಯೆ! ನನ್ನನ್ನು ತಿಳಿಯುವ ಜ್ಞಾನವು ನಿನಗೆ ಉಂಟಾಗಿದೆ. ಅದು ಸಂತೋಷಕರವಾಗಿದೆ. ಆ ಜ್ಞಾನವು ಸಂಸಾರದಲ್ಲಿ ಹುಟ್ಟುವಿಕೆ ಸಾಯುವಿಕೆಗಳನ್ನು ನಾಶಮಾಡತಕ್ಕದ್ದು. ಆ ಜ್ಞಾನದಿಂದ ನನ್ನನ್ನೇ ನೀನು ಸ್ಮರಿಸುತ್ತ ಮನೆಯಲ್ಲಿರು. ನಿನಗೆ ಈ ಕಶ್ಮಲಗಳೊಂದೂ ಅಂಟುವುದಿಲ್ಲ.

ಇತ್ಯುಕ್ತ್ವಾ ಸಾ ಪರಿಕ್ರಮ್ಯ ರಾಮಂ ಸಾನಂದವಿಸ್ಮಯಾ । ಪ್ರಣಮ್ಯ ಶತಶೋ ಭೂಮೌ ಯಯೌ ಗೇಹಂ ಮುದಾನ್ವಿತಾ ॥ ೭೯ ॥
ಭರತಸ್ತು ಸಹಾಮಾತ್ಯೈರ್ಮಾತೃಭಿರ್ಗುರುಣಾ ಸಹ । ಅಯೋಧ್ಯಾಮಗಮಚ್ಛೀಘ್ರಂ ರಾಮಮೇವಾನುಚಿಂತಯನ್ ॥ ೮೦ ॥
ಪೌರಜಾನಪದಾನ್ಸರ್ವಾನಯೋಧ್ಯಾಯಾಮುದಾರಧೀಃ । ಸ್ಥಾಪಯಿತ್ವಾ ಯಥಾನ್ಯಾಯ್ಯಂ ನಂದಿಗ್ರಾಮಂ ಯಯೌ ಸುಧೀಃ ॥
ತತ್ರ ಸಿಂಹಾಸನೇ ನಿತ್ಯಂ ಪಾದುಕೇ ಸ್ಥಾಪ್ಯ ಭಕ್ತಿತಃ । ಪೂಜಯಿತ್ವಾ ಯಥಾನ್ಯಾಯ್ಯಂ ಗಂಧಪುಷ್ಪಾಕ್ಷತಾದಿಭಿಃ ॥ ೮೨ ॥

---

೭೯. ರಾಮನು ಹೀಗೆಂದು ಹೇಳುತ್ತಲೂ ಆ ಕೈಕೇಯಿಯು ಆ ರಾಮನನ್ನು ಪ್ರದಕ್ಷಿಣೆಮಾಡಿ ಆನಂದದಿಂದ ಬಾರಿ ಬಾರಿಗೂ ನಮಸ್ಕರಿಸಿ ಸಂತೋಷದಿಂದ ಮನೆಗೆ ಹೋದಳು.

೮೦. ಇತ್ತ ಭರತನು ಮಂತ್ರಿಗಳೊಡನೆಯೂ ತಾಯಿಯರೊಡನೆಯೂ ಗುರುವಿನೊಡನೆಯೂ ಕೂಡಿಕೊಂಡು ಆ ರಾಮನನ್ನೇ ಧ್ಯಾನಿಸುತ್ತ ಅಯೋಧ್ಯೆಗೆ ಹೋದನು.

೮೧. ಪಟ್ಟಣಿಗರು ದೇಶದವರು ಮುಂತಾದವರೆಲ್ಲರನ್ನೂ ಆ ಮಹಾತ್ಮನಾದ ಭರತನು ಅಯೋಧ್ಯೆಯಲ್ಲಿ ಅವರವರಿಗೆ ತಕ್ಕ ರೀತಿಯಲ್ಲಿ ನಿಲ್ಲಿಸಿ ಅನಂತರ ನಂದೀಗ್ರಾಮಕ್ಕೆ ಹೋದನು.

೮೨. ಆ ನಂದಿಗ್ರಾಮದಲ್ಲಿ ಸಿಂಹಾಸನದಲ್ಲಿ ಆ ಪಾದುಕೆಗಳನ್ನಿಟ್ಟನು. ಅದನ್ನು ಶಾಸ್ತ್ರದಲ್ಲಿ ಹೇಳಿರುವಂತೆ ಭಕ್ತಿಯಿಂದ ಅಕ್ಷತೆ ಹೂವುಗಳಿಂದ ಪೂಜಿಸುತ್ತಿದ್ದನು.

ರಾಜೋಪಚಾರೈರಖಿಲೈಃ ಪ್ರತ್ಯಹಂ ನಿಯತವ್ರತಃ । ಫಲಮೂಲಾಶನೋ ದಾಂತೋ ಜಟಾವಲ್ಕಲಧಾರಕಃ ॥ ೭೩ ॥

ಅಧಶ್ಶಾಯೀ ಬ್ರಹ್ಮಚಾರೀ ಶತ್ರುಘ್ನಸಹಿತಸ್ತದಾ । ರಾಜಕಾರ್ಯಾಣಿ ಸರ್ವಾಣಿ ಯಾವಂತಿ ಪೃಥಿವೀತಲೇ ॥ ೭೪ ॥

ತಾನಿ ಪಾದುಕಯೋಃ ಸಮ್ಯಙ್ನಿವೇದಯತಿ ರಾಘವಃ । ಗಣಯನ್ದಿವಸಾನೇವ ರಾಮಾಗಮನಕಾಂಕ್ಷಯಾ ॥ ೭೫ ॥

ಸ್ಥಿತೋ ರಾಮಾರ್ಪಿತಮನಾಃ ಸಾಕ್ಷಾದ್ಬ್ರಹ್ಮಮುನಿರ್ಯಥಾ । ರಾಮಸ್ತು ಚಿತ್ರಕೂಟಾದ್ರೌ ವಸನ್ಮುನಿಭಿರಾವೃತಃ ॥ ೭೬ ॥

---

೭೩. ರಾಮನಿಗೆ ಯಾವ ಬಗೆಯಾದ ಉಪಚಾರವು ನಡೆಯುತ್ತಿತ್ತೋ ಆ ಬಗೆಯಾದ ಉಪಚಾರವನ್ನು ಪ್ರತಿದಿನವೂ ಭರತನು ನಿಯಮದಿಂದ ಆ ಪಾದುಕೆಗಳಿಗೆ ಸಲ್ಲಿಸುತ್ತಿದ್ದನು. ಮತ್ತು ತಾನು ಹಣ್ಣು ಹಂಪಲನ್ನೂ ಗೆಡ್ಡೆ ಗೆಣಸುಗಳನ್ನೂ ತಿಂದುಕೊಂಡು ಜಟೆವಲ್ಕಲಗಳನ್ನು ಧರಿಸಿ ಇಂದ್ರಿಯ ನಿಗ್ರಹಿಯಾಗಿದ್ದನು.

೭೪–೭೫. ನೆಲದಮೇಲೆ ಮಲಗುತ್ತಿದ್ದನು. ಬ್ರಹ್ಮಚಾರಿಯಾಗಿದ್ದನು. ಶತ್ರುಘ್ನನು ಯಾವಾಗಲೂ ಜೊತೆಯಲ್ಲಿರುತ್ತಿದ್ದನು. ಈ ರೀತಿಯಾಗಿ ರಾಜ್ಯಭಾರಮಾಡುತ್ತಿರಲು ರಾಜ್ಯಕಾರ್ಯಗಳೆಷ್ಟಿದ್ದರೂ ಅವರೆಲ್ಲರನ್ನೂ ಆ ಪಾದುಕೆಗಳಿಗೆ ಸ್ವಲ್ಪವೂ ಬಿಡದೆ ಒಪ್ಪಿಸುತ್ತಿದ್ದನು. ರಾಮನು ಯಾವಾಗ ಬಂದಾನು ? ಎಂಬ ಆಶೆಯಿಂದ ರಾಮನು ಬರುವ ದಿವಸಗಳನ್ನೇ ಲೆಕ್ಕಹಾಕುತ್ತಿದ್ದನು.

೭೬. ಮುನಿಯು ಬ್ರಹ್ಮನನ್ನು ಹೀಗೆ ಧ್ಯಾನಿಸುತ್ತ ಅದರಲ್ಲಿಯೇ ಮನಸ್ಸಿಟ್ಟಿರುವನೊ ? ಹಾಗೆ ಆ ರಾಮನಲ್ಲಿಯೇ ಮನಸ್ಸಿಟ್ಟಿದ್ದನು. ಇತ್ತ ರಾಮನು ಆ ಚಿತ್ರಕೂಟ ಪರ್ವತದಲ್ಲಿಯೇ ಕೆಲವು ಕಾಲಗಳವರೆಗೂ ವಾಸಮಾಡಿಕೊಂಡು ಮುನಿಗಳೊಡನೆ ಇದ್ದನು.

ಸೀತಯಾ ಲಕ್ಷ್ಮಣೇನಾಪಿ ಕಿಂಚಿತ್ಕಾಲಮುಪಾವಸತ್ । ನಾಗರಾಶ್ಚ ಸದಾಯಾಂತಿ ರಾಮದರ್ಶನಲಾಲಸಾಃ ॥ ೨೭ ॥

ಚಿತ್ರಕೂಟಸ್ಥಿತಂ ಜ್ಞಾತ್ವಾ ಸೀತಯಾ ಲಕ್ಷ್ಮಣೇನ ಚ । ದೃಷ್ಟ್ವಾ ತಜ್ಜನಸಂಬಾಧಂ ರಾಮಸ್ತತ್ಯಾಜ ತಂ ಗಿರಿಂ ॥ ೨೮ ॥

ದಂಡಕಾರಣ್ಯಗಮನೇ ಕಾರ್ಯಮಪ್ಯನುಚಿಂತಯನ್ । ಅನ್ವಗಾತ್ ಸೀತಯಾ ಭ್ರಾತ್ರಾ ಹ್ಯತ್ರೇರಾಶ್ರಮಮುತ್ತಮಂ ॥ ೨೯ ॥

ಸರ್ವತ್ರ ಸುಖಸಂವಾಸಂ ಜನಸಂಬಾಧವರ್ಜಿತಂ । ಗತ್ವಾ ಮುನಿಮುಪಾಸೀನಂ ಭಾಸಯಂತಂ ತಪೋವನಂ ॥ ೩೦ ॥

೨೭–೨೮. ಆಗ ಸೀತೆಯಿಂದಲೂ ಲಕ್ಷ್ಮಣನಿಂದಲೂ ಕೂಡಿಕೊಂಡು ಸ್ವಲ್ಪಕಾಲದವರೆಗೆ ಸುಖವಾಗಿಯೇ ಇದ್ದನು ಪಟ್ಟಣಿಗರೆಲ್ಲರೂ ರಾಮನು ಚಿತ್ರಕೂಟಪರ್ವತದಲ್ಲಿ ಸೀತೆ ಲಕ್ಷ್ಮಣರೊಡನೆ ಇರುವನೆಂದು ತಿಳಿದು ಅವರನ್ನು ನೋಡಬೇಕೆಂಬ ಇಚ್ಛೆಯಿಂದ ಯಾವಾಗಲೂ ಬರುತ್ತಲೇ ಇದ್ದರು. ಹೀಗೆ ಜನಗಳು ಬರುವುದು ಹೆಚ್ಚಾಗುತ್ತಾ ಬರಲು ಆಗ ಗಲಭೆಯನ್ನು ತಿಳಿದು ರಾಮನು ಆ ಬೆಟ್ಟದ ಜಾಗವನ್ನು ಬಿಟ್ಟು ಬಿಟ್ಟನು.

೨೯. ಅದೂ ಅಲ್ಲದೆ ತಾನು ಈ ದಂಡಕಾರಣ್ಯಕ್ಕೆ ಬರಲು ಕಾರಣವೇನೆಂಬುದನ್ನೂ ಯೋಚಿಸಿ ಅಲ್ಲಿಂದ ಮುಂದೆ ಹೊರಟನು. ಅಲ್ಲಿಂದ ಮುಂದೆ ಅತ್ರಿಮಹರ್ಷಿಯ ಆಶ್ರಮಕ್ಕೆ ಹೋದನು. ಸೀತೆ ಲಕ್ಷ್ಮಣರೂ ಅವನ ಜೊತೆಯಲ್ಲಿಯೇ ಹೋದರು.

೩೦. ಅಲ್ಲಿ ಎಲ್ಲಾ ವಿಷಯದಲ್ಲಿಯೂ ಅನುಕೂಲವೂ ಸುಖವೂ ಇದ್ದಿತು. ಜನಗಳ ಗಲಭೆಯಿರಲಿಲ್ಲ ಅಲ್ಲಿಗೆ ಹೋಗಿ ಆ ಅತ್ರಿ ಮುನಿಯನ್ನು ನೋಡಿದನು. ಅವನು ತನ್ನ ಕಾಂತಿಯಿಂದ ಆ ತಪೋವನವನ್ನು ಪ್ರಕಾಶಪಡಿಸುತ್ತಿದ್ದನು.

ದಂಡವತ್ಪ್ರಣಿಪತ್ಯಾಹ ರಾಮೋಽಹಮಭಿವಾದಯೇ । ಪಿತುರಾಜ್ಞಾಂ ಪುರಸ್ಕೃತ್ಯ ದಂಡಕಾನನಮಾಗತಃ ॥ ೮೧ ॥

ವನವಾಸಮಿಷೇಣಾಪಿ ಧನ್ಯೋಽಹಂ ದರ್ಶನಾತ್ತವ । ಶ್ರುತ್ವಾ ರಾಮಸ್ಯ ವಚನಂ ರಾಮಂ ಜ್ಞಾತ್ವಾ ಹರಿಂ ಪರಂ ॥ ೮೨ ॥

ಪೂಜಯಾಮಾಸ ವಿಧಿವದ್ಭಕ್ತ್ಯಾ ಪರಮಯಾ ಮುನಿಃ । ವನ್ಯೈಃ ಫಲೈಃ ಕೃತಾತಿಥ್ಯಮುಪವಿಷ್ಟಂ ರಘೂತ್ತಮಂ ॥ ೮೩ ॥

ಸೀತಾಂ ಚ ಲಕ್ಷ್ಮಣಂ ಚೈವ ಸಂತುಷ್ಟೋ ವಾಕ್ಯಮಬ್ರವೀತ್ । ಭಾರ್ಯಾ ಮೇತೀವ ಸಂವೃದ್ಧಾ ಹ್ಯನಸೂಯೇತಿ ವಿಶ್ರುತಾ ॥ ೮೪ ॥

---

೮೧. ಆ ಋಷಿಗೆ ಧೀರ್ಘದಂಡನಮಸ್ಕಾರ ಮಾಡುತ್ತ ರಾಮನಾದ ನಾನು ನಮಸ್ಕರಿಸುತ್ತೇನೆ. ನಾನು ತಂದೆಯ ಅಪ್ಪಣೆಯನ್ನು ಅನುಸರಿಸಿ ಈ ದಂಡಕಾರಣ್ಯಕ್ಕೆ ಬಂದೆನು.

೮೨. ವನವಾಸವೆಂಬ ನೆವದಿಂದ ಈ ದಂಡಕಾರಣ್ಯಕ್ಕೆ ಬಂದು ನಿನ್ನನ್ನು ನೋಡಿದುದರಿಂದ ನಾನು ಧನ್ಯನಾದೆನು. ಎಂದು ಹೇಳಿದರು. ಅತ್ರಿಯು ರಾಮನ ಈ ಮಾತನ್ನು ಕೇಳಿ ರಾಮನನ್ನು ಸಾಕ್ಷಾತ್ ಹರಿಯೆಂದೇ ತಿಳಿದುಕೊಂಡನು.

೮೩. ಆದುದರಿಂದಲೇ ಬಹುವಾದ ಭಕ್ತಿಯಿಂದ ಆತನನ್ನು ಪೂಜಿಸಿದನು. ಹಣ್ಣು ಮುಂತಾದ ಕಾಡಿನಲ್ಲಿ ಬೆಳೆದ ಪದಾರ್ಥಗಳನ್ನು ಕೊಟ್ಟು ಆ ರಾಘವನಿಗೆ ತೃಪ್ತಿಯನ್ನುಂಟುಮಾಡಿದನು. ಅತಿಥಿಸತ್ಕಾರವಾದಮೇಲೆ ಆ ರಾಮನು ಅಲ್ಲಿ ಕುಳಿತುಕೊಂಡನು.

೮೪. ಸೀತೆಯೂ ಲಕ್ಷ್ಮಣನೂ ಆತಿಥ್ಯವನ್ನು ಹೊಂದಿ ತೃಪ್ತರಾಗಿ ಅಂತೆಯೇ ಕುಳಿತರು. ಆಗ ಇವರನ್ನು ನೋಡಿ ಆ ಅತ್ರಿಯು ಇಂತೆಂದನು. ಎಲೈ ರಾಘವನೆ ! ನನ್ನ ಹೆಂಡತಿಯು ಬಹು ವೃದ್ಧಳು. ಅವಳ ಹೆಸರು ಅನಸೂಯೆಯೆಂದು.

ತಪಶ್ಚರಂತೀ ಸುಚಿರಂ ಧರ್ಮಜ್ಞಾ ಧರ್ಮವತ್ಸಲಾ । ಅಂತಸ್ತಿಷ್ಠತಿ ತಾಂ ಸೀತಾ ಪಶ್ಯತ್ವರಿನಿಷೂದನ ॥ ೮೫ ॥

ತಥೇತಿ ಜಾನಕೀಂ ಪ್ರಾಹ ರಾಮೋ ರಾಜೀವಲೋಚನಃ । ಗಚ್ಛ ದೇವೀಂ ನಮಸ್ಕೃತ್ಯ ಶೀಘ್ರಮೇಹಿ ಪುನಶ್ಶುಭೇ ॥ ೮೬ ॥

ತಥೇತಿ ರಾಮವಚನಂ ಸೀತಾ ಚಾಪಿ ತಥಾಕರೋತ್ । ದಂಡವತ್ಪತಿತಾಮಗ್ರೇ ಸೀತಾಂ ದೃಷ್ಟ್ವಾತಿಹೃಷ್ಟಧೀಃ ॥ ೮೭ ॥

ಅನಸೂಯಾ ಸಮಾಲಿಂಗ್ಯ ವತ್ಸೇ ಸೀತೇತಿ ಸಾದರಂ । ದಿವ್ಯೇ ದದೌ ಕುಂಡಲೇ ದ್ವೇ ನಿರ್ಮಿತೇ ವಿಶ್ವಕರ್ಮಣಾ ॥ ೮೮ ॥

---

೮೫. ಬಹುಕಾಲದಿಂದ ತಪಸ್ಸನ್ನು ಮಾಡುತ್ತಿರುವಳು. ಧರ್ಮವನ್ನು ಬಲ್ಲವಳು. ಧರ್ಮದಲ್ಲಿ ಆಸೆಯುಳ್ಳವಳು. ಒಳಗಡೆಯಲ್ಲಿರುವಳು. ಅವಳನ್ನು ಈ ಸೀತೆಯು ನೋಡಿಬರಲಿ.

೮೬. ಆಗ ರಾಜೀವಲೋಚನನಾದ ರಾಮನು ಹಾಗೇ ಆಗಬಹುದೆಂದು ಸೀತೆಯನ್ನು ಕುರಿತು ಎಲೈ ಸೀತೆಯೆ ! ಆ ದೇವಿಗೆ ನಮಸ್ಕಾರಮಾಡಿ ಮತ್ತೆ ಬೇಗ ಬಾ ! ಎಂದನು.

೮೭. ಸೀತೆಯೂ ಕೂಡ ಹಾಗೇ ಆಗಲೆಂದು ರಾಮನಿಗೆ ಹೇಳಿ ಒಳಕ್ಕೆ ಹೋಗಿ ಆಕೆಗೆ ನಮಸ್ಕರಿಸಿದಳು. ಸೀತೆಯು ಆ ಅನಸೂಯೆಯ ಬಳಿಗೆ ಹೋಗಿ ದೀರ್ಘದಂಡನಮಸ್ಕಾರವನ್ನು ಮಾಡಲು ಬಹು ಸಂತೋಷಪಟ್ಟಳು.

೮೮. ಆ ಅನಸೂಯೆಯು ಸೀತೆಯನ್ನು ನೋಡಿ ಬಹು ಸಂತೋಷಗೊಂಡು ವತ್ಸ ! ಸೀತೆ ಎಂದೆನ್ನುತ್ತಾ ಪ್ರೀತಿಯಿಂದ ಆಲಿಂಗಿಸಿಕೊಂಡಳು. ಅನಂತರ ವಿಶ್ವಕರ್ಮನಿಂದ ನಿರ್ಮಿತವಾದ ಎರಡು ಓಲೆಗಳನ್ನು ಸೀತೆಗೆ ಕೊಟ್ಟಳು.

ದೂಕುಲೇ ದ್ವೇ ದದೌ ತಸ್ಯೈ ನಿರ್ಮಲಾ ಭಕ್ತಿಸಂಯುತಾ । ಅಂಗರಾಗಂ ಚ ಸೀತಾಯೈ ದದೌ ದಿವ್ಯಂ ಶುಭಾನನಾ || ೮೯ ||

ನ ತ್ಯಕ್ಷ್ಯತ್ಯಂಗರಾಗೇಣ ಶೋಭಾ ತ್ವಾಂ ಕಮಲಾನನೇ । ಪಾತಿವ್ರತ್ಯಂ ಪುರಸ್ಕೃತ್ಯ ರಾಮಮನ್ವೇಹಿ ಜಾನಕಿ || ೯೦ ||

ಕುಶಲೀ ರಾಘವೋ ಯಾತು ತ್ವಯಾ ಸಹ ಪುನರ್ಗೃಹಂ । ಭೋಜಯಿತ್ವಾ ಯಥಾನ್ಯಾಯ್ಯಂ ರಾಮಂ ಸೀತಾಸಮನ್ವಿತಂ ।

ಲಕ್ಷ್ಮಣಂ ಚ ತದಾ ರಾಮಂ ಪುನಃ ಪ್ರಾಹ ಕೃತಾಂಜಲಿಃ || ೯೧ ||

---

೮೯. ಅಲ್ಲದೆ ಭಕ್ತಿಯಿಂದ ಎರಡು ದುಕೂಲಗಳನ್ನೂ ಕೊಟ್ಟಳು. ಉತ್ತಮವಾದ ಅಂಗರಾಗವನ್ನೂ ಕೂಡ ಸೀತೆಗೆ ಕೊಟ್ಟಳು.

೯೦. ಎಲೈ ಸೀತೆಯೆ ! ನೀನು ಈ ಅಂಗರಾಗವನ್ನು ಹಾಕಿಕೊಂಡರೆ ಕಾಂತಿಯು ಯಾವಾಗಲೂ ನಿನ್ನಲ್ಲಿ ಕಡಿಮೆಯಾಗುವುದೇ ಇಲ್ಲ. ಎಲೈ ಸೀತೆಯೆ ! ಪಾತಿವ್ರತ್ಯವನ್ನು ಮುಂದುಮಾಡಿಕೊಂಡು ಯಾವಾಗಲೂ ರಾಮನನ್ನು ಅನುಸರಿಸುತ್ತಿರು.

೯೧. ಇಂತಹ ನಿನ್ನಿಂದ ಕೂಡಿಕೊಂಡು ರಾಮನು ಕ್ಷೇಮದಿಂದ ಮತ್ತೆ ಹಿಂದಿರುಗಿ ಮನೆಗೆ ಹೋಗಲಿ. ಎಂದಳು. ಅನಂತರ ಅತ್ರಿಯು ರಾಮ ಸೀತೆ ಲಕ್ಷ್ಮಣರಿಗೆ ಉತ್ತಮವಾದ ಭೋಜನವನ್ನು ಮಾಡಿಸಿದನು. ಅಲ್ಲದೆ ಅವರನ್ನು ಕುರಿತು ಕೈಮುಗಿದುಕೊಂಡು ಮತ್ತೆ ಇಂತೆಂದನು.

ರಾಮ ತ್ವಮೇವ ಭುವನಾನಿ ವಿಧಾಯ ತೇಷಾಂ ಸಂರಕ್ಷಣಾಯ ಸುರಮಾನುಷತಿರ್ಯಗಾದೀನ್ |
ದೇಹಾಬಿಭರ್ಷಿ ನ ಚ ದೇಹಗುಣೈರ್ವಿಲಿಪ್ತಸ್ತ್ವತ್ತೋ ಬಿಭೇತ್ಯಖಿಲ ಮೋಹಕಾರೀ ಚ ಮಾಯಾ॥ ೯೨ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಉಮಾಮಹೇಶ್ವರಸಂವಾದೇ ಅಯೋಧ್ಯಾಕಾಂಡೇ
ನವಮಸ್ಸರ್ಗ ಸಮಾಪ್ತಃ

ಅಯೋಧ್ಯಕಾಂಡೇ ನವಾನಾಂ ಸರ್ಗಾಣಾಂ ಸಪ್ತಶತಾನಿ ಶ್ಲೋಕಾಃ
ಅಯೋಧ್ಯಾಕಾಂಡಃ ಸಮಾಪ್ತಃ

---

೯೨. ಎಲೈ ರಾಮನೆ! ನೀನೇ ಈ ಲೋಕಗಳೆಲ್ಲವನ್ನೂ ಸೃಷ್ಟಿಮಾಡಿ ಅವನ್ನು ಕಾಪಾಡುವುದಕ್ಕೋಸ್ಕರ ದೇವತೆಗಳ ಮನುಷ್ಯರ ಕೀಳುಪ್ರಾಣಿಗಳ ರೂಪವಾದ ದೇಹಗಳನ್ನು ಧರಿಸುತ್ತೀಯೆ. ಆದರೆ ಆ ದೇಹದ ಪ್ರಾಕೃತವಾದ ಯಾವ ಯಾವ ಗುಣಗಳಿರುವುವೋ ಅವು ಒಂದೂ ನಿನ್ನನ್ನು ಸಂಬಂಧಿಸಿಕೊಳ್ಳುವುದಿಲ್ಲ. ಎಲ್ಲಾ ಲೋಕವನ್ನೂ ಅಜ್ಞಾನದಲ್ಲಿ ಮುಳುಗಿಸುವ ಮಾಯೆಯು ನಿನಗೆ ಹೆದರುತ್ತದೆ.

ಇಂತು ಶ್ರೀಮದಧ್ಯಾತ್ಮರಾಮಾಯಣದ ಅಯೋಧ್ಯಾಕಾಂಡದಲ್ಲಿ ಒಂಭತ್ತು ಸರ್ಗಗಳಿವೆ. ಅವುಗಳಲ್ಲಿ
ಒಟ್ಟು ಏಳುನೂರು ಶ್ಲೋಕಗಳಿವೆ. ಅಯೋಧ್ಯಾಕಾಂಡವು ಮುಗಿದುದು.

॥ ಶ್ರೀ ॥

॥ ಶಾರದಾ ಗಣೇಶ ಗುರುಭ್ಯೋ ನಮಃ॥

ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡಃ

॥ ಅಥ ಅರಣ್ಯಕಾಂಡೇ ನ್ಯಾಸ ಧ್ಯಾನ ಜಪ ಕ್ರಮಃ ॥

ಅರಣ್ಯಕಾಂಡಕ್ಕೆ ನ್ಯಾಸ ಧ್ಯಾನ ಜಪಗಳ ಕ್ರಮಗಳು.

ಓಂ ಅಸ್ಯ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡ ಮಹಾಮಾಲಾಮಂತ್ರಸ್ಯ, ಶ್ರೀಭಗವಾನ್ ಸದಾಶಿವ ಋಷಿಃ, ಅನುಷ್ಟುಪ್ ಛಂದಃ, ಶ್ರೀರಾಮ ಪರಮಾತ್ಮಾ ದೇವತಾ ಓಂ ನಮೋ ನಾರಾಯಣಾಯೇತಿ ಬೀಜಂ, ದಾಶರಥಿರಿತಿಶಕ್ತಿಃ, ರಾವಣಘ್ನ ಇತಿಕೀಲಕಂ.

ಮಮ ಅಮುಕ ಕಾಮನಾಸಿಧ್ಯರ್ಥಂ ಅಮುಕ ಸ್ತೋತ್ರಸ್ಯ ಮಂತ್ರಸಂಪುಟೀಕರಣಂ ಕರಿಷ್ಯೆ. ಅಥ ಲೋಮ ವಿಲೋಮ ಮಂತ್ರಯುಕ್ತಂ ಕರಿಷ್ಯೇ ವಾ, ಮಂಡಲಯುಕ್ತಂ ಕರಿಷ್ಯೇ. ಇತ್ಯಾದೌ ಸಂಕಲ್ಪ್ಯ, ನ್ಯಾಸಾನ್ ಚರೇತ್.

ಅರಣ್ಯಕಾಂಡವು

ಅರಣ್ಯಕಾಂಡದಲ್ಲಿ ನ್ಯಾಸ ಧ್ಯಾನ ಜಪಗಳ ಕ್ರಮವು ಆರಂಭಿಸಲ್ಪಡುತ್ತದೆ.

ಓಂ ಶ್ರೀಮದಧ್ಯಾತ್ಮರಾಮಾಯಣದಲ್ಲಿ ಅರಣ್ಯಕಾಂಡದ ಮಹಾಮಾಲಾಮಂತ್ರಕ್ಕೆ ಶ್ರೀ ಭಗವಂತನಾದ ಸದಾಶಿವನು ಋಷಿಯು. ಅನುಷ್ಟುಪ್ ಛಂದಸ್ಸು. ಶ್ರೀರಾಮ ಪರಮಾತ್ಮನೇ ದೇವತೆಯು. ಓಂ ನಮೋ ನಾರಾಯಣಾಯ ಎಂಬುದು ಬೀಜವು. ದಾಶರಥಿ ಎಂಬುದು ಶಕ್ತಿಯು. ರಾವಣಘ್ನ ಎಂಬುದು ಕೀಲಕವು.

ನನಗೆ ಇಂತಹ ಅಪೇಕ್ಷೆಯು ಸಿದ್ಧಿಹೊಂದುವುದಕ್ಕೋಸ್ಕರ ಇಂತಹ ಸ್ತೋತ್ರದ ಮಂತ್ರಸಂಪುಟೀಕರಣವನ್ನು ಮಾಡುತ್ತೇನೆ. ಲೋಮ ವಿಲೋಮ ಮಂತ್ರಗಳಿಂದ ಕೂಡಿದ್ದಾಗಿಯಾಗಲೀ, ಮಂಡಲದಿಂದ ಕೂಡಿದುದಾಗಿಯಾಗಲಿ ಮಾಡುತ್ತೇನೆ. ಎಂದು ಮೊದಲು ಸಂಕಲ್ಪವನ್ನು ಮಾಡಿ ನ್ಯಾಸಗಳನ್ನು ಮಾಡಬೇಕು.

॥ ತತ್ರಾದೌ ಋಷ್ಯಾದಿನ್ಯಾಸಃ ॥

ಮೊದಲು ಋಷಿ ಮುಂತಾದುವುಗಳ ನ್ಯಾಸವು.

ಓಂ ಶ್ರೀ ಭಗವರ್ತ್ ಸದಾಶಿವ ಋಷಯೇ ನಮಃ ಶಿರಸಿ. ಓಂ ಅನುಷ್ಟುಪ್ ಛಂದಸೇ ನಮಃ ಮುಖೇ. ಓಂ ಶ್ರೀರಾಮ ಪರಮಾತ್ಮ ದೇವತಾಯೈ ನಮಃ ಹೃದಯೇ. ಓಂ ನಮೋ ನಾರಾಯಣಾಯೇತಿ ಬೀಜಾಯ ನಮಃ ಗುಹ್ಯೇ. ದಾಶರಥಿರಿತಿ ಶಕ್ತಯೇ ನಮಃ ಪಾದಯೋಃ ರಾವಣಘ್ನ ಇತಿ ಕೀಲಕಾಯ ನಮಃ ಸರ್ವಾಂಗೇ. ಎಂದು ಹೇಳಿ ಆಯಾ ಅವಯವಗಳನ್ನು ಮುಟ್ಟಿ ನ್ಯಾಸಮಾಡಬೇಕು.

ಮಮ ಚತುರ್ವಿಧ ಪುರುಷಾರ್ಥ ಸಿದ್ಧ್ಯರ್ಥೇ ಜಪೇ ವಿನಿಯೋಗಃ.

ನನಗೆ ಚತುರ್ವಿಧ ಪುರುಷಾರ್ಥಗಳು ಸಿದ್ಧಿಸಲು ಜಪದಲ್ಲಿ ವಿನಿಯೋಗಮಾಡುತ್ತೇನೆ.

‖ ಅಥ ಕರನ್ಯಾಸಃ ‖

ಕರನ್ಯಾಸವು

ಓಂ ರಾಂ ಅಂಗುಷ್ಠಾಭ್ಯಾಂ ನಮಃ, ಓಂ ರೀಂ ತರ್ಜನೀಭ್ಯಾಂ ನಮಃ,
ಓಂ ರೂಂ ಮಧ್ಯಮಾಭ್ಯಾಂ ನಮಃ, ಓಂ ರೈಂ ಅನಾಮಿಕಾಭ್ಯಾಂ ನಮಃ,
ಓಂ ರೌಂ ಕನಿಷ್ಠಿಕಾಭ್ಯಾಂ ನಮಃ, ಓಂ ರಃ ಕರತಲಕರಪೃಷ್ಠಾಭ್ಯಾಂ ನಮಃ.

ಎಂದು ಬೆರಳುಗಳನ್ನು ಮುಟ್ಟಿಕೊಂಡು ನ್ಯಾಸಮಾಡಿಕೊಳ್ಳಬೇಕು.

‖ ಅಥ ಷಡಂಗನ್ಯಾಸಃ ‖

ಷಡಂಗನ್ಯಾಸವು

ಓಂ ರಾಂ ಹೃದಯಾಯ ನಮಃ, ಓಂ ರೀಂ ಶಿರಸೇ ಸ್ವಾಹಾ,
ಓಂ ರೂಂ ಶಿಖಾಯೈ ವಷಟ್, ಓಂ ರೈಂ ಕವಚಾಯ ಹುಂ,
ಓಂ ರೌಂ ನೇತ್ರತ್ರಯಾಯ ವೌಷಟ್, ಓಂ ರಃ ಅಸ್ತ್ರಾಯ ಫಟ್.

ಓಂ ರಾಂ ರೀಂ ರೂಂ ರೈಂ ರೌಂ ರಃ ಇತಿ ಮಂತ್ರೇಣ ದಿಗ್ಬಂಧಃ

ಓಂ ರಾಂ ರೀಂ ರೂಂ ರೈಂ ರೌಂ ರಃ ಎಂದು ದಿಗ್ಬಂಧವು.

|| ಅಥ ಧ್ಯಾನಂ ||

ಧ್ಯಾನವು

ನೀಲೇಂದೀವರತುಲ್ಯಶ್ಯಾಮುವದನಂ ಪೀತಾಂಬರಾಲಂಕೃತಂ । ಮುದ್ರಾಂ ಜ್ಞಾನಮಯೀಂ ದಧಾನಮಪರಾಂ ವಿದ್ಯುನ್ನಿಭಾಂ ರಾಘವಂ । ಪಶ್ಯಂತೀಂ ಮುಕುಟಾಂಗದಾದಿವಿವಿಧೈಃ ಕಲ್ಪೋಜ್ಜ್ವಲಾಂಗಂ ಭಜೇ । ಶ್ರೀಮದ್ದಾಶರಥಿಂ ನಮಾಮಿ ಸುತರಾಮಬ್ಧೌಪ್ಲವಂ ದುಸ್ತರೇ ||

ಇತಿ ಧ್ಯಾತ್ವಾ ಮಾನಸೋಪಚಾರೈಃ ಸಂಪೂಜ್ಯ ಪಾರಾಯಣಂ ಕುರ್ಯಾತ್

ಇಂತು ಧ್ಯಾನವನ್ನು ಹೇಳಿ ಮಾನಸೋಪಚಾರಗಳಿಂದ ಪೂಜಿಸಿ ಪಾರಾಯಣವನ್ನು ಮಾಡಬೇಕು.

ಪಾರಾಯಣಾಂತೇ ಷಡಂಗನ್ಯಾಸಂ ಕೃತ್ವಾ ಓಂ ರಾಂ ರೀಂ ರೂಂ ರೈಂ ರೌಂ ರಃ ಇತಿ ದಿಗ್ವಿಮೋಕಃ, ಇತ್ಯುಕ್ತ್ವಾ ಧ್ಯಾಯೇತ್.

ಪಾರಾಯಣವಾದಮೇಲೆ ಆರು ಅಂಗನ್ಯಾಸಗಳನ್ನು ಮಾಡಿಕೊಂಡು ಓಂ ರಾಂ ರೀಂ ರೂಂ ರೈಂ ರೌಂ ರಃ ಇತಿ ದಿಗ್ವಿಮೋಕಃ ಎಂದು ಹೇಳಿ ಧ್ಯಾನ ಶ್ಲೋಕವನ್ನು ಹೇಳಬೇಕು.

ಇದು ಕಾಂಡಕ್ಕೆ ಸಂಬಂಧಪಟ್ಟದ್ದು.

ಅಥ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಪ್ರಥಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಓಂ ಅಸ್ಯ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಪ್ರಥಮಸರ್ಗಸ್ಯ

ಶ್ರೀ ಭಗವಾನ್ ಬಾದರಾಯಣ ಋಷಿಃ, ಗಾಯತ್ರೀ ಛಂದಃ, ಓಂ ನಮೋ ನಾರಾಯಣೋ ದೇವತಾ, ಶ್ರೀ ಲಕ್ಷ್ಮೀ ಬೀಜಂ, ಪರಮಾಶಕ್ತಿಃ, ಅವ್ಯಕ್ತಂ, ಕೀಲಕಂ, ಅಮುಕಸಂಪುಟೀಕರಣ ಸಿದ್ಧ್ಯರ್ಥಂ ಅಮುಕಮಂತ್ರ ಲೋಮ ವಿಲೋಮ ಸಂಪುಟೀಕರಣ ದಶಾಧ್ಯಾಯೇ ಮಂತ್ರಾಷ್ಟಾಕ್ಷರ ಸಂಯುಕ್ತಂ ಪ್ರಥಮಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ.

ಓಂ ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ಮೊದಲನೆಯ ಸರ್ಗಕ್ಕೆ

ಶ್ರೀ ಭಗವಾನ್ ಬಾದರಾಯಣನು ಋಷಿಯು, ಗಾಯತ್ರೀ ಛಂದಸ್ಸು, ಓಂ ನಮೋ ನಾರಾಯಣ ಎಂಬುದು ದೇವತೆಯು. ಶ್ರೀ ಲಕ್ಷ್ಮೀಃ. ಎಂಬುದು ಬೀಜವು, ಪರಮಾ ಎಂಬುದು ಶಕ್ತಿಯು, ಅವ್ಯಕ್ತಂ ಎಂಬುದು ಕೀಲಕವು ಇಂತಹ ಸಂಪುಟೀಕರಣದ ಸಿದ್ಧಿಗೋಸ್ಕರ ಇಂತಹ ಮಂತ್ರದ ಲೋಮ ವಿಲೋಮ ಸಂಪುಟೀಕರಣದ ದಶಾಧ್ಯಾಯದಲ್ಲಿ ಎಂಟಕ್ಷರದ ಮಂತ್ರದಿಂದ ಕೂಡಿದ ಪ್ರಥಮಸರ್ಗದ ನ್ಯಾಸ ಧ್ಯಾನ ಜಪಗಳನ್ನು ಮಾಡುತ್ತೇನೆ. ಎಂದು ಸಂಕಲ್ಪ ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ಮಾಂ ರುಂ ಜಂ ಅಂಗುಷ್ಠಾಭ್ಯಾಂ ನಮಃ
ಓಂ ಮಾಂ ರುಂ ಜಂ ತರ್ಜನೀಭ್ಯಾಂ ನಮಃ
ಓಂ ಮಾಂ ರುಂ ಜಂ ಮಧ್ಯಮಾಭ್ಯಾಂ ನಮಃ
ಓಂ ಮಾಂ ರುಂ ಜಂ ಅನಾಮಿಕಾಭ್ಯಾಂ ನಮಃ
ಓಂ ಮಾಂ ರುಂ ಜಂ ಕನಿಷ್ಠಿಕಾಭ್ಯಾಂ ನಮಃ
ಓಂ ಮಾಂ ರುಂ ಜಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಷಡಂಗನ್ಯಾಸವು

ಓಂ ಮಾಂ ರುಂ ಜಂ ಹೃದಯಾಯ ನಮಃ
ಓಂ ಮಾಂ ರುಂ ಜಂ ಶಿರಸೇ ಸ್ವಾಹಾ
ಓಂ ಮಾಂ ರುಂ ಜಂ ಶಿಖಾಯೈ ವಷಟ್
ಓಂ ಮಾಂ ರುಂ ಜಂ ಕವಚಾಯ ಹುಂ
ಓಂ ಮಾಂ ರುಂ ಜಂ ನೇತ್ರತ್ರಯಾಯ ವೌಷಟ್
ಓಂ ಮಾಂ ರುಂ ಜಂ ಅಸ್ತ್ರಾಯ ಫಟ್

ಓಂ ಮಾಂ ರುಂ ಜಂ ಇತಿ ದಿಗ್ಬಂಧಃ

ಓಂ ಮಾಂ ರುಂ ಜಂ ಎಂದು ದಿಗ್ಬಂಧವು

॥ ಅಥ ಧ್ಯಾನಂ ॥

ಧ್ಯಾನವು

ಅಥ ತತ್ರ ದಿನಂ ಸ್ಥಿತ್ವಾ ಪ್ರಭಾತೇ ರಘುನಂದನಃ । ಸ್ನಾತ್ವಾ ಮುನಿಂ ಸಮಾಮಂತ್ರ್ಯ ಪ್ರಯಾಣಾಯೋಪಚಕ್ರಮೇ ॥

ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಪಾರಾಯಣಾಂತೇ ಪುನಃ ಷಡಂಗನ್ಯಾಸಂ ಕೃತ್ವಾ ಓಂ ಮಾಂ ರುಂ ಜಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್

ಪಾರಾಯಣವಾದಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ಮಾಂ ರುಂ ಜಂ ಇತಿ ದಿಗ್ವಿಮೋಕಃ ಎಂದೆನ್ನಬೇಕು.

ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

॥ ಇತಿ ಶ್ರೀ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಪ್ರಥಮಸರ್ಗೇ ನ್ಯಾಸ ಧ್ಯಾನ ಜಪಕ್ರಮಃ ॥

ಇಂತು ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ಒಂದನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಪ್ರಥಮಸ್ಸರ್ಗಃ

॥ ಶ್ರೀ ಮಹಾದೇವ ಉವಾಚ ॥

ಅಥ ತತ್ರ ದಿನಂ ಸ್ಥಿತ್ವಾ ಪ್ರಭಾತೇ ರಘುನಂದನಃ । ಸ್ನಾತ್ವಾ ಮುನಿಂ ಸಮಾಮಂತ್ರ್ಯ ಪ್ರಯಾಣಾಯೋಪಚಕ್ರಮೇ ॥ ೧ ॥
ಮುನೇ ಗಚ್ಛಾಮಹೇ ಸರ್ವೇ ಮುನಿಮಂಡಲಮಂಡಿತಂ । ವಿಪಿನಂ ದಂಡಕಂ ಯತ್ರ ತ್ವಮಾಜ್ಞಾತುಮಿಹಾರ್ಹಸಿ ॥ ೨ ॥

ಅಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ಪ್ರಥಮ ಸರ್ಗವು.

೧. ಮಹಾದೇವನು ಹೇಳಿದನು–ಈ ರಘುರಾಮನು ಸೀತಾಲಕ್ಷ್ಮಣರೊಡನೆ ಅಲ್ಲಿ ಆ ದಿನವಿದ್ದು ಬೆಳಗಾದಮೇಲೆ ಸ್ನಾನಮಾಡಿ ಆ ಅತ್ರಿಮುನಿಗೆ ಪ್ರಯಾಣ ಮಾಡುತ್ತೇನೆಂದು ಹೇಳಿ ಅವನ ಅಪ್ಪಣೆಯನ್ನು ಪಡೆದು ಪ್ರಯಾಣಕ್ಕೆ ಸಿದ್ಧನಾದನು.

೨. ಎಲೈ ಋಷಿಯೆ! ಮುನಿಗಳು ಹೆಚ್ಚಾಗಿರುವ ದಂಡಕವೆಂಬ ಸ್ಥಳಕ್ಕೆ ಹೋಗುತ್ತೇವೆ. ನೀನು ದಯವಿಟ್ಟು ಅಪ್ಪಣೆಯನ್ನು ಕೊಡುವವನಾಗು.

ಮಾರ್ಗಪ್ರದರ್ಶನಾರ್ಥಾಯ ಶಿಷ್ಯಾನಾಜ್ಞಪ್ತುಮರ್ಹಸಿ । ಶ್ರುತ್ವಾ ರಾಮಸ್ಯ ವಚನಂ ಪ್ರಹಸ್ಯಾತ್ರಿರ್ಮಹಾಯಶಾಃ ॥ ೩ ॥
ಸರ್ವಸ್ಯ ಮಾರ್ಗದರ್ಶೀ ತ್ವಂ ತವ ಕೋ ಮಾರ್ಗದರ್ಶಕಃ । ತಥಾಪಿ ದರ್ಶಯಿಷ್ಯಂತಿ ತವ ಲೋಕಾನುಸಾರಿಣಃ ॥ ೪ ॥
ಇತಿ ಶಿಷ್ಯಾನ್ ಸಮಾದಿಶ್ಯ ಸ್ವಯಂ ಕಿಂಚಿತ್ತಮನ್ವಗಾತ್ । ರಾಮೇಣ ವಾರಿತಃ ಪ್ರೀತ್ಯಾ ಹ್ಯತ್ರಿಸ್ಸ್ವಭನಂ ಯಯೌ ॥ ೫ ॥
ಕ್ರೋಶಮಾತ್ರಂ ತತೋ ಗತ್ವಾ ದದರ್ಶ ಮಹತೀಂ ನದೀಂ । ಅತ್ರೇಶ್ಶಿಷ್ಯಾನುವಾಚೇದಂ ರಾಮೋ ರಾಜೀವಲೋಚನಃ ॥ ೬ ॥

---

೩. ನನಗೆ ದಾರಿಯನ್ನು ತೋರಿಸಲು ನಿನ್ನ ಶಿಷ್ಯರಿಗೆ ಅಪ್ಪಣೆಮಾಡಿ ಕಳುಹಿಸಿಕೊಡು. ಎಂದು ರಾಮನು ಹೇಳಲು ಈ ಮಾತನ್ನು ಕೇಳಿ ಅತ್ರಿಮಹರ್ಷಿಯು ನಕ್ಕನು.

೪. ಮತ್ತು ಎಲೈ ರಾಮನೆ ! ನೀನೇ ಎಲ್ಲರಿಗೂ ಮಾರ್ಗದರ್ಶಕನು. ನಿನಗೆ ಯಾರುತಾನೆ ಮಾರ್ಗವನ್ನು ತೋರಿಸುವುದಕ್ಕೆ ಸಮರ್ಥರು ? ಆದರೂ ಸಹ ಲೋಕವನ್ನೇ ಅನುಸರಿಸಿಕೊಂಡು ವ್ಯವಹರಿಸುತ್ತಿರುವ ನಿನಗೆ ಆ ದಾರಿಯನ್ನು ನನ್ನ ಶಿಷ್ಯರು ತೋರಿಸಿ ಕೊಡುತ್ತಾರೆ.

೫. ಹೀಗೆಂದು ಹೇಳಿ ತಾನೂ ಕೂಡ ಸ್ವಲ್ಪದೂರದವರೆಗೆ ಹೋಗಿ ದಾರಿಯನ್ನು ತೋರಿಸಿಕೊಟ್ಟನು. ಅನಂತರ ರಾಮನು ಬರಬೇಡ ವೆಂದು ಪ್ರೀತಿಯಿಂದ ನಿಷೇಧಿಸಲು ಅತ್ರಿಯು ಹಿಂದಿರುಗಿ ತನ್ನ ಮನೆಗೆ ಹೋದನು.

೬. ಅನಂತರ ಅವರೆಲ್ಲರೂ ಒಂದು ಕ್ರೋಶದಷ್ಟುದೂರದವರೆಗೆ ಹೋಗಲು ಅಲ್ಲೊಂದು ಮಹಾ ನದಿಯನ್ನು ಕಂಡರು. ಆಗ ರಾಮನು ಅತ್ರಿಯ ಶಿಷ್ಯರನ್ನು ಕುರಿತು ಎಲೈ ಶಿಷ್ಯರಿರಾ ! ಈ ನದಿಯನ್ನು ದಾಟುವುದಕ್ಕೆ ಯಾವುದಾದರೂ ಉಪಾಯವಿದೆಯೇ ? ಇಲ್ಲವೆ ? ಎಂದು ಕೇಳಿದನು.

ನದ್ಯಾಸ್ಸಂತರಣೇ ಕಶ್ಚಿದುಪಾಯೋ ವಿದ್ಯತೇ ನ ವಾ । ಊಚುಸ್ತೇ ವಿದ್ಯತೇ ನೌಕಾ ಸುದೃಢಾ ರಘುನಂದನ ॥ ೭ ॥

ತಾರಯಿಷ್ಯಾಮಹೇ ಯುಷ್ಮಾನ್ವಯಮೇವ ಕ್ಷಣಾದಿಹ । ತತೋ ನಾವಂ ಸಮಾರೋಪ್ಯ ಸೀತಾಂ ರಾಘವಲಕ್ಷ್ಮಣೌ ॥ ೮ ॥

ಕ್ಷಣಾತ್ಸಂತಾರಯಾಮಾಸುರ್ನದೀಂ ಮುನಿಕುಮಾರಕಾಃ । ರಾಮಾಭಿನಂದಿತಾಸ್ಸರ್ವೇ ಜಗ್ಮುರತ್ರೇರಥಾಶ್ರಮಂ ॥ ೯ ॥

ತಾನೇತ್ಯ ವಿಪಿನಂ ಘೋರಂ ಝಿಲ್ಲೀಝಂಕಾರನಾದಿತಂ । ನಾನಾಮೃಗಗಣಾಕೀರ್ಣಂ ಸಿಂಹವ್ಯಾಘ್ರಾದಿಭೀಷಣಂ ॥ ೧೦ ॥

ರಾಕ್ಷಸೈರ್ಘೋರರೂಪೈಶ್ಚ ಸೇವಿತಂ ರೋಮಹರ್ಷಣಂ । ಪ್ರವಿಶ್ಯ ವಿಪಿನಂ ಘೋರಂ ರಾಮೋ ಲಕ್ಷ್ಮಣಮಬ್ರವೀತ್ ॥ ೧೧ ॥

೭-೯. ಆಗ ಅವರು ಎಲೈ ರಘುರಾಮನೆ! ಇಲ್ಲಿ ಒಂದು ಬಲವಾದ ದೋಣಿಯಿದೆ. ನಾವುಗಳೇನೇ ಅದರಲ್ಲಿ ನಿಮ್ಮನ್ನು ಕೂರಿಸಿ ಕ್ಷಣಕಾಲದಲ್ಲಿ ಆಚೆಯ ದಡಕ್ಕೆ ದಾಟಿಸುವೆವು. ಎಂದರು. ಆಮೇಲೆ ಆ ಶಿಷ್ಯರು ರಾಮಲಕ್ಷ್ಮಣ ಸೀತೆಯರನ್ನು ದೋಣಿಯಲ್ಲಿ ಕೂರಿಸಿ ಕ್ಷಣಕಾಲದಲ್ಲಿಯೇ ಆ ನದಿಯನ್ನು ದಾಟಿಸಿದರು. ಅನಂತರ ರಾಮನು ಅವರಿಗೆ ಧನ್ಯವಾದಗಳನ್ನು ಹೇಳಿ ಗೌರವಿಸಲು ಅನಂತರ ಅತ್ರಿಯ ಆಶ್ರಮಕ್ಕೆ ಮತ್ತೆ ಬಂದರು.

೧೦. ಅವರೆಲ್ಲರೂ ಒಂದು ಬಗೆಯ ದುಂಬಿಯ ಝೇಂಕಾರದಿಂದ ಕೂಡಿರುವ ಆ ಕಾಡನ್ನು ಹೊಂದಿದರು. ಅಲ್ಲಿ ಅನೇಕವಾದ ಮೃಗಗಳಿದ್ದುವಲ್ಲದೆ ಸಿಂಹ, ಹುಲಿ, ಮುಂತಾದ ದುಷ್ಟಮೃಗಗಳೂ ಇದ್ದುವು.

೧೧. ಅಲ್ಲಿ ಘೋರವಾದ ಆಕಾರವುಳ್ಳ ಅನೇಕ ರಾಕ್ಷಸರೂ ಸಹ ವಾಸಮಾಡುತ್ತಿದ್ದರು. ಅವರನ್ನು ನೋಡಿದರೆ ರೋಮಾಂಚವಾಗುತ್ತಿದ್ದಿತು. ಅಂತಹ ಕಾಡಿಗೆ ಹೋಗಿ ರಾಮನು ಲಕ್ಷ್ಮಣನನ್ನು ಕುರಿತು ಇಂತೆಂದನು.

ಇತಃ ಪರಂ ಪ್ರಯತ್ನೇನ ಗಂತವ್ಯಂ ಸಹಿತೇನ ಮೇ । ಧನುರ್ಗುಣೇನ ಸಂಯೋಜ್ಯ ಶರಾನಪಿ ಕರೇಪಧತ್ ॥ ೧೨ ॥
ಅಗ್ರೇ ಯಾಸ್ಯಾಮ್ಯಹಂ ಪಶ್ಚಾತ್ತ್ವಮನ್ವೇಹಿ ಧನುರ್ಧರಃ । ಆವಯೋರ್ಮಧ್ಯಗಾ ಸೀತಾ ಮಾಯೇವಾತ್ಮಪರಾತ್ಮನೋಃ ॥ ೧೩ ॥
ಚಕ್ಷುಶ್ಚಾರಯ ಸರ್ವತ್ರ ದ್ರಷ್ಟುಂ ರಕ್ಷೋಭಯಂ ಮಹತ್ । ವಿದ್ಯತೇ ದಂಡಕಾರಣ್ಯೇ ಶ್ರುತಪೂರ್ವಮರಿಂದಮ ॥ ೧೪ ॥
ಇತ್ಯೇವಂ ಭಾಷಮಾಣೌ ತೌ ಜಗ್ಮತುಸ್ಸಾರ್ಧಯೋಜನಂ । ತತ್ರೈಕಾ ಪುಷ್ಕರಿಣ್ಯಾಸ್ತೇ ಕಲ್ಹಾರಕುಮುದೋತ್ಪಲೈಃ ॥ ೧೫ ॥

---

೧೨. ಎಲೈ ಲಕ್ಷ್ಮಣನೆ! ಇನ್ನುಮೇಲೆ ನಾವು ಮೂರುಜನರೂ ಜೊತೆಯಲ್ಲಿಯೇ ಬಹು ಜಾಗರೂಕತೆಯಿಂದ ಹೋಗಬೇಕು. ಧನುಸ್ಸಿಗೆ ಮೌರ್ವಿಯನ್ನು ಎತ್ತಿಕಟ್ಟಿ ಕೈಯ್ಯಲ್ಲಿ ಬಾಣವನ್ನು ಹಿಡಿದಿರಬೇಕು.

೧೩. ನಾನು ಮುಂದುಗಡೆಯಲ್ಲಿ ಹೋಗುತ್ತೇನೆ. ನೀನು ಹಿಂದುಗಡೆಯಲ್ಲಿ ಬಾ. ಮಾಯೆಯು ಆತ್ಮಪರಮಾತ್ಮರ ಮಧ್ಯದಲ್ಲಿರುವಂತೆ ಈ ಸೀತೆಯು ನಮ್ಮಿಬ್ಬರ ಮಧ್ಯದಲ್ಲಿ ಇರಲಿ.

೧೪. ಕಣ್ಣುಗಳನ್ನು ಎಲ್ಲಾ ಕಡೆಗೂ ತಿರುಗಿಸಿ ನೋಡುತ್ತಾ ಇರು. ಇಲ್ಲಿ ರಾಕ್ಷಸರ ಭಯವು ಬಹುವಾಗಿದೆ. ದಂಡಕಾರಣ್ಯದಲ್ಲಿ ರಾಕ್ಷಸರು ಬಹುವಾಗಿದ್ದಾರೆಂದು ನಾವು ಹಿಂದೆಯೇ ಕೇಳಿದ್ದೇವೆ.

೧೫–೧೬. ಹೀಗೆ ಮಾತನಾಡುತ್ತಾ ಇವರು ಒಂದೂವರೆ ಯೋಜನ ಹೋದರು. ಅಲ್ಲಿ ಒಂದು ಸರೋವರವಿದ್ದಿತು. ಅದರಲ್ಲಿ

ಅಂಬುಜೈಶ್ಶೀತತೋಯೇನ ಶೋಭಮಾನಾ ವ್ಯದೃಶ್ಯತ । ತತ್ಸಮೀಪಮಥೋ ಗತ್ವಾ ಪೀತ್ವಾ ತತ್ಸಲಿಲಂ ಶುಭಂ ॥ ೧೬ ॥
ಊಷುಸ್ತೇ ಸಲಿಲಾಭ್ಯಾಶೇ ಕ್ಷಣಂ ಛಾಯಾಮುಪಾಶ್ರಿತಾಃ । ತತೋ ದದೃಶುರಾಯಾಂತಂ ಮಹಾಸತ್ವಂ ಭಯಾನಕಂ ॥ ೧೭ ॥
ಕರಾಲದಂಷ್ಟ್ರವದನಂ ಭೀಷಯಂತಂ ಸ್ವಗರ್ಜಿತೈಃ । ವಾಮಾಂಸೇ ನ್ಯಸ್ತಶೂಲಾಗ್ರಗ್ರಥಿತಾನೇಕಮಾನುಷಂ ॥ ೧೮ ॥
ಭಕ್ಷಯಂತಂ ಗಜವ್ಯಾಘ್ರಮಹಿಷಂ ವನಗೋಚರಂ । ಜ್ಯಾರೋಪಿತಂ ಧನುರ್ಧೃತ್ವಾ ರಾಮೋ ಲಕ್ಷ್ಮಣಮಬ್ರವೀತ್ ॥ ೧೯ ॥

ಕಲ್ಹಾರಗಳೂ ಕುಮುದಗಳೂ ಇದ್ದುವು. ಕಮಲಗಳೂ ಇದ್ದುವು. ಅದರಲ್ಲಿರುವ ನೀರು ಬಹು ಶೀತಲವಾಗಿದ್ದಿತು. ನೋಡಲು ಬಹು ರಮ್ಯವಾಗಿದ್ದಿತು. ಇವರೆಲ್ಲರೂ ಅದರ ಹತ್ತಿರಕ್ಕೆ ಹೋದರು. ಅದರಲ್ಲಿ ನೀರು ಚನ್ನಾಗಿದ್ದಿತು. ಅದನ್ನು ಕುಡಿದರು.

೧೭. ಅನಂತರ ಆ ನೀರಿನ ಬಳಿಯಲ್ಲಿರುವ ನೆರಳಿನಲ್ಲಿ ಕ್ಷಣಕಾಲ ಕುಳಿತುಕೊಂಡರು. ಅನಂತರ ಅವರು ಭಯಂಕರವಾದ ದೊಡ್ಡದೊಂದು ಪ್ರಾಣಿಯು ಬರುತ್ತಿರುವುದನ್ನು ನೋಡಿದರು.

೧೮. ಆ ಪ್ರಾಣಿಗೆ ಭಯಂಕರವಾದ ಕೋರೆದಾಡೆಗಳಿದ್ದುವು. ಅದು ತಾನು ಗರ್ಜಿಸುತ್ತಿದ್ದುದರಿಂದ ಪ್ರಾಣಿಗಳಿಗೆ ಹೆದರಿಕೆಯನ್ನುಂಟು ಮಾಡುತ್ತಿದ್ದಿತು. ಅದು ಎಡಗಡೆಯ ಹೆಗಲಿನಮೇಲೆ ಒಂದು ಶೂಲವನ್ನಿಟ್ಟುಕೊಂಡಿದ್ದಿತು. ಅದರಲ್ಲಿ ಮನುಷ್ಯರ ದೇಹವನ್ನು ಸಿಕ್ಕಿಸಿಕೊಂಡಿದ್ದಿತು.

೧೯. ಬರುವಾಗ ಆ ಕಾಡಿನಲ್ಲಿ ಕಣ್ಣಿಗೆ ಬೀಳುವ ಹುಲಿ, ಆನೆ, ಕಾಡೆಮ್ಮೆಗಳನ್ನು ತಿನ್ನುತ್ತಿದ್ದಿತು. ಒಡನೆಯೇ ರಾಮನು ಧನುಸ್ಸಿಗೆ ಹೆದೆಯೇರಿಸಿ ಲಕ್ಷ್ಮಣನನ್ನು ಕುರಿತು ಇಂತೆಂದನು.

ಪಶ್ಯ ಭ್ರಾತರ್ಮಹಾಕಾಯೋ ರಾಕ್ಷಸೋಽಯಮುಪಾಗತಃ । ಆಯಾತ್ಯಭಿಮುಖಂ ನೋಽಗ್ರೇ ಭೀರೂಣಾಂ ಭಯವರ್ಧನಃ ॥ ೨೦ ॥

ಸಜ್ಜೀಕೃತಧನುಸ್ತಿಷ್ಠ ಮಾ ಭೈರ್ಜನಕನಂದಿನಿ । ಇತ್ಯುಕ್ತ್ವಾ ಬಾಣಮಾದಾಯ ಸ್ಥಿತೋ ರಾಮ ಇವಾಚಲಃ ॥ ೨೧ ॥

ಸ ತು ದೃಷ್ಟ್ವಾ ರಮಾನಾಥಂ ಜಾನಕೀಂ ಲಕ್ಷ್ಮಣಂ ತಥಾ । ಅಟ್ಟಹಾಸಂ ತತಃ ಕೃತ್ವಾ ಭೀಷಯನ್ನಿದಮಬ್ರವೀತ್ ॥ ೨೨ ॥

ಕೌ ಯುವಾಂ ಚಾಪತೂಣೀರಜಟಾವಲ್ಕಲಧಾರಿಣೌ । ಮುನಿವೇಷಧರೌ ಬಾಲೌ ಸ್ತ್ರೀಸಹಾಯೌ ಸುದುರ್ಮದೌ ॥ ೨೩ ॥

---

೨೦. ಎಲೈ ಸಹೋದರನೆ! ನೋಡು. ದೊಡ್ಡದಾದ ದೇಹವುಳ್ಳ ರಾಕ್ಷಸನೊಬ್ಬನು ಬರುತ್ತಿರುವನು. ನಮ್ಮಗಳ ಎದುರಿಗೇ ಬರುತ್ತಿರುವನು. ಇವನನ್ನು ನೋಡಿದರೆ ಅಂಜುಪುರುಕರು ಬಹುವಾಗಿ ಹೆದರುತ್ತಾರೆ

೨೧. ನೀನು ಧನುಸ್ಸನ್ನು ಸರಿಮಾಡಿಕೊಂಡು ನಿಲ್ಲು. ಎಲೈ ಸೀತೆಯೆ! ನೀನು ಹೆದರಬೇಡ. ಎಂದು ಹೇಳಿ ರಾಮನು ಧನುಸ್ಸನ್ನು ಸಿದ್ಧಪಡಿಸಿಕೊಂಡು ಬೆಟ್ಟದಂತೆ ಅಲ್ಲಾಡದೆ ನಿಂತಿದ್ದನು.

೨೨. ಆ ರಾಕ್ಷಸನು ಆ ರಾಮ ಲಕ್ಷ್ಮಣ ಸೀತೆಯರನ್ನು ನೋಡಿ ಗಟ್ಟಿಯಾಗಿ ನಕ್ಕು ಹೆದರಿಸುತ್ತಾ ಅವರನ್ನು ಕುರಿತು ಇಂತೆಂದನು.

೨೩. ಅಯ್ಯಾ! ನೀವಿಬ್ಬರೂ ಯಾರು? ಬಾಣ, ಬಿಲ್ಲು, ಬತ್ತಳಿಕೆಯನ್ನು ಧರಿಸಿರುವಿರಿ? ಜಟೆಯನ್ನೂ ನಾರುಮಡಿಯನ್ನೂ ಹೊಂದಿದ್ದೀರಿ. ಮುನಿವೇಷವುಳ್ಳವರಾಗಿದ್ದೀರಿ. ಇನ್ನೂ ಹುಡುಗರಾಗಿದ್ದೀರಿ. ಗಟ್ಟಿಗರಾಗಿದ್ದೀರಿ. ನಿಮ್ಮ ಜೊತೆಯಲ್ಲಿ ಒಬ್ಬ ಹೆಂಗಸೂ ಇದ್ದಾಳೆ

ಸುಂದರೌ ಬತ ಮೇ ವಕ್ತ್ರಪ್ರವಿಷ್ಟಕಬಳೋಪಮೌ | ಕಿಮರ್ಥಮಾಗತೌ ಘೋರಂ ವನಂ ವ್ಯಾಳನಿಷೇವಿತಂ ॥ ೨೪ ॥

ಶ್ರುತ್ವಾ ರಕ್ಷೋವಚೋ ರಾಮಃ ಸ್ಮಯಮಾನ ಉವಾಚ ತಂ । ಅಹಂ ರಾಮಸ್ತ್ವಯಂ ಭ್ರಾತಾ ಲಕ್ಷ್ಮಣೋ ಮಮ ಸಂಮತಃ ॥

ಏಷಾ ಸೀತಾ ಮಮ ಪ್ರಾಣವಲ್ಲಭಾ ವಯಮಾಗತಾಃ | ಪಿತೃವಾಕ್ಯಂ ಪುರಸ್ಕೃತ್ಯ ಶಿಕ್ಷಣಾರ್ಥಂ ಭವಾದೃಶಃ ॥ ೨೬ ॥

ಶ್ರುತ್ವಾ ತದ್ರಾಮವಚನಮಟ್ಟಹಾಸಮಥಾಕರೋತ್ | ವ್ಯಾದಾಯ ವಕ್ತ್ರಂ ಬಾಹುಭ್ಯಾಂ ಶೂಲಮಾದಾಯ ಸತ್ವರಂ ॥ ೨೭ ॥

---

೨೪. ಸುಂದರರಾಗಿದ್ದೀರಿ. ನೀವು ನನ್ನ ಬಾಯಿಗೆ ಬಂದ ಕಬಳದಂತಿದ್ದೀರಿ. ನನ್ನ ಬಾಯಿಗೆ ಬೀಳುತ್ತೀರಿ. ದುಷ್ಟಮೃಗಗಳಿರುವ ಘೋರವಾದ ಈ ಕಾಡಿಗೇಕೆ ಬಂದಿರುವಿರಿ?

೨೫–೨೬. ರಾಮನು ಈ ರಾಕ್ಷಸನ ಮಾತನ್ನು ಕೇಳಿ ನಗುತ್ತ ಇಂತೆಂದನು. ನಾನು ರಾಮನು. ಇವನು ನನಗೆ ಪ್ರೀತಿಪಾತ್ರನಾದ ತಮ್ಮನು. ಇವನ ಹೆಸರು ಲಕ್ಷ್ಮಣನೆಂದು. ಈಕೆಯು ಸೀತೆಯು. ನನಗೆ ಪ್ರಾಣಪ್ರಿಯಳು. ನಾವುಗಳು ತಂದೆಯ ಮಾತನ್ನು ನಡೆಸುವುದಕ್ಕೂ ನಿಮ್ಮಂಥಹವರನ್ನು ಶಿಕ್ಷಿಸುವುದಕ್ಕೂ ಈ ಕಾಡಿಗೆ ಬಂದಿದ್ದೇವೆ.

೨೭ ರಾಮನ ಈ ಮಾತನ್ನು ಕೇಳಿ ಆ ರಾಕ್ಷಸನು ಗಟ್ಟಿಯಾಗಿ ನಕ್ಕನು. ಮತ್ತು ಬಾಯನ್ನು ತೆರೆದುಕೊಂಡು ಎರಡು ಕೈಗಳಿಂದಲೂ ಶೂಲವನ್ನು ಎತ್ತಿ ಹಿಡಿದುಕೊಂಡು ಇವರ ಮೇಲೆ ಬೀಳಲು ಓಡಿ ಬಂದನು.

ವ್ಯಃಂ ನ ಜಾನಾಸಿ ರಾಮ ತ್ವಂ ವಿರಾಧಂ ಲೋಕವಿಶ್ರುತಂ । ಮದ್ಭಯಾನ್ಮುನಯಸ್ಸರ್ವೇ ತ್ಯಕ್ತ್ವಾ ವನಮಿತೋ ಗತಾಃ ॥ ೨೮ ॥
ಯದಿ ಜೀವಿತುಮಿಚ್ಛಾ ಚೇತ್ ತ್ಯಕ್ತ್ವಾ ಸೀತಾಂ ನಿರಾಯುಧಾಃ । ಪಲಾಯತ ನ ಚೇಚ್ಛೀಘ್ರಂ ಭಕ್ಷಯಾಮಿ ಯುವಾಮಹಂ ॥
ಇತ್ಯುಕ್ತ್ವಾ ರಾಕ್ಷಸಸ್ಸೀತಾಮಾದಾತುಮಭಿದುದ್ರುವೇ । ರಾಮಶ್ಚಿಚ್ಛೇದ ತದ್ಬಾಹೂ ಶರೇಣ ಪ್ರಹಸನ್ನಿವ ॥ ೩೦ ॥
ತತಃ ಕ್ರೋಧಪರೀತಾತ್ಮಾ ವ್ಯಾದಾಯ ವಿಕಟಂ ಮುಖಂ । ರಾಮಮಭ್ಯದ್ರವದ್ರಾಮಶ್ಚಿಚ್ಛೇದ ಪರಿಧಾವತಃ ॥ ೩೧ ॥

---

೨೮. ಎಲೈ ರಾಮನೆ! ನಾನು ನಿನಗೆ ಗೊತ್ತಿಲ್ಲವೆ? ನಾನು ವಿರಾಧನೆಂಬವನು. ಪ್ರಪಂಚದಲ್ಲಿಯೇ ಪ್ರಸಿದ್ಧನಾಗಿದ್ದೇನೆ. ನನ್ನ ಹೆದರಿಕೆಯಿಂದಲೇ ಋಷಿಗಳೆಲ್ಲರೂ ಈ ಕಾಡನ್ನು ಬಿಟ್ಟು ಓಡಿಹೋಗಿದ್ದಾರೆ.

೨೯. ನಿಮ್ಮಗಳಿಗೆ ಜೀವದಮೇಲೆ ಆಸೆಯಿದ್ದು ಬದುಕಬೇಕೆಂದಿದ್ದರೆ ಈ ಸೀತೆಯನ್ನು ಇಲ್ಲಿ ಬಿಟ್ಟು ಆಯುಧಗಳನ್ನು ಕೆಳಗೆ ಬಿಸುಟು ಬೇಗನೆ ಓಡಿರಿ. ಇಲ್ಲದಿದ್ದರೆ ನಿಮ್ಮಿಬ್ಬರನ್ನೂ ತಿಂದುಬಿಡುತ್ತೇನೆ.

೩೦. ಹೀಗೆಂದು ಹೇಳಿ ಆ ರಾಕ್ಷಸನು ಸೀತೆಯನ್ನು ಹಿಡಿದುಕೊಳ್ಳಲು ಎದುರಿಗೆ ಓಡಿಬಂದನು. ಒಡನೆಯೇ ರಾಮನು ನಗುತ್ತಲೇ ಆತನ ತೋಳುಗಳನ್ನು ಬಾಣಗಳಿಂದ ಕತ್ತರಿಸಿದನು.

೩೧. ಒಡನೆಯೇ ಆತನಿಗೆ ಕೋಪಬರಲು ಬಾಯನ್ನು ಭಯಂಕರವಾಗಿ ತೆರೆದುಕೊಂಡು ರಾಮನನ್ನು ನುಂಗಿಬಿಡಲು ಬಂದನು. ಆಗ ರಾಮನು ಓಡಿಬರುತ್ತಿರುವ ಅವನ ಕಾಲುಗಳನ್ನು ಬಾಣಗಳಿಂದ ಕತ್ತರಿಸಿ ಬಿಟ್ಟನು.

ಪದದ್ವಯಂ ವಿರಾಧಸ್ಯ ತದದ್ಭುತಮಿವಾಭವತ್ । ತತಸ್ಸರ್ಪ ಇವಾಸ್ಯೇನ ಗ್ರಸಿತುಂ ರಾಮಮಾಪತತ್ ॥ ೩೨ ॥

ರಾಮೋಽರ್ಧಚಂದ್ರಾಕಾರೇಣ ಬಾಣೇನಾಸ್ಯ ಮಹಚ್ಛಿರಃ । ಚಿಚ್ಛೇದ ರುಧಿರೌಘೇಣ ಪಪಾತ ಧರಣೀತಲೇ ॥ ೩೩ ॥

ತತಸ್ಸೀತಾ ಸಮಾಲಿಂಗ್ಯ ಪ್ರಶಶಂಸ ರಘೂತ್ತಮಂ । ತತೋ ದುಂದುಭಯೋ ನೇದುರ್ದಿವಿ ದೇವಗಣೇರಿತಾಃ ॥ ೩೪ ॥

ನನೃತುಶ್ಚಾಪ್ಸರೋ ಹೃಷ್ಟಾಃ ಜಗುರ್ಗಂಧರ್ವಕಿನ್ನರಾಃ ॥ ೩೫ ॥

ವಿರಾಧಕಾಯಾದತಿಸುಂದರಾಕೃತಿರ್ವಿಭ್ರಾಜಮಾನೋ ವಿಮಲಾಂಬರಾವೃತಃ ।
ಪ್ರತಪ್ತಚಾಮೀಕರಚಾರುಭೂಷಣೋಽಪ್ಯದೃಶ್ಯತಾಗ್ರೇ ಗಗನೇ ರವಿರ್ಯಥಾ ॥ ೩೬ ॥

೩೨-೩೩. ಅದು ಆಶ್ಚರ್ಯಕರವಾಗಿದ್ದಿತು. ಆ ರಾಕ್ಷಸನು ಅಷ್ಟಕ್ಕೆ ಸುಮ್ಮನಿರದೆ ಬಾಯಿಂದ ರಾಮನನ್ನು ಹಿಡಿದು ತಿನ್ನಬೇಕೆಂದು ಹಾವಿನಂತೆ ಹೊರಳುತ್ತಾ ಬಂದನು. ಆಗ ರಾಮನು ಅರ್ಧಚಂದ್ರಾಕಾರವಾದ ಬಾಣದಿಂದ ಅವನ ತಲೆಯನ್ನು ಕತ್ತರಿಸಿ ಬಿಟ್ಟನು. ಅವನಿಂದ ಬಂದ ರಕ್ತದಿಂದ ಭೂಮಿಯೆಲ್ಲವೂ ನೆನೆದುಹೋಯಿತು. ಒಡನೆಯೇ ಅವನು ಕೆಳಗೆ ಬಿದ್ದು ಬಿಟ್ಟನು

೩೪-೩೫. ಆಗ ಸೀತೆಯು ಶ್ರೀರಾಮನನ್ನಾಲಿಂಗಿಸಿಕೊಂಡು ಬಹುವಾಗಿ ಶ್ಲಾಘಿಸಿದಳು. ಆಗ ಆಕಾಶದಲ್ಲಿ ದೇವತೆಗಳು ದುಂದುಭಿಗಳನ್ನು ಬಡಿದರು. ಅಪ್ಸರ ಸ್ತ್ರೀಯರು ಸಂತೋಷದಿಂದ ನರ್ತನವಾಡಿದರು. ಗಂಧರ್ವರೂ ಕಿನ್ನರರೂ ಸಂಗೀತವನ್ನು ಹಾಡಿದರು.

೩೬. ಆಗ ಆ ವಿರಾಧನ ದೇಹದಿಂದ ಒಂದು ಮನೋಹರವಾದ ವ್ಯಕ್ತಿಯು ಹೊರಗೆ ಬಂದಿತು. ಒಳ್ಳೆಯ ಬಟ್ಟೆಗಳನ್ನೂ ಒಡವೆಗಳನ್ನೂ ಹಾಕಿಕೊಂಡಿದ್ದಿತು. ಆ ವ್ಯಕ್ತಿಯು ಆಕಾಶದಲ್ಲಿ ನಿಂತಿರಲು ಸೂರ್ಯನಂತೆ ಕಂಡುಬರುತ್ತಿದ್ದಿತು.

ಪ್ರಣಮ್ಯ ರಾಮಂ ಪ್ರಣತಾರ್ತಿಹಾರಿಣಂ ಭವಪ್ರವಾಹೋಪರಮಂ ಘೃಣಾಕರಂ ।
ಪ್ರಣಮ್ಯ ಭೂಯಃ ಪ್ರಣನಾಮದಂಡವತ್ಪ್ರಪನ್ನಸರ್ವಾರ್ತಿಹರಂ ಪ್ರಸನ್ನಧೀಃ ॥ ೩೭ ॥

ಶ್ರೀರಾಮ ರಾಜೀವದಳಾಯತಾಕ್ಷ ವಿದ್ಯಾಧರೋಽಹಂ ವಿಪುಲಪ್ರಕಾಶಃ ।
ದೂರ್ವಾಸಸಾಕಾರಣಕೋಪಮೂರ್ತಿನಾ ಶಪ್ತಃ ಪುರಾ ಸೋದ್ಯ ವಿಮೋಚಿತಸ್ತ್ವಯಾ ॥ ೩೮ ॥

ಇತಃ ಪರಂ ತ್ವಚ್ಚರಣಾರವಿಂದಯೋಃ ಸ್ಮೃತಿಸ್ಸದಾ ಮೇಽಸ್ತು ಭವೋಪಶಾಂತಯೇ ।
ತ್ವನ್ನಾಮಸಂಕೀರ್ತನಮೇವ ವಾಣೀ ಕರೋತು ಮೇ ಕರ್ಣಪುಟಂ ತ್ವದೀಯಂ ॥ ೩೯ ॥

---

೩೭. ಆಗ ಆ ವ್ಯಕ್ತಿಯು ಶರಣಾಗತರ ದುಃಖವನ್ನು ನಾಶಮಾಡುವ ಸಂಸಾರವೆಂಬ ಈ ಜನನ ಮರಣದ ಪ್ರವಾಹವನ್ನು ಕೊನೆಗಾಣಿಸುವ, ಕೃಪಾಶಾಲಿಯಾದ ಶ್ರೀರಾಮನಿಗೆ ನಮಸ್ಕರಿಸಿ ಕಷ್ಟಗಳನ್ನೆಲ್ಲಾ ನಾಶಮಾಡುವವನೆ ! ನಿನಗೆ ನಮಸ್ಕಾರವು. ಎಂದೆನ್ನುತ್ತಾ ಮತ್ತೆ ಮತ್ತೆ ದೀರ್ಘದಂಡ ಪ್ರಣಾಮವನ್ನು ಮಾಡುತ್ತಿದ್ದಿತು.

೩೮. ಕಮಲದಂತೆ ಕಣ್ಣುಗಳುಳ್ಳ ಎಲೈ ಶ್ರೀರಾಮನೆ ! ನಾನು ವಿಪುಲಪ್ರಕಾಶನೆಂಬ ವಿದ್ಯಾಧರನು. ಕಾರಣವಿಲ್ಲದೇನೇ ಕೋಪ ಹೊಂದುವ ದೂರ್ವಾಸ ಮಹರ್ಷಿಯು ಹಿಂದೆ ನನಗೆ ಶಾಪಕೊಟ್ಟಿದ್ದನು. ಅದನ್ನು ಈಗ ನೀನು ನಾಶಮಾಡಿದೆ.

೩೯. ಎಲೈ ರಾಮನೆ ! ಇನ್ನುಮೇಲೆ ನನಗೆ ನಿನ್ನ ಪಾದಾರವಿಂದಗಳ ಸ್ಮರಣೆಯು ಯಾವಾಗಲೂ ಬರಲಿ. ಆದರಿಂದ ಆ ಸಂಸಾರದ ತೊಂದರೆಯು ನಾಶವಾಗುತ್ತದೆ. ನನ್ನ ನಾಲಿಗೆಯು ಯಾವಾಗಲೂ ನಿನ್ನ ನಾಮಸಂಕೀರ್ತನವನ್ನೇ ಮಾಡಲಿ. ನನ್ನ ಕಿವಿಗಳೂ ಕೂಡ ಯಾವಾಗಲೂ ನಿನ್ನ ನಾಮಗಳನ್ನೇ ಕೇಳುತ್ತಿರಲಿ.

ಕಥಾಮೃತಂ ಪಾತು ಕರದ್ವಯಂ ತೇ ಪಾದಾರವಿಂದಾರ್ಚನಮೇವ ಕುರ್ಯಾತ್ ।
ಶಿರಶ್ಚ ತೇ ಪಾದಯುಗ ಪ್ರಣಾಮಂ ಕರೋತು ನಿತ್ಯಂ ಭವದೀಯಮೇವ ॥ ೪೦ ॥

ನಮಸ್ತುಭ್ಯಂ ಭಗವತೇ ವಿಶುದ್ಧಜ್ಞಾನಮೂರ್ತಯೇ । ಆತ್ಮಾರಾಮಾಯ ರಾಮಾಯ ಸೀತಾರಾಮಾಯ ವೇಧಸೇ ॥ ೪೧ ॥

ಪ್ರಪನ್ನಂ ಪಾಹಿ ಮಾಂ ರಾಮ ಯಾಸ್ಯಾಮಿ ತ್ವದನುಜ್ಞಯಾ । ದೇವಲೋಕಂ ರಘುಶ್ರೇಷ್ಠ ಮಾಯಾ ಮಾಂ ಮಾವೃಣೋತು ತೇ

ಇತಿ ವಿಜ್ಞಾಪಿತಸ್ತೇನ ಪ್ರಸನ್ನೋ ರಘುನಂದನಃ । ದದೌ ವರಂ ತದಾ ಪ್ರೀತೋ ವಿರಾಧಾಯ ಮಹಾಮತಿಃ ॥ ೪೩ ॥

---

೪೦. ನನ್ನ ಕೈಗಳೆರಡೂ ಯಾವಾಗಲೂ ನಿನ್ನ ಪಾದಾರವಿಂದಗಳ ಪೂಜೆಯನ್ನೇ ಮಾಡಲಿ. ನನ್ನ ತಲೆಯೂ ಸಹ ನಿನ್ನ ಪಾದಾರವಿಂದಗಳಿಗೇನೇ ಯಾವಾಗಲೂ ನಮಸ್ಕಾರವನ್ನು ಮಾಡುತ್ತಿರಲಿ.

೪೧. ಶುದ್ಧವಾದ ಜ್ಞಾನಮೂರ್ತಿಯಾದ ನಿನಗೆ ನಮಸ್ಕಾರವು. ಆತ್ಮನಲ್ಲಿಯೇ ಸೇರಿ ಸುಖಪಡುವ, ಸೀತೆಯೊಡನೆ ಕೂಡಿದ ಜಗತ್ಕರ್ತೃವಾದ ರಾಮನಾದ ನಿನಗೆ ನಮಸ್ಕಾರವು.

೪೨. ಎಲೈ ರಾಮನೆ ! ನಿನಗೆ ನಾನು ಶರಣಾಗತನಾಗಿದ್ದೇನೆ. ನನ್ನನ್ನು ಕಾಪಾಡು. ನೀನು ಅನುಮತಿಯನ್ನು ಕೊಟ್ಟರೆ ನಾನು ದೇವಲೋಕಕ್ಕೆ ಹೋಗುತ್ತೇನೆ. ಮಾಯೆಯು ನನ್ನನ್ನು ಆವರಿಸದಿರಲಿ.

೪೩. ಆ ವಿದ್ಯಾಧರನು ಇಂತು ವಿಜ್ಞಾಪನೆಯನ್ನು ಮಾಡಿಕೊಳ್ಳಲು ರಘುರಾಮನು ಪ್ರಸನ್ನನಾದನು. ಅನಂತರ ಆ ವಿರಾಧನಾಗಿದ್ದ ವಿದ್ಯಾಧರನಿಗೆ ವರಗಳನ್ನು ಕೊಟ್ಟನು.

ಗಚ್ಛ ವಿದ್ಯಾಧರಶ್ರೇಷ್ಠ ಮಾಯಾದೋಷಗುಣಾ ಜಿತಾಃ । ತ್ವಯಾ ಮದ್ದರ್ಶನಾತ್ಸದ್ಯೋ ಮುಕ್ತೋ ಜ್ಞಾನವತಾಂ ವರಃ॥ ೪೪ ॥
ಮದ್ಭಕ್ತಿರ್ದುರ್ಲಭಾ ಲೋಕೇ ಜಾತಾ ಚೇನ್ಮುಕ್ತಿದಾಯಿಕಾ । ಅತಸ್ತ್ವಂ ಭಕ್ತಿಸಂಪನ್ನಃ ಪರಂ ಯಾಹಿ ಮಮಾಜ್ಞಯಾ ॥ ೪೫ ॥

ರಾಮೇಣ ರಕ್ಷೋನಿಧನಂ ಸುಘೋರಂ ಶಾಪಾದ್ವಿಮುಕ್ತಿಂ ವರದಾನಮೇವಂ ।
ವಿದ್ಯಾಧರತ್ವಂ ಪುನರೇವ ಲಬ್ಧಂ ರಾಮಂ ಗೃಣನ್ನೇತಿ ನರೋಽಖಿಲಾರ್ಥಾನ್ ॥ ೪೬ ॥

ಇತಿ ಶ್ರೀಮದಧ್ಯಾತ್ಮ ರಾಮಾಯಣೇ ಅರಣ್ಯಕಾಂಡೇ ಪ್ರಥಮಸ್ಸರ್ಗ ಸ್ಸಮಾಪ್ತಃ.

---

೪೪. ಎಲೈ ವಿದ್ಯಾಧರ ಶ್ರೇಷ್ಠನೆ! ನೀನು ಹೋಗು. ಮಾಯೆಯ ದೋಷಗಳೆಲ್ಲವನ್ನೂ ಜಯಿಸಿದ್ದೀಯೆ. ನನ್ನ ದರ್ಶನವಾದುದರಿಂದಲೇ ನಿನಗೆ ಮುಕ್ತಿಯು ದೊರಕಿದೆ. ನೀನು ಜ್ಞಾನಿಗಳಲ್ಲಿ ಶ್ರೇಷ್ಠನಾಗಿದ್ದೀಯೆ.

೪೫. ಎಲೈ ವಿದ್ಯಾಧರನೆ! ನನ್ನಲ್ಲಿ ಜನಗಳಿಗೆ ಭಕ್ತಿಯು ಹುಟ್ಟುವುದೇ ಲೋಕದಲ್ಲಿ ಕಷ್ಟವಾಗಿರುವುದು. ಆ ಭಕ್ತಿಯೇನಾದರೂ ಉಂಟಾದರೆ ಅವನಿಗೆ ಮುಕ್ತಿಯನ್ನು ಕೊಟ್ಟೇ ಕೊಡುತ್ತೇನೆ. ನೀನಾದರೋ ಭಕ್ತಿಯಿಂದ ಕೂಡಿದ್ದೀಯೆ. ನನ್ನ ಅಪಣೆಯಿಂದ ನೀನು ದೇವಲೋಕಕ್ಕೆ ಹೋಗು.

೪೬. ಇಂತು ರಾಮನಿಂದ ಆ ಘೋರರೂಪಿಯಾದ ರಾಕ್ಷಸನು ವಧಿಸಲ್ಪಟ್ಟು ಶಾಪದಿಂದ ಬಿಡುಗಡೆಯನ್ನು ಹೊಂದಿ ವರವನ್ನು ಹೊಂದಿದನು. ಮತ್ತೆ ವಿದ್ಯಾಧರನೂ ಆದನು. ಆದ್ದರಿಂದ ಮನುಷ್ಯನಾದವನು ರಾಮನನ್ನು ಭಜಿಸಿದರೆ ಎಲ್ಲಾ ಇಷ್ಟಗಳನ್ನೂ ಹೊಂದುತ್ತಾನೆ.

ಇಂತು ಶ್ರೀಮದಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ಮೊದಲನೆಯ ಸರ್ಗವು ಮುಗಿದುದು.

ಅಥ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ದ್ವಿತೀಯಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಓಂ ಅಸ್ಯ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ದ್ವಿತೀಯಸರ್ಗಸ್ಯ

ಶ್ರೀ ಭಗವಾನ್ ಬಾದರಾಯಣ ಋಷಿಃ, ಗಾಯತ್ರೀ ಛಂದಃ, ಓಂ ನಮೋ ನಾರಾಯಣೋ ದೇವತಾ, ಶ್ರೀ ಲಕ್ಷ್ಮೀ ಬೀಜಂ, ಪರಮಾ ಶಕ್ತಿಃ, ಅವ್ಯಕ್ತಂ ಕೀಲಕಂ, ಅಮುಕಸಂಪುಟೀಕರಣ ಸಿದ್ಧ್ಯರ್ಥಂ ಅಮುಕಮಂತ್ರ ಲೋಮ ವಿಲೋಮ ಸಂಪುಟೀಕರಣ ದಶಾಧ್ಯಾಯೀ ಮಂತ್ರಾಷ್ಟಾಕ್ಷರ ಸಂಯುಕ್ತಂ ದ್ವಿತೀಯಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ.

ಓಂ ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ಎರಡನೆಯ ಸರ್ಗಕ್ಕೆ

ಶ್ರೀ ಭಗವಾನ್ ಬಾದರಾಯಣನು ಋಷಿಯು, ಗಾಯತ್ರೀ ಛಂದಸ್ಸು, ಓಂ ನಮೋ ನಾರಾಯಣ ಎಂಬುದು ದೇವತೆಯು. ಶ್ರೀ ಲಕ್ಷ್ಮೀಃ ಎಂಬುದು ಬೀಜವು, ಪರಮಾ ಎಂಬುದು ಶಕ್ತಿಯು, ಅವ್ಯಕ್ತಂ ಎಂಬುದು ಕೀಲಕವು, ಇಂತಹ ಸಂಪುಟೀಕರಣದ ಸಿದ್ಧಿಗೋಸ್ಕರ ಇಂತಹ ಮಂತ್ರದ ಲೋಮ ವಿಲೋಮ ಸಂಪುಟೀಕರಣದ ದಶಾಧ್ಯಾಯದಲ್ಲಿ ಎಂಟಕ್ಷರದ ಮಂತ್ರದಿಂದ ಕೂಡಿದ ದ್ವಿತೀಯಸರ್ಗದ ನ್ಯಾಸ ಧ್ಯಾನ ಜಪಗಳನ್ನು ಮಾಡುತ್ತೇನೆ. ಎಂದು ಸಂಕಲ್ಪ ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ಮಾಂ ರುಂ ಯಂ ಅಂಗುಷ್ಠಾಭ್ಯಾಂ ನಮಃ
ಓಂ ಮಾಂ ರುಂ ಯಂ ತರ್ಜನೀಭ್ಯಾಂ ನಮಃ
ಓಂ ಮಾಂ ರುಂ ಯಂ ಮಧ್ಯಮಾಭ್ಯಾಂ ನಮಃ
ಓಂ ಮಾಂ ರುಂ ಯಂ ಅನಾಮಿಕಾಭ್ಯಾಂ ನಮಃ
ಓಂ ಮಾಂ ರುಂ ಯಂ ಕನಿಷ್ಠಿಕಾಭ್ಯಾಂ ನಮಃ
ಓಂ ಮಾಂ ರುಂ ಯಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಷಡಂಗನ್ಯಾಸವು

ಓಂ ಮಾಂ ರುಂ ಯಂ ಹೃದಯಾಯ ನಮಃ

ಓಂ ಮಾಂ ರುಂ ಯಂ ಶಿರಸೇ ಸ್ವಾಹಾ

ಓಂ ಮಾಂ ರುಂ ಯಂ ಶಿಖಾಯೈ ವಷಟ್

ಓಂ ಮಾಂ ರುಂ ಯಂ ಕವಚಾಯ ಹುಂ

ಓಂ ಮಾಂ ರುಂ ಯಂ ನೇತ್ರತ್ರಯಾಯ ವೌಷಟ್

ಓಂ ಮಾಂ ರುಂ ಯಂ ಅಸ್ತ್ರಾಯ ಫಟ್

ಓಂ ಮಾಂ ರುಂ ಯಂ ಇತಿ ದಿಗ್ಬಂಧಃ

ಓಂ ಮಾಂ ರುಂ ಯಂ ಎಂದು ದಿಗ್ಬಂಧವು

॥ ಅಥ ಧ್ಯಾನಂ ॥

ಧ್ಯಾನವು

ವಿರಾಧೇ ಸ್ವರ್ಗತೇ ರಾಮೋ ಲಕ್ಷ್ಮಣೇನ ಚ ಸೀತಯಾ । ಜಗಾಮ ಶರಭಂಗಸ್ಯ ವನಂ ಸರ್ವಸುಖಾವಹಂ ॥

ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಪಾರಾಯಣಾಂತೇ ಪುನಃ ಹೃದಯಾದಿನ್ಯಾಸಂ ಕೃತ್ವಾ ಓಂ ಮಾಂ ರುಂ ಯಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್

ಪಾರಾಯಣವಾದಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ಮಾಂ ರುಂ ಯಂ **ಇತಿ** ದಿಗ್ವಿಮೋಕಃ ಎಂದೆನ್ನಬೇಕು.

ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

॥ ಇತಿ ಶ್ರೀ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ದ್ವಿತೀಯಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ ॥

ಇಂತು ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ಎರಡನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

|| ಶ್ರೀರಸ್ತು ||

ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ದ್ವಿತೀಯಸ್ಸರ್ಗಃ

|| ಶ್ರೀ ಮಹಾದೇವ ಉವಾಚ ||

ವಿರಾಧೇ ಸ್ವರ್ಗತೇ ರಾಮಃ ಲಕ್ಷ್ಮಣೇನ ಚ ಸೀತಯಾ । ಜಗಾಮ ಶರಭಂಗಸ್ಯ ವನಂ ಸರ್ವಸುಖಾವಹಂ || ೧ ||

ಶರಭಂಗಸ್ತತೋ ದೃಷ್ಟ್ವಾ ರಾಮಂ ಸೌಮಿತ್ರಿಣಾ ಸಹ । ಆಯಾಂತಂ ಸೀತಯಾ ಸಾರ್ಧಂ ಸಂಭ್ರಮಾದುತ್ಥಿತಸ್ಸುಧೀಃ || ೨ ||

ಶ್ರೀಮದಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ದ್ವಿತೀಯ ಸ್ಸರ್ಗವು.

೧. ಮಹಾದೇವನು ಹೇಳಿದನು-ಈ ರೀತಿಯಾಗಿ ವಿರಾಧನು ಸ್ವರ್ಗವನ್ನು ಹೊಂದಿದಮೇಲೆ ಶ್ರೀರಾಮನು ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ ಎಲ್ಲಾ ಅನುಕೂಲಗಳೂ ಇರುವ ಶರಭಂಗ ಋಷಿಯ ಆಶ್ರಮಕ್ಕೆ ಹೋದನು.

೨. ಶ್ರೀರಾಮನು ಲಕ್ಷ್ಮಣ ಸೀತೆಯರೊಡನೆ ತನ್ನ ಆಶ್ರಮಕ್ಕೆ ಬರುತ್ತಿರುವುದನ್ನು ದೂರದಿಂದಲೇ ನೋಡಿ ಶರಭಂಗನು ಬೇಗನೆ ಮೇಲಕ್ಕೆದ್ದನು.

ಅಭಿಗಮ್ಯ ಸುಸಂಪೂಜ್ಯ ವಿಷ್ಟರೇಷೂಪವೇಶಯತ್ । ಆತಿಥ್ಯ ಮಕರೋತ್ತೇಷಾಂ ಕಂದಮೂಲಫಲಾದಿಭಿಃ ॥ ೩ ॥

ಪ್ರೀತ್ಯಾಹ ಶರಭಂಗೋಽಪಿ ರಾಮಂ ಭಕ್ತಪರಾಯಣಂ । ಬಹುಕಾಲಮಿಹೈವಾಸಂ ತಪಸೇ ಕೃತನಿಶ್ಚಯಃ ॥ ೪ ॥

ತವ ಸಂದರ್ಶನಾಕಾಂಕ್ಷೀ ರಾಮ ತ್ವಂ ಪರಮೇಶ್ವರಃ । ಅದ್ಯ ಮತ್ತಪಸಾಂ ಸಿದ್ಧಂ ಯತ್ಪುಣ್ಯಂ ಬಹು ವಿದ್ಯತೇ ॥
ತತ್ಸರ್ವಂ ತವ ದಾಸ್ಯಾಮಿ ತತೋ ಮುಕ್ತಿಂ ವ್ರಜಾಮ್ಯಹಂ ॥ ೫ ॥

---

೩. ಎದುರಿಗೆ ಹೋಗಿ ಆ ರಾಮನಿಗೆ ಪೂಜೆಮಾಡಿ ಪೀಠವನ್ನು ಕೊಟ್ಟು ಅದರಮೇಲೆ ಕೂರಿಸಿದನು. ಗೆಡ್ಡೆ ಗೆಣಸುಗಳನ್ನು ಕೊಟ್ಟು, ಅತಿಥಿ ಸತ್ಕಾರವನ್ನು ಮಾಡಿದನು.

೪. ಆಗ ಶರಭಂಗನು ಭಕ್ತರಲ್ಲಿ ಆಸಕ್ತನಾದ ಶ್ರೀರಾಮನನ್ನು ಕುರಿತು ಪ್ರೀತಿಯಿಂದ ಇಂತೆಂದನು. ಎಲೈ ರಾಮನೆ! ತಪಸ್ಸಿನಲ್ಲಿ ಆಸಕ್ತನಾಗಿ ಬಹುಕಾಲದಿಂದ ಇಲ್ಲಿಯೇ ಇದ್ದುಕೊಂಡಿದ್ದೇನೆ.

೫. ಎಲೈ ರಾಮನೆ! ನಿನ್ನ ದರ್ಶನವನ್ನು ನಿರೀಕ್ಷಿಸುತ್ತಾ ಇಲ್ಲಿಯೇ ಆಗಿನಿಂದಲೂ ತವಕಪಟ್ಟುಕೊಂಡಿದ್ದೇನೆ. ನೀನು ಸಾಕ್ಷಾತ್ ಪರಮೇಶ್ವರನು. ನಾನು ಇಲ್ಲಿಯವರೆವಿಗೂ ಎಷ್ಟು ತಪಸ್ಸನ್ನು ಮಾಡಿರುವನೋ ಆದರ ಪುಣ್ಯವು ಬಹುವಾಗಿರುವುದು. ಈಗ ಅವೆಲ್ಲವನ್ನೂ ನಿನಗೆ ಕೊಡುತ್ತೇನೆ. ಅದರಿಂದ ನನಗೆ ಮುಕ್ತಿಯು ಬರುತ್ತದೆ. ಎಂದು ಪ್ರೀತಿಯಿಂದ ಹೇಳಿದನು.

ಸಮರ್ಪ್ಯ ರಾಮಸ್ಯ ಮಹತ್ಸುಪುಣ್ಯಫಲಂ ವಿರಕ್ತಶ್ಶರಭಂಗಯೋಗೀ ।
ಚಿತಿಂ ಸಮಾರೋಹಯದಪ್ರಮೇಯಂ ರಾಮಂ ಸಸೀತಂ ಸಹಸಾ ಪ್ರಣಮ್ಯ || ೬ ||

ಧ್ಯಾಯಂಶ್ಚಿರಂ ರಾಮಮಶೇಷಹೃತ್ಸ್ಥಂ ದೂರ್ವಾದಳಶ್ಯಾಮಲಮಂಬುಜಾಕ್ಷಂ ।
ಚೀರಾಂಬರಂಸ್ನಿಗ್ಧಜಟಾ ಕಲಾಪಂ ಸೀತಾಸಹಾಯಂ ಶ್ರಿತಲಕ್ಷ್ಮಣಂ ತಂ || ೭ ||

ಕೋ ವಾ ದಯಾಳುಃ ಸ್ಮೃತಕಾಮಧೇನುರನ್ಯೋ ಜಗತ್ಯಾಂ ರಘುನಾಯಕಾದಹೋ ।
ಸ್ಮೃತೋ ಮಯಾ ನಿತ್ಯಮನನ್ಯ ಭಾಜಾ ಜ್ಞಾತ್ವಾ ಸ್ಮೃತಿಂ ಮೇ ಸ್ವಯಮೇವ ಯಾತಃ || ೮ ||

---

೬. ಇಂತು ಹೇಳಿದ ಆ ಶರಭಂಗನು ವೈರಾಗ್ಯವನ್ನು ಹೊಂದಿ ಆ ತಪಸ್ಸಿನ ಪುಣ್ಯಫಲವೆಲ್ಲವನ್ನೂ ಆ ರಾಮನಿಗೆ ಕೊಟ್ಟುಬಿಟ್ಟನು. ಮತ್ತು ತಾನು ಈ ದೇಹವನ್ನು ಬಿಟ್ಟು ಬಿಡಲು ನಿಶ್ಚಯಿಸಿ ಸೀತಾರಾಮರಿಬ್ಬರಿಗೂ ನಮಸ್ಕರಿಸಿ ಒಂದು ಚಿತೆಯನ್ನು ಒಡ್ಡಿ ಅದರಮೇಲಕ್ಕೆ ಹತ್ತಿದನು.

೭. ಎಲ್ಲರ ಹೃದಯದಲ್ಲಿಯೂ ಇದ್ದುಕೊಂಡಿರುವ, ಗರಿಕೆಯ ಚಿಗುರಿನಂತೆ ಬಣ್ಣವುಳ್ಳ, ಕಮಲದಂತೆ ಕಣ್ಣುಳ್ಳ, ನಾರುಡೆಯನ್ನುಟ್ಟಿರುವ ಚನ್ನಾಗಿರುವ ಜಟೆಗಳುಳ್ಳ, ಸೀತೆಯನ್ನು ಜೊತೆಯಲ್ಲಿಟ್ಟುಕೊಂಡು ಲಕ್ಷ್ಮಣನಿಂದ ಆಶ್ರಯಿಸಲ್ಪಟ್ಟ, ಆ ಶ್ರೀರಾಮನನ್ನು ಬಹುಕಾಲ ಧ್ಯಾನಿಸಿದನು.

೮. ಸ್ಮರಿಸಿಕೊಂಡವರಿಗೆ ಕಾಮಧೇನುವಿನಂತೆ ಕೇಳಿದುದನ್ನು ಕೊಡುವ ರಘುನಾಥನಾದ ಈ ರಾಮನಿಗಿಂತಲೂ ಲೋಕದಲ್ಲಿ ದಯಾಶಾಲಿಯಾದವನು ಬೇರೆ ಯಾವನು ತಾನೆ ಇದ್ದಾನೆ! ನಿತ್ಯವೂ ನಾನು ಮತ್ತೊಬ್ಬರನ್ನು ಸ್ಮರಿಸದೆ ಅವನನ್ನೇ ಸ್ಮರಿಸುತ್ತಿದ್ದೆ. ಈ ರೀತಿಯಾದ ಬುದ್ಧಿಯನ್ನು ತಿಳಿದು ಆ ಮಹಾನುಭಾವನು ತಾನಾಗಿಯೇ ಇಲ್ಲಿಗೆ ಬಂದಿರುವನಲ್ಲ!

ಪಶ್ಯತ್ವಿದಾನೀಮೇನ್ಯೈಷ ರಾಮೋ ದಾಶರಥಿಃ ಪ್ರಭುಃ । ದಗ್ಧ್ವಾ ಸ್ವದೇಹಂ ಗಚ್ಛಾಮಿ ಬ್ರಹ್ಮಲೋಕಮಕಲ್ಮಷಃ ॥ ೯ ॥
ಅಯೋಧ್ಯಾಧಿಪತಿರ್ಮೇಸ್ತು ಹೃದಯೇ ರಾಘವಸ್ಸದಾ । ಯದ್ವಾಮಾಂಕೇ ಸ್ಥಿತಾ ಸೀತಾ ಮೇಘಸ್ಯೇವ ತಟಿಲ್ಲತಾ ॥ ೧೦ ॥
ಇತಿ ರಾಮಂ ಚಿರಂ ದೃಷ್ಟ್ವಾ ಧ್ಯಾತ್ವಾ ಸ್ವಪುರತಃ ಸ್ಥಿತಂ । ಪ್ರಜ್ವಾಲ್ಯ ಸಹಸಾ ವಹ್ನಿಂ ದಗ್ಧ್ವಾ ಪಂಚಾತ್ಮಕಂ ವಪುಃ ॥ ೧೧ ॥
ದಿವ್ಯದೇಹಧರಸ್ಸಾಕ್ಷಾದ್ಯಯೌ ಲೋಕಪತೇಃ ಪದಂ । ತತೋ ಮುನಿಗಣಾಸ್ಸರ್ವೇ ದಂಡಕಾರಣ್ಯವಾಸಿನಃ ॥ ೧೨ ॥

---

೯. ನನ್ನ ಈ ಪಾರ್ಥಿವ ದೇಹವನ್ನು ಸುಟ್ಟು ಪಾಪಗಳನ್ನು ಕಳೆದುಕೊಂಡು ಈಗಲೇ ಬ್ರಹ್ಮಲೋಕಕ್ಕೆ ಹೋಗುತ್ತೇನೆ. ಇದನ್ನು ಪ್ರಭುವಾದ ದಾಶರಥಿಯು ಈಗಲೇ ನೋಡಲಿ.

೧೦. ಮೇಘದೊಳಗೆ ಮಿಂಚು ಸೇರಿಕೊಂಡಿರುವಂತೆ ಯಾವ ಶ್ರೀರಾಮನ ಎಡದತೊಡೆಯಮೇಲೆ ಸೀತೆಯು ಕುಳಿತಿರುವಳೋ ಅಂತಹ ಅಯೋಧ್ಯಾಧಿಪತಿಯಾದ ಶ್ರೀರಾಮನು ನನ್ನ ಹೃದಯದಲ್ಲಿ ಯಾವಾಗಲೂ ಇರಲಿ.

೧೧-೧೨. ಈ ರೀತಿ ಹೇಳುತ್ತಾ ಶ್ರೀರಾಮನನ್ನು ಬಹುಕಾಲ ದರ್ಶನಮಾಡಿ ಅಂತೆಯೇ ಧ್ಯಾನವನ್ನು ಮಾಡಿ ಆ ಚಿತೆಯನ್ನು ಹತ್ತಿಸಿ ಅದರಿಂದ ಈ ಪಾಂಚಭೌತಿಕ ಶರೀರವನ್ನು ಸುಟ್ಟು ಉತ್ತಮವಾದ ದೇಹವನ್ನು ಹೊಂದಿ ಲೋಕಕ್ಕೆ ಸೃಷ್ಟಿಕರ್ತನಾದ ಬ್ರಹ್ಮನ ಲೋಕಕ್ಕೆ ಹೋದನು.

ಆಜಗ್ಮೂ ರಾಘವಂ ದ್ರಷ್ಟುಂ ಶರಭಂಗನಿವೇಶನಂ । ದೃಷ್ಟ್ವಾ ಮುನಿಸಮೂಹಂ ತಂ ಜಾನಕೀರಾಮಲಕ್ಷ್ಮಣಾಃ ॥ ೧೩ ॥

ಪ್ರಣೇಮುಸ್ಸಹಸಾ ಭೂಮೌ ಮಾಯಾಮಾನುಷರೂಪಿಣಃ । ಆಶೀರ್ಭಿರಭಿನಂದ್ಯಾಥ ರಾಮಂ ಸರ್ವಹೃದಿ ಸ್ಥಿತಂ ॥ ೧೪ ॥

ಊಚುಃ ಪ್ರಾಂಜಲಯಸ್ಸರ್ವೇ ಧನುರ್ಬಾಣಧರಂ ಹರಿಂ । ಭೂಮೇರ್ಭಾರಾವತಾರಾಯ ಜಾತೋಽಸಿ ಬ್ರಹ್ಮಣಾರ್ಥಿತಃ ॥ ೧೫ ॥

ಜಾನೀಮಸ್ತ್ವಾಂ ಹರಿಂ ಲಕ್ಷ್ಮೀಂ ಜಾನಕೀಂ ಲಕ್ಷ್ಮಣಂ ತಥಾ । ಶೇಷಾಂಶಂ ಶಂಖಚಕ್ರೇ ದ್ವೇ ಭರತಂ ಸಾನುಜಂ ತಥಾ ॥
ಅತ ಆದಾವೃಷೀಣಾಂ ತ್ವಂ ದುಃಖಂ ಹರ್ತುಮಿಹಾರ್ಹಸಿ ॥ ೧೬ ॥

೧೨–೧೩. ಶರಭಂಗನು ಈ ರಾಮನ ಮಹಿಮೆಯನ್ನು ಎಲ್ಲರಿಗೂ ವ್ಯಕ್ತಪಡಿಸಿದಂತಾಗಲೂ ಅವರೆಲ್ಲರೂ ಇದನ್ನು ತಿಳಿದು ಆ ಶ್ರೀರಾಮನ ದರ್ಶನಾರ್ಥವಾಗಿ ಆ ಶರಭಂಗನ ಆಶ್ರಮಕ್ಕೆ ಬಂದರು. ಅಲ್ಲಿ ಆ ಜಾನಕೀ ರಾಮಲಕ್ಷ್ಮಣರನ್ನು ನೋಡಿ ಮಾಯೆಯಿಂದ ಮನುಷ್ಯರಾಗಿರುವ ಅವರಿಗೆ ನಮಸ್ಕರಿಸಿದರು.

೧೪. ಅವರೆಲ್ಲರೂ ಎಲ್ಲರ ಹೃದಯದಲ್ಲಿಯೂ ವಾಸಮಾಡುವ ಆ ರಾಮನನ್ನು ನೋಡಿ ಅವನಿಗೆ ಪ್ರಪಂಚಕ್ಕೆ ಅನುಗುಣವಾಗಿ ಆಶೀರ್ವದಿಸಿ ಧನುರ್ಬಾಣಗಳನ್ನೂ ಜಟೆಯನ್ನೂ ಧರಿಸಿರುವ ಆ ಸ್ವಾಮಿಗೆ ಕೈಮುಗಿದುಕೊಂಡು ಇಂತೆಂದರು.

೧೫–೧೬. ಎಲೈ ಸ್ವಾಮಿಯೆ ! ನೀನು ಬ್ರಹ್ಮನ ಪ್ರಾರ್ಥನೆಯಂತೆ ಭೂಭಾರವನ್ನು ನಾಶಮಾಡಲು ಅವತರಿಸಿದ್ದೀಯೆ. ನೀನು ವಿಷ್ಣುವೆಂದೂ ಸೀತೆಯು ಲಕ್ಷ್ಮಿಯೆಂದೂ ಲಕ್ಷ್ಮಣನು ಶೇಷನೆಂದೂ ಭರತ ಶತ್ರುಘ್ನರು ಶಂಖಚಕ್ರಗಳೆಂದೂ ನೀವು ಅವತರಿಸಿರುವ ಬಗೆಯನ್ನು ನಾವು ಬಲ್ಲೆವು. ಅಂತಹ ನೀನು ಈಗ ಋಷಿಗಳಾದ ನಮ್ಮ ತೊಂದರೆಯನ್ನು ಹೋಗಲಾಡಿಸಬೇಕು.

ಆಗಚ್ಛ ಯಾವೋ ಮುನಿಸೇವಿತಾನಿ ವನಾನಿ ಸರ್ವಾಣಿ ರಘೂತ್ತಮ ಕ್ರಮಾತ್ ।
ದ್ರಷ್ಟುಂ ಸುಮಿತ್ರಾ ಸುತ ಜಾನಕೀಭ್ಯಾಂ ತದಾ ದಯಾಸ್ಮಾಸು ದೃಢಾ ಭವಿಷ್ಯತಿ ॥ ೧೭ ॥
ಇತಿ ವಿಜ್ಞಾಪಿತೋ ರಾಮಃ ಕೃತಾಂಜಲಿಪುಟೈರ್ವಿಭುಃ । ಜಗಾಮ ಮುನಿಭಿಸ್ಸಾರ್ಧಂ ದ್ರಷ್ಟುಂ ಮುನಿವನಾನಿ ಸಃ ॥ ೧೮ ॥
ದದರ್ಶ ತತ್ರ ಪತಿತಾನ್ಯನೇಕಾನಿ ಶಿರಾಂಸಿ ಸಃ । ಅಸ್ಥಿಭೂತಾನಿ ಸರ್ವತ್ರ ರಾಮೋ ವಚನಮಬ್ರವೀತ್ ॥ ೧೯ ॥
ಅಸ್ಥೀನಿ ಕೇಷಾಮೇತಾನಿ ಕಿಮರ್ಥಂ ಪತಿತಾನಿ ವೈ । ತಮೂಚುರ್ಮುನಯೋ ರಾಮಮ್ಯೃಷೀಣಾಂ ಮಸ್ತಕಾನಿ ಹಿ ॥ ೨೦ ॥

---

೧೭. ಎಲೈ ರಘೂತ್ತಮನೆ! ನನ್ನ ಜೊತೆಯಲ್ಲಿ ಬಾ. ಮುನಿಗಳು ಇರತಕ್ಕ ಆಶ್ರಮಗಳಿಗೆ ಒಂದಾದಮೇಲೆ ಒಂದರಂತೆ ಹೋಗೋಣ ಸೀತೆ ಲಕ್ಷ್ಮಣರೊಡನೆ ನಮ್ಮಗಳ ಜೊತೆಯಲ್ಲಿ ಬಂದರೆ ನಾವೂ ನಿನ್ನನ್ನು ನೋಡುತ್ತಿದ್ದರೆ ನಿನ್ನಲ್ಲಿ ನಮಗೆ ಧೃಢವಾದ ಭಕ್ತಿಯು ಹುಟ್ಟುತ್ತದೆ.

೧೮. ಮುನಿಜನಗಳು ಕೈಗಳನ್ನು ಮುಗಿದುಕೊಂಡು ಇಂತು ವಿಜ್ಞಾಪಿಸಿಕೊಳ್ಳಲು ಅವರ ದೇಶಗಳನ್ನೂ ಆಶ್ರಮಗಳನ್ನೂ ನೋಡಿಕೊಂಡು ಬರಲು ಅವರ ಜೊತೆಯಲ್ಲಿ ಆಶ್ರಮಗಳಿಗೆ ಹೊರಟರು.

೧೯. ಆ ಆಶ್ರಮಗಳಿಗೆ ಹೋಗುತ್ತಾ ದಾರಿಯಲ್ಲಿ ಅನೇಕವಾಗಿ ತಲೆಬುರುಡೆಗಳು ಬಿದ್ದಿರಲು ಅವುಗಳನ್ನು ರಾಮನು ನೋಡಿದನು. ಮತ್ತು ಅಲ್ಲೆಲ್ಲವೂ ಮೂಳೆಗಳೂ ಬಿದ್ದಿರುವುದನ್ನು ನೋಡಿದನು. ಆಗ ಅವರನ್ನು ಕುರಿತು ಇಂತೆಂದನು.

೨೦. ಎಲೈ ಋಷಿಗಳಿರಾ! ಈ ಮೂಳೆಗಳು ಯಾರವು? ಇವು ಇಲ್ಲೇಕೆ ಬಿದ್ದಿವೆ? ಎನ್ನಲು ಇದನ್ನು ಕೇಳಿ ಋಷಿಗಳು ಅವನನ್ನು ಕುರಿತು ಇಂತೆಂದರು.

ರಾಕ್ಷಸೈರ್ಭಕ್ಷಿತಾನೀಶ ಪ್ರಮತ್ತಾನಾಂ ಸಮಾಧಿತಃ | ಅಂತರಾಯಂ ಮುನೀನಾಂ ತೇ ಪಶ್ಯಂತೋನುಚರಂತಿ ಹಿ || ೨೧ ||

ಶ್ರುತ್ವಾ ವಾಕ್ಯಂ ಮುನೀನಾಂ ಸ ಭಯದೈನ್ಯ ಸಮನ್ವಿತಂ | ಪ್ರತಿಜ್ಞಾಮಕರೋದ್ರಾಮೋ ವಧಾಯಾಶೇಷರಕ್ಷಸಾಂ || ೨೨ ||

ಪೂಜ್ಯಮಾನಸ್ತದಾ ತತ್ರ ಮುನಿಭಿರ್ವನವಾಸಿಭಿಃ | ಜಾನಕ್ಯಾ ಸಹಿತೋ ರಾಮೋ ಲಕ್ಷ್ಮಣೇನ ಸಮನ್ವಿತಃ || ೨೩ ||

ಉವಾಸ ಕತಿಚಿತ್ತತ್ರ ವರ್ಷಾಣಿ ರಘುನಂದನಃ । ಏವಂ ಕ್ರಮೇಣ ಸಂಪರ್ಶ್ಯ ಋಷೀಣಾಮಾಶ್ರಮಾನ್ವಿಭುಃ || ೨೪ ||

---

೨೧ ಎಲೈ ರಾಮನೆ! ಇವೆಲ್ಲವೂ ಋಷಿಗಳ ತಲೆಗಳು ಅವರು ಸಮಾಧಿಸ್ಥಿತಿಯಲ್ಲಿದ್ದಾಗ ರಾಕ್ಷಸರು ಬಂದು ಅವರನ್ನು ತಿಂದುಹಾಕಿದರು. ಮುನಿಗಳಿಗೆ ಅವರು ವಿಘ್ನವನ್ನು ಮಾಡಿ ತೊಂದರೆಕೊಡುತ್ತಾ ಸಂಚರಿಸುತ್ತಿರುವರು.

೨೨. ಆ ಋಷಿಗಳು ಭಯದಿಂದಲೂ ದೈನ್ಯದಿಂದಲೂ ಇಂತು ವಿಜ್ಞಾಪಿಸಿಕೊಳ್ಳಲು ಅದನ್ನು ಕೇಳಿ ಆಗ ರಾಮನು ಎಲ್ಲಾ ರಾಕ್ಷಸರನೂ ಕೊಲ್ಲುತ್ತೇನೆಂದು ಪ್ರತಿಜ್ಞೆಯನ್ನು ಮಾಡಿದನು.

೨೩. ಆ ರಾಮನು ಅಲ್ಲಿ ಆ ಋಷಿಗಳಿಂದ ಗೌರವಿತನಾಗಿ ಅಲ್ಲಿಯೇ ಕೆಲವು ವರ್ಷಗಳವರೆಗೂ ಇದ್ದುಕೊಂಡಿದ್ದನು. ಸೀತಾ ಲಕ್ಷ್ಮಣರೂ ಸಹ ಆ ಶ್ರೀರಾಮನೊಡನೆಯೇ ಸುಖದಿಂದಿದ್ದರು.

೨೪. ರಾಮನು ಅಲ್ಲಿರುವ ಋಷಿಗಳ ಆಶ್ರಮಗಳನ್ನು ನೋಡುತ್ತಾ ಸುತೀಕ್ಷ್ಣನೆಂಬ ಋಷಿಯ ಆಶ್ರಮಕ್ಕೆ ಹೋದನು. ಆ ಆಶ್ರಮದಲ್ಲಿ ಬಹುಜನ ಋಷಿಗಳಿದ್ದರು. ಅಲ್ಲಿ ಎಲ್ಲಾ ಋತುವಿನ ಹಣ್ಣು ಹೂಗಳೂ ಎಲ್ಲಾ ಕಾಲದಲ್ಲಿಯೂ ಇರುತ್ತಿದ್ದಿತು. ಎಲ್ಲಾ ರೀತಿಯಲ್ಲಿಯೂ ಅದು ಸುಖಕರವಾಗಿದ್ದಿತು.

ಸುತೀಕ್ಷ್ಣಸ್ಯಾಶ್ರಮಂ ಪ್ರಾಗಾತ್ಪ್ರಖ್ಯಾತಮುನಿಸಂಕುಲಂ । ಸರ್ವರ್ತುಗುಣಸಂಪನ್ನಂ ಸರ್ವಕಾಲ ಸುಖಾವಹಂ ॥ ೨೫ ॥

ರಾಮಮಾಗತಮಾಕರ್ಣ್ಯ ಸುತೀಕ್ಷ್ಣ ಸ್ಸ್ವಯಮಾಗತಃ । ಅಗಸ್ತ್ಯಶಿಷ್ಯೋ ರಾಮಸ್ಯ ಮಂತ್ರೋಪಾಸನ ತತ್ಪರಃ ॥
ವಿಧಿವತ್ಪೂಜಯಾಮಾಸ ಭಕ್ತ್ಯುತ್ಕಂಠಿತಲೋಚನಃ ॥ ೨೬ ॥

॥ ಸುತೀಕ್ಷ್ಣ ಉವಾಚ ॥

ತ್ವನ್ಮಂತ್ರಜಾಪ್ಯಹಮನಂತ ಗುಣಾಪ್ರಮೇಯ ಸೀತಾಪತೇ ಶಿವವಿರಿಂಚಿಸಮಾಶ್ರಿತಾಂಘ್ರಿ ।
ಸಂಸಾರ ಸಿಂಧು ತರಣಾಮಲಪೋತಪಾದ ರಾಮಾಭಿರಾಮ ಸತತಂ ತವ ದಾಸದಾಸಃ ॥ ೨೭ ॥

---

೨೬. ರಾಮನು ತನ್ನ ಆಶ್ರಮಕ್ಕೆ ಬಂದುದನ್ನು ಕೇಳಿ ಸುತೀಕ್ಷ್ಣನು ತಾನೇ ಎದುರಿಗೆ ಎದ್ದುಬಂದನು. ಅವನು ಅಗಸ್ತ್ಯನ ಶಿಷ್ಯನು. ರಾಮಮಂತ್ರವನ್ನು ಜಪಿಸುತ್ತಾ ಆ ರಾಮನನ್ನೇ ಸೇವಿಸುತ್ತಿದ್ದವನು. ಈ ರಾಮನನ್ನು ಭಕ್ತಿಯಿಂದ ಬಹುವಾಗಿ ಗೌರವಿಸಿ ಪೂಜಿಸಿದನು.

೨೭. ಸುತೀಕ್ಷ್ಣನು ಹೇಳಿದನು-ಎಲೈ ಶ್ರೀರಾಮನೆ! ನಾನು ನಿನ್ನ ಮಂತ್ರವನ್ನೇ ಜಪಿಸುತ್ತಿದ್ದೇನೆ. ನೀನು ಅನಂತ ಗುಣಗಳುಳ್ಳವನು. ಅಳೆಯಲು ಅಸಾಧ್ಯನು. ಎಲೈ ಸೀತಾಪತಿಯೆ! ನಿನ್ನ ಪಾದಗಳನ್ನು ಬ್ರಹ್ಮನೂ ಶಿವನೂ ಕೂಡ ಪೂಜಿಸುತ್ತಿರುವರು. ನಿನ್ನ ಪಾದಗಳು ಈ ಸಂಸಾರವೆಂಬ ಸಮುದ್ರವನ್ನು ದಾಟಿಸುವ ದೋಣಿಗಳು. ಮನೋಹರನಾದ ರಾಮನೆ! ನಾನು ಯಾವಾಗಲೂ ನಿನ್ನ ದಾಸರಿಗೆ ದಾಸನಾಗಿರುವೆನು.

ಮಾಮದ್ಯ ಸರ್ವಜಗತಾ ಮಪಿಗೋಚರಸ್ತ್ವಂ ತ್ವನ್ಮಾಯಯಾ ಸುತಕಳತ್ರ ಗೃಹಾಂಧಕೂಪೇ
ಮಗ್ನಂ ನಿರೀಕ್ಷ್ಯ ಮಲಪುದ್ಗಲ ಪಿಂಡಮೋಹಪಾಶಾನುಬದ್ಧ ಹೃದಯಂ ಸ್ವಯಮಾಗತೋಽಸಿ ॥ ೨೮ ॥

ತ್ವಂ ಸರ್ವಭೂತಹೃದಯೇಷು ಕೃತಾಲಯೋಽಪಿ ತ್ವನ್ಮಂತ್ರಜಾಪ್ಯ ವಿಮುಖೇಷು ತನೋಷಿ ಮಾಯಾಂ
ತ್ವನ್ಮಂತ್ರ ಸಾಧನಪರೇಷ್ವ ಪಯಾತಿ ಮಾಯಾ ಸೇವಾನುರೂಪ ಫಲದೋಽಸಿ ಯಥಾ ಮಹೀಪಃ ॥೨೯॥

---

೨೮. ರಾಮಾವತಾರದಿಂದ ಎಲ್ಲರಿಗೂ ಕಾಣುತ್ತಿರುವ ಸ್ವಾಮಿಯೆ ! ಮಕ್ಕಳು ಹೆಂಡತಿ ಮನೆಯೆಂಬ ಬಾವಿಯಲ್ಲಿ ನಾನು ನಿನ್ನ ಮಾಯೆಯಿಂದಲೇ ಬಿದ್ದಿರುವೆನು. ಹೇಸಿಗೆಯಾದ ನಾಶವಾಗುವ ಹುಳುಬೀಳುವ ಈ ಪಿಂಡರೂಪವಾದ ದೇಹವೆಂಬ ಪಾಶದಿಂದ ಕಟ್ಟಲ್ಪಟ್ಟಿರುವೆನು. ಇಂತಹ ನನ್ನನ್ನು ತಿಳಿದು ನೀನಾಗಿಯೇ ಇಲ್ಲಿಗೆ ಬಂದಿದ್ದೀಯೆ.

೨೯. ನೀನು ಎಲ್ಲರ ಹೃದಯದಲ್ಲಿಯೂ ಮನೆಯನ್ನು ಮಾಡಿಕೊಂಡಿದ್ದೀಯೆ. ಯಾರು ನಿನ್ನ ಮಂತ್ರವನ್ನು ಜಪಿಸುವುದಿಲ್ಲವೋ ಅವರಲ್ಲಿ ನಿನ್ನ ಮಾಯೆಯನ್ನು ಬೀರುತ್ತಿರುವೆ. ನಿನ್ನ ಮಂತ್ರವನ್ನು ಜಪಿಸುತ್ತಾ ಅದರಲ್ಲಿ ಆಸಕ್ತರಾಗಿರುವವರಲ್ಲಿ ನಿನ್ನ ಮಾಯೆಯು ಬಲವನ್ನು ತೋರಿಸದೆ ಹೊರಟು ಹೋಗುವುದು. ನಿನಗೆ ವಿಶ್ವಾಸವು ಆ ಮಂತ್ರ ಜಪಿಸುತ್ತಿರುವವನಲ್ಲಿ ಹುಟ್ಟಿದರೆ ಸಂತೋಷಗೊಂಡ ದೊರೆಯಂತೆ ಅವನ ಸೇವೆಗೆ ಅನುರೂಪವಾದ ಫಲವನ್ನು ಕೊಡುತ್ತೀಯೆ ?

ವಿಶ್ವಸ್ಯ ಸೃಷ್ಟಿಲಯ ಸಂಸ್ಥಿತ ಹೇತುರೇಕಸ್ತ್ವಂ ಮಾಯಯಾ ತ್ರೈಗುಣಯಾ ವಿಧಿರೀಶ ವಿಷ್ಣೋ ।
ಭಾಸೀಶ ಮೋಹಿತಧಿಯಾಂ ವಿವಿಧಾಕೃತಿಸ್ತ್ವಂ ಯದ್ವದ್ರವಿಸ್ಸಲಿಲ ಪಾತ್ರಗತೋ ಹ್ಯನೇಕಃ ॥ ೩೦ ॥

ಪ್ರತ್ಯಕ್ಷತೋದ್ಯ ಭವತಶ್ಚರಣಾರವಿಂದಂ ಪಶ್ಯಾಮಿ ರಾಮ ತಮಸಃ ಪರತಃ ಸ್ಥಿತಸ್ಯ ।
ದೃಗ್ರೂಪತಸ್ತ್ವಮಸತಾಮವಿಗೋಚರೋಪಿ ತ್ವನ್ಮಂತ್ರ ಪೂತಹೃದಯೇಷು ಸದಾ ಪ್ರಸನ್ನಃ ॥ ೩೧ ॥

---

೩೦. ನೀನೊಬ್ಬನೇ ಆಗಿದ್ದರೂ ನಿನ್ನ ಮಾಯೆಯಿಂದಲೇ ನೀನು ಬ್ರಹ್ಮ ವಿಷ್ಣು ಶಿವರೆಂಬ ಭೇದದಿಂದ ಅವತರಿಸಿ ಪ್ರಪಂಚದ ಸೃಷ್ಟಿಸ್ಥಿತಿ ಲಯಗಳನ್ನು ಮಾಡುತ್ತೀಯೆ. ಸತ್ವರಜಸ್ತಮೋಗುಣಗಳರೂಪರೇ ಆ ತ್ರಿಮೂರ್ತಿಗಳು. ಎಲೈ ಸ್ವಾಮಿಯೆ ! ನೀನು ಒಬ್ಬನೇ ಆಗಿದ್ದರೂ ಸೂರ್ಯನು ಹೇಗೆ ತಾನೊಬ್ಬನೇ ಆದರೂ ಬೇರೆ ಬೇರೆಯಾದ ಅನೇಕ ನೀರಿನ ಪಾತ್ರೆಗಳಲ್ಲಿ ಬೇರೆ ಬೇರೆಯಾಗಿ ಕಾಣುವನೋ ಹಾಗೆಯೇ ಮೋಹಗೊಂಡ ಅಜ್ಞಾನಿಗಳಿಗೆ ಬೇರೆ ಬೇರೆಯಾಗಿ ಕಾಣುತ್ತೀಯೆ.

೩೧. ಎಲೈ ರಾಮನೆ ! ತಮೋರೂಪವಾದ ಅಜ್ಞಾನಕ್ಕಿಂತಲೂ ಬಹುದೂರದಲ್ಲಿರುವ ನಿನ್ನ ಪಾದಾರವಿಂದಗಳನ್ನು ಈಗ ಎದುರಿಗೇ ನೋಡುತ್ತಿದ್ದೇನೆ. ಅಯೋಗ್ಯರಾದವರಿಗೆ ನೀನು ಕಣ್ಣಿಂದ ನೋಡಲು ಆಗದವನು. ನಿನ್ನ ಮಂತ್ರವನ್ನೇ ಜಪಿಸುತ್ತ ಪರಿಶುದ್ಧರಾಗಿರುವವರಿಗೆ ಯಾವಾಗಲೂ ಪ್ರಸನ್ನನಾಗಿಯೇ ಇರುತ್ತೀಯೆ.

ಪಶ್ಯಾಮಿ ರಾಮ ತವರೂಪಮರೂಪಿಣೋಪಿ ಮಾಯಾವಿಡಂಬನಕೃತಂ ಸುಮನುಷ್ಯವೇಷಂ ।
ಕಂದರ್ಪಕೋಟಿಸುಭಗಂ ಕಮನೀಯಚಾಪಬಾಣಂ ದಯಾರ್ದ್ರಹೃದಯಂ ಸ್ಮಿತಚಾರುವಕ್ತ್ರಂ ॥ ೩೨ ॥

ಸೀತಾಸಮೇತಮಜಿನಾಂಬರಮಪ್ರಧೃಷ್ಯಂ ಸೌಮಿತ್ರಿಣಾ ನಿಯತಸೇವಿತಪಾದಪದ್ಮಂ ।
ನೀಲೋತ್ಪಲದ್ಯುತಿಮನಂತಗುಣಾಪ್ರಮೇಯಂ ಮದ್ಭಾಗಧೇಯಮನಿಶಂ ಪ್ರಣಮಾಮಿ ರಾಮಂ ॥ ೩೩ ॥

---

೩೨. ಎಲೈ ರಾಮನೆ! ನೀನು ರೂಪವಿಲ್ಲದವನಾದರೂ ಮಾಯೆಯಿಂದ ಹೊಂದಿರುವ ಈ ಮನೋಹರವಾದ ನಿನ್ನ ಮನುಷ್ಯ ದೇಹವನ್ನು ನೋಡುತ್ತಿದ್ದೇನೆ. ಇದು ಕೋಟಿಜನ ಮನ್ಮಥರ ದೇಹದಂತೆ ರಮಣೀಯವಾಗಿದೆ. ಬಾಣ, ಬತ್ತಳಿಕೆ, ಧನುಸ್ಸುಗಳನ್ನು ಧರಿಸಿದೆ. ದಯೆದಿಂದ ಕೂಡಿದೆ. ಮುಗುಳುನಗೆಯಿಂದ ಕೂಡಿ ಮನೋಹರವಾಗಿದೆ.

೩೩. ಸೀತೆಯಿಂದ ಕೂಡಿಕೊಂಡಿದೆ. ನಾರುಡೆಯನ್ನುಟ್ಟಿದೆ. ಇನ್ನೊಬ್ಬರು ತೊಂದರೆಪಡಿಸುವುದಕ್ಕೆ ಆಗದಂತಿದೆ. ಸೌಮಿತ್ರಿಯಾದ ಲಕ್ಷ್ಮಣನು ಯಾವಾಗಲೂ ಸೇವಿಸುತ್ತಿರುವನು. ನೀಲೋತ್ಪಲದಂತೆ ಕಾಂತಿಯಿಂದ ಕೂಡಿ ಮನೋಹರವಾದುದು. ಅನಂತಗುಣಗಳುಳ್ಳದು. ಅಳೆಯಲು ಅಸಾಧ್ಯವಾದುದು. ತನ್ನ ಅದೃಷ್ಟರೂಪವಾದುದು. ಇಂತಹ ವೇಷವನ್ನು ಹಾಕಿಕೊಂಡು ಬಂದಿರುವ ರಾಮರೂಪಿಯಾದ ನಿನ್ನನ್ನು ಯಾವಾಗಲೂ ನಮಸ್ಕರಿಸುತ್ತೇನೆ.

ಜಾನಂತು ರಾಮ ತವ ರೂಪಮಶೇಷದೇಶಕಾಲಾದ್ಯುಪಾಧಿರಹಿತಂ ಘನಚಿತ್ಪ್ರಕಾಶಂ ।
ಪ್ರತ್ಯಕ್ಷತೋದ್ಯ ಮಮ ಗೋಚರಮೇತದೇವ ರೂಪಂ ವಿಭಾತು ಹೃದಯೇ ನ ಪರಂ ವಿಕಾಂಕ್ಷೇ ॥ ೩೪ ॥

ಇತ್ಯೇವಂ ಸ್ತುವತಸ್ತಸ್ಯ ರಾಮಸ್ಸಸ್ಮಿತಮಬ್ರವೀತ್ । ಮುನೇ ಜಾನಾಮಿ ತೇ ಚಿತ್ತಂ ನಿರ್ಮಲಂ ಮದುಪಾಸನಾತ್ ॥ ೩೫ ॥

ಅತೋಽಹಮಾಗತೋ ದ್ರಷ್ಟುಂ ಮದೃತೇ ನಾನ್ಯಸಾಧನಂ । ಮನ್ಮಂತ್ರೋಪಾಸಕಾ ಲೋಕೇ ಮಾಮೇವ ಶರಣಂಗತಾಃ ॥ ೩೬ ॥

ನಿರಪೇಕ್ಷಾ ನಾನ್ಯಗತಾಸ್ತೇಷಾಂ ದೃಶ್ಯೋಽಹಮನ್ವಹಂ । ಸ್ತೋತ್ರಮೇತತ್ಪಠೇದ್ಯಸ್ತು ತ್ವತ್ಕೃತಂ ಮತ್ಪ್ರಿಯಂ ಸದಾ ॥ ೩೭ ॥

---

೩೪. ಎಲೈ ರಾಮನೆ! ಯೋಗಿಗಳು ನಿನ್ನ ದೇಹವು ದೇಶಕಾಲರೂಪಗಳೆಂಬ ಉಪಾಧಿಗೆ (ಕಾರಣಕ್ಕೆ) ಸಿಕ್ಕದೆ ಘನವಾಗಿಯೂ, ಚಿದ್ರೂಪವಾಗಿಯೂ ಸದ್ರೂಪವಾಗಿಯೂ ಪ್ರಕಾಶವಾಗಿಯೂ ಇದೆ. ಎಂದು ಬೇರೆಯವರು ತಿಳಿಯಲಿ. ಆ ರೂಪವು ದನಗೆ ಬೇಡ. ನನಗೆ ಈ ಎದುರಿಗೆ ಕಾಣುತ್ತಿರುವ ಈ ರೂಪವೇ ನನ್ನ ಹೃದಯದಲ್ಲಿ ಯಾವಾಗಲೂ ಕಾಣುತ್ತ ನಿಂತಿರಲಿ. ಬೇರೆ ರೀತಿಯಾದುದನ್ನು ನಾನು ಅಪೇಕ್ಷಿಸುವುದಿಲ್ಲ.

೩೫. ಈ ರೀತಿಯಾಗಿ ಸ್ತೋತ್ರಮಾಡುತ್ತಿರುವ ಆ ಸುತೀಕ್ಷ್ಣಮುನಿಗೆ ಪ್ರಸನ್ನನಾಗಿ ಅವನನ್ನು ಕುರಿತು ರಾಮನು ನಗುತ್ತ ಎಲೈ ಮುನಿಯೆ! ನಿನ್ನ ಮನಸ್ಸು ನನ್ನನ್ನು ಧ್ಯಾನಮಾಡುವುದರಿಂದ ನಿರ್ಮಲವಾಗಿದೆ. ಎಂಬುದನ್ನು ತಿಳಿದಿದ್ದೇನೆ.

೩೬–೩೭. ಆದ್ದರಿಂದ ನಿನ್ನನ್ನು ನೋಡಲು ಬಂದಿದ್ದೇನೆ. ಯಾರು ನನ್ನನ್ನೇ ತಮ್ಮ ಕಾರ್ಯಸಾಧನೆಗೆ ಕಾರಣನನ್ನಾಗಿ ಇಟ್ಟುಕೊಂಡು ಬೇರೆಯವರನ್ನು ಅಪೇಕ್ಷಿಸದೆ ನನ್ನ ಮಂತ್ರವನ್ನೇ ಉಪಾಸನೆಮಾಡುತ್ತಾ ನನ್ನನ್ನೇ ಶರಣುಹೊಂದಿ ಮತ್ತೊಬ್ಬರನ್ನು ಅಪೇಕ್ಷಿಸುವುದೇ

ಸದ್ಭಕ್ತಿರ್ಮೇ ಭವೇತ್ತಸ್ಯ ಜ್ಞಾನಂ ಚ ವಿಮಲಂ ಭವೇತ್ । ತ್ವಂ ಮಮೋಪಾಸನಾದೇವ ವಿಮುಕ್ತೋಽಸೀಹ ಸರ್ವತಃ ॥ ೩೮ ॥
ದೇಹಾಂತೇ ಮಮ ಸಾಯುಜ್ಯಂ ಲಪ್ಸ್ಯಸೇ ನಾತ್ರ ಸಂಶಯಃ । ಗುರುಂ ತೇ ದ್ರಷ್ಟುಮಿಚ್ಛಾಮಿ ಹ್ಯಗಸ್ತ್ಯಂ ಮುನಿನಾಯಕಂ ॥
ಕಂಚಿತ್ಕಾಲಂ ತತ್ರ ವಸ್ತುಂ ಮನೋ ಮೇ ತ್ವರಯತ್ಯಲಂ । ಸುತೀಕ್ಷ್ಣೋಽಪಿ ತಥೇತ್ಯಾಹ ಶ್ವೋ ಗಮಿಷ್ಯಸಿ ರಾಘವ ॥
ಅಹಮಪ್ಯಾಗಮಿಷ್ಯಾಮಿ ಚಿರಾದ್ದೃಷ್ಟೋ ಮಹಾಮುನಿಃ ॥ ೪೦ ॥

ಇಲ್ಲವೋ ಅವರಿಗೆ ನಾನು ನಿತ್ಯವೂ ಗೋಚರನಾಗುತ್ತೇನೆ. ನೀನು ಹೇಳಿದ ನನಗೆ ಪ್ರೀತಿಪಾತ್ರವಾದ ಈ ಸ್ತೋತ್ರವನ್ನು ಯಾವನು ಓದುತ್ತಾನೆಯೋ ಅವನಿಗೆ ನನ್ನಲ್ಲಿ ಭಕ್ತಿಯುಂಟಾಗಿ ಜ್ಞಾನವೂ ಪರಿಶುದ್ಧವಾಗುತ್ತದೆ.

೩೯. ನೀನು ನನ್ನನ್ನು ಉಪಾಸನೆಮಾಡಿ ಭಜಿಸಿರುವುದರಿಂದ ಎಲ್ಲಾ ತೊಂದರೆಗಳಿಂದಲೂ ಮುಕ್ತನಾಗಿದ್ದೀಯೆ. ನೀನು ಈ ಪಾಂಚಭೌತಿಕ ಶರೀರವನ್ನು ತ್ಯಜಿಸಿದಮೇಲೆ ನನ್ನ ಸಾಯುಜ್ಯವನ್ನೇ ಹೊಂದುತ್ತೀಯೆ. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಇನ್ನುಮೇಲೆ ಮುನಿನಾಯಕನೂ ನಿನ್ನ ಗುರುವೂ ಆದ ಅಗಸ್ತ್ಯನನ್ನು ನೋಡಬೇಕೆಂದಿದ್ದೇನೆ.

೪೦. ಅಲ್ಲಿ ಕೆಲವುಕಾಲ ಇರಬೇಕೆಂದು ನನ್ನ ಮನಸ್ಸು ಆತ್ವರಪಡುತ್ತಿದೆ. ಎನ್ನಲು ಅದನ್ನು ಕೇಳಿ ಸುತೀಕ್ಷ್ಣನು ಹಾಗೆಯೇ ಆಗಬಹುದು. ಎಲೈ ರಾಘವನೆ ! ಇಂದು ಇಲ್ಲಿರು. ನಾಳೆ ಹೋಗುತ್ತೀಯಂತೆ. ನಾನೂ ಆ ಮುನಿಯನ್ನು ನೋಡಿ ಬಹುದಿವಸವಾಗಿದೆ. ನಿನ್ನ ಜೊತೆಯಲ್ಲಿ ಅಲ್ಲಿಗೆ ಬರುತ್ತೇನೆ ಎಂದನು.

ಅಥ ಪ್ರಭಾತೇ ಮುನಿನಾ ಸಮೇತೋ ರಾಮುಸ್ಸಸೀತಸ್ಸಹ ಲಕ್ಷ್ಮಣೇನ ।
ಅಗಸ್ತ್ಯಸಂಭಾಷಣಲೋಲಮಾನಸಶ್ಶನೈರಗಸ್ತ್ಯಾನುಜಮಂದಿರಂ ಯಯೌ ॥ ೪೧ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ
ದ್ವಿತೀಯಸ್ಸರ್ಗಃ ಸಮಾಪ್ತಃ

---

೪೧. ಅನಂತರ ಆ ದಿನ ಆ ಸುತೀಕ್ಷ್ಣನ ಆಶ್ರಮದಲ್ಲಿದ್ದು ಬೆಳಗಾದಮೇಲೆ ರಾಮನು ಸೀತೆ ಲಕ್ಷ್ಮಣರೊಡನೆಯೂ ಆ ಸುತೀಕ್ಷ್ಣನೊಡನೆಯೂ ಕೂಡಿಕೊಂಡು ಅಗಸ್ತ್ಯನೊಡನೆ ಕೂಡಿ ಮಾತನಾಡಬೇಕೆಂಬ ಮನಸ್ಸುಳ್ಳವನಾಗಿ ಮುಂದೆ ಹೊರಟು ಅಗಸ್ತ್ಯನ ತಮ್ಮನ ಆಶ್ರಮಕ್ಕೆ ಹೋದನು.

ಇಂತು ಶ್ರೀಮದಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ಎರಡನೆಯ ಸರ್ಗವು ಮುಗಿದುದು.

ಅಥ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ತೃತೀಯಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಓಂ ಅಸ್ಯ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ತೃತೀಯಸರ್ಗಸ್ಯ

ಶ್ರೀ ಭಗವಾನ್ ಬಾದರಾಯಣ ಋಷಿಃ, ಗಾಯತ್ರೀ ಛಂದಃ, ಓಂ ನಮೋ ನಾರಾಯಣೋ ದೇವತಾ, ಶ್ರೀ ಲಕ್ಷ್ಮೀ ಬೀಜಂ, ಪರಮಾ ಶಕ್ತಿಃ, ಅವ್ಯಕ್ತಂ ಕೀಲಕಂ, ಅಮುಕಸಂಪುಟೀಕರಣ ಸಿದ್ಧ್ಯರ್ಥಂ ಅಮುಕಮಂತ್ರ ಲೋಮ ವಿಲೋಮ ಸಂಪುಟೀಕರಣ ದಶಾಧ್ಯಾಯೀ ಮಂತ್ರಾಷ್ಟಾಕ್ಷರ ಸಂಯುಕ್ತಂ ತೃತೀಯಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ.

ಓಂ ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ಮೂರನೆಯ ಸರ್ಗಕ್ಕೆ

ಶ್ರೀ ಭಗವಾನ್ ಬಾದರಾಯಣನು ಋಷಿಯು, ಗಾಯತ್ರೀ ಛಂದಸ್ಸು, ಓಂ ನಮೋ ನಾರಾಯಣ ಎಂಬುದು ದೇವತೆಯು. ಶ್ರೀ ಲಕ್ಷ್ಮೀಃ ಎಂಬುದು ಬೀಜವು, ಪರಮಾ ಎಂಬುದು ಶಕ್ತಿಯು, ಅವ್ಯಕ್ತಂ ಎಂಬುದು ಕೀಲಕವು, ಇಂತಹ ಸಂಪುಟೀಕರಣದ ಸಿದ್ಧಿಗೋಸ್ಕರ ಇಂತಹ ಮಂತ್ರದ ಲೋಮ ವಿಲೋಮ ಸಂಪುಟೀಕರಣದ ದಶಾಧ್ಯಾಯದಲ್ಲಿ ಎಂಟಕ್ಷರದ ಮಂತ್ರದಿಂದ ಕೂಡಿದ ತೃತೀಯಸರ್ಗದ ನ್ಯಾಸ ಧ್ಯಾನ ಜಪಗಳನ್ನು ಮಾಡುತ್ತೇನೆ ಎಂದು ಸಂಕಲ್ಪ ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ಮಾಂ ರುಂ ಜಂ ಅಂಗುಷ್ಠಾಭ್ಯಾಂ ನಮಃ
ಓಂ ಮಾಂ ರುಂ ಜಂ ತರ್ಜನೀಭ್ಯಾಂ ನಮಃ
ಓಂ ಮಾಂ ರುಂ ಜಂ ಮಧ್ಯಮಾಭ್ಯಾಂ ನಮಃ
ಓಂ ಮಾಂ ರುಂ ಜಂ ಅನಾಮಿಕಾಭ್ಯಾಂ ನಮಃ
ಓಂ ಮಾಂ ರುಂ ಜಂ ಕನಿಷ್ಠಿಕಾಭ್ಯಾಂ ನಮಃ
ಓಂ ಮಾಂ ರುಂ ಜಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಷಡಂಗನ್ಯಾಸವು

ಓಂ ಮಾಂ ರುಂ ಜಂ ಹೃದಯಾಯ ನಮಃ

ಓಂ ಮಾಂ ರುಂ ಜಂ ಶಿರಸೇ ಸ್ವಾಹಾ

ಓಂ ಮಾಂ ರುಂ ಜಂ ಶಿಖಾಯೈ ವಷಟ್

ಓಂ ಮಾಂ ರುಂ ಜಂ ಕವಚಾಯ ಹುಂ

ಓಂ ಮಾಂ ರುಂ ಜಂ ನೇತ್ರತ್ರಯಾಯ ವೌಷಟ್

ಓಂ ಮಾಂ ರುಂ ಜಂ ಅಸ್ತ್ರಾಯ ಫಟ್

ಓಂ ಮಾಂ ರುಂ ಜಂ ಇತಿ ದಿಗ್ಬಂಧಃ

ಓಂ ಮಾಂ ರುಂ ಜಂ ಎಂದು ದಿಗ್ಬಂಧವು

॥ ಅಥ ಧ್ಯಾನಂ ॥

ಧ್ಯಾನವು

ಅಥ ರಾಮಃ ಸುತೀಕ್ಷ್ಣೇನ ಜಾನಕ್ಯಾ ಲಕ್ಷ್ಮಣೇನ ಚ । ಅಗಸ್ತ್ಯಸ್ಯಾನುಜಸ್ಥಾನಂ ಮಧ್ಯಾಹ್ನೇ ಸಮುಪದ್ಯತ ॥

ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಪಾರಾಯಣಾಂತೇ ಪುನಃ ಹೃದಯಾದಿ ಷಡಂಗನ್ಯಾಸಂ ಕೃತ್ವಾ ಓಂ ಮಾಂ ರುಂ ಜಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್.

ಪಾರಾಯಣವಾದಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ಮಾಂ ರುಂ ಜಂ ಇತಿ ದಿಗ್ವಿಮೋಕಃ ಎಂದೆನ್ನಬೇಕು.

ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

॥ ಇತಿ ಶ್ರೀ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ತೃತೀಯಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ ॥

ಇಂತು ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ಮೂರನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

|| ಶ್ರೀರಸ್ತು ||

ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ತೃತೀಯಸ್ಸರ್ಗಃ

|| ಶ್ರೀ ಮಹಾದೇವ ಉವಾಚ ||

ಅಥ ರಾಮುಸ್ಸುತೀಕ್ಷ್ಣೇನ ಜಾನಕ್ಯಾ ಲಕ್ಷ್ಮಣೇನ ಚ | ಅಗಸ್ತ್ಯಸ್ಯಾನುಜವನಂ ಮಧ್ಯಾಹ್ನೇ ಸಮುಪದ್ಯತ || ೧ ||

ತೇನ ಸಂಪೂಜಿತಸ್ಸಮ್ಯಗ್ಭುಕ್ತ್ವಾ ಮೂಲಫಲಾದಿಕಂ | ಪರೇದ್ಯುಃ ಪ್ರಾತರುತ್ಥಾಯ ಜಗ್ಮುಸ್ತೇಗಸ್ತ್ಯಮಂಡಲಂ || ೨ ||

ಅಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ಮೂರನೆಯ ಸರ್ಗವು.

೧. ಮಹಾದೇವನು ಹೇಳಿದನು—ಶ್ರೀರಾಮ ಲಕ್ಷ್ಮಣ ಸೀತೆಯೊಡನೆಯೂ ಸುತೀಕ್ಷ್ಣನೊಡನೆಯೂ ಹೊರಟು ಮಧ್ಯಾಹ್ನದ ಸಮಯಕ್ಕೆ ಸರಿಯಾಗಿ ಆ ಅಗಸ್ತ್ಯನ ತಮ್ಮನ ಆಶ್ರಮಕ್ಕೆ ಹೋದನು.

೨. ಅಗಸ್ತ್ಯನ ತಮ್ಮನು ಅವನನ್ನು ಗೌರವಿಸಿ ಹಣ್ಣು ಹಂಪಲುಗಳನ್ನು ಕೊಡಲು ಅವರು ಅದನ್ನು ತಿಂದರು. ಅನಂತರ ಮಾರನೆಯದಿನ ಬೆಳಿಗ್ಗೆ ಎದ್ದು ಅವರು ಅಗಸ್ತ್ಯನ ಆಶ್ರಮಕ್ಕೆ ಹೋದರು.

ಸರ್ವರ್ತುಫಲಪುಷ್ಪಾಢ್ಯಂ ನಾನಾಮೃಗಗಣೈರ್ಯುತಂ । ಪಕ್ಷಿಸಂಘೈಶ್ಚ ವಿವಿಧೈರ್ನಾದಿತಂ ನಂದನೋಪಮಂ ॥ ೩ ॥

ಬ್ರಹ್ಮರ್ಷಿಭಿರ್ದೇವರ್ಷಿಭಿಸ್ಸೇವಿತಂ ಮುನಿಮಂದಿರೈಃ । ಸರ್ವತೋಽಲಂಕೃತಂ ಸಾಕ್ಷಾದ್ಬ್ರಹ್ಮಲೋಕಮಿವಾಪರಂ ॥ ೪ ॥

ಬಹಿರೇವಾಶ್ರಮಸ್ಯಾಥ ಸ್ಥಿತ್ವಾ ರಾಮೋಽಬ್ರವೀನ್ಮುನಿಂ । ಸುತೀಕ್ಷ್ಣ ಗಚ್ಛ ತ್ವಂ ಶೀಘ್ರಮಾಗತಂ ಮಾಂ ನಿವೇದಯ ॥ ೫ ॥

---

೩. ಆರು ಋತುಗಳಲ್ಲಿಯೂ ಬೇರೆ ಬೇರೆಯಾಗಿ ಹಣ್ಣು ಹಂಪಲುಗಳನ್ನೂ ಹೂಗಳನ್ನೂ ಬಿಡುವ ಮರಗಳು ಯಾವಾಗಲೂ ಅಲ್ಲಿ ಹೂವು ಹಣ್ಣುಗಳನ್ನು ಬಿಡುತ್ತಿದ್ದುವು. ಅಲ್ಲಿ ನಾನಾ ಮೃಗಗಳೂ ಸ್ನೇಹದಿಂದ ಬೇಕಾದಂತೆ ಇರುತ್ತಿದ್ದುವು. ಅನೇಕವಾಗಿರುವ ಪಕ್ಷಿಗಳು ಅನೇಕ ವಿಧವಾಗಿ ಕೂಗುತ್ತಿದ್ದುವು. ಒಟ್ಟನಲ್ಲಿ ನಂದನವನದಂತೆ ಆ ಆಶ್ರಮವು ಇದ್ದಿತು.

೪. ಆ ಆಶ್ರಮದಲ್ಲಿ ಬ್ರಹ್ಮರ್ಷಿಗಳೂ, ದೇವರ್ಷಿಗಳೂ ಇದ್ದರು. ಇತರ ಅನೇಕ ಜನ ಋಷಿಗಳೂ ಇದ್ದರು. ಎಲ್ಲಾ ಕಡೆಯಲ್ಲಿಯೂ ಅಲಂಕರಿಸಲ್ಪಟ್ಟಿದ್ದಿತು. ಪ್ರತ್ಯಕ್ಷವಾದ ಬ್ರಹ್ಮಲೋಕವೋ ಎನ್ನುವಂತಿದ್ದಿತು.

೫. ರಾಮನು ಅಲ್ಲಿಗೆ ಹೋಗಿ ಆ ಆಶ್ರಮದ ಹೊರಗಡೆಯಲ್ಲಿ ಇದ್ದುಕೊಂಡೇ ಸುತೀಕ್ಷ್ಣನನ್ನು ಕುರಿತು, ಎಲೈ ಸುತೀಕ್ಷ್ಣನೇ ! ನೀನು ಅಗಸ್ತ್ಯನ ಬಳಿಗೆ ಹೋಗು. ನಾನು ಬಂದಿರುವೆನೆಂದು ಆ ಮುನಿಗೆ ತಿಳಿಸು. ಮತ್ತು ಈ ಸೀತೆಯೂ, ಲಕ್ಷ್ಮಣನೂ ಸಹ ಬಂದಿರುವರೆಂದೂ ತಿಳಿಸು ಎಂದನು.

ಅಗಸ್ತ್ಯ ಮುನಿವರ್ಯಾಯ ಸೀತಯಾ ಲಕ್ಷ್ಮಣೇನ ಚ | ಮಹಾಪ್ರಸಾದ ಇತ್ಯುಕ್ತ್ವಾ ಸುತೀಕ್ಷ್ಣಃ ಪ್ರಯಯೌ ಗುರೋಃ || ೬ ||
ಆಶ್ರಮಂ ತ್ವರಯಾ ತತ್ರ ಋಷಿಸಂಘಸಮಾವೃತಂ | ಉಪವಿಷ್ಟಂ ರಾಮಭಕ್ತೈರ್ವಿಶೇಷೇಣ ಸಮಾಯುತಂ || ೭ ||
ವ್ಯಾಖ್ಯಾತರಾಮಮಂತ್ರಾರ್ಥಂ ಶಿಷ್ಯೇಭ್ಯಶ್ಚಾತಿಭಕ್ತಿತಃ | ದೃಷ್ಟ್ವಾಗಸ್ತ್ಯಂ ಮುಶ್ರೇಷ್ಠಂ ಸುತೀಕ್ಷ್ಣಃ ಪ್ರಯಯೌ ಮುನೇಃ || ೮ ||
ದಂಡವತ್ಪ್ರಣಿಪತ್ಯಾಹ ವಿನಯಾವನತಸ್ಸುಧೀಃ | ರಾಮೋ ದಾಶರಥಿರ್ಬ್ರಹ್ಮನ್ ಸೀತಯಾ ಲಕ್ಷ್ಮಣೇನ ಚ ||
ಆಗತೋ ದರ್ಶನಾರ್ಥಂ ತೇ ಬಹಿಸ್ತಿಷ್ಠತಿ ಸಾಂಜಲಿಃ || ೯ ||

೬-೭. ಇದನ್ನು ಕೇಳಿ ಸುತೀಕ್ಷ್ಣನು "ಮಹಾಪ್ರಸಾದ" ವೆಂದು ಹೇಳಿ ಆ ಆಶ್ರಮದೊಳಕ್ಕೆ ಬೇಗನೆ ಹೋದನು. ಅಲ್ಲಿ ಅನೇಕ ಜನ ಋಷಿಗಳೊಡನೆಯೂ ಅದರಲ್ಲಿಯೂ ರಾಮಭಕ್ತರೊಡನೆಯೇ ಹೆಚ್ಚಾಗಿ ಸೇರಿಕೊಂಡು ಕುಳಿತಿರುವ ಆ ಅಗಸ್ತ್ಯನನ್ನು ನೋಡಿದನು.

೮. ಆ ಗುರುವಾದ ಅಗಸ್ತ್ಯನು ರಾಮಮಂತ್ರವನ್ನು ಅವರೆಲ್ಲರಿಗೂ ಉಪದೇಶಿಸುತ್ತಾ ಅರ್ಥವನ್ನು ಹೇಳುತ್ತಿದ್ದನು. ಇಂತಹ ಮುನಿಯನ್ನು ನೋಡಿದೊಡನೆಯೇ ಸುತೀಕ್ಷ್ಣನು ಅವನ ಬಳಿಗೆ ಹೋಗಿ ದೀರ್ಘದಂಡ ನಮಸ್ಕಾರ ಮಾಡಿ ವಿನಯದಿಂದ ಇಂತೆಂದನು.

೯. ಎಲೈ ಬ್ರಾಹ್ಮಣನೇ ! ದಶರಥನ ಮಗನಾದ ಶ್ರೀರಾಮನು ಹೆಂಡತಿಯಾದ ಸೀತೆಯೊಡನೆಯೂ, ತಮ್ಮನಾದ ಲಕ್ಷ್ಮಣನೊಡನೆಯೂ ನಿನ್ನ ದರ್ಶನಕ್ಕೋಸ್ಕರ ಬಂದಿರುವನು. ಆಶ್ರಮದ ಹೊರಗೆ ಕೈಮುಗಿದುಕೊಂಡು ನಿಂತಿರುವನು.

॥ ಅಗಸ್ತ್ಯ ಉವಾಚ ॥

ಶೀಘ್ರಮಾನಯ ಭದ್ರಂ ತೇ ರಾಮಂ ಮಮ ಹೃದಿ ಸ್ಥಿತಂ । ತಮೇವ ಧ್ಯಾಯಮಾನೋಽಹಂ ಕಾಂಕ್ಷಮಾಣೋತ್ರ ಸಂಸ್ಥಿತಃ ॥ ೧೦ ॥

ಇತ್ಯುಕ್ತ್ವಾಸ್ವಯಮುತ್ಥಾಯ ಮುನಿಭಿಸ್ಸಹಿತೋದ್ರುತಂ । ಅಭ್ಯಯಾತ್ಪರಯಾ ಭಕ್ತ್ಯಾ ಗತ್ವಾ ರಾಮಮಥಾಬ್ರವೀತ್ ॥ ೧೧ ॥

ಆಗಚ್ಛ ರಾಮ ಭದ್ರಂ ತೇ ದಿಷ್ಟ್ಯಾ ತೇದ್ಯ ಸಮಾಗಮಃ । ಪ್ರಿಯಾತಿಥಿರ್ಮಮ ಪ್ರಾಪ್ತೋಽಸ್ಯದ್ಯ ಮೇ ಸಫಲಂ ದಿನಂ ॥ ೧೨ ॥

ರಾಮೋಽಪಿ ಮುನಿಮಾಯಾಂತಂ ದೃಷ್ಟ್ವಾ ಹರ್ಷಸಮಾಕುಲಃ । ಸೀತಯಾ ಲಕ್ಷ್ಮಣೇನಾಪಿ ದಂಡವತ್ಪತಿತೋ ಭುವಿ ॥ ೧೩ ॥

---

೧೦. ಅಗಸ್ತ್ಯನು ಹೇಳಿದನು–ಅಯ್ಯಾ ! ನೀನು ಬೇಗನೆ ಹೋಗಿ ಅವನನ್ನು ಕರೆದುಕೊಂಡು ಬಾ. ಅವನೇ ನನ್ನ ಹೃದಯದಲ್ಲಿ ಯಾವಾಗಲೂ ಇರುವವನು. ಅವನನ್ನೇ ಧ್ಯಾನಮಾಡುತ್ತಾ ಇದ್ದುಕೊಂಡು ಇಲ್ಲಿಗೆ ಬಂದಾನೆ ? ಎಂದು ನಿರೀಕ್ಷಿಸುತ್ತಿದ್ದೇನೆ. ಎಂದನು.

೧೧. ಅಲ್ಲದೆ ಅವನಿಗೆ ಹೀಗೆಂದು ಹೇಳಿ ತಾನೇ ಜಾಗ್ರತೆಯಾಗಿ ಎದ್ದು ಅನೇಕ ಜನ ಋಷಿಗಳೊಡನೆ ಕೂಡಿಕೊಂಡು ಬಹುಭಕ್ತಿಯಿಂದ ಎದುರುಗೊಂಡನು. ಮತ್ತು ಆ ರಾಮನನ್ನು ಕುರಿತು ಇಂತೆಂದು ಆ ಅಗಸ್ತ್ಯ ಮಹಾಮುನಿಯು ಹೇಳಿದನು.

೧೨. ಎಲೈ ರಾಮನೇ ! ಬಾ ! ನಿನಗೆ ಮಂಗಳವೆ ! ಬಹುಸಂತೋಷ. ನಿನ್ನ ದರ್ಶನವಾಯಿತಲ್ಲ ! ನನಗೆ ಒಳ್ಳೆಯ ಪ್ರೀತಿಪಾತ್ರನಾದ ಅತಿಥಿಯು ಬಂದಿದ್ದೀಯೆ. ಈ ದಿನವೇ ಸುದಿನವು ಎಂದನು.

೧೩. ರಾಮನೂ ಕೂಡ ಆ ಋಷಿಯು ಬರುತ್ತಿರುವುದನ್ನು ನೋಡಿ ಹರ್ಷಗೊಂಡನು. ರಾಮನೂ, ಲಕ್ಷ್ಮಣನೂ, ಸೀತೆಯೂ ಬಹು ಸಂತೋಷದಿಂದ ಅವನಿಗೆ ದೀರ್ಘದಂಡನಮಸ್ಕಾರವನ್ನು ಮಾಡಿದರು.

ದ್ರುತಮುತ್ಥಾಪ್ಯ ಮುನಿರಾಡ್ರಾಮಮಾಲಿಂಗ್ಯ ಭಕ್ತಿತಃ । ತದ್ಗಾತ್ರಸ್ಪರ್ಶಜಾಹ್ಲಾದಸ್ರವನ್ನೇತ್ರಜಲಾಕುಲಃ ॥ ೧೪ ॥
ಗೃಹೀತ್ವಾ ಕರಮೇಕೇನ ಕರೇಣ ರಘುನಂದನಂ । ಜಗಾಮ ಸ್ವಾಶ್ರಮಂ ಹೃಷ್ಟೋ ಮನಸಾ ಮುನಿಪುಂಗವಃ ॥ ೧೫ ॥
ಸುಖೋಪವಿಷ್ಟಂ ಸಂಪೂಜ್ಯ ಪೂಜಯಾ ಬಹುವಿಸ್ತರಂ । ಭೋಜಯಿತ್ವಾ ಯಥಾನ್ಯಾಯ್ಯಂ ಭೋಜ್ಯೈರ್ವನ್ಯೈರನೇಕಧಾ ॥ ೧೬ ॥
ಸುಖೋಪವಿಷ್ಟಮೇಕಾಂತೇ ರಾಮಂ ಶಶಿನಿಭಾನನಂ । ಕೃತಾಂಜಲಿರುವಾಚೇದಮಗಸ್ತ್ಯೋ ಭಗವಾನ್ ಋಷಿಃ ॥ ೧೭ ॥

---

೧೪. ಈ ಅಗಸ್ತ್ಯನು ಬೇಗನೇ ರಾಮನನ್ನು ಮೇಲಕ್ಕೆಬ್ಬಿಸಿ ಗಟ್ಟಿಯಾಗಿ ಆಲಿಂಗಿಸಿಕೊಂಡನು. ಆ ರಾಮನ ಮೈಸೋಕಿದುದರಿಂದ ಹರ್ಷದಿಂದ ಆ ಋಷಿಯ ಕಣ್ಣಿನಲ್ಲಿ ನೀರು ಬಂದಿತು.

೧೫. ಆ ರಾಮನ ಕೈಮ್ಯನಲ್ಲಿ ತಾನು ಒಂದು ಕೈಯ್ಯನ್ನು ಹಿಡಿದುಕೊಂಡು ತನ್ನ ಆಶ್ರಮಕ್ಕೆ ಬಹು ಸಂತೋಷದಿಂದ ಕರೆತಂದನು.

೧೬. ಅಲ್ಲಿ ಉತ್ತಮವಾದ ಆಸನವನ್ನು ಕೊಟ್ಟುಕೂರಿಸಿ ವಿಜೃಂಭಣೆಯಿಂದ ಪೂಜಿಸಿ ಅನೇಕ ಬಗೆಯಾದ ಅನ್ನಗಳಿಂದಲೂ ಇತರ ಪದಾರ್ಥಗಳಿಂದಲೂ ಭೋಜನವನ್ನು ಮಾಡಿಸಿದನು.

೧೭. ಅನಂತರ ಆ ಮನೋಹರವಾದ ಮುಖವುಳ್ಳ ರಾಮನು ಸುಖವಾಗಿ ಒಬ್ಬನೇ ಕುಳಿತಿರುವಾಗ ಅವನನ್ನು ಕುರಿತು ಈ ಮುನಿಯು ಕೈಮುಗಿದುಕೊಂಡು ಇಂತೆಂದು ಹೇಳಿದನು.

ತ್ವದಾಗಮನಮೇವಾಹಂ ಪ್ರತೀಕ್ಷನ್ ಸಮುಪಸ್ಥಿತಃ । ಯದಾ ಕ್ಷೀರಸಮುದ್ರಾಂತೇ ಬ್ರಹ್ಮಣಾ ಪ್ರಾರ್ಥಿತಃ ಪುರಾಃ ॥ ೧೮ ॥

ಭೂಮೇರ್ಭಾರಾಪನುತ್ಯರ್ಥಂ ರಾವಣಸ್ಯ ವಧಾಯ ಚ । ತಥಾದಿ ದರ್ಶನಾಕಾಂಕ್ಷೀ ತವ ರಾಮ ತಪಶ್ಚರನ್ ॥ ೧೯ ॥

ಸಾಮಿ ಮುನಿಭಿಸ್ಸಾರ್ಧಂ ತ್ವಾಮೇವ ಪರಿಚಿಂತಯನ್ । ಸೃಷ್ಟೇಃ ಪ್ರಾಗೇಕ ಏವಾಸೀರ್ನಿರ್ವಿಕಲ್ಪೋನುಪಾಧಿಕಃ ॥ ೨೦ ॥

ತ್ವದಾಶ್ರಯಾ ತ್ವದ್ವಿಷಯಾ ಮಾಯಾ ತೇ ಶಕ್ತಿರುಚ್ಯತೇ । ತ್ವಾಮೇವ ನಿರ್ಗುಣಂ ಶಕ್ತಿರಾವೃಣೋತಿ ಯದಾ ತದಾ ॥ ೨೧ ॥

೧೮-೧೯. ಎಲೈ ರಾಮನೆ! ನಿನ್ನ ಬರುವಿಕೆಯನ್ನೇ ಎದುರು ನೋಡುತ್ತಾ ನಾನು ಇಲ್ಲಿ ಇದ್ದುಕೊಂಡಿದ್ದೇನೆ. ಪೂರ್ವದಲ್ಲಿ ಬ್ರಹ್ಮನು ಕ್ಷೀರಸಮುದ್ರಕ್ಕೆ ಬಂದು ನೀನು ಭೂಮಿಯಲ್ಲಿ ಅವತರಿಸಿ ಭೂಭಾರವನ್ನು ನಾಶಮಾಡಿ ರಾವಣನನ್ನು ಕೊಂದುಹಾಕಬೇಕೆಂದು ಕೇಳಿದನು. ಆ ದಿನದ ಮೊದಲುಗೊಂಡು ನಿನ್ನ ದರ್ಶನವನ್ನು ಎದುರು ನೋಡುತ್ತಾ ನಿನ್ನನ್ನೇ ಧ್ಯಾನಿಸುತ್ತಾ ಈ ಮುನಿಗಳೊಡನೆ ಇಲ್ಲಿ ಇದ್ದೇನೆ.

೨೦. ಈ ಜಗತ್ತು ಸೃಷ್ಟಿಯಾಗುವುದಕ್ಕೆ ಮೊದಲು ನೀನು ಒಬ್ಬನೇ ಒಬ್ಬನಾಗಿದ್ದುಕೊಂಡಿದ್ದೆ. ನಿನ್ನಲ್ಲಿ ವಿಕಲ್ಪವೇ ಇಲ್ಲ, ನಿನಗೆ ಯಾವ ಉಪಾಧಿಗಳೂ ಕೂಡಾ ಇಲ್ಲ. ಆ ಮಾಯೆಯೆಂಬುದು ನಿನ್ನನ್ನೇ ಆಶ್ರಯಿಸಿಕೊಂಡಿದ್ದು ನಿನ್ನನ್ನೇ ಗುರಿಮಾಡಿಕೊಂಡು ನಿನ್ನಲ್ಲಿ ಅಧೀನವಾಗಿರುವ ಒಂದು ಶಕ್ತಿಯೆನಿಸಿಕೊಂಡಿದೆ.

೨೧. ಆ ರೀತಿಯ ಶಕ್ತಿಯಾದ ಮಾಯೆಯು ನಿರ್ಗುಣನಾದ ನಿನ್ನನ್ನು ಆವರಿಸಿಕೊಂಡಾಗ ಅದನ್ನು ವೇದಾಂತಿಗಳು ಅವ್ಯಾಕೃತವೆಂದು ಹೇಳುತ್ತಾರೆ.

ಅವ್ಯಾಕೃತಮಿತಿ ಪ್ರಾಹುರ್ವೇದಾಂತ ಪರಿನಿಷ್ಠಿತಾಃ । ಮೂಲಪ್ರಕೃತಿರಿತ್ಯೇಕೇ ಪ್ರಾಹುರ್ಮಾಯೇತಿ ಕೇಚನ ॥ ೨೨ ॥

ಅವಿದ್ಯಾಸಂಸ್ಕೃತಿರ್ಬಂಧ ಇತ್ಯಾದಿಬಹುಧೋಚ್ಯತೇ । ತ್ವಯಾ ಸಂಕ್ಷೋಭ್ಯಮಾಣಾ ಸಾ ಮಹತ್ತತ್ತ್ವಂ ಪ್ರಸೂಯತೇ ॥ ೨೩ ॥

ಮಹತ್ತತ್ತ್ವಾದಹಂಕಾರಸ್ತ್ವಯಾ ಸಂಚೋದಿತಾದಭೂತ್ । ಅಹಂಕಾರೋ ಮಹತ್ತತ್ತ್ವಸಂವೃತಸ್ತ್ರಿವಿಧೋಭವತ್ ॥ ೨೪ ॥

ಸಾತ್ತ್ವಿಕೋ ರಾಜಸಶ್ಚೈವ ತಾಮಸಶ್ಚೇತಿ ಭಣ್ಯತೇ । ತಾಮಸಾತ್ಸೂಕ್ಷ್ಮತನ್ಮಾತ್ರಾಣ್ಯಾಸನ್ಭೂತಾನ್ಯತಃ ಪರಂ ॥ ೨೫ ॥

೨೨-೨೩. ನಿರ್ಗುಣನಾದ ನೀನು ಆ ಮಾಯಾಶಕ್ತಿಯಿಂದ ಸೇರಿಕೊಂಡಿರುವಿಕೆಯನ್ನೇ ಮೂಲಪ್ರಕೃತಿಯೆಂದು ಕೆಲವರೂ ಮಾಯೆಯೆಂದು ಕೆಲವರೂ, ಆ ವಿದ್ಯೆಯೆಂದು ಕೆಲವರೂ, ಬಂಧವೆಂದು ಕೆಲವರೂ, ಸಂವೃತಿಯೆಂದು ಕೆಲವರೂ, ಹೇಳುತ್ತಾರೆ. ಇನ್ನೂ ಅನೇಕರು ಅನೇಕ ವಿಧವಾಗಿ ಹೇಳುತ್ತಾರೆ. ನೀನು ಆ ಮಾಯೆಯನ್ನು ಕೂಡಿದಾಗ ಅದರಿಂದ ಮಹತ್ತತ್ತ್ವವು ಉಂಟಾಗುತ್ತದೆ.

೨೪. ಅನಂತರ ಆ ಮಹತ್ತತ್ತ್ವದಿಂದ ಅಹಂಕಾರವೂ ನಿನ್ನ ಪ್ರೇರಣೆಯಿಂದಲೇನೇ ಹುಟ್ಟುತ್ತದೆ. ಮಹತ್ತತ್ತ್ವದಿಂದ ಉಂಟಾದ ಅಹಂಕಾರವು ಅವುಗಳಿಂದಲೇ ಕೂಡಿಕೊಂಡು ಮೂರುಬಗೆಯಾಗಿ ಆಗುತ್ತದೆ.

೨೫-೨೬. ಅದು ಸಾತ್ತ್ವಿಕಾಹಂಕಾರ, ರಾಜಸಾಹಂಕಾರ, ತಾಮಸಾಹಂಕಾರವೆಂಬ ಹೆಸರುಗಳನ್ನು ಹೊಂದಿ ಮೂರು ವಿಧವಾಗಿ ಪ್ರಸಿದ್ಧವಾಗುತ್ತದೆ. ತಾಮಸಾಹಂಕಾರದಿಂದ ರೂಪ, ರಸ, ಗಂಧ, ಸ್ಪರ್ಶ, ಶಬ್ದಗಳೆಂಬ ಸೂಕ್ಷ್ಮತನ್ಮಾತ್ರಗಳೂ, ಅವುಗಳಿಗೆ ಆಶ್ರಯವಾದ

ಸ್ಥೂಲಾನಿ ಕ್ರಮಶೋ ರಾಮ ಕ್ರಮೋತ್ತರಗುಣಾನಿಹ । ರಾಜಸಾನೀಂದ್ರಿಯಾಣ್ಯೇವ ಸಾತ್ವಿಕಾ ದೇವತಾ ಮನಃ ॥ ೨೬ ॥
ತೇಭ್ಯೋ ಭವತ್ಸೂತ್ರರೂಪಂ ಲಿಂಗಂ ಸರ್ವಗತಂ ಮಹತ್ । ತತೋ ವಿರಾಟ್ಸಮುತ್ಪನ್ನಃ ಸ್ಥೂಲಾದ್ಭೂತಕದಂಬಕಾತ್ ॥ ೨೭ ॥
ವಿರಾಜಃ ಪುರುಷಾತ್ಸರ್ವಂ ಜಗತ್ಸ್ಥಾವರಜಂಗಮಂ । ದೇವತಿರ್ಯಙ್ಮನುಷ್ಯಾಶ್ಚ ಕಾಲಕರ್ಮಕ್ರಮೇಣ ತು ॥ ೨೮ ॥
ತ್ವಂ ರಜೋಗುಣತೋ ಬ್ರಹ್ಮಾ ಜಗತಃ ಸರ್ಗಕಾರಣಂ । ಸತ್ವಾದ್ವಿಷ್ಣುಸ್ತ್ವಮೇವಾಸ್ಯ ಪಾಲಕಸ್ಸದ್ಭಿರುಚ್ಯತೇ ॥ ೨೯ ॥

ಪೃಥ್ವಿ, ಅಪ್ಪು ತೇಜಸ್ಸು, ವಾಯು, ಆಕಾಶಗಳೆಂಬ ಸ್ಥೂಲತನ್ಮಾತ್ರಗಳೂ ಉಂಟಾಗುವುವು. ರಾಜಸಾಹಂಕಾರದಿಂದ ಪಂಚೇಂದ್ರಿಯಗಳೂ ಸಾತ್ರಿಕಾಹಂಕಾರದಿಂದ ಅವುಗಳಿಗೆ ಯಜಮಾನನಾಗಿ ನಡೆಸುವ ಮನಸ್ಸೂ ಉಂಟಾಯಿತು.

೨೭. ಇವೆಲ್ಲವೂ ಸೇರಿಕೊಂಡು ಅದಕ್ಕೆ ಸೂತ್ರರೂಪವಾದ ಲಿಂಗಾತ್ಮಕವಾದ, ಕಣ್ಣಿಗೆ ಕಾಣುವ, ಶರೀರವು ಉಂಟಾಯಿತು. ಈ ಲಿಂಗಶರೀರದಿಂದ ವಿರಾಟ್‌ಸ್ವರೂಪನು ಹುಟ್ಟಿದನು. ಆ ವಿರಾಟ್‌ಪುರುಷನಿಂದ ಈ ಸ್ಥಾವರ ಜಂಗಮಾತ್ಮಕವಾದ ಜಗತ್ತು ಉತ್ಪನ್ನವಾಯಿತು.

೨೮. ಕಾಲಕ್ರಮದಿಂದ ದೇವತೆಗಳೂ, ತಿರ್ಯಕ್‌ಪ್ರಾಣಿಗಳೂ, ಮನುಷ್ಯರೂ, ಉಂಟಾದರು. ಇದಕ್ಕೆ ಕಾಲಕರ್ಮಗಳೆಂಬಿವು ಕಾರಣಗಳಾದುವು.

೨೯. ಆಗ ನೀನೇ ರಜೋಗುಣದಿಂದ ಬ್ರಹ್ಮನಾಗಿ ಜಗತ್ತುಗಳನ್ನು ಸೃಷ್ಟಿಸಿದೆ. ನೀನೇ ಸತ್ತ್ವಗುಣವನ್ನು ಹೊಂದಿ ವಿಷ್ಣುವೆಂದೆನಿಸಿಕೊಂಡು ಜಗತ್ತನ್ನು ಪಾಲಿಸುತ್ತೀಯೆ. ಎಂದು ಸಜ್ಜನರು ಹೇಳುತ್ತಾರೆ.

ಲಯೇ ರುದ್ರಸ್ತ್ವಮೇವಾಸ್ಯ ತ್ವನ್ಮಾಯಾಗುಣಭೇದತಃ | ಜಾಗ್ರತ್ಸ್ವಪ್ನಸುಷುಪ್ತ್ಯಾಖ್ಯಾ ವೃತ್ತಯೋ ಬುದ್ಧಿಜೈರ್ಗುಣೈಃ ॥ ೩೦ ॥
ತಾಸಾಂ ವಿಲಕ್ಷಣೋ ರಾಮಸ್ತ್ವಂ ಸಾಕ್ಷೀ ಚಿನ್ಮಯೋಽವ್ಯಯಃ । ಸೃಷ್ಟಿಲೀಲಾಂ ಯದಾ ಕರ್ತುಮೀಹಸೇ ರಘುನಂದನ ॥ ೩೧ ॥
ಅಂಗೀಕರೋಷಿ ಮಾಯಾಂ ತ್ವಂ ತದಾ ವೈ ಗುಣವಾನಿವ | ರಾಮ ಮಾಯಾ ದ್ವಿಧಾ ಭಾತಿ ವಿದ್ಯಾವಿದ್ಯೇತಿ ತೇ ಸದಾ ॥ ೩೨ ॥
ಪ್ರವೃತ್ತಿಮಾರ್ಗನಿರತಾ ಅವಿದ್ಯಾವಶವರ್ತಿನಃ | ನಿವೃತ್ತಿಮಾರ್ಗನಿರತಾ ವೇದಾಂತಾರ್ಥವಿಚಾರಕಾಃ ॥ ೩೩ ॥

---

೩೦. ಅದೇ ನೀನು ತಮೋಗುಣದಿಂದ ರುದ್ರನಾಗಿ ಜಗತ್ತೆಲ್ಲವನ್ನೂ ನಾಶಮಾಡುತ್ತೀಯೆ. ಈ ದೇಹವೆಲ್ಲವೂ ಕೂಡಾ ನಿನ್ನ ಮಾಯೆಯ ಗುಣಭೇದಗಳಿಂದೇ ಹೇಳುತ್ತಾರೆ. ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ವೃತ್ತಿಗಳು (ಸ್ಥಿತಿಗಳು) ಆ ಬುದ್ಧಿಯಿಂದ ಉಂಟಾದ ಗುಣಗಳು. ಅವೆಲ್ಲಕ್ಕಿಂತಲೂ ನೀನು ಬೇರೆಯಾದ ಚಿನ್ಮಯನೂ ಅವ್ಯಯನೂ ಸಾಕ್ಷಿಯೂ ಆಗಿದ್ದೀಯೆ. ಎಲೈ ರಾಮನೇ! ನೀನು ಇಂತಹವನು.

೩೧–೩೨. ಎಲೈ ರಘುನಂದನನಾದ ರಾಮನೆ! ನೀನು ಸೃಷ್ಟಿರೂಪವಾದ ಲೀಲೆಯನ್ನು ಮಾಡಬೇಕೆಂದು ಅಪೇಕ್ಷಿಸಿದಾಗ ಮಾಯೆಯನ್ನು ಅಂಗೀಕರಿಸಿ ಅವಳ ಒಡಗೂಡುತ್ತೀಯೆ. ಆಗ ನೀನು ಗುಣವುಳ್ಳವನಂತೆ ಆಗುತ್ತೀಯೆ. ಆದರೆ ಆ ಗುಣವು ನಿನ್ನಲ್ಲಿರುವುದಿಲ್ಲ. ಎಲೈ ರಾಮನೆ! ನಿನ್ನ ಸಂಬಂಧವಾದ ಆ ಮಾಯೆಯು ವಿದ್ಯೆಯೆಂದೂ ಅವಿದ್ಯೆಯೆಂದೂ ಎರಡು ಬಗೆಯಾಗಿ ಕಾಣುತ್ತದೆ.

೩೩. ಪ್ರವೃತ್ತಿಮಾರ್ಗದಲ್ಲಿಯೇ ಇರತಕ್ಕವರು ಅವಿದ್ಯೆಗೆ ಅಧೀನರಾದವರು. ಎಂದರೆ ಪ್ರವೃತ್ತಿಯನ್ನುಂಟುಮಾಡುವುದೇ ಅವಿದ್ಯೆಯು. ನಿವೃತ್ತಿಮಾರ್ಗದಲ್ಲಿರುವವರೇ ವಿದ್ಯೆಯನ್ನು ಹೊಂದಿದವರು. ಅವರು ವೇದಾಂತಾರ್ಥವನ್ನು ವಿಚಾರಮಾಡುತ್ತಾ, ನಿವೃತಿಮಾರ್ಗವನ್ನನುಭವಿಸುತ್ತಾರೆ.

ತ್ವದ್ಭಕ್ತಿನಿರತಾ ಯೇ ಚ ತೇ ವೈ ವಿದ್ಯಾಮಯಾಸ್ಸ್ಮೃತಾಃ । ಅವಿದ್ಯಾವಶಗಾ ಯೇ ತು ನಿತ್ಯಂ ಸಂಸಾರಿಣಶ್ಚ ತೇ ॥ ೩೪ ॥

ವಿದ್ಯಾಭ್ಯಾಸರತಾ ಯೇ ತು ನಿತ್ಯಮುಕ್ತಾಸ್ತ ಏವ ಹಿ । ಲೋಕೇ ತ್ವದ್ಭಕ್ತಿ ನಿರತಾಸ್ತ್ವನ್ಮಂತ್ರೋಪಾಸಕಾಶ್ಚ ಯೇ ॥ ೩೫ ॥

ವಿದ್ಯಾಪ್ರಾದುರ್ಭವೇತ್ತೇಷಾಂ ನೇತರೇಷಾಂ ಕದಾಚನ । ಅತಸ್ತ್ವದ್ಭಕ್ತಿಸಂಪನ್ನಾ ಮುಕ್ತಾ ಏವ ನ ಸಂಶಯಃ ॥ ೩೬ ॥

ತ್ವದ್ಭಕ್ತ್ಯಮೃತಹೀನಾನಾಂ ಮೋಕ್ಷಃ ಸ್ವಪ್ನೇಪಿ ನೋ ಭವೇತ್ । ಕಿಂ ರಾಮ ಬಹುನೋಕ್ತೇನ ಸಾರಂ ಕಿಂಚಿದ್ಬ್ರವೀಮಿ ತೇ ॥ ೩೭ ॥

---

೩೪. ನಿನ್ನಲ್ಲಿ ಯಾರು ಭಕ್ತಿಯುಳ್ಳವರೋ ಅವರು ವಿದ್ಯೆಯಿಂದ ಕೂಡಿದವರೆಂದು ತಿಳಿ. ಯಾರು ಯಾವಾಗಲೂ ಅವಿದ್ಯೆಯಿಂದ ಕೂಡಿರುವರೋ ಅವರು ಸಂಸಾರರೂಪವಾದ ಜನನಮರಣಗಳುಳ್ಳವರೆಂದು ತಿಳಿ. ವಿದ್ಯೆಯಿಂದ ಕೂಡಿಕೊಂಡಿರತಕ್ಕವರು ಯಾವಾಗಲೂ ನಿತ್ಯಮುಕ್ತರೆಂದು ತಿಳಿ.

೩೫–೩೬. ಲೋಕದಲ್ಲಿ ಯಾರು ನಿನ್ನಲ್ಲಿ ಭಕ್ತಿಯನ್ನು ಹೊಂದಿರುವರೋ ನಿನ್ನ ಮಂತ್ರವನ್ನು ಉಪಾಸನೆಮಾಡುವವರೋ ಅವರಿಗೆ ಆ ವಿದ್ಯೆಯೆಂಬುದು ಬರುತ್ತದೆ. ಇತರರಿಗೆ ಉಂಟಾಗುವುದಿಲ್ಲ. ಆದ್ದರಿಂದ ನಿನ್ನಲ್ಲಿ ಭಕ್ತಿಯನ್ನಿಟ್ಟಿರುವವರು ಮುಕ್ತರೆಂಬುದರಲ್ಲಿ ಸಂಶಯವೇ ಇಲ್ಲ.

೩೭. ನಿನ್ನಲ್ಲಿ ಭಕ್ತಿಯೆಂಬ ಅಮೃತವನ್ನು ದಾನಮಾಡದವರಿಗೆ ಮೋಕ್ಷವೆಂಬುದು ಸ್ವಪ್ನದಲ್ಲಿಯೂ ಸಿಕ್ಕುವುದಿಲ್ಲ. ಎಲೈ ರಾಮನೇ! ಬಹುವಾದ ಮಾತಿನಿಂದೇನು ? ಸಾರವಾದ ಅಂಶವನ್ನು ಹೇಳುತ್ತೇನೆ.

ಸಾಧುಸಂಗತಿರೇವಾತ್ರ ಮೋಕ್ಷಹೇತುರುದಾಹೃತಾ । ಸಾಧವಸ್ಸಮಚಿತ್ತಾ ಯೇ ನಿಸ್ಪೃಹಾ ವಿಗತೈಷಿಣಃ ॥ ೩೮ ॥

ದಾಂತಾಃ ಪ್ರಶಾಂತಾಸ್ತ್ವದ್ಭಕ್ತಾ ನಿವೃತ್ತಾಖಿಲಕಾಮನಾಃ । ಇಷ್ಟಪ್ರಾಪ್ತಿನಿವೃತ್ತ್ಯೋಶ್ಚ ಸಮಾಸ್ಸಂಗವಿವರ್ಜಿತಾಃ ॥ ೩೯ ॥

ಸಂನ್ಯಸ್ತಾಖಿಲಕರ್ಮಾಣಸ್ಸರ್ವದಾ ಬ್ರಹ್ಮತತ್ಪರಾಃ । ಯಮಾದಿಗುಣಸಂಪನ್ನಾಸ್ಸಂತುಷ್ಟಾ ಯೇನ ಕೇನ ಚಿತ್ ॥ ೪೦ ॥

೩೮–೩೯. ಸಾಧುಗಳ ಸಹವಾಸವೇ ಮೋಕ್ಷಕ್ಕೆ ಕಾರಣವೆಂದು ಹೇಳಲ್ಪಟ್ಟಿದೆ. ಸಾಧುಗಳ ಲಕ್ಷಣವನ್ನು ಹೇಳುತ್ತೇನೆ. ಕೇಳು. ಅವರು ಎಲ್ಲರಲ್ಲಿಯೂ ಒಂದೇ ರೀತಿಯಾದ ಮನಸುಳ್ಳವರಾಗಿರಬೇಕು. ಆಸೆಯನ್ನು ಬಿಟ್ಟಿರಬೇಕು. ಪುತ್ರೈಷಾ, ದಾರೈಷಾ, ಧನೈಷೆಗಳೆಂಬುದನ್ನು ಬಿಟ್ಟಿರಬೇಕು. ಇಂದ್ರಿಯ ನಿಗ್ರಹಿಗಳಾಗಿರಬೇಕು. ಶಾಂತಿಗುಣವುಳ್ಳವರಾಗಿರಬೇಕು. ನಿನ್ನಲ್ಲಿ ಭಕ್ತಿಯುಳ್ಳವರಾಗಿರಬೇಕು. ಸಮಸ್ತ ಇಚ್ಛೆಗಳನ್ನೂ ಬಿಟ್ಟಿರಬೇಕು. ಬೇಕಾದ ಪದಾರ್ಥವು ದೊರೆತಾಗ ಸಂತೋಷಗೊಳ್ಳುತ್ತಲು ಬೇಡವಾದುದು ಬಂದಾಗಲೂ ದುಃಖಗೊಳ್ಳುತ್ತಲು ಇರದೆ ಯಾವಾಗಲೂ ಸಮವಾಗಿರಬೇಕು. ಒಬ್ಬರಲ್ಲಿಯೂ ಹೆಚ್ಚುಪ್ರೀತಿ ದ್ವೇಷಗಳಿಲ್ಲದೆ ಇರಬೇಕು. ಸಹವಾಸವನ್ನು ಬಿಟ್ಟಿರಬೇಕು.

೪೦. ಎಲ್ಲಾ ಕೆಲಸಗಳಲ್ಲಿಯೂ ತಿಳಿವಳಿಕೆ ಹೊಂದಿ ಬಿಟ್ಟಿರಬೇಕು. ಯಾವಾಗಲೂ ಬ್ರಹ್ಮವೊಂದರಲ್ಲೇ ಆಸಕ್ತರಾಗಿರಬೇಕು. ಅಹಿಂಸೆ ಅಸ್ತೇಯು, ಅಸತ್ಯ, ಬ್ರಹ್ಮಚರ್ಯ ಅಪರಿಗ್ರಹ, ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯು, ಈಶ್ವರಾರ್ಪಣಗಳೆಂಬ ಯಮಾದಿಗುಣಗಳಿಂದ ಕೂಡಿರಬೇಕು. ಈಶ್ವರೇಚ್ಛೆಯಿಂದ ಯಾವುದು ಸಿಕ್ಕಿದರೆ ಅದರಿಂದಲೇ ಸಂತೋಷಗೊಂಡಿರಬೇಕು. ಇಂತಹವರೇ ಸಾಧುಗಳು.

ಸತ್ಸಂಗವೋ ಭವೇದ್ಯರ್ಹಿ ತ್ವತ್ಕಥಾಶ್ರವಣೇ ರತಿಃ । ಸಮುದೇತಿ ತತೋ ಭಕ್ತಿ ಸ್ತ್ವಯಿ ರಾಮ ಸನಾತನೇ ॥ ೪೧ ॥

ತ್ವದ್ಭಕ್ತಾವುಪಪನ್ನಾಯಾಂ ವಿಜ್ಞಾನಂ ವಿಪುಲಂ ಸ್ಫುಟಂ । ಉದೇತಿ ಮುಕ್ತಿಮಾರ್ಗೋಽಯಮಾದ್ಯಶ್ಚತುರಸೇವಿತಃ ॥ ೪೨ ॥

ತಸ್ಮಾದ್ರಾಘವ ಸದ್ಭಕ್ತಿಸ್ತ್ವಯಿ ಮೇ ಪ್ರೇಮಲಕ್ಷಣಾ । ಸದಾ ಭೂಯಾದ್ಧರೇ ಸಂಗಸ್ತ್ವದ್ಭಕ್ತೇಷು ವಿಶೇಷತಃ ॥ ೪೩ ॥

ಅದ್ಯ ಮೇ ಸಫಲಂ ಜನ್ಮ ಭವತ್ಸಂದರ್ಶನಾದಭೂತ್ । ಅದ್ಯ ಮೇ ಕ್ರತವಸ್ಸರ್ವೇ ಬಭೂವುಸ್ಸಫಲಾಃ ಪ್ರಭೋ ॥ ೪೪ ॥

---

೪೧. ಇಂತಹ ಸಾಧುಗಳು ಸಿಕ್ಕಿದಾಗ ರಾಮಕಥಾ ಶ್ರವಣದಲ್ಲಿ ಆಸಕ್ತಿಯು ಉಂಟಾಗುವುದು. ಅದರಿಂದ ಅವರಿಗೆ ಭಕ್ತಿಯು ಉಂಟಾಗುತ್ತದೆ. ಮತ್ತು ಹೆಚ್ಚುತ್ತದೆ.

೪೨. ನಿನ್ನಲ್ಲಿ ಭಕ್ತಿಯು ಉಂಟಾದಮೇಲೆ ಬಹುವಾದ ಜ್ಞಾನೋದಯವಾಗುತ್ತದೆ. ಆದರಲ್ಲಿ ಸಂದೇಹವಿಲ್ಲ. ಇದೇ ಮುಕ್ತಿಮಾರ್ಗವು. ಮುಕ್ತಿಯನ್ನು ಕೊಡುವ ಈ ಭಕ್ತಿಮಾರ್ಗವು ಪುರಾತನವಾದುದು. ಜಾಣರು ಇವನ್ನು ಸೇವಿಸಿರುವರು.

೪೩. ಎಲೈ ರಾಮನೆ ! ನಿನ್ನಲ್ಲಿ ಪ್ರೇಮಲಕ್ಷಣವಾದ ಒಳ್ಳೆಯ ಭಕ್ತಿಯು ನನಗೆ ಯಾವಾಗಲೂ ಹುಟ್ಟಲಿ. ಮತ್ತು ಇರಲಿ. ಅಲ್ಲದೆ ನಿನ್ನ ಭಕ್ತರಲ್ಲಿ ನನಗೆ ಯಾವಾಗಲೂ ಸಂಗವಿರಲಿ.

೪೪. ನಿನ್ನ ದರ್ಶನವು ಈ ದಿನ ನನಗೆ ಉಂಟಾಗಿ ನಿನ್ನ ಸಹವಾಸವು ಸಿಕ್ಕಿರುವುದರಿಂದ ನನ್ನ ಜನ್ಮವು ಸಫಲವಾಯಿತು. ಎಲೈ ಪ್ರಭುವೆ ! ಇಂದು ನನ್ನ ಯಾಗಗಳೆಲ್ಲವೂ ಫಲವನ್ನು ಕೊಟ್ಟುವು.

ದೀರ್ಘಕಾಲಂ ಮಯಾ ತಪ್ತಮನನ್ಯಮತಿನಾ ತಪಃ । ತಸ್ಯೇಹ ತಪಸೋ ರಾಮ ಫಲಂ ತವ ಯದದರ್ಶನಂ ॥ ೪೫ ॥

ಸದಾ ಮೇ ಸೀತಯಾ ಸಾರ್ಧಂ ಹೃದಯೇ ವಸ ರಾಘವ । ಗಚ್ಛತಸ್ತಿಷ್ಠತೋ ವಾಪಿ ಸ್ಮೃತಿಃ ಸ್ಯಾನ್ಮೇ ಸದಾತ್ವಯಿ ॥ ೪೬ ॥

ಇತಿ ಸ್ತುತ್ವಾ ರಮಾನಾಥಮಗಸ್ತ್ಯೋ ಮುನಿಸತ್ತಮಃ । ದದೌ ಚಾಪಂ ಮಹೇಂದ್ರೇಣ ರಾಮಾರ್ಥೇ ಸ್ಥಾಪಿತಂ ಪುರಾ ॥ ೪೭ ॥

ಅಕ್ಷಯ್ಯೌ ಬಾಣತೂಣೀರೌ ಖಡ್ಗಂ ರತ್ನವಿಭೂಷಿತಂ । ಜಹಿ ರಾಘವ ಭೂಭಾರಭೂತಂ ರಾಕ್ಷಸಮಂಡಲಂ ॥ ೪೮ ॥

---

೪೫. ಎಲೈ ರಾಮನೆ! ನಾನು ಏಕಾಗ್ರಚಿತ್ತದಿಂದ ಬಹುಕಾಲ ತಪಸ್ಸನ್ನು ಮಾಡಿದೆನು. ಆ ತಪಸ್ಸಿನ ಫಲವೇ ನಿನ್ನ ಪೂಜೆಯ ರೂಪದ ಫಲವಾಗಿದೆ.

೪೬. ಎಲೈ ರಾಘವನೆ! ನೀನು ಸೀತೆಯೊಡನೆ ಯಾವಾಗಲೂ ನನ್ನ ಮನಸ್ಸಿನಲ್ಲಿಯೇ ವಾಸಮಾಡು. ನಾನು ಹೋಗುತ್ತಿದ್ದರೂ, ಕೂತಿದ್ದರೂ, ಏನುಮಾಡುತ್ತಿದ್ದರೂ ನಿನ್ನ ಸ್ಮರಣೆಯೇ ನನಗೆ ಬರುತ್ತಿರಲಿ.

೪೭. ಆ ಋಷಿಶ್ರೇಷ್ಠನಾದ ಅಗಸ್ತ್ಯನು ಲಕ್ಷ್ಮೀಪತಿಯಾದ ವಿಷ್ಣುವನ್ನು ಇಂತು ಸ್ತುತಿಸಿ "ಹಿಂದೆ ದೇವೇಂದ್ರನು ರಾಮನಿಗೆ ಕೊಡೆಂದು ಹೇಳಿ ತನ್ನಲ್ಲಿಟ್ಟಿದ್ದ ಧನುಸ್ಸನ್ನೂ ಅಕ್ಷಯವಾದ ಬಾಣಗಳಿಂದ ಕೂಡಿದ ಬತ್ತಳಿಕೆಯನ್ನೂ ರತ್ನದಿಂದ ಅಲಂಕೃತವಾದ ಕತ್ತಿಯನ್ನೂ" ಆ ರಾಮನಿಗೆ ಕೊಟ್ಟನು.

೪೮. ಅವನ್ನು ಕೊಟ್ಟು ಎಲೈ ರಾಮನೆ! ಭೂಮಿಗೆ ಭಾರಭೂತವಾದ ರಾಕ್ಷಸರ ಗುಂಪನ್ನೆಲ್ಲಾ ಕೊಂದುಹಾಕು. ನೀನು ಅದಕೋಸ್ಕರಲೇ ಮಾಯೆಯಿಂದ ಮನುಷ್ಯಾವತಾರವನ್ನು ಮಾಡಿದ್ದೀಯೆ.

ಯದರ್ಥಮವತೀರ್ಣೋಽಸಿ ಮಾಯಯಾ ಮನುಜಾಕೃತಿಃ । ಇತೋ ಯೋಜನಯುಗ್ಮೇ ತು ಪುಣ್ಯಕಾನನಮಂಡಿತಃ ॥ ೪೯ ॥
ಅಸ್ತಿ ಪಂಚವಟೀನಾಮ್ನಾ ಆಶ್ರಮೋ ಗೌತಮೀ ತಟೇ । ನೇತವ್ಯಸ್ತತ್ರ ತೇ ಕಾಲಶ್ಶೇಷೋ ರಘುಕುಲೋದ್ವಹ ॥
ತತ್ರೈವ ಬಹುಕಾರ್ಯಾಣಿ ದೇವಾನಾಂ ಕುರು ಸತ್ಪತೇ ॥ ೫೦ ॥
ಶ್ರುತ್ವಾ ತದಾಗಸ್ತ್ಯಸುಭಾಷಿತಂ ವಚಸ್ತ್ಸ್ತೋತ್ರಂ ಚ ತತ್ವಾರ್ಥಸಮನ್ವಿತಂ ವಿಭುಃ ।
ಮುನಿಂ ಸಮಾಭಾಷ್ಯ ಮುದಾನ್ವಿತೋ ಯಯೌ ಪ್ರದರ್ಶಿತಂ ಮಾರ್ಗಮಶೇಷವಿದ್ಧರಿಃ ॥ ೫೧ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ತೃತೀಯಸ್ಸರ್ಗ ಸಮಾಪ್ತಃ

೪೯-೫೦. ಇಲ್ಲಿಂದ ಮುಂದೆ ಎರಡು ಯೋಜನಗಳ ದೂರದಲ್ಲಿ ಅನೇಕವಾದ ಉತ್ತಮಮರಗಳಿಂದ ಕೂಡಿರುವ ಪಂಚವಟೀ ಎಂಬ ಆಶ್ರಮವು ಗೌತಮಿ ನದಿಯ ದಡದಲ್ಲಿರುವುದು. ಉಳಿದ ವನವಾಸದಕಾಲವನ್ನು ನೀನು ಅಲ್ಲಿ ಕಳೆಯಬೇಕು. ಎಲೈ ಪ್ರಭುವೆ! ನೀನು ಅಲ್ಲಿದ್ದುಕೊಂಡೇ ದೇವತೆಗಳ ಅನೇಕ ಕೆಲಸವನ್ನು ಮಾಡಬೇಕಾಗಿದೆ.

೫೧. ಆಗ ಶ್ರೀರಾಮನು ಅಗಸ್ತ್ಯನು ಹೇಳಿದ ಒಳ್ಳೆಯ ಮಾತುಗಳನ್ನು ಗ್ರಹಿಸಿ ತತ್ವಾರ್ಥದಿಂದ ಕೂಡಿರುವ ಆ ಸ್ತೋತ್ರವನ್ನೂ ಕೇಳಿ ಬಹು ಸಂತೋಷಪಟ್ಟು ಆ ಅಗಸ್ತ್ಯನಿಗೆ ಹೋಗಿ ಬರುತ್ತೇನೆಂದು ಸಮಾಧಾನವನ್ನು ಹೇಳಿ ಆ ಅಗಸ್ತ್ಯನು ಪಂಚವಟಿಗೆ ದಾರಿಯನ್ನು ತೋರಿಸಲು ಆ ದಾರಿಯಲ್ಲಿಯೇ ಮುಂದಕ್ಕೆ ಹೊರಟನು.

ಇಂತು ಶ್ರೀಮದಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ಮೂರನೆಯ ಸರ್ಗವು ಮುಗಿದುದು.

ಅಥ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಚತುರ್ಥಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಓಂ ಅಸ್ಯ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಚತುರ್ಥಸರ್ಗಸ್ಯ

ಶ್ರೀ ಭಗವಾನ್ ಬಾದರಾಯಣ ಋಷಿಃ, ಗಾಯತ್ರೀ ಛಂದಃ, ಓಂ ನಮೋ ನಾರಾಯಣೋ ದೇವತಾ, ಶ್ರೀ ಲಕ್ಷ್ಮೀ ಬೀಜಂ, ಪರಮಾ ಶಕ್ತಿಃ, ಅವ್ಯಕ್ತಂ ಕೀಲಕಂ, ಅಮುಕಸಂಪುಟೀಕರಣ ಸಿದ್ಧ್ಯರ್ಥಂ ಅಮುಕಮಂತ್ರ ಲೋಮ ವಿಲೋಮ ಸಂಪುಟೀಕರಣ ದಶಾಧ್ಯಾಯೇ ಮಂತ್ರಾಷ್ಟಾಕ್ಷರ ಸಂಯುಕ್ತಂ ಚತುರ್ಥಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ.

ಓಂ ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ನಾಲ್ಕನೆಯ ಸರ್ಗಕ್ಕೆ

ಶ್ರೀ ಭಗವಾನ್ ಬಾದರಾಯಣನು ಋಷಿಯು, ಗಾಯತ್ರೀ ಛಂದಸ್ಸು, ಓಂ ನಮೋ ನಾರಾಯಣ ಎಂಬುದು ದೇವತೆಯು. ಶ್ರೀ ಲಕ್ಷ್ಮೀಃ ಎಂಬುದು ಬೀಜವು, ಪರಮಾ ಎಂಬುದು ಶಕ್ತಿಯು, ಅವ್ಯಕ್ತಂ ಎಂಬುದು ಕೀಲಕವು, ಇಂತಹ ಸಂಪುಟೀಕರಣದ ಸಿದ್ಧಿಗೋಸ್ಕರ ಇಂತಹ ಮಂತ್ರದ ಲೋಮ ವಿಲೋಮ ಸಂಪುಟೀಕರಣದ ದಶಾಧ್ಯಾಯದಲ್ಲಿ ಎಂಟಕ್ಷರದ ಮಂತ್ರದಿಂದ ಕೂಡಿದ ತೃತೀಯಸರ್ಗದ ನ್ಯಾಸ ಧ್ಯಾನ ಜಪಗಳನ್ನು ಮಾಡುತ್ತೇನೆ. ಎಂದು ಸಂಕಲ್ಪ ಮಾಡಬೇಕು.

|| ಅಥ ಕರನ್ಯಾಸಃ ||

ಕರನ್ಯಾಸವು

ಓಂ ಮಾಂ ರುಂ ಯಂ ಅಂಗುಷ್ಠಾಭ್ಯಾಂ ನಮಃ
ಓಂ ಮಾಂ ರುಂ ಯಂ ತರ್ಜನೀಭ್ಯಾಂ ನಮಃ
ಓಂ ಮಾಂ ರುಂ ಯಂ ಮಧ್ಯಮಾಭ್ಯಾಂ ನಮಃ
ಓಂ ಮಾಂ ರುಂ ಯಂ ಅನಾಮಿಕಾಭ್ಯಾಂ ನಮಃ
ಓಂ ಮಾಂ ರುಂ ಯಂ ಕನಿಷ್ಠಿಕಾಭ್ಯಾಂ ನಮಃ
ಓಂ ಮಾಂ ರುಂ ಯಂ ಕರತಲಕರಪೃಷ್ಠಾಭ್ಯಾಂ ನಮಃ

|| ಅಥ ಷಡಂಗನ್ಯಾಸಃ ||

ಷಡಂಗನ್ಯಾಸವು

ಓಂ ಮಾಂ ರುಂ ಯಂ ಹೃದಯಾಯ ನಮಃ

ಓಂ ಮಾಂ ರುಂ ಯಂ ಶಿರಸೇ ಸ್ವಾಹಾ

ಓಂ ಮಾಂ ರುಂ ಯಂ ಶಿಖಾಯೈ ವಷಟ್

ಓಂ ಮಾಂ ರುಂ ಯಂ ಕವಚಾಯ ಹುಂ

ಓಂ ಮಾಂ ರುಂ ಯಂ ನೇತ್ರತ್ರಯಾಯ ವೌಷಟ್

ಓಂ ಮಾಂ ರುಂ ಯಂ ಅಸ್ತ್ರಾಯ ಫಟ್

ಓಂ ಮಾಂ ರುಂ ಯಂ ಇತಿ ದಿಗ್ಬಂಧಃ

ಓಂ ಮಾಂ ರುಂ ಯಂ ಎಂದು ದಿಗ್ಬಂಧವು

|| ಅಥ ಧ್ಯಾನಂ ||

ಧ್ಯಾನವು

ಮಾರ್ಗೇ ವ್ರಜನ್ ದದರ್ಶಾಥ ಶೈಲಶೃಂಗನಿವಸ್ಥಿತಂ । ವೃದ್ಧಂ ಜಟಾಯುಷಂ ರಾಮಃ ಕಿಮೇತದಿತಿವಿಸ್ಮಿತಃ ||

ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ || ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಪಾರಾಯಣಾಂತೇ ಪುನಃ ಹೃದಯಾದಿ ಷಡಂಗನ್ಯಾಸಂ ಕೃತ್ವಾ ಓಂ ಮಾಂ ರುಂ ಯಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್.

ಪಾರಾಯಣವಾದಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ಮಾಂ ರುಂ ಯಂ ಇತಿ ದಿಗ್ವಿಮೋಕಃ ಎಂದೆನ್ನಬೇಕು.

ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

|| ಇತಿ ಶ್ರೀ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಚತುರ್ಥಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ ||

ಇಂತು ಶ್ರೀ ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ನಾಲ್ಕನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಚತುರ್ಥಸ್ಸರ್ಗಃ

॥ ಶ್ರೀ ಮಹಾದೇವ ಉವಾಚ ॥

ಮಾರ್ಗೇ ವ್ರಜನ್ದದರ್ಶಾಥ ಶೈಲಶೃಂಗಮಿವ ಸ್ಥಿತಂ । ವೃದ್ಧಂ ಜಟಾಯುಷಂ ರಾಮಃ ಕಿಮೇತದಿತಿ ವಿಸ್ಮಿತಃ ॥ ೧ ॥

ಧನುರಾನಯ ಸೌಮಿತ್ರೇ ರಾಕ್ಷಸೋಽಯಂ ಪುರಃ ಸ್ಥಿತಃ । ಇತ್ಯಾಹ ಲಕ್ಷ್ಮಣಂ ರಾಮೋ ಹನಿಷ್ಯಾಮ್ಯೃಷಿಭಕ್ಷಕಂ ॥ ೨ ॥

ಶ್ರೀಮದಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ನಾಲ್ಕನೆಯ ಸರ್ಗವು.

೧. ಮಹಾದೇವನು ಹೇಳಿದನು-ಆ ಶ್ರೀರಾಮನು ಅಗಸ್ತ್ಯಾಶ್ರಮದಿಂದ ಪಂಚವಟಿಗೆ ಹೋಗುತ್ತಾ ದಾರಿಯಲ್ಲಿ ಬೆಟ್ಟದ ಶಿಖರವು ಬಿದ್ದಂತೆ ಬಿದ್ದಿರುವ ಜಟಾಯುವೆಂಬ ಪಕ್ಷಿಯನ್ನು ನೋಡಿ ಇದೇನು ಎಂದು ಆಶ್ಚರ್ಯಪಟ್ಟನು.

೨. ಒಡನೆಯೇ ಎಲೈ ಸೌಮಿತ್ರಿಯೆ ! ಧನುಸ್ಸನ್ನು ಕೊಡು. ಯಾವನೋ ಒಬ್ಬ ರಾಕ್ಷಸನು ಎದುರಿಗೆ ಇದ್ದಾನೆ. ಋಷಿಭಕ್ಷಕನಾದ ಈ ರಾಕ್ಷಸನನ್ನು ಕೊಲ್ಲುತ್ತೇನೆ ಎಂದು ಹೇಳಿದನು.

ತಚ್ಛ್ರುತ್ವಾ ರಾಮುವಚನಂ ಗೃಧ್ರರಾಡ್ಭಯಪೀಡಿತಃ । ವಧಾರ್ಹೋऽಹಂ ನ ತೇ ರಾಮ ಪಿತುಸ್ತೇऽಹಂ ಪ್ರಿಯಸ್ಸಖಾ ॥ ೩ ॥
ಜಟಾಯುರ್ನಾಮ ಭದ್ರಂ ತೇ ಗೃಧ್ರೋऽಹಂ ಪ್ರಿಯಕೃತ್ತವ । ಪಂಚವಟ್ಯಾಮಹಂ ವತ್ಸ್ಯೇ ತವೈವ ಪ್ರಿಯಕಾಮ್ಯಯಾ ॥ ೪ ॥
ಮೃಗಯಾಯಾಂ ಕದಾಚಿತ್ತು ಪ್ರಯಾತೇ ಲಕ್ಷ್ಮಣೇऽಪಿ ಚ । ಸೀತಾಜನಕಕನ್ಯಾ ಮೇ ರಕ್ಷಣೀಯಾ ಪ್ರಯತ್ನತಃ ॥ ೫ ॥
ಶ್ರುತ್ವಾ ತದ್ಗೃಧ್ರವಚನಂ ರಾಮುಸ್ಸಸ್ನೇಹಮಬ್ರವೀತ್ । ಸಾಧು ಗೃಧ್ರ ಮಹಾರಾಜ ತಥೈವ ಕುರು ಮೇ ಪ್ರಿಯಂ ॥ ೬ ॥

೩–೪. ರಾಮನ ಆ ಮಾತನ್ನು ಕೇಳಿ ಜಟಾಯುವಿಗೆ ಭಯವಾಯಿತು. ಆಗ ಅವನನ್ನು ಕುರಿತು ಎಲೈ ರಾಮನೆ! ನಾನು ವಧಾರ್ಹನಲ್ಲ. ನಿನ್ನ ತಂದೆಗೆ ಪ್ರಿಯಸ್ನೇಹಿತನು. ನನ್ನ ಹೆಸರು ಜಟಾಯುವೆಂಬುದಾಗಿ ಕರೆಯುವರು. ನಿನಗೆ ಒಳ್ಳೆಯದಾಗಲಿ. ನಾನು ಹದ್ದು, ನಿನಗೆ ಒಳ್ಳೆಯದನ್ನು ಮಾಡುತ್ತೇನೆ. ನಾನು ಈ ಪಂಚವಟಿಯಲ್ಲಿ ವಾಸಮಾಡಿಕೊಂಡಿದ್ದೇನೆ. ನಿನಗೆ ಅನುಕೂಲವನ್ನುಂಟುಮಾಡುವುದಕ್ಕೇ ನಾನು ಇಲ್ಲಿ ವಾಸವಾಗಿರುವುದು.

೫. ನೀವುಗಳು ಇಬ್ಬರೂ ಒಂದುವೇಳೆ ಬೇಟೆಗೆ ಹೋದರೆ ಆಗ ನಿಮ್ಮ ಈ ಜಾನಕಿಯನ್ನು ನನ್ನ ಸರ್ವಶಕ್ತಿಯಿಂದಲೂ ಕಾಪಾಡುತ್ತೇನೆ ಎಂದು ಹೇಳಿದನು.

೬. ಆ ಮಾತನ್ನು ಕೇಳಿ ರಾಮನು ಸ್ನೇಹಪೂರ್ವಕವಾಗಿ ಇಂತೆಂದನು. ಎಲೈ ಗೃಧ್ರರಾಜನೆ! ಒಳ್ಳೆಯದು. ಹಾಗೆಯೇ ನನಗೆ ಅನುಕೂಲವನ್ನು ಮಾಡಿಕೊಂಡಿರು.

ಅತ್ರೈವ ನೋ ಸಮೀಪಸ್ಥೋ ನಾತಿದೂರೇ ವನೇ ವರ್ಸ । ಇತ್ಯಾಮಂತ್ರಿತವಾಲಿಂಗ್ಯ ಯಯೌ ಪಂಚವಟೀಂ ಪ್ರಭುಃ ॥ ೭ ॥
ಲಕ್ಷ್ಮಣೇನ ಸಹ ಭ್ರಾತ್ರಾ ಸೀತಯಾ ರಘುನಂದನಃ । ಗತ್ವಾ ತೇ ಗೌತಮೀತೀರಂ ಪಂಚವಟ್ಯಾಂ ಸುವಿಸ್ತರಂ ॥ ೮ ॥
ಮಂದಿರಂ ಕಾರಯಾಮಾಸ ಲಕ್ಷ್ಮಣೇನ ಸುಬುದ್ಧಿನಾ । ತತ್ರ ತೇ ನ್ಯವರ್ಸ ಸರ್ವೇ ಗಂಗಾಯಾ ಉತ್ತರೇ ತಟೇ ॥ ೯ ॥
ಕದಂಬಪನಸಾಮ್ರಾದಿಫಲವೃಕ್ಷಸಮಾಕುಲೇ । ವಿವಿಕ್ತೇ ಜನಸಂಬಾಧವರ್ಜಿತೇ ನೀರುಜಸ್ಥಲೇ ॥ ೧೦ ॥
ವಿನೋದಯನ್ ಜನಕಜಾಂ ಲಕ್ಷ್ಮಣೇನ ವಿಪಶ್ಚಿತಾ । ಅಧ್ಯುವಾಸ ಸುಖಂ ರಾಮೋ ದೇವಲೋಕ ಇವಾಪರಃ ॥ ೧೧ ॥

೭–೯. ನೀನು ನಮ್ಮ ಹತ್ತಿರದಲ್ಲಿಯೇ ಕಾಡಿನಲ್ಲಿದ್ದುಕೊಂಡಿರು. ದೂರಕ್ಕೆ ಹೋಗಬೇಡ. ಎಂದು ಅವನಿಗೆ ಒಳ್ಳೆಯ ಮಾತನ್ನು ಹೇಳಿ ಆ ರಾಮನೂ, ಲಕ್ಷ್ಮಣನೂ, ಸೀತೆಯೂ ಪಂಚವಟಿಗೆ ಹೋದರು. ಅವರೆಲ್ಲರೂ ಆ ಪಂಚವಟಿಗೆ ಹೋಗಿ ಗೌತಮೀನದಿ ದಡದಲ್ಲಿ ನಿಂತರು. ಅಲ್ಲಿ ದೊಡ್ಡದಾದ ಒಂದು ಮನೆಯನ್ನು ಲಕ್ಷ್ಮಣನು ಮಾಡಿದನು. ಗೌತಮಿಯ ಉತ್ತರದಡದಲ್ಲಿ ಅವರೆಲ್ಲರೂ ಆ ಮನೆಯಲ್ಲಿ ವಾಸವಾಗಿದ್ದರು.

೧೦. ಆ ಜಾಗವು ಅನೇಕವಾದ ಹಲಸು, ಕಡಹ ಮುಂತಾದ ಫಲವೃಕ್ಷಗಳಿಂದ ಸಮೃದ್ಧಿಯಾಗಿದ್ದಿತು. ಅದು ಜನಗಳ ಓಡಿಯಾಟವಿಲ್ಲದ ಗಲಭೆಯಿಲ್ಲದ ಸ್ಥಳವಾಗಿದ್ದಿತು. ರೋಗಗಳಬಾಧೆಯಿರಲಿಲ್ಲ.

೧೧. ಅಲ್ಲಿ ಜಾನಕಿಯನ್ನು ಸಂತೋಷಪಡಿಸುತ್ತಾ ಲಕ್ಷ್ಮಣನೊಡನೆ ರಾಮನು ಮುಂತ್ತೊಂದು ದೇವಲೋಕದಲ್ಲಿರುವನೋ ಎಂಬಂತಿದ್ದನು.

ಕಂದಮೂಲಫಲಾದೀನಿ ಲಕ್ಷ್ಮಣೋಽನುದಿನಂ ತಯೋಃ । ಆನೀಯ ಪ್ರದದೌ ರಾಮಸೇವಾತತ್ಪರಮಾನಸಃ ॥ ೧೨ ॥
ಧನುರ್ಬಾಣಧರೋ ನಿತ್ಯಂ ರಾತ್ರೌ ಜಾಗರ್ತಿ ಸರ್ವತಃ । ಸ್ನಾನಂ ಕುರ್ವಂತ್ಯನುದಿನಂ ತ್ರಯಸ್ತೇ ಗೌತಮೀಜಲೇ ॥ ೧೩ ॥
ಉಭಯೋರ್ಮಧ್ಯಗಾ ಸೀತಾ ಕುರುತೇ ಚ ಗಮಾಗಮೌ । ಆನೀಯ ಸಲಿಲಂ ನಿತ್ಯಂ ಲಕ್ಷ್ಮಣಃ ಪ್ರೀತಮಾನಸಃ ॥ ೧೪ ॥
ಸೇವತೇಹ ರಹಃ ಪ್ರೀತ್ಯಾ ಏವಮಾಸ ಸುಖಂ ತ್ರಯಃ । ಏಕದಾ ಲಕ್ಷ್ಮಣೋ ರಾಮಮೇಕಾಂತೇ ಸಮುಪಸ್ಥಿತಂ ॥ ೧೫ ॥

---

೧೨. ಲಕ್ಷ್ಮಣನು ಅವರಿಗೆ ಪ್ರತಿದಿನವೂ ಗೆಡ್ಡೆ, ಗೆಣಸು, ಹಣ್ಣು, ಹಂಪಲುಗಳನ್ನು ತಂದುಕೊಡುತ್ತಾ ಆ ರಾಮಸೀತೆಯರನ್ನು ಸೇವಿಸಿಕೊಂಡೇ ಇರುತ್ತಿದ್ದನು.

೧೩. ರಾತ್ರಿಯ ಹೊತ್ತಿನಲ್ಲಿ ಧನುಸ್ಸುಬಾಣಗಳನ್ನು ಹಿಡಿದು ಎಲ್ಲಾ ಕಡೆಯನ್ನೂ ನೋಡಿಕೊಳ್ಳುತ್ತಾ ಬಹು ಜಾಗರೂಕತೆಯಿಂದ ಕಾಪಾಡಿಕೊಂಡಿರುತ್ತಿದ್ದನು. ಅವರು ಮೂರುಜನವೂ ನಿತ್ಯವೂ ಆ ಗೌತಮಿಯುನದಿಯಲ್ಲಿ ಸ್ನಾನಮಾಡುತ್ತಲಿದ್ದರು.

೧೪–೧೫. ರಾಮಲಕ್ಷ್ಮಣರ ಮಧ್ಯದಲ್ಲಿಯೇ ಸೀತೆಯು ಸಂಚರಿಸುತ್ತಾ ಸುಖವಾಗಿದ್ದಳು. ಯಾವಾಗಲೂ ಲಕ್ಷ್ಮಣನು ಅವರಿಗೆ ಬೇಕಾಗುವ ನೀರನ್ನು ತಂದುಕೊಡುತ್ತಿದ್ದನು. ಈ ರೀತಿಯಾಗಿ ಲಕ್ಷ್ಮಣನು ಸೇವಿಸುತ್ತಿರಲು ಆ ಮೂವರೂ ಸುಖವಾಗಿರುತ್ತಿದ್ದರು. ಹೀಗಿರುತ್ತಿರಲು ಒಂದುಸಾರಿ ಪರಮೇಶ್ವರನಾದ ರಾಮನೂ ಲಕ್ಷ್ಮಣನೂ ಏಕಾಂತದಲ್ಲಿರಲು ಲಕ್ಷ್ಮಣನು ರಾಮನನ್ನು ಕುರಿತು ವಿನಯದಿಂದ ಇಂತೆಂದು ಕೇಳಿದನು

ವಿನಯಾವನತೋ ಭೂತ್ವಾ ಪಪ್ರಚ್ಛ ಪರಮೇಶ್ವರಂ । ಭಗವನ್ ಶ್ರೋತುಮಿಚ್ಛಾಮಿ ಮೋಕ್ಷಸ್ಯೈಕಾಂತಿಕೀಂ ಗತಿಂ || ೧೬ ||
ತ್ವತ್ತಃ ಕಮಲಪತ್ರಾಕ್ಷ ಸಂಕ್ಷೇಪಾದ್ವಕ್ತುಮರ್ಹಸಿ । ಜ್ಞಾನಂ ವಿಜ್ಞಾನಸಹಿತಂ ಭಕ್ತಿವೈರಾಗ್ಯಬೃಂಹಿತಂ ||
ಆಚಕ್ಷ್ವ ಮೇ ರಘುಶ್ರೇಷ್ಠ ವಕ್ತಾ ನಾನ್ಯೋಽಸ್ತಿ ಭೂತಲೇ || ೧೭ ||

|| ಶ್ರೀರಾಮ ಉವಾಚ ||

ಶೃಣು ವಕ್ಷ್ಯಾಮಿ ತೇ ವತ್ಸ ಗುಹ್ಯಾದ್ಗುಹ್ಯತರಂ ಪರಂ । ಯದ್ವಿಜ್ಞಾಯ ನರೋ ಜಹ್ಯಾತ್ಸದ್ಯೋ ವೈ ಕಲ್ಪಿಕಂ ಭ್ರಮಂ || ೧೮ ||
ಆದೌ ಮಾಯಾಸ್ವರೂಪಂ ತೇ ವಕ್ಷ್ಯಾಮಿ ತದನಂತರಂ । ಜ್ಞಾನಸ್ಯ ಸಾಧನಂ ಪಶ್ಚಾತ್ ಜ್ಞಾನಂ ವಿಜ್ಞಾನಸಂಯುತಂ || ೧೯ ||

೧೬–೧೭. ಎಲೈ ಭಗವಂತನೆ! ಮೋಕ್ಷದಗತಿಯುನ್ನು ಕಮಲಪತ್ರಾಕ್ಷನಾದ ನಿನ್ನಿಂದ ಕೇಳಬೇಕೆಂದಿದ್ದೇನೆ. ಅದರ ಸ್ಥಿತಿಯುನ್ನು ನನಗೆ ಹೇಳು. ಜ್ಞಾನವನ್ನೂ ವಿಜ್ಞಾನವನ್ನೂ ಮನುಷ್ಯನು ತಿಳಿದಿರಬೇಕು. ಆ ಜ್ಞಾನವು ವಿಜ್ಞಾನದ ಸಹಾಯದಿಂದ ಉತ್ಕೃಷ್ಟವಾಗಿರಬೇಕು. ಮತ್ತು ಭಕ್ತಿವೈರಾಗ್ಯಗಳಿಂದ ಪೋಷಿತವಾಗಿರಬೇಕು. ಎನ್ನುತ್ತಾರೆ. ಇದನ್ನು ವಿಸ್ತಾರವಾಗಿ ಹೇಳು. ನಿನಗಿಂತಲೂ ಬೇರೆಯಾದವರು ನನಗೆ ಹೇಳಲು ಯೋಗ್ಯರು ಲೋಕದಲ್ಲಿ ಬೇರೊಬ್ಬರಿಲ್ಲ.

೧೮. ಶ್ರೀರಾಮನು ಹೇಳಿದನು—ಎಲೈ ವತ್ಸನೇ! ಇದು ಬಹು ಗುಹ್ಯವಾದುದು. ಇದನ್ನು ತಿಳಿದರೆ ಮನುಷ್ಯನು ಪ್ರಾಪಂಚಿಕ ವಿಕಲ್ಪವಾದ ಭ್ರಮೆಯುನ್ನು ಬಿಟ್ಟುಬಿಡುವನು.

೧೯. ನಾನು ಮೊದಲು ನಿನಗೆ ಮಾಯೆಯ ಸ್ವರೂಪವನ್ನು ಹೇಳುತ್ತೇನೆ ಕೇಳು. ಆ ಮೇಲೆ ಜ್ಞಾನದ ವಿಷಯವನ್ನು ಹೇಳುತ್ತೇನೆ. ಅನಂತರ ವಿಜ್ಞಾನವು ಜ್ಞಾನಕ್ಕೆ ಹೇಗೆ ಸಹಕಾರಿಯೆಂಬುದನ್ನು ತಿಳಿಸುತ್ತೇನೆ.

ಜ್ಞೇಯಂ ಚ ಪರಮಾತ್ಮಾನಂ ಯತ್ ಜ್ಞಾತ್ವಾ ಮುಚ್ಯತೇ ಭಯಾತ್ । ಅನಾತ್ಮನಿ ಶರೀರಾದಾವಾತ್ಮಬುದ್ಧಿಸ್ತು ಯಾ ಭವೇತ್
ಸೈವ ಮಾಯಾ ತಯೈವಾಸೌ ಸಂಸಾರಃ ಪರಿಕಲ್ಪ್ಯತೇ । ರೂಪೇ ದ್ವೇ ನಿಶ್ಚಿತೇ ಪೂರ್ವಂ ಮಾಯಾಯಾಃ ಕುಲನಂದನ ॥ ೨೧ ॥
ವಿಕ್ಷೇಪಾವರಣೇ ತತ್ರ ಪ್ರಥಮಂ ಕಲ್ಪಯೇಜ್ಜಗತ್ । ಲಿಂಗಾದ್ಯಾಬ್ರಹ್ಮಪರ್ಯಂತಂ ಸ್ಥೂಲಸೂಕ್ಷ್ಮವಿಭೇದತಃ ॥ ೨೨ ॥
ಅಪರಂ ತ್ವಖಿಲಂ ಜ್ಞಾನರೂಪಮಾವೃತ್ಯ ತಿಷ್ಠತಿ । ಮಾಯಯಾ ಕಲ್ಪಿತಂ ವಿಶ್ವಂ ಪರಮಾತ್ಮನಿ ಕೇವಲೇ ॥ ೨೩ ॥

---

೨೦. ಅನಂತರ ಈ ಜ್ಞಾನದಿಂದ ತಿಳಿಯಬೇಕಾದ ಗುರಿಯನ್ನು ಹೇಳುತ್ತೇನೆ. ಅವನೇ ಪರಮಾತ್ಮನು. ಅವನನ್ನು ತಿಳಿದರೆ ಎಲ್ಲಾ ಭಯಗಳೂ ಹೋಗುತ್ತವೆ. ಆತನಲ್ಲದಿರುವ ಶರೀರವೇ ಮುಂತಾದುವುಗಳಲ್ಲಿ ಆತ್ಮವೆಂಬ ಬುದ್ಧಿಯು ಹುಟ್ಟುವುದು ಯಾವುದಿರುವುದೋ ಅದೇ ಮಾಯೆಯು.

೨೧–೨೨. ಅದರಿಂದಲೇ ಈ ಜನನ ಮರಣಾತ್ಮಕವಾದ ಸಂಸಾರವು ಹುಟ್ಟುವುದು. ಆ ಮಾಯೆಯು ಎರಡು ವಿಧವಾಗಿರುವುದು. ಅದರಲ್ಲಿ ಒಂದು ವಿಕ್ಷೇಪವೆಂದೂ, ಮತ್ತೊಂದು ಆವರಣವೆಂದೂ ಹೆಸರನ್ನು ಪಡೆದಿರುವುವು. ಇವುಗಳಲ್ಲಿ ವಿಕ್ಷೇಪವೆಂಬುದರಿಂದಲೇ ಈ ಸ್ಥೂಲ ಸೂಕ್ಷ್ಮವಾದ ಜಗತ್ತು ಸೃಷ್ಟಿಸಲ್ಪಟ್ಟಿರುವುದು. ಆ ಜಗತ್ತು ಲಿಂಗ ಶರೀರ ಮೊದಲುಗೊಂಡು ಬ್ರಹ್ಮನ ಪರ್ಯಂತವಾಗಿಯೂ ಇರುವುದು.

೨೩–೨೪. ಆವರಣವೆಂಬುದು ಜ್ಞಾನವನ್ನೂ ರೂಪವನ್ನೂ ಆವರಿಸಿಕೊಂಡು ಅವು ಹೊರಹೊಮ್ಮದಂತೆ ಮಾಡಿಕೊಂಡಿರುವುದು. ಕೇವಲವಾಗಿರುವ ಆ ಪರಮಾತ್ಮನಲ್ಲಿ ಈ ಪ್ರಪಂಚವು ಮಾಯೆಯಿಂದ ಭ್ರಾಂತಿರೂಪವಾಗಿರುವುದು. ಈ ಪರಮಾತ್ಮನಲ್ಲಿ ಪ್ರಪಂಚವು ಹೇಗೆ ತೋರುತ್ತದೆಂದರೆ ಹಗ್ಗವನ್ನು ನೋಡಿ ವಿವೇಕ ಜ್ಞಾನವನ್ನು ತಿಳಿಯದವನು ಹಾವೆಂದು ತಿಳಿಯುವಂತೆ ಕಂಡುಕೊಂಡಿರುವುದು. ಅದು

ರಜ್ಜೌ ಭುಜಂಗವದ್ಭ್ರಾಂತ್ಯಾ ವಿಚಾರೇ ನಾಸ್ತಿ ಕಿಂಚನ । ಶ್ರೂಯತೇ ದೃಶ್ಯತೇ ಯದ್ಯತ್ಸ್ಮರ್ಯತೇ ವಾ ನರೈಸ್ಸದಾ ॥ ೨೪ ॥
ಅಸದೇವ ಹಿ ತತ್ಸರ್ವಂ ಯಥಾ ಸ್ವಪ್ನಮನೋರಥೌ । ದೇಹ ಏವ ಹಿ ಸಂಸಾರವೃಕ್ಷಮೂಲಂ ಪರಂ ಸ್ಮೃತಂ ॥ ೨೫ ॥
ತನ್ಮೂಲಃ ಪುತ್ರದಾರಾದಿಬಂಧಃ ಕಿಂ ತೇನ್ಯಥಾತ್ಮನಃ । ದೇಹಸ್ತು ಸ್ಥೂಲಭೂತಾನಾಂ ಪಂಚತನ್ಮಾತ್ರಪಂಚಕಂ ॥ ೨೬ ॥
ಅಹಂಕಾರಶ್ಚ ಬುದ್ಧಿಶ್ಚ ಇಂದ್ರಿಯಾಣಿ ತಥಾ ದಶ । ಚಿದಾಭಾಸೋ ಮನಶ್ಚೈವ ಮೂಲಪ್ರಕೃತಿರೇವ ಚ ॥ ೨೭ ॥

ಭ್ರಾಂತಿರೂಪವಾದುದು. ಸ್ವಲ್ಪಹೊತ್ತು ಕಾಲದೇಶಗಳನ್ನು ನಿರೀಕ್ಷಣೆ ಮಾಡಿದರೆ ಅದು ಹಾವಲ್ಲ ಹಗ್ಗವು ಎಂಬ ನಿಶ್ಚಯ ಜ್ಞಾನವುಂಟಾಗುವಂತೆ ವಿವೇಕಜ್ಞಾನದಿಂದ ಈ ಪ್ರಪಂಚವು ಪರಮಾತ್ಮರೂಪವಾದುದು. ಎಂದು ತಿಳಿಯುತ್ತದೆ. ನಾವು ಕೇಳುತ್ತಿರುವುದೇ ಆಗಲಿ ನೋಡುತ್ತಿರುವುದೇ ಆಗಲಿ, ಸ್ಮರಿಸುವುದೇ ಆಗಲಿ ಅವೆಲ್ಲವೂ ಸ್ವಪ್ನದಲ್ಲಿ ನೋಡುವ ಪದಾರ್ಥಗಳಂತೆಯೂ, ಮನಸ್ಸಿನಲ್ಲಿ ಆಲೋಚಿಸಿಕೊಳ್ಳುವ ಅಸಾಧ್ಯವಾದ ವಿಷಯಗಳಂತೆಯೂ ನಿಶ್ಚಯವಲ್ಲದವು. ಈ ದೇಹವೇ ಸಂಸಾರವೆಂಬ ಮರಕ್ಕೆ ಬುಡವಾದುದು.

೨೬. ಆ ದೇಹದ ಕಾರಣದಿಂದಲೇ ಹೆಂಡತಿ ಮಕ್ಕಳು ಎಂಬ ಬಂಧವು ಉಂಟಾಗುವುದು. ಅನಂತರ ಎಲ್ಲವೂ ಆತ್ಮಭಿನ್ನವಾದವುಗಳು ಆಗಿ ತೋರುತ್ತಾ ಬರುತ್ತವೆ. ಈ ದೇಹವು ಸ್ಥೂಲವಾಗಿರುವ ಪೃಥಿವೀ, ಅಪ್ಪು, ತೇಜಸ್ಸು, ವಾಯು, ಆಕಾಶಗಳ ರೂಪವಾದ ತನ್ಮಾತ್ರಗಳಿಂದ ಹುಟ್ಟಿರುವುದು.

೨೭–೨೮. ಇದರಲ್ಲಿ ಅಹಂಕಾರವೂ, ಬುದ್ಧಿಯೂ ಸೇರಿಕೊಂಡಿರುವುದು, ಅಲ್ಲದೆ ಐದು ಜ್ಞಾನೇಂದ್ರಿಯಗಳೂ, ಐದು ಕರ್ಮೇಂದ್ರಿಯಗಳೂ ಸೇರಿಕೊಂಡು ಹತ್ತು ಇಂದ್ರಿಯಗಳನ್ನು ಹೊಂದಿರುವುದು. ಚಿತ್ತಿನಂತೆ ಕಾಣುವ ಜೀವನು, ಮನಸ್ಸು, ಮೂಲಪ್ರಕೃತಿ ಇವೆಲ್ಲವೂ ಅದರಲ್ಲಿರುವುವು.

ಏತತ್ ಕ್ಷೇತ್ರಮಿತಿಜ್ಞೇಯಂ ದೇಹ ಇತ್ಯಭಿಧೀಯತೇ । ಏತದ್ವಿಲಕ್ಷಣೋ ಜೀವಃ ಪರಮಾತ್ಮಾ ನಿರಾಮಯಃ ॥ ೨೮ ॥

ತಸ್ಯ ಜೀವಸ್ಯ ವಿಜ್ಞಾನೇ ಸಾಧನಾನ್ಯಪಿ ಮೇ ಶೃಣು । ಜೀವಶ್ಚ ಪರಮಾತ್ಮಾ ಚ ಪರ್ಯಾಯೋ ನಾತ್ರ ಭೇದಧೀಃ ॥ ೨೯ ॥

ಮಾನಾಭಾವಸ್ತಥಾ ದಂಭಹಿಂಸಾದಿಪರಿವರ್ಜನಂ । ಪರಾಕ್ಷೇಪಾದಿಸಹನಂ ಸರ್ವತ್ರಾವಕ್ರತಾ ತಥಾ ॥ ೩೦ ॥

ಮನೋವಾಕ್ಕಾಯಸದ್ಭಕ್ತ್ಯಾ ಸದ್ಗುರೋಃ ಪರಿಸೇವನಂ । ಬಾಹ್ಯಾಭ್ಯಂತರಸಂಶುದ್ಧಿಃ ಸ್ಥಿರತಾ ಸತ್ಕ್ರಿಯಾದಿಷು ॥ ೩೧ ॥

ಇದನ್ನೇ ದೇಹವೆಂದು ಹೇಳುವರು. ಆ ಮೇಲೆ ಹೇಳಿದ ದೇಹಕ್ಕಿಂತಲೂ ಬೇರೆಯಾದ ಜೀವನೇ ಪರಮಾತ್ಮನು. ಅವನು ಯಾವ ರೋಗವೂ ಇಲ್ಲದವನು.

೨೯. ಅಂತಹ ಪರಮಾತ್ಮನ ರೂಪನಾದ ಜೀವನನ್ನು ತಿಳಿಯಲು ಉಪಾಯವನ್ನು ಹೇಳುತ್ತೇನೆ ಕೇಳು. ಜೀವನೆಂಬುದೂ, ಪರಮಾತ್ಮನೆಂಬುದೂ ಪರ್ಯಾಯದ ಹೆಸರುಗಳು. ಇದಕ್ಕೆ ಭೇದವಿದೆಯೆಂದು ತಿಳಿಯಬೇಡ.

೩೦–೩೩. ನಾನು ಹೆಚ್ಚೆಂಬ ಅಹಂಕಾರವನ್ನು ಬಿಡಬೇಕು. ದಂಭಹಿಂಸೆಗಳಿರಕೂಡದು. ಇತರರು ನಿಂದಿಸಿದರೆ ಸಹಿಸಿಕೊಳ್ಳಬೇಕು. ಮನಸ್ಸು ಮಾತ್ರ ಎಲ್ಲರಲ್ಲಿಯೂ ಕಪಟವಿಲ್ಲದೆ ಋಜುಮಾರ್ಗದಿಂದ ಮನೋವಾಕ್ಕಾಯಗಳಿಂದಲೂ ಭಕ್ತಿಪೂರ್ವಕವಾಗಿ ಸದ್ಗುರುವನ್ನು ಸೇವಿಸುತ್ತಿರಬೇಕು. ಒಳಗಿನ ಮನಶ್ಶುದ್ಧಿಯನ್ನೂ ಹೊರಗೆ ದೇಹಶುದ್ಧಿಯನ್ನೂ ಹೊಂದಿರಬೇಕು. ಒಳ್ಳೆಯ ಕೆಲಸಗಳನ್ನು ಮಾಡುವುದರಲ್ಲಿ ದೃಢವಾದ

ಮನೋವಾಕ್ಕಾಯದಂಡಶ್ಚ ವಿಷಯೇಷು ನಿರೀಹತಾ । ನಿರಹಂಕಾರತಾ ಜನ್ಮಜರಾದ್ಯಾಲೋಚನಂ ತಥಾ ॥ ೩೨ ॥

ಅಸಕ್ತಿಃ ಸ್ನೇಹಶೂನ್ಯತ್ವಂ ಪುತ್ರದಾರಧನಾದಿಷು । ಇಷ್ಟಾನಿಷ್ಟಾಗಮೇ ನಿತ್ಯಂ ಚಿತ್ತಸ್ಯ ಸಮತಾ ತಥಾ ॥ ॥ ೩೩ ॥

ಮಯಿ ಸರ್ವಾತ್ಮಕೇ ರಾಮೇ ಹ್ಯನನ್ಯವಿಷಯಾ ಮತಿಃ । ಜನಸಂಬಾಧರಹಿತಶುದ್ಧದೇಶನಿಷೇವಣಂ ॥ ೩೪ ॥

ಪ್ರಾಕೃತೈರ್ಜನಸಂಘೈಶ್ಚ ಹ್ಯರತಿಃ ಸರ್ವದಾ ಭವೇತ್ । ಆತ್ಮಜ್ಞಾನೇ ಸದೋದ್ಯೋಗೋ ವೇದಾಂತಾರ್ಥಾವಲೋಕನಂ॥ ೩೫ ॥

ಉಕ್ತೈರೇತೈರ್ಭವೇತ್ ಜ್ಞಾನಂ ವಿಪರೀತೈರ್ವಿಪರ್ಯಯಃ । ಬುದ್ಧಿಪ್ರಾಣಮನೋದೇಹಾಹಂಕೃತಿಭ್ಯೋ ವಿಲಕ್ಷಣಃ ॥ ೩೬ ॥

ಮನಸ್ಸು ಇರುವಿಕೆ, ಮನಸ್ಸು, ಮಾತು, ದೇಹಗಳನ್ನು ದಂಡಿಸಿ ತನ್ನ ಅಧೀನದಲ್ಲಿಟ್ಟುಕೊಳ್ಳುವಿಕೆ, ವಿಷಯ ಸುಖದಲ್ಲಿ ಆಸೆಯಿಲ್ಲದಿರುವಿಕೆ, ಅಹಂಕಾರವಿಲ್ಲದಿರುವಿಕೆ. ಜನ್ಮವನ್ನು ತಾಳಿದುದು, ಮುಪ್ಪಿಗೆ ತುತ್ತಾಗುವುದು, ಇವುಗಳು ಆಲೋಚನೆ, ಯಾವುದರಲ್ಲಿಯೂ ಸೇರದಿರುವಿಕೆ, ಹೆಂಡತಿ, ಮಕ್ಕಳು, ಹಣಗಳಲ್ಲಿ ಪ್ರೀತಿಯಿಲ್ಲದಿರುವುದು.

೩೪–೩೬. ಇಷ್ಟವಾದುದು ಬಂದಾಗ, ಸಂತೋಷ, ಅನಿಷ್ಟವಾದುದು ಬಂದಾಗ ದುಃಖ ಇವುಗಳಿಲ್ಲದೇನೇ ಒಂದೇ ಸಮನಾಗಿರುವುದು, ಸರ್ವಾತ್ಮಕನಾದ ರಾಮನಲ್ಲಿ ಅಸದೃಶವಾದ ಬುದ್ಧಿ ಇರುವಿಕೆ, ಜನಗಳಿಲ್ಲದ ಶುದ್ಧವಾದ ಜಾಗದಲ್ಲಿ ಇರುವಿಕೆ, ತಿಳಿವಳಿಕೆಯಿಲ್ಲದ ಜನರೊಡನೆ ಸೇರದಿರುವುದು, ಆತ್ಮಜ್ಞಾನವನು ತಿಳಿಯುವುದರಲ್ಲಿ ಯಾವಾಗಲೂ ಕೆಲಸಮಾಡುವುದು, ವೇದಾಂತದ ಅರ್ಥಗಳನ್ನು ಯೋಚಿಸುವುದು, ಇವನ್ನು ಅನುಸರಿಸಿದರೆ ಆತ್ಮಜ್ಞಾನವುಂಟಾಗುವುದು. ಇವುಗಳನ್ನು ಅನುಸರಿಸದಿದ್ದರೆ ಆ ಆತ್ಮಜ್ಞಾನವು ಉಂಟಾಗುವುದಿಲ್ಲ.

ಚಿದಾತ್ಮಾಹಂ ನಿತ್ಯಶುದ್ಧೋ ಬುದ್ಧ ಏವೇತಿ ನಿಶ್ಚಯಂ । ಯೇನ ಜ್ಞಾನೇನ ಸಂವಿತ್ತೇ ತತ್ ಜ್ಞಾನಂ ನಿಶ್ಚಿತಂ ಚ ಮೇ ॥ ೩೭ ॥
ವಿಜ್ಞಾನಂ ಚ ತದ್ವೈವೈತತ್ಸಾಕ್ಷಾದನುಭವೇದ್ಯದಾ । ಆತ್ಮಾ ಸರ್ವತ್ರ ಪೂರ್ಣಃ ಸ್ಯಾಚ್ಚಿದಾನಂದಾತ್ಮಕೋವ್ಯಯಃ ॥ ೩೮ ॥
ಬುದ್ಧ್ಯಾದ್ಯುಪಾಧಿರಹಿತಃ ಪರಿಣಾಮಾದಿವರ್ಜಿತಃ । ಸ್ವಪ್ರಕಾಶೇನ ದೇಹಾದೀನ್ ಭಾಸಯನ್ನನಪಾವೃತಃ ॥ ೩೯ ॥
ಏಕ ಏವಾದ್ವಿತೀಯಶ್ಚ ಸತ್ಯಜ್ಞಾನಾದಿಲಕ್ಷಣಃ । ಅಸಂಗಃ ಸ್ವಪ್ರಭೋ ದ್ರಷ್ಟಾ ವಿಜ್ಞಾನೇನಾವಗಮ್ಯತೇ ॥ ೪೦ ॥

---

೩೭. ಬುದ್ಧಿ, ಪ್ರಾಣ, ಮನಸ್ಸು, ದೇಹ, ಅಹಂಭಾವ ಇವುಗಳಿಗಿಂತಲೂ ಆತ್ಮನು ಬೇರೆಯಾಗಿರುವನು. ನಾನು ಆತ್ಮಸ್ವರೂಪನು. ಚಿತ್‌ಸ್ವರೂಪನು. ನಿತ್ಯಶುದ್ಧನು. ಜ್ಞಾನಕ್ಕೆ ವಿಷಯನು. ಎಂಬುದು ನಿಶ್ಚಯವು. ಯಾವ ಜ್ಞಾನವನ್ನು ಅನುಸರಿಸಿದರೆ ಆ ಆತ್ಮನು ತಿಳಿಯುವನೋ ಅದೇ ಆತ್ಮಜ್ಞಾನವು ಎಂದು ನನಗೆ ನಿಶ್ಚಯವಾಗಿರುವುದು.

೩೮. ಈ ಆತ್ಮನನ್ನು ನಾವು ಯಾವ ಜ್ಞಾನದಿಂದ ಅನುಭವಿಸುವೆವೋ ಅದೇ ವಿಜ್ಞಾನವು. ಆತ್ಮನು ಎಲ್ಲೆಲ್ಲಿಯೂ ಇದ್ದಾನೆ. ಅವನು ಪೂರ್ಣಸ್ವರೂಪನು. ಅವನು ಚಿದ್ರೂಪನು. ಆನಂದಸ್ವರೂಪನು. ನಾಶರಹಿತನು.

೩೯. ಬುದ್ಧಿಯೇ ಮುಂತಾದ ಉಪಾಧಿಗಳಿಲ್ಲದವನು. ಪರಿಣಾಮ ಮುಂತಾದ ವಿಕಾರವಿಲ್ಲದವನು. ತನ್ನ ಕಾಂತಿಯಿಂದ ದೇಹವೇ ಮುಂತಾದುವನ್ನು ಪ್ರಕಾಶಪಡಿಸುತ್ತಾನೆ. ಅವನು ತಿಳಿಯದಂತೆ ಅವಿತುಕೊಂಡಿರುವನು.

೪೦. ಅವನು ಒಬ್ಬನೇ. ಅವನ ಸಮಾನನಾದವನೊಬ್ಬನೂ ಇಲ್ಲ. ಸತ್ಯಸ್ವರೂಪನು. ಜ್ಞಾನಸ್ವರೂಪನು. ಅವನ ಜೊತೆಯಲ್ಲಿ ಒಬ್ಬರೂ ಇರುವುದಿಲ್ಲ. ಸ್ವಪ್ರಕಾಶವುಳ್ಳವನು. ಅವನನ್ನು ನೋಡಲು ಆಗುವುದಿಲ್ಲ. ಎಲ್ಲವನ್ನೂ ಅವನು ನೋಡುತ್ತಿರುವನು. ಜ್ಞಾನದಿಂದ ಮಾತ್ರ ತಿಳಿಯಲು ಅವನು ಸಾಧ್ಯನು.

ಆಚಾರ್ಯಶಾಸ್ತ್ರೋಪದೇಶಾದೈಕ್ಯಜ್ಞಾನಂ ಯದಾ ಭವೇತ್ । ಆತ್ಮನೋರ್ಜೀವಪರಯೋರ್ಮೂಲಾವಿದ್ಯಾ ತದೈವ ಹಿ ॥ ೪೧ ॥

ಲೀಯತೇ ಕಾರ್ಯಕರಣೈಃ ಸಹೈವ ಪರಮಾತ್ಮನಿ । ಸಾವಸ್ಥಾ ಮುಕ್ತಿರಿತ್ಯುಕ್ತಾ ಹ್ಯುಪಚಾರೋಽಯಮಾತ್ಮನಿ ॥ ೪೨ ॥

ಇದಂ ಮೋಕ್ಷಸ್ವರೂಪಂ ತೇ ಕಥಿತಂ ರಘುನಂದನ । ಜ್ಞಾನವಿಜ್ಞಾನವೈರಾಗ್ಯಸಹಿತಂ ಮೇ ಪರಾತ್ಮನಃ ॥ ೪೩ ॥

ಕಿಂ ತ್ವೇತದ್ದುರ್ಲಭಂ ಮನ್ಯೇ ಮದ್ಭಕ್ತಿವಿಮುಖಾತ್ಮನಾಂ । ಚಕ್ಷುಷ್ಮತಾಮಪಿ ಯಥಾ ರಾತ್ರೌ ಸಮ್ಯಙ್ನ ದೃಶ್ಯತೇ ॥ ೪೪ ॥

೪೧–೪೨. ಗುರುವಾದವನ ಉಪದೇಶದಿಂದಲೂ ಶಾಸ್ತ್ರವನ್ನು ಓದುದರಿಂದಲೂ ಈ ಮಾಯಾವೃತನಾದ ತಾನೂ ಬ್ರಹ್ಮನೂ ಒಂದೇ ಎಂದು ಜ್ಞಾನಬಂದಾಗ ಜೀವಾತ್ಮಗಳ ಭೇದರೂಪವಾದ ಮೂಲಾವಿದ್ಯೆಯ ರೂಪಜ್ಞಾನವು ಹೋಗುತ್ತದೆ. ಆಗ ಕಾರ್ಯವೂ ಕಾರಣವೂ ನಾಶವಾಗಿ ಆತ್ಮಜ್ಞಾನವು ಉಂಟಾಗುತ್ತದೆ.

೪೩. ಇಂತಹ ಅವಸ್ಥೆಯನ್ನೇ ಮುಕ್ತಿಯೆಂದೆನ್ನುತ್ತಾರೆ. ಈ ಮುಕ್ತಿಜ್ಞಾನವನ್ನೇ ಔಪಚಾರಿಕವಾಗಿ ಆತ್ಮಜ್ಞಾನವೆಂದೆನ್ನುತ್ತಾರೆ. ಎಲೈ ಲಕ್ಷ್ಮಣನೆ! ಇದೇ ಮೋಕ್ಷಸ್ವರೂಪವು. ಇದನ್ನು ನಿನಗೆ ಹೇಳಿದ್ದೇನೆ. ಜ್ಞಾನ, ವಿಜ್ಞಾನ, ವೈರಾಗ್ಯಗಳಿಂದ ಕೂಡಿದ ಪರಮಾತ್ಮ ಜ್ಞಾನವನ್ನು ನಿನಗೆ ಹೇಳಿದ್ದೇನೆ.

೪೪. ನನ್ನಲ್ಲಿ ಭಕ್ತಿಯಿಲ್ಲದವರಿಗೆ ಈ ಜ್ಞಾನವು ಸಿಕ್ಕುವುದಿಲ್ಲ. ಕಣ್ಣುಗಳಿದ್ದರೂ ಕೂಡಾ ರಾತ್ರಿಯಲ್ಲಿ ಪದಾರ್ಥಗಳು ತಿಳಿಯದಂತೆ ಜ್ಞಾನವಿದ್ದರೂ ಪರಮಾತ್ಮನು ತಿಳಿಯುವವರೇ ನನ್ನಲ್ಲಿರುವ ಭಕ್ತಿಯೇ ಮುಖ್ಯವಾದುದು.

ಪದಂ ದೀಪಸಮೇತಾನಾಂ ದೃಶ್ಯತೇ ಸಮ್ಯಗೇವ ಹಿ । ಏವಂ ಮದ್ಭಕ್ತಿಯುಕ್ತಾನಾಮಾತ್ಮಾ ಸಮ್ಯಕ್ಪ್ರಕಾಶತೇ ॥ ೪೫ ॥

ಮದ್ಭಕ್ತೇಃ ಕಾರಣಂ ಕಿಂಚಿದ್ವಕ್ಷ್ಯಾಮಿ ಶೃಣು ತತ್ವತಃ । ಮದ್ಭಕ್ತಸಂಗೋ ಮತ್ಸೇವಾ ಮದ್ಭಕ್ತಾನಾಂ ನಿರಂತರಂ ॥ ೪೬ ॥

ಏಕಾದಶ್ಯುಪವಾಸಾದಿ ಮಮ ಪರ್ವಾನುಮೋದನಂ । ಮತ್ಕಥಾಶ್ರವಣೇ ಪಾಠೇ ವ್ಯಾಖ್ಯಾನೇ ಸರ್ವದಾ ರತಿಃ ॥ ೪೭ ॥

ಮತ್ಪೂಜಾಪರಿನಿಷ್ಠಾ ಚ ಮಮ ನಾಮಾನುಕೀರ್ತನಂ । ಏವಂ ಸತತಯುಕ್ತಾನಾಂ ಭಕ್ತಿರವ್ಯಭಿಚಾರಿಣೀ ॥ ೪೮ ॥

---

೪೫. ದೀಪವು ಕೈಯ್ಯಲ್ಲಿದ್ದರೇನೇ ದಾರಿಯು ಚನ್ನಾಗಿ ಕಾಣಾವುದು. ಆ ರೀತಿಯಾಗಿ ನನ್ನಲ್ಲಿ ಭಕ್ತಿಯುಳ್ಳವರಿಗೇ ಆತ್ಮನು ಚನ್ನಾಗಿ ತಿಳಿಯುತ್ತಾನೆ.

೪೬. ನನ್ನಲ್ಲಿ ಭಕ್ತಿಯುಂಟಾಗುವುದಕ್ಕೂ ಕಾರಣವನ್ನು ಹೇಳುತ್ತೇನೆ. ಕೇಳು. ನನ್ನ ಭಕ್ತರೊಡನೆ ಸೇರಿರಬೇಕು. ನನ್ನನ್ನು ಸೇವಿಸುತ್ತಿರಬೇಕು. ನನ್ನ ಭಕ್ತರನ್ನೂ ಯಾವಾಗಲೂ ಸೇವಿಸುತ್ತಿರಬೇಕು.

೪೭–೪೮. ಏಕಾದಶಿಯೇ ಮುಂತಾದ ಉಪವಾಸಗಳನ್ನು ಮಾಡುತ್ತಾ ನನ್ನ ಪರ್ವದಿನಗಳನ್ನು ಆಚರಿಸಬೇಕು. ನನ್ನ ಕಥೆಯನ್ನು ಕೇಳುತ್ತಿರಬೇಕು. ಅದಕ್ಕೆ ಅರ್ಥವನ್ನು ಹೇಳುವುದರಲ್ಲಿ ಪ್ರೀತಿಯಿರಬೇಕು. ನನ್ನ ಪೂಜೆಯಲ್ಲಿ ವಿಶೇಷ ಆಸಕ್ತಿಯಿರಬೇಕು. ನನ್ನ ನಾಮಗಳನ್ನು ಹೇಳುತ್ತಿರಬೇಕು. ಈ ರೀತಿಯಾಗಿ ಯಾವಾಗಲೂ ಮಾಡುತ್ತಿದ್ದರೆ ಅವನಿಗೆ ನನ್ನಲ್ಲಿ ಉತ್ತಮವಾದ ಭಕ್ತಿಯು ಹುಟ್ಟುತ್ತದೆ.

ಮಯಿ ಸಂಜಾಯತೇ ನಿತ್ಯಂ ತತಃ ಕಿಮವಶಿಷ್ಯತೇ । ಅತೋ ಮದ್ಭಕ್ತಿಯುಕ್ತಸ್ಯ ಜ್ಞಾನಂ ವಿಜ್ಞಾನಮೇವ ಚ ॥ ೪೯ ॥

ವೈರಾಗ್ಯಂ ಚ ಭವೇಚ್ಛೀಘ್ರಂ ತತೋ ಮುಕ್ತಿಮವಾಪ್ನುಯಾತ್ । ಕಥಿತಂ ಸರ್ವಮೇತತ್ತೇ ತವ ಪ್ರಶ್ನಾನುಸಾರತಃ ॥ ೫೦ ॥

ಅಸ್ಮಿನ್ ಮನಸ್ಸಮಾಧಾಯ ಯಸ್ತಿಷ್ಠೇತ್ಸ ತು ಮುಕ್ತಿಭಾಕ್ । ನ ವಕ್ತವ್ಯಮಿದಂ ಯತ್ನಾನ್ಮದ್ಭಕ್ತಿವಿಮುಖಾಯ ಹಿ ॥ ೫೧ ॥

ಮದ್ಭಕ್ತಾಯ ಪ್ರದಾತವ್ಯಮಾಹೂಯಾಪಿ ಪ್ರಯತ್ನತಃ । ಯ ಇದಂ ತು ಪಠೇನ್ನಿತ್ಯಂ ಶ್ರದ್ಧಾಭಕ್ತಿಸಮನ್ವಿತಃ ॥ ೫೨ ॥

ಅಜ್ಞಾನಪಟಲಧ್ವಾಂತಂ ವಿಧೂಯ ಪರಿಮುಚ್ಯತೇ ॥ ೫೩ ॥

೪೯–೫೦. ಆಮೇಲೆ ಅವನಿಗೆ ಸಮಸ್ತವೂ ಸಿದ್ಧಿಸುತ್ತದೆ ಯಾವುದೂ ಉಳಿಯುವುದಿಲ್ಲ. ಆದ್ದರಿಂದ ನನ್ನಲ್ಲಿ ಭಕ್ತಿಯುಳ್ಳವನಿಗೆ ಜ್ಞಾನ, ವಿಜ್ಞಾನ, ವೈರಾಗ್ಯಗಳು ಬೇಗನೆ ಬರುವುವು. ಅನಂತರದಲ್ಲಿ ಮೋಕ್ಷವನ್ನು ಹೊಂದುತ್ತಾನೆ.

೫೧. ಎಲೈ ಲಕ್ಷ್ಮಣನೆ! ನಿನ್ನ ಪ್ರಶ್ನೆಯಂತೆ ಎಲ್ಲವನ್ನೂ ನಿನಗೆ ಹೇಳಿದ್ದೇನೆ. ಇದರಲ್ಲಿಯೇ ಯಾವನು ಮನಸ್ಸನ್ನಿಟ್ಟುಕೊಂಡ್ಡು ಇರುವನೋ ಅವನು ಮುಕ್ತಿಯನ್ನು ಹೊಂದುವನು.

೫೨. ಈ ವಿಷಯವನ್ನು ನೀನು ನನ್ನಲ್ಲಿ ಭಕ್ತಿಯಿಲ್ಲದವನಿಗೆ ಹೇಳಬೇಡ. ನನ್ನಲ್ಲಿ ಭಕ್ತಿಯಿಟ್ಟಿರುವವನಿಗೆ ಅವನು ಕೇಳದಿದ್ದರೂ ಕರೆದು ಇದನ್ನು ಹೇಳು.

೫೩. ಇದನ್ನು ಯಾವನು ಶ್ರದ್ಧೆ ಭಕ್ತಿಗಳನ್ನಿಟ್ಟು ಓದುತ್ತಾನೆಯೋ ಅವನು ಅಜ್ಞಾನವೆಂಬ ತೆರೆಯನ್ನು ಕಳೆದುಕೊಂಡು ಮುಕ್ತಿಯನ್ನು ಹೊಂದುತ್ತಾನೆ.

ಭಕ್ತಾನಾಂ ಮಮ ಯೋಗಿನಾಂ ಸುವಿಮಲಸ್ವಾಂತಾತಿಶಾಂತಾತ್ಮನಾಂ ।
ಮತ್ಸೇವಾಭಿರತಾತ್ಮನಾಂ ಚ ವಿಮಲಜ್ಞಾನಾತ್ಮನಾಂ ಸರ್ವದಾ ।
ಸಂಗಂ ಯಃ ಕುರುತೇ ಸದೋದ್ಯತಮತಿಸ್ತತ್ಸೇವನಾನನ್ಯಧೀಃ ।
ನೋಕ್ಷಸ್ತಸ್ಯ ಕರೇ ಸ್ಥಿತೋಽಹಮನಿಶಂ ದೃಶ್ಯೋ ಭವೇ ನಾನ್ಯಥಾ ॥ ೫೪ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಅಯೋಧ್ಯಾಕಾಂಡೇ
ಚತುರ್ಥಸ್ಸರ್ಗಃ ಸಮಾಪ್ತಃ

---

೫೪. ನನ್ನಲ್ಲಿ ಭಕ್ತಿಯುನ್ನಿಟ್ಟಿರಬೇಕು. ಅವನು ಯೋಗಿಯಾಗಿರಬೇಕು. ಪರಿಶುದ್ಧವಾಗಿರುವ ಮನಸ್ಸಿರಬೇಕು. ಶಾಂತಿಚಿಂತನಾಗಿರಬೇಕು. ನನ್ನ ಸೇವೆಯಲ್ಲಿಯೇ ಮನಸ್ಸಿರಬೇಕು. ನಿರ್ಮಲವಾದ ಜ್ಞಾನವನ್ನು ಹೊಂದಿರುವವರ ಸಹವಾಸದಲ್ಲಿರಬೇಕು. ಬೇರೆಯ ರೀತಿಯಾದ ಯೋಚನೆಯೇ ಇರಕೂಡದು. ಅವನಿಗೆ ಮೋಕ್ಷವೆಂಬುದು ಕೈಯ್ಯಲ್ಲಿಯೇ ಇರುತ್ತದೆ. ಅವನಿಗೆ ನಾನು ಯಾವಾಗಲೂ ಕಾಣಿಸಿಕೊಳ್ಳುತ್ತೇನೆ. ಇಲ್ಲದಿದ್ದರೆ ಇಲ್ಲ.

ಇಂತು ಶ್ರೀಮದಧ್ಯಾತ್ಮರಾಮಾಯದ ಅರಣ್ಯಕಾಂಡದಲ್ಲಿ ನಾಲ್ಕನೆಯ ಸರ್ಗವು ಮುಗಿದುದು.

ಅಥ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಪಂಚಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಓಂ ಅಸ್ಯ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಪಂಚಮಸರ್ಗಸ್ಯ

ಶ್ರೀ ಭಗವಾನ್ ಬಾದರಾಯಣ ಋಷಿಃ, ಗಾಯತ್ರೀ ಛಂದಃ, ಓಂ ನಮೋ ನಾರಾಯಣೋ ದೇವತಾ, ಶ್ರೀ ಲಕ್ಷ್ಮೀ ಬೀಜಂ, ಪರಮಾ ಶಕ್ತಿಃ, ಅವ್ಯಕ್ತಂ ಕೀಲಕಂ, ಅಮುಕಸಂಪುಟೀಕರಣ ಸಿದ್ಧ್ಯರ್ಥಂ ಅಮುಕಮಂತ್ರ ಲೋಮ ವಿಲೋಮ ಸಂಪುಟೀಕರಣ ದಶಾಧ್ಯಾಯೇ ಮಂತ್ರಾಷ್ಟಾಕ್ಷರ ಸಂಯುಕ್ತಂ ಪಂಚಮಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ.

ಓಂ ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ಐದನೆಯ ಸರ್ಗಕ್ಕೆ

ಶ್ರೀ ಭಗವಾನ್ ಬಾದರಾಯಣನು ಋಷಿಯು, ಗಾಯತ್ರೀ ಛಂದಸ್ಸು, ಓಂ ನಮೋ ನಾರಾಯಣ ಎಂಬುದು ದೇವತೆಯು. ಶ್ರೀ ಲಕ್ಷ್ಮೀಃ ಎಂಬುದು ಬೀಜವು, ಪರಮಾ ಎಂಬುದು ಶಕ್ತಿಯು, ಅವ್ಯಕ್ತಂ ಎಂಬುದು ಕೀಲಕವು, ಇಂತಹ ಸಂಪುಟೀಕರಣದ ಸಿದ್ಧಿಗೋಸ್ಕರ ಇಂತಹ ಮಂತ್ರದ ಲೋಮ ವಿಲೋಮ ಸಂಪುಟೀಕರಣದ ದಶಾಧ್ಯಾಯದಲ್ಲಿ ಎಂಟಕ್ಷರದ ಮಂತ್ರದಿಂದ ಕೂಡಿದ ಪಂಚಮಸರ್ಗದ ನ್ಯಾಸ ಧ್ಯಾನ ಜಪಗಳನ್ನು ಮಾಡುತ್ತೇನೆ ಎಂದು ಸಂಕಲ್ಪ ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ಮಾಂ ರುಂ ರಾಂ ಅಂಗುಷ್ಠಾಭ್ಯಾಂ ನಮಃ
ಓಂ ಮಾಂ ರುಂ ರಾಂ ತರ್ಜನೀಭ್ಯಾಂ ನಮಃ
ಓಂ ಮಾಂ ರುಂ ರಾಂ ಮಧ್ಯಮಾಭ್ಯಾಂ ನಮಃ
ಓಂ ಮಾಂ ರುಂ ರಾಂ ಅನಾಮಿಕಾಭ್ಯಾಂ ನಮಃ
ಓಂ ಮಾಂ ರುಂ ರಾಂ ಕನಿಷ್ಠಿಕಾಭ್ಯಾಂ ನಮಃ
ಓಂ ಮಾಂ ರುಂ ರಾಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಷಡಂಗನ್ಯಾಸವು

ಓಂ ಮಾಂ ರುಂ ರಾಂ ಹೃದಯಾಯ ನಮಃ
ಓಂ ಮಾಂ ರುಂ ರಾಂ ಶಿರಸೇ ಸ್ವಾಹಾ
ಓಂ ಮಾಂ ರುಂ ರಾಂ ಶಿಖಾಯೈ ವಷಟ್
ಓಂ ಮಾಂ ರುಂ ರಾಂ ಕವಚಾಯ ಹುಂ
ಓಂ ಮಾಂ ರುಂ ರಾಂ ನೇತ್ರತ್ರಯಾಯ ವೌಷಟ್
ಓಂ ಮಾಂ ರುಂ ರಾಂ ಅಸ್ತ್ರಾಯ ಫಟ್

ಓಂ ಮಾಂ ರುಂ ರಾಂ ಇತಿ ದಿಗ್ಬಂಧಃ
ಓಂ ಮಾಂ ರುಂ ರಾಂ ಎಂದು ದಿಗ್ಬಂಧವು

॥ ಅಥ ಧ್ಯಾನಂ ॥

ಧ್ಯಾನವು

ತಸ್ಮಿನ್ ಕಾಲೇ ಮಹಾರಣ್ಯೇ ರಾಕ್ಷಸೀ ಕಾಮರೂಪಿಣೀ । ವಿಚಚಾರ ಮಹಾಸತ್ವಾ ಜನಸ್ಥಾನನಿವಾಸಿನೀ ॥

ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಪಾರಾಯಣಾಂತೇ ಪುನಃ ಹೃದಯಾದಿ ಷಡಂಗನ್ಯಾಸಂ ಕೃತ್ವಾ ಓಂ ಮಾಂ ರುಂ ರಾಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್.

ಪಾರಾಯಣಮಾಡಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ಮಾಂ ರುಂ ರಾಂ ಇತಿ ದಿಗ್ವಿಮೋಕಃ ಎಂದೆನ್ನಬೇಕು.
ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

॥ ಇತಿ ಶ್ರೀ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಪಂಚಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ ॥

ಇಂತು ಶ್ರೀ ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ಐದನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಪಂಚಮಸ್ಸರ್ಗಃ

॥ ಶ್ರೀ ಮಹಾದೇವ ಉವಾಚ ॥

ತಸ್ಮಿನ್ ಕಾಲೇ ಮಹಾರಣ್ಯೇ ರಾಕ್ಷಸೀ ಕಾಮರೂಪಿಣೀ । ವಿಚಚಾರ ಮಹಾಸತ್ತ್ವಾ ಜನಸ್ಥಾನನಿವಾಸಿನೀ ॥ ೧ ॥

ಏಕದಾ ಗೌತಮೀತೀರೇ ಪಂಚವಟ್ಯಾಃ ಸಮೀಪತಃ । ಪದ್ಮವಜ್ರಾಂಕುಶಾಂಕಾನಿ ಪದಾನಿ ಜಗತೀಪತೇಃ ॥ ೨ ॥

ಶ್ರೀಮದಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ಐದನೆಯ ಸರ್ಗವು.

೧. ಶ್ರೀ ಮಹಾದೇವನು ಹೇಳಿದನು–ಈ ಮೂವರೂ ಹೀಗೆ ಪಂಚವಟಿಯಲ್ಲಿ ವಾಸಮಾಡುತ್ತಿರುವಾಗ ಆ ದೊಡ್ಡಕಾಡಿನಲ್ಲಿ ಕಾಮರೂಪವನ್ನು ಹೊಂದತಕ್ಕ ಶಕ್ತಿಯುಳ್ಳ ಜನಸ್ಥಾನದಲ್ಲಿ ವಾಸವಾಗಿರುವ ಬಹು ಬಲಿಷ್ಠಳಾದ ಒಬ್ಬ ರಾಕ್ಷಸಿಯು ಸಂಚರಿಸುತ್ತಿದ್ದಳು.

೨–೩. ಹೀಗೆ ಅಲ್ಲಿಲ್ಲವೂ ಸಂಚರಿಸುತ್ತಿದ್ದಾಗ ಆ ರಾಕ್ಷಸಿಯು ಗೌತಮೀನದಿಯ ದಡದಲ್ಲಿ ಪಂಚವಟಿಯ ಹತ್ತಿರ ಕೆಲವು ಕಾಲಿನಹೆಜ್ಜೆಯಗುರುತುಗಳನ್ನು ಕಂಡಳು. ಅವುಗಳಲ್ಲಿ ಕಮಲ, ವಜ್ರಾಯುಧ, ಅಂಕುಶಗಳ ಗುರುತುಗಳಿದ್ದುವು. ಇವನ್ನು ನೋಡಿ ಅದರಿಂದ ಆ

ದೃಷ್ಟ್ವೈವ ಕಾಮಪರೀತಾತ್ಮಾ ಪಾದಸೌಂದರ್ಯಮೋಹಿತಾ । ಪಶ್ಯಂತೀ ಸಾ ಶನೈರಾಯಾದ್ರಾಘವಸ್ಯ ನಿವೇಶನಂ ॥ ೩ ॥

ತತ್ರ ಸಾ ತಂ ರಮಾನಾಥಂ ಸೀತಯಾ ಸಹ ಸಂಸ್ಥಿತಂ । ಕಂದರ್ಪಸದೃಶಂ ರಾಮಂ ದೃಷ್ಟ್ವಾ ಕಾಮವಿಮೋಹಿತಾ ॥ ೪ ॥

ರಾಕ್ಷಸೀ ರಾಘವಂ ಪ್ರಾಹ ಕಸ್ಯ ತ್ವಂ ಕಃ ಕಿಮಾಶ್ರಮೇ । ಯುಕ್ತೋ ಜಟಾವಲ್ಕಲಾದ್ಯೈಃ ಸಾಧ್ಯಂ ಕಿಂ ತೇತ್ರ ಮೇ ವದ ॥ ೫ ॥

ಅಹಂ ಶೂರ್ಪಣಖಾ ನಾಮ ರಾಕ್ಷಸೀ ಕಾಮರೂಪಿಣೀ । ಭಗಿನೀ ರಾಕ್ಷಸೇಂದ್ರಸ್ಯ ರಾವಣಸ್ಯ ಮಹಾತ್ಮನಃ ॥ ೬ ॥

ಆ ವ್ಯಕ್ತಿಯ ಆಕಾರವನ್ನು ಮನಸ್ಸಿಗೆ ತಂದುಕೊಂಡು ಅವನಲ್ಲಿ ಮೋಹಿತಳಾದಳು. ಅನಂತರ ಹೆಜ್ಜೆಗಳ ಗುರುತುಗಳನ್ನೇ ಅನುಸರಿಸಿಕೊಂಡು ಹೊರಟು ರಾಮನ ಆಶ್ರಮದಲ್ಲಿರುವ ಅವನ ಪರ್ಣಶಾಲೆಗೆ ಬಂದಳು.

೪. ಆಗ ಅಲ್ಲಿ ರಾಮನು ಸೀತೆಯೊಡನೆ ಕುಳಿತಿದ್ದನು. ಮನ್ಮಥನಂತಿರುವ ಇವನನ್ನು ಆಕೆಯು ನೋಡಿದೊಡನೆಯೇ ಕಾಮಬಾಧೆಗೊಳಗಾದಳು.

೫. ಅವನನ್ನು ನೋಡಿ ಈ ರಾಕ್ಷಸಿಯು ನೀನು ಯಾರ ಮಗನು ? ನಿನ್ನ ಹೆಸರೇನು ? ಈ ಆಶ್ರಮದಲ್ಲಿ ಏತಕ್ಕೆ ಇದ್ದೀಯೆ ? ಜಡೆನಾರುಡೆಗಳನ್ನೇಕೆ ಧರಿಸಿದ್ದೀಯೆ. ನೀನು ಇಲ್ಲಿ ಮಾಡುವುದೇನು ? ಅವೆಲ್ಲವನ್ನೂ ನನಗೆ ತಿಳಿಸು.

೬. ನನ್ನ ಹೆಸರು ಶೂರ್ಪಣಖೆಯೆಂದು ತಿಳಿ. ನಾನು ರಾಕ್ಷಸಿಯು. ಇಚ್ಛೆ ಬಂದರೂಪವನ್ನು ಹೊಂದುತ್ತೇನೆ. ಮಹಾತ್ಮನೂ ರಾಕ್ಷಸ ರಾಜನೂ ಆದ ಆ ರಾವಣನಿಗೆ ತಂಗಿಯು.

ಖರೇಣ ಸಹಿತಾ ಭ್ರಾತ್ರಾ ವಸಾಮ್ಯತ್ರೈವ ಕಾನನೇ । ರಾಜ್ಞಾ ದತ್ತಂ ಚ ಮೇ ಸರ್ವಂ ಮುನಿಭಕ್ಷ್ಯಾ ವಸಾಮ್ಯಹಂ ॥ ೭ ॥

ತ್ವಾಂ ತು ವೇದಿತುಮಿಚ್ಛಾಮಿ ವದ ಮೇ ವದತಾಂ ವರ । ತಾಮಾಹ ರಾಮನಾಮಾಹಮಯೋಧ್ಯಾಧಿಪತೇಃ ಸುತಃ ॥ ೮ ॥

ಏಷಾ ಮೇ ಸುಂದರೀ ಭಾರ್ಯಾ ಸೀತಾ ಜನಕನಂದಿನೀ । ಸ ತು ಭ್ರಾತಾ ಕನೀಯಾನ್ಮೇ ಲಕ್ಷ್ಮಣೋತೀವಸುಂದರಃ ॥ ೯ ॥

ಕಿಂ ಕೃತ್ಯಂ ತೇ ಮಯಾ ಬ್ರೂಹಿ ಕಾರ್ಯಂ ಭುವನಸುಂದರಿ । ಇತಿ ರಾಮವಚಃ ಶ್ರುತ್ವಾ ಕಾಮಾರ್ತಾ ಸಾಬ್ರವೀದಿದಂ ॥ ೧೦ ॥

---

೭. ಇಲ್ಲಿ ಖರನೆಂಬ ರಾಕ್ಷಸನು ನನ್ನ ತಮ್ಮನಿರುವನು. ಅವನ ಜೊತೆಯಲ್ಲಿ ಈ ಕಾಡಿನಲ್ಲಿಯೇ ನಾನು ಇದ್ದುಕೊಂಡಿರುವೆನು. ಆ ರಾವಣನು ಈ ಕಾಡೆಲ್ಲವನ್ನೂ ನನಗೆ ಕೊಟ್ಟಿರುವನು. ಇಲ್ಲಿರುವ ಋಷಿಗಳನ್ನು ತಿಂದುಕೊಂಡು ಇಲ್ಲಿಯೇ ವಾಸವಾಗಿದ್ದೇನೆ.

೮. ನೀನು ಯಾರು ಎಂಬುದನ್ನು ತಿಳಿಯಬೇಕೆಂದಿದ್ದೇನೆ. ಅವೆಲ್ಲವನ್ನೂ ನನಗೆ ಹೇಳು, ಎಂದೆನ್ನಲು ಆಗ ರಾಮನು ಆಕೆಯನ್ನು ಕುರಿತು ನಾನು ರಾಮನೆಂಬುವನು. ಅಯೋಧ್ಯೆಯ ರಾಜನ ಮಗನು.

೯. ಈ ಸುಂದರಿಯು ನನ್ನ ಹೆಂಡತಿಯು. ಇವಳ ಹೆಸರು ಸೀತೆಯು. ಇವಳು ಜನಕರಾಜನ ಮಗಳು. ಅವನು ನನ್ನ ತಮ್ಮನು. ಅವನ ಹೆಸರು ಲಕ್ಷ್ಮಣನು. ಬಹು ಸುಂದರನು.

೧೦. ಎಲೈ ಲೋಕಸುಂದರಿಯೇ ! ನನ್ನಿಂದ ನಿನಗೇನು ಆಗ ಬೇಕಾಗಿದೆ ? ಹೇಳು, ಎಂದನು. ರಾಮನ ಈ ಮಾತನ್ನು ಕೇಳಿ ಕಾಮಬಾಧೆಗೊಳಗಾಗಿದ್ದ ಆಕೆಯು ಇಂತೆಂದಳು.

ಏಹಿ ರಾಮ ಮಯಾ ಸಾರ್ಧಂ ರಮಸ್ವ ಗಿರಿಕಾನನೇ । ಕಾಮಾರ್ತಾಹಂ ನ ಶಕ್ನೋಮಿ ತ್ಯಕ್ತುಂ ತ್ವಾಂ ಕಮಲೇಕ್ಷಣಂ ॥ ೧೧ ॥

ರಾಮಃ ಸೀತಾಂ ಕಟಾಕ್ಷೇಣ ಪಶ್ಯನ್ ಸಸ್ಮಿತಮಬ್ರವೀತ್ । ಭಾರ್ಯಾ ಮಮೈಷಾ ಕಲ್ಯಾಣಿ ವಿದ್ಯತೇ ಹ್ಯನಪಾಯಿನೀ ॥ ೧೨ ॥

ತ್ವಂ ತು ಸಾಪತ್ನ್ಯದುಃಖೇನ ಕಥಂ ಸ್ಥಾಸ್ಯಸಿ ಸುಂದರಿ । ಬಹಿರಾಸ್ತೇ ಮಮ ಭ್ರಾತಾ ಲಕ್ಷ್ಮಣೋತೀವಸುಂದರಃ ॥ ೧೩ ॥

ತವಾನುರೂಪೋ ಭವಿತಾ ಪತಿಸ್ತೇನೈವ ಸಂಚರ । ಇತ್ಯುಕ್ತಾ ಲಕ್ಷ್ಮಣಂ ಪ್ರಾಹ ಪತಿರ್ಮೇ ಭವ ಸುಂದರ ॥ ೧೪ ॥

---

೧೧. ಎಲೈ ರಾಮನೆ ! ನನ್ನೊಡನೆ ಬಾ ! ಬೆಟ್ಟದಕಾಡುಗಳಲ್ಲಿ ನನ್ನೊಡನೆ ವಿಹರಿಸು ! ಎಲೈ ಕಮಲಾಕ್ಷನೆ ! ನನಗೆ ಕಾಮ ಬಾಧೆಯು ಹೆಚ್ಚಿದೆ. ನಿನ್ನನ್ನು ಬಿಟ್ಟು ಹೋಗಲು ನಾನು ಶಕ್ತಳಾಗಿಲ್ಲ.

೧೨. ಆಗ ರಾಮನು ಸೀತೆಯನ್ನು ಕಡೆಗಣ್ಣಿ ನೋಟದಿಂದ ನೋಡಿ ಹುಸಿನಗೆ ನಗುತ್ತ ಇಂತೆಂದನು. ನನಗೆ ಈ ಹೆಂಡತಿಯು ಇರುವಳು. ಈಕೆಯಿಂದ ನನಗೆ ಯಾವ ತೊಂದರೆಯೂ ಇಲ್ಲ. ಇವಳು ನನ್ನನ್ನು ಬಿಡುವವಳೂ. ಅಲ್ಲ.

೧೩. ನಾನು ನಿನ್ನನ್ನು ಮದುವೆಯಾದರೆ ಆಗ ಈಕೆಯು ನಿನಗೆ ಸವತಿಯಾಗುವಳು. ಆ ಸವತಿಯ ದುಃಖವನ್ನು ನೀನು ಹೇಗೆ ತಾನೆ ಸಹಿಸಿಕೊಂಡು ಇರುವೆ ? ಯೋಚಿಸಿ ನೋಡು. ನನ್ನ ತಮ್ಮನು ಹೊರಗಡೆಯುಲ್ಲಿದ್ದಾನೆ. ಅವನು ಬಹು ಸುಂದರನು.

೧೪. ಅವನನ್ನು ಮದುವೆಯಾದರೆ ನಿನಗೆ ಸರಿಯಾಗಿರುವನು. ಅವನನ್ನು ಮದುವೆಮಾಡಿಕೊಂಡು ಅವನೊಡನೆ ಸುಖವಾಗಿ ವಿಹರಿಸು. ಹೀಗೆಂದು ರಾಮನು ಆಕೆಗೆ ಹೇಳಲು ಆಕೆಯು ಲಕ್ಷ್ಮಣನಲ್ಲಿಗೆ ಹೋಗಿ ಎಲೈ ಸುಂದರನೆ ! ನೀನು ನನಗೆ ಗಂಡನಾಗು.

ಭ್ರಾತುರಾಜ್ಞಾಂ ಪುರಸ್ಕೃತ್ಯ ಸಂಗಚ್ಛಾವೋದ್ಯ ಮಾಚಿರಂ । ಇತ್ಯಾಹ ರಾಕ್ಷಸೀ ಘೋರಾ ಲಕ್ಷ್ಮಣಂ ಕಾಮಮೋಹಿತಾ ॥ ೧೫ ॥

ತಾಮಾಹ ಲಕ್ಷ್ಮಣಸ್ಸಾಧ್ವಿ ದಾಸೋಹಂ ತಸ್ಯ ಧೀಮತಃ । ದಾಸೀ ಭವಿಷ್ಯಸಿ ತ್ವಂ ತು ತತೋ ದುಃಖತರಂ ನು ಕಿಂ ॥ ೧೬ ॥

ತಮೇವ ಗಚ್ಛ ಭದ್ರಂ ತೇ ಸ ತು ರಾಜಾಖಿಲೇಶ್ವರಃ । ತಚ್ಛ್ರುತ್ವಾ ಪುನರಪ್ಯಾಗಾದ್ರಾಘವಂ ದುಷ್ಟಮಾನಸಾ ॥ ೧೭ ॥

ಕ್ರೋಧಾದ್ರಾಮ ಕಿಮರ್ಥಂ ಮಾಂ ಭ್ರಾಮಯಸ್ಯನವಸ್ಥಿತಃ । ಇದಾನೀಮೇವ ತಾಂ ಸೀತಾಂ ಭಕ್ಷಯಾಮಿ ತವಾಗ್ರತಃ ॥ ೧೮ ॥

---

೧೫. ನಿನ್ನ ಅಣ್ಣನೇ ಮದುವೆಯಾಗೆಂದು ಹೇಳಿರುವನು. ಅವನ ಅಪ್ಪಣೆಯನ್ನು ಮುಂದುಮಾಡಿಕೊಂಡು ನಾವಿಬ್ಬರೂ ಬೇಗ ಸೇರಿಕೊಳ್ಳೋಣ. ಸಾವಕಾಶಮಾಡಬೇಡ. ಎಂದು ಕಾಮದಿಂದ ಬಾಧೆಪಡುತ್ತಿದ್ದ ಅಘೋರಳಾದ ರಾಕ್ಷಸಿಯು ಹೇಳಿದಳು.

೧೬. ಆಗ ಲಕ್ಷ್ಮಣನು ಎಲೈ ಸಾಧ್ವಿಯೆ ! ನಾನು ಆ ರಾಮನಿಗೆ ದಾಸನಾಗಿದ್ದೇನೆ. ದಾಸನಾದ ನನ್ನನ್ನು ನೀನು ಮದುವೆಯಾದರೆ ನೀನೂ ಕೂಡಾ ದಾಸಿಯಾಗಬೇಕಾಗುವುದು. ಇದಕ್ಕಿಂತಲೂ ಇನ್ನು ಸಂಕಟವನ್ನುಂಟುಮಾಡುವುದು ಯಾವುದು ಬೇಕು ?

೧೭. ನೀನು ಆವನ ಬಳಿಗೆ ಹೋಗು. ಆವನನ್ನೇ ವರಿಸು. ನಿನಗೆ ಮಂಗಳವಾಗುತ್ತದೆ. ಆವನಾದರೋ ರಾಜನು. ಎಲ್ಲರಿಗೂ ಒಡೆಯನು. ಎಂದನು. ಅನಂತರ ಆ ಕ್ರೂರಳು ಇದನ್ನು ಕೇಳಿ ರಾಮನ ಬಳಿಗೆ ಮತ್ತೆ ಹೋದಳು. ರಾಮನನ್ನು ಕುರಿತು ಕೋಪದಿಂದ ಇಂತೆಂದಳು.

೧೮. ಎಲೈ ರಾಮನೆ ! ಒಂದು ರೀತಿಯಾದ ಮನಸ್ಸಿಲ್ಲದೆ ನನ್ನನ್ನೇಕೆ ಅಲ್ಲಿಗಿಲ್ಲಿಗೆ ಓಡಾಡಿಸುತ್ತೀಯೆ ? ಈಗಲೇ ನಿನ್ನ ಎದುರಿಗೆ ಆ ಸೀತೆಯನ್ನು ತಿಂದುಬಿಡುತ್ತೇನೆ.

ಇತ್ಯುಕ್ತ್ವಾ ವಿಕಟಾಕಾರಾ ಜಾನಕೀಮನುಧಾವತೀ ತತೋ ರಾಮಾಜ್ಞಯಾ ಖಡ್ಗಮಾದಾಯ ಪರಿಗೃಹ್ಯ ತಾಂ ॥ ೧೯ ॥

ಚಿಚ್ಛೇದ ನಾಸಾಂ ಕರ್ಣೌ ಚ ಲಕ್ಷ್ಮಣೋ ಲಘುವಿಕ್ರಮಃ । ತತೋ ಘೋರಧ್ವನಿಂ ಕೃತ್ವಾ ರುಧಿರಾಕ್ತವಪುರ್ದ್ರುತಂ ॥ ೨೦ ॥

ಕ್ರಂದಮಾನಾ ಪಪಾತಾಗ್ರೇ ಖರಸ್ಯ ಪರುಷಾಕ್ಷರಾ । ಕಿಮೇತದಿತಿ ತಾಮಾಹ ಖರೋ ಖರತರಾಕ್ಷರಃ ॥ ೨೧ ॥

ಕೇನೈವಂ ಕಾರಿತಾಸಿ ತ್ವಂ ಮೃತ್ಯೋರ್ವಕ್ತ್ರಾನುವರ್ತಿನಾ । ವದ ಮೇ ತಂ ವಧಿಷ್ಯಾಮಿ ಕಾಲಕಲ್ಪಮಪಿ ಕ್ಷಣಾತ್ ॥ ೨೨ ॥

೧೯–೨೦. ಎಂದು ಹೇಳಿ ಭಯಂಕರವಾದ ವೇಷವನ್ನು ಹೊಂದಿ ಜಾನಕಿಯನ್ನು ತಿನ್ನಲೋಸುಗ ಆಕೆಯಮೇಲೆ ಬೀಳಲು ಅಲ್ಲಿಗೆ ಹೋದಳು. ಆಗ ರಾಮನು ಅಪ್ಪಣೆಮಾಡಲು ಅದರಂತೆ ಲಕ್ಷ್ಮಣನು ಕತ್ತಿಯನ್ನು ತೆಗೆದುಕೊಂಡು ಆಕೆಯನ್ನು ಹಿಡಿದುಕೊಂಡು ಆಕೆಯ ಮೂಗನ್ನೂ ಕಿವಿಗಳನ್ನೂ ಜಾಗ್ರತೆಯಾಗಿ ಕತ್ತರಿಸಿದನು. ಒಡನೆಯೇ ಆಕೆಯು ಭಯಂಕರವಾಗಿ ಕೂಗುತ್ತಾ ಮೈಯ್ಯನ್ನೆಲ್ಲಾ ರಕ್ತದಿಂದ ನೆನೆಸಿಕೊಂಡಳು.

೨೧. ಅಳುತ್ತಾ ಓಡಿಹೋಗಿ ಖರನ ಎದುರಿಗೆ ಕರ್ಕಶವಾಗಿ ಕೂಗುತ್ತಾ ಬಿದ್ದಳು. ಒಡನೆಯೇ ಆ ಖರನು ಪರುಷವಾದ ಮಾತುಗಳಿಂದ ಎಲೈ ಶೂರ್ಪಣಖಿಯೆ ! ಇದೇನು ?

೨೨. ಮೃತ್ಯುವಿನ ಬಾಯೊಳಗಿರುವ ಯಾವನು ತಾನೆ ನಿನಗೆ ಈ ರೀತಿಯಾಗಿ ಮಾಡಿದನು ? ಅದನ್ನು ಮೊದಲು ನನಗೆ ಹೇಳು. ಅವನು ಯಮನಿಗೆ ಸಮನಾಗಿದ್ದರೂ ಕ್ಷಣಕಾಲದಲ್ಲಿ ಕೊಂದುಹಾಕುವೆನು.

ತನಾಹ ರಾಕ್ಷಸೀ ರಾಮಃ ಸೀತಾಲಕ್ಷ್ಮಣಸಂಯುತಃ । ದಂಡಕಂ ನಿರ್ಭಯಂ ಕುರ್ವನ್ನಾಸ್ತೇ ಗೋದಾವರೀತಟೇ ॥ ೨೩ ॥
ಮಾಮೇವಂ ಕೃತವಾಂಸ್ತಸ್ಯ ಭ್ರಾತಾ ತೇನೈವ ಚೋದಿತಃ । ಯದಿ ತ್ವಂ ಕುಲಜಾತೋಽಸಿ ವೀರೋಽಸಿ ಜಹಿ ತೌ ರಿಪೂ ॥ ೨೪ ॥
ತಯೋಸ್ತು ರುಧಿರಂ ಪಾಸ್ಯೇ ಭಕ್ಷಯಿಷ್ಯೇ ಸುದುರ್ಮದೌ । ನೋ ಚೇತ್ಪ್ರಾಣಾನ್ಪರಿತ್ಯಜ್ಯ ಯಾಸ್ಯಾಮಿ ಯಮಸಾದನಂ ॥ ೨೫ ॥
ತಚ್ಛ್ರುತ್ವಾ ತ್ವರಿತಂ ಪ್ರಾಗಾತ್ಖರಃ ಕ್ರೋಧೇನ ಮೂರ್ಛಿತಃ । ಚತುರ್ದಶಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಂ ॥ ೨೬ ॥

---

೨೩. ಆಗ ಆ ಶೂರ್ಪಣಖಿಯು ಅವನನ್ನು ಕುರಿತು ಇಂತೆಂದಳು. ರಾಮನೆಂಬವನೊಬ್ಬನು ದಂಡಕಾರಣ್ಯಕ್ಕೆ ಬಂದಿರುವನು. ಅವನ ಜೊತೆಯಲ್ಲಿ ಸೀತೆ ಲಕ್ಷ್ಮಣರೆಂಬುವರು. ಇರುವರು. ಈ ದಂಡಕಾರಣ್ಯದಲ್ಲಿದ್ದುಕೊಂಡು ಅಲ್ಲಿರುವವರಿಗೆಲ್ಲಾ ಭಯವಿಲ್ಲದಂತೆ ಮಾಡುತ್ತಾ ಗೋದಾವರಿಯ ದಡದಲ್ಲಿರುವರು.

೨೪. ಅವನು ತಮ್ಮನಾದ ಲಕ್ಷ್ಮಣನಿಗೆ ಹೇಳಲು ಆತನು ನನಗೆ ಈ ರೀತಿಯಾದ ವಿಕಾರಗಳನ್ನು ಮಾಡಿದನು. ನೀನು ಸರಿಯಾದ ಶೂರರ ವಂಶದಲ್ಲಿ ಹುಟ್ಟಿದ್ದು ವೀರನಾಗಿದ್ದರೆ ಶತ್ರುಗಳಾದ ಅವರಿಬ್ಬರನ್ನೂ ಕೊಂದುಹಾಕು.

೨೫. ಕೊಂದಮೇಲೆ ಅಪಕಾರಿಗಳಾದ ಅವರ ರಕ್ತವನ್ನು ಕುಡಿದು ಅವರನ್ನು ತಿನ್ನುವೆನು. ಹಾಗೆ ನೀನು ಕೊಲ್ಲದಿದ್ದರೂ ನಾನು ತಿನ್ನದಿದ್ದರೂ ಪ್ರಾಣಗಳನ್ನು ಬಿಟ್ಟು ಯಮಲೋಕವನ್ನು ಹೊಂದುವೆನು.

೨೬. ಈ ಮಾತನ್ನು ಕೇಳಿ ಖರನು ಕ್ರೋಧಗೊಂಡು ಶೀಘ್ರವಾಗಿಯೇ ಆ ರಾಮಲಕ್ಷ್ಮಣರಲ್ಲಿಗೆ ಹೊರಟನು. ಆ ರಾಮನನ್ನು ಕೊಲ್ಲಬೇಕೆಂಬ ಇಚ್ಛೆಯಿಂದ ತನ್ನ ಬಳಿಯಲ್ಲಿದ್ದ ಬಹು ಶೂರರಾದ ಹದಿನಾಲ್ಕುಸಾವಿರ ರಾಕ್ಷಸ ಸೈನ್ಯವನ್ನು ಕರೆದುಕೊಂಡು ಹೊರಟನು.

ಚೋದಯಾಮಾಸ ರಾಮಸ್ಯ ಸಮೀಪಂ ವಧಕಾಂಕ್ಷಯಾ । ಖರಶ್ಚ ತ್ರಿಶಿರಾಶ್ಚೈವ ದೂಷಣಶ್ಚೈವ ರಾಕ್ಷಸಃ ॥ ೨೭ ॥

ಸರ್ವೇ ರಾಮಂ ಯಯುಃ ಶೀಘ್ರಂ ನಾನಾಪ್ರಹರಣೋದ್ಯತಾಃ । ಶ್ರುತ್ವಾ ಕೋಲಾಹಲಂ ತೇಷಾಂ ರಾಮಃ ಸೌಮಿತ್ರಿಮಬ್ರವೀತ್

ಶ್ರೂಯತೇ ವಿಪುಲಃ ಶಬ್ದೋ ನೂನಮಾಯಾಂತಿ ರಾಕ್ಷಸಾಃ । ಭವಿಷ್ಯತಿ ಮಹದ್ಯುದ್ಧಂ ನೂನಮದ್ಯ ಮಯಾ ಸಹ ॥ ೨೯ ॥

ಸೀತಾಂ ನೀತ್ವಾ ಗುಹಾಂ ಗತ್ವಾ ತತ್ರ ತಿಷ್ಠ ಮಹಾಬಲ । ಹಂತುಮಿಚ್ಛಾಮ್ಯಹಂ ಸರ್ವಾನ್ ರಾಕ್ಷಸಾನ್ ಘೋರರೂಪಿಣಃ ॥ ೩೦ ॥

---

೨೭. ಖರನೂ, ತ್ರಿಶಿರನೂ, ದೂಷಣನೂ ಇನ್ನೂ ಅನೇಕರೂ ಬಹುವಾದ ಆಯುಧವನ್ನು ತೆಗೆದುಕೊಂಡು ಆ ರಾಮನಮೇಲೆ ತಡಮಾಡದೆ ಹೊರಟರು.

೨೮–೨೯. ಅವರೆಲ್ಲರೂ ರಾಮಾಶ್ರಮದ ಬಳಿಗೆ ಹೋಗಲು ಅವರ ಕೋಲಾಹಲವನ್ನು ಕೇಳಿ ರಾಮನು ಲಕ್ಷ್ಮಣನನ್ನು ಕುರಿತು ಇಂತೆಂದನು. ಎಲೈ ಲಕ್ಷ್ಮಣನೆ! ಬಹುವಾದ ದೊಡ್ಡ ಶಬ್ದವು ಕೇಳಿ ಬರುತ್ತಿದೆ. ಖಂಡಿತವಾಗಿಯೂ ರಾಕ್ಷಸರು ಬರುತ್ತಿರುವರು. ಈಗ ಅವರಿಗೂ ನನಗೂ ದೊಡ್ಡ ಯುದ್ಧವು ನಡೆಯುತ್ತದೆ.

೩೦. ಎಲೈ ಮಹಾಬಲನೆ! ಸೀತೆಯನ್ನು ಕರೆದುಕೊಂಡು ಗುಹೆಗೆ ಹೋಗಿ ಅಲ್ಲಿ ಅವಳನ್ನು ಕಾಪಾಡಿಕೊಂಡಿರು. ಈ ಘೋರರೂಪರಾದ ರಾಕ್ಷಸರೆಲ್ಲರನ್ನೂ ಕೊಂದುಹಾಕಬೇಕೆಂದಿದ್ದೇನೆ.

ಅತ್ರ ಕಿಂಚಿನ್ನ ವ್ಯಕ್ತವ್ಯಂ ಶಾಪಿತೋಽಸಿ ಮಮೋಪರಿ । ತಥೇತಿ ಸೀತಾಮಾದಾಯ ಲಕ್ಷ್ಮಣೋ ಗಹ್ವರಂ ಯಯೌ ॥ ೩೧ ॥
ರಾಮಃ ಪರಿಕರಂ ಬದ್ಧ್ವಾ ಧನುರಾದಾಯ ನಿಷ್ಠುರಂ । ತೂಣೀರಾವಕ್ಷಯಶರೌ ಬದ್ಧ್ವಾ ಯತ್ತೋಽಭವತ್ಪ್ರಭುಃ ॥ ೩೨ ॥
ತತ ಆಗತ್ಯ ರಕ್ಷಾಂಸಿ ರಾಮಸ್ಯೋಪರಿ ಚಿಕ್ಷಿಪುಃ । ಆಯುಧಾನಿ ವಿಚಿತ್ರಾಣಿ ಪಾಷಾಣಾನ್ಪಾದಪಾನಪಿ ॥ ೩೩ ॥
ತಾನಿ ಚಿಚ್ಛೇದ ರಾಮೋಽಪಿ ಲೀಲಯಾ ತಿಲಶಃ ಕ್ಷಣಾತ್ । ತತೋ ಬಾಣಸಹಸ್ರೇಣ ಹತ್ವಾ ತಾನ್ ಸರ್ವರಾಕ್ಷಸಾನ್ ॥ ೩೪ ॥
ಖರಂ ತ್ರಿಶಿರಸಂ ಚೈವ ದೂಷಣಂ ಚೈವ ರಾಕ್ಷಸಂ । ಜಘಾನ ಪ್ರಹರಾರ್ಧೇನ ಸರ್ವಾನೇವ ರಘೂತ್ತಮಃ ॥ ೩೫ ॥

---

೩೧. ಈ ವಿಷಯದಲ್ಲಿ ಪ್ರತಿಮಾತನ್ನಾಡಕೂಡದು. ನನ್ನ ಮೇಲಿನ ಆಣೆ. ಲಕ್ಷ್ಮಣನು ರಾಮನ ಈ ಮಾತನ್ನು ಕೇಳಿ ಹಾಗೆಯೇ ಆಗಲೆಂದು ಹೇಳಿ ಸೀತೆಯನ್ನು ಕರೆದುಕೊಂಡು ಗುಹೆಯೊಳಕ್ಕೆ ಹೋದನು.

೩೨. ರಾಮನು ಸೊಂಟವನ್ನು ಕಟ್ಟಿಕೊಂಡು ಧನುಸ್ಸಿನ ಹೆದೆಯನ್ನೇರಿಸಿ ಬತ್ತಳಿಕೆಯಿಂದ ಅಕ್ಷಯಬಾಣಗಳನ್ನು ತೆಗೆದು ಹೂಡಿಕೊಂಡು ಬಹುವಾಗಿ ಜಾಗರೂಕತೆಯಿಂದಿದ್ದನು.

೩೩–೩೫. ಆನಂತರ ಆ ರಾಕ್ಷಸರು ಬಂದು ರಾಮನಮೇಲೆ ನಾನಾ ಬಗೆಯಾದ ಆಯುಧಗಳನ್ನೂ ಮರಗಳನ್ನೂ ಕಲ್ಲುಗಳನ್ನೂ ಎಸೆದರು. ರಾಮನು ಅವುಗಳೆಲ್ಲವನ್ನೂ ಕ್ಷಣಕಾಲದಲ್ಲಿಯೇ ಚೂರು ಚೂರಾಗಿ ಕತ್ತರಿಸಿದನು. ಅನಂತರ ಸಾವಿರಾರು ಬಾಣಗಳನ್ನು ಬಿಟ್ಟು ಆ ರಾಕ್ಷಸರೆಲ್ಲರನ್ನೂ ರಾಮನು ಕೊಂದನು. ಮತ್ತು ಮುಂದಾಳುಗಳಾಗಿ ಬಂದಿದ್ದ ಖರ, ತ್ರಿಶಿರ, ದೂಷಣರನ್ನು ಒಂದುಗಳಿಗೆಯೊಳಗೆ ಕೊಂದನು.

ಲಕ್ಷ್ಮಣೋಽಪಿ ಗುಹಾಮಧ್ಯಾತ್ಸೀತಾಮಾದಾಯ ರಾಘವೇ । ಸಮರ್ಪ್ಯ ರಾಕ್ಷಸಾನ್ದೃಷ್ಟ್ವಾ ಹತಾನ್ವಿಸ್ಮಯಮಾಯಯೌ ॥ ೩೬ ॥

ಸೀತಾ ರಾಮಂ ಸಮಾಲಿಂಗ್ಯ ಪ್ರಸನ್ನಮುಖಪಂಕಜಾ । ಶಸ್ತ್ರವ್ರಣಾನಿ ಚಾಂಗೇಷು ಮಮಾರ್ಜ ಜನಕಾತ್ಮಜಾ ॥ ೩೭ ॥

ಸಾಪಿ ದುದ್ರಾವ ದೃಷ್ಟ್ವಾ ತಾನ್ಹತಾನ್ರಾಕ್ಷಸಪುಂಗವಾನ್ । ಲಂಕಾಂ ಗತ್ವಾ ಸಭಾಮಧ್ಯೇ ಕ್ರೋಶಂತೀ ಪಾದಸನ್ನಿಧೌ ॥ ೩೮ ॥

ರಾವಣಸ್ಯ ಪಪಾತೋರ್ವ್ಯಾಂ ಭಗಿನೀ ತಸ್ಯ ರಕ್ಷಸಃ । ದೃಷ್ಟ್ವಾ ತಾಂ ರಾವಣಃ ಪ್ರಾಹ ಭಗಿನೀಂ ಭಯವಿಹ್ವಲಾಂ ॥ ೩೯ ॥

---

೩೬. ಇವರೆಲ್ಲರೂ ಸತ್ತು ಗಲಭೆಯು ಕಳೆದಮೇಲೆ ಲಕ್ಷ್ಮಣನು ಸೀತೆಯನ್ನು ಗುಹೆಯಿಂದ ಕರೆದುಕೊಂಡು ಬಂದು ರಾಮನಿಗೆ ಒಪ್ಪಿಸಿದನು. ಮತ್ತೆ ಆ ರಾಮನು ಕೊಂದಿದ್ದ ರಾಕ್ಷಸರನ್ನೆಲ್ಲಾ ನೋಡಿ ಆಶ್ಚರ್ಯಗೊಂಡನು.

೩೭. ಆಗ ಸೀತೆಯು ಬಹು ಸಂತೋಷಗೊಂಡು ರಾಮನನ್ನು ಆಲಿಂಗಿಸಿಕೊಂಡಳು. ಮತ್ತು ರಾಮನ ಮೈಯ್ಯಲ್ಲಿ ಉಂಟಾಗಿದ್ದ ಶಸ್ತ್ರದಗಾಯವನ್ನು ಸವರಿದಳು.

೩೮–೩೯. ಶೂರ್ಪಣಖಿಯು ಈ ರಾಕ್ಷಸರೆಲ್ಲರೂ ಸತ್ತುಹೋದುದನ್ನು ನೋಡಿ ಲಂಕೆಗೆ ಓಡಿದಳು. ಅಲ್ಲಿ ಸಭಾಮಧ್ಯದಲ್ಲಿ ಕುಳಿತಿದ್ದ ರಾವಣನ ಪಾದಗಳ ಬಳಿಯಲ್ಲಿ ಆಳುತ್ತಾ ನೆಲದಮೇಲೆ ಬಿದ್ದಳು. ಭಯದಿಂದ ದುಃಖಪಡುತ್ತಿರುವ ತಂಗಿಯನ್ನು ಕುರಿತು ಆ ರಾವಣನು ಇಂತೆಂದನು.

ಉತ್ತಿಷ್ಠೋತ್ತಿಷ್ಠ ವತ್ಸೇ ತ್ವಂ ವಿರೂಪಕರಣಂ ತವ । ಕೃತಂ ಶಕ್ರೇಣ ವಾ ಭದ್ರೇ ಯಮೇನ ವರುಣೇನ ವಾ ॥ ೪೦ ॥

ಕುಬೇರೇಣಾಥವಾ ಬ್ರೂಹಿ ಭಸ್ಮೀಕುರ್ಯಾಂ ಕ್ಷಣೇನ ತಂ । ರಾಕ್ಷಸೀ ತಮುವಾಚೇದಂ ತ್ವಂ ಪ್ರಮತ್ತೋ ವಿಮೂಢಧೀಃ ॥ ೪೧ ॥

ಪಾನಾಸಕ್ತಃ ಸ್ತ್ರೀವಿಜಿತಃ ಷಂಡಃ ಸರ್ವತ್ರ ಲಕ್ಷ್ಯಸೇ । ಚಾರಚಕ್ಷುರ್ವಿಹೀನಸ್ತ್ವಂ ಕಥಂ ರಾಜಾ ಭವಿಷ್ಯಸಿ ॥ ೪೨ ॥

ಖರಶ್ಚ ನಿಹತಃ ಸಂಖ್ಯೇ ದೂಷಣಸ್ತ್ರಿಶಿರಾಸ್ತಥಾ । ಚತುರ್ದಶಸಹಸ್ರಾಣಿ ರಾಕ್ಷಸಾನಾಂ ಮಹಾತ್ಮನಾಂ ॥ ೪೩ ॥

---

೪೦. ವತ್ಸೆ ! ಏಳು. ಮೇಲಕ್ಕೆ ಏಳು. ನಿನಗೆ ಈ ರೀತಿಯಾದ ವಿರೂಪವನ್ನು ಮಾಡಿದವರಾರು ? ಇಂದ್ರನಿಂದ ಹೀಗಾಯಿತೇ ? ಯಮನಿಂದ ಹೀಗಾಯಿತೇ ? ಅಥವಾ ವರುಣ ಕುಬೇರರುಗಳು ಹೀಗೆ ಮಾಡಿದರೆ ?

೪೧. ಯಾವನೇ ಆಗಲೀ ಅವನನ್ನು ಕ್ಷಣಕಾಲದಲ್ಲಿ ಭಸ್ಮವನ್ನಾಗಿ ಮಾಡುತ್ತೇನೆ. ಆಗ ಶೂರ್ಪಣಖಿಯು ಇಂತೆಂದಳು. ಎಲೈ ಸಹೋದರನೇ ! ನೀನು ಕೊಬ್ಬಿಹೋಗಿದ್ದೀಯೆ. ವಿವೇಕಜ್ಞಾನವೇ ನಿನಗಿಲ್ಲ.

೪೨. ಪಾನಗಳಲ್ಲಿ ಆಸಕ್ತನಾಗಿದ್ದೀಯೆ. ಹೆಂಗಸರಿಗೆ ಅಧೀನನಾಗಿದ್ದೀಯೆ ಇಂತಹ ನೀನು ಎಲ್ಲಾ ವಿಷಯದಲ್ಲಿಯೂ ಉಪಯೋಗವಿಲ್ಲದವನಂತೆ ಕಂಡುಬರುತ್ತಿದ್ದೀಯೆ. ಚಾರರೆಂಬ ಕಣ್ಣುಗಳಿಲ್ಲದವನಾದ ನೀನು ಹೇಗೆ ತಾನೇ ರಾಜನಾಗುತ್ತೀಯೆ ?

೪೩. ರಾಕ್ಷಸಾರಿಯಾದ ರಾಮನೊಬ್ಬನೇ ಯುದ್ಧದಲ್ಲಿ ಖರನನ್ನು ಕೊಂದನು. ದೂಷಣ ತ್ರಿಶಿರರ ಹೆಸರೇ ಇಲ್ಲದಂತೆ ಮಾಡಿದನು. ಬಹು ಬಲಶಾಲಿಯಾದ ಆ ರಾಕ್ಷಸರ ಹದಿನಾಲ್ಕುಸಾವಿರ ಸೈನ್ಯಗಳನ್ನು ಕ್ಷಣಕಾಲದಲ್ಲಿಯೇ ಕೊಂದನು.

ನಿಹತಾನಿ ಕ್ಷಣೇನೈವ ರಾಮೇಣಾಸುರಶತ್ರುಣಾ । ಜನಸ್ಥಾನಮಶೇಷೇಣ ಮುನೀನಾಂ ನಿರ್ಭಯಂ ಕೃತಂ ॥
ನ ಜನಾಸಿ ವಿಮೂಢಸ್ತ್ವಮತ ಏವ ಮಯೋಚ್ಯತೇ ॥ ೪೪ ॥

॥ ರಾವಣ ಉವಾಚ ॥

ಕೋ ವಾ ರಾಮಃ ಕಿಮರ್ಥಂ ವಾ ಕಥಂ ತೇನಾಽಸುರಾ ಹತಾಃ । ಸಮ್ಯಕ್ಕಥಯ ಮೇ ತೇಷಾಂ ಮೂಲಘಾತಂ ಕರೋಮ್ಯಹಂ ॥

॥ ಶೂರ್ಪಣಖೋವಾಚ ॥

ಜನಸ್ಥಾನಾದಹಂ ಯಾತಾ ಕದಾಚಿದ್ಗೌತಮೀತಟೇ । ತತ್ರ ಪಂಚವಟೀ ನಾಮ ಪುರಾ ಮುನಿಜನಾಶ್ರಯಾ ॥ ೪೬ ॥

---

೪೪. ಜನಸ್ಥಾನದಲ್ಲೆಲ್ಲಾ ಮುನಿಗಳು ಸುಖವಾಗಿ ಸಂಚರಿಸುವುದಕ್ಕೆ ಸ್ವಲ್ಪವೂ ಭಯವಿಲ್ಲದಂತೆ ಮಾಡಿದನು. ಅದನ್ನೂ ನೀನು ತಿಳಿದೇ ಇಲ್ಲ. ಅದಕ್ಕೋಸ್ಕರಲೇ ನಿನ್ನನ್ನು ನಾನು ಅವಿವೇಕಿಯೆಂದು ಹೇಳಿದೆನು.

೪೫. ರಾವಣನು ಹೇಳಿದನು—ಎಲೈ ಸಹೋದರಿಯೇ ! ಆ ರಾಮನೆಂಬುವನಾರು ? ಯಾತಕ್ಕೋಸ್ಕರ ಕಾಡಿಗೆ ಬಂದಿರುವನು ? ಅವನು ರಾಕ್ಷಸರೆಲ್ಲರನ್ನೂ ಕೊಲ್ಲಲು ಕಾರಣವೇನು ? ಆ ವಿಷಯವೆಲ್ಲವನ್ನೂ ಸರಿಯಾಗಿ ಹೇಳು. ಅವರನ್ನು ಬುಡಮಟ್ಟ ನಾಶಮಾಡುತ್ತೇನೆ.

೪೬. ಶೂರ್ಪಣಖಿಯು ಹೇಳಿದಳು—ಜನಸ್ಥಾನದಲ್ಲಿದ್ದುಕೊಂಡಿದ್ದ ನಾನು ಗೌತಮಿ ನದಿಯ ಬಳಿಗೆ ಹೋದೆನು. ಅಲ್ಲಿ ಪಂಚವಟಿ ಎಂಬುದೊಂದು ಸ್ಥಳವಿದೆ. ಅಲ್ಲಿ ಅನೇಕ ಜನ ಮುನಿಗಳು ಹಿಂದೆ ಇದ್ದುಕೊಂಡಿದ್ದರು.

ತತ್ರಾಶ್ರಮೇ ಮಯಾ ದೃಷ್ಟೋ ರಾಮೋ ರಾಜೀವಲೋಚನಃ । ಧನುರ್ಬಾಣಧರಃ ಶ್ರೀಮಾನ್ ಜಟಾವಲ್ಕಲಮಂಡಿತಃ ॥ ೪೭ ॥
ಕನೀಯಾನನುಜಸ್ತಸ್ಯ ಲಕ್ಷ್ಮಣೋಽಪಿ ತಥಾವಿಧಃ । ತಸ್ಯ ಭಾರ್ಯಾ ವಿಶಾಲಾಕ್ಷೀ ರೂಪಿಣೀ ಶ್ರೀರಿವಾಪರಾ ॥ ೪೮ ॥
ದೇವಗಂಧರ್ವನಾಗಾನಾಂ ಮನುಷ್ಯಾಣಾಂ ತಥಾವಿಧಾ । ನ ದೃಷ್ಟಾ ನ ಶ್ರುತಾ ರಾಜನ್ದ್ಯೋತಯಂತೀ ವನಂ ಶುಭಾ ॥ ೪೯ ॥
ಆನೇತುಮುಹಮುದ್ಯುಕ್ತಾ ತಾಂ ಭಾರ್ಯಾರ್ಥಂ ತವಾನಘ । ಲಕ್ಷ್ಮಣೋ ನಾಮ ತದ್ಭ್ರಾತಾ ಚಿಚ್ಛೇದ ಮಮ ನಾಸಿಕಾಂ ॥ ೫೦ ॥

---

೪೭. ಆ ಆಶ್ರಮದಲ್ಲಿ ರಾಮನೆಂಬುವನೊಬ್ಬನನ್ನು ನಾನು ನೋಡಿದೆನು. ಅವನು ಬಹು ಸುಂದರನು. ಧನುಸ್ಸನ್ನೂ, ಬಾಣಗಳನ್ನೂ ಧರಿಸಿರುವನು. ಜಟೆ, ನಾರುಡೆಗಳನ್ನು ಧರಿಸಿರುವನು.

೪೮. ಅವನಿಗೆ ಒಬ್ಬ ತಮ್ಮನು ಇರುವನು. ಅವನ ಹೆಸರು ಲಕ್ಷ್ಮಣನು. ಅವನೂ ಅದೇ ರೀತಿಯಾದ ವೇಷಭೂಷಣಗಳುಳ್ಳವನಾಗಿರುವನು. ಆ ರಾಮನಿಗೆ ಒಬ್ಬಳು ಹೆಂಡತಿಯು ಇರುವಳು. ಅವಳು ಮತ್ತೊಬ್ಬ ಲಕ್ಷ್ಮಿಯಂತಿರುವಳು.

೪೯. ದೇವತೆಗಳಲ್ಲಿಯಾಗಲೀ, ಗಂಧರ್ವರಲ್ಲಿಯಾಗಲೀ, ನಾಗರಲ್ಲಿಯೇ ಆಗಲಿ ಅಂತಹ ಹೆಂಗಸನ್ನು ನೋಡಿಲ್ಲ. ನೋಡುವುದಿರಲಿ, ಕೇಳಿಯೂ ಇಲ್ಲ. ಅವಳು ಬಹು ರೂಪವತಿಯಾಗಿ ಆ ವನವನ್ನೆಲ್ಲವನ್ನೂ ಬೆಳಗುತ್ತಿರುವಳು.

೫೦. ಆಕೆಯನ್ನು ನಿನಗೆ ಹೆಂಡತಿಯನ್ನಾಗಿ ಮಾಡಲು ತರುವುದಕ್ಕೆ ಪ್ರಯತ್ನಪಟ್ಟೆನು. ಆಗ ರಾಮನ ತಮ್ಮನಾದ ಲಕ್ಷ್ಮಣನು ನನ್ನ ಈ ಮೂಗನ್ನು ಕೊಯ್ದುಬಿಟ್ಟನು.

ಕರ್ಣೌ ಚ ನೋದಿತಸ್ತೇನ ರಾಮೇಣ ಸ ಮಹಾಬಲಃ । ತತೋಽಹಮತಿದುಃಖೇನ ರುದಂತೀ ಖರಮನ್ವಗಾಂ ॥ ೫೧ ॥

ಸೋಽಪಿ ರಾಮಂ ಸಮಾಸಾದ್ಯ ಯೋದ್ಧುಂ ರಾಕ್ಷಸಯೂಥಪೈಃ । ಹತಃ ಕ್ಷಣೇನ ರಾಮೇಣ ತೇನೈವ ಬಲಶಾಲಿನಾ ॥ ೫೨ ॥

ಸರ್ವೇ ತೇನ ವಿನಷ್ಟಾ ವೈ ರಾಕ್ಷಸಾ ಭೀಮವಿಕ್ರಮಾಃ । ಯದಿ ರಾಮೋ ಮನಃ ಕುರ್ಯಾತ್ತ್ರೈಲೋಕ್ಯಂ ನಿಮಿಷಾರ್ಧತಃ ॥ ೫೩ ॥

ಭಸ್ಮೀಕುರ್ಯಾನ್ನ ಸಂದೇಹ ಇತಿ ಭಾತಿ ಮಮ ಪ್ರಭೋ । ಯದಿ ಸಾ ತವ ಭಾರ್ಯಾ ಸ್ಯಾತ್ಸಫಲಂ ತವ ಜೀವಿತಂ ॥ ೫೪ ॥

ಅತೋ ಯತಸ್ವ ರಾಜೇಂದ್ರ ಯಥಾ ತೇ ವಲ್ಲಭಾ ಭವೇತ್ । ಸೀತಾ ರಾಜೀವಪತ್ರಾಕ್ಷೀ ಸರ್ವಲೋಕೈಕಸುಂದರೀ ॥ ೫೫ ॥

---

೫೧. ಮತ್ತು ಈ ನನ್ನ ಕಿವಿಗಳನ್ನೂ ಕತ್ತರಿಸಿಬಿಟ್ಟನು. ಆ ಮಹಾಬಲಿಷ್ಠನಾದ ರಾಮನು ಹೇಳಿ ಲಕ್ಷ್ಮಣನಿಂದ ಈ ಕೆಲಸವನ್ನು ಮಾಡಿಸಿದನು. ಆಗ ನಾನು ದುಃಖದಿಂದ ಖರನ ಬಳಿಗೆ ಹೋದೆನು.

೫೨-೫೪. ಆ ಖರನು ರಾಕ್ಷಸರನ್ನು ಕರೆದುಕೊಂಡು ರಾಮನ ಮೇಲೆ ಯುದ್ಧಕ್ಕೆ ಹೋದನು. ಆಗ ಆ ಬಲಶಾಲಿಯಾದ ರಾಮನು ಆ ಪರಾಕ್ರಮಿಗಳಾದವರೆಲ್ಲರನ್ನೂ ಕೊಂದುಹಾಕಿದನು. ಆ ರಾಮನು ಮನಸ್ಸು ಮಾಡಿದರೆ ಈ ಮೂರುಲೋಕವನ್ನೂ ಒಂದು ಅರ್ಧ ನಿಮಿಷದಲ್ಲಿಯೇ ಭಸ್ಮವನ್ನಾಗಿ ಮಾಡುವನು. ಅದರಲ್ಲಿ ಸಂದೇಹವೇ ಇಲ್ಲವೆಂದು ನನಗೆ ಕಾಣುತ್ತದೆ. ಆ ಸೀತೆಯು ನಿನಗೆ ಹೆಂಡತಿಯಾದರೆ ಆಗ ನೀನು ಹುಟ್ಟಿದುದಕ್ಕೆ ಫಲವಾಗಿರುವುದು.

೫೫. ಆಕೆಯು ನಿನ್ನ ಹೆಂಡತಿಯಾಗುವಂತೆ ಪ್ರಯತ್ನವನ್ನು ಮಾಡು. ಆ ಸೀತೆಯು ಕಮಲದಂತೆ ಕಣ್ಣುಳ್ಳವಳು. ಲೋಕದಲ್ಲೆಲ್ಲಾ ಅವಳೊಬ್ಬಳೇ ಸುಂದರಿಯಾಗಿರುವಳು.

ಸಾಕ್ಷಾದ್ರಾಮಸ್ಯ ಪುರತಃ ಸ್ಥಾತುಂ ತ್ವಂ ನ ಕ್ಷಮಃ ಪ್ರಭೋ । ಮಾಯಯಾ ಮೋಹಯಿತ್ವಾ ತು ಪ್ರಾಪ್ಸ್ಯಸೇ ತಾಂ ರಘೂತ್ತಮಂ

ಶ್ರುತ್ವಾ ತತ್ಸೂಕ್ತವಾಕ್ಯೈಶ್ಚ ದಾನಮಾನಾದಿಭಿಸ್ತದಾ । ಆಶ್ವಾಸ್ಯ ಭಗಿನೀಂ ರಾಜಾ ಪ್ರವಿವೇಶ ಸ್ವಕಂ ಗೃಹಂ ॥

ತತ್ರ ಚಿಂತಾಪರೋ ಭೂತ್ವಾ ರಾತ್ರೌ ನಿದ್ರಾಂ ನ ಲಬ್ಧವಾನ್ ॥ ೫೭ ॥

ಏಕೇನ ರಾಮೇಣ ಕಥಂ ಮನುಷ್ಯಮಾತ್ರೇಣ ನಷ್ಟಃ ಸಬಲಃ ಖರೋ ಮೇ ।

ಭ್ರಾತಾ ಕಥಂ ಮೇ ಬಲವೀರ್ಯದರ್ಪಯುತೋ ವಿನಷ್ಟೋ ಬತ ರಾಘವೇಣ ॥ ೫೮ ॥

---

೫೬. ಎಲೈ ಪ್ರಭುವೇ ! ಆ ರಾಮನ ಎದುರಿನಲ್ಲಿ ನೀನು ಕಾಣುವಂತೆ ನಿಲ್ಲುವುದಕ್ಕೆ ಶಕ್ತನಲ್ಲ. ಆದ್ದರಿಂದ ಮಾಯೆಯಿಂದ ಆ ರಾಮನನ್ನು ಮೋಸಪಡಿಸಿ ಆ ಸೀತೆಯನ್ನು ಹೊಂದು.

೫೭. ಆಗ ರಾವಣನು ಶೂರ್ಪಣಖಿಯು ಹೇಳಿದುದನ್ನು ಕೇಳಿ ಅವಳನ್ನು ಒಳ್ಳೆಯ ಮಾತುಗಳಿಂದ ಸಂತೈಸಿದನು. ಅಲ್ಲದೆ ಗೌರವವನ್ನು ತೋರಿಸಲು ಉಡುಗೊರೆಗಳನ್ನು ಕೊಟ್ಟನು. ಅನಂತರ ಅಂತಃಪುರಕ್ಕೆ ಹೋಗಿ ಇದೇ ವಿಷಯದಲ್ಲಿ ಯೋಚನೆ ಮಾಡುತ್ತಾ ರಾತ್ರಿಯೆಲ್ಲಾ ನಿದ್ದೆಯನ್ನೇ ಮಾಡಲಿಲ್ಲ.

೫೮. ಮನುಷ್ಯ ಮಾತ್ರದವನಾದ ರಾಮನೊಬ್ಬನೇ ಬಲಿಷ್ಠನಾದ ಅದರಲ್ಲಿಯೂ ನನ್ನ ತಮ್ಮನಾದ ಖರನನ್ನು ಕೊಲ್ಲುವುದೆಂದರೇನು ? ಬಹು ಬಲಿಷ್ಠನಾದ ಆ ಖರನು ರಾಮನಿಂದ ಸತ್ತುದು ಬಹು ಆಶ್ಚರ್ಯವಾಗಿದೆಯಲ್ಲಾ !

ಯದ್ವಾ ನ ರಾಮೋ ಮನುಜಃ ಪರೇಶೋ ಮಾಂ ಹಂತುಕಾಮಃ ಸಬಲಂ ಬಲೌಘ್ಯೈಃ |
ಸಂಪ್ರಾರ್ಥಿತೋಯಂ ದ್ರುಹಿಣೇನ ಪೂರ್ವಂ ಮನುಷ್ಯರೂಪೋದ್ಯ ರಘೋಃ ಕುಲೇಭೂತ್ ‖ ೫೯ ‖

ವಧ್ಯೋ ಯದಿ ಸ್ಯಾಂ ಪರಮಾತ್ಮನಾಹಂ ವೈಕುಂಠರಾಜ್ಯಂ ಪರಿಪಾಲಯೇಹಂ |
ನೋ ಚೇದಿದಂ ರಾಕ್ಷಸರಾಜ್ಯಮೇವ ಭೋಕ್ಷ್ಯೇಚಿರಂ ರಾಮಮತೋ ವ್ರಜಾಮಿ ‖ ೬೦ ‖

---

೫೯. ಒಂದು ವೇಳೆ ಆ ರಾಮನು ಮನುಷ್ಯನಾಗಿಲ್ಲದಿದ್ದರೂ ಇರಬಹುದು. ಬ್ರಹ್ಮನು ಆ ಪರಮಾತ್ಮನ ಬಳಿಗೆ ಹೋಗಿ ರಾವಣನನ್ನೂ ಅವನ ಅನುಯಾಯಿಗಳನ್ನೂ ಕೊಲ್ಲಬೇಕೆಂದು ಪೂರ್ವದಲ್ಲಿ ಪ್ರಾರ್ಥಿಸಿಕೊಂಡುದರಿಂದ ಆ ಸ್ವಾಮಿಯೇ ಮನುಷ್ಯರೂಪದಿಂದ ಈ ರಘುವಿನ ವಂಶದಲ್ಲಿ ಹುಟ್ಟಿರಬಹುದು.

೬೦. ಆ ಪರಮಾತ್ಮನೇ ಬಂದು ನನ್ನನ್ನು ಕೊಲ್ಲುವ ಪಕ್ಷದಲ್ಲಿ ಸತ್ತು ವೈಕುಂಠರಾಜ್ಯವನ್ನೇ ಆಳುವೆನು. ಅವನು ಕೊಲ್ಲದಿದ್ದರೆ. ಈ ರಾಕ್ಷಸರಾಜ್ಯವನ್ನೇ ಬಹುಕಾಲದವರೆಗೆ ಆಳುತ್ತೇನೆ. ಆದುದರಿಂದ ರಾಮನಮೇಲೆ ನನ್ನ ಶೌರ್ಯವನ್ನು ತೋರಿಸಲು ಹೋಗ ಹೋಗುತ್ತೇನೆ.

ಇತ್ಥಂ ವಿಚಿಂತ್ಯಾಖಿಲರಾಕ್ಷಸೇಂದ್ರೋ ರಾಮಂ ವಿದಿತ್ವಾ ಪರಮೇಶ್ವರಂ ಹರಿಂ |
ವಿರೋಧಬುದ್ಧ್ಯೈವ ಹರಿಂ ಪ್ರಯಾಮಿ ದ್ರುತಂ ನ ಭಕ್ತ್ಯಾ ಭಗವಾನ್ಪ್ರಸೀದೇತ್ ॥ ೬೧ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ
ಪಂಚಮಸ್ಸರ್ಗ ಸಮಾಪ್ತಃ

---

೬೧. ಆ ರಾಕ್ಷಸರಾಜನಾದ ರಾವಣನು ಈ ರೀತಿಯಾಗಿ ಯೋಚಿಸುತ್ತಾ ಆ ರಾಮನನ್ನು ಪರಮೇಶ್ವರನೆಂದೇ ತಿಳಿದುಕೊಂಡನು. ಮತ್ತು ಆ ಭಗವಂತನು ಭಕ್ತಿಯಿಂದ ಬೇಗ ಪ್ರಸನ್ನನಾಗುವುದಿಲ್ಲವಾದುದರಿಂದ ದ್ವೇಷಬುದ್ಧಿಯನ್ನು ಹೊಂದಿಯೇ ಎದುರಿಸಲು ಹೊರಡುವೆನು. ಎಂದುಕೊಂಡನು.

ಇಂತು ಶ್ರೀಮದಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ಐದನೆಯ ಸರ್ಗವು ಮುಗಿದುದು.

ಅಥ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಷಷ್ಠಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಓಂ ಅಸ್ಯ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಷಷ್ಠಸರ್ಗಸ್ಯ

ಶ್ರೀ ಭಗವಾನ್ ಬಾದರಾಯಣ ಋಷಿಃ, ಗಾಯತ್ರೀ ಛಂದಃ, ಓಂ ನಮೋ ನಾರಾಯಣೋ ದೇವತಾ, ಶ್ರೀ ಲಕ್ಷ್ಮೀ ಬೀಜಂ, ಪರಮಾ ಶಕ್ತಿಃ, ಅವ್ಯಕ್ತಂ ಕೀಲಕಂ, ಅಮುಕಸಂಪುಟೀಕರಣ ಸಿದ್ಧ್ಯರ್ಥಂ ಅಮುಕಮಂತ್ರ ಲೋಮ ವಿಲೋಮ ಸಂಪುಟೀಕರಣ ದಶಾಧ್ಯಾಯೇ ಮಂತ್ರಾಷ್ಟಾಕ್ಷರ ಸಂಯುಕ್ತಂ ಷಷ್ಠಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ.

ಓಂ ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ಆರನೆಯ ಸರ್ಗಕ್ಕೆ

ಶ್ರೀ ಭಗವಾನ್ ಬಾದರಾಯಣನು ಋಷಿಯು, ಗಾಯತ್ರೀ ಛಂದಸ್ಸು, ಓಂ ನಮೋ ನಾರಾಯಣ ಎಂಬುದು ದೇವತೆಯು. ಶ್ರೀ ಲಕ್ಷ್ಮೀಃ ಎಂಬುದು ಬೀಜವು, ಪರಮಾ ಎಂಬುದು ಶಕ್ತಿಯು, ಅವ್ಯಕ್ತಂ ಎಂಬುದು ಕೀಲಕವು, ಇಂತಹ ಸಂಪುಟೀಕರಣದ ಸಿದ್ಧಿಗೋಸ್ಕರ ಇಂತಹ ಮಂತ್ರದ ಲೋಮ ವಿಲೋಮ ಸಂಪುಟೀಕರಣದ ದಶಾಧ್ಯಾಯದಲ್ಲಿ ಎಂಟಕ್ಷರದ ಮಂತ್ರದಿಂದ ಕೂಡಿದ ಷಷ್ಠಸರ್ಗದ ನ್ಯಾಸ ಧ್ಯಾನ ಜಪಗಳನ್ನು ಮಾಡುತ್ತೇನೆ. ಎಂದು ಸಂಕಲ್ಪ ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ಮಾಂ ರುಂ ವಂ ಅಂಗುಷ್ಠಾಭ್ಯಾಂ ನಮಃ
ಓಂ ಮಾಂ ರುಂ ವಂ ತರ್ಜನೀಭ್ಯಾಂ ನಮಃ
ಓಂ ಮಾಂ ರುಂ ವಂ ಮಧ್ಯಮಾಭ್ಯಾಂ ನಮಃ
ಓಂ ಮಾಂ ರುಂ ವಂ ಅನಾಮಿಕಾಭ್ಯಾಂ ನಮಃ
ಓಂ ಮಾಂ ರುಂ ವಂ ಕನಿಷ್ಠಿಕಾಭ್ಯಾಂ ನಮಃ
ಓಂ ಮಾಂ ರುಂ ವಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಷಡಂಗನ್ಯಾಸವು

ಓಂ ಮಾಂ ರುಂ ವಂ ಹೃದಯಾಯ ನಮಃ
ಓಂ ಮಾಂ ರುಂ ವಂ ಶಿರಸೇ ಸ್ವಾಹಾ
ಓಂ ಮಾಂ ರುಂ ವಂ ಶಿಖಾಯೈ ವಷಟ್
ಓಂ ಮಾಂ ರುಂ ವಂ ಕವಚಾಯ ಹುಂ
ಓಂ ಮಾಂ ರುಂ ವಂ ನೇತ್ರತ್ರಯಾಯ ವೌಷಟ್
ಓಂ ಮಾಂ ರುಂ ವಂ ಅಸ್ತ್ರಾಯ ಫಟ್

ಓಂ ಮಾಂ ರುಂ ವಂ ಇತಿ ದಿಗ್ಬಂಧಃ
ಓಂ ಮಾಂ ರುಂ ವಂ ಎಂದು ದಿಗ್ಬಂಧವು

॥ ಅಥ ಧ್ಯಾನಂ ॥

ಧ್ಯಾನವು

ವಿಚಿಂತ್ಯೈವಂ ನಿಶಾಯಾಂ ಸ ಪ್ರಭಾತೇ ರಥಮಾಸ್ಥಿತಃ । ರಾವಣೋ ಮನಸಾ ಕಾರ್ಯಮೇಕಂ ನಿಶ್ಚಿತ್ಯ ಬುದ್ಧಿಮಾನ್ ॥
ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.
ಪಾರಾಯಣಾಂತೇ ಪುನಃ ಹೃದಯಾದಿ ಷಡಂಗನ್ಯಾಸಂ ಕೃತ್ವಾ ಓಂ ಮಾಂ ರುಂ ವಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್.
ಪಾರಾಯಣವಾದಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ಮಾಂ ರುಂ ವಂ ಇತಿ ದಿಗ್ವಿಮೋಕಃ ಎಂದೆನ್ನಬೇಕು.
ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

॥ ಇತಿ ಶ್ರೀ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಷಷ್ಠಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ ॥
ಇಂತು ಶ್ರೀ ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ಆರನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಷಷ್ಠಸ್ಸರ್ಗಃ

॥ ಶ್ರೀ ಮಹಾದೇವ ಉವಾಚ ॥

ವಿಚಿಂತ್ಯೈವಂ ನಿಶಾಯಾಂ ಸ ಪ್ರಭಾತೇ ರಥಮಾಸ್ಥಿತಃ । ರಾವಣೋ ಮನಸಾ ಕಾರ್ಯಮೇಕಂ ನಿಶ್ಚಿತ್ಯ ಬುದ್ಧಿಮಾನ್ ॥ ೧ ॥

ಯಯೌ ಮಾರೀಚಸದನಂ ಪರಂ ಪಾರಮುದನ್ವತಃ । ಮಾರೀಚಸ್ತತ್ರ ಮುನಿವಜ್ಜಟಾವಲ್ಕಲಧಾರಕಃ ॥ ೨ ॥

ಧ್ಯಾಯನ್ ಹೃದಿ ಪರಾತ್ಮಾನಂ ನಿರ್ಗುಣಂ ಗುಣಭಾಸಕಂ । ಸಮಾಧಿವಿರಮೇಽಪಶ್ಯದ್ರಾವಣಂ ಗೃಹಮಾಗತಂ ॥ ೩ ॥

ಶ್ರೀಮದಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ಆರನೆಯ ಸರ್ಗವು.

೧. ಮಹಾದೇವನು ಹೇಳಿದನು—ಆ ರಾವಣನು ರಾತ್ರಿಯೆಲ್ಲವೂ ಈ ರೀತಿಯಾಗಿ ಯೋಚಿಸಿ ಬೆಳಗಾಗುತ್ತಲೂ ತಾನು ಮಾಡಬೇಕಾದ ಕೆಲಸವನ್ನು ನಿಶ್ಚಯಿಸಿಕೊಂಡನು.

೨-೩. ರಥದಮೇಲೆ ಕುಳಿತು ಸಮುದ್ರದ ಆಚೆಯ ದಡದಲ್ಲಿರುವ ಮಾರೀಚನ ಮನೆಗೆ ಹೋದನು. ಆ ಮಾರೀಚನು ತನ್ನ ಮನೆಯಲ್ಲಿ ಮುನಿಯಂತೆ ಜಟೆನಾರುಡೆಗಳನ್ನುಟ್ಟು ಈ ರಾವಣನು ಹೋದಾಗ ಸಮಾಧಿಯಲ್ಲಿ ಆ ಗುಣವಂತನೂ, ಪ್ರಕಾಶಕನೂ, ಆದ ಪರಮಾತ್ಮನನ್ನು ಹೃದಯದಲ್ಲಿ ಧ್ಯಾನಿಸುತ್ತಿದ್ದನು ಸಮಾಧಿಯು ಮುಗಿದಮೇಲೆ ಮನೆಗೆ ಬಂದಿರುವ ರಾವಣನನ್ನು ನೋಡಿದನು.

ದ್ರುತಮುತ್ಥಾಯ ಚಾಲಿಂಗ್ಯ ಪೂಜಯಿತ್ವಾ ಯಥಾವಿಧಿ । ಕೃತಾತಿಥ್ಯಂ ಸುಖಾಸೀನಂ ಮಾರೀಚೋ ವಾಕ್ಯಮಬ್ರವೀತ್ ॥ ೪ ॥
ಕಿಮಾಗಮನಮೇತತ್ತೇ ರಥೇನೈಕೇನ ರಾವಣ । ಚಿಂತಾಪರ ಇವಾಭಾಸಿ ಹೃದಿಕಾರ್ಯಂ ವಿಚಿಂತಯನ್ ॥ ೫ ॥
ಬ್ರೂಹಿ ಮೇ ನ ಹಿ ಗೋಪ್ಯಂ ಚೇತ್ಕರವಾಣಿ ತವ ಪ್ರಿಯಂ । ನ್ಯಾಯಂ ಚೇದ್ಬ್ರೂಹಿ ರಾಜೇಂದ್ರ ವೃಜಿನಂ ಮಾಂ ಸ್ಪೃಶೇನ್ನಹಿ

॥ ರಾವಣ ಉವಾಚ ॥

ಅಸ್ತಿ ರಾಜಾ ದಶರಥಃ ಸಾಕೇತಾಧಿಪತಿಃ ಕಿಲ । ರಾಮನಾಮಾ ಸುತಸ್ತಸ್ಯ ಜ್ಯೇಷ್ಠಃ ಸತ್ಯಪರಾಕ್ರಮಃ ॥ ೭ ॥

---

೪. ಆಗ ಒಡನೆಯೇ ಎದ್ದು ಆಲಿಂಗಿಸಿಕೊಂಡು ಅವನಿಗೆ ಶಾಸ್ತ್ರದಲ್ಲಿ ಹೇಳಿರುವಂತೆ ಪೂಜೆಯನ್ನು ಮಾಡಿ ಅತಿಥಿಸತ್ಕಾರವನ್ನು ಮಾಡಿ ಸುಖವಾಗಿ ಕುಳಿತುಕೊಂಡಮೇಲೆ ಮಾರೀಚನು ಇಂತೆಂದು ಹೇಳಿದನು.

೫. ಎಲೈ ರಾವಣನೆ ! ನೀನು ಬರಲು ಕಾರಣವೇನು ? ನೀನೊಬ್ಬನೇ ರಥದಲ್ಲಿ ಕುಳಿತು ಬಂದಿರುವೆಯಲ್ಲ ! ನಿನ್ನ ಮನಸ್ಸಿನಲ್ಲಿ ಯಾವುದೋ ಕಾರ್ಯವನ್ನು ಯೋಚಿಸುತ್ತ ಯೋಚನೆಗೊಳಗಾದವನಂತೆ ಕಾಣುತ್ತಿರುವೆಯಲ್ಲ !

೬. ಆ ಕಾರ್ಯವು ಗುಟ್ಟಾಗಿಲ್ಲದಿದ್ದರೆ ನನಗೆ ಹೇಳು. ನಾನು ಮಾಡಿಕೊಡುತ್ತೇನೆ. ಅದು ನ್ಯಾಯವಾಗಿರಲಿ. ಆಗ ನಾನು ಪ್ರಯತ್ನ ಪಡುತ್ತೇನೆ. ಅದು ಅನ್ಯಾಯವಾಗಿದ್ದು ಅದರಿಂದ ನನಗೆ ಪಾಪವು ಬರಕೂಡದು.

೭. ರಾವಣನು ಹೇಳಿದನು–ಎಲೈ ಮಾರೀಚನೆ ! ಅಯೋಧ್ಯೆಗೆ ರಾಜನಾದ ದಶರಥನೆಂಬವನು ಒಬ್ಬನಿರುವನು. ಅವನಿಗೆ ಹಿರಿಯಮಗ ರಾಮನೆಂಬುವನೊಬ್ಬನಿರುವನು. ಅವನು ಬಹು ಪರಾಕ್ರಮಶಾಲಿಯು.

ವಿವಾಸಯಾಮಾಸ ಸುತಂ ವನಂ ವನಜನಪ್ರಿಯಂ । ಭಾರ್ಯಯಾ ಸಹಿತಂ ಭ್ರಾತ್ರಾ ಲಕ್ಷ್ಮಣೇನ ಸಮನ್ವಿತಂ ॥ ೮ ॥

ಸ ಆಸ್ತೇ ವಿಪಿನೇ ಘೋರೇ ಪಂಚವಟ್ಯಾಶ್ರಮೇ ಶುಭೇ । ತಸ್ಯ ಭಾರ್ಯಾ ವಿಶಾಲಾಕ್ಷೀ ಸೀತಾ ಲೋಕವಿಮೋಹಿನೀ ॥ ೯ ॥

ರಾಮೋ ನಿರಪರಾಧಾನ್ಮೇ ರಾಕ್ಷಸಾನ್ಭೀಮವಿಕ್ರಮಾನ್ । ಖರಂ ಚ ಹತ್ವಾ ವಿಪಿನೇ ಸುಖಮಾಸ್ತೇತಿನಿರ್ಭಯಃ ॥ ೧೦ ॥

ಭಗಿನ್ಯಾ ಮೇ ಶೂರ್ಪಣಖ್ಯಾ ನಿರ್ದೋಷಾಯಾಶ್ಚ ನಾಸಿಕಾಂ । ಕರ್ಣೌ ಚಿಚ್ಛೇದ ದುಷ್ಟಾತ್ಮಾ ವನೇ ತಿಷ್ಠತಿ ನಿರ್ಭಯಃ ॥ ೧೧ ॥

---

೮. ಆ ರಾಜನು ಆ ರಾಮುನನ್ನು ಕಾಡಿಗೆ ಕಳುಹಿಸಿದನು. ಅವನು ಋಷಿಗಳಿಗೆಲ್ಲಾ ಪ್ರೀತಿಪಾತ್ರನಾಗಿದ್ದಾನೆ. ಅವನು ಹೆಂಡತಿಯೊಡನೆಯೂ ತಮ್ಮನಾದ ಲಕ್ಷ್ಮಣನೊಡನೆಯೂ ಕಾಡಿಗೆ ಬಂದಿರುವನು.

೯. ಆ ರಾಮನು ಘೋರವಾದ ಮಂಗಳಕರವಾದ ಪಂಚವಟಿಯಲ್ಲಿ ಆಶ್ರಮವನ್ನು ಮಾಡಿಕೊಂಡಿರುವನು. ಅವನ ಹೆಂಡತಿಯು ಬಹು ಸುಂದರಿಯು. ಲೋಕವನ್ನೇ ಮೋಹಗೊಳಿಸುವಂತಿದ್ದಾಳೆ.

೧೦. ಆ ರಾಮನು ತಪ್ಪಿಲ್ಲದೇನೇ ಪರಾಕ್ರಮಿಗಳಾದ ನನ್ನ ಹದಿನಾಲ್ಕುಸಾವಿರ ರಾಕ್ಷಸರನ್ನೂ ಖರನನ್ನೂ ಆ ಕಾಡಿನಲ್ಲಿ ಕೊಂದು ಭಯವಿಲ್ಲದೆ ಸುಖವಾಗಿರುವನು.

೧೧. ಯಾವ ತಪ್ಪನ್ನೂ ಮಾಡದಿದ್ದರೂ ಆ ರಾಮನು ನನ್ನ ಸಹೋದರಿಯಾದ ಶೂರ್ಪಣಖಿಯ ಮೂಗನ್ನೂ ಕಿವಿಗಳನ್ನೂ ಕತ್ತರಿಸಿರುವನು. ಈ ರೀತಿಯಾಗಿ ಕೆಟ್ಟಕೆಲಸವನ್ನು ಮಾಡಿಯೂ ಆ ಕಾಡಿನಲ್ಲಿ ಭಯವಿಲ್ಲದೇನೇ ಇರುವನು.

ಅತಸ್ತ್ವಯಾ ಸಹಾಯೇನ ಗತ್ವಾ ತತ್ಪ್ರಾಣವಲ್ಲಭಾಂ । ಆನಯಿಷ್ಯಾಮಿ ವಿಪಿನೇ ರಹಿತೇ ರಾಘವೇಣ ತಾಂ ॥ ೧೨ ॥
ತ್ವಂ ತು ಮಾಯಾಮೃಗೋ ಭೂತ್ವಾ ಹ್ಯಾಶ್ರಮಾದಪನೇಷ್ಯಸಿ । ರಾಮಂ ಚ ಲಕ್ಷ್ಮಣಂ ಚೈವ ತದಾ ಸೀತಾಂ ಹರಾಮ್ಯಹಂ ॥೧೩॥
ತ್ವಂ ತು ತಾವತ್ಸಹಾಯಂ ತು ಕೃತ್ವಾ ಸ್ಥಾಸ್ಯಸಿ ಪೂರ್ವವತ್ । ಇತ್ಯೇವಂ ಭಾಷಮಾಣಂ ತಂ ರಾವಣಂ ವೀಕ್ಷ್ಯ ವಿಸ್ಮಿತಃ ॥ ೧೪ ॥
ಕೇನೇದಮುಪದಿಷ್ಟಂ ತೇ ಮೂಲಘಾತಕರಂ ವಚಃ । ಸ ಏವ ಶತ್ರುರ್ವಧ್ಯಶ್ಚ ಯಸ್ತ್ವನ್ನಾಶಂ ಪ್ರತೀಕ್ಷತೇ ॥ ೧೫ ॥

---

೧೨. ಆದ್ದರಿಂದ ನಾನು ನಿನ್ನ ಸಹಾಯವನ್ನು ಹೊಂದಿ ಆತನ ಪ್ರಾಣವಲ್ಲಭೆಯಾದ ಸೀತೆಯನ್ನು ಆ ರಾಮನು ಅವಳ ಬಳಿಯಲ್ಲಿಲ್ಲದಿದ್ದಾಗ ತೆಗೆದುಕೊಂಡು ಬರಬೇಕು.

೧೩. ಅದಕ್ಕೋಸ್ಕರ ನೀನು ನನ್ನ ಜೊತೆಯಲ್ಲಿ ಬಂದು ಮಾಯಾಮೃಗವಾಗಿ ಆ ರಾಮನನ್ನು ಆಶ್ರಮದಿಂದ ಕರೆದುಕೊಂಡು ದೂರಕ್ಕೆ ಹೋಗಬೇಕು. ಆಗ ರಾಮನೂ ಅವನ ಜೊತೆಯಲ್ಲಿ ಲಕ್ಷ್ಮಣನೂ ಹೊರಟು ಹೋಗಬೇಕು. ಅದೇ ಸಮಯವನ್ನು ನೋಡಿಕೊಂಡು ನಾನು ಸೀತೆಯನ್ನು ಎತ್ತಿಕೊಂಡು ಹೋಗುತ್ತೇನೆ.

೧೪. ನೀನು ನನಗೆ ಅಷ್ಟು ಸಹಾಯವನ್ನು ಮಾಡಿ ಮೊದಲಿನಂತೆಯೇ ಇಲ್ಲಿಗೆ ಬಂದು ಬಿಡು. ಎನ್ನಲು ಈ ರೀತಿಯಾಗಿ ಹೇಳುತ್ತಿರುವ ಆ ರಾವಣನನ್ನು ನೋಡಿ ಮಾರೀಚನು ನಕ್ಕನು.

೧೫. ಎಲೈ ರಾವಣನೆ ! ಈ ಬುದ್ಧಿವಂತಿಕೆಯನ್ನು ಯಾರು ನಿನಗೆ ಹೇಳಿಕೊಟ್ಟರು ? ಇದು ನೀನು ಬೇರು ಸಹಿತವಾಗಿ ನಾಶವಾಗುವ ಮಾತು. ಈ ಮಾತನ್ನು ಹೇಳಿದವನೇ ನಿನಗೆ ಶತ್ರುವು. ಅವನನ್ನೇ ಮೊದಲು ಕೊಂದುಹಾಕು.

ರಾಮಸ್ಯ ಪೌರುಷಂ ಸ್ಮೃತ್ವಾ ಚಿತ್ತಮುದ್ಯಾಪಿ ರಾವಣ । ಬಾಲೋಽಪಿ ಮಾಂ ಕೌಶಿಕಸ್ಯ ಯಜ್ಞಸಂರಕ್ಷಣಾಯ ಸಃ ॥ ೧೬ ॥

ಆಗತಸ್ತ್ವಿಷುಣೈಕೇನ ಪಾತಯಾಮಾಸ ಸಾಗರೇ ।
ಯೋಜನಾನಾಂ ಶತಂ ರಾಮಸ್ತದಾದಿ ಭಯವಿಹ್ವಲಃ ॥
ಸ್ಮೃತ್ವಾ ಸ್ಮೃತ್ವಾ ತದೇವಾಹಂ ರಾಮಂ ಪಶ್ಯಾಮಿ ಸರ್ವತಃ ॥ ೧೭ ॥

ದಂಡಕೇಽಪಿ ಪುನರಪ್ಯಹಂ ವನೇ ಪೂರ್ವವೈರಮನುಚಿಂತಯನ್ ಹೃದಿ ।
ತೀಕ್ಷ್ಣಶೃಂಗಮೃಗರೂಪಮೇಕದಾ ಮಾದೃಶೈರ್ಬಹುಭಿರಾವೃತೋಽಭ್ಯಯಾಂ ॥ ೧೮ ॥

೧೬–೧೭. ಆ ರಾಮನ ಪೌರುಷವನ್ನು ಯೋಚಿಸಿದರೆ ಈಗಲೂ ನನ್ನ ಮನಸ್ಸು ಕಳವಳಗೊಳ್ಳುತ್ತಿರುವುದು. ಅವನು ಚಿಕ್ಕವನಾಗಿರುವಾಗಲೇ ವಿಶ್ವಾಮಿತ್ರನ ಯಾಗರಕ್ಷಣೆಗೆ ಬಂದನು. ಆಗ ನನ್ನನ್ನು ಒಂದೇ ಬಾಣದಿಂದ ಸಮುದ್ರದಲ್ಲಿ ಕೆಡಹಿದನು. ಅದು ಏನು ಸ್ವಲ್ಪದೂರವೆ ! ಆ ಸಮುದ್ರವು ನೂರುಯೋಜನಗಳ ದೂರದಲ್ಲಿದ್ದಿತು. ಅದು ಮೊದಲುಗೊಂಡು ಅದನ್ನು ಯೋಚಿಸಿದರೆ ನನಗೆ ಭಯವುಂಟಾಗುತ್ತದೆ. ಅದನ್ನು ಜ್ಞಾಪಿಸಿಕೊಂಡು ಜ್ಞಾಪಿಸಿಕೊಂಡು ಆ ರಾಮನೇ ಎಲ್ಲಾ ಕಡೆಯೂ ಇರುವಂತೆ ನನಗೆ ಕಂಡುಬರುತ್ತಿದ್ದಾನೆ

೧೮. ಆ ರಾಮನು ದಂಡಕಾ ವನದಲ್ಲಿರುವಾಗ ನಾನು ಹಿಂದಿನ ವೈರವನ್ನು ಮನಸ್ಸಿನಲ್ಲಿಟ್ಟುಕೊಂಡು ಅವನನ್ನು ಕೊಲ್ಲುವ ಉದ್ದೇಶದಿಂದ ಮೊನೆಯಾಗಿರುವ ಕೊಂಬುಗಳುಳ್ಳ ಮೃಗರೂಪವನ್ನು ಹೊಂದಿ ನನ್ನಂತೆಯೇ ಇನ್ನೂ ಅನೇಕ ರಾಕ್ಷಸರಿಗೂ ವೇಷವನ್ನು ಹಾಕಿಸಿ ಆ ರಾಮನ ಮೇಲೆ ಬಿದ್ದೆನು.

ರಾಘವಂ ಜನಕಜಾಸಮನ್ವಿತಂ ಲಕ್ಷ್ಮಣೇನ ಸಹಿತಂ ತ್ವರಾನ್ವಿತಂ ।
ಆಗತೋಽನುಹನಮಥ ಹಂತುಮುದ್ಯತೋ ಮಾಂ ವಿಲೋಕ್ಯ ಶರಮೇಕಮುತ್ಕ್ಷಿಪತ್ ॥ ೧೯ ॥
ತೇನ ವಿದ್ಧಹೃದಯೋಽಹಮುದ್ಭ್ರಮನ್ ರಾಕ್ಷಸೇಂದ್ರ ಪತಿತೋಽಸ್ಮಿ ಸಾಗರೇ ।
ತತ್ಪ್ರಭೃತ್ಯಹಮಿದಂ ಸಮಾಶ್ರಿತಃ ಸ್ಥಾನಮೂರ್ಜಿತಮಿದಂ ಭಯಾರ್ದಿತಃ ॥ ೨೦ ॥
ರಾಮಮೇವ ಸತತಂ ವಿಭಾವಯೇ ಭೀತ ಭೀತ ಇವ ಭೋಗರಾಶಿತಃ ।
ರಾಜರತ್ನರಮಣೀರಥಾದಿಕಂ ಶ್ರೋತ್ರಯೋರ್ಯದಿ ಗತಂ ಭಯಂ ಭವೇತ್ ॥ ೨೧ ॥

---

೧೯. ರಾಮ, ಲಕ್ಷ್ಮಣ ಸೀತೆಯರ ಮೇಲೆಯೂ ಹೋಗಿ ಬಿದ್ದೆವು. ಮತ್ತು ಅವರನ್ನು ಕೊಲ್ಲಬೇಕೆಂದು ಬಹುಪ್ರಯತ್ನಪಟ್ಟೆವು. ಆಗ ಆ ಶ್ರೀರಾಮನು ನೋಡಿ ನಮ್ಮ ಮೇಲೆ ಒಂದು ಬಾಣವನ್ನು ಪ್ರಯೋಗಿಸಿದನು.

೨೦. ಆ ಬಾಣವು ಬಂದು ನನ್ನ ಎದೆಗೆ ಬಡಿಯಿತು. ಮತ್ತು ಆ ಬಾಣವೇ ನನ್ನನ್ನು ಸಮುದ್ರದಲ್ಲಿ ಬೀಳುವಂತೆ ಮಾಡಿತು. ಅಂತೆಯೇ ಬಿದ್ದೆನು. ಆಗಿನಿಂದ ನನಗೆ ಬಹುಭಯವಾಗಿ ಭಯವಾದವರಿಗೆ ಅಭಯಸ್ಥಾನವಾಗಿರುವ ಈ ಜಾಗದಲ್ಲಿ ವಾಸವಾಗಿರುವೆನು.

೨೧. ಭೋಗಿಸುವುದಕ್ಕೆ ಬೇಕಾದ ಅನೇಕ ಪದಾರ್ಥಗಳುಳ್ಳವನು ಅವು ನಾಶವಾಗುತ್ತವಲ್ಲ ಎಂದು ಹೆದರಿಕೊಂಡು ಸ್ವಲ್ಪಸ್ವಲ್ಪವಾಗಿಯೇ ಹೇಗೆ ಭೋಗಿಸುವನೋ ಅಂತೆ ನಾನು ರಾಮನಿಂದ ಹೆದರುತ್ತಾ ಹೆದರುತ್ತಾ ಅವನನ್ನೇ ಮನಸ್ಸಿನಲ್ಲಿ ಯೋಚಿಸುತ್ತಿರುವೆನು. ರಾಜ, ರತ್ನ, ರಮಣಿ, ರಥ ಇವೇ ಮೊದಲಾದ ರೇಫವೇ ಆದಿಯಲ್ಲಿರುವ ಪದಗಳು ಕಿವಿಗೆ ಬಿದ್ದೊಡನೆಯೇ ಭಯವಾಗುವುದು.

ರಾಮ ಆಗತ ಇಹೇತಿ ಶಂಕಯಾ ಬಾಹ್ಯಕಾರ್ಯಮಪಿ ಸರ್ವಮುತ್ಸೃಜಂ ।
ನಿದ್ರಯಾ ಪರಿವೃತೋ ಯದಾ ಸ್ವಪೇ ರಾಮಮೇವ ಮನಸಾನುಚಿಂತಯನ್ ॥ ೨೨ ॥

ಸ್ವಪ್ನದೃಷ್ಟಿಗತರಾಘವಂ ತದಾ ಬೋಧಿತೋ ವಿಗತನಿದ್ರ ಆಸ್ಥಿತಃ ।
ತದ್ಭವಾನಪಿ ವಿಮುಚ್ಯ ಚಾಗ್ರಹಂ ರಾಘವಂ ಪ್ರತಿ ಗೃಹಂ ಪ್ರಯಾಹಿ ಭೋ ॥ ೨೩ ॥

ರಕ್ಷ ರಾಕ್ಷಸಕುಲಂ ಚಿರಾಗತಂ ತ್ವತ್ಕೃತೇ ಸಕಲಮೇವ ನಶ್ಯತಿ ॥ ೨೪ ॥

---

೨೨. ರಾಮನೇ ಇಲ್ಲಿಗೆ ಬಂದನು ಎಂಬ ಭಯದಿಂದ ನಾನು ಮಾಡುತ್ತಿರುವ ಕೆಲಸಗಳನ್ನೆಲ್ಲಾ ಬಿಟ್ಟುಬಿಡುವನು. ನನಗೆ ನಿದ್ದೆಯು ಬಹುವಾಗಿ ಪೀಡಿಸುತ್ತಿದ್ದು ಅದಕ್ಕೆ ಅಧೀನನಾಗಿ ಮಲಗಿಕೊಳ್ಳುವೆನು.

೨೩–೨೪. ಮಲಗಿಕೊಂಡಾಗ ನಿದ್ದೆಯಲ್ಲಿ ಎಲ್ಲಿ ರಾಮನು ಬರುವನೋ ಎಂದೇ ಯೋಚಿಸುತ್ತಿರುವೆನು. ಒಡನೆಯೇ ಆ ರಾಮನು ಸ್ವಪ್ನದಲ್ಲಿ ಕಾಣುವನು. ಒಡನೆಯೇ ನನಗೆ ನಿದ್ದೆಯಿಂದ ಎಚ್ಚರವಾಗಿ ನಿದ್ದೆಯು ಭಂಗವಾಗಿಬಿಡುವುದು. ನನಗೆ ಹೀಗಾಗುತ್ತಿರುವುದರಿಂದ ನೀನೂ ಕೂಡಾ ಆ ರಾಮನ ಮೇಲಿನ ಕೋಪವನ್ನು ಬಿಟ್ಟು ಸುಮ್ಮನೆ ಮನೆಗೆ ಹೋಗು. ಹಾಗೆ ನೀನು ಮನೆಗೆ ಹೋದರೆ ರಾಕ್ಷಸರ ವಂಶವು ಸುಖವಾಗಿ ನಿಲ್ಲುತ್ತದೆ. ಅವರು ಚೆನ್ನಾಗಿರಲಿ. ಕುಲಕ್ಷಯವನ್ನು ಮಾಡಬೇಡ. ಹಾಗೆ ನೀನು ಮನೆಗೆ ಹೋಗದೆ ರಾಮನ ಮೇಲೆ ಬಿದ್ದರೆ ನಿನ್ನಿಂದ ರಾಕ್ಷಸರ ವಂಶವೇ ನಾಶವಾಗುತ್ತದೆ. ಹಾಗೆ ಮಾಡಬೇಡ.

ತವ ಹಿತಂ ವದತೋ ಮಮ ಭಾಷಿತಂ ಪರಿಗೃಹಾಣ ಪರಾತ್ಮನಿ ರಾಘವೇ ।
ತ್ಯಜ ವಿರೋಧಮತಿಂ ಭಜ ಭಕ್ತಿತಃ ಪರಮಕಾರುಣಿಕೋ ರಘುನಂದನಃ ॥ ೧೫ ॥
ಅಹಮಶೇಷಮಿದಂ ಮುನಿವಾಕ್ಯತೋ ಽಶೃಣವಮಾದಿಯುಗೇ ಪರಮೇಶ್ವರಃ ।
ಬ್ರಹ್ಮಣಾರ್ಥಿತ ಉವಾಚ ತಂ ಹರಿಃ ಕಿಂ ತವೇಪ್ಸಿತಮಹಂ ಕರೋಮಿ ತತ್ ॥ ೧೬ ॥
ಬ್ರಹ್ಮಣೋಕ್ತಮರವಿಂದಲೋಚನ ತ್ವಂ ಪ್ರಯಾಹಿ ಭುವಿ ಮಾನುಷಂ ವಪುಃ ।
ದಶರಥಾತ್ಮಜಭಾವನಮಂಜಸಾ ಜಹಿ ರಿಪುಂ ದಶಕಂಠಧರಂ ಹರೇ ॥ ೧೭ ॥

---

೧೫ ನಾನು ನಿನಗೆ ಒಳ್ಳೆಯದಾಗಲೆಂದು ಹಿತವಾದ ಮಾತನ್ನು ಹೇಳುತ್ತಿದ್ದೇನೆ. ಈ ನನ್ನ ಮಾತನ್ನು ಮನಸ್ಸಿಗೆ ತಂದುಕೊ. ರಾಮನು ಪರಮಾತ್ಮನು. ಅಂತಹವನಲ್ಲಿ ದ್ವೇಷಬುದ್ಧಿಯನ್ನು ಬಿಟ್ಟುಬಿಡು. ಭಕ್ತಿಯಿಂದ ಅವನನ್ನು ಭಜಿಸು. ಆ ಶ್ರೀರಾಮನು ಬಹುವಾದ ಕರುಣಾಶಾಲಿಯು.

೧೬. ಈ ವಿಷಯವೆಲ್ಲವನ್ನೂ ನಾನು ಋಷಿಗಳ ಬಾಯಿಂದಲೇ ಕೇಳಿದ್ದೇನೆ. ಹಿಂದಿನ ಯುಗದಲ್ಲಿ ಈ ರಾಮನು ಪರಮೇಶ್ವರನಾದ ಪರಮಾತ್ಮನಾಗಿದ್ದನು. ಹಿಂದಿನ ಯುಗದಲ್ಲಿ ಆ ಪರಮಾತ್ಮನನ್ನು ಬ್ರಹ್ಮನು ಹೋಗಿ ಸೇವಿಸಿದನು. ಅದರಿಂದ ಸಂತುಷ್ಟನಾದ ಆ ಪರಮಾತ್ಮನು ನಿನಗೇನು ಹಿತವನ್ನು ಮಾಡಲಿ ಎಂದು ಕೇಳಿದನು.

೧೭. ಆಗ ಬ್ರಹನು ಎಲೈ ಕಮಲಾಕ್ಷನೇ ! ನೀನು ಭೂಲೋಕದಲ್ಲಿ ದಶರಥನೆಂಬ ರಾಜನಿರುವನು. ಅವನ ಹೊಟ್ಟೆಯಲ್ಲಿ ಹುಟ್ಟಿ ದಶಕಂಠನನ್ನು ಕೊಲ್ಲು ಎಂದನು.

ಅತೋ ನ ಮಾನುಷೋ ರಾಮಃ ಸಾಕ್ಷಾನ್ನಾರಾಯಣೋऽವ್ಯಯಃ । ಮಾಯಾಮಾನುಷರೂಪೇಣ ವನಂ ಯಾತೋऽತಿನಿರ್ಭಯಃ

ಭೂಭಾರಹರಣಾರ್ಥಾಯ ಗಚ್ಛ ತಾತ ಗೃಹಂ ಸುಖಂ । ಶ್ರುತ್ವಾ ಮಾರೀಚವಚನಂ ರಾವಣಃ ಪ್ರತ್ಯಭಾಷತ ॥ ೨೯ ॥

ಪರಮಾತ್ಮಾ ಯದಾ ರಾಮಃ ಪ್ರಾರ್ಥಿತೋ ಬ್ರಹ್ಮಣಾ ಕಿಲ । ಮಾಂ ಹಂತುಂ ಮಾನುಷೋ ಭೂತ್ವಾ ಯತ್ನಾದಿಹ ಸಮಾಗತಃ

ಕರಿಷ್ಯತ್ಯಚಿರಾದೇವ ಸತ್ಯಸಂಕಲ್ಪ ಈಶ್ವರಃ । ಅತೋऽಹಂ ಯತ್ನತಃ ಸೀತಾಮಾನೇಷ್ಯಾಮ್ಯೇವ ರಾಘವಾತ್ ॥ ೩೧ ॥

---

೨೮. ಆದ್ದರಿಂದ ರಾಮನು ಮನುಷ್ಯ ಮಾತ್ರದವನಲ್ಲ. ಅವನು ಪ್ರತ್ಯಕ್ಷನಾದ ಆ ನಾರಾಯಣನು ನಾಶರಹಿತನು ಎಂದು ತಿಳಿ. ಮಾಯೆಯಿಂದ ಮನುಷ್ಯರೂಪವನ್ನು ಹೊಂದಿ ವನಕ್ಕೆ ಬಂದಿರುವನು. ಅವನಿಗೆ ಭಯವೆಂಬುದೇ ಇಲ್ಲ.

೨೯. ಆ ರಾಮನು ಕಾಡಿಗೆ ಸುಮ್ಮನೆ ಬಂದಿಲ್ಲ. ಈ ಭೂಭಾರವನ್ನು ನಾಶಮಾಡಲು ಬಂದಿರುವನು. ಎಲೈ ರಾವಣನೆ! ಸ್ವಲ್ಪವೂ ದುಃಖಪಡದೆ ಮನೆಗೆ ಹೋಗು. ಎಂದು ಮಾರೀಚನು ಹೇಳಲು ಇದನ್ನು ಕೇಳಿ ರಾವಣನು ಇಂತೆಂದನು.

೩೦–೩೧. ಪರಮಾತ್ಮನಾದ ಆ ವಿಷ್ಣುವನ್ನು ಬ್ರಹ್ಮನು ಪ್ರಾರ್ಥಿಸಿದುದರಿಂದ ಅವನು ರಾಮಾವತಾರವನ್ನು ಮಾಡಿ ನನ್ನನ್ನು ಕೊಲ್ಲಲು ಬಂದಿದ್ದರೆ ಸ್ವಲ್ಪದಿನಗಳಲ್ಲಿಯೇ ಅವನು ತನ್ನ ಕೆಲಸವನ್ನು ಈಡೇರಿಸಿಕೊಳ್ಳುವನು. ಅವನು ಈಶ್ವರನಾದುದರಿಂದ ತನ್ನ ಮಾತನ್ನು ಉಳಿಸಿಕೊಳ್ಳುವನು. ಹೇಗಿದ್ದರೂ ಅವನು ನನ್ನನ್ನು ಕೊಲ್ಲುವುದು ಸಿದ್ಧವಾಗಿದೆ. ನಾನೇಕೆ ಸುಮ್ಮನಿರಬೇಕು? ಸರ್ವಪ್ರಯತ್ನದಿಂದಲೂ ಅವನ ಹೆಂಡತಿಯಾದ ಸೀತೆಯನ್ನು ಅಪಹರಿಸಿ ತರುವೆನು.

ವಧೇ ಪ್ರಾಪ್ತೇ ರಣೇ ವೀರ ಪ್ರಾಪ್ಸ್ಯಾಮಿ ಪರಮಂ ಪದಂ । ಯದ್ವಾ ರಾಮಂ ರಣೇ ಹತ್ವಾ ಸೀತಾಂ ಪ್ರಾಪ್ಸ್ಯಾಮಿ ನಿರ್ಭಯಃ
ಅತೋತ್ರಿಷ್ಠ ಮಹಾಭಾಗ ವಿಚಿತ್ರಮೃಗರೂಪಧೃಕ್ । ರಾಮಂ ಸಲಕ್ಷಣಂ ಶೀಘ್ರಮಾಶ್ರಮಾದತಿದೂರತೇ ॥ ೩೩ ॥
ಆಕೃಷ್ಯ ಗಚ್ಛ ತ್ವಂ ಶೀಘ್ರಂ ಸುಖಂ ತಿಷ್ಠ ಯಥಾ ಪುರಾ । ಅತಃಪರಂ ಚೇದ್ಯತ್ಕಿಂಚಿದ್ಭಾಷಸೇ ಮದ್ವಿಭೀಷಣಂ ॥ ೩೪ ॥
ಹನಿಷ್ಯಾಮ್ಯಸಿನಾನೇನ ತ್ವಾಮತ್ರೈವ ನ ಸಂಶಯಃ । ಮಾರೀಚಸ್ತದ್ವಚಃ ಶ್ರುತ್ವಾ ಸ್ವಾತ್ಮನ್ಯೇವಾನುಚಿಂತಯತ್ ॥ ೩೫ ॥

---

೩೨. ಎಲೈ ಮಾರೀಚನೆ! ಅವನು ನನ್ನನ್ನು ಕೊಂದರೆ ಆಗ ನನಗೆ ಸ್ವಾಮಿಯ ಕೈಯ್ಯಿಂದ ಸತ್ತುದರಿಂದ ಪರಮಪದವಾದ ವೈಕುಂಠವು ಸಿಕ್ಕುವುದು. ಒಂದುವೇಳೆ ಅವನು ನನ್ನನ್ನು ಕೊಲ್ಲಲಾರದೆ ನಾನೇ ಅವನನ್ನು ಕೊಂದರೆ ಅನಂತರ ಆ ಲೋಕ ಸುಂದರಿಯಾದ ಸೀತೆಯನ್ನು ಹೊಂದಿ ನಿರ್ಭಯವಾಗಿ ಅನುಭವಿಸುವೆನು.

೩೩. ಹೀಗಿರುವುದರಿಂದ ಎಲೈ ಮಹಾತ್ಮನೆ! ಏಳು. ಚಿತ್ರವಿಚಿತ್ರವಾದ ಮೃಗವೇಷವನ್ನು ಹೊಂದು. ಆ ರಾಮನನ್ನೂ ಲಕ್ಷ್ಮಣನನ್ನೂ ಆಶ್ರಮದಿಂದ ಬಹುದೂರ ಎಳೆದುಕೊಂಡು ಹೋಗು.

೩೪–೩೫. ನೀನು ಅಷ್ಟನ್ನು ಮಾಡಿ ನಿನ್ನಷ್ಟಕ್ಕೆ ನೀನು ಹೊರಟು ಹೋಗು. ಮನೆಯಲ್ಲಿ ಸುಖವಾಗಿ ಇರು. ನಾನು ಹೇಳಿದಂತೆ ಕೇಳದೆ ಇನ್ನು ಮೇಲೇನಾದರೂ ಒಂದು ಮಾತನ್ನಾದರೂ ಹೇಳಿದರೆ ಇದೇ ನನ್ನ ಕತ್ತಿಯಿಂದ ಇದೇ ಕ್ಷಣಕಾಲದಲ್ಲಿಯೇ ಇಲ್ಲಿಯೇ ನಿನ್ನನ್ನು ಕೊಂದುಹಾಕುವೆನು. ಇದರಲ್ಲಿ ಸಂದೇಹವನ್ನು ಪಡಬೇಡ. ಎಂದು ರಾವಣನು ಹೇಳಲು ಮಾರೀಚನು ರಾವಣನ ಈ ಮಾತನ್ನು ಕೇಳಿ ಮನಸ್ಸಿನಲ್ಲಿಯೇ ಇಂತೆಂದು ಯೋಚಿಸಿದನು.

ಯದಿ ಮಾಂ ರಾಘವೋ ಹನ್ಯಾತ್ತದಾ ಮುಕ್ತೋ ಭಾವಾರ್ಣವಾತ್ । ಮಾಂ ಹನ್ಯಾದ್ಯದಿ ಚೇದ್ದುಷ್ಟಸ್ತದಾ ಮೇ ನಿರಯೋ ಧ್ರುವಂ
ಇತಿ ನಿಶ್ಚಿತ್ಯ ಮರಣಂ ರಾಮಾದುತ್ಥಾಯ ವೇಗತಃ । ಅಬ್ರವೀದ್ರಾವಣಂ ರಾಜನ್ಕರೋಮ್ಯಾಜ್ಞಾಂ ತವ ಪ್ರಭೋ ॥ ೩೭ ॥
ಇತ್ಯುಕ್ತ್ವಾ ರಥಮಾಸ್ಥಾಯ ಗತೋ ರಾಮಾಶ್ರಮಂ ಪ್ರತಿ । ಶುದ್ಧಜಾಂಬೂನದಪ್ರಖ್ಯೋ ಮೃಗೋಭೂದ್ರೌಪ್ಯಬಿಂದುಕಃ ॥ ೩೮॥
ರತ್ನಶೃಂಗೋ ಮಣಿಖುರೋ ನೀಲರತ್ನವಿಲೋಚನಃ । ವಿದ್ಯುತ್ಪ್ರಭೋ ವಿಮುಗ್ಧಾಸ್ಯೋ ವಿಚಚಾರ ವನಾಂತರೇ ॥
ರಾಮಾಶ್ರಮಪದಸ್ಯಾಂತೇ ಸೀತಾ ದೃಷ್ಟಿಪಥೇ ಚರನ್ ॥ ೩೯ ॥

---

೩೬. ಒಂದುವೇಳೆ ರಾಮನು ನನ್ನನ್ನು ಕೊಂದರೆ ಆವನು ಪರಮಾತ್ಮನಾದುದರಿಂದ ನನಗೆ ಖಂಡಿತವಾಗಿಯೂ ಮುಕ್ತಿಯು ಬಂದೇ ಬರುವುದು. ಆಗ ಈ ಸಂಸಾರಸಾಗರದಿಂದ ಪಾರಾಗುವೆನು. ಅನ್ಯಾಯಾಚಾರಿಯಾದ ಈ ದುಷ್ಟನು ನನ್ನನ್ನು ಕೊಂದರೆ ನನಗೆ ನರಕವು ಬರುವುದು ಖಂಡಿತವು.

೩೭. ಮಾರೀಚನು ರಾಮನದೆಸೆಯಿಂದ ಮರಣವುಂಟಾಗುವುದೆಂದು ನಿಶ್ಚಯಿಸಿಕೊಂಡು ಬೇಗನೆ ಮೇಲಕ್ಕೆದ್ದು ಒಡನೆಯೇ ರಾವಣನನ್ನು ಕುರಿತು ಎಲೈ ಪ್ರಭುವೆ ! ನಿನ್ನ ಅಪ್ಪಣೆಯಂತೆಯೇ ನಾನು ಮಾಡುತ್ತೇನೆ. ಎಂದು ಹೇಳಿದನು.

೩೮. ಹೀಗೆಂದು ಹೇಳಿ ರಥದಮೇಲೆ ಕುಳಿತುಕೊಂಡು ರಾಮಾಶ್ರಮಕ್ಕೆ ಹೋದನು. ಆಗ ಚಿನ್ನದ ಬಣ್ಣವನ್ನು ಹೊಂದಿದ ಜಿಂಕೆಯಾದನು. ಮತ್ತು ಆದರ ಮೈಮೇಲೆಲ್ಲಾ ಬೆಳ್ಳಗಿರುವ ಚುಕ್ಕೆಗಳಿದ್ದುವು.

೩೯. ರತ್ನದ ಕೊಂಬುಗಳನ್ನೂ ಮಣಿಮಯವಾದ ಗೊರಸುಗಳನ್ನೂ ಹೊಂದಿ ನೀಲಿಯ ರತ್ನದ ಕಣ್ಣುಗಳನ್ನು ಹೊಂದಿದನು. ಮಿಂಚಿನಂತೆ ಕಾಂತಿಯಿದ್ದಿತು ಮುಖವು ಮುದ್ದು ಮುದ್ದಾಗಿದ್ದಿತು. ಈ ರೀತಿಯಾದ ಜಿಂಕೆಯ ರೂಪವನ್ನು ಹೊಂದಿ ಆ ರಾಮಾಶ್ರಮದಲ್ಲಿ ಸೀತೆಯ ಕಣ್ಣುಗಳಿಗೆ ಬೀಳುವಂತೆ ಅಲ್ಲಲ್ಲೇ ಓಡಿಯಾಡುತ್ತಿದ್ದನು.

ಕ್ಷಣಂ ಚ ಧಾವತ್ಯವತಿಷ್ಠತೇ ಕ್ಷಣಂ ಸಮೀಪಮಾಗತ್ಯ ಪುನರ್ಭಯಾನ್ವಿತಃ ।
ಏವಂ ಸ ಮಾಯಾಮೃಗವೇಷರೂಪ ಧೃಕ್ಚಚಾರ ಸೀತಾಂ ಪರಿಮೋಹಯನ್ಖಲಃ ॥ ೪೦ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ
ಷಷ್ಠಸ್ಸರ್ಗಃ ಸಮಾಪ್ತಃ

---

೪೦. ಒಂದು ಕ್ಷಣಕಾಲ ಓಡಿಯಾಡುವನು. ಒಂದು ಕ್ಷಣಕಾಲ ನಿಂತರುವನು. ಹಾಗೆಯೇ ಹತ್ತಿರಕ್ಕೆ ಬರುವನು. ಮತ್ತೆ ಭಯದಿಂದ ದೂರಕ್ಕೆ ಓಡುವನು. ಈ ರೀತಿಯಾದ ಮಾಯಾಮೃಗದ ರೂಪವನ್ನು ಹೊಂದಿರುವ ಆ ಮಾರೀಚನು ಸೀತೆಗೆ ಆಸೆಯುಂಟಾಗುವಂತೆ ಮಾಡುತ್ತಾ ಸಂಚರಿಸಿದನು.

ಇಂತು ಶ್ರೀಮದಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ಆರನೆಯ ಸರ್ಗವು ಮುಗಿದುದು.

ಅಥ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಸಪ್ತಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಓಂ ಅಸ್ಯ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಸಪ್ತಮಸರ್ಗಸ್ಯ

ಶ್ರೀ ಭಗವಾನ್ ಬಾದರಾಯಣ ಋಷಿಃ, ಗಾಯತ್ರೀ ಛಂದಃ, ಓಂ ನಮೋ ನಾರಾಯಣೋ ದೇವತಾ, ಶ್ರೀ ಲಕ್ಷ್ಮೀ ಬೀಜಂ, ಪರಮಾ ಶಕ್ತಿಃ, ಅವ್ಯಕ್ತಂ ಕೀಲಕಂ, ಅಮುಕಸಂಪುಟೀಕರಣ ಸಿದ್ಧ್ಯರ್ಥಂ ಅಮುಕಮಂತ್ರ ಲೋಮ ವಿಲೋಮ ಸಂಪುಟೀಕರಣ ದಶಾಧ್ಯಾಯೇ ಮಂತ್ರಾಷ್ಟಾಕ್ಷರ ಸಂಯುಕ್ತಂ ಸಪ್ತಮಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ.

ಓಂ ಆಧ್ಯಾತ್ಮರಾಮಾಯಣದ ಅರಣ್ಯಕಾಂಡದ ಏಳನೆಯ ಸರ್ಗಕ್ಕೆ

ಶ್ರೀ ಭಗವಾನ್ ಬಾದರಾಯಣನು ಋಷಿಯು, ಗಾಯತ್ರೀ ಛಂದಸ್ಸು, ಓಂ ನಮೋ ನಾರಾಯಣ ಎಂಬುದು ದೇವತೆಯು ಶ್ರೀ ಲಕ್ಷ್ಮೀಃ ಎಂಬುದು ಬೀಜವು, ಪರಮಾ ಎಂಬುದು ಶಕ್ತಿಯು, ಅವ್ಯಕ್ತಂ ಎಂಬುದು ಕೀಲಕವು, ಇಂತಹ ಸಂಪುಟೀಕರಣದ ಸಿದ್ಧಿಗೋಸ್ಕರ ಇಂತಹ ಮಂತ್ರದ ಲೋಮ ವಿಲೋಮ ಸಂಪುಟೀಕರಣದ ದಶಾಧ್ಯಾಯದಲ್ಲಿ ಎಂಟಕ್ಷರದ ಮಂತ್ರದಿಂದ ಕೂಡಿದ ಸಪ್ತಮಸರ್ಗದ ನ್ಯಾಸ ಧ್ಯಾನ ಜಪಗಳನ್ನು ಮಾಡುತ್ತೇನೆ ಎಂದು ಸಂಕಲ್ಪ ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ಮಾಂ ರೂಂ ಣಾಂ ಅಂಗುಷ್ಠಾಭ್ಯಾಂ ನಮಃ
ಓಂ ಮಾಂ ರೂಂ ಣಾಂ ತರ್ಜನೀಭ್ಯಾಂ ನಮಃ
ಓಂ ಮಾಂ ರೂಂ ಣಾಂ ಮಧ್ಯಮಾಭ್ಯಾಂ ನಮಃ
ಓಂ ಮಾಂ ರೂಂ ಣಾಂ ಅನಾಮಿಕಾಭ್ಯಾಂ ನಮಃ
ಓಂ ಮಾಂ ರೂಂ ಣಾಂ ಕನಿಷ್ಠಿಕಾಭ್ಯಾಂ ನಮಃ
ಓಂ ಮಾಂ ರೂಂ ಣಾಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಷಡಂಗನ್ಯಾಸವು

ಓಂ ಮಾಂ ರೂಂ ಣಾಂ ಹೃದಯಾಯ ನಮಃ
ಓಂ ಮಾಂ ರೂಂ ಣಾಂ ಶಿರಸೇ ಸ್ವಾಹಾ
ಓಂ ಮಾಂ ರೂಂ ಣಾಂ ಶಿಖಾಯೈ ವಷಟ್
ಓಂ ಮಾಂ ರೂಂ ಣಾಂ ಕವಚಾಯ ಹುಂ
ಓಂ ಮಾಂ ರೂಂ ಣಾಂ ನೇತ್ರತ್ರಯಾಯ ವೌಷಟ್
ಓಂ ಮಾಂ ರೂಂ ಣಾಂ ಅಸ್ತ್ರಾಯ ಫಟ್

ಓಂ ಮಾಂ ರೂಂ ಣಾಂ ಇತಿ ದಿಗ್ಬಂಧಃ

ಓಂ ಮಾಂ ರೂಂ ಣಾಂ ಎಂದು ದಿಗ್ಬಂಧವು

॥ ಅಥ ಧ್ಯಾನಂ ॥

ಧ್ಯಾನವು

ಅಥ ರಾಮೋಽಪಿ ತತ್ಸರ್ವಂ ಜ್ಞಾತ್ವಾ ರಾವಣಚೇಷ್ಟಿತಂ । ಉವಾಚ ಸೀತಾಮೇಕಾಂತೇ ಶೃಣು ಜಾನಕಿ ಮೇ ವಚಃ ॥
ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.
ಪಾರಾಯಣಾಂತೇ ಪುನಃ ಹೃದಯಾದಿ ಷಡಂಗನ್ಯಾಸಂ ಕೃತ್ವಾ ಓಂ ಮಾಂ ರೂಂ ಣಾಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್.
ಪಾರಾಯಣವಾದಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ಮಾಂ ರೂಂ ಣಾಂ ಇತಿ ದಿಗ್ವಿಮೋಕಃ ಎಂದೆನ್ನಬೇಕು.
ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

॥ ಇತಿ ಶ್ರೀ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಸಪ್ತಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ ॥
ಇಂತು ಶ್ರೀ ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ಏಳನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಸಪ್ತಮಸ್ಸರ್ಗಃ

॥ ಶ್ರೀ ಮಹಾದೇವ ಉವಾಚ ॥

ಅಥ ರಾಮೋಪಿ ತತ್ಸರ್ವಂ ಜ್ಞಾತ್ವಾ ರಾವಣಚೇಷ್ಟಿತಂ। ಉವಾಚ ಸೀತಾಮೇಕಾಂತೇ ಶೃಣು ಜಾನಕಿ ಮೇ ವಚಃ ॥ ೧ ॥

ರಾವಣೋ ಭಿಕ್ಷುರೂಪೇಣ ಆಗಮಿಷ್ಯತಿ ತೇಂತಿಕಂ। ತ್ವಂ ತು ಛಾಯಾಂ ತ್ವದಾಕಾರಾಂ ಸ್ಥಾಪಯಿತ್ವೋಟಜೇ ವಿಶ ॥ ೨ ॥

ಅಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ಏಳನೆಯ ಸರ್ಗವು.

೧. ಮಹಾದೇವನು ಹೇಳಿದನು–ಇತ್ತ ಶ್ರೀರಾಮನಿಗೂ ರಾವಣನು ಮಾಡಿದ ಕುಹಕವು ತಿಳಿಯಿತು. ಆಗ ಸೀತೆಯನ್ನು ಕುರಿತು ಏಕಾಂತದಲ್ಲಿ ಎಲೈ ಜಾನಕಿಯೆ ! ನಾನು ಹೇಳುವುದನ್ನು ಕೇಳು ಎಂದು ಇಂತೆಂದನು.

೨. ರಾವಣನು ಸನ್ಯಾಸಿಯ ವೇಷದಿಂದ ನಿನ್ನ ಬಳಿಗೆ ಬರುವನು. ನೀನು ನಿನ್ನಂತೆ ಇರುವ ಒಂದು ಛಾಯಾಸೀತೆಯನ್ನು ಮಾಡಿ ಅದನ್ನು ಅವನ ಎದುರಿಗಿಟ್ಟು ಪರ್ಣಶಾಲೆಯೊಳಕ್ಕೆ ಹೊರಟು ಹೋಗು.

ಅಗ್ನಾವದೃಶ್ಯರೂಪೇಣ ವರ್ಷಂ ತಿಷ್ಠ ಮಮಾಜ್ಞಯಾ । ರಾವಣಸ್ಯ ವಧಾಂತೇ ಮಾಂ ಪೂರ್ವವತ್ಪ್ರಾಪ್ಸ್ಯಸೇ ಶುಭೇ ॥ ೩ ॥

ಶ್ರುತ್ವಾ ರಾಮೋದಿತಂ ವಾಕ್ಯಂ ಸಾಪಿ ತತ್ರ ತಥಾಕರೋತ್ । ಮಾಯಾಸೀತಾಂ ಬಹಿಃ ಸ್ಥಾಪ್ಯ ಸ್ವಯಮಂತರ್ದಧೇನಲೇ ॥ ೪ ॥

ಮಾಯಾಸೀತಾ ತದಾಪಶ್ಯನ್ಮೃಗಂ ಮಾಯಾನಿರ್ಮಿತಂ । ಹಸಂತೀ ರಾಮಮಭ್ಯೇತ್ಯ ಪ್ರೋವಾಚ ವಿನಯಾನ್ವಿತಾ ॥ ೫ ॥

ಪಶ್ಯ ರಾಮ ಮೃಗಂ ಚಿತ್ರಂ ಕನಕಂ ರತ್ನಭೂಷಿತಂ । ವಿಚಿತ್ರ ಬಿಂದುಭಿರ್ಯುಕ್ತಂ ಚರಂತಮಕುತೋಭಯಂ ॥ ೬ ॥

---

೩. ಅಲ್ಲಿರುವ ನಮ್ಮಗಳ ಗಾರ್ಹಸ್ಥಾಗ್ನಿಯೊಳಗೆ ಒಂದು ವರ್ಷಕಾಲ ಕಳೆಯುವವರೆಗೂ ನನ್ನ ಅಪ್ಪಣೆಯಂತೆ ಇರು. ರಾವಣನನ್ನು ಕೊಂದಮೇಲೆ ಮೊದಲಿನಂತೆ ನನ್ನ ಬಳಿಗೆ ಬಂದಿರುತ್ತೀಯಂತೆ.

೪. ಸೀತೆಯೂ ಕೂಡ ರಾಮನು ಹೇಳಿದುದನ್ನು ಕೇಳಿ ಅದರಂತೆಯೇ ಮಾಯಾಸೀತೆಯನ್ನು ಮಾಡಿ ಆಕೆಯನ್ನು ಹೊರಗಿಟ್ಟು ತಾನು ಒಳಗಿರುವ ಅಗ್ನಿಯಲ್ಲಿ ಸೇರಿಕೊಂಡಳು.

೫. ಈ ಮಾಯೆಯ ರೂಪವಾದ ಸೀತೆಯು ಈ ಮಾಯಾಮೃಗವನ್ನು ನೋಡಿದಳು. ಆಗ ನಗುತ್ತಾ ಆಕೆಯು ರಾಮನ ಬಳಿಗೆ ಹೋಗಿ ವಿನಯದಿಂದ ಇಂತೆಂದಳು.

೬. ಎಲೈ ರಾಮನೆ ! ಈ ಮೃಗವನ್ನು ನೋಡು. ಚಿತ್ರವಿಚಿತ್ರವಾಗಿದೆ. ಚಿನ್ನದ್ದರಂತಿದೆ. ರತ್ನಗಳಿಂದ ಅಲಂಕೃತವಾಗಿದೆ. ಇದರ ಮೈಮೇಲೆ ವಿಚಿತ್ರವಾದ ಚಿಕ್ಕೆಗಳಿವೆ. ಸ್ವಲ್ಪವೂ ಹೆದರದೆ ಇಲ್ಲೆಲ್ಲಾ ಓಡಿಯಾಡುತ್ತಿದೆ.

ಬಧ್ವಾ ದೇಹಿ ಮಮ ಕ್ರೀಡಾಮೃಗೋ ಭವತು ಸುಂದರಃ । ತಥೇತಿ ಧನುರಾದಾಯ ಗಚ್ಛನ್ ಲಕ್ಷ್ಮಣಮಬ್ರವೀತ್ ॥ ೭ ॥

ರಕ್ಷ ತ್ವ ಮತಿಯತ್ನೇನ ಸೀತಾಂ ಮತ್ಪ್ರಾಣವಲ್ಲಭಾಂ । ಮಾಯಿನಸ್ಸಂತಿ ವಿಪಿನೇ ರಾಕ್ಷಸಾ ಘೋರದರ್ಶನಾಃ ॥ ೮ ॥

ಅತೋಽತ್ರಾವಹಿತಃ ಸಾಧ್ವೀಂ ರಕ್ಷ ಸೀತಾಮನಿಂದಿತಾಂ । ಲಕ್ಷ್ಮಣೋ ರಾಮಮಾಹೇದಂ ದೇವಾಯಂ ಮೃಗರೂಪಧೃಕ್ ॥
ಮಾರೀಚೋತ್ರ ನ ಸಂದೇಹ ಏವಂ ರೂಪೋ ಮೃಗಃ ಕುತಃ ॥ ೯ ॥

---

೭. ಇದನ್ನು ಹಿಡಿದುಕಟ್ಟಿ ನನಗೆ ಕೊಡು. ಬಹು ಸುಂದರವಾಗಿರುವುದರಿಂದ ನನಗೆ ಆಟವಾಡುವುದಕ್ಕೆ ಅನುಕೂಲವಾಗುತ್ತದೆ. ಎಂದಳು. ರಾಮನು ಹಾಗೆಯೇ ಆಗಲಿ ಎಂದು ಹೇಳಿ ಹೊರಡಲು ಸಿದ್ಧನಾಗಿ ಲಕ್ಷ್ಮಣನನ್ನು ಕುರಿತು ಇಂತೆಂದನು.

೮. ಎಲೈ ಲಕ್ಷ್ಮಣನೆ! ನನ್ನ ಪ್ರಾಣವಲ್ಲಭೆಯಾದ ಈ ಸೀತೆಯನ್ನು ಬಹು ಜಾಗರೂಕತೆಯಿಂದ ಕಾಪಾಡಿಕೊಂಡಿರು. ಏತಕ್ಕೆಂದರೆ ಮಾಯಾವಿಗಳಾದ ದುಷ್ಟರಾದ ಅನೇಕ ಜನ ರಾಕ್ಷಸರು ಈ ಕಾಡಿನಲ್ಲಿರುವರು.

೯. ಆದ್ದರಿಂದ ನೀನು ಬಹು ಜಾಗರೂಕನಾಗಿ ಈ ಸೀತೆಯನ್ನು ಕಾಪಾಡಬೇಕು. ಎನ್ನಲು ಲಕ್ಷ್ಮಣನು ಆ ರಾಮನನ್ನು ಕುರಿತು ಎಲೈ ರಾಮನೆ! ಮಾರೀಚನು ಈ ಮೃಗದ ರೂಪವನ್ನು ಹೊಂದಿ ಬಂದಿರುವನು. ಇವನು ಮಾರೀಚನೆಂಬುದರಲ್ಲಿ ಸಂದೇಹವೇ ಇಲ್ಲ. ಹಾಗಿಲ್ಲದಿದ್ದರೆ ಪ್ರಪಂಚದಲ್ಲಿ ಈ ರೀತಿಯಾದ ಮೃಗವು ಎಲ್ಲಿರುವುದು? ಎಂದನು.

॥ ಶ್ರೀರಾಮ ಉವಾಚ ॥

ಯದಿ ಮಾರೀಚ ಏವಾಯಂ ತದಾ ಹನ್ಮಿ ನ ಸಂಶಯಃ । ಮೃಗಶ್ಚೇದಾನಯಿಷ್ಯಾಮಿ ಸೀತಾವಿಶ್ರಾಮಹೇತವೇ ॥ ೧೦ ॥

ಗಮಿಷ್ಯಾಮಿ ಮೃಗಂ ಬಧ್ವಾ ಹ್ಯಾನಯಿಷ್ಯಾಮಿ ಸತ್ವರಃ । ತ್ವಂ ಪ್ರಯತ್ನೇನ ಸಂತಿಷ್ಠ ಸೀತಾಸಂರಕ್ಷಣೋದ್ಯತಃ ॥ ೧೧ ॥

ಇತ್ಯುಕ್ತ್ವಾ ಪ್ರಯಯೌ ರಾಮೋ ಮಾಯಾಮೃಗಮನುದ್ರುತಃ । ಮಾಯಾ ಯದಾಶ್ರಯಾ ಲೋಕಮೋಹಿನೀ ಜಗದಾಕೃತಿಃ

---

೧೦. ರಾಮನು ಹೇಳಿದನು—ಎಲೈ ಲಕ್ಷ್ಮಣನೆ ! ಈ ಮೃಗವು ಮಾರೀಚನಾದ ಪಕ್ಷದಲ್ಲಿ ಸಂದೇಹವಿಲ್ಲದೆ ಕೊಲ್ಲುವೆನು. ಮೃಗವಾದರೆ ಸೀತೆಯು ಸಂತೋಷಪಡಲು ಈ ಮೃಗವನ್ನು ತಂದುಕೊಡುವೆನು.

೧೧. ನಾನು ಹೋಗುತ್ತೇನೆ. ಆ ಮೃಗವನ್ನು ಕಟ್ಟಿ ಜಾಗ್ರತೆಯಾಗಿ ತರುತ್ತೇನೆ. ನೀನು ಬಹು ಜಾಗರೂಕತೆಯಿಂದ ಸೀತೆಯನ್ನು ಕಾಪಾಡಿಕೊಂಡಿರು.

೧೨. ರಾಮನು ಹೀಗೆಂದು ಹೇಳಿ ಆ ಮಾಯಾಮೃಗವನ್ನು ಹಿಡಿದು ತರಲು ಅದನ್ನು ಹಿಂಬಾಲಿಸಿ ಹೊರಟನು. ಪ್ರಪಂಚದಲ್ಲಿ ಮಾಯೆಯು ಯಾವ ಸ್ವಾಮಿಯ ಅಧೀನವಾಗಿ ಅವನನ್ನೇ ಆಶ್ರಯಿಸಿಕೊಂಡು ಲೋಕವನ್ನೇ ಮೋಹಿಸುವಂತೆ ಮಾಡುತ್ತಿರುವುದೋ ಅಂತಹ ಪೂರ್ಣನಾದ ನಿರ್ವಿಕಾರನಾದ ಆ ಸ್ವಾಮಿಯು ತಾನು ಮಾಯೆಗೆ ಅಧೀನನಾಗಿ ಆ ಮಾಯಾಮೃಗವನ್ನು ಅನುಸರಿಸಿ ಹೊರಟನು.

ನಿರ್ವಿಕಾರಶ್ಚಿದಾತ್ಮಾಪಿ ಪೂರ್ಣೋಽಪಿ ಮೃಗಮನ್ವಗಾತ್ । ಭಕ್ತಾನುಕಂಪೀ ಭಗವಾನಿತಿ ಸತ್ಯಂ ವಚೋ ಹರಿಃ ॥ ೧೩ ॥

ಕರ್ತುಂ ಸೀತಾಪ್ರಿಯಾರ್ಥಾಯ ಜಾನನ್ನಪಿ ಮೃಗಂ ಯಯೌ । ಅನ್ಯಥಾ ಪೂರ್ಣಕಾಮಸ್ಯ ರಾಮಸ್ಯ ವಿದಿತಾತ್ಮನಃ ॥ ೧೪ ॥

ಮೃಗೇಣ ವಾ ಸ್ತ್ರಿಯಾ ವಾಪಿ ಕಿಂ ಕಾರ್ಯಂ ಪರಮಾತ್ಮನಃ । ಕದಾಚಿದ್ದೃಶ್ಯತೇಽಭ್ಯಾಶೇ ಕ್ಷಣಂ ಧಾವತಿ ಲೀಯತೇ ॥ ೧೫ ॥

ದೃಶ್ಯತೇ ಚ ತತೋ ದೂರಾದೇವಂ ರಾಮಮುಪಾಹರತ್ । ತತೋ ರಾಮೋಽಪಿ ವಿಜ್ಞಾಯ ರಾಕ್ಷಸೋಽಯಮಿತಿ ಸ್ಫುಟಂ ॥ ೧೬ ॥

---

೧೩. ಆ ಭಗವಂತನು ಭಕ್ತರ ವಿಷಯದಲ್ಲಿ ದಯೆಯುಳ್ಳವನು ಎಂಬುದು ಸತ್ಯವಾದ ಮಾತು. ಹಾಗೆ ಅವನು ಭಕ್ತರಲ್ಲಿ ದಯೆಯಿಲ್ಲದಿದ್ದರೆ ಆ ಮೃಗವು ಮಾಯೆಯ ಮೃಗವೆಂದು ತಿಳಿದಿದ್ದರೂ ಆ ಸೀತೆಯ ಮಾತನ್ನು ನಡೆಸಬೇಕೆಂದು ಹೋಗುತ್ತಿದ್ದನೆ ? ಅವನು ತಿಳಿದಿದ್ದರೂ ಹೋದುದರಿಂದ ಭಕ್ತಾನುಕಂಪಿಯು ಎಂಬುದು ಸತ್ಯವು.

೧೪. ಆ ಪರಮಾತ್ಮನು ಪೂರ್ಣಕಾಮನು. ಎಂದರೆ ಎಲ್ಲಾ ಅಪೇಕ್ಷೆಯನ್ನೂ ಹೊಂದಿದವನು. ಪ್ರಪಂಚದಲ್ಲಿ ನಡೆಯುವುದೆಲ್ಲವನ್ನೂ ಬಲ್ಲವನು ಇಂತಹವನಿಗೆ ಮೃಗವು ಯೇತಕ್ಕೆ ? ಹೆಂಡತಿ ಹೆಂಗಸರು ಏತಕ್ಕೆ ? ಇದರಿಂದ ಅವನಿಗೆ ಕೆಲಸ ತಾನೇ ಏನಿರುವುದು ?

೧೫–೧೬. ಆ ಮೃಗವು ಒಂದುಸಾರಿ ಹತ್ತಿರದಲ್ಲಿದ್ದು ಸಿಕ್ಕಿದಂತೆ ಕಾಣುತ್ತದೆ. ಅನಂತರ ಓಡಿಹೋಗಿ ದೂರದಲ್ಲಿದ್ದಂತೆ ಕಾಣುತ್ತದೆ. ಈ ರೀತಿಯಾಗಿ ಮಾಡುತ್ತಾ ರಾಮನನ್ನು ಬಹು ದೂರಕ್ಕೆ ಎಳೆದುಕೊಂಡು ಹೋಯಿತು. ಇದನ್ನು ನೋಡಿ ರಾಮನೂ ಕೂಡ ಇವನು ಖಂಡಿತವಾಗಿಯೂ ರಾಕ್ಷಸನೆಂದು ತಿಳಿದುಕೊಂಡನು.

ವಿವ್ಯಾಥ ಶರಮಾದಾಯ ರಾಕ್ಷಸಂ ಮೃಗರೂಪಿಣಂ । ಪಪಾತ ರುಧಿರಾಕ್ತಾಸ್ಯೋ ಮಾರೀಚಃ ಪೂರ್ವರೂಪಧೃಕ್ ॥ ೧೭ ॥
ಹಾ ಹತೋಽಸ್ಮಿ ಮಹಾಬಾಹೋ ತ್ರಾಹಿ ಲಕ್ಷ್ಮಣ ಮಾಂ ದ್ರುತಂ । ಇತ್ಯುಕ್ತ್ವಾ ರಾಮವದ್ವಾಚಾ ಪಪಾತ ರುಧಿರಾಶನಃ ॥ ೧೮ ॥
ಯನ್ನಾಮಾಜ್ಞೋಽಪಿ ಮರಣೇ ಸ್ಮೃತ್ವಾ ತತ್ಸಾಮ್ಯಮಾಪ್ನುಯಾತ್ । ಕಿಮುತಾಗ್ರೇ ಹರಿಂ ಪಶ್ಯಂಸ್ತೇನೈವ ನಿಹತೋಽಸುರಃ ॥೧೯॥
ತದ್ದೇಹಾದುತ್ಥಿತಂ ತೇಜಃ ಸರ್ವಲೋಕಸ್ಯ ಪಶ್ಯತಃ । ರಾಮಮೇವಾವಿಶದ್ದೇವಾ ವಿಸ್ಮಯಂ ಪರಮಂ ಯಯುಃ ॥ ೨೦ ॥

---

೧೭. ಆಗ ಒಂದು ಬಾಣವನ್ನು ತೆಗೆದುಕೊಂಡು ಮೃಗದ ವೇಷವನ್ನು ಧರಿಸಿರುವ ಆ ರಾಕ್ಷಸನನ್ನು ಹೊಡೆದನು. ಒಡನೆಯೇ ಬಾಯಿಲ್ಲವೂ ರಕ್ತವಾಗಿ ರಕ್ತವನ್ನು ಕಾರುತ್ತಾ ಆ ಮಾರೀಚನು ಮೊದಲನೆಯ ತನ್ನ ರೂಪವನ್ನು ಹೊಂದಿ ಬಿದ್ದನು.

೧೮. ಆಗ ಮಹಾಬಾಹುವಾದ ಲಕ್ಷ್ಮಣನೇ ! ಅಯ್ಯೋ ! ಕೆಟ್ಟೆನು ! ಕೊಲ್ಲಲ್ಪಟ್ಟೆನು. ನನ್ನನ್ನು ಜಾಗ್ರತೆಯಾಗಿ ಬಂದು ಕಾಪಾಡು ಎಂದು ಕೂಗುತ್ತಾ ಆ ರಾಕ್ಷಸನು ರಾಮನ ಮಾತಿನಂತೆ ಕೂಗುತ್ತಾ ಬಿದ್ದು ಪ್ರಾಣಬಿಟ್ಟನು.

೧೯. ಬುದ್ಧಿಯಿಲ್ಲದ ಯಾವುದಾದರೂ ಒಂದು ಪ್ರಾಣಿಯು ಸಾಯುವಾಗ ಶ್ರೀರಾಮನ ಹೆಸರನ್ನು ಸ್ಮರಿಸಿಕೊಂಡರೇನೇ ಸತ್ತಮೇಲೆ ಆ ಸ್ವಾಮಿಯಲ್ಲಿ ಐಕ್ಯವನ್ನು ಹೊಂದುತ್ತಾನೆ. ಈ ರೀತಿಯಲ್ಲಿರುವಲ್ಲಿ ಆ ರಾಕ್ಷಸನು ಎದುರಿಗೇನೇ ಆ ಸ್ವಾಮಿಯನ್ನು ನೋಡುತ್ತಿರುವನು, ಅಲ್ಲದೆ ಅವನಿಂದಲೇ ಕೊಲ್ಲಲ್ಪಟ್ಟನು ಎಂದಮೇಲೆ ನಾವು ಹೇಳತಕ್ಕದ್ದೇನಿದೆ ? ಅವನು ಖಂಡಿತವಾಗಿಯೂ ಮೋಕ್ಷವನ್ನು ಹೊಂದಿದನು.

೨೦. ಆ ಮಾರೀಚನು ಬಿದ್ದಮೇಲೆ ವೇಗದಿಂದ ಒಂದು ತೇಜಸ್ಸು ಹೊರಟಿತು ಅದು ಎಲ್ಲರಿಗೂ ಕಂಡಿತು. ಅದು ಆ ರಾಮನಲ್ಲಿಯೇ ಹೋಗಿ ಸೇರಿಕೊಂಡಿತು. ಆಗ ದೇವತೆಗಳೆಲ್ಲಾ ಬಹಳವಾಗಿ ಆಶ್ಚರ್ಯಪಟ್ಟರು.

ಕಿಂ ಕರ್ಮ ಕೃತ್ವಾ ಕಿಂ ಪ್ರಾಪ್ತಃ ಪಾತಕೀ ಮುನಿಹಿಂಸಕಃ । ಅಥವಾ ರಾಘವಸ್ಯಾಯಂ ಮಹಿಮಾ ನಾತ್ರ ಸಂಶಯಃ ॥ ೨೧ ॥

ರಾಮಬಾಣೇನ ಸಂವಿದ್ಧಃ ಪೂರ್ವಂ ರಾಮಮನುಸ್ಮರ್ರ । ಭಯಾತ್ಸರ್ವಂ ಪರಿತ್ಯಜ್ಯ ಗೃಹ ವಿತ್ತಾದಿಕಂ ಚ ಯತ್ ॥ ೨೨ ॥

ಹೃದಿ ರಾಮಂ ಸದಾ ಧ್ಯಾತ್ವಾ ನಿರ್ಧೂತಾಶೇಷಕಲ್ಮಷಃ । ಅಂತೇ ರಾಮೇಣ ನಿಹತಃ ಪಶ್ಯನ್ರಾಮಮುಪಾಪ ಸಃ ॥ ೨೩ ॥

---

೨೧. ಆಗ ದೇವತೆಗಳು ಆ ರಾಕ್ಷಸನುಮಾಡಿದ ಕೆಲಸವು ಎಂತಹ ಕೆಟ್ಟಕೆಲಸ ? ಇವನು ಮುನಿಗಳನ್ನು ಹಿಂಸಿಸುತ್ತ ಬಹು ಪಾಪಿಯಾಗಿದ್ದನಲ್ಲ! ಅವನು ಹೊಂದಿದ ಜಾಗವು ಎಂಥಾದ್ದು ! ಅಥವಾ ಇದರಲ್ಲಿ ಆಶ್ಚರ್ಯವೇನೂ ಇರುವುದಿಲ್ಲ. ರಾಮನ ಮಹಿಮೆಯು ಶತ್ರುಗಳಿಗೂ ಮುಕ್ತಿಯನ್ನು ಕೊಡುವುದೇ. ಇದರಲ್ಲಿ ಸಂಶಯವಿಲ್ಲ ಎನ್ನುತ್ತಿದ್ದರು.

೨೨. ಮೊದಲು ವಿಶ್ವಾಮಿತ್ರನ ಯಾಗರಕ್ಷಣೆಗೆ ರಾಮನು ಹೋದಾಗ ಆ ರಾಮನ ಬಾಣದ ಏಟನ್ನು ತಿಂದು ಆ ಹೆದರಿಕೆಯಿಂದ ಆ ಮಾರೀಚನು ಯಾವಾಗಲೂ ಹೆದರಿಕೊಂಡು ರಾಮನನ್ನೇ ಸ್ಮರಿಸುತ್ತಿದ್ದನು. ಅನಂತರ ರಾಮನು ದಂಡಕಾರಣ್ಯಕ್ಕೆ ಬಂದಮೇಲೆ ಮತ್ತೆ ತೊಂದರೆ ಪಡಿಸಿ ಏಟನ್ನು ತಿಂದು ಆ ಭಯದಿಂದ ಮನೆಮಠಗಳೆಲ್ಲವನ್ನೂ ಬಿಟ್ಟುಬಿಟ್ಟನು. ಆ ಭಯದಿಂದಲೇ ರಾಮನನ್ನು ಸ್ಮರಿಸುತ್ತಿದ್ದನು.

೨೩. ಇವನು ಯಾವರೀತಿಯಲ್ಲೇ ಆಗಲಿ ಯಾವಾಗಲೂ ರಾಮನನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಿದ್ದನು. ಆದರಿಂದ ಅವನು ಪಾಪಗಳೆಲ್ಲವನ್ನೂ ಕಳೆದುಕೊಂಡು ನಿರ್ಮಲನಾದನು. ಕೊನೆಯಲ್ಲಿಯೂ ರಾಮನಿಂದಲೇ ಕೊಲ್ಲಲ್ಪಟ್ಟು ಆ ರಾಮನನ್ನೇ ನೋಡುತ್ತಿದ್ದು ಆ ರಾಮನನ್ನೇ ಸೇರಿಕೊಂಡನು.

ದ್ವಿಜೋ ವಾ ರಾಕ್ಷಸೋ ವಾಪಿ ಪಾಪೀ ವಾಧರ್ಮಿಕೋಪಿ ವಾ । ತ್ಯಜನ್ಕಳೇಬರಂ ರಾಮಂ ಸ್ಮೃತ್ವಾ ಯಾತಿ ಪರಂ ಪದಂ॥ ೨೪ ॥
ಇತಿ ತೇನ್ಯೋನ್ಯಮಾಭಾಷ್ಯ ತತೋ ದೇವಾ ದಿವಂ ಯಯುಃ । ರಾಮುಸ್ತು ಚಿಂತಯಾಮಾಸ ಮ್ರಿಯಮಾಣೋಸುರಾಧಮಃ ॥
ಹಾ ಲಕ್ಷ್ಮಣೇತಿ ಮದ್ವಾಕ್ಯಮನುಕುರ್ವನ್ಮಮಾರ ಕಿಂ । ಶ್ರುತ್ವಾ ಮದ್ವಾಕ್ಯಸದೃಶಂ ವಾಕ್ಯಂ ಸೀತಾಪಿ ಕಿಂ ಭವೇತ್ ॥ ೨೬ ॥
ಇತಿ ಚಿಂತಾಪರೀತಾತ್ಮಾ ರಾಮೋ ದೂರಾನ್ನ್ಯವರ್ತತ । ಸೀತಾ ತದ್ಭಾಷಿತಂ ಶ್ರುತ್ವಾ ಮಾರೀಚಸ್ಯ ದುರಾತ್ಮನಃ ॥ ೨೭ ॥
ಭೀತಾತಿದುಃಖಸಂವಿಗ್ನಾ ಲಕ್ಷ್ಮಣಂ ತ್ವಿದಮಬ್ರವೀತ್ । ಗಚ್ಛ ಲಕ್ಷ್ಮಣ ವೇಗೇನ ಭ್ರಾತಾ ತೇಸುರಪೀಡಿತಃ ॥ ೨೮ ॥

---

೨೪. ಬ್ರಾಹ್ಮಣನಾಗಲೀ, ರಾಕ್ಷಸನಾಗಲೀ, ಪಾಪಿಯಾಗಲೀ, ಧರ್ಮಿಷ್ಟನಾಗಲೀ ಯಾವನೇ ಆಗಲಿ ರಾಮುನನ್ನು ಸ್ಮರಿಸುತ್ತಾ ಈ ದೇಹವನ್ನು ಬಿಟ್ಟರೆ ಅವನು ಮುಕ್ತಿಯನ್ನು ಹೊಂದುತ್ತಾನೆ.

೨೫. ಎಂಬುದಾಗಿ ದೇವತೆಗಳು ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಾ ಸ್ವರ್ಗಕ್ಕೆ ಹೊರಟುಹೋದರು. ಆಗ ರಾಮುನು ಈ ರಾಕ್ಷಸಾಧಮುನು ಸಾಯುತ್ತಿರುವಾಗ ಹಾ ಲಕ್ಷ್ಮಣ ! ಎಂದು ನನ್ನ ಮಾತನ್ನು ಅನುಕರಿಸಿ ಕೂಗುತ್ತಾ ಸತ್ತನಲ್ಲ ! ಕಾರಣವೇನು ? ಎಂದು ಯೋಚಿಸುತ್ತಿದ್ದನು.

೨೬. ನನ್ನ ಮಾತಿನಂತೆಯೇ ಇರುವ ಈ ಮಾತನ್ನು ಕೇಳಿ ಸೀತೆಯು ತಾನೇ ಏನೆಂದಾಳು ? ಎಂಬುದಾಗಿ ಯೋಚನೆಯಿಂದ ಕೂಡಿಕೊಂಡು ರಾಮುನು ತಾನು ಬಂದಿರುವುದು ಬಹುದೂರವಾಗಿದ್ದರೂ ಅಲ್ಲಿಂದ ಜಾಗ್ರತೆಯಾಗಿ ಹಿಂದಿರುಗಿ ಹೋಗುತ್ತಿದ್ದನು.

೨೭–೨೮. ಸೀತೆಯು ಆ ದುಷ್ಟನಾದ ಮಾರೀಚನು ಕೂಗಿದ ರಾಮುನ ಮಾತಿನಂತಿರುವ ಮಾತನ್ನು ಕೇಳಿ ಹೆದರಿ ಬಹು ದುಃಖಗೊಂಡು ಲಕ್ಷ್ಮಣನನ್ನು ಕುರಿತು ಇಂತೆಂದಳು. ಎಲೈ ಲಕ್ಷ್ಮಣನೇ ! ಬೇಗನೆ ಹೋಗು. ನಿನ್ನ ಅಣ್ಣನು ಆ ರಾಕ್ಷಸನಿಂದ ತೊಂದರೆಗೊಂಡಿರುವನು.

ಹಾ ಲಕ್ಷ್ಮಣೇತಿ ವಚನಂ ಭ್ರಾತುಸ್ತೇ ನ ಶೃಣೋಷಿ ಕಿಂ । ತಮಾಹ ಲಕ್ಷ್ಮಣೋ ದೇವಿ ರಾಮವಾಕ್ಯಂ ನ ತದ್ಭವೇತ್ ॥ ೨೯ ॥

ಯಃ ಕಶ್ಚಿದ್ರಾಕ್ಷಸೋ ದೇವಿ ಮ್ರಿಯಮಾಣೋಬ್ರವೀದ್ವಚಃ । ರಾಮಸ್ತ್ರೈಲೋಕ್ಯಮಪಿ ಯಃ ಕ್ರುದ್ಧೋ ನಾಶಯತಿ ಕ್ಷಣಾತ್ ॥

ಸ ಕಥಂ ದೀನವಚನಂ ಭಾಷತೇಽಮರಪೂಜಿತಃ । ಕ್ರುದ್ಧಾ ಲಕ್ಷ್ಮಣಮಾಲೋಕ್ಯ ಸೀತಾ ಬಾಷ್ಪವಿಲೋಚನಾ ॥ ೩೧ ॥

ಪ್ರಾಹ ಲಕ್ಷ್ಮಣ ದುರ್ಬುದ್ಧೇ ಭ್ರಾತುರ್ವ್ಯಸನಮಿಚ್ಛಸಿ । ಪ್ರೇಷಿತೋ ಭರತೇನೈವ ರಾಮನಾಶಾಭಿಕಾಂಕ್ಷಿಣಾ ॥ ೩೨ ॥

---

೨೯. ಹಾ ಲಕ್ಷ್ಮಣಾ ! ಎಂದು ನಿನ್ನ ಅಣ್ಣನು ಕೂಗಿಕೊಂಡುದು ನಿನಗೆ ಕೇಳಲಿಲ್ಲವೇನು ? ಇದನ್ನು ಕೇಳಿ ಲಕ್ಷ್ಮಣನು ಸೀತೆಯನ್ನು ಕುರಿತು ಎಲೈ ದೇವಿಯೇ ! ಈಗ ಕೇಳಿದುದು ರಾಮನ ಮಾತಲ್ಲ.

೩೦. ಯಾವನೋ ರಾಕ್ಷಸನು ಸಾಯುತ್ತಿರುವಾಗ ಹೀಗೆಂದು ಕೂಗಿಕೊಂಡಿರುವನು. ರಾಮನಾದರೋ ಶೂರನು. ಅವನು ಕೋಪಗೊಂಡರೆ ಮೂರುಲೋಕಗಳನ್ನೂ ಕ್ಷಣಕಾಲದಲ್ಲಿ ನಾಶಮಾಡುವನು.

೩೧. ಅಂತಹ ರಾಮನು ಈ ರೀತಿಯಾದ ದೀನವಾದ ಮಾತನ್ನಾಡುವುದೆಂದರೇನು ? ಅವನು ದೇವತೆಗಳಿಗೂ ಅಂಜನು. ಎಂದು ಹೇಳಿದನು. ಆಗ ಸೀತೆಗೆ ಒಡನೆಯೇ ಕೋಪವು ಬಂದಿತು. ಕಣ್ಣಿನಲ್ಲಿ ನೀರನ್ನು ಸುರಿಸುತ್ತಾ ಲಕ್ಷ್ಮಣನನ್ನು ಕುರಿತು ಇಂತೆಂದಳು.

೩೨. ಎಲೈ ದುರ್ಬುದ್ಧಿಯಾದ ಲಕ್ಷ್ಮಣನೇ ! ನೀನು ರಾಮನಿಗೆ ತೊಂದರೆ ಬರುವುದನ್ನೇ ಎದುರುನೋಡುತ್ತಿದ್ದೀಯೆ. ರಾಮನ ನಾಶವನ್ನು ಅಪೇಕ್ಷಿಸುತ್ತಿರುವ ಭರತನೇ ನಿನ್ನನ್ನು ಖಂಡಿತವಾಗಿಯೂ ಕಳುಹಿಸಿರುವನು.

ಮಾಂ ನೇತುಮಾಗತೋಸಿ ತ್ವಂ ರಾಮನಾಶ ಉಪಸ್ಥಿತೇ । ನ ಪ್ರಾಪ್ಸ್ಯಸೇ ತ್ವಂ ಮಾಮದ್ಯ ಪಶ್ಯ ಪ್ರಾಣಾಂಸ್ತ್ಯಜಾಮ್ಯಹಂ ॥ ೩೩ ॥
ನ ಜಾನಾತೀದೃಶಂ ರಾಮಸ್ತ್ವಾಂ ಭಾರ್ಯಾಹರಣೋದ್ಯತಂ । ರಾಮಾದನ್ಯಂ ನ ಪಶ್ಯಾಮಿ ತ್ವಾಂ ವಾ ಭರತಮೇವ ವಾ ॥ ೩೪ ॥
ಇತ್ಯುಕ್ತ್ವಾ ವಧ್ಯಮಾನಾ ಸಾ ಸ್ವಬಾಹುಭ್ಯಾಂ ರುರೋದ ಹ । ತಚ್ಛ್ರುತ್ವಾ ಲಕ್ಷ್ಮಣಃ ಕರ್ಣೌ ಪಿಧಾಯಾತೀವ ದುಃಖಿತಃ ॥ ೩೫ ॥
ಮಾ ನ್ಯೈವಂ ಭಾಷಸೇ ಚಂಡಿ ಧಿಕ್ತ್ವಾಂ ನಾಶಮುಪೈಷ್ಯಸಿ । ಇತ್ಯುಕ್ತ್ವಾ ವನದೇವೀಭ್ಯಃ ಸಮರ್ಪ್ಯ ಜನಕಾತ್ಮಜಾಂ ॥ ೩೬ ॥

---

೩೩. ಆ ರಾಮನು ನಾಶವಾದ ಮೇಲೆ ನನ್ನನ್ನು ಕರೆದುಕೊಂಡು ಹೋಗಿ ಭೋಗಿಸಬೇಕೆಂಬ ಇಚ್ಛೆಯಿಂದ ನೀನು ಬಂದಿದ್ದೀಯೆ. ಆದರೆ ಈಗ ನೀನು ಖಂಡಿತವಾಗಿಯೂ ನನ್ನನ್ನು ಹೊಂದಲಾರೆ. ಇಗೋ ನಿನ್ನ ಎದುರಿಗೆ ಈಗಲೇ ಪ್ರಾಣಗಳನ್ನು ಬಿಡುವೆನು.

೩೪. ನೀನು ತನ್ನ ಹೆಂಡತಿಯನ್ನು ಅಪಹರಿಸುವುದರಲ್ಲಿ ಸಿದ್ಧನಾಗಿದ್ದೀಯೆ ಎಂಬುದನ್ನು ಆ ರಾಮನು ತಿಳಿಯನು. ರಾಮನ ಒಬ್ಬನನ್ನು ಬಿಟ್ಟು ನಿನ್ನನ್ನೇ ಆಗಲಿ, ಭರತನನ್ನೇ ಆಗಲಿ ನಾನು ಕಣ್ಣಿಂದಲೂ ನೋಡುವವಳಲ್ಲ.

೩೫. ಹೀಗೆಂದು ಹೇಳಿ ಕೈಗಳಿಂದ ಎದೆಯನ್ನು ಬಡಿದುಕೊಳ್ಳುತ್ತಾ ಅಳಲು ಮೊದಲಿಟ್ಟಳು. ಸೀತೆಯು ಹೇಳಿದ ಈ ಮಾತನ್ನು ಕೇಳಿ ಲಕ್ಷ್ಮಣನು ಕಿವಿಗಳನ್ನು ಮುಚ್ಚಿಕೊಳ್ಳುತ್ತಾ ಬಹುವಾಗಿ ದುಃಖಗೊಂಡನು.

೩೬–೩೭. ಎಲೈ ಚಂಡಿಯೇ ! ನೀನು ಈ ರೀತಿಯಾಗಿ ಮಾತನಾಡಬಾರದು. ನಿನಗೆ ಧಿಕ್ಕಾರವಿರಲಿ. ನೀನು ಬೇಗ ಹಾಳಾಗಿಹೋಗುತ್ತೀಯೆ. ಹೀಗೆಂದು ಹೇಳಿ ವನದೇವತೆಗಳಿಗೆ ಅವಳನ್ನು ಒಪ್ಪಿಸಿಕೊಟ್ಟು ಬಹುವಾಗಿ ದುಃಖಿಸುತ್ತಾ ರಾಮನನ್ನು ಹುಡುಕುತ್ತಾ ಮೆಲ್ಲಮೆಲ್ಲಗೆ

ಯಯೌ ದುಃಖಾತಿಸಂವಿಗ್ನೋ ರಾಮಮೇವ ಶನೈಶ್ಶನೈಃ । ತತೋಂತರಂ ಸಮಾಲೋಕ್ಯ ರಾವಣೋ ಭಿಕ್ಷುವೇಷಧೃಕ್ ॥ ೩೭ ॥
ಸೀತಾಸಮೀಪಮಗಮತ್ಸ್ಫುರದ್ದಂಡಕಮಂಡಲುಃ । ಸೀತಾ ತಮವಲೋಕ್ಯಾಶು ನತ್ವಾ ಸಂಪೂಜ್ಯ ಭಕ್ತಿತಃ ॥ ೩೮ ॥
ಕಂದಮೂಲಫಲಾದೀನಿ ದತ್ವಾ ಸ್ವಾಗತಮಬ್ರವೀತ್ । ಮುನೇ ಭುಂಕ್ಷ್ವ ಫಲಾದೀನೀ ವಿಶ್ರಮಸ್ವ ಯಥಾಸುಖ ॥ ೩೯ ॥
ಇದಾನೀಮೇವ ಮೇ ಭರ್ತಾ ಹ್ಯಾಗಮಿಷ್ಯತಿ ತೇ ಪ್ರಿಯಂ । ಕರಿಷ್ಯತಿ ವಿಶೇಷೇಣ ತಿಷ್ಠ ತ್ವಂ ಯದಿ ರೋಚತೇ ॥ ೪೦ ॥

ಹೊರಟನು. ಈ ಸಮಯವನ್ನು ರಾವಣನು ಕಾಯುತ್ತಿದ್ದನು. ಆಗ ಸನ್ಯಾಸಿಯ ವೇಷವನ್ನು ಹಾಕಿಕೊಂಡು ಆ ಸೀತೆಯ ಹತ್ತಿರಕ್ಕೆ ಬಂದನು.

೩೮. ಕೈಯ್ಯಲ್ಲಿ ದಂಡಕಮಂಡಲುಗಳನ್ನು ಹಿಡಿದಿದ್ದನು. ಆ ಯತಿಯು ಬಂದೊಡನೆಯೇ ಸೀತೆಯು ಅವನನ್ನು ನೋಡಿ ಭಕ್ತಿಯಿಂದ ನಮಸ್ಕರಿಸಿ ಪೂಜಿಸಿದಳು.

೩೯. ಗೆಡ್ಡೆ, ಗೆಣಸು, ಹಣ್ಣು ಮುಂತಾದುವುಗಳನ್ನು ತಿನ್ನಲು ಕೊಟ್ಟು ಸುಖಾಗಮನವನ್ನು ಕೇಳಿದಳು. ಮತ್ತು ಎಲೈ ಮುನಿಯೇ ! ಈ ಹಣ್ಣು ಮುಂತಾದುವನ್ನು ತಿನ್ನು. ಸುಖವಾಗಿ ವಿಶ್ರಮಿಸಿಕೊ.

೪೦. ನನ್ನ ಗಂಡನು ಈಗಲೇ ಬರುವನು. ಅವನು ಬಂದನಂತರ ನಿನಗೇನುಬೇಕೋ ಅದೆಲ್ಲವನ್ನೂ ಮಾಡಿಕೊಡುವನು. ನಿನಗೆ ಬೇಕಾದರೆ ಅವನು ಬರುವವರೆಗೂ ಇರು.

॥ ಭಿಕ್ಷುರುವಾಚ ॥

ಕಾ ತ್ವಂ ಕಮಲಪತ್ರಾಕ್ಷಿ ಕೋ ವಾ ಭರ್ತಾ ತವಾನಘೇ । ಕಿಮರ್ಥಮತ್ರ ತೇ ವಾಸೋ ವನೇ ರಾಕ್ಷಸಸೇವಿತೇ ॥
ಬ್ರೂಹಿ ಭದ್ರೇ ತತಸ್ಸರ್ವಂ ಸ್ವವೃತ್ತಾಂತಂ ನಿವೇದಯ ॥ ೪೧ ॥

॥ ಸೀತೋವಾಚ ॥

ಅಯೋಧ್ಯಾಧಿಪತಿಶ್ಶ್ರೀಮಾನ್ರಾಜಾದಶರಥೋ ಮಹಾನ್ । ತಸ್ಯ ಜ್ಯೇಷ್ಠಃ ಸುತೋ ರಾಮಃ ಸರ್ವಲಕ್ಷಣಲಕ್ಷಿತಃ ॥ ೪೨ ॥

ತಸ್ಯಾಹಂ ಧರ್ಮತಃ ಪತ್ನೀ ಸೀತಾ ಜನಕನಂದಿನೀ । ತಸ್ಯ ಭ್ರಾತಾ ಕನೀಯಾಂಶ್ಚ ಲಕ್ಷ್ಮಣೋ ಭ್ರಾತೃವತ್ಸಲಃ ॥ ೪೩ ॥

---

೪೧. ಸನ್ಯಾಸಿಯು ಹೇಳಿದನು—ಎಲೈ ಕಮಲಾಕ್ಷಿಯೇ! ನೀನಾರು ? ನಿನ್ನ ಗಂಡನಾರು ? ರಾಕ್ಷಸರು ಇರುತ್ತಿರುವ ಈ ವನದಲ್ಲಿ ಏತಕ್ಕೋಸ್ಕರವಾಗಿ ಇದ್ದೀಯೆ ? ಅವೆಲ್ಲವನ್ನೂ ಹೇಳು. ನಿನ್ನ ಸಮಾಚಾರವೆಲ್ಲವನ್ನೂ ಹೇಳುವವಳಾಗು.

೪೨. ಸೀತೆಯು ಹೇಳಿದಳು—ಅಯೋಧ್ಯೆಯೆಂಬ ದೇಶವೊಂದಿರುವುದು. ಅದಕ್ಕೆ ರಾಜನಾದ ದಶರಥನೆಂಬುವನೊಬ್ಬನು ಬಹು ಪ್ರಸಿದ್ಧನಾಗಿರುವನು. ಅವನಿಗೆ ಹಿರಿಯಮಗನಾದ ರಾಮನೆಂಬುವನೊಬ್ಬನಿರುವನು. ಅವನು ಬಹುಲಕ್ಷಣವಂತನು.

೪೩. ನಾನು ಆತನ ಧರ್ಮಪತ್ನಿಯು. ನನ್ನ ಹೆಸರು ಸೀತೆಯೆಂದು. ನಾನು ಜನಕರಾಜನ ಮಗಳು. ಆ ರಾಮನಿಗೆ ಲಕ್ಷ್ಮಣನೆಂಬ ಒಬ್ಬ ಕಡೆಯವನಾದ ತಮ್ಮನಿರುವನು. ಅವನು ಅಣ್ಣನಲ್ಲಿ ಬಹು ಪ್ರೀತಿಯುಳ್ಳವನು.

ಪಿತುರಾಜ್ಞಾಂ ಪುರಸ್ಕೃತ್ಯ ದಂಡಕೇ ವಸ್ತುಮಾಗತಃ । ಚತುರ್ದಶಸಮಾಸ್ತ್ವಂ ತು ಜ್ಞಾತುಮಿಚ್ಛಾಮಿ ಮೇ ವದ ॥ ೪೪ ॥

॥ ಭಿಕ್ಷುರುವಾಚ ॥

ಪೌಲಸ್ತ್ಯತನಯೋಽಹಂ ತು ರಾವಣೋ ರಾಕ್ಷಸಾಧಿಪಃ । ತ್ವತ್ಕಾಮಪರಿತಪ್ತೋಽಹಂ ತ್ವಾಂ ನೇತುಂ ಪುನರಾಗತಃ ॥ ೪೫ ॥

ಮುನಿವೇಷೇಣ ರಾಮೇಣ ಕಿಂ ಕರಿಷ್ಯಸಿ ಮಾಂ ಭಜ । ಭುಂಕ್ಷ್ವ ಭೋಗಾನ್ಮಯಾ ಸಾರ್ಧಂ ತ್ಯಜ ದುಃಖಂ ವನೋದ್ಭವಂ ॥೪೬॥

ಶ್ರುತ್ವಾ ತದ್ವಚನಂ ಸೀತಾ ಭೀತಾ ಕಿಂಚಿದುವಾಚ ತಂ । ಯದೇವಂ ಭಾಷಸೇ ಮಾಂ ತ್ವಂ ನಾಶಮೇಷ್ಯಸಿ ರಾಘವಾತ್ ॥ ೪೭ ॥

---

೪೪. ಆ ರಾಮನು ತಂದೆಯ ಅಪ್ಪಣೆಯಂತೆ ದಂಡಕಾರಣ್ಯದಲ್ಲಿ ವಾಸಮಾಡಲು ಬಂದಿರುವನು. ಈ ರೀತಿಯಾಗಿ ಈ ದಂಡಕಾರಣ್ಯದಲ್ಲಿ ಹದಿನಾಲ್ಕು ವರ್ಷಗಳವರೆಗೆ ಇರಬೇಕಾಗಿದೆ. ಎಲೈ ಮುನಿಯೇ ! ನೀನಾರೆಂಬುದನ್ನು ನನಗೆ ಹೇಳು ಎಂದಳು.

೪೫. ಭಿಕ್ಷುವು ಹೇಳಿದನು—ನಾನು ಪೌಲಸ್ತ್ಯನ ಮಗನು. ರಾವಣನೆಂದು ನನ್ನ ಹೆಸರು. ರಾಕ್ಷಸರಿಗೆಲ್ಲಾ ರಾಜನು. ನಿನ್ನಲ್ಲಿ ಉಂಟಾದ ಕಾಮದಿಂದ ಬಹು ದುಃಖಗೊಂಡವನಾಗಿ ನಿನ್ನನ್ನು ಕರೆದುಕೊಂಡುಹೋಗಲು ಇಲ್ಲಿಗೆ ಬಂದಿರುವೆನು.

೪೬. ಮುನಿವೇಷದಿಂದಿದ್ದುಕೊಂಡಿರುವ ಈ ರಾಮನಿಂದ ನಿನಗೇನು ಸುಖವಿದೆ ? ನನ್ನನ್ನು ಹೊಂದು. ನನ್ನೊಡನೆ ಅನೇಕವಾದ ಭೋಗಗಳನ್ನು ಹೊಂದಿ ಅನುಭವಿಸು ಈ ಕಾಡಿನಲ್ಲಿದ್ದುಕೊಂಡು ದುಃಖಪಡಬೇಡ. ಈ ದುಃಖವೆಲ್ಲವನ್ನೂ ಬಿಟ್ಟು ಸುಖವಾಗಿರು ಎಂದನು.

೪೭. ಸೀತೆಯು ರಾವಣನ ಈ ಮಾತನ್ನು ಕೇಳಿ ಹೆದರಿದಳು. ಮತ್ತು ಆಗ ಅವನನ್ನು ಕುರಿತು ಒಂದೆರಡು ಮಾತುಗಳನ್ನಾಡಿದಳು. ಎಲೈ ರಾವಣನೇ ! ನೀನು ಈ ರೀತಿಯಾಗಿ ಮಾತನಾಡುವ ಪಕ್ಷದಲ್ಲಿ ಆ ರಾಮನಿಂದ ಖಂಡಿತವಾಗಿಯೂ ನಾಶವನ್ನು ಹೊಂದುತ್ತೀಯೆ.

ಆಗಮಿಷ್ಯತಿ ರಾಮೋಽಪಿ ಕ್ಷಣಂ ತಿಷ್ಠ ಸಹಾನುಜಃ । ಮಾಂ ಕೋ ಧರ್ಷಯಿತುಂ ಶಕ್ತೋ ಹರೇರ್ಭಾರ್ಯಾಂ ಶಶೋ ಯಥಾ॥ ೪೮ ||
ರಾಮಬಾಣೈರ್ವಿಭಿನ್ನಸ್ತ್ವಂ ಪತಿಷ್ಯಸಿ ಮಹೀತಲೇ । ಇತಿ ಸೀತಾವಚಃ ಶ್ರುತ್ವಾ ರಾವಣಃ ಕ್ರೋಧಮೂರ್ಛಿತಃ ॥ ೪೯ ||
ಸ್ವರೂಪಂ ದರ್ಶಯಾಮಾಸ ಮಹಾಪರ್ವತಸನ್ನಿಭಂ । ದಶಾಸ್ಯಂ ವಿಂಶತಿಭುಜಂ ಕಾಲಮೇಘಸಮದ್ಯುತಿ || ೫೦ ||
ತದ್ದೃಷ್ಟ್ವಾ ವನದೇವ್ಯಶ್ಚ ಭೂತಾನಿ ಚ ವಿತತ್ರಸುಃ । ತತೋ ವಿದಾರ್ಯ ಧರಣೀಂ ನಖೈರುದ್ಧೃತ್ಯ ಬಾಹುಭಿಃ || ೫೧ ||

---

೪೮. ಒಂದುಕ್ಷಣ ಹಾಗೆಯೇ ನೋಡುತ್ತಿರು. ರಾಮನೂ ಲಕ್ಷ್ಮಣನೂ ಜೊತೆಯಲ್ಲೇ ಬರುವರು. ಸಿಂಹದ ಹೆಂಡತಿಯನ್ನು ಮೊಲವು ಹೇಗೆ ತೊಂದರೆಪಡಿಸಲಾರದೋ ಹಾಗೆ ಆತನ ಹೆಂಡತಿಯಾದ ನನ್ನನ್ನು ಹಿಡಿಯಲು ಯಾರಿಗೆ ತಾನೇ ಶಕ್ತಿಯಿರುವುದು ? ನೋಡೋಣ.

೪೯. ಆಗ ರಾಮನ ಬಾಣದಿಂದ ಕತ್ತರಿಸಲ್ಪಟ್ಟು ನೀನು ನೆಲದಮೇಲೆ ಖಂಡಿತವಾಗಿಯೂ ಬೀಳುತ್ತೀಯೆ ಎಂದಳು. ಸೀತೆಯು ಹೀಗೆ ಹೇಳಿದುದನ್ನು ಕೇಳಿ ರಾವಣನು ಕೋಪಗೊಂಡನು.

೫೦. ದೊಡ್ಡ ಪರ್ವತದಂತಿರುವ ತನ್ನ ನಿಜರೂಪವನ್ನು ತೋರಿಸಿದನು. ಅವನಿಗೆ ಹತ್ತುಮುಖಗಳಿದ್ದುವು. ಇಪ್ಪತ್ತುತೋಳುಗಳಿದ್ದುವು. ಮುಂಗಾರು ಮೋಡದಂತೆ ಕಪ್ಪಾಗಿದ್ದನು,

೫೧. ರಾವಣನ ಇಂತಹ ರೂಪವನ್ನು ನೋಡಿ ವನದೇವಿಯರೂ, ಇತರ ಪ್ರಾಣಿಗಳೂ ಬಹುವಾಗಿ ಹೆದರಿದುವು. ಆಗ ರಾವಣನು ಸೀತೆಯು ನಿಂತಿರುವ ಜಾಗದಲ್ಲಿ ಭೂಮಿಯನ್ನು ಉಗುರುಗಳಿಂದ ಬಗೆದು ಸೀಳಿದನು ಆ ಭೂಮಿಯ ಸಂಗಡಲೇ ಸೀತೆಯು ಬರುವಂತೆ ತೋಳುಗಳಿಂದ ಎತ್ತಿಕೊಂಡನು.

ತೋಲಯಿತ್ವಾ ರಥೇ ಕ್ಷಿಪ್ತ್ವಾ ಯಯೌ ಕ್ಷಿಪ್ರಂ ವಿಹಾಯಸಾ । ಹಾ ರಾಮ ಹಾ ಲಕ್ಷ್ಮಣೇತಿ ರುದತೀ ಜನಕಾತ್ಮಜಾ ॥ ೫೨ ॥
ಭಯೋದ್ವಿಗ್ನಮನಾ ದೀನಾ ಪಶ್ಯಂತೀ ಭುವಮೇವ ಸಾ । ಶ್ರುತ್ವಾ ತತ್ಕ್ರಂದಿತಂ ದೀನಂ ಸೀತಾಯಾಃ ಪಕ್ಷಿಸತ್ತಮಃ ॥ ೫೩ ॥
ಜಟಾಯುರುತ್ಥಿತಃ ಶೀಘ್ರಂ ನಗಾಗ್ರಾತ್ತೀಕ್ಷ್ಣತುಂಡಕಃ । ತಿಷ್ಠ ತಿಷ್ಠೇತಿ ತಂ ಪ್ರಾಹ ಕೋ ಗಚ್ಛತಿ ಮಮಾಗ್ರತಃ ॥ ೫೪ ॥
ಮುಷಿತ್ವಾ ಲೋಕನಾಥಸ್ಯ ಭಾರ್ಯಾಂ ಶೂನ್ಯಾದ್ವನಾಲಯಾತ್ । ಶುನಕೋ ಮಂತ್ರಪೂತಂ ತ್ವಂ ಪುರೋಡಾಶಮಿವಾಧ್ವರೇ ॥ ೫೫ ॥

---

೫೨ ಆ ಭೂಮಿಯ ಸಹಿತವಾಗಿ ಸೀತೆಯನ್ನು ಉಯ್ಯಾಲೆ ಆಡಿಸುವಂತೆ ಆಡಿಸಿ ತನ್ನ ರಥದೊಳಕ್ಕೆ ಎಸೆದನು. ಅನಂತರ ಅದರಲ್ಲಿ ತಾನೂ ಕುಳಿತುಕೊಂಡು ಆಕಾಶಮಾರ್ಗದಿಂದ ಹೊರಟುಹೋದನು. ಆಗ ಆ ಸೀತೆಯು ಹೆದರಿ ಹಾರಾಮ ! ಹಾಲಕ್ಷ್ಮಣಾ ! ಎಂದೆನ್ನುತ್ತಾ ಅತ್ತಳು.

೫೩. ಅಳುತ್ತಾ ಆ ಅಳುವಿನಲ್ಲಿಯೂ ಹಾಗೆಯೇ ಕೂಗುತ್ತಾ ಭಯದಿಂದ ಕಂಗೆಟ್ಟು ದೀನಳಾಗಿ ತಾನು ಆಕಾಶದಲ್ಲಿ ಹೋಗುತ್ತಿದ್ದರೂ ನೆಲದಕಡೆಗೇನೇ ನೋಡುತ್ತಾ ಹೋಗುತ್ತಿದ್ದಳು. ಪಕ್ಷಿಶ್ರೇಷ್ಠನಾದ ಜಟಾಯುವು ಸೀತೆಯ ಈ ಅಳುವಿನ ಶಬ್ದವನ್ನು ಕೇಳಿದನು.

೫೪. ಒಡನೆಯೇ ಜಾಗ್ರತೆಯಾಗಿ ಮೇಲಕ್ಕೆದ್ದು ಉಗುರುಗಳಿಂದಲೂ ಕೊಕ್ಕುಗಳಿಂದಲೂ ಯುದ್ಧಮಾಡಲು ಸಿದ್ಧನಾದನು. ನಿಲ್ಲು. ನಿಲ್ಲು. ನಾನಿರುತ್ತಿರಲು ನನ್ನೆದುರಿಗೆ ಹೋಗುತ್ತಿರುವವನಾರು ? ಎಂಬುದಾಗಿ ರಾವಣನನ್ನು ಕುರಿತು ಕೂಗಿದನು.

೫೫. ಲೋಕನಾಥನಾದ ಶ್ರೀರಾಮನ ಹೆಂಡತಿಯನ್ನು ಅವನಿಲ್ಲದಿರುವಾಗ ಅವನ ಆಶ್ರಮದಿಂದ ಕದ್ದುಕೊಂಡು ಮಂತ್ರದಿಂದ ಪವಿತ್ರವಾಗಿರುವ ಹವಿಸ್ಸನ್ನು ಯಾಗದಲ್ಲಿ ನಾಯಿಯು ಹೊತ್ತುಕೊಂಡು ಹೋಗುತ್ತಿರುವಂತೆ ಹೋಗುತ್ತಿರುವೆಯಲ್ಲ ! ನನ್ನೆದುರಿಗೆ ಹೊತ್ತುಕೊಂಡು ಹೋಗಲು ಯಾವನಿಗೆ ಧೈರ್ಯವಿದೆ ?

ಇತ್ಯುಕ್ತ್ವಾ ತೀಕ್ಷ್ಣತುಂಡೇನ ಚೂರ್ಣಯಾಮಾಸ ತದ್ರಥಂ । ನಾಹಾನ್ಬಿಭೇದ ಪಾದಾಭ್ಯಾಂ ಚೂರ್ಣಯಾಮಾಸ ತದ್ಧನುಃ॥೫೬॥
ತತಃ ಸೀತಾಂ ಪರಿತ್ಯಜ್ಯ ರಾವಣಃ ಖಡ್ಗಮಾದದೇ । ಚಿಚ್ಛೇದ ಪಕ್ಷೌ ಸಾಮರ್ಷಃ ಪಕ್ಷಿರಾಜಸ್ಯ ಧೀಮತಃ ॥ ೫೭ ॥
ಪಪಾತ ಕಿಂಚಿಚ್ಛೇಷೇಣ ಪ್ರಾಣೇನ ಭುವಿ ಪಕ್ಷಿರಾಟ್ । ಪುನರನ್ಯರಥೇನಾಶು ಸೀತಾಮಾದಾಯ ರಾವಣಃ ॥ ೫೮ ॥
ಕ್ರೋಶಂತೀ ರಾಮರಾಮೇತಿ ತ್ರಾತಾರಂ ನಾಧಿಗಚ್ಛತಿ । ಹಾ ರಾಮ ಹಾ ಜಗನ್ನಾಥ ಮಾಂ ನ ಪಶ್ಯಸಿ ದುಃಖಿತಾಂ ॥ ೫೯ ॥

---

೫೬. ಹೀಗೆಂದು ಹೇಳುತ್ತಾ ತನ್ನ ಮೊನೆಯಾದ ಕೊಕ್ಕಿಸಿಂದ ಆ ರಥವನ್ನು ಪುಡಿಪುಡಿ ಮಾಡಿದನು. ಅವನ ಕುದುರೆಗಳನ್ನು ಕಾಲುಗಳಿಂದ ಸೀಳಿ ಕೊಂದನು. ಅವನ ಧನುಸ್ಸುಗಳನ್ನೂ ಕೂಡಾ ಕಾಲುಗಳಿಂದ ಪುಡಿಪುಡಿಯನ್ನಾಗಿ ಮಾಡಿದನು

೫೭. ಆಗ ರಾವಣನು ಸೀತೆಯನ್ನು ಬಿಟ್ಟು ಕತ್ತಿಯನ್ನು ತೆಗೆದುಕೊಂಡು ಯುದ್ಧ ಮಾಡಲು ನಿಂತನು. ಕೋಪದಿಂದ ಆ ಪಕ್ಷಿರಾಜನ ರೆಕ್ಕೆಗಳನ್ನು ಕತ್ತರಿಸಿದನು.

೫೮. ಆಗ ಆ ಪಕ್ಷಿರಾಜನು ಸ್ವಲ್ಪಪ್ರಾಣವು ಉಳಿದುಕೊಂಡಿರಲು ನೆಲದಮೇಲಕ್ಕೆ ಬಿದ್ದನು. ರಾವಣನು ಮತ್ತೊಂದು ರಥವನ್ನು ಹತ್ತಿ ಅದರಲ್ಲಿ ಸೀತೆಯನ್ನು ಇಟ್ಟುಕೊಂಡು ಹೊರಟುಹೋದನು.

೫೯. ಆಗ ಸೀತೆಯು ತನಗೆ ರಕ್ಷಕರಾರನ್ನೂ ಕಾಣದೆ ರಾಮ ! ರಾಮ ! ಎಂದೇ ಕೂಗುತ್ತಿದ್ದಳು. ಹಾ ರಾಮನೇ ! ಹಾ ಜಗನ್ನಾಥನೇ ! ನಾನು ದುಃಖಗೊಂಡಿರುವುದು ನಿನಗೆ ತಿಳಿದಿಲ್ಲವಲ್ಲ !

ರಕ್ಷಸಾ ನೀಯಮಾನಾಂ ಸ್ವಾಂ ಭಾರ್ಯಾಂ ಮೋಚಯ ರಾಘವ । ಹಾ ಲಕ್ಷ್ಮಣ ಮಹಾಭಾಗ ತ್ರಾಹಿ ಮಾಮಪರಾಧಿನೀಂ || ೬೦ ||
ವಾಕ್ಯರೇಣ ಹತಸ್ತ್ವಂ ಮೇ ಕ್ಷಂತುಮರ್ಹಸಿ ದೇವರ । ಇತ್ಯೇವಂ ಕ್ರೋಶಮಾನಾಂ ತಾಂ ರಾಮಾಗಮನಶಂಕಯಾ || ೬೧ ||
ಜಗಾಮ ವಾಯುವೇಗೇನ ಸೀತಾಮಾದಾಯ ಸತ್ವರಃ । ವಿಹಾಯಸಾ ನೀಯಮಾನಾ ಸೀತಾ ಪಶ್ಯದಧೋಮುಖೀ || ೬೨ ||
ಪರ್ವತಾಗ್ರಸ್ಥಿತಾನ್ಪಂಚ ವಾನರಾನ್ವಾರಿಜಾನನಾ । ಉತ್ತರೀಯಾರ್ಧಖಂಡೇನ ವಿಮುಚ್ಯಾಭರಣಾದಿಕಂ || ೬೩ ||
ಬಧ್ವಾ ಚಿಕ್ಷೇಪ ರಾಮಾಯ ಕಥಯಂತ್ವಿತಿ ಪರ್ವತೇ । ತತಃ ಸಮುದ್ರಮುಲ್ಲಂಘ್ಯ ಲಂಕಾಂ ಗತ್ವಾ ಸ ರಾವಣಃ || ೬೪ ||

---

೬೦. ಈ ದುಷ್ಟನಾದ ರಾವಣನು ನನ್ನನ್ನು ಹೊತ್ತುಕೊಂಡು ಹೋಗುತ್ತಿರುವನು. ಈ ದುಷ್ಟರಾಕ್ಷಸನ ದೆಸೆಯಿಂದ ನಿನ್ನ ಹೆಂಡತಿಯಾದ ನನ್ನನ್ನು ಬಿಡಿಸಿಕೊ. ಎಲೈ ಪುಣ್ಯಾತ್ಮನೂ, ಮಹಾನುಭಾವನೂ ಆದ ಲಕ್ಷ್ಮಣನೇ ! ನಾನು ಅಪರಾಧಿನಿಯು. ನನ್ನನ್ನು ಕಾಪಾಡು.

೬೧. ನಾನು ಕಠಿಣವಾದ ಮಾತುಗಳನ್ನಾಡಿ ನಿನ್ನನ್ನು ನೋಯಿಸಿದ್ದೇನೆ. ಎಲೈ ಮೈದುನನೇ ! ನನ್ನನ್ನು ಕ್ಷಮಿಸಿ ಕಾಪಾಡು. ಸೀತೆಯು ಹೀಗೆಂದು ಆಕೊಳುತ್ತಾ ಕೂಗಿಳ್ಳುತ್ತಿರಲು ರಾವನುು ಬಂದಾನೆಂಬ ಹೆದರಿಕೆಯಿಂದ ಆ ರಾವಣನು ವಾಯುವೇಗದಿಂದ ಜಾಗ್ರತೆಯಾಗಿ ಹೊರಟುಹೋದನು.

೬೨-೬೪. ಆ ರಾವಣನು ಅಂತರಿಕ್ಷದಲ್ಲಿ ಸೀತೆಯನ್ನು ಕರೆದುಕೊಂಡು ಹೋಗುತ್ತಿದ್ದರೂ ಆಕೆಯು ಕೆಳಕ್ಕೆ ನೆಲವನ್ನೇ ನೋಡುತ್ತಿದ್ದಳು. ಆಗ ಒಂದು ಪರ್ವತದಮೇಲೆ ಕುಳಿತಿದ್ದ ಐದು ಕಪಿಗಳನ್ನು ಕಂಡಳು. ತನ್ನ ಒಡವೆಗಳೆಲ್ಲವನ್ನೂ ಬಿಚ್ಚಿ ತನ್ನ ಬಟ್ಟೆಯ ಅರ್ಧವನ್ನುಹರಿದು ಅದರಲ್ಲಿ ಕಟ್ಟಿ ಇವರು ರಾಮನಿಗೆ ಹೇಳಲಿ ಎಂಬ ಬುದ್ಧಿಯಿಂದ ಆ ಪರ್ವತದ ಮೇಲೆ ಎಸೆದಳು. ರಾವಣನು ಸಮುದ್ರವನ್ನು ದಾಟಿ ಲಂಕೆಗೆ ಹೋದನು.

ಸ್ವಾಂತಃಪುರೇ ರಹಸ್ಯೇ ತಾಮಶೋಕವಿಪಿನೇಕ್ಷಿಪತ್ । ರಾಕ್ಷಸೀಭಿಃ ಪರಿವೃತಾಂ ಮಾತೃಬುದ್ಧ್ಯಾನ್ವಪಾಲಯತ್ ॥ ೬೫ ॥

ಕೃಶಾತಿದೀನಾ ಪರಿಕರ್ಮವರ್ಜಿತಾ ದುಃಖೇನ ಶುಷ್ಯದ್ವದನಾತಿವಿಹ್ವಲಾ ।
ಹಾ ರಾಮ ರಾಮೇತಿ ವಿಲಪ್ಯಮಾನಾ ಸೀತಾ ಸ್ಥಿತಾ ರಾಕ್ಷಸವೃಂದಮಧ್ಯೇ ॥ ೬೬ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ
ಸಪ್ತಮಸ್ಸರ್ಗಃ ಸಮಾಪ್ತಃ

---

೬೫. ಅಲ್ಲಿ ತನ್ನ ಅಂತಃಪುರದಲ್ಲಿ ಗುಟ್ಟಾಗಿರುವ ಒಂದು ಜಾಗವಾದ ಅಶೋಕವನದಲ್ಲಿ ಆಕೆಯನ್ನು ಇಟ್ಟನು. ಅವಳಿಗೆ ರಾಕ್ಷಸಿಯರನ್ನು ಕಾವಲು ಹಾಕಿ ಆಕೆಯನ್ನು ತಾಯಿ ಎಂಬ ಬುದ್ಧಿಯಿಂದ ಕಾಪಾಡುತ್ತಿದ್ದನು.

೬೬. ಅಲ್ಲಿ ಆಕೆಯು ಕೃಶಳಾಗಿಯೂ, ಬಹು ದುಃಖಪಡುತ್ತಲೂ, ಅಲಂಕಾರ ಮಾಡಿಕೊಳ್ಳದೆಯೂ ದುಃಖದಿಂದ ದಿನದಿನಕ್ಕೆ ಕೊರಗುತ್ತ ಹಾ ರಾಮ ! ಹಾ ರಾಮ ! ಎಂದು ಎನ್ನುತ್ತಾ ಯಾವಾಗಲೂ ಅಳುತ್ತಾ ರಾಕ್ಷಸರ ಮಧ್ಯದಲ್ಲಿದ್ದುಕೊಂಡು ಇದ್ದಳು.

ಶ್ರೀಮದಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ಏಳನೆಯಸರ್ಗವು ಮುಗಿದುದು.

ಅಥ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಅಷ್ಟಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಓಂ ಅಸ್ಯ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಅಷ್ಟಮಸರ್ಗಸ್ಯ

ಶ್ರೀ ಭಗವಾನ್ ಬಾದರಾಯಣ ಋಷಿಃ, ಗಾಯತ್ರೀ ಛಂದಃ, ಓಂ ನಮೋ ನಾರಾಯಣೋ ದೇವತಾ, ಶ್ರೀ ಲಕ್ಷ್ಮೀ ಬೀಜಂ, ಪರಮಾ ಶಕ್ತಿಃ, ಅವ್ಯಕ್ತಂ ಕೀಲಕಂ, ಅಮುಕಸಂಪುಟೀಕರಣ ಸಿದ್ಧ್ಯರ್ಥಂ ಅಮುಕಮಂತ್ರ ಲೋಮ ವಿಲೋಮ ಸಂಪುಟೀಕರಣ ದಶಾಧ್ಯಾಯೀ ಮಂತ್ರಾಷ್ಟಾಕ್ಷರ ಸಂಯುಕ್ತಂ ಅಷ್ಟಮಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ.

ಓಂ ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ಎಂಟನೆಯ ಸರ್ಗಕ್ಕೆ

ಶ್ರೀ ಭಗವಾನ್ ಬಾದರಾಯಣನು ಋಷಿಯು, ಗಾಯತ್ರೀ ಛಂದಸ್ಸು, ಓಂ ನಮೋ ನಾರಾಯಣ ಎಂಬುದು ದೇವತೆಯು, ಶ್ರೀ ಲಕ್ಷ್ಮೀಃ ಎಂಬುದು ಬೀಜವು, ಪರಮಾ ಎಂಬುದು ಶಕ್ತಿಯು, ಅವ್ಯಕ್ತಂ ಎಂಬುದು ಕೀಲಕವು, ಇಂತಹ ಸಂಪುಟೀಕರಣದ ಸಿದ್ಧಿಗೋಸ್ಕರ ಇಂತಹ ಮಂತ್ರದ ಲೋಮ ವಿಲೋಮ ಸಂಪುಟೀಕರಣದ ದಶಾಧ್ಯಾಯದಲ್ಲಿ ಎಂಟಕ್ಷರದ ಮಂತ್ರದಿಂದ ಕೂಡಿದ ಅಷ್ಟಮಸರ್ಗದ ನ್ಯಾಸ ಧ್ಯಾನ ಜಪಗಳನ್ನು ಮಾಡುತ್ತೇನೆ. ಎಂದು ಸಂಕಲ್ಪ ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ಮಾಂ ರೂಂ ತಂ ಅಂಗುಷ್ಠಾಭ್ಯಾಂ ನಮಃ

ಓಂ ಮಾಂ ರೂಂ ತಂ ತರ್ಜನೀಭ್ಯಾಂ ನಮಃ

ಓಂ ಮಾಂ ರೂಂ ತಂ ಮಧ್ಯಮಾಭ್ಯಾಂ ನಮಃ

ಓಂ ಮಾಂ ರೂಂ ತಂ ಅನಾಮಿಕಾಭ್ಯಾಂ ನಮಃ

ಓಂ ಮಾಂ ರೂಂ ತಂ ಕನಿಷ್ಠಿಕಾಭ್ಯಾಂ ನಮಃ

ಓಂ ಮಾಂ ರೂಂ ತಂ ಕರತಲಕರಪೃಷ್ಠಾಭ್ಯಾಂ ನಮಃ

|| ಅಥ ಷಡಂಗನ್ಯಾಸಃ ||

ಷಡಂಗನ್ಯಾಸವು

ಓಂ ಮಾಂ ರೂಂ ತಂ ಹೃದಯಾಯ ನಮಃ
ಓಂ ಮಾಂ ರೂಂ ತಂ ಶಿರಸೇ ಸ್ವಾಹಾ
ಓಂ ಮಾಂ ರೂಂ ತಂ ಶಿಖಾಯೈ ವಷಟ್
ಓಂ ಮಾಂ ರೂಂ ತಂ ಕವಚಾಯ ಹುಂ
ಓಂ ಮಾಂ ರೂಂ ತಂ ನೇತ್ರತ್ರಯಾಯ ವೌಷಟ್
ಓಂ ಮಾಂ ರೂಂ ತಂ ಅಸ್ತ್ರಾಯ ಫಟ್

ಓಂ ಮಾಂ ರೂಂ ತಂ ಇತಿ ದಿಗ್ಬಂಧಃ

ಓಂ ಮಾಂ ರೂಂ ತಂ ಎಂದು ದಿಗ್ಬಂಧವು

|| ಅಥ ಧ್ಯಾನಂ ||

ಧ್ಯಾನವು

ರಾಮೋ ಮಾಯಾವಿನಂ ಹತ್ವಾ ರಾಕ್ಷಸಂ ಕಾಮರೂಪಿಣಂ । ಪ್ರತಸ್ಥೇ ಸ್ವಾಶ್ರಮಂ ಗಂತುಂ ತತೋ ದೂರಾದ್ದದರ್ಶ ತಂ ||
ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ || ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.
ಪಾರಾಯಣಾಂತೇ ಪುನಃ ಹೃದಯಾದಿ ಷಡಂಗನ್ಯಾಸಂ ಕೃತ್ವಾ ಓಂ ಮಾಂ ರೂಂ ತಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್.
ಪಾರಾಯಣವಾದಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ಮಾಂ ರೂಂ ತಂ ಇತಿ ದಿಗ್ವಿಮೋಕಃ ಎಂದೆನ್ನಬೇಕು.
ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

|| ಇತಿ ಶ್ರೀ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಅಷ್ಟಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ ||
ಇಂತು ಶ್ರೀ ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ಎಂಟನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ಅಷ್ಟಮಸ್ಸರ್ಗಃ

॥ ಶ್ರೀ ಮಹಾದೇವ ಉವಾಚ ॥

ರಾಮೋ ಮಾಯಾವಿನಂ ಹತ್ವಾ ರಾಕ್ಷಸಂ ಕಾಮರೂಪಿಣಂ । ಪ್ರತಸ್ಥೇ ಸ್ವಾಶ್ರಮಂ ಗಂತುಂ ತತೋ ದೂರಾದ್ದದರ್ಶ ತಂ ॥ ೧ ॥

ಆಯಾಂತಂ ಲಕ್ಷ್ಮಣಂ ದೀನಂ ಮುಖೇನ ಪರಿಶುಷ್ಯತಾ । ರಾಘವಶ್ಚಿಂತಯಾಮಾಸ ಸ್ವಾತ್ಮನ್ಯೇವ ಮಹಾಮತಿಃ ॥ ೨ ॥

ಅಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ಎಂಟನೆಯ ಸರ್ಗವು.

೧. ಮಹಾದೇವನು ಹೇಳಿದನು–ಇತ್ತ ರಾಮನು ಮಾಯಾವಿಯಾದ ಇಷ್ಟಬಂದ ರೂಪವನ್ನು ಹೊಂದಬಲ್ಲ ಆ ಮಾರೀಚ ರಾಕ್ಷಸನನ್ನು ಕೊಂದು ತನ್ನ ಆಶ್ರಮಕ್ಕೆ ಹೋಗಲು ಹಿಂದಿರುಗಿದನು.

೨. ಆಗ ಲಕ್ಷ್ಮಣನು ತನ್ನ ಕಡೆಗೆ ಬರುತ್ತಿರುವುದನ್ನು ದೂರದಿಂದಲೇ ನೋಡಿದನು. ಆ ಲಕ್ಷ್ಮಣನು ದೀನನಾಗಿ ಮುಖವನ್ನು ಒಣಗಿಸಿಕೊಂಡು ದುಃಖದಿಂದ ಬರುತ್ತಿದ್ದನು. ಬಹುವಾದ ಬುದ್ಧಿಯುಳ್ಳ ರಾಮನು ನಡೆದುದೆಲ್ಲವನ್ನೂ ಮನಸ್ಸಿನಲ್ಲಿಯೇ ಯೋಚಿಸಿಕೊಂಡನು.

ಲಕ್ಷ್ಮಣಸ್ತ್ವನ್ನ ಜಾನಾತಿ ಮಾಯಾಸೀತಾಂ ಮಯಾ ಕೃತಾಂ । ಜ್ಞಾತ್ವಾಪ್ಯೇನಂ ವಂಚಯಿತ್ವಾ ಶೋಚಾಮಿಪ್ರಾಕೃತೋ ಯಥಾ
ಯದ್ಯಹಂ ವಿರತೋ ಭೂತ್ವಾ ತೂಷ್ಣೀಂ ಸ್ಥಾಸ್ಯಾಮಿ ಮಂದಿರೇ । ತದಾ ರಾಕ್ಷಸಕೋಟೀನಾಂ ವಧೋಪಾಯಃ ಕಥಂ ಭವೇತ್
ಯದಿ ಶೋಚಾಮಿ ತಾಂ ದುಃಖಸಂತಪ್ತಃ ಕಾಮುಕೋ ಯಥಾ । ತದಾ ಕ್ರಮೇಣಾನುಚಿನ್ವನ್ಸೀತಾಂ ಯಾಸ್ಯೇಽಸುರಾಲಯಂ ॥
ರಾವಣಂ ಸಕುಲಂ ಹತ್ವಾ ಸೀತಾಮಗ್ನೌ ಸ್ಥಿತಾಂ ಪುನಃ । ಮಯ್ಯೈವ ಸ್ಥಾಪಿತಾಂ ನೀತ್ವಾ ಯಾತಾಯೋಧ್ಯಾಮತಂದ್ರಿತಃ ॥ ೬ ॥
ಅಹಂ ಮನುಷ್ಯಭಾವೇನ ಜಾತೋಽಸ್ಮಿ ಬ್ರಹ್ಮಣಾರ್ಥಿತಃ । ಮನುಷ್ಯಭಾವಮಾಪನ್ನಃ ಕಿಂಚಿತ್ಕಾಲಂ ವಸಾಮಿ ಕೌ ॥ ೭ ॥

---

೩. ನಾನು ಮಾಡಿದ ಮಾಯಾ ಸೀತೆಯ ವಿಷಯವನ್ನು ಲಕ್ಷ್ಮಣನು ತಿಳಿದಿಲ್ಲ. ಇದೆಲ್ಲವೂ ನಾನೇ ಮಾಡಿದುದಾಗಿ ನನಗೆ ಗೊತ್ತಿದ್ದರೂ ಈ ಲಕ್ಷ್ಮಣನಿಗೆ ತಿಳಿಯದಂತೆ ಮೋಸಪಡಿಸುತ್ತಾ ವಿವೇಕ ಹೀನರಂತೆ ನಾನೂ ದುಃಖಿಸುತ್ತೇನೆ.

೪. ನಾನು ಈ ರೀತಿಯಾಗಿ ನಟಿಸದೆ ಸುಮ್ಮನೆ ಇದ್ದರೆ ಆಗ ಅನೇಕ ಕೋಟಿ ರಾಕ್ಷಸರ ವಧೆಯು ತಾನೆ ಆಗುವುದು ಹೇಗೆ? ಉಪಾಯವಾದರೂ ಏನಿರುವುದು ?

೫. ನಾನು ನನ್ನ ಹೆಂಡತಿಯನ್ನು ಕಳೆದುಕೊಂಡು ಕಾಮುಕನಂತೆ ಆಕೆಯನ್ನು ಕುರಿತು ದುಃಖಪಡುತ್ತಾ ಅವಳನ್ನೇ ಹುಡುಕುತ್ತಾ ಹೊರಟು ಕ್ರಮವಾಗಿ ಆ ರಾಕ್ಷಸನ ಮನೆಗೆ ಹುಡುಕಿಕೊಂಡು ಹೋಗುವೆನು.

೬. ಅನಂತರ ರಾವಣನನ್ನೂ, ಅವನ ಕಡೆಯವರನ್ನೂ ಕೊಂದು ನಾನೇ ಅಗ್ನಿಯಲ್ಲಿಟ್ಟಿರುವ ಆ ಸೀತೆಯನ್ನು ಹೊಂದಿ ಅಯೋಧ್ಯೆಗೆ ಸುಖವಾಗಿ ಹೋಗುತ್ತೇನೆ.

೭. ಬ್ರಹ್ಮನು ನನ್ನನ್ನು ಕೇಳಿಕೊಂಡುದರಿಂದ ನಾನು ಮನುಷ್ಯನಾಗಿ ಹುಟ್ಟಿದ್ದೇನೆ. ಈ ಮನುಷ್ಯಭಾವದಿಂದಲೇ ಕೊಂಚಕಾಲ ಈ ಭೂಮಿಯಲ್ಲಿ ವಾಸಮಾಡುತ್ತೇನೆ.

ತತೋ ಮಾಯಾಮನುಷ್ಯಸ್ಯ ಚರಿತಂ ಮೇನುಶೃಣ್ವತಾಂ । ಮುಕ್ತಿಸ್ಸ್ಯಾದಪ್ರಯಾಸೇನ ಭಕ್ತಿಮಾರ್ಗಾನುವರ್ತಿನಾಂ ॥ ೮ ॥
ನಿಶ್ಚಿತ್ಯೈವಂ ತದಾ ದೃಷ್ಟ್ವಾ ಲಕ್ಷ್ಮಣಂ ವಾಕ್ಯಮಬ್ರವೀತ್ । ಕಿಮರ್ಥಮಾಗತೋಽಸಿ ತ್ವಂ ಸೀತಾಂ ತ್ಯಕ್ತ್ವಾ ಮಮ ಪ್ರಿಯಾಂ
ನೀತಾ ವಾ ಭಕ್ಷಿತಾ ವಾ ಸಾ ರಾಕ್ಷಸೈರ್ಜನಕಾತ್ಮಜಾ । ಇತ್ಯಾಕರ್ಣ್ಯ ವಚಸ್ತಸ್ಯ ರಾಮಸ್ಯ ಪರಮಾತ್ಮನಃ ॥ ೧೦ ॥
ನನಾಮ ಶಿರಸಾ ಭಕ್ತ್ಯಾ ಬಾಷ್ಪವ್ಯಾಕುಲಿತೇಕ್ಷಣಃ । ಲಕ್ಷ್ಮಣಃ ಪ್ರಾಂಜಲಿಃ ಪ್ರಾಹ ಸೀತಾಯಾ ದುರ್ವಚೋ ರುದನ್ ॥ ೧೧ ॥

---

೮. ಅನಂತರ ಮಾಯೆಯಿಂದ ಮನುಷ್ಯರೂಪವನ್ನು ಹೊಂದಿರುವ ನನ್ನ ಚರಿತ್ರೆಯನ್ನು ಕೇಳುವವರಿಗೆ ಭಕ್ತಿಮಾರ್ಗದಿಂದ ಸುಲಭವಾಗಿ ಮುಕ್ತಿಯು ಬರುವುದು.

೯. ಈ ರೀತಿಯಾಗಿ ತಾನು ನಿಶ್ಚಯಿಸಿಕೊಂಡು ಲಕ್ಷ್ಮಣನನ್ನು ನೋಡಿ ಇಂತೆಂದನು. ಎಲೈ ಲಕ್ಷ್ಮಣನೇ ! ನನ್ನ ಪ್ರೀತಿಪಾತ್ರಳಾದ ಆ ಸೀತೆಯನ್ನು ನೀನೇಕೆ ಬಿಟ್ಟುಬಂದೆ ?

೧೦-೧೧. ನೀನು ಆಕೆಯನ್ನು ಬಿಟ್ಟುಬಂದುದರಿಂದ ಆಕೆಯನ್ನು ರಾಕ್ಷಸರು ತಿಂದುಬಿಡಬಹುದು. ಇಲ್ಲದಿದ್ದರೆ ಆಕೆಯನ್ನು ಕದ್ದುಕೊಂಡು ಹೋಗಬಹುದು ಎಂದನು. ರಾಮನು ಹೀಗೆನ್ನಲು ಆ ಮಾತನ್ನು ಲಕ್ಷ್ಮಣನು ಕೇಳಿ ಒಡನೆಯೇ ನಮಸ್ಕರಿಸಿ ದುಃಖದಿಂದ ಕಣ್ಣಿನ ತುಂಬ ನೀರನ್ನು ತುಂಬಿಸಿಕೊಂಡನು. ಮತ್ತು ಅಳುತ್ತಾ ಕೈಮುಗಿದುಕೊಂಡು ಸೀತೆಯು ಹೇಳಿದ ಕಠಿಣವಾದ ಮಾತುಗಳನ್ನು ಹೇಳಿದನು.

ಹಾ ಲಕ್ಷ್ಮಣೇತಿ ವಚನಂ ರಾಕ್ಷಸೋಕ್ತಂ ಶ್ರುತಂ ತಯಾ । ತ್ವದ್ವಾಕ್ಯಸದೃಶಂ ಭೀತಾ ಮಾಂ ಗಚ್ಛೇತಿ ತ್ವರಾಬ್ರವೀತ್ ॥ ೧೨ ॥

ರುದತೀ ಸಾ ಮಯಾ ಚೋಕ್ತಾ ದೇವಿ ರಾಕ್ಷಸಭಾಷಿತಂ । ನೇದಂ ರಾಮಸ್ಯ ವಚನಂ ಸ್ವಸ್ಥಾ ಭವ ಶುಭಾನನೇ ॥ ೧೩ ॥

ಇತ್ಯೇವಂ ಸಾಂತ್ವಿತಾ ಸಾಧ್ವೀ ಮಯಾ ಪ್ರೋವಾಚ ಮಾಂ ಪುನಃ । ಯದುಕ್ತಂ ದುರ್ವಚೋ ರಾಮ ನ ವಾಚ್ಯಂ ಪುರತಸ್ತವ ॥

ಕರ್ಣೌ ಪಿಧಾಯ ನಿರ್ಗತ್ಯ ಯಾತೋಽಹಂ ತ್ವಾಂ ಸಮೀಕ್ಷಿತುಂ । ರಾಮಸ್ತು ಲಕ್ಷ್ಮಣಂ ಪ್ರಾಹ ತಥಾಪ್ಯನುಚಿತಂ ಕೃತಂ ॥ ೧೫ ॥

---

೧೨. ಹಾ ಲಕ್ಷ್ಮಣಾ ! ಎಂದು ರಾಕ್ಷಸನು ನಿನ್ನಂತೆ ಕೂಗಿದನು ಅದು ಅವಳಿಗೆ ಕೇಳಿಸಿತು. ಆ ಮಾತನ್ನು ಕೇಳಿ ಸೀತೆಯು ಹೆದರಿ ಜಾಗ್ರತೆಯಾಗಿ ನಿನ್ನ ಬಳಿಗೆ ಹೋಗೆಂಬುದಾಗಿ ನನಗೆ ಹೇಳಿದಳು.

೧೩. ಹೀಗೆಂದು ಹೇಳಿ ಆಕೆಯು ಅಳುತ್ತಿರಲು ಎಲೈ ದೇವಿಯೇ ! ಇದು ರಾಕ್ಷಸನ ಮಾತು. ರಾಮನ ಮಾತಲ್ಲ. ನೀನು ಸುಮ್ಮನಿರು ಎಂದೆನು.

೧೪. ನಾನು ಹೀಗೆಂದು ಹೇಳಿ ಸಮಾಧಾನಪಡಿಸಿದರೂ ಆಕೆಯು ನನ್ನನ್ನು ಕುರಿತು ಮತ್ತೆ ಇಂತೆಂದಳು. ಅವಳು ನನ್ನನ್ನು ಕುರಿತು ಆಡಿದ ಆ ಕೆಟ್ಟ ಮಾತುಗಳನ್ನು ನಿನ್ನೆದುರಿಗೆ ಹೇಳಬಾರದು.

೧೫. ಒಡನೆಯೇ ಅದನ್ನು ಕೇಳಲಾರದೆ ಕಿವಿಗಳನ್ನು ಮುಚ್ಚಿಕೊಂಡೆನು. ನಿನ್ನನ್ನು ನೋಡಲು ಹೊರಟೆನು ಎಂದನು. ಆಗ ರಾಮನು ಲಕ್ಷ್ಮಣನನ್ನು ಕುರಿತು ಆದರೂ ನೀನು ಮಾಡಬಾರದುದನ್ನು ಮಾಡಿದೆ.

ತ್ವಯಾ ಸ್ತ್ರೀಭಾಷಿತಂ ಸತ್ಯಂ ಕೃತ್ವಾ ತ್ಯಕ್ತಾ ಶುಭಾನನಾ । ನೀತಾ ವಾ ಭಕ್ಷಿತಾ ವಾಪಿ ರಾಕ್ಷಸೈರ್ನಾತ್ರ ಸಂಶಯಃ ॥ ೧೬ ॥

ಇತಿ ಚಿಂತಾಪರೋ ರಾಮಸ್ಸ್ವಾಶ್ರಮಂ ತ್ವರಿತೋ ಯಯೌ । ತತ್ರಾದೃಷ್ಟ್ವಾ ಜನಕಜಾಂ ವಿಲಲಾಪಾತಿದುಃಖಿತಃ ॥ ೧೭ ॥

ಹಾ ಪ್ರಿಯೇ ಕ್ವ ಗತಾಸಿ ತ್ವಂ ನಾಸಿ ಪೂರ್ವವದಾಶ್ರಮೇ । ಅಥವಾ ಮದ್ವಿನೋದಾರ್ಥಂ ಲೀಲಯಾ ಕ್ವ ವಿಲೀಯಸೇ ॥ ೧೮ ॥

ಇತ್ಯಾಚಿನ್ವನ್ವನಂ ಸರ್ವಂ ನಾಪಶ್ಯಜ್ಜಾನಕೀಂ ತದಾ । ವನದೇವ್ಯಃ ಕುತಸ್ಸೀತಾ ಬ್ರುವಂತು ಮಮ ವಲ್ಲಭಾಂ ॥ ೧೯ ॥

---

೧೬. ನೀನು ಹೆಂಗಸಿನ ಮಾತನ್ನು ನಿಜವೆಂದು ನಂಬಿ ಆಕೆಯ ಮಾತಿಗೆ ಬೆಲೆಯನ್ನು ಕೊಟ್ಟು ಬಿಟ್ಟು ಬಂದೆಯಲ್ಲಾ. ರಾಕ್ಷಸರು ಆಕೆಯನ್ನು ಹೊತ್ತುಕೊಂಡು ಹೋಗಿರಬಹುದು. ಅಥವಾ ತಿಂದಿರಬಹುದು. ಇದರಲ್ಲಿ ಸಂಶಯವಿಲ್ಲ.

೧೭. ಎಂಬುದಾಗಿ ಚಿಂತೆಗೊಳಗಾದವನಾಗಿ ರಾಮನು ಜಾಗ್ರತೆಯಾಗಿ ತನ್ನ ಆಶ್ರಮಕ್ಕೆ ಹೊರಟನು. ಅಲ್ಲಿ ಸೀತೆಯನ್ನು ಕಾಣದೆ ಬಹುವಾಗಿ ದುಃಖಿಸಿದನು.

೧೮. ಎಲೈ ಪ್ರಿಯಳೇ । ನೀನು ಎಲ್ಲಿ ಹೋಗಿದ್ದೀಯೆ ? ಮೊದಲಿನಂತೆ ಆಶ್ರಮದಲ್ಲಿ ಇಲ್ಲವಲ್ಲಾ ! ಹಾಗಿಲ್ಲದಿದ್ದರೆ ನನ್ನನ್ನು ಹಾಸ್ಯ ಮಾಡಲು ಎಲ್ಲಿಯಾದರೂ ಮರೆಯಾಗಿರುವೆಯಾ ?

೧೯. ಹೀಗೆಂದು ಹೇಳುತ್ತಾ ಅಲ್ಲಿರುವ ಆಶ್ರಮದೆಲ್ಲೆಲ್ಲವೂ ಹುಡುಕಿದನು. ಅಲ್ಲೆಲ್ಲಿಯೂ ಜಾನಕಿಯು ಸಿಕ್ಕಲೇ ಇಲ್ಲ. ಆಗ ಎಲೈ ವನದೇವತೆಗಳಿರಾ ! ನನ್ನ ವಲ್ಲಭೆಯಾದ ಸೀತೆಯು ಎಲ್ಲಿ ಹೋದಳು ?

ಮೃಗಾಶ್ಚ ಪಕ್ಷಿಣೋ ವೃಕ್ಷಾ ದರ್ಶಯಂತು ಮಮ ಪ್ರಿಯಾಂ । ಇತ್ಯೇವಂ ವಿಲಪನ್ನೇವ ರಾಮಸ್ಸೀತಾಂ ನ ಕುತ್ರಚಿತ್ ‖ ೨೦ ‖
ಸರ್ವಜ್ಞಸ್ಸರ್ವಥಾ ಕ್ವಾಪಿ ನಾಪಶ್ಯದ್ರಘುನಂದನಃ । ಆನಂದೋಽಪ್ಯಸ್ವಶೋಚತ್ತಾಮಚಲೋಽಪ್ಯನುಧಾವತಿ ‖ ೨೧ ‖
ಮಮ ಜಾಯೇತಿ ಸೀತೇತಿ ವಿಲಲಾಪಾತಿದುಃಖಿತಃ । ಏವಂ ಮಾಯಾಮನುಚರನ್ನಸಕ್ತೋಽಪಿ ರಘೂತ್ತಮಃ ‖ ೨೨ ‖

---

೨೦. ಎಲೈ ಮೃಗಗಳಿರಾ! ಪಕ್ಷಿಗಳಿರಾ! ವೃಕ್ಷಗಳಿರಾ! ನನ್ನ ಹೆಂಡತಿಯೆಲ್ಲಿರುವಳೆಂದು ತೋರಿಸಿರಿ. ಹೀಗೆಂದು ಎಲ್ಲವನ್ನೂ ಕೇಳುತ್ತಾ ಅಲ್ಲೆಲ್ಲವೂ ಹುಡುಕುತ್ತಾ ಬಂದನು. ಅಲ್ಲೆಲ್ಲಿಯೂ ಸೀತೆಯು ಸಿಕ್ಕಲೇ ಇಲ್ಲ.

೨೧. ತಾನು ಸರ್ವಜ್ಞನಾದರೂ ಆ ರಾಮನು ಮನುಷ್ಯವೇಷಕ್ಕೆ ಅಧೀನನಾಗಿ ಪೂರ್ತಿಯಾಗಿ ಹುಡುಕಿದರೂ ಎಲ್ಲಿಯೂ ಕಾಣಲಿಲ್ಲ. ರಾಮನು ತಾನು ಆನಂದಮಯನಾದರೂ ಅವಳನ್ನು ಕುರಿತು ದುಃಖಿಸಿದನು. ತಾನು ಚಲಿಸದ ಪರಮಾತ್ಮನಾದರೂ ಅವಳನ್ನು ಹುಡುಕಿಕೊಂಡು ಅಲೆಯುತ್ತಿರುವನು. ಅಹಂಭಾವ ಮಮಕಾರಗಳಿಲ್ಲದವನಾದರೂ ಅಖಂಡನೂ, ಆನಂದರೂಪನೂ ಆದರೂ ನನ್ನ ಹೆಂಡತಿಯು, ನನ್ನ ಸೀತೆಯು ಎಂದು ಕೂಗಿಕೊಂಡು ಬಹುವಾಗಿ ಅಳುತ್ತಿದ್ದನು.

೨೨. ಆ ರಘೂತ್ತಮನಾದ ರಾಮನು ಮಾಯೆಗೆ ಅಧೀನನಲ್ಲದಿದ್ದರೂ ಅದಕ್ಕೆ ಅಧೀನನಾದವನಂತೆ ಸಂಚರಿಸುತ್ತಾ ದಡ್ಡನಿಗೆ ಅವನು ಮನುಷ್ಯನು ದುಃಖಪಡುತ್ತಿದ್ದಾನೆ. ಎನ್ನುವಂತಿದ್ದನು. ಆದರೆ ತತ್ವವನ್ನು ತಿಳಿದವರು ಮಾತ್ರ ಇವನು ಪರಮಾತ್ಮನು, ಇವನು ಮಾಯೆಗೆ ಅಧೀನನಲ್ಲ ಎಂದು ತಿಳಿದಿದ್ದರು.

ಆಸಕ್ತ ಇವ ಮೂಢಾನಾಂ ಭಾತಿ ತತ್ವ ವಿದಾಂ ನ ಹಿ । ಏವಂ ವಿಚಿನ್ವಂತ್ಸಕಲಂ ವನಂ ರಾಮುಸ್ಸಲಕ್ಷ್ಮಣಃ ॥ ೨೩ ॥
ಭಗ್ನಂ ರಥಂ ಛತ್ರಚಾಪಂ ಕೂಬರಂ ಪತಿತಂ ಭುವಿ । ದೃಷ್ಟ್ವಾ ಲಕ್ಷ್ಮಣಮಾಹೇದಂ ಪಶ್ಯ ಲಕ್ಷ್ಮಣ ಕೇನ ಚಿತ್ ॥ ೨೪ ॥
ನೀಯಮಾನಾಂ ಜನಕಜಾಂ ತಂ ಜಿತ್ವಾನ್ಯೋ ಜಹಾರ ತಾಂ । ತತಃ ಕಂಚಿದ್ಭುವೋ ಭಾಗಂ ಗತ್ವಾ ಪರ್ವತಸನ್ನಿಭಂ ॥ ೨೫ ॥
ರುಧಿರಾಕ್ತವಪುರ್ದೃಷ್ಟ್ವಾ ರಾಮೋ ವಾಕ್ಯಮಥಾಽಬ್ರವೀತ್ । ಏಷ ವೈ ಭಕ್ಷಯಿತ್ವಾ ತಾಂ ಜಾನಕೀಂ ಶುಭದರ್ಶನಾಂ ॥ ೨೬ ॥

---

೨೩. ಈ ರೀತಿಯಾಗಿ ರಾಮನು ಲಕ್ಷ್ಮಣನೊಡನೆ ಆ ಕಾಡಿನಲ್ಲೆಲ್ಲಾ ಹುಡುಕುತ್ತಾ ಬಂದನು. ಅಲ್ಲಿ ಒಂದು ಜಾಗದಲ್ಲಿ ರಥ, ಧನುಸ್ಸು ಛತ್ರಿ, ರಥದ ಅಚ್ಚು ಇವು ಮುರಿದು ನೆಲದಮೇಲೆ ಬಿದ್ದಿದ್ದುವು.

೨೪. ಆಗ ರಾಮನು ಲಕ್ಷ್ಮಣನನ್ನು ಕುರಿತು ಎಲೈ ಲಕ್ಷ್ಮಣನೇ ! ಇಲ್ಲಿ ನೋಡು ಯಾವನೋ ಸೀತೆಯನ್ನು ಅಪಹರಿಸಿಕೊಂಡು ಹೋಗುತ್ತಿದ್ದಾಗ ಅದನ್ನು ನೋಡಿ ಮತ್ತೊಬ್ಬನು ಆಕೆಯನ್ನು ಅಪಹರಿಸಲು ಬಂದು ಅವನನ್ನು ಜಯಿಸಿ ತಾನು ಹೊತ್ತುಕೊಂಡು ಹೋಗಿರುವನು.

೨೫. ಎಂದು ಹೇಳುತ್ತಾ ಮುಂದಕ್ಕೆ ಸ್ವಲ್ಪದೂರ ಹೋಗಲು ಪರ್ವತದಂತೆ ದೊಡ್ಡದಾಗಿ ಮೈಯೆಲ್ಲವೂ ರಕ್ತವಾಗಿದ್ದ ಒಂದು ವ್ಯಕ್ತಿಯನ್ನು ನೋಡಿ ರಾಮನು ಲಕ್ಷ್ಮಣನಿಗೆ ಹೀಗೆಂದನು.

೨೬. ಎಲೈ ಲಕ್ಷ್ಮಣನೇ ! ಇಗೋ ಇಲ್ಲಿರುವ ಇವನು ಮನೋಹರಳಾದ ಜಾನಕಿಯನ್ನು ತಿಂದು ಬಹುವಾಗಿ ತೃಪ್ತಿ ಹೊಂದಿ ನಿರ್ಬಾಧಕವಾಗಿರುವ ಈ ಜಾಗದಲ್ಲಿ ಬಂದು ಸುಖವಾಗಿ ಮಲಗಿದ್ದಾನೆ. ಈ ರಾಕ್ಷಸನನ್ನು ಕೊಲ್ಲುವೆನು.

ಶೇತೇ ವಿವಿಕ್ತೇತಿತೃಪ್ತಃ ಪಶ್ಯ ಹನ್ಮಿ ನಿಶಾಚರಂ । ಚಾಪಮಾನಯ ಶೀಘ್ರಂ ಮೇ ಬಾಣಂ ಚ ರಘುನಂದನ ॥ ೨೭ ॥
ತಚ್ಛ್ರುತ್ವಾ ರಾಮವಚನಂ ಜಟಾಯುಃ ಪ್ರಾಹ ಭೀತವತ್ । ಮಾಂ ನ ಮಾರಯ ಭದ್ರಂ ತೇ ಪ್ರಿಯಮಾಣಂ ಸ್ವಕರ್ಮಣಾ ॥
ಅಹಂ ಜಟಾಯುಸ್ತೇ ಭಾರ್ಯಾಹಾರಿಣಂ ಸಮನುದ್ರುತಃ । ರಾವಣಂ ತತ್ರ ಯುದ್ಧಂ ಮೇ ಬಭೂವಾರಿವಿಮರ್ದನ ॥ ೨೯ ॥
ತಸ್ಯ ವಾಹಾನ್ರಥಂ ಚಾಪಿ ಛಿತ್ವಾಹಂ ತೇನ ಘಾತಿತಃ । ಪತಿತೋಸ್ಮಿ ಜಗನ್ನಾಥ ಪ್ರಾಣಾಂಸ್ತ್ಯಕ್ಷ್ಯಾಮಿ ಪಶ್ಯ ಮಾಂ ॥ ೩೦ ॥

---

೨೭. ಬೇಗನೆ ನನ್ನ ಕೈಯ್ಯಿಗೆ ಬಾಣವನ್ನೂ, ಧನುಸ್ಸನ್ನೂ ಕೊಡು ಎಂದನು. ರಾಮನು ಹೇಳಿದ ಈ ಮಾತನ್ನು ಕೇಳಿ ಜಟಾಯುವು ಹೆದರಿಕೊಂಡು ಇಂತೆಂದನು.

೨೮. ಎಲೈ ರಾಮನೇ ! ನಿನಗೆ ಒಳ್ಳೆಯದಾಗಲಿ. ನಾನು ಮಾಡಿದ ಕೆಲಸದಿಂದ ಈಗ ಸಾಯುತ್ತಿದ್ದೇನೆ. ಇಂತಹವನನ್ನು ಮತ್ತೆ ನೀನು ಹೊಡೆಯಬೇಡ. ನಾನು ಜಟಾಯುವು. ನಿನ್ನ ಹೆಂಡತಿಯನ್ನು ಕದ್ದುಕೊಂಡು ಹೋಗುತ್ತಿದ್ದವನನ್ನು ಓಡಿಸಿಕೊಂಡು ಹೋಗಿ ಎದುರಿಸಿದೆನು.

೨೯. ಅವನು ರಾಕ್ಷಸ ರಾಜನಾದ ರಾವಣನಾಗಿದ್ದನು. ಅವನೊಡನೆ ನನಗೆ ಬಹು ಭಯಂಕರವಾದ ಯುದ್ಧವು ನಡೆಯಿತು. ಆ ರಾವಣನೊಡನೆ ಯುದ್ಧ ಮಾಡುತ್ತಾ ಅವನ ಕುದುರೆಗಳನ್ನೂ, ರಥವನ್ನೂ ನಾಶಪಡಿಸಿದೆನು. ಅದರಿಂದ ಅವನು ನನ್ನನ್ನು ಹೊಡೆದನು.

೩೦. ಇಗೋ ನಾನು ಕೆಳಗೆ ಬಿದ್ದಿದ್ದೇನೆ. ಇಗೋ ! ನನ್ನ ಪ್ರಾಣಗಳನ್ನು ಬಿಡುತ್ತಿದ್ದೇನೆ. ಇಲ್ಲಿ ನನ್ನನ್ನು ನೋಡು ಎಂದನು. ಅದನ್ನು ಕೇಳಿ ರಾಮನು ದುಃಖಪಡುತ್ತಿರುವ, ಪ್ರಾಣಗಳು ಕತ್ತಿನವರೆಗೂ ಒತ್ತಿಕೊಂಡು ಬರುತ್ತಿರುವ ಆ ಜಟಾಯುವನ್ನು ನೋಡಿದನು.

ತಚ್ಛ್ರುತ್ವಾ ರಾಘವೋ ದೀನಂ ಕಂಠಪ್ರಾಣಂ ದದರ್ಶ ಹ । ಹಸ್ತಾಭ್ಯಾಂ ಸಂಸ್ಪೃಶನ್ರಾಮೋ ದುಃಖಾಶ್ರುವೃತಲೋಚನಃ॥೩೧॥
ಜಟಾಯೋ ಬ್ರೂಹಿ ಮೇ ಭಾರ್ಯಾ ಕೇನ ನೀತಾ ಶುಭಾನನಾ । ಮತ್ಕಾರ್ಯಾರ್ಥಂ ಹತೋಽಸಿ ತ್ವಂ ತೇನ ಮೇ ಪ್ರಿಯಬಾಂಧವಃ॥೩೨॥
ಜಟಾಯುಃ ಸನ್ನಯಾ ವಾಚಾ ವಕ್ತ್ರಾದ್ರಕ್ತಂ ಸಮುದ್ವಮನ್ । ಉವಾಚ ರಾವಣೋ ರಾಮ ರಾಕ್ಷಸೋ ಭೀಮವಿಕ್ರಮಃ ॥ ೩೩ ॥
ಆದಾಯ ಮೈಥಿಲೀಂ ಸೀತಾಂ ದಕ್ಷಿಣಾಭಿಮುಖೋ ಯಯೌ । ಇತೋ ವಕ್ತುಂ ನ ಶಕ್ನೋಮಿ ಪ್ರಾಣಾಂಸ್ತ್ಯಕ್ಷ್ಯಾಮಿ ತೇಽಗ್ರತಃ

---

೩೧. ದುಃಖದಿಂದ ಕಣ್ಣೀರು ಬಿಡುತ್ತಿರುವ ಆ ರಾಮನು ಅವನನ್ನು ಕೈಗಳಿಂದ ಸವರಿದನು. ಮತ್ತು ಎಲೈ ಜಟಾಯುವೇ ! ನನ್ನ ಹೆಂಡತಿಯಾದ ಸೀತೆಯನ್ನು ಯಾರು ಕದ್ದುಕೊಂಡು ಹೋಗಿರುವರು ?

೩೨. ನೀನು ನನ್ನ ಕಾರ್ಯಕ್ಕೋಸ್ಕರ ಹೋಗಿರುವಾಗ ಕೊಲ್ಲಲ್ಪಟ್ಟಿಯಾದುದರಿಂದ ನೀನು ನನಗೆ ಪ್ರಿಯಬಂಧುವು. ಎನ್ನಲು ಆಗ ಜಟಾಯುವು ಬಾಯಿಂದ ರಕ್ತವನ್ನು ಸುರಿಸುತ್ತಾ ಕುಗ್ಗಿದ ಧ್ವನಿಯಿಂದ ಇಂತೆಂದನು.

೩೩. ಎಲೈ ಪ್ರಿಯನೇ ! ರಾವಣನೆಂಬ ರಾಕ್ಷಸನಿರುವನು. ಅವನು ಬಹು ಪರಾಕ್ರಮಿಯು. ಅವನು ಸೀತೆಯನ್ನು ತೆಗೆದುಕೊಂಡು ದಕ್ಷಿಣದಿಕ್ಕಿಗೆ ಹೋದನು.

೩೪. ಇನ್ನು ಮೇಲೆ ಮಾತನಾಡಲು ನನಗೆ ಶಕ್ತಿಯಿಲ್ಲ. ನಿನ್ನ ಎದುರಿಗೇ ಪ್ರಾಣಬಿಡುತ್ತೇನೆ. ನೋಡು. ಎಲೈ ರಾಮನೇ ! ಪ್ರಾಣ ಹೋಗುತ್ತಿರುವಾಗ ನೀನು ನನ್ನ ಕಣ್ಣಿಗೆ ಬಿದ್ದಿದ್ದೀಯೆ.

ದಿಷ್ಟ್ಯಾ ದೃಷ್ಟೋಽಸಿ ರಾಮ ತ್ವಂ ಮ್ರಿಯಮಾಣೇನ ಮೇಽನಘ । ಪರಮಾತ್ಮಾಸಿ ವಿಷ್ಣುಸ್ತ್ವಂ ಮಾಯಾಮನುಜರೂಪಧೃಕ್ ॥ ೩೫ ॥
ಅಂತಕಾಲೇಽಪಿ ದೃಷ್ಟ್ವಾ ತ್ವಾಂ ಮುಕ್ತೋಽಹಂ ರಘುಸತ್ತಮ । ಹಸ್ತಾಭ್ಯಾಂ ಸ್ಪೃಶ ಮಾಂ ರಾಮ ಪುನರ್ಯಾಸ್ಯಾಮಿ ತೇ ಪದಂ ॥
ತಥೇತಿ ರಾಮಃ ಪಸ್ಪರ್ಶ ತದಂಗಂ ಪಾಣಿನಾ ಸ್ಮಯನ್ । ತತಃ ಪ್ರಾಣಾನ್ಪರಿತ್ಯಜ್ಯ ಜಟಾಯುಃ ಪತಿತೋ ಭುವಿ ॥ ೩೭ ॥
ರಾಮಸ್ತಮನುಶೋಚಿತ್ವಾ ಬಂಧುವತ್ಸಾಶ್ರುಲೋಚನಃ । ಲಕ್ಷ್ಮಣೇನ ಸಮಾನಾಯ್ಯ ಕಾಷ್ಠಾನಿ ಪ್ರದದಾಹ ತಂ ॥ ೩೮ ॥

---

೩೫. ನೀನು ಪರಮಾತ್ಮನು. ಆ ವಿಷ್ಣುವೇ ಅವತರಿಸಿದ್ದೀಯೆ. ಮಾಯೆಯಿಂದ ಮನುಷ್ಯಾವತಾರವನ್ನು ಮಾಡಿದ್ದೀಯೆ. ಎಲೈ ರಾಮನೇ ! ಸಾಯುವಾಗ ನಿನ್ನನ್ನು ನಾನು ನೋಡಿದುದರಿಂದ ಮುಕ್ತಿಯನ್ನು ಹೊಂದಿದೆನು.

೩೬. ಎಲೈ ರಾಮನೇ ! ನೀನು ನನ್ನನ್ನು ಕೈಯ್ಯಿಂದ ಮುಟ್ಟು. ಹಾಗೆ ಮುಟ್ಟಿದರೆ ಆದರಿಂದ ನಿನ್ನ ಪದವಾದ ವೈಕುಂಠವನ್ನೇ ಹೊಂದುತ್ತೇನೆ. ಎನ್ನಲು ಆಗ ರಾಮನು ನಗುತ್ತಾ ಆ ಜಟಾಯುವಿನ ಮೈಯ್ಯನ್ನು ಸವರಿದನು.

೩೭. ಒಡನೆಯೇ ಆ ಜಟಾಯುವು ಪ್ರಾಣಗಳನ್ನು ಬಿಟ್ಟು ನೆಲದಮೇಲೆ ಬಿದ್ದನು. ಆಗ ರಾಮನು ಬಂಧುವಿನಂತೆ ಆ ಜಟಾಯುವಿನ ವಿಷಯದಲ್ಲಿ ದುಃಖಿಸಿದನು. ಕಣ್ಣಿನ ತುಂಬ ನೀರು ಬಂದಿತು.

೩೮. ಅನಂತರ ಲಕ್ಷ್ಮಣನಿಂದ ಸೌದೆಯನ್ನು ತರಸಿ ಚಿತಿಯನ್ನು ಒಡ್ಡಿ ಆ ಜಟಾಯುವಿನ ದೇಹವನ್ನು ಸುಟ್ಟನು. ಅನಂತರ ಆ ರಾಮ ಲಕ್ಷ್ಮಣರು ದುಃಖದಿಂದ ಸೂತಕ ಸ್ನಾನವನ್ನು ಮಾಡಿದರು.

ಸ್ನಾತ್ವಾ ದುಃಖೇನ ರಾಮೋಽಪಿ ಲಕ್ಷ್ಮಣೇನ ಸಮನ್ವಿತಃ । ಹತ್ವಾ ವನೇ ಮೃಗಂ ತತ್ರ ಮಾಂಸಖಂಡಾನ್ಸಮಂತತಃ ॥ ೩೯ ॥

ಶಾದ್ವಲೇ ಪ್ರಾಕ್ಷಿಪದ್ರಾಮಃ ಪೃಥಕ್ಪೃಥಗನೇಕಧಾ । ಭಕ್ಷಂತು ಪಕ್ಷಿಣಸ್ಸರ್ವೇ ತೃಪ್ತೋ ಭವತು ಪಕ್ಷಿರಾಟ್ ॥ ೪೦ ॥

ಇತ್ಯುಕ್ತ್ವಾ ರಾಘವಃ ಪ್ರಾಹ ಜಟಾಯೋ ಗಚ್ಛ ಮತ್ಪದಂ । ಮತ್ಸಾರೂಪ್ಯಂ ಭಜಸ್ವಾದ್ಯ ಸರ್ವಲೋಕಸ್ಯ ಪಶ್ಯತಃ ॥ ೪೧ ॥

ತತೋಽನಂತರಮೇವಾಸೌ ದಿವ್ಯರೂಪಧರಃ ಶುಭಃ । ವಿಮಾನವರಮಾರುಹ್ಯ ಭಾಸ್ವರಂ ಭಾನುಸನ್ನಿಭಂ ॥ ೪೨ ॥

---

೩೯. ಅನಂತರ ಆ ಕಾಡಿನಲ್ಲಿ ಮೃಗಗಳನ್ನು ಕೊಂದು ಅದನ್ನು ಚೂರು ಚೂರು ಮಾಡಿ ಆ ಚೂರುಗಳನ್ನು ಹಸಳೆಯಮೇಲೆ ಅಲ್ಲಲ್ಲೇ ಗುಡ್ಡೆಗಳನ್ನಾಗಿಟ್ಟನು.

೪೦. ಪಕ್ಷಿಗಳೆಲ್ಲವೂ ತಿನ್ನಲಿ. ಇದರಿಂದ ಪಕ್ಷಿರಾಜನಾದ ಜಟಾಯುವು ತೃಪ್ತಿಹೊಂದಲಿ. ಹೀಗೆಂದು ಹೇಳುತ್ತಾ ರಾಮನು ಎಲೈ ಜಟಾಯುವೇ ! ನೀನು ನನ್ನ ಸ್ಥಾನವಾದ ವೈಕುಂಠವನ್ನು ಹೊಂದು ಎಂದನು.

೪೧. ಎಲ್ಲರೂ ನೋಡುತ್ತಿರುವಂತೆಯೇ ಈಗಲೇ ನೀನು ನನ್ನ ಸಾರೂಪ್ಯವನ್ನು ಹೊಂದು. ಎನ್ನಲು ಒಡನೆಯೇ ಈ ಜಟಾಯುವು ಒಳ್ಳೆಯದಾಗಿರುವ ಮನೋಹರವಾದ ರೂಪವನ್ನು ಹೊಂದಿದನು.

೪೨. ಪ್ರಕಾಶಮಾನವಾದ ಸೂರ್ಯನಂತಿರುವ ವಿಮಾನವು ಬರಲು ಆ ವಿಮಾನದಲ್ಲಿ ಕುಳಿತನು. ಶಂಖ, ಚಕ್ರ, ಗದೆ, ಪದ್ಮ, ಕಿರೀಟ, ಒಡವೆ ಎಲ್ಲವನ್ನೂ ಧರಿಸಿದ್ದನು.

ಶಂಖಚಕ್ರಗದಾಪದ್ಮಕಿರೀಟವರಭೂಷಣೈಃ । ದ್ಯೋತಯನ್ ಸ್ವಪ್ರಕಾಶೇನ ಪಿತಾಂಬರಧರೋಽಮಲಃ ॥ ೪೩ ॥

ಚತುರ್ಭಿಃ ಪಾರ್ಷದೈರ್ವಿಷ್ಣೋಸ್ತಾದೃಶೈ ರಭಿಪೂಜಿತಃ । ಸ್ತೂಯಮಾನೋ ಮುನಿಗಣೈ ರಾಮಮಾಭಾಷ್ಯ ಸತ್ವರಃ ॥

ಕೃತಾಂಜಲಿಪುಟೋ ಭೂತ್ವಾ ತುಷ್ಟಾವ ರಘುನಂದನಂ । ॥ ೪೪ ॥

॥ ಜಟಾಯುರು ವಾಚ ॥

ಉಪರಮುಪರಮಂ ಪರಾತ್ಮಭೂತಂ ಸತತಮಹಂ ಪ್ರಣತೋಽಸ್ಮಿ ರಾಮಚಂದ್ರಂ ।

ಅಗಣಿತಗುಣಮಪ್ರಮೇಯಮಾದ್ಯಂ ಸಕಲಜಗತ್‌ಸ್ಥಿತಿಸಂಯಮಾದಿಹೇತುಂ ॥ ೪೫ ॥

೪೩–೪೪. ಚೆನ್ನಾಗಿರುವ ಪೀತಾಂಬರವನ್ನು ಧರಿಸಿದ್ದನು. ಇವೆಲ್ಲದರಿಂದ ಹತ್ತುದಿಕ್ಕುಗಳನ್ನೂ ಕಾಂತಿಯುಳ್ಳದ್ದನ್ನಾಗಿ ಮಾಡುತ್ತಿದ್ದನು. ತನ್ನಂತೆಯೇ ಶಂಖ, ಚಕ್ರ, ಗದಾ, ಪದ್ಮಧಾರಿಗಳಾದ ವಿಷ್ಣುವಿನ ನಾಲ್ಕುಜನ ಆಳುಗಳಿಂದ ಗೌರವಿಸಲ್ಪಡುತ್ತಾ ಹೊಗಳಿಸಿಕೊಳ್ಳುತ್ತಿದ್ದನು. ಮುನಿಗಳೂ ಕೂಡಾ ಅವನನ್ನು ಹೊಗಳುತ್ತಿದ್ದರು. ಆಗ ಜಟಾಯುವು ಕೈಮುಗಿದುಕೊಂಡು ಶ್ರೀರಾಮನನ್ನು ಹೊಗಳಿದನು.

೪೫. ಜಟಾಯುವು ಹೇಳಿದನು–ಅಸಂಖ್ಯಾಕವಾದ ಗುಣಗಳುಳ್ಳ ಅಳತೆಗೆ ಸಿಕ್ಕದ, ಆದಿಭೂತನಾದ, ಸಕಲ ಪ್ರಪಂಚವೂ ನಿಲ್ಲಲು ಮೊದಲನೆಯ ಕಾರಣನಾದ, ಶಾಂತಿಗುಣವೇ ಬಹುವಾಗಿರುವ ಎಲ್ಲಾ ಪ್ರಾಣಿಗಳಿಗೂ ಆತ್ಮಸ್ವರೂಪನಾದ, ಆ ರಾಮಚಂದ್ರನನ್ನು ನಾನು ಯಾವಾಗಲೂ ನಮಸ್ಕರಿಸುತ್ತೇನೆ.

ನಿರವಧಿಸುಖಮಿಂದಿರಾಕಟಾಕ್ಷಂ ಕ್ಷಪಿತಸುರೇಂದ್ರ ಚತುರ್ಮುಖಾದಿದುಃಖಂ ।
ನರವರಮನಿಶಂ ನತೋಽಸ್ಮಿ ರಾಮಂ ವರದಮಮುಂ ವರಚಾಪಬಾಣಹಸ್ತಂ ॥ ೪೬ ॥

ತ್ರಿಭುವನಕಮನೀಯರೂಪಮೀಡ್ಯಂ ರವಿಶತಭಾಸುರಮೀಹಿತಪ್ರದಾನಂ ।
ಶರಣದಮನಿಶಂ ಸುರಾಗಮೂಲೇ ಕೃತನಿಲಯಂ ರಘುನಂದನಂ ಪ್ರಪದ್ಯೇ ॥ ೪೭ ॥

ಭವವಿಪಿನದವಾಗ್ನಿನಾಮಧೇಯಂ ಭವಮುಖದೈವತದೈವತಂ ದಯಾಳುಂ ।
ದನುಜಪತಿಸಹಸ್ರಕೋಟಿನಾಶಂ ರವಿತನಯಾಸದೃಶಂ ಹರಿಂ ಪ್ರಪದ್ಯೇ ॥ ೪೮ ॥

---

೪೬. ಕಡೆಗಾಣದ ಸುಖವುಳ್ಳ ಎಂದರೆ ಸುಖಸ್ವರೂಪನಾದ ಲಕ್ಷ್ಮಿಯು ತನ್ನ ಮೇಲೆ ಅನುಗ್ರಹ ಮೂಡಲು ಮುಖ್ಯ ಕಾರಣನಾದ ಬ್ರಹ್ಮನೇ ಮುಂತಾದ ದೇವತೆಗಳ ದುಃಖಗಳನ್ನು ನಾಶಮಾಡಿರುವ ನರಶ್ರೇಷ್ಠನಾದ, ಧನುರ್ಬಾಣಗಳನ್ನು ಕೈಯ್ಯಲ್ಲಿ ಹಿಡಿದಿರುವ ವರವನ್ನು ಕೊಡುವ ಆ ಶ್ರೀರಾಮನನ್ನು ಯಾವಾಗಲೂ ನಮಸ್ಕರಿಸುತ್ತೇನೆ.

೪೭. ಮೂರುಲೋಕವೂ ಮೋಹಿಸುವಂತೆ ರೂಪವುಳ್ಳ, ಹೊಗಳಲು ಯೋಗ್ಯನಾದ, ನೂರಾರುಜನ ಸೂರ್ಯರಂತೆ ಪ್ರಕಾಶಮಾನನಾದ, ಕೇಳಿದುದನ್ನು ಕೊಡುವ, ಜಸತ್ತಿಗೆ ರಕ್ಷಕನಾದ, ಯಾವಾಗಲೂ ಪ್ರೀತಿಯನ್ನುಳ್ಳ, ಕಲ್ಪವೃಕ್ಷದ ಬುಡದಲ್ಲಿ ಮನೆ ಮಾಡಿಕೊಂಡಿರುವ ರಘುನಂದನನಾದ ಆ ಶ್ರೀರಾಮನನ್ನು ಶರಣುಹೊಂದುತ್ತೇನೆ.

೪೮. ಸಂಸಾರವೆಂಬ ಕಾಡಿಗೆ ಕಾಳ್ಗಿಚ್ಚೆಂಬ ಹೆಸರುಳ್ಳ ಶಿವನೇ ಮುಂತಾದ ದೇವತೆಗಳಿಗೂ ದೇವರಾದ, ದಯಾಳುವಾದ, ಸಾವಿರಾರು ರಾಕ್ಷಸಾಧಿಪರನ್ನು ಕೊಂದಿರುವ, ಸೂರ್ಯನ ಮಗಳಾದ ಯಮುನೆಯಂತೆ ಬಣ್ಣವುಳ್ಳ ರಾಮರೂಪನಾದ ಹರಿಯನ್ನು ಶರಣು ಹೊಂದುತ್ತೇನೆ.

ಅವಿರತಭವಭಾವನಾತಿದೂರಂ ಭವವಿಮುಖೈರ್ಮುನಿಭಿಃ ಸದೈವ ದೃಶ್ಯಂ ।
ಭವಜಲಧಿಸುತಾರಣಾಂಘ್ರಿಪೋತಂ ಶರಣಮಹಂ ರಘುನಂದನಂ ಪ್ರಪದ್ಯೇ ॥ ೪೯ ॥
ಗಿರಿಶಗಿರಿಸುತಾಮನೋನಿವಾಸಂ ಗಿರಿವರಧಾರಣಮಹಿತಾಭಿರಾಮಂ ।
ಸುರವರದನುಜೇಂದ್ರಸೇವಿತಾಂಘ್ರಿಂ ಸುರವರದಂ ರಘುನಾಯಕಂ ಪ್ರಪದ್ಯೇ ॥ ೫೦ ॥
ಪರಧನಪರದಾರವರ್ಜಿತಾನಾಂ ಪರಗುಣಭೂತಿಷು ತುಷ್ಟಮಾನಸಾನಾಂ ।
ಪರಹಿತನಿರತಾತ್ಮನಾಂ ಸುಸೇವ್ಯಂ ರಘುವರಮಂಬುಜಲೋಚನಂ ಪ್ರಪದ್ಯೇ ॥ ೫೧ ॥

---

೪೯. ಸಂಸಾರವನ್ನೇ ದೊಡ್ಡದೆಂದು ತಿಳಿದು ಅದರಲ್ಲಿಯೇ ಆಸಕ್ತರಾಗಿರುವವರಿಗೆ ಕಾಣಲು ಬಹುದೂರದಲ್ಲಿರುವ ಸಂಸಾರವು ನಿಸ್ಸಾರವೆಂದು ಹೇಸಿ ದೂರವಾಗಿರುವ ಮುನಿಗಳಿಗೆ ಯಾವಾಗಲೂ ದರ್ಶನವನ್ನು ಕೊಡುತ್ತಿರುವ ಸಂಸಾರವೆಂಬ, ಸಮುದ್ರವನ್ನು ದಾಟಲು ಬಹು ಸುಲಭರೂಪವಾದ ದೋಣಿಯಂತಿರುವ ಈ ರಘುನಂದನನನ್ನು ನಾನು ಯಾವಾಗಲೂ ಶರಣು ಹೊಂದುತ್ತೇನೆ.

೫೦. ಪಾರ್ವತಿಪರಮೇಶ್ವರರ ಮನಸ್ಸಿನಲ್ಲಿಯೇ ಯಾವಾಗಲೂ ವಾಸಮಾಡುತ್ತಿರುವ, ಗೋವರ್ಧನ ಪರ್ವತವನ್ನು ಎತ್ತಿ ಹಿಡಿದಿರುವ, ಕೇಳಿದುದನ್ನು ದಯಪಾಲಿಸುವ, ದೇವದಾನವರಿಂದಲೂ ಸೇವಿಸಲ್ಪಡುತ್ತಿರುವ ಪಾದಗಳುಳ್ಳ, ದೇವತೆಗಳಿಗೂ ವರದಾನ ಮಾಡುವ, ರಘುನಾಯಕನಾದ ಶ್ರೀರಾಮನನ್ನು ಶರಣು ಹೊಂದುತ್ತೇನೆ.

೫೧. ಪರರ ಹಣ ಮತ್ತು ಪರರ ಹೆಂಡಿರುಗಳಲ್ಲಿ ಆಸಕ್ತರಾಗದವರಿಗೂ, ಪರರ ಗುಣ, ಪರರ ಐಶ್ವರ್ಯಗಳನ್ನು ನೋಡಿ ಸಂತೋಷಗೊಳ್ಳುವವರಿಗೂ, ಪರರ ಹಿತದಲ್ಲಿಯೇ ಆಸಕ್ತರಾದವರಿಗೂ ಸುಖವಾಗಿ ಸೇವಿಸಲು ಸಿಕ್ಕುವ ಕಮಲಾಕ್ಷನಾದ ಆ ಶ್ರೀರಾಮನನ್ನು ಶರಣು ಹೊಂದುತ್ತೇನೆ.

ಸ್ಮಿತರುಚಿರವಿಕಾಸಿತಾನನಾಬ್ಜಂ ಅತಿಸುಲಭಂ ಸುರರಾಜನೀಲನೀಲಂ ।
ಸಿತಜಲರುಹಚಾರುನೇತ್ರಶೋಭಂ ರಘುಪತಿಮೀಶಗುರೋರ್ಗುರುಂ ಪ್ರಪದ್ಯೇ ॥ ೫೨ ॥

ಹರಿಕಮಲಜಶಂಭುರೂಪಭೇದಾತ್ತ್ವಮಿಹ ವಿಭಾಸಿ ಗುಣತ್ರಯಾನುವೃತ್ತಃ ।
ರವಿರಿವಜಲಪೂರಿತೋದಪಾತ್ರೇಷ್ವಮರಪತಿಸ್ತುತಿಪಾತ್ರಮೀಶಮೀಡೇ ॥ ೫೩ ॥

ರತಿಪತಿಶತಕೋಟಿಸುಂದರಾಂಗಂ ಶತಪಥಗೋಚರಭಾವನಾವಿದೂರಂ ।
ಯತಿಪತಿಹೃದಯೇ ಸದಾ ವಿಭಾಂತಂ ರಘುಪತಿಮಾರ್ತಿಹರಂ ಪ್ರಭುಂ ಪ್ರಪದ್ಯೇ ॥ ೫೪ ॥

---

೫೨. ಮುಗುಳುನಗೆಯಿಂದ ಮನೋಹರವಾಗಿ ಅಗಲವಾಗಿರುವ ಮುಖ ಪಂಕೆಜವುಳ್ಳ, ಭಕ್ತರಿಗೆ ಬಹುಸುಲಭವಾದ, ಇಂದ್ರನೀಲರತ್ನದಂತೆ ಕಪ್ಪಗಿರುವ, ಬೆಳ್ಳಗಿರುವ ಕಮಲದಂತೆ ಕಾಂತಿಯುಳ್ಳ, ಈಶ್ವರನಿಗೂ ಗುರುವಾದ, ಬ್ರಹ್ಮನಿಗೂ ತಂದೆಯಾದ ರಘುಪತಿಯಾದ ಆ ರಾಮನನ್ನು ನಾನು ಯಾವಾಗಲೂ ಶರಣುಹೊಂದುತ್ತೇನೆ.

೫೩. ಸತ್ವರಜಸ್ತಮೋಗುಣಗಳೆಂಬ ಮೂರುಗುಣಗಳನ್ನು ಹೊಂದಿ ಬ್ರಹ್ಮ, ವಿಷ್ಣು, ಶಿವ ಎಂಬುದಾಗಿ ಅವತರಿಸಿರುವ ತಾನೊಬ್ಬನೇ ಆಗಿದ್ದರೂ ನೀರನ್ನು ತುಂಬಿರುವ ಬೇರೆಬೇರೆ ಪಾತ್ರೆಗಳಲ್ಲಿ ಸೂರ್ಯನು ಹೇಗೆ ಬೇರೆಬೇರೆಯಾಗಿ ಕಾಣುತ್ತಾನೆಯೋ ಹಾಗೆ ಬೇರಬೇರೆಯಾಗಿ ಕಾಣುತ್ತಿರುವ, ದೇವೇಂದ್ರನ ಸ್ತುತಿಗೆ ಪಾತ್ರನಾದ ಶ್ರೀರಾಮನನ್ನು ನಮಸ್ಕರಿಸುತ್ತೇನೆ.

೫೪. ನೂರುಕೋಟಿ ಮನ್ಮಥರಂತೆ ಬಹು ಸುಂದರವಾದ ಶತಪಥವೆಂಬ ವೇದವನ್ನು ಓದುವವರಿಗೆ ಜಾಗ್ರತೆಯಾಗಿ ಕಂಗೊಳಿಸುವ ಯತಿವರ್ಯರ ಹೃದಯದಲ್ಲಿ ಯಾವಾಗಲೂ ಪ್ರಕಾಶಿಸುತ್ತಿರುವ, ಕಷ್ಟವನ್ನು ಪರಿಹಾರ ಮಾಡುವ, ರಘುಪತಿಯಾದ ಶ್ರೀರಾಮನನ್ನು ನಮಸ್ಕರಿಸುತ್ತೇನೆ.

ಇತ್ಯೇವಂ ಸ್ತುವತಸ್ತಸ್ಯ ಪ್ರಸನ್ನೋಽಭೂದ್ರಘೂತ್ತಮಃ । ಉವಾಚ ಗಚ್ಛ ಭದ್ರಂ ತೇ ಮಮ ವಿಷ್ಣೋಃ ಪರಂ ಪದಂ || ೫೫ ||
ಶೃಣೋತಿ ಯ ಇದಂ ಸ್ತೋತ್ರಂ ಲಿಖೇದ್ವಾ ನಿಯತಃ ಪಠೇತ್ । ಸ ಯಾತಿ ಮಮ ಸಾರೂಪ್ಯಂ ಮರಣೇ ಮತ್ಸ್ಮೃತಿಂ ಲಭೇತ್ ||

ಇತಿರಾಘವಭಾಷಿತಂ ತದಾ ಶ್ರುತವಾನ್ ಹರ್ಷಸಮಾಕುಲೋ ದ್ವಿಜಃ ।
ರಘುನಂದನಸಾಮ್ಯಮಾಸ್ಥಿತಃ ಪ್ರಯಯೌ ಬ್ರಹ್ಮಸುಪೂಜಿತಂ ಪದಂ || ೫೭ ||

ಇತಿ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ
ಅಷ್ಟಮಸ್ಸರ್ಗಃ ಸಮಾಪ್ತಃ

---

೫೫. ಜಟಾಯುವು ಈ ರೀತಿಯಾಗಿ ಸ್ತುತಿಸುತ್ತಿರಲು ರಘೂತ್ತಮನಾದ, ದಾಶರಥಿಯಾದ ಆ ಶ್ರೀರಾಮನು ಅವನಿಗೆ ಪ್ರಸನ್ನನಾದನು ಅವನನ್ನು ಕುರಿತು ಎಲೈ ಜಟಾಯುವೆ ! ನೀನು ನನ್ನ ಸ್ಥಾನವಾದ ಪರಮಪದವಾದ ವೈಕುಂಠಕ್ಕೆ ಹೋಗು ಎಂದನು.

೫೬. ಈ ಸ್ತೋತ್ರವನ್ನು ಕೇಳಿದವನೂ, ಬರೆದು ಓದುವವನೂ ಕೂಡಾ ಸಾಯುವಾಗ ನನ್ನನ್ನೇ ಸ್ಮರಿಸುತ್ತಾ ಕೊನೆಯಲ್ಲಿ ನನ್ನ ಸಾರೂಪ್ಯವನ್ನು ಹೊಂದಿ ನನ್ನ ಪದವಾದ ವೈಕುಂಠವನ್ನು ಹೊಂದುತ್ತಾರೆ.

೫೭. ಆ ಜಟಾಯುವು ರಾಮನು ಹೇಳಿದ ಈ ಮಾತನ್ನು ಕೇಳಿ ಸಂತೋಷಗೊಂಡು ಆ ರಾಮನಿಗೆ ಸಮಾನವಾದ ರೂಪವನ್ನೇ ಹೊಂದಿ ಅನಂತರ ಬ್ರಹ್ಮಾದಿಗಳಿಂದ ಪೂಜಿತವಾದ ವೈಕುಂಠವನ್ನು ಹೊಂದಿದನು.

ಇಂತು ಶ್ರೀಮದಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ಎಂಟನೆಯ ಸರ್ಗವು ಮುಗಿದುದು.

ಅಥ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ನವಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಓಂ ಅಸ್ಯ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ನವಮಸರ್ಗಸ್ಯ

ಶ್ರೀ ಭಗವಾನ್ ಬಾದರಾಯಣ ಋಷಿಃ, ಗಾಯತ್ರೀ ಛಂದಃ, ಓಂ ನಮೋ ನಾರಾಯಣೋ ದೇವತಾ, ಶ್ರೀ ಲಕ್ಷ್ಮೀ ಬೀಜಂ, ಪರಮಾ ಶಕ್ತಿಃ, ಅವ್ಯಕ್ತಂ ಕೀಲಕಂ, ಅಮುಕಸಂಪುಟೀಕರಣ ಸಿದ್ಧ್ಯರ್ಥಂ ಅಮುಕಮಂತ್ರ ಲೋಮ ವಿಲೋಮ ಸಂಪುಟೀಕರಣ ದಶಾಧ್ಯಾಯೇ ಮಂತ್ರಾಷ್ಟಾಕ್ಷರ ಸಂಯುಕ್ತಂ ನವಮಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ.

ಓಂ ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ಒಂಬತ್ತನೆಯ ಸರ್ಗಕ್ಕೆ

ಶ್ರೀ ಭಗವಾನ್ ಬಾದರಾಯಣನು ಋಷಿಯು, ಗಾಯತ್ರೀ ಛಂದಸ್ಸು, ಓಂ ನಮೋ ನಾರಾಯಣ ಎಂಬುದು ದೇವತೆಯು, ಶ್ರೀ ಲಕ್ಷ್ಮೀಃ ಎಂಬುದು ಬೀಜವು, ಪರಮಾ ಎಂಬುದು ಶಕ್ತಿಯು, ಅವ್ಯಕ್ತಂ ಎಂಬುದು ಕೀಲಕವು, ಇಂತಹ ಸಂಪುಟೀಕರಣದ ಸಿದ್ಧಿಗೋಸ್ಕರ ಇಂತಹ ಮಂತ್ರದ ಲೋಮ ವಿಲೋಮ ಸಂಪುಟೀಕರಣದ ದಶಾಧ್ಯಾಯದಲ್ಲಿ ಎಂಟಕ್ಷರದ ಮಂತ್ರದಿಂದ ಕೂಡಿದ ನವಮಸರ್ಗದ ನ್ಯಾಸ ಧ್ಯಾನ ಜಪಗಳನ್ನು ಮಾಡುತ್ತೇನೆ. ಎಂದು ಸಂಕಲ್ಪ ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ಮಾಂ ರೂಂ ಕಾಂ ಅಂಗುಷ್ಠಾಭ್ಯಾಂ ನಮಃ
ಓಂ ಮಾಂ ರೂಂ ಕಾಂ ತರ್ಜನೀಭ್ಯಾಂ ನಮಃ
ಓಂ ಮಾಂ ರೂಂ ಕಾಂ ಮಧ್ಯಮಾಭ್ಯಾಂ ನಮಃ
ಓಂ ಮಾಂ ರೂಂ ಕಾಂ ಅನಾಮಿಕಾಭ್ಯಾಂ ನಮಃ
ಓಂ ಮಾಂ ರೂಂ ಕಾಂ ಕನಿಷ್ಠಿಕಾಭ್ಯಾಂ ನಮಃ
ಓಂ ಮಾಂ ರೂಂ ಕಾಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಷಡಂಗನ್ಯಾಸವು

ಓಂ ಮಾಂ ರೂಂ ಕಾಂ ಹೃದಯಾಯ ನಮಃ
ಓಂ ಮಾಂ ರೂಂ ಕಾಂ ಶಿರಸೇ ಸ್ವಾಹಾ
ಓಂ ಮಾಂ ರೂಂ ಕಾಂ ಶಿಖಾಯೈ ವಷಟ್
ಓಂ ಮಾಂ ರೂಂ ಕಾಂ ಕವಚಾಯ ಹುಂ
ಓಂ ಮಾಂ ರೂಂ ಕಾಂ ನೇತ್ರತ್ರಯಾಯ ವೌಷಟ್
ಓಂ ಮಾಂ ರೂಂ ಕಾಂ ಅಸ್ತ್ರಾಯ ಫಟ್

ಓಂ ಮಾಂ ರೂಂ ಕಾಂ ಇತಿ ದಿಗ್ಬಂಧಃ
ಓಂ ಮಾಂ ರೂಂ ಕಾಂ ಎಂದು ದಿಗ್ಬಂಧವು

॥ ಅಥ ಧ್ಯಾನಂ ॥

ಧ್ಯಾನವು

ತತೋ ರಾಮೋ ಲಕ್ಷ್ಮಣೇನ ಜಗಾಮ ವಿಪಿನಾಂತರಂ । ಪುನರ್ದುಃಖಂ ಸಮಾಶ್ರಿತ್ಯ ಸೀತಾನ್ವೇಷಣತತ್ಪರಃ ॥

ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಪಾರಾಯಣಾಂತೇ ಪುನಃ ಹೃದಯಾದಿ ಷಡಂಗನ್ಯಾಸಂ ಕೃತ್ವಾ ಓಂ ಮಾಂ ರೂಂ ಕಾಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್.
ಪಾರಾಯಣವಾದಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ಮಾಂ ರೂಂ ಕಾಂ ಇತಿ ದಿಗ್ವಿಮೋಕಃ ಎಂದೆನ್ನಬೇಕು.
ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

॥ ಇತಿ ಶ್ರೀ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ನವಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ ॥
ಇಂತು ಶ್ರೀ ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ಒಂಬತ್ತನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

॥ ಶ್ರೀರಸ್ತು ॥

ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ನವಮಸ್ಸರ್ಗಃ

॥ ಶ್ರೀ ಮಹಾದೇವ ಉವಾಚ ॥

ತತೋ ರಾಮೋ ಲಕ್ಷ್ಮಣೇನ ಜಗಾಮ ವಿಪಿನಾಂತರಂ । ಪುನರ್ದುಃಖಂ ಸಮಾಶ್ರಿತ್ಯ ಸೀತಾನ್ವೇಷಣತತ್ಪರಃ ॥ ೧ ॥

ತತ್ರಾದ್ಭುತತಮಾಕಾರೋ ರಾಕ್ಷಸಃ ಪ್ರತ್ಯದೃಶ್ಯತ । ವಕ್ಷಸ್ಯೇವ ಮಹಾವಕ್ತ್ರಶ್ಚಕ್ಷುರಾದಿವಿವರ್ಜಿತಃ ॥ ೨ ॥

ಶ್ರೀಮದಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ಒಂಬತ್ತನೆಯ ಸರ್ಗವು.

೧. ಮಹಾದೇವನು ಹೇಳಿದನು—ಅನಂತರ ಆ ರಾಮನು ಲಕ್ಷ್ಮಣನೊಡನೆ ಬೇರೆ ಕಾಡಿಗೆ ಹೋದನು. ಮತ್ತೆ ದುಃಖಪಡುತ್ತಾ ಸೀತೆಯನ್ನು ಹುಡುಕುವುದರಲ್ಲಿ ಆಸಕ್ತನಾಗಿ ಅಲ್ಲಲ್ಲಿ ಹುಡುಕುತ್ತಾ ಮುಂದುಮುಂದಕ್ಕೆ ಹೋಗುತ್ತಿದ್ದನು.

೨. ಆ ಕಾಡಿನಲ್ಲಿ ಅದ್ಭುತವಾದ ಆಕಾರವುಳ್ಳ ಒಬ್ಬ ರಾಕ್ಷಸನನ್ನು ನೋಡಿದರು. ಅವನಿಗೆ ಎದೆಯಲ್ಲಿ ಬಾಯಿಯಿದ್ದಿತು. ಕಣ್ಣು ಕಿವಿ ಮುಂತಾದುವುಗಳಿರಲಿಲ್ಲ.

ಬಾಹೂ ಯೋಜನಮಾತ್ರೇಣ ವ್ಯಾವೃತೌ ತಸ್ಯ ರಕ್ಷಸಃ । ಕಬಂಧೋ ನಾಮ ದೈತ್ಯೇಂದ್ರಸ್ಸರ್ವಸತ್ವವಿಹಿಂಸಕಃ ॥ ೩ ॥

ತದ್ಬಾಹ್ವೋರ್ಮಧ್ಯದೇಶೇ ತೌ ಚರಂತೌ ರಾಮಲಕ್ಷ್ಮಣೌ । ದದರ್ಶತುರ್ಮಹಾಸತ್ವಂ ತದ್ಬಾಹುಪರಿವೇಷ್ಟಿತೌ ॥ ೪ ॥

ರಾಮಃ ಪ್ರೋವಾಚ ವಿಹಸನ್ ಪಶ್ಯ ಲಕ್ಷ್ಮಣ ರಾಕ್ಷಸಂ । ಶಿರಃಪಾದವಿಹೀನೋಽಯಂ ಯಸ್ಯ ವಕ್ಷಸಿ ಚಾನನಂ ॥ ೫ ॥

ಬಾಹುಭ್ಯಾಂ ಲಭ್ಯತೇ ಯದ್ಯತ್ತತ್ತದ್ಭಕ್ಷ್ಯನ್ ಸ್ಥಿತೋ ಧ್ರುವಂ । ಆವಾಮಪ್ಯೇತಯೋರ್ಬಾಹ್ವೋರ್ಮಧ್ಯೇ ಸಂಕಲಿತೌ ಧ್ರುವಂ ॥ ೬ ॥

---

೩. ಅವನ ತೋಳುಗಳು ಒಂದು ಯೋಜನದಗಲಕ್ಕೆ ಉದ್ದವಾಗಿದ್ದುವು. ಅವನು ಎಲ್ಲಾ ಪ್ರಾಣಿಗಳನ್ನೂ ಹಿಂಸಿಸುತ್ತಿದ್ದನು. ಅವನ ಹೆಸರು ಕಬಂಧನೆಂಬುದಾಗಿ ಇದ್ದಿತು.

೪. ಅವನು ಕೈಯ್ಯನ್ನು ಹಾಕಿದರೆ ಮಧ್ಯಪ್ರದೇಶದಲ್ಲಿ ಸಿಕ್ಕುವಂತೆ ಈ ರಾಮಲಕ್ಷ್ಮಣರು ಸಂಚರಿಸುತ್ತಿದ್ದರು. ಅಂತೆಯೇ ಅವನು ಅವರಿಬ್ಬರನ್ನೂ ಬಾಚಿ ಹಿಡಿದನು ಆಗ ಇವರು ಈ ಮಹಾಬಲಿಷ್ಠನನ್ನು ನೋಡಿದರು.

೫. ಆಗ ರಾಮನು ನಗುತ್ತಾ ಲಕ್ಷ್ಮಣನನ್ನು ಕುರಿತು ಎಲೈ ಲಕ್ಷ್ಮಣನೇ ! ಈ ರಾಕ್ಷಸನನ್ನು ನೋಡು. ಇವನಿಗೆ ತಲೆಯಿಲ್ಲ. ಕಾಲುಗಳಿಲ್ಲ. ಇವನಿಗೆ ಎದೆಯಲ್ಲಿ ಮುಖವಿದೆ.

೬. ಇವನು ಕೈಯ್ಯನ್ನು ನೀಡಿದರೆ ಯಾವುಯಾವುವು ಸಿಕ್ಕುತ್ತವೆಯೋ ಅವನ್ನೆಲ್ಲಾ ತಿನ್ನುತ್ತಾ ಇದ್ದುಕೊಂಡಿರುವನು. ನಾವೂ ಕೂಡಾ ಇವನ ತೋಳುಗಳ ಮಧ್ಯೆ ಸಿಕ್ಕಿದ್ದೇವೆ.

ಗಂತುಮನ್ಯತ್ರ ಮಾರ್ಗೋ ನ ದೃಶ್ಯತೇ ರಘುನಂದನ । ಕಿಂ ಕರ್ತವ್ಯಮಿತೋಸ್ಮಾಭಿರಿದಾನೀಂ ಭಕ್ಷಯೇತ್ಸ ನೌ ॥ ೭ ॥

ಲಕ್ಷ್ಮಣಸ್ತಮುವಾಚೇದಂ ಕಿಂ ವಿಚಾರೇಣ ರಾಘವ । ಆವಾಮೇಕೈಕಮುವ್ಯಗ್ರೌ ಛಿಂದ್ಯಾಂ ರಕ್ಷೋಭುವೌ ಧ್ರುವಂ ॥ ೮ ॥

ತಥೇತಿ ರಾಮಃ ಖಡ್ಗೇನ ಭುಜಂ ದಕ್ಷಿಣಮುಚ್ಛಿನತ್ । ತಥೈವ ಲಕ್ಷ್ಮಣೋ ವಾಮಂ ಚಿಚ್ಛೇದ ಭುಜಮುಂಜಸಾ ॥ ೯ ॥

ತತೋತಿವಿಸ್ಮಿತೋ ದೈತ್ಯಃ ಕೌ ಯುವಾಂ ಸುರಪುಂಗವೌ । ಮದ್ಬಾಹುಚ್ಛೇದಕೌ ಲೋಕೇ ದಿವಿ ದೇವೇಷು ವಾ ಕುತಃ ॥ ೧೦ ॥

---

೭. ನಮಗೆ ಇವನಿಂದ ತಪ್ಪಿಸಿಕೊಂಡು ಹೋಗಲು ಬೇರೆ ದಾರಿಯೇ ಇಲ್ಲ. ಏನುಮಾಡೋಣ. ಈಗ ಇವನು ನಮ್ಮನ್ನು ತಿಂದು ಬಿಡುವನು.

೮. ಆಗ ಲಕ್ಷ್ಮಣನು ರಾಮನನ್ನು ಕುರಿತು ಎಲೈ ರಾಘವನೆ ! ಈಗ ವಿಚಾರಮಾಡಬಾರದು. ಆದರಿಂದ ಪ್ರಯೋಜನವಿಲ್ಲ. ಇವನ ಒಂದೊಂದು ಕೈಯ್ಯನ್ನೂ ಒಬ್ಬೊಬ್ಬರು ಕತ್ತರಿಸಿಬಿಡೋಣ ಎಂದನು.

೯. ಇದನ್ನು ಕೇಳಿ ರಾಮನು ಹಾಗೆಯೇ ಆಗಲೆಂದು ಆತನ ಬಲತೋಳನ್ನು ಕತ್ತರಿಸಿದನು. ಅಂತೆಯೇ ಲಕ್ಷ್ಮಣನೂ ಕೂಡಾ ಜಾಗ್ರತೆಯಾಗಿ ಆತ ಎಡತೋಳನ್ನು ಕತ್ತರಿಸಿದನು.

೧೦. ಇದನ್ನು ನೋಡಿ ಆ ದೈತ್ಯನಿಗೆ ಆಶ್ಚರ್ಯವಾಯಿತು. ನನ್ನ ತೋಳುಗಳನ್ನು ಕತ್ತರಿಸುವಷ್ಟು ಶಕ್ತರಾಗಿರುವ ನೀವುಗಳು ಈ ಲೋಕದಲ್ಲಿ ಯಾರು ? ದೇವತೆಗಳೆ ! ದಾನವರೆ ! ಮನುಷ್ಯರೆ ! ನೀವು ಯಾರು ? ಎಂದನು.

ತತೋಽಬ್ರವೀದ್ಧಸನ್ನೇವ ರಾಮೋ ರಾಜೀವಲೋಚನಃ । ಅಯೋಧ್ಯಾಧಿಪತಿಃ ಶ್ರೀಮಾನ್ ರಾಜಾ ದಶರಥೋ ಮಹಾನ್ ॥ ೧೧ ॥
ರಾಮೋಽಹಂ ತಸ್ಯ ಪುತ್ರೋಽಸೌ ಭ್ರಾತಾ ಮೇ ಲಕ್ಷ್ಮಣಸ್ಸುಧೀಃ । ಮಮ ಭಾರ್ಯಾ ಜನಕಜಾ ಸೀತಾ ತ್ರೈಲೋಕ್ಯಸುಂದರೀ ॥ ೧೨ ॥
ಆವಾಂ ಮೃಗಯಯಾ ಯಾತೌ ತದಾ ಕೇನಾಪಿ ರಕ್ಷಸಾ । ಸೀತಾಂ ನೀತಾಂ ವಿಚಿನ್ವಂತೌ ಚಾಗತೌ ಘೋರಕಾನನೇ ॥ ೧೩ ॥
ಬಾಹುಭ್ಯಾಂ ವೇಷ್ಟಿತಾವತ್ರ ತವ ಪ್ರಾಣರಿರಕ್ಷಯಾ । ಛಿನ್ನೌ ತವ ಭುಜೌ ತ್ವಂ ಚ ಕೋ ವಾ ವಿಕಟರೂಪಧೃಕ್ ॥ ೧೪ ॥

---

೧೧. ಆಗ ರಾಜೀವಲೋಚನನಾದ ರಾಮನು ನಗುತ್ತ ಇಂತೆಂದನು. ಅಯೋಧ್ಯೆಗೆ ಅಧಿಪತಿಯಾದ ದಶರಥನೆಂಬ ರಾಜನೊಬ್ಬ ನಿರುವನು.

೧೨. ನಾನು ಆ ರಾಜಶ್ರೇಷ್ಠನ ಮಗನು. ನನ್ನನ್ನು ರಾಮನೆಂದು ಕರೆಯುತ್ತಾರೆ. ಇವನು ನನ್ನ ತಮ್ಮನು. ಇವನ ಹೆಸರು ಲಕ್ಷ್ಮಣ, ನೆಂದು. ನನಗೆ ಒಬ್ಬಳು ಹೆಂಡತಿಯಿದ್ದಳು. ಅವಳು ಜನಕನ ಮಗಳಾದ ಸೀತೆಯು. ಬಹು ಸುಂದರಿಯು.

೧೩. ನಾವಿಬ್ಬರೂ ಆಕೆಯನ್ನು ಆಶ್ರಮದಲ್ಲಿ ಬಿಟ್ಟು ಬೇಟೆಗೆ ಹೋಗಿದ್ದೆವು. ಆಗ ಯಾವನೋ ಒಬ್ಬ ರಾಕ್ಷಸನು ಅವಳನ್ನು ಕದ್ದು ಕೊಂಡು ಹೋದನು. ಅವಳನ್ನು ಹುಡುಕುತ್ತಾ ಈ ಘೋರವಾದ ಕಾಡಿನಲ್ಲಿ ಸಂಚರಿಸುತ್ತಿದ್ದೇವೆ.

೧೪. ಇಲ್ಲಿ ಸಂಚರಿಸುತ್ತಿದ್ದಾಗ ನಿನ್ನ ತೋಳುಗಳ ಮಧ್ಯೆ ಸಿಕ್ಕಿಬಿದ್ದೆವು. ಪ್ರಾಣರಕ್ಷಣೆಗೋಸ್ಕರ ನಿನ್ನ ತೋಳುಗಳನ್ನು ಕತ್ತರಿಸಿದೆವು. ವಿಕಾರವಾದ ಈ ರೂಪವನ್ನು ಧರಿಸಿರುವ ನೀನು ಯಾರು ?

॥ ಕಬಂಧ ಉವಾಚ ॥

ಧನ್ಯೋಽಹಂ ಯದಿ ರಾಮಸ್ತ್ವಂ ಆಗತೋಽಸಿ ಮಮಾಂತಿಕಂ । ಪುರಾ ಗಂಧರ್ವರಾಜೋಽಹಂ ರೂಪಯೌವನದರ್ಪಿತಃ ॥ ೧೫ ॥

ವಿಚರನ್ಲೋಕಮಖಿಲಂ ವರನಾರೀಮನೋಹರಃ । ತಪಸಾ ಬ್ರಹ್ಮಣೋ ಲಬ್ಧಮವಧ್ಯತ್ವಂ ರಘೂತ್ತಮ ॥ ೧೬ ॥

ಅಷ್ಟಾವಕ್ರಂ ಮುನಿಂ ದೃಷ್ಟ್ವಾ ಕದಾಚಿದಹಸಂ ಪುರಾ । ಕ್ರುದ್ಧೋಽಸಾವಾಹ ದುಷ್ಟ ತ್ವಂ ರಾಕ್ಷಸೋ ಭವ ದುರ್ಮತೇ ॥ ೧೭ ॥

ಅಷ್ಟಾವಕ್ರಃ ಪುನಃ ಪ್ರಾಹ ವಂದಿತೋಽಮೇ ದಯಾಪರಃ । ಶಾಪಸ್ಯಾಂತಂ ಚ ಮೇ ಪ್ರಾಹ ತಪಸಾ ದ್ಯೋತಿತಪ್ರಭಃ ॥ ೧೮ ॥

---

೧೫. ಕಬಂಧನು ಹೇಳಿದನು—ಬಂದಿರತಕ್ಕ ನೀನು ರಾಮನಾಗಿ ನನ್ನ ಬಳಿಗೆ ಬಂದಿದ್ದರೆ ಆಗ ನಾನು ಧನ್ಯನಾದೆನು. ನಾನೊಬ್ಬ ಗಂಧರ್ವರಾಜನು. ಪೂರ್ವದಲ್ಲಿ ರೂಪದಲ್ಲಿಯೂ ಯೌವನದಲ್ಲಿಯೂ ಕೊಬ್ಬಿದ್ದೆನು.

೧೬. ಈ ರೀತಿಯಾಗಿ ಸುಂದರನಾದ ನಾನು ಲೋಕದಲ್ಲಿ ಎಲ್ಲಾ ಕಡೆಯಲ್ಲೂ ಸುತ್ತುತ್ತಿದ್ದೆನೆ. ತಪಸ್ಸನ್ನು ಮಾಡಿ ಬ್ರಹ್ಮನನ್ನು ಸಂತೋಷಪಡಿಸಿ ಅವನಿಂದ ಅವಧ್ಯತ್ವವನ್ನು ಸಂಪಾದಿಸಿಕೊಂಡೆನು.

೧೭. ಹೀಗೆ ಸಂಚರಿಸುತ್ತಿರುವಾಗ ಅಷ್ಟಾವಕ್ರಮುನಿಯನ್ನು ಒಂದುಬಾರಿ ನೋಡಿದೆನು. ಅದರಿಂದ ಬಹುವಾಗಿ ನಗು ಬಂದು ನಕ್ಕೆನು. ಅದರಿಂದ ಅವನು ಕೋಪಗೊಂಡು ಎಲೈ ದುಷ್ಟನೇ । ನೀನು ರಾಕ್ಷಸನಾಗು ಎಂದನು.

೧೮. ಇದನ್ನು ಕೇಳಿ ನಾನು ದುಃಖಪಟ್ಟು ಮತ್ತೆ ಅವನನ್ನು ಸಮಾಧಾನಪಡಿಸಲು ದಯೆಗೊಂಡವನಾಗಿ ತಪೋಮೂರ್ತಿಯಾಗಿ ಪ್ರಕಾಶಿಸುತ್ತಿದ್ದ ಅವನು ನನ್ನ ಶಾಪಕ್ಕೆ ಕೊನೆಗಾಣುವಂತೆ ಇಂತೆಂದನು.

ತ್ರೇತಾಯುಗೇ ದಾಶರಥಿರ್ಭೂತ್ವಾ ನಾರಾಯಣಃ ಸ್ವಯಂ । ಆಗಮಿಷ್ಯತಿ ತೇ ಬಾಹೂ ಛಿದ್ಯತೇ ಯೋಜನಾಯತೌ ॥ ೧೯ ॥

ತೇನ ಶಾಪಾದ್ವಿನಿರ್ಮುಕ್ತೋ ಭವಿಷ್ಯಸಿ ಯಥಾ ಪುರಾ । ಇತಿಶಪ್ತೋಽಹಮದ್ರಾಕ್ಷಂ ರಾಕ್ಷಸೀಂ ತನುಮಾತ್ಮನಃ ॥ ೨೦ ॥

ಕದಾಚಿದ್ದೇವರಾಜಾನಮಭ್ಯದ್ರವಮಹಂ ರುಷಾ । ಸೋಽಪಿ ವಜ್ರೇಣ ಮಾಂ ರಾಮ ಶಿರೋದೇಶೇಽಭ್ಯತಾಡಯತ್ ॥ ೨೧ ॥

ತದಾ ಶಿರೋಗತಂ ಕುಕ್ಷಿಂ ಪಾದೌ ಚ ರಘುನಂದನ । ಬ್ರಹ್ಮದತ್ತವರಾನ್ಮೃತ್ಯುರ್ಮಾ ಭೂನ್ಮೇ ವಜ್ರತಾಡನಾತ್ ॥ ೨೨ ॥

---

೧೯. ತ್ರೇತಾಯುಗದಲ್ಲಿ ನಾರಾಯಣನು ತಾನಾಗಿಯೇ ದಶರಥನ ಹೊಟ್ಟೆಯಲ್ಲಿ ಹುಟ್ಟುತ್ತಾನೆ. ಆಗ ನಿನ್ನ ಬಳಿಗೆ ಬರುತ್ತಾನೆ. ಯೋಜನದಷ್ಟು ಅಗಲವಾಗಿರುವ ನಿನ್ನ ತೋಳುಗಳನ್ನು ಕತ್ತರಿಸುತ್ತಾನೆ.

೨೦. ಆಗ ನೀನು ಈ ಶಾಪದಿಂದ ಮುಕ್ತನಾಗುತ್ತೀಯೆ. ಮತ್ತು ಮೊದಲಿನಂತೆಯೇ ಆಗುತ್ತೀಯೆ. ಈ ಶಾಪ ಬಂದೊಡನೆಯೇ ನನ್ನ ಈ ದೇಹವು ರಾಕ್ಷಸಾಕಾರವಾದುದನ್ನು ಕಂಡೆನು.

೨೧. ಒಂದುಸಾರಿ ಬಹು ಕೋಪದಿಂದ ದೇವರಾಜನಾದ ಇಂದ್ರನಮೇಲೆ ಬೀಳಲು ಹೋದೆನು. ಅವನು ಕೋಪಗೊಂಡು ತಲೆಯ ಮೇಲೆ ವಜ್ರಾಯುಧದಿಂದ ಹೊಡೆದನು.

೨೨. ಆಗ ಆ ವಜ್ರದ ಏಟಿನಿಂದ ತಲೆಯೂ ಕಾಲುಗಳೂ ಹೊಟ್ಟೆಯನ್ನು ಸೇರಿಕೊಂಡುವು. ವಜ್ರಾಯುಧದ ಹೊಡೆತ ಬಿದ್ದರೂ ಬ್ರಹ್ಮನ ವರದಬಲದಿಂದ ನನಗೆ ಮೃತ್ಯುವು ಉಂಟಾಗಲಿಲ್ಲವು.

ಮುಖಾಭಾವೇ ಕಥಂ ಜೀವೇದಯಮಿತ್ಯಮರಾಧಿಪಂ । ಊಚುಸ್ಸರ್ವೇ ದಯಾವಿಷ್ಟಾ ಮಾಂ ವಿಲೋಕ್ಯಾಸ್ಯವರ್ಜಿತಂ ॥ ೨೩ ॥
ತತೋ ಮಾಂ ಪ್ರಾಹ ಮಘವಾ ಜಠರೇ ತೇ ಮುಖಂ ಭವೇತ್ । ಬಾಹೂ ತೇ ಯೋಜನಾಯಾಮೌ ಭವಿಷ್ಯತ ಇತೋ ವ್ರಜ ॥
ಇತ್ಯುಕ್ತೋತ್ರ ವಸನ್ನಿತ್ಯಂ ಬಾಹುಭ್ಯಾಂ ವನಗೋಚರಾ‌ನ್ । ಭಕ್ಷಯಾಮ್ಯಧುನಾ ಬಾಹೂ ಖಂಡಿತೌ ಮೇ ತ್ವಯಾನಘ ॥ ೨೫ ॥
ಇತಃ ಪರಂ ಮಾಂ ಶ್ವಭ್ರಾಸ್ಯೇ ನಿಕ್ಷಿಪಾಗ್ನಿಂಧನಾವೃತೇ । ಅಗ್ನಿನಾ ದಹ್ಯಮಾನೋಹಂ ತ್ವಯಾ ರಘುಕುಲೋತ್ತಮ ॥ ೨೬ ॥

---

೨೩. ಆಗ ಅಲ್ಲಿದ್ದವರೆಲ್ಲರೂ ದಯೆಗೊಂಡು ಬಾಯಿಲ್ಲದಿದ್ದರೆ ಈ ಪ್ರಾಣಿಯು ಜೀವಿಸುವುದು ಹೇಗೆಂದು ಆ ದೇವೇಂದ್ರನನ್ನು ಕೇಳಿದರು.

೨೪. ಆಗ ಆ ಇಂದ್ರನು ಇವನ ಹೊಟ್ಟೆಯಲ್ಲಿಯೇ ಬಾಯುಂಟಾಗಲಿ ಎಂದು ಹೇಳಿದನು. ನಿನ್ನ ತೋಳುಗಳೂ ಒಂದೊಂದು ಯೋಜನದಷ್ಟು ಉದ್ದವಾಗುತ್ತವೆ. ಇಲ್ಲಿಂದ ಹೊರಟು ಹೋಗು ಎಂದನು.

೨೫. ಅವನು ಹೀಗೆಂದು ಹೇಳುತ್ತಲೂ ಇಲ್ಲಿಯೇ ಇದ್ದುಕೊಂಡು ಈ ತೋಳುಗಳಿಂದ ಕಾಡಿನಲ್ಲಿ ಸಂಚರಿಸುವ ಪ್ರಾಣಿಗಳನ್ನು ತಿನ್ನುತ್ತಿರುವೆನು. ಈಗ ತೋಳುಗಳನ್ನು ನೀನು ಕತ್ತರಿಸಿಬಿಟ್ಟೆ.

೨೬. ಇನ್ನು ಮೇಲೆ ಒಂದು ಹಳ್ಳವನ್ನು ತೋಡು. ಅದರಲ್ಲಿ ಸೌದೆಗಳನ್ನು ಹಾಕಿ ಅದರಮೇಲೆ ನನ್ನನ್ನು ಹಾಕಿ ಬೆಂಕಿಯನ್ನು ಹತ್ತಿಸು. ಆ ಬೆಂಕಿಯು ನನ್ನನ್ನು ಸುಡುತ್ತಿರುವಾಗಲೇ ನನಗೆ ಮೊದಲನೆಯ ರೂಪವು ಬರುತ್ತದೆ. ಆಗ ನಿನ್ನ ಹೆಂಡತಿಯು ಎಲ್ಲಿರುವಳು? ಏನಾದಳು? ಎಂಬುದನ್ನು ಹೇಳುತ್ತೇನೆ.

ಪೂರ್ವರೂಪಮನುಪ್ರಾಪ್ಯ ಭಾರ್ಯಾಮಾರ್ಗಂ ವದಾಮಿ ತೇ । ಇತ್ಯುಕ್ತೇ ಲಕ್ಷ್ಮಣೇನಾಶು ಶ್ವಭ್ರಂ ನಿರ್ಮಾಯ ತತ್ರ ತಂ ॥ ೨೭ ॥
ನಿಕ್ಷಿಪ್ಯ ಪ್ರಾದಹತ್ಕಾಷ್ಠೈಸ್ತತೋ ದೇಹಾತ್ಸಮುತ್ಥಿತಃ । ಕಂದರ್ಪಸದೃಶಾಕಾರಃ ಸರ್ವಾಭರಣಭೂಷಿತಃ ॥ ೨೮ ॥
ರಾಮಂ ಪ್ರದಕ್ಷಿಣಂ ಕೃತ್ವಾ ಸಾಷ್ಟಾಂಗಂ ಪ್ರಣಿಪತ್ಯ ಚ । ಕೃತಾಂಜಲಿರುವಾಚೇದಂ ಭಕ್ತಿಗದ್ಗದಯಾ ಗಿರಾ ॥ ೨೯ ॥

॥ ಗಂಧರ್ವ ಉವಾಚ ॥

ಸ್ತೋತುಮುತ್ಸಹತೇ ಮೇದ್ಯ ಮನೋ ರಾಮಾತಿಸಂಭ್ರಮಾತ್ । ತ್ವಾಮನಂತಮನಾದ್ಯಂತಂ ಮನೋವಾಚಾಮಗೋಚರಂ ॥

---

೨೭. ಆ ರಾಕ್ಷಸನು ಹೀಗೆಂದು ಹೇಳಿದ ಒಡನೆಯೇ ಲಕ್ಷ್ಮಣನ ಕೈಯ್ಯಿಂದ ಅಂತೆಯೇ ಹಳ್ಳವನ್ನು ತೋಡಿಸಿ ಅದರಲ್ಲಿ ಸೌದೆಯನ್ನು ಹಾಕಿಸಿದನು.

೨೮. ಅದರಮೇಲೆ ಆ ರಾಕ್ಷಸನ ದೇಹವನ್ನಿಟ್ಟು ಅದಕ್ಕೆ ಬೆಂಕಿಯನ್ನು ಹತ್ತಿಸಿದನು. ಆ ದೇಹವು ಸುಟ್ಟೊಡನೆಯೇ ಅದರಿಂದ ಮನ್ಮಥನಂತಿರುವ ಆಕಾರವುಳ್ಳ ಎಲ್ಲಾ ಒಡವೆಗಳನ್ನೂ ಧರಿಸಿರುವ ಒಂದು ಆಕಾರವು ಹೊರಗೆ ಬಂದಿತು.

೨೯. ಅದೇ ಈ ಗಂಧರ್ವನ ದೇಹವು. ಹಾಗೆ ತನ್ನ ಮೊದಲಿನ ದೇಹವನ್ನು ಹೊಂದಿ ಅದರಿಂದ ರಾಮನಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಕೈಮುಗಿದುಕೊಂಡು ಸಂತೋಷದಿಂದ ಉಂಟಾದ ಗದ್ಗದ ಧ್ವನಿಯಿಂದ ಇಂತೆಂದನು.

೩೦. ಗಂಧರ್ವನು ಹೇಳಿದನು—ಎಲೈ ರಾಮನೆ ! ನನಗೆ ಬಹು ಸಂತೋಷವಾಗಿದೆ. ಆದ್ದರಿಂದ ನನ್ನ ಮನಸ್ಸಿಗೆ ನಿನ್ನನ್ನು ಸ್ತೋತ್ರ ಮಾಡಬೇಕೆಂದು ತೋರುತ್ತದೆ. ನೀನಾದರೋ ನಾಶರಹಿತನು. ಆದಿ ಅಂತ್ಯಗಳು ನಿನಗಿಲ್ಲ. ಮಾತಿನಿಂದ ಹೇಳಿ ತಿಳಿಯುವುದಕ್ಕಾಗಲೀ ಕೊನೆಗೆ ಮನಸ್ಸಿನಿಂದ ಊಹಿಸಿ ತಿಳಿಯುವುದಕ್ಕಾಗಲೀ ಆಗದವನು.

ಸೂಕ್ಷ್ಮಂ ತೇ ರೂಪಮವ್ಯಕ್ತಂ ದೇಹದ್ವಯವಿಲಕ್ಷಣಂ । ದೃಗ್ರೂಪಮಿತರತ್ಸರ್ವಂ ದೃಶ್ಯಂ ಜಡಮನಾತ್ಮಕಂ ॥ ೩೧ ॥

ತತ್ಕಥಂ ತ್ವಾಂ ವಿಜಾನೀಯಾದ್ವ್ಯತಿರಿಕ್ತಂ ಮನಃ ಪ್ರಭೋ । ಬುಧ್ಯಾತ್ಮಾಭಾಸಯೋರೈಕ್ಯಂ ಜೀವ ಇತ್ಯಭಿಧೀಯತೇ ॥ ೩೨ ॥

ಬುಧ್ಯಾದಿಸಾಕ್ಷೀ ಬ್ರಹ್ಮೈವ ತಸ್ಮಿನ್ನಿರ್ವಿಷಯೇಽಖಿಲಂ । ಆರೋಪ್ಯತೇಽಜ್ಞಾನವಶಾನ್ನಿರ್ವಿಕಾರೇಽಖಿಲಾತ್ಮನಿ ॥ ೩೩ ॥

---

೩೧. ನಿನ್ನ ರೂಪವು ಬಹು ಸೂಕ್ಷ್ಮವಾದುದು. ವ್ಯಕ್ತವಾಗಿ ಕಾಣದಿರುವುದು ಸೂಕ್ಷ್ಮಸ್ಥೂಲ ದೇಹಗಳೆರಡಕ್ಕೂ ಸೇರಿದುದು ಕಣ್ಣಿಗೆ ಕಾಣತಕ್ಕ ಇವೆಲ್ಲವೂ ಜಡರೂಪವಾದ ದೇಹಗಳು. ಇವು ಆತ್ಮನಿಗಿಂತಲೂ ಬೇರೆಯಾದುವು. ಸೂಕ್ಷ್ಮಸ್ಥೂಲಗಳಿಗೆ ವ್ಯತಿರಿಕ್ತವಾದ ಆ ನಿನ್ನ ದೇಹವನ್ನು ಮನಸ್ಸು ಹೇಗೆ ತಿಳಿಯುವುದಕ್ಕೆ ಶಕ್ತವಾದೀತು ?

೩೨. ಬುದ್ಧಿ ಮತ್ತು ಅಭಾಸರೂಪವಾದ ಆತ್ಮ ಇವುಗಳ ಐಕ್ಯವೇ ಜೀವವೆಂದೆನಿಸಿಕೊಳ್ಳುತ್ತದೆ. ಬುದ್ಧಿಯು ಆತ್ಮನ ಆಭಾಸರೂಪ ಪ್ರತಿಬಿಂಬವಾದ ಛಾಯೆಯನ್ನು ಹೊಂದಿರುವುದು. ಈ ವ್ಯಾಪನೆಯು ತಾನು ವ್ಯಾಪಕ ಇದು ವ್ಯಾಪ್ಯ ಎಂಬಂತೆ ತೋರದೆ ನೀರಕ್ಷೀರದಂತೆ ಇರುವುದರಿಂದ ಎರಡೂ ಒಂದೇ ಎಂಬ ಬುದ್ಧಿಯು ಹುಟ್ಟುತ್ತದೆ. ಇದೇ ಐಕ್ಯಬುದ್ಧಿ ಎಂಬುದು. ಇದನ್ನೇ ಆ ಜೀವವೆನ್ನುತ್ತಾರೆ.

೩೩. ಬುದ್ಧಿಗೆ ಸಾಕ್ಷಿಯಾಗಿ ತಿಳಿಯಲು ಯೋಗ್ಯವಾದುದು ಬ್ರಹ್ಮನೇ. ಆ ಬ್ರಹ್ಮವು ಯಾವುದಕ್ಕೂ(ಇಂದ್ರಿಯಗಳಿಗೆ)ಸಿಕ್ಕತಕ್ಕದ್ದಲ್ಲ. ವಿಕಾರವನ್ನು ಹೊಂದಿದ ವಿಷಯಕ್ಕೊಳಗಾದ ಆ ಪರಮಾತ್ಮನಲ್ಲಿ ಅಜ್ಞಾನದ ವಶದಿಂದ ಜೀವವೇ ಬ್ರಹ್ಮವೆಂದು ಆರೋಪಿಸಲ್ಪಡುತ್ತದೆ. (ಆರೋಪವೆಂದರೆ ತಪ್ಪನ್ನು ಮಾಡದಿರುವವನಲ್ಲಿ ತಪ್ಪನ್ನು ಹೊರಿಸುವುದು. ಒಬ್ಬನನ್ನು ನೋಡಿ ಮತ್ತೊಬ್ಬನೆಂದು ಹೇಳುವುದು)

ಹಿರಣ್ಯಗರ್ಭಸ್ತೇ ಸೂಕ್ಷ್ಮಂ ಸ್ಥೂಲಂ ದೇಹಂ ವಿರಾಡ್ಗಸ್ಮೃತಂ । ಭಾವನಾವಿಷಯೋ ರಾಮ ಸೂಕ್ಷ್ಮಂ ತೇ ಧ್ಯಾತೃಮಂಗಳಂ॥೩೪॥

ಭೂತಂ ಭವ್ಯಂ ಭವಿಷ್ಯಚ್ಚ ಯತ್ರೇದಂ ದೃಶ್ಯತೇ ಜಗತ್ । ಸ್ಥೂಲೇಂಡಕೋಶೇ ದೇಹೇ ತೇ ಮಹದಾದಿಭಿರಾವೃತೇ ॥ ೩೫ ॥

ಸಪ್ತಭಿಸ್ತ್ಯುತ್ತರಗುಣೈರ್ವೈರಾಜೋ ಧಾರಣಾಶ್ರಯಃ । ತ್ವಮೇವ ಸರ್ವಕೈವಲ್ಯಂ ಲೋಕಾಸ್ತೇಽವಯವಾಃ ಸ್ಮೃತಾಃ ॥ ೩೬ ॥

---

೩೪. ಹಿರಣ್ಯಗರ್ಭ ಬ್ರಹ್ಮನು ನಿನ್ನ ಸೂಕ್ಷ್ಮಶರೀರವು. ನಿನ್ನ ದೊಡ್ಡ ದೇಹವೆಂಬುದು ಆ ಪ್ರಪಂಚವೆಲ್ಲವನ್ನೂ ಒಳಗೊಂಡು ವಿರಾಟ್ ಸ್ವರೂಪವೆಂಬುದು ಎಂದು ನಿರ್ಧರಿಸಲ್ಪಟ್ಟಿದೆ. ನಿನ್ನ ಸೂಕ್ಷ್ಮವಾದ ಹಿರಣ್ಯಗರ್ಭರೂಪವಾದ ದೇಹವು ಧ್ಯಾನಮಾಡುವವರಿಗೆ ಯೋಗ್ಯವಾದುದು. ಅದು ಅವರಿಗೆ ಮಂಗಳವನ್ನು ಕೊಡುತ್ತದೆ. ಭೂತಭವಿಷ್ಯದ್ವರ್ತಮಾನಗಳ ರೂಪವಾದ ಈ ಜಗತ್ತು ಯಾವುದು ಕಾಣುವುದೋ ಅದೇ ಸ್ಥೂಲವಾದ ನಿನ್ನ ವಿರಾಟ್ ದೇಹವು.

೩೫. ನಿನ್ನ ಸ್ಥೂಲವಾದ ಈ ದೇಹದಲ್ಲಿ ರೂಪ, ರಸ, ಗಂಧ, ಸ್ಪರ್ಶಘ್ರಾಣ ಮಹತ್ತು ಅಹಂಕಾರಗಳು ಇವು ಏಳೂ ಒಂದಕ್ಕಿಂತ ಮತ್ತೊಂದು ಹತ್ತು ಹತ್ತರಷ್ಟು ಹೆಚ್ಚಿ ಅವು ನಿಲ್ಲಲು ಆಶ್ರಯವಾಗಿ ವೈರಾಜಾದಿ ಲೋಕಗಳೆಂಬ ಲೋಕಗಳಾಗಿವೆ.

೩೬. ನೀನೇ ಕೈವಲ್ಯಸ್ವರೂಪನು. (ವೈಕುಂಠಸ್ವರೂಪನು) ನಿನ್ನ ಅವಯವಗಳೇ ಮಿಕ್ಕಲೋಕಗಳು. ನಿನ್ನ ಹೆಜ್ಜೆಯಮೂಲವೇ ಪಾತಾಳಲೋಕವು. ನಿನ್ನ ಹಿಮ್ಮಡಿಯೇ ಮಹಾತಳವೆಂಬ ಲೋಕವು.

ಪಾತಾಳಂ ತೇ ಪಾದಮೂಲಂ ಪಾರ್ಷ್ಣಿಸ್ತವ ಮಹಾತಲಂ | ರಸಾತಲಂ ತೇ ಗುಲ್ಫೌ ತು ತಲಾತಲಮಿತೀರ್ಯತೇ || ೩೭ ||

ಜಾನುನೀ ಸುತಲಂ ರಾಮ ಊರೂ ತೇ ವಿತಲಂ ತಥಾ | ಅತಲಂ ಚ ಮಹೀ ರಾಮ ಜಘನಂ ನಾಭಿಗಂ ನಭಃ || ೩೮ ||

ಉರಸ್ಥಲಂ ತೇ ಜ್ಯೋತೀಂಷಿ ಗ್ರಿವಾ ತೇ ಮಹ ಉಚ್ಯತೇ | ವದನಂ ಜನಲೋಕಸ್ತೇ ತಪಸ್ತೇ ಶಂಖದೇಶಗಂ || ೩೯ ||

ಸತ್ಯಲೋಕೋ ರಘುಶ್ರೇಷ್ಠ ಶೀರ್ಷಣ್ಯಸ್ತೇ ಸದಾ ಪ್ರಭೋ | ಇಂದ್ರಾದಯೋ ಲೋಕಪಾಲಾ ಬಾಹವಸ್ತೇ ದಿಶಃ ಶ್ರುತೀ || ೪೦ ||

೩೭–೩೯. ನಿನ್ನ ಕಾಲಿನ ಹರಡು ಎಂಬುದು ರಸಾತಲವು. ಮಂಡಿಗಳೇ ರಸಾತಲವು. ತೊಡೆಗಳೇ ಸುತಲವು. ಒಳತೊಡೆಗಳೇ ವಿತಳವು. ನಿನ್ನ ಗುದಸ್ಥಾನವೇ ಅತಲವು. ಸೊಂಟವೇ ಭೂಲೋಕವು. ಹೊಟ್ಟೆಯೇ ಅಂತರಿಕ್ಷವು. ಎದೆಯೇ ನಕ್ಷತ್ರಮಂಡಲವು. ನಿನ್ನ ಕತ್ತೇ ಮಹಾಲೋಕವು. ಮುಖವೇ ಜನೋ ಲೋಕವು. ಕತ್ತಿನ ಶಂಖದೇಶವೇ ತಪೋಲೋಕವು. ನಿನ್ನ ತಲೆಯೇ ಸತ್ಯಲೋಕವು. ಈ ರೀತಿಯಾಗಿ ನಿನ್ನಲ್ಲಿ ಲೋಕಗಳು ಸೇರಿಕೊಂಡಿವೆ.

೪೦. ನಿನ್ನ ತೋಳುಗಳೇ ಇಂದ್ರಾದಿಲೋಕಪಾಲಕರು. ನಿನ್ನ ಕಿವಿಗಳೇ ದಿಕ್ಕುಗಳು. ನಿನ್ನ ಮೂಗೇ ಅಶ್ವಿನೀದೇವತೆಗಳು. ನಿನ್ನ ಮುಖವೇ ಅಗ್ನಿಯು.

ಅಶ್ವಿನೌ ನಾಸಿಕೇ ರಾಮ ವಕ್ತ್ರಂ ತೇಗ್ನಿರುದಾಹೃತಃ । ಚಕ್ಷುಸ್ತೇ ಸವಿತಾ ರಾಮ ಮನಶ್ಚಂದ್ರ ಉದಾಹೃತಃ ॥ ೪೧ ॥

ಭ್ರೂಭಂಗ ಏವ ಕಾಲಸ್ತೇ ಬುದ್ಧಿಸ್ತೇ ವಾಕ್ಪತಿರ್ಭವೇತ್ । ರುದ್ರೋಽಹಂಕಾರರೂಪಸ್ತೇ ವಾಚಶ್ಛಂದಾಂಸಿ ತೇಽವ್ಯಯ ॥ ೪೨ ॥

ಯಮಸ್ತೇ ದಂಷ್ಟ್ರದೇಶಸ್ಥೋ ನಕ್ಷತ್ರಾಣಿ ದ್ವಿಜಾಲಯಃ । ಹಾಸೋ ಮೋಹಕರೀ ಮಾಯಾ ಸೃಷ್ಟಿಸ್ತೇಽಪಾಂಗಮೋಕ್ಷಣಂ ॥

ಧರ್ಮಃ ಪುರಸ್ತೇಽಧರ್ಮಶ್ಚ ಪೃಷ್ಟಭಾಗ ಉದೀರಿತಃ । ನಿಮಿಷೋನ್ಮೇಷಣೇರಾತ್ರಿರ್ದಿನಾ ಚೈವ ರಘೂತ್ತಮ ॥ ೪೪ ॥

೪೧–೪೨. ನಿನ್ನ ಕಣ್ಣುಗಳೇ ಸೂರ್ಯನು. ನಿನ್ನ ಮನಸ್ಸೇ ಚಂದ್ರನು. ನಿನ್ನ ಹುಬ್ಬುಗಂಟಿಕ್ಕಿಕೊಳ್ಳುವುದೇ ಕಾಲನು. ನಿನ್ನ ಬುದ್ಧಿಯೇ ದೇವಾಚಾರ್ಯನಾದ ಗುರುವು. ನಿನ್ನ ಅಹಂಕಾರವೇ ರುದ್ರನು. ನಿನ್ನ ಮಾತುಗಳೇ ವೇದಗಳು. ನಿನ್ನ ಕೋರೆದಾಡೆಯೇ ಯಮನು. ನಿನ್ನ ಹಲ್ಲುಗಳೇ ನಕ್ಷತ್ರಗಳು.

೪೩. ನಿನ್ನ ನಗುವಿಕೆಯೇ ಲೋಕವನ್ನು ಅಜ್ಞಾನದಲ್ಲಿ ಕೆಡಗುವ ಮಾಯೆಯು. ನೀನು ಕಡೆಗಣ್ಣಿನಿಂದ ನೋಡುವುದೇ ಸೃಷ್ಟಿಯು ನಿನ್ನ ದೇಹದ ಮುಂಭಾಗವೇ ಧರ್ಮವು. ನಿನ್ನ ದೇಹದ ಹಿಂದಿನಭಾಗವೇ (ಬೆನ್ನೇ) ಅಧರ್ಮವು.

೪೪. ನೀನು ಕಣ್ಣುಮುಚ್ಚುವುದೇ ರಾತ್ರಿಯು. ನೀನು ಆ ಕಣ್ಣುಗಳನ್ನು ತೆರೆಯುವುದೇ ಹಗಲು. ನಿನ್ನ ಹೊಟ್ಟೆಯೇ ಸಪ್ತ ಸಮುದ್ರಗಳು. ನಿನ್ನ ನರಗಳೇ ನದಿಗಳು.

ಸಮುದ್ರಾಸ್ಸಪ್ತ ತೇ ಕುಕ್ಷಿರ್ನಾಡ್ಯೋ ಸದ್ಯಸ್ತವ ಪ್ರಭೋ । ರೋಮಾಣಿ ವೃಕ್ಷೌಷಧಯೋ ರೇತೋ ವೃಷ್ಟಿಸ್ತವ ಪ್ರಭೋ॥ ೪೫ ॥

ಮಹಿಮಾ ಜ್ಞಾನಶಕ್ತಿಸ್ತ ಏವಂ ಸ್ಥೂಲವಪುಸ್ತವ । ಯದಸ್ಮಿಂಸ್ಥೂಲರೂಪೇ ತೇ ಮನಸ್ಸಂಧಾರ್ಯತೇ ನರೈಃ ॥ ೪೬ ॥

ಅನಾಯಾಸೇನ ಮುಕ್ತಿಸ್ಸ್ಯಾದತೋನ್ಯನ್ನೈವ ಕಿಂಚನ । ಅತೋಹಂ ರಾಮ ರೂಪಂ ತೇ ಸ್ಥೂಲಮೇವಾನುಭಾವಯೇ ॥ ೪೭ ॥

ಯಸ್ಮಿನ್ದೃಷ್ಟೇ ಪ್ರೇಮರಸಸ್ಸರೋಮಪುಲಕೋ ಭವೇತ್ । ತದೈವ ಮುಕ್ತಿಸ್ಸ್ಯಾದ್ರಾಮ ಯದಾ ತೇ ಸ್ಥೂಲಭಾವಕಃ ॥ ೪೮ ॥

---

೪೫. ನಿನ್ನ ರೋಮಗಳೇ ಮರಗಳು ಮತ್ತು ಗಿಡಗಳು. ನಿನ್ನ ರೇತಸ್ಸೇ ವೃಷ್ಟಿಯ ಕ್ರಮವು. ನಿನ್ನ ಮಹಿಮೆಯೇ ಜ್ಞಾನಶಕ್ತಿಯು. ಈ ರೀತಿಯಾದ ನಿನ್ನ ಸ್ಥೂಲವಾದ ಶರೀರವನ್ನು ಹೇಳಿದುದಾಗಿದೆ.

೪೬. ಪ್ರಪಂಚರೂಪವಾದ ಈ ಕಣ್ಣಿಗೆ ಕಾಣುವ ಈ ನಿನ್ನ ಸ್ಥೂಲರೂಪದಲ್ಲಿ ಜನರು ಮನಸ್ಸನ್ನಿಟ್ಟು ಅವರ ವಿಷಯವನ್ನು ತಿಳಿದರೆ ಬಹು ಸುಲಭವಾಗಿಯೇ ಮುಕ್ತಿಯು ಸಿಕ್ಕುತ್ತದೆ. ಈ ನಿನ್ನ ದೇಹಕ್ಕಿಂತಲೂ ಬೇರೆಯದು ಮತ್ತೊಂದಿಲ್ಲ.

೪೭. ಎಲೈ ರಾಮನೆ ! ನಾನು ನಿನ್ನ ಸ್ಥೂಲವಾದ ಈ ರೂಪವನ್ನೇ ಅನುಭವಿಸುತ್ತಿದ್ದೇನೆ. ಅದನ್ನು ಧ್ಯಾನಮಾಡುತ್ತಿದ್ದರೇನೇ ರೋಮಾಂಚವುಂಟಾಗಿ ಪ್ರೇಮರಸವು ಉಕ್ಕುತ್ತದೆ.

೪೮. ಈ ನಿನ್ನ ಸ್ಥೂಲವಾದ ರೂಪವನ್ನು ಧ್ಯಾನಿಸಿದರೇನೇ ಒಡನೆಯೇ ಮುಕ್ತಿಯೆಂಬುದು ಬರುತ್ತದೆ. ಇದರಲ್ಲಿ ಸಂದೇಹವಿಲ್ಲ. ಆದರೂ ಅದು ನನಗೆ ರುಚಿಸುವುದಿಲ್ಲ. ನಾನು ಮುಂದೆ ಹೇಳುವ ಈ ನಿನ್ನ ರೂಪವನ್ನು ಧ್ಯಾನಿಸುತ್ತೇನೆ.

ತದಪ್ಯಾಸ್ತಾಂ ತನ್ವೈವಾಹಮೇತದ್ರೂಪಂ ವಿಚಿಂತಯೇ । ಧನುರ್ಬಾಣಧರಂ ಶ್ಯಾಮಂ ಜಟಾವಲ್ಕಲಭೂಷಿತಂ ॥ ೪೯ ॥

ಅಪೀಚ್ಯವಯಸಂ ಸೀತಾಂ ವಿಚಿನ್ವಂತಂ ಸಲಕ್ಷ್ಮಣಂ । ಇದಮೇವ ಸದಾ ಮೇ ಸ್ಯಾನ್ಮಾನಸೇ ರಘುನಂದನ ॥ ೫೦ ॥

ಸರ್ವಜ್ಞಃ ಶಂಕರಸ್ಸಾಕ್ಷಾತ್ಪಾರ್ವತ್ಯಾ ಸಹಿತಸ್ಸದಾ । ತ್ವದ್ರೂಪಮೇವ ಸತತಂ ಧ್ಯಾಯನ್ನಾಸ್ತೇ ರಘೂತ್ತಮ ॥ ೫೧ ॥

ಮುಮೂರ್ಷೂಣಾಂ ಸದಾ ಕಾಶ್ಯಾಂ ತಾರಕಂ ಬ್ರಹ್ಮವಾಚಕಂ । ರಾಮರಾಮೇತ್ಯುಪದಿಶನ್ ಸದಾ ಸಂತುಷ್ಟಮಾನಸಃ ॥ ೫೨ ॥

---

೪೯. ಧನುಸ್ಸು ಬಾಣಗಳನ್ನು ಧರಿಸಿರುವ, ನೀಲವರ್ಣವುಳ್ಳ, ಜಡೆ ನಾರುಡೆಗಳನ್ನು ಧರಿಸಿರುವ, ಯೌವನಕ್ಕೆ ಕಾಲಿಡುತ್ತಿರುವ ವಯಸ್ಸುಳ್ಳ, ಸೀತೆಯನ್ನು ಹುಡುಕುತ್ತಿರುವ, ಲಕ್ಷ್ಮಣನೊಡಗೂಡಿರುವ, ಈ ನಿನ್ನ ರೂಪವು ಯಾವಾಗಲೂ ನನ್ನ ಮನಸ್ಸಿನಲ್ಲಿರಲಿ. ಎಲೈ ರಘುನಂದನನೆ! ಇಷ್ಟನ್ನು ಮಾತ್ರ ನನಗೆ ಅನುಗ್ರಹಿಸು.

೫೦. ಎಲೈ ರಘೂತ್ತಮನೆ! ಸರ್ವಜ್ಞನಾದ ಶಂಕರನು ಯಾವಾಗಲೂ ಪಾರ್ವತಿಯೊಡನೆ ನಿನ್ನ ಈ ರೂಪವನ್ನೇ ಧ್ಯಾನಮಾಡುತ್ತಿರುವನು.

೫೧. ಆ ಶಂಕರನು ಕಾಶಿಯಲ್ಲಿ ಸಾಯುವವರ ಕಿವಿಯಲ್ಲಿ ತಾರಕ ಬ್ರಹ್ಮವಾಚಕವಾದ ರಾಮ, ರಾಮ, ಎಂಬ ಮಂತ್ರವನ್ನೇ ಯಾವಾಗಲೂ ಸಂತೋಷದಿಂದ ಉಪದೇಶಿಸುತ್ತಿರುವನು.

೫೨. ಎಲೈ ಜಾನಕೀನಾಥನೆ! ಆದ್ದರಿಂದ ನೀನು ಪರಮಾತ್ಮನೆಂಬುದು ಖಂಡಿತವು. ನಿನ್ನ ಮಾಯೆಯಿಂದ ಎಲ್ಲರೂ ಅಜ್ಞಾನವನ್ನು ಹೊಂದಿ ನಿನ್ನನ್ನು ತಿಳಿಯದೇನೇ ಮೂಢರಾಗಿರುವರು. ಇದು ಸತ್ಯವು.

ಅತಸ್ತ್ವಂ ಜಾನಕೀನಾಥ ಪರಮಾತ್ಮಾ ಸುನಿಶ್ಚಿತಃ । ಸರ್ವೇ ತೇ ಮಾಯಯಾ ಮೂಢಾಸ್ತ್ವಾಂ ನ ಜಾನಂತಿ ತತ್ತ್ವತಃ ॥ ೫೩ ॥

ನಮಸ್ತೇ ರಾಮಭದ್ರಾಯ ವೇಧಸೇ ಪರಮಾತ್ಮನೇ । ಅಯೋಧ್ಯಾಧಿಪತೇ ತುಭ್ಯಂ ನಮಸ್ಸೌಮಿತ್ರಿಸೇವಿತ ॥
ತ್ರಾಹಿ ತ್ರಾಹಿ ಜಗನ್ನಾಥ ಮಾಂ ಮಾಯಾ ನಾವೃಣೋತು ತೇ ॥ ೫೪ ॥

॥ ಶ್ರೀರಾಮ ಉವಾಚ ॥

ತುಷ್ಟೋಽಹಂ ದೇವಗಂಧರ್ವ ಭಕ್ತ್ಯಾ ಸ್ತುತ್ಯಾ ಚ ತೇಽನಘ । ಯಾಹಿ ಮೇ ಪರಮಂ ಸ್ಥಾನಂ ಯೋಗಿಗಮ್ಯಂ ಸನಾತನಂ ॥೫೫॥

೫೩–೫೪. ರಾಮಭದ್ರನಾದ ನಿನಗೆ ನಮಸ್ಕಾರವು. ವೇದದ ರೂಪನಾದ ನಿನಗೆ ನಮಸ್ಕಾರವು. ಅಯೋಧ್ಯೆಗೆ ಅಧಿಪತಿಯಾದ ನಿನಗೆ ನಮಸ್ಕಾರವು. ಲಕ್ಷ್ಮಣನಿಂದ ಸೇವೆಗೊಳ್ಳುತ್ತಿರುವ ನಿನಗೆ ನಮಸ್ಕಾರವು. ಎಲೈ ಸ್ವಾಮಿಯೆ! ನನ್ನನ್ನು ಕಾಪಾಡು. ಕಾಪಾಡು. ನಿನ್ನ ಮಾಯೆಯು ನನ್ನನ್ನು ಆವರಿಸದಿರಲಿ.

೫೫. ಶ್ರೀರಾಮನು ಹೇಳಿದನು—ಎಲೈ ಗಂಧರ್ವನೆ! ನಿನ್ನ ಭಕ್ತಿಯಿಂದಲೂ, ಸ್ತುತಿಯಿಂದಲೂ, ನಾನು ಸಂತೋಷಗೊಂಡಿದ್ದೇನೆ. ಯೋಗಿಗಳು ಹೋಗತಕ್ಕ ಸನಾತನವಾದ ಆ ನನ್ನ ಉತ್ತಮವಾದ ಸ್ಥಾನಕ್ಕೆ ನೀನು ಹೋಗು.

ಜಪಂತಿ ಯೇ ನಿತ್ಯಮನನ್ಯಬುಧ್ಯಾ ಭಕ್ತ್ಯಾ ತ್ವದುಕ್ತಂ ಸ್ತವಮಾಗಮೋಕ್ತಂ |
ತೇಜ್ಞಾನಸಂಭೂತಭವಂ ವಿಹಾಯ ಮಾಂ ಯಾಂತಿ ನಿತ್ಯಾನುಭವಾನುಮೇಯಂ ॥ ೫೬ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ
ನವಮಸ್ಸರ್ಗಃ ಸಮಾಪ್ತಃ

---

೫೬. ವೇದಗಳಲ್ಲಿ ಹೇಳಿರುವ ವಿಷಯಗಳುಳ್ಳ ನೀನು ಹೇಳಿರುವ ಈ ಸ್ತೋತ್ರವನ್ನು ಯಾರು ಭಕ್ತಿಯಿಂದ ಒಂದೇ ಮನಸ್ಸಿನಿಂದ ಧ್ಯಾನಿಸುತ್ತಾರೆಯೋ ಅಥವಾ ಜಪಿಸುತ್ತಾರೆಯೋ ಅವರು ಅಜ್ಞಾನದಿಂದ ಹುಟ್ಟಿದ ಈ ಸಂಸಾರವನ್ನು ಕಳೆದುಕೊಂಡು ನಿತ್ಯನೂ ಅನುಭವದಿಂದ ತಿಳಿಯಲು ಸಾಧ್ಯನೂ ಆದ ನನ್ನನ್ನು ಹೊಂದುತ್ತಾರೆ.

ಇಂತು ಶ್ರೀಮದಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ಒಂಭತ್ತನೆಯ ಸರ್ಗವು ಮುಗಿದುದು.

ಅಥ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ದಶಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ

ಓಂ ಅಸ್ಯ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ದಶಮಸರ್ಗಸ್ಯ

ಶ್ರೀ ಭಗವಾನ್ ಬಾದರಾಯಣ ಋಷಿಃ, ಗಾಯತ್ರೀ ಛಂದಃ, ಓಂ ನಮೋ ನಾರಾಯಣೋ ದೇವತಾ, ಶ್ರೀ ಲಕ್ಷ್ಮೀ ಬೀಜಂ, ಪರಮಾ ಶಕ್ತಿಃ, ಅವ್ಯಕ್ತಂ ಕೀಲಕಂ, ಅಮುಕಸಂಪುಟೀಕರಣ ಸಿದ್ಧ್ಯರ್ಥಂ ಅಮುಕಮಂತ್ರ ಲೋಮ ವಿಲೋಮ ಸಂಪುಟೀಕರಣ ದಶಾಧ್ಯಾಯೇ ಮಂತ್ರಾಷ್ಟಾಕ್ಷರ ಸಂಯುಕ್ತಂ ದಶಮಸರ್ಗೇ ನ್ಯಾಸ ಧ್ಯಾನ ಜಪಮಹಂ ಕರಿಷ್ಯೇ.

ಓಂ ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ಹತ್ತನೆಯ ಸರ್ಗಕ್ಕೆ

ಶ್ರೀ ಭಗವಾನ್ ಬಾದರಾಯಣನು ಋಷಿಯು, ಗಾಯತ್ರೀ ಛಂದಸ್ಸು, ಓಂ ನಮೋ ನಾರಾಯಣ ಎಂಬುದು ದೇವತೆಯು, ಶ್ರೀ ಲಕ್ಷ್ಮೀಃ ಎಂಬುದು ಬೀಜವು, ಪರಮಾ ಎಂಬುದು ಶಕ್ತಿಯು, ಅವ್ಯಕ್ತಂ ಎಂಬುದು ಕೀಲಕವು, ಇಂತಹ ಸಂಪುಟೀಕರಣದ ಸಿದ್ಧಿಗೋಸ್ಕರ ಇಂತಹ ಮಂತ್ರದ ಲೋಮ ವಿಲೋಮ ಸಂಪುಟೀಕರಣದ ದಶಾಧ್ಯಾಯದಲ್ಲಿ ಎಂಟಕ್ಷರದ ಮಂತ್ರದಿಂದ ಕೂಡಿದ ದಶಮಸರ್ಗದ ನ್ಯಾಸ ಧ್ಯಾನ ಜಪಗಳನ್ನು ಮಾಡುತ್ತೇನೆ. ಎಂದು ಸಂಕಲ್ಪ ಮಾಡಬೇಕು.

॥ ಅಥ ಕರನ್ಯಾಸಃ ॥

ಕರನ್ಯಾಸವು

ಓಂ ಮಾಂ ರೂಂ ಯಂ ಅಂಗುಷ್ಠಾಭ್ಯಾಂ ನಮಃ
ಓಂ ಮಾಂ ರೂಂ ಯಂ ತರ್ಜನೀಭ್ಯಾಂ ನಮಃ
ಓಂ ಮಾಂ ರೂಂ ಯಂ ಮಧ್ಯಮಾಭ್ಯಾಂ ನಮಃ
ಓಂ ಮಾಂ ರೂಂ ಯಂ ಅನಾಮಿಕಾಭ್ಯಾಂ ನಮಃ
ಓಂ ಮಾಂ ರೂಂ ಯಂ ಕನಿಷ್ಠಿಕಾಭ್ಯಾಂ ನಮಃ
ಓಂ ಮಾಂ ರೂಂ ಯಂ ಕರತಲಕರಪೃಷ್ಠಾಭ್ಯಾಂ ನಮಃ

॥ ಅಥ ಷಡಂಗನ್ಯಾಸಃ ॥

ಷಡಂಗನ್ಯಾಸವು

ಓಂ ಮಾಂ ರೂಂ ಯಂ ಹೃದಯಾಯ ನಮಃ
ಓಂ ಮಾಂ ರೂಂ ಯಂ ಶಿರಸೇ ಸ್ವಾಹಾ
ಓಂ ಮಾಂ ರೂಂ ಯಂ ಶಿಖಾಯೈ ವಷಟ್
ಓಂ ಮಾಂ ರೂಂ ಯಂ ಕವಚಾಯ ಹುಂ
ಓಂ ಮಾಂ ರೂಂ ಯಂ ನೇತ್ರತ್ರಯಾಯ ವೌಷಟ್
ಓಂ ಮಾಂ ರೂಂ ಯಂ ಅಸ್ತ್ರಾಯ ಫಟ್

ಓಂ ಮಾಂ ರೂಂ ಯಂ ಇತಿ ದಿಗ್ಬಂಧಃ
ಓಂ ಮಾಂ ರೂಂ ಯಂ ಎಂದು ದಿಗ್ಬಂಧವು

॥ ಅಥ ಧ್ಯಾನಂ ॥

ಧ್ಯಾನವು

ಲಬ್ಧ್ವಾ ವರಂ ಸ ಗಂಧರ್ವಃ ಪ್ರಯಾಸ್ಯನ್ ರಾಮಮಬ್ರವೀತ್ । ಶಬರ್ಯಾಸ್ತೇ ಪುರೋಭಾಗೇ ಆಶ್ರಮೇ ರಘುನಂದನ ॥

ಇತಿ ಧ್ಯಾತ್ವಾ ಚ ಶ್ರೀರಾಮಚರಿತಂ ಪಠ್ಯತೇ ತದಾ ॥ ಹೀಗೆ ಧ್ಯಾನವನ್ನು ಮಾಡಿ ಶ್ರೀರಾಮಚರಿತ್ರೆಯನ್ನು ಪಾರಾಯಣಮಾಡಬೇಕು.

ಪಾರಾಯಣಾಂತೇ ಪುನಃ ಹೃದಯಾದಿ ಷಡಂಗನ್ಯಾಸಂ ಕೃತ್ವಾ ಓಂ ಮಾಂ ರೂಂ ಯಂ ಇತಿ ದಿಗ್ವಿಮೋಕಃ ಇತ್ಯುಕ್ತ್ವಾ ಧ್ಯಾಯೇತ್.

ಪಾರಾಯಣವಾದಮೇಲೆ ಷಡಂಗನ್ಯಾಸಗಳನ್ನು ಮಾಡಿಕೊಂಡು ಓಂ ಮಾಂ ರೂಂ ಯಂ ಇತಿ ದಿಗ್ವಿಮೋಕಃ ಎಂದೆನ್ನಬೇಕು.

ಅನಂತರ ಧ್ಯಾನಶ್ಲೋಕವನ್ನು ಹೇಳಬೇಕು.

॥ ಇತಿ ಶ್ರೀ ಅಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ದಶಮಸರ್ಗೇ ಸಂಕಲ್ಪಾದಿ ನ್ಯಾಸ ಧ್ಯಾನ ಜಪಕ್ರಮಃ ॥

ಇಂತು ಶ್ರೀ ಅಧ್ಯಾತ್ಮರಾಮಾಯಣದ ಅರಣ್ಯಕಾಂಡದ ಹತ್ತನೆಯ ಸರ್ಗದಲ್ಲಿ ನ್ಯಾಸ ಧ್ಯಾನ ಜಪಗಳ ವಿಧಿಯು.

|| ಶ್ರೀರಸ್ತು ||

ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ ದಶಮಸ್ಸರ್ಗಃ

|| ಶ್ರೀ ಮಹಾದೇವ ಉವಾಚ ||

ಲಬ್ಧ್ವಾ ವರಂ ಸ ಗಂಧರ್ವಃ ಪ್ರಯಾಸ್ಯನ್ ರಾಮಮಬ್ರವೀತ್ । ಶಬರ್ಯಾಸ್ತೇ ಪುರೋಭಾಗೇ ಆಶ್ರಮೇ ರಘುನಂದನ || ೧ ||

ಭಕ್ತ್ಯಾ ತ್ವತ್ಪಾದಕಮಲೇ ಭಕ್ತಿಮಾರ್ಗವಿಶಾರದಾ । ತಾಂ ಪ್ರಯಾಹಿ ಮಹಾಭಾಗ ಸರ್ವಂ ತೇ ಕಥಯಿಷ್ಯತಿ || ೨ ||

ಅಧ್ಯಾತ್ಮರಾಮಾಯಣದ ಆರಣ್ಯಕಾಂಡದಲ್ಲಿ ಹತ್ತನೆಯ ಸರ್ಗವು.

೧. ಶ್ರೀ ಮಹಾದೇವನು ಹೇಳಿದನು—ಆ ಗಂಧರ್ವನು ಶ್ರೀರಾಮನಿಂದ ಇಂತು ವರವನ್ನು ಹೊಂದಿ ಹೋಗುತ್ತಾ ರಾಮನನ್ನು ಕುರಿತು ಇಂತೆಂದನು. ಎಲೈ ರಾಮನೆ! ನಿನ್ನ ಮುಂದುಗಡೆಯೇ ಶಬರಿಯ ಆಶ್ರಮವಿರುವುದು.

೨. ಅವಳು ಭಕ್ತಿಮಾರ್ಗದಲ್ಲಿ ಗಟ್ಟಿಗಳು. ಭಕ್ತಿಯಿಂದ ನಿನ್ನ ಪಾದಪದ್ಮಗಳನ್ನು ಪೂಜಿಸುವಳು. ಅವಳ ಬಳಿಗೆ ಹೋಗು, ಆಕೆಯು ಎಲ್ಲವನ್ನೂ ನಿನಗೆ ಹೇಳುತ್ತಾಳೆ.

ಇತ್ಯುಕ್ತ್ವಾ ಪ್ರಯಯೌ ಸೋಪಿ ವಿಮಾನೇನಾರ್ಕವರ್ಚಸಾ | ವಿಷ್ಣೋಃ ಪದಂ ರಾಮ ನಾಮ ಸ್ಮರಣೇ ಫಲಮೀದೃಶಂ || ೩ ||

ತ್ಯಕ್ತ್ವಾ ತದ್ವಿಪಿನಂ ಘೋರಂ ಸಿಂಹವ್ಯಾಘ್ರಾದಿದೂಷಿತಂ | ಶನೈರಥಾಶ್ರಮಪದಂ ಶಬರ್ಯಾ ರಘುನಂದನಃ || ೪ ||

ಶಬರೀ ರಾಮಮಾಲೋಕ್ಯ ಲಕ್ಷ್ಮಣೇನ ಸಮನ್ವಿತಂ | ಆಯಾಂತಮಾರಾದ್ಧರ್ಷೇಣ ಪ್ರತ್ಯುತ್ಥಾಯಾಚಿರೇಣ ಸಾ || ೫ ||

ಪತಿತ್ವಾ ಪಾದಯೋರಗ್ರೇ ಹರ್ಷಪೂರ್ಣಾಶ್ರುಲೋಚನಾ | ಸ್ವಾಗತೇನಾಭಿನಂದ್ಯಾಥ ಸ್ವಾಸನೇ ಸನ್ಯವೇಶಯತ್ || ೬ ||

---

೩. ಅವನು ಹೀಗೆಂದು ಹೇಳಿ ಸೂರ್ಯನಂತೆ ಪ್ರಕಾಶಮಾನವಾದ ವಿಮಾನದಲ್ಲಿ ಕುಳಿತು ವೈಕುಂಠಕ್ಕೆ ಹೊರಟುಹೋದನು. ರಾಮ ನಾಮವನ್ನು ಸ್ಮರಿಸುವುದರಿಂದ ಈ ರೀತಿಯಾದ ಫಲವು ಬರುವುದು.

೪. ಸಿಂಹವ್ಯಾಘ್ರಗಳಿಂದ ಕೂಡಿದ ಆ ಘೋರವಾದ ಕಾಡನ್ನು ಬಿಟ್ಟು ಆ ರಾಮಲಕ್ಷ್ಮಣರು ಮೆಲ್ಲಮೆಲ್ಲಗೆ ಆ ಶಬರಿಯ ಆಶ್ರಮಕ್ಕೆ ಬಂದರು.

೫. ಆಗ ಶಬರಿಯು ರಾಮನು ಲಕ್ಷ್ಮಣನೊಡನೆ ಬರುತ್ತಿರುವುದನ್ನು ನೋಡಿ ಬಹು ಸಂತೋಷಪಟ್ಟು ಜಾಗ್ರತೆಯಾಗಿ ಎದುರುಗೊಂಡಳು.

೬. ಎದುರುಗೊಂಡು ಆತನ ಪಾದಗಳಿಗೆ ನಮಸ್ಕರಿಸಿ ಸಂತೋಷದಿಂದ ಕಣ್ಣೀರು ಸುರಿಸುತ್ತಾ ಸ್ವಾಗತವನ್ನು ಕೇಳಿ ಒಳ್ಳೆಯ ಆಸನವನ್ನು ಕೊಟ್ಟು ಕೂರಿಸಿದಳು.

ರಾಮಲಕ್ಷ್ಮಣಯೋಸ್ಸಮ್ಯತ್ಪಾದೌ ಪ್ರಕ್ಷಾಳ್ಯ ಭಕ್ತಿತಃ । ತಜ್ಜಲೇನಾಭಿಷಿಚ್ಯಾಂಗಮಥಾರ್ಘ್ಯಾದಿಭಿರಾದೃತಾ ॥ ೭ ॥

ಸಂಪೂಜ್ಯ ವಿಧಿವದ್ರಾಮಂ ಸಸೌಮಿತ್ರಿಂ ಸಪರ್ಯಯಾ । ಸಂಗೃಹೀತಾನಿ ದಿವ್ಯಾನಿ ರಾಮಾರ್ಥಂ ಶಬರೀ ಮುದಾ ॥ ॥ ೮ ॥

ಪಾದೌ ಸಂಪೂಜ್ಯ ಕುಸುಮೈಸ್ಸುಗಂಧೈಸ್ಸಾನುಲೇಪನೈಃ । ಫಲಾನ್ಯಮೃತಕಲ್ಪಾನಿ ದದೌ ರಾಮಾಯ ಭಕ್ತಿತಃ ॥ ೯ ॥

ಕೃತಾತಿಥ್ಯಂ ರಘುಶ್ರೇಷ್ಠಮುಪವಿಷ್ಟಂ ಸಹಾನುಜಂ । ಶಬರೀ ಭಕ್ತಿಸಂಪನ್ನಾ ಪ್ರಾಂಜಲಿರ್ವಾಕ್ಯಮಬ್ರವೀತ್ ॥ ೧೦ ॥

---

೭. ಆ ರಾಮಲಕ್ಷ್ಮಣರ ಪಾದಗಳನ್ನು ಭಕ್ತಿಯಿಂದ ತೊಳೆದು ಆ ನೀರನ್ನು ತಲೆಯಮೇಲಕ್ಕೆ ಪ್ರೋಕ್ಷಿಸಿಕೊಂಡು ಅರ್ಘ್ಯಾದಿಗಳಿಂದ ಪೂಜಿಸಿದಳು.

೮. ಶಾಸ್ತ್ರರೀತಿಯಾಗಿ ಆ ರಾಮಲಕ್ಷ್ಮಣರನ್ನು ಪೂಜಿಸಿ ರಾಮನಿಗೋಸ್ಕರವಾಗಿ ತಾನು ಕೂಡಿಟ್ಟಿದ್ದ ಅಮೃತದಂತಿರುವ ಹಣ್ಣುಗಳನ್ನು ಭಕ್ತಿಯಿಂದ ಅವರಿಬ್ಬರಿಗೂ ಕೊಟ್ಟಳು.

೯-೧೦. ಅನಂತರ ರಾಮನ ಪಾದಗಳನ್ನು ಹೂಗಳಿಂದ ಪೂಜಿಸಿ ಸುಗಂಧಗಳನ್ನು ಹಚ್ಚಿಸಿ ಒಳ್ಳೆಯ ರೀತಿಯಿಂದ ಅತಿಥಿ ಸತ್ಕಾರವನ್ನು ಮಾಡಿದಳು. ರಾಮನು ಸಂತೋಷಪಟ್ಟು ಲಕ್ಷ್ಮಣನೊಡನೆ ಕುಳಿತಿರುವಾಗ ಶಬರಿಯು ಭಕ್ತಿಯಿಂದ ಕೈಮುಗಿದುಕೊಂಡು ಇಂತೆಂದಳು.

ಅತ್ರಾಶ್ರಮೇ ರಘುಶ್ರೇಷ್ಠ ಗುರವೋ ಮೇ ಮಹರ್ಷಯಃ । ಸ್ಥಿತಾಃ ಶುಶ್ರೂಷಣಂ ತೇಷಾಂ ಕುರ್ವಂತೀ ಸಮುಪಸ್ಥಿತಾ ॥ ೧೧ ॥

ಬಹುವರ್ಷಸಹಸ್ರಾಣಿ ಗತಾಸ್ತೇ ಬ್ರಹ್ಮಣಃ ಪದಂ । ಗಮಿಷ್ಯಂತೊಬ್ರುವನ್ಮಾಂ ತ್ವಂ ವಸಾತ್ರೈವ ಸಮಾಹಿತಾ ॥ ೧೨ ॥

ರಾಮೊ ದಾಶರಥಿರ್ಜಾತಃ ಪರಮಾತ್ಮಾ ಸನಾತನಃ । ರಾಕ್ಷಸಾನಾಂ ವಧಾರ್ಥಾಯ ಋಷೀಣಾಂ ರಕ್ಷಣಾಯ ಚ ॥ ೧೩ ॥

ಆಗಮಿಷ್ಯತಿ ಚೈಕಾಗ್ರಧ್ಯಾನನಿಷ್ಠಾ ಸ್ಥಿರಾ ಭವ । ಇದಾನೀಂ ಚಿತ್ರಕೂಟಾದ್ರಾವಾಶ್ರಮೇ ವಸತಿ ಪ್ರಭುಃ ॥ ೧೪ ॥

---

೧೧. ಎಲೈ ರಘುಶ್ರೇಷ್ಠನೆ! ಈ ಆಶ್ರಮದಲ್ಲಿ ನನ್ನ ಗುರುಗಳಾದ ಅನೇಕ ಜನ ಮಹರ್ಷಿಗಳಿದ್ದರು. ಅವರ ಶುಶ್ರೂಷೆಯನ್ನು ಮಾಡಿಕೊಂಡಿದ್ದೆನು. ಹೀಗೆಯೇ ಅನೇಕ ಸಾವಿರವರ್ಷಗಳು ಕಳೆದುವು. ಅವರೆಲ್ಲರೂ ಬ್ರಹ್ಮಪದವನ್ನು ಹೊಂದಿದರು.

೧೨. ಹಾಗೆ ಅವರು ಬ್ರಹ್ಮಪದಕ್ಕೆ ಹೋಗುವಾಗ ನನ್ನನ್ನು ಕುರಿತು ಎಲೈ ಶಬರಿಯೆ! ನೀನು ಒಂದೇ ರೀತಿಯಾದ ಬುದ್ಧಿಯುಳ್ಳವಳಾಗಿ ಧೈರ್ಯದಿಂದ ಇಲ್ಲಿಯೇ ಇದ್ದುಕೊಂಡಿರು. ಆ ಸನಾತನನಾದ ಪರಮಾತ್ಮನು ದಶರಥನ ಹೊಟ್ಟೆಯಲ್ಲಿ ಹುಟ್ಟುವನು.

೧೩-೧೪. ಅವನು ರಾಕ್ಷಸಸಂಹಾರಮಾಡುವುದಕ್ಕೂ ಋಷಿಗಳನ್ನು ರಕ್ಷಿಸುವುದಕ್ಕೂ ಉದ್ಯುಕ್ತನಾಗಿ ದಂಡಕಾರಣ್ಯಕ್ಕೆ ಬರುವನು. ನೀನು ಏಕಾಗ್ರತೆಯಿಂದಲೂ ಸ್ಥಿರವಾಗಿಯೂ ಇಲ್ಲಿಯೇ ಇದ್ದುಕೊಂಡಿರು. ಈಗ ಚಿತ್ರಕೂಟಪರ್ವತದಲ್ಲಿ ಆ ಸ್ವಾಮಿಯು ಆಶ್ರಮವನ್ನು ಮಾಡಿಕೊಂಡು ಇರುವನು.

ಯಾವದಾಗಮನಂ ತಸ್ಯ ತಾವದ್ರಕ್ಷ ಕಳೇಬರಂ । ದೃಷ್ಟ್ವೈವ ರಾಘವಂ ದಗ್ಧ್ವಾ ದೇಹಂ ಯಾಸ್ಯಸಿ ತತ್ಪದಂ ॥ ೧೫ ॥

ತಥೈವಾಕರವಂ ರಾಮ ತ್ವದ್ಧ್ಯಾನೈಕಪರಾಯಣಾ । ಪ್ರತೀಕ್ಷ್ಯಾಗಮನಂ ತೇದ್ಯ ಸಫಲಂ ಗುರುಭಾಷಿತಂ ॥ ೧೬ ॥

ತವ ಸಂದರ್ಶನಂ ರಾಮ ಗುರೂಣಾಮಪಿ ನೋ ನ ಹಿ । ಯೋಷಿನ್ಮೂಢಾಪ್ರಮೇಯಾತ್ಮನ್ ಹೀನಜಾತಿಸಮುದ್ಭವಾ ॥ ೧೭ ॥

ತವ ದಾಸಸ್ಯ ದಾಸಾನಾಂ ಶತಸಂಖ್ಯೋತ್ತರಸ್ಯ ವಾ । ದಾಸೀತ್ವೇ ನಾಧಿಕಾರೋಸ್ತಿ ಕುತಸ್ಸಾಕ್ಷಾತ್ತವೈವ ಹಿ ॥ ೧೮ ॥

---

೧೫. ಅವನು ಇಲ್ಲಿಗೆ ಬರುವವರೆಗೂ ಈ ದೇಹವನ್ನು ಬಿಡದೆ ಪ್ರಾಣಧಾರಣವನ್ನು ಮಾಡಿಕೊಂಡಿರು. ಅವನನ್ನು ನೋಡಿದಮೇಲೆ ಈ ದೇಹವನ್ನು ಬಿಟ್ಟು ಆ ರಾಮನ ಪರಮಪದವಾದ ವೈಕುಂಠಕ್ಕೆ ಹೋಗುತ್ತೀಯಂತೆ ಎಂದರು.

೧೬. ಎಲೈ ರಾಮನೆ! ಅವರ ಮಾತಿನಂತೆಯೇ ನಾನು ಪ್ರಾಣಧಾರಣೆಯನ್ನು ಮಾಡಿಕೊಂಡಿದ್ದೇನೆ. ನಿನ್ನನ್ನೇ ಧ್ಯಾನಮಾಡಿಕೊಂಡಿದ್ದೇನೆ. ನೀನು ಬರುವುದನ್ನೇ ಎದುರು ನೋಡುತ್ತಿದ್ದೆನು. ದೊಡ್ಡವರಾದ ಗುರುಗಳ ಮಾತು ಸತ್ಯವೂ ಫಲವೂ ಆಯಿತು.

೧೭. ಎಲೈ ರಾಮನೆ! ನಿನ್ನ ದರ್ಶನವು ನನ್ನ ಗುರುಗಳಿಗೂ ಕೂಡಾ ಆಗಲಿಲ್ಲ. ನೀನು ಅಷ್ಟು ಉತ್ತಮನು. ನಾನಾದರೋ ಹೆಂಗಸು. ಮೂಢಳು, ಕೀಳಾದ ನೀಚಜಾತಿಯಲ್ಲಿ ಹುಟ್ಟಿದವಳು.

೧೮. ನಿನಗೆ ಯಾರು ದಾಸರಾಗಿರುವರೋ, ಅವರಿಗೆ ಯಾರು ದಾಸರೋ ಅವರಿಗೂ ಯಾರು ದಾಸರೋ, ಹೀಗೆ ನೂರುಸಂಖ್ಯೆಯ ಕೊನೆಯಲ್ಲಿರುವ ದಾಸರಿಗೂ ನಾನು ದಾಸಿಯಾಗಿರಲು ಅಧಿಕಾರವಿರುವುದಿಲ್ಲ. ಹೀಗಿರುವಲ್ಲಿ ನಿನಗೆ ಪ್ರತ್ಯಕ್ಷಳಾಗಿ ನಾನು ದಾಸಿಯಾಗಿರುವ ಬಗೆ ಹೇಗೆ?

ಕಥಂ ರಾಮಾದ್ಯ ಮೇ ದೃಷ್ಟಸ್ತ್ವಂ ಮನೋವಾಗಗೋಚರಃ । ಸ್ತೋತುಂ ನ ಜಾನೇ ದೇವೇಶ ಕಿಂಕರೋಮಿ ಪ್ರಸೀದ ಮೇ ॥

॥ ಶ್ರೀರಾಮ ಉವಾಚ ॥

ಪುಂಸ್ತ್ವೇ ಸ್ತ್ರೀತ್ವೇ ವಿಶೇಷೋ ವಾ ಜಾತಿನಾಮಾಶ್ರಮಾದಯಃ । ನ ಕಾರಣಂ ಮದ್ಭಜನೇ ಭಕ್ತಿರೇವ ಹಿ ಕಾರಣಂ ॥ ೨೦ ॥

ಯಜ್ಞದಾನತಪೋಭಿರ್ವಾ ವೇದಾಧ್ಯಯನಕರ್ಮಭಿಃ । ನೈವ ದ್ರಷ್ಟುಂ ಮಹಂ ಶಕ್ಯೋ ಮದ್ಭಕ್ತಿವಿಮುಖೈಸ್ಸದಾ ॥ ೨೧ ॥

---

೧೯. ಎಲೈ ರಾಮನೆ! ಮನಸ್ಸಿಗೂ ಮಾತಿಗೂ ನಿಲುಕದ ನೀನು ಈಗ ಹೇಗೆ ನನಗೆ ದರ್ಶನವನ್ನು ಕೊಟ್ಟೆ? ಎಲೈ ದೇವೇಶನೆ! ನಿನ್ನನ್ನು ಸ್ತೋತ್ರಮಾಡಲು ನನಗೆ ತಿಳಿಯುವುದಿಲ್ಲ. ಈಗೇನು ಮಾಡಲಿ?

೨೦. ರಾಮನು ಹೇಳಿದನು—ಎಲೈ ಶಬರಿಯೆ! ನನ್ನನ್ನು ಭಜಿಸಲು ಗಂಡಸಾಗಿರುವಿಕೆಯಾಗಲೀ ಹೆಂಗಸಾಗಿರುವಿಕೆಯಾಗಲೀ ಜಾತಿಗಳಾಗಲೀ ವರ್ಣಗಳಾಗಲೀ ಕಾರಣವಲ್ಲ. ಅವನು ಯಾವ ವ್ಯಕ್ತಿಯಾದರೂ ಆಗಿರಬಹುದು. ಯಾವ ವರ್ಣ ಅಥವಾ ಜಾತಿಯಾದರೂ ಆಗಿರಬಹುದು. ನನ್ನನ್ನು ಭಜಿಸುವುದಕ್ಕೆ ಭಕ್ತಿಯೊಂದೇ ಕಾರಣವೆಂದು ತಿಳಿ.

೨೧. ನನ್ನನ್ನು ತಿಳಿಯಬೇಕೆನ್ನುವವನು ನನ್ನಲ್ಲಿ ಭಕ್ತಿಯನ್ನಿಡದೆ ಯಜ್ಞಗಳನ್ನು ಮಾಡಲಿ, ದಾನಗಳನ್ನು ಮಾಡಲಿ, ವೇದಾಧ್ಯಯನವನ್ನು ಮಾಡಲಿ, ಅದರಲ್ಲಿ ಹೇಳಿರುವ ಕರ್ಮಗಳನ್ನು ಮಾಡಲಿ, ಯಾವುದನ್ನು ಮಾಡಿದರೂ ನನ್ನನ್ನು ನೋಡಲು ಆಗುವುದೇ ಇಲ್ಲ. ಇವು ಒಂದೂ ಇಲ್ಲಿದಿದ್ದರೂ ಭಕ್ತಿಯೊಂದಿದ್ದರೆ ಅವರಿಗೆ ಖಂಡಿತವಾಗಿ ಸಿಕ್ಕುವೆನು.

ತಸ್ಮಾದ್ಭಾಮಿನಿ ಸಂಕ್ಷೇಪಾದ್ವಕ್ಷ್ಯೇಽಹಂ ಭಕ್ತಿಸಾಧನಂ । ಸತಾಂ ಸಂಗತಿರೇವಾತ್ರ ಪ್ರಥಮಂ ಸಾಧನಂ ಸ್ಮೃತಂ ॥ ೨೨ ॥

ದ್ವಿತೀಯಂ ಮತ್ಕಥಾಲಾಪಸ್ತೃತೀಯಂ ಮದ್ಗುಣೇರಣಂ । ವ್ಯಾಖ್ಯಾತೃತ್ವಂ ಮದ್ವಚಸಾಂ ಚತುರ್ಥಂ ಸಾಧನಂ ಭವೇತ್॥ ೨೩ ॥

ಆಚಾರ್ಯೋಪಾಸನಂ ಭದ್ರೇ ಮದ್ಬುಧ್ಯಾಽ ಮಾಯಯಾ ಸದಾ । ಪಂಚಮಂ ಪುಣ್ಯಶೀಲತ್ವಂ ಯಮಾದಿನಿಯಮಾದಿ ಚ॥ ೨೪ ॥

ನಿಷ್ಠಾ ಮತ್ಪೂಜನೇ ನಿತ್ಯಂ ಷಷ್ಠಂ ಸಾಧನಮೀರಿತಂ । ಮಮ ಮಂತ್ರೋಪಾಸಕತ್ವಂ ಸಾಂಗಂ ಸಪ್ತಮಮುಚ್ಯತೇ ॥ ೨೫ ॥

---

೨೨. ಎಲೈ ಶಬರಿಯೆ! ಆದುದರಿಂದ ಭಕ್ತಿಗೆ ಸಾಧನವಾದ ಕೆಲವು ವಿಷಯಗಳನ್ನು ಹೇಳುತ್ತೇನೆ. ಕೇಳು. ಈ ವಿಷಯದಲ್ಲಿ ಸತ್ಪುರುಷರ ಸಹವಾಸವೇ ಮೊದಲನೆಯ ಕಾರಣವೆಂದು ತಿಳಿ.

೨೩. ನನ್ನ ಕಥೆಗಳನ್ನು ಹೇಳುವುದೇ ಎರಡನೆಯ ಕಾರಣವು. ನನ್ನ ಗುಣಗಳನ್ನು ಹೇಳುತ್ತಿರುವುದೇ ಮೂರನೆಯ ಕಾರಣವು. ನಾನು ಹೇಳಿರುವ ಮಾತುಗಳಿಗೆ ಅರ್ಥವನ್ನು ಹೇಳುವುದು ನಾಲ್ಕನೆಯ ಕಾರಣವು.

೨೪–೨೫. ಆಚಾರ್ಯನನ್ನು ನಾನೆಂದೇ ಭಾವಿಸಿ ಕಪಟವಿಲ್ಲದೇನೇ ಸೇವಿಸುವುದು ಐದನೆಯ ಕಾರಣವು. ಪುಣ್ಯಕೆಲಸಗಳನ್ನು ಮಾಡುತ್ತಾ ಇಂದ್ರಿಯ ನಿಗ್ರಹಿಯಾಗಿದ್ದುಕೊಂಡು ನಿಯಮವನ್ನು ಪಾಲಿಸುತ್ತಾ ನನ್ನನ್ನು ಯಾವಾಗಲೂ ಪೂಜೆಮಾಡುವಿಕೆಯು ಆರನೆಯ ಕಾರಣವು. ನನ್ನ ಮಂತ್ರವನ್ನು ಸಾಂಗವಾಗಿ ಜಪಿಸುವುದು ಏಳನೆಯ ಸಾಧನವು ಎಂದು ತಿಳಿ.

ಮುದ್ಭಕ್ತೇಷ್ವಧಿಕಾ ಪೂಜಾ ಸರ್ವಭೂತೇಷು ಮನ್ಮತಿಃ । ಬಾಹ್ಯಾರ್ಥೇಷು ವಿರಾಗಿತ್ವಂ ಶಮಾದಿಸಹಿತಂ ತಥಾ || ೨೬ ||
ಅಷ್ಟಮಂ ನವಮಂ ತತ್ವವಿಚಾರೋ ಮಮ ಭಾಮಿನಿ । ಏವಂ ನವವಿಧಾ ಭಕ್ತಿಸ್ಸಾಧನಂ ಯಸ್ಯ ಕಸ್ಯ ವಾ || ೨೭ ||
ಸ್ತ್ರಿಯೋ ವಾ ಪುರುಷಸ್ಯಾಪಿ ತಿರ್ಯಗ್ಯೋನಿಗತಸ್ಯ ವಾ । ಭಕ್ತಿಸ್ಸಂಜಾಯತೇ ಪ್ರೇಮಲಕ್ಷ್ಮಣಾ ಶುಭಲಕ್ಷಣೇ || ೨೮ ||
ಭಕ್ತೌ ಸಂಜಾತಮಾತ್ರಾಯಾಂ ಮತ್ತತ್ವಾನುಭವಸ್ತದಾ । ಮಮಾನುಭವಸಿದ್ಧಸ್ಯ ಮುಕ್ತಿಸ್ತತ್ರೈವ ಜನ್ಮನಿ || ೨೯ ||

---

೨೬. ನನ್ನಲ್ಲಿ ಭಕ್ತಿಯುಳ್ಳವರನ್ನು ಬಹುವಾಗಿ ಗೌರವಿಸುತ್ತಾ ಎಲ್ಲಾ ಪ್ರಾಣಿಗಳಲ್ಲಿಯೂ ನಾನಿದ್ದೇನೆ ಎಂಬ ಬುದ್ಧಿಯನ್ನು ಹೊಂದಿ ಹೊರಗೆ ಕಾಣತಕ್ಕ ಪದಾರ್ಥಗಳಲ್ಲಿ ವೈರಾಗ್ಯವನ್ನು ತಾಳಿ, ಶಮದಮಗಳನ್ನು ಹೊಂದಿರಬೇಕು. ಇದು ಎಂಟನೆಯ ಕಾರಣವು.

೨೭. ನನ್ನ ಸಂಬಂಧವಾದ ತತ್ತ್ವ ವಿಚಾರವು ಒಂಬತ್ತನೆಯ ಕಾರಣವು. ಈ ರೀತಿಯಾಗಿ ಭಕ್ತಿಯು ಒಂಭತ್ತು ಬಗೆಯಾಗಿರುವುದು. ಇದು ಯಾರಿಗೆ ಬೇಕಾದರೂ ಆಗಬಹುದು. ವ್ಯಕ್ತಿನಿಯಮವಾಗಲೀ ಜಾತಿ ನಿಯಮವಾಗಲೀ ವರ್ಣನಿಯಮವಾಗಲೀ ಇಲ್ಲ.

೨೮. ಗಂಡಸಿಗಾಗಲೀ ಹೆಂಗಸಿಗಾಗಲೀ ನೀಚಜಾತಿಯಲ್ಲಿರತಕ್ಕ ಪ್ರಾಣಿಗಾಗಲೀ ಯಾರಿಗೇ ಆಗಲಿ, ಪ್ರೇಮಲಕ್ಷಣವಾದ ಭಕ್ತಿಯು ಹುಟ್ಟಬೇಕು. ಅದೇ ಕಾರಣವು.

೨೯. ಭಕ್ತಿಯು ಪ್ರಾಣಿಗೆ ಹುಟ್ಟಿದೊಡನೆಯೇ ನನ್ನ ತತ್ವಗಳನ್ನು ತಿಳಿಯುತ್ತಾನೆ. ನನ್ನ ತತ್ತ್ವಗಳ ಅನುಭವವು ಉಂಟಾದ ಮೇಲೆ ಅದೇ ಜನ್ಮದಲ್ಲಿಯೇ ಮುಕ್ತಿಯು ಸಿಕ್ಕುತ್ತದೆ. ಆದ್ದರಿಂದ ಮೋಕ್ಷವನ್ನು ಹೊಂದುವುದಕ್ಕೆ ಭಕ್ತಿಯೇ ಕಾರಣವೆಂದಂತಾಯಿತು.

ಸ್ಯಾತ್ತಸ್ಮಾತ್ಕಾರಣಂ ಭಕ್ತಿರ್ಮೋಕ್ಷಸ್ಯೇತಿ ಸುನಿಶ್ಚಿತಂ । ಪ್ರಥಮಂ ಸಾಧನಂ ಯಸ್ಯ ಭವೇತ್ತಸ್ಯ ಕ್ರಮೇಣ ತು ॥ ೩೦ ॥

ಭವೇತ್ಸರ್ವಂ ತತೋ ಭಕ್ತಿರ್ಮುಕ್ತಿರೇವ ಸುನಿಶ್ಚಿತಂ । ಯಸ್ಮಾನ್ಮದ್ಭಕ್ತಿಯುಕ್ತಾ ತ್ವಂ ತತೋಽಹಂ ತ್ವಾಮುಪಸ್ಥಿತಃ ॥ ೩೧ ॥

ಇತಿಮದ್ದರ್ಶನಾನ್ಮುಕ್ತಿಸ್ತವ ನಾಸ್ತ್ಯತ್ರ ಸಂಶಯಃ । ಯದಿ ಜಾನಾಸಿ ಮೇ ಬ್ರೂಹಿ ಸೀತಾ ಕಮಲಲೋಚನಾ ॥ ೩೨ ॥

ಕುತ್ರಾಸ್ತೇ ಕೇನ ವಾ ನೀತಾ ಪ್ರಿಯಾ ಮೇ ಪ್ರಿಯದರ್ಶನಾ ॥ ೩೩ ॥

---

೩೦. ಮೊದಲನೆಯ ಸಾಧನವಾದ ಭಕ್ತಿಯು ಯಾವನಿಗೆ ಉಂಟಾಗುತ್ತದೆಯೋ ಅವನಿಗೆ ಉಳಿದ ಬಗೆಯ ಎಂಟು ಸಾಧನಗಳು ಉಂಟಾಗಿಯೇ ಉಂಟಾಗುತ್ತವೆ. ಆದ್ದರಿಂದ ಭಕ್ತಿಯೆಂಬುದೇನೇ ಮುಕ್ತಿಯೆಂದು ತಿಳಿದುಕೊ.

೩೧–೩೩. ನೀನು ನನ್ನಲ್ಲಿ ಭಕ್ತಿಯುಳ್ಳವಳಾಗಿರುವುದರಿಂದಲೇನೇ ನಾನು ನಿನ್ನ ಬಳಿಗೆ ಬಂದೆನು. ನನ್ನ ದರ್ಶನವನ್ನು ನೀನು ಮಾಡಿದುದರಿಂದ ನಿನಗೆ ಮುಕ್ತಿ ಬರುವುದರಲ್ಲಿ ಸಂಶಯವಿಲ್ಲ. ನನ್ನ ಹೆಂಡತಿಯಾದ, ಕಮಲಾಕ್ಷಿಯಾದ, ಸೀತೆಯು ಎಲ್ಲಿದ್ದಾಳೆ? ಯಾರು ಅಪಹರಿಸಿದರು? ಎಂಬುದೇನಾದರೂ ಗೊತ್ತಿದ್ದರೆ ಹೇಳು.

|| ಶಬರ್ಯುವಾಚ ||

ದೇವ ಜಾನಾಸಿ ಸರ್ವಜ್ಞ ಸರ್ವಂ ತ್ವಂ ವಿಶ್ವಭಾವನ । ತಥಾಪಿ ಪೃಚ್ಛಸೇ ಯನ್ಮಾಂ ಲೋಕಾನನುಸೃತಾಂ ಪ್ರಭೋ || ೩೪ ||

ತಥಾಹಮಭಿಧಾಸ್ಯಾಮಿ ಸೀತಾ ಯತ್ರಾಧುನಾ ಸ್ಥಿತಾ । ರಾವಣೇನ ಹೃತಾ ಸೀತಾ ಲಂಕಾಯಾಂ ವರ್ತತೇಽಧುನಾ || ೩೫ ||

ಇತಸ್ಸಮೀಪೇ ರಾಮಾಸ್ತೇ ಪಂಪಾನಾಮ ಸರೋವರಂ । ಋಷ್ಯಮೂಕಗಿರಿರ್ನಾಮ ತತ್ಸಮೀಪೇ ಮಹಾನಗಃ || ೩೬ ||

ಚತುರ್ಭಿರ್ಮಂತ್ರಿಭಿಸ್ಸಾರ್ಧಂ ಸುಗ್ರೀವೋ ವಾನರಾಧಿಪಃ । ಭೀತಭೀತಸ್ಸದಾ ತತ್ರ ತಿಷ್ಠತ್ಯತುಲವಿಕ್ರಮಃ || ೩೭ ||

---

೩೪. ಶಬರಿಯು ಹೇಳಿದಳು—ಎಲೈ ಸರ್ವಜ್ಞನಾದ ದೇವನೆ! ನಿನಗೆಲ್ಲವೂ ತಿಳಿದಿದೆ. ನಿನ್ನಲ್ಲಿಯೇ ಪ್ರಪಂಚವು ಅಡಗಿರುವುದರಿಂದ ನಿನಗೆ ತಿಳಿಯದಿರುವುದು ಒಂದೂ ಇಲ್ಲ. ಆದರೂ ಕೂಡಾ ಲೋಕರೀತಿಯನ್ನು ಅನುಸರಿಸಿಕೊಂಡು ಕೇಳುತ್ತಿದ್ದೀಯೆ.

೩೫. ಅದನ್ನೇ ಅನುಸರಿಸಿಕೊಂಡು ಸೀತೆಯು ಈಗ ಎಲ್ಲಿರುವಳೆಂಬುದನ್ನು ನಿನಗೆ ಹೇಳುತ್ತೇನೆ. ರಾವಣನು ಆ ಸೀತೆಯನ್ನು ಅಪಹರಿಸಿಕೊಂಡು ಹೋಗಿರುವನು. ಅವಳು ಈಗ ಲಂಕೆಯಲ್ಲಿದ್ದಾಳೆ.

೩೬. ಎಲೈ ರಾಮನೆ! ಇಲ್ಲಿಗೆ ಹತ್ತಿರದಲ್ಲಿಯೇ ಪಂಪ ಎಂಬ ಸರೋವರವಿದೆ. ಅದರ ಬಳಿಯಲ್ಲಿ ಋಷ್ಯಮೂಕವೆಂಬ ಬೆಟ್ಟವಿದೆ.

೩೭. ಅಲ್ಲಿ ಸುಗ್ರೀವನೆಂಬ ಕಪಿರಾಜನು ನಾಲ್ಕುಜನ ಮಂತ್ರಿಗಳೊಡನೆ ಇದ್ದುಕೊಂಡಿದ್ದಾನೆ. ಆವನು ಬಹುವಾದ ಪರಾಕ್ರಮಿಯು. ಯಾವುದೋ ಹೆದರಿಕೆಯಿಂದ ಅಂಜುತ್ತಾ ಅಲ್ಲಿ ವಾಸವಾಗಿದ್ದಾನೆ.

ವಾಲಿನಶ್ಚ ಭಯಾದ್ಭ್ರಾತುಸ್ತದಗಮ್ಯಮೃಷೇರ್ಭಯಾತ್ । ವಾಲಿನಸ್ತತ್ರ ಗಚ್ಛ ತ್ವಂ ತೇನ ಸಖ್ಯಂ ಕುರು ಪ್ರಭೋ ॥ ೩೮ ॥

ಸುಗ್ರೀವೇಣ ಸ ಸರ್ವಂ ತೇ ಕಾರ್ಯಂ ಸಂಪಾದಯಿಷ್ಯತಿ । ಅಹಮಗ್ನಿಂ ಪ್ರವೇಕ್ಷ್ಯಾಮಿ ತವಾಗ್ರೇ ರಘುನಂದನ ॥ ೩೯ ॥

ಮುಹೂರ್ತಂ ತಿಷ್ಠ ರಾಜೇಂದ್ರ ಯಾವದ್ದಗ್ಧ್ವಾ ಕಳೇಬರಂ । ಯಾಸ್ಯಾಮಿ ಭಗವನ್ ರಾಮ ತವ ವಿಷ್ಣೋಃ ಪರಂ ಪದಂ ॥ ೪೦ ॥

---

೩೮. ಅವನಿಗೆ ತನ್ನ ಸಹೋದರನಾದ ವಾಲಿಯ ದೆಸೆಯಿಂದ ಬಹುವಾದ ಭಯವು ಒದಗಿರುವುದು. ಆ ವಾಲಿಯು ಸುಗ್ರೀವನನ್ನು ತೊಂದರೆಪಡಿಸಲು ಅಲ್ಲಿಗೆ ಹೋಗಲಾರನು ಅಲ್ಲಿಗೆ ಹೋಗದಂತೆ ಅವನಿಗೆ ಋಷಿಯ ಶಾಪವೊಂದಿರುವುದು. ನೀನು ಆ ಪರ್ವತಕ್ಕೆ ಹೋಗಿ ಆ ಸುಗ್ರೀವನೊಡನೆ ಸ್ನೇಹವನ್ನು ಮಾಡಿಕೊ.

೩೯. ಆ ಸುಗ್ರೀವನು ನಿನ್ನ ಕೆಲಸಗಳೆಲ್ಲವನ್ನೂ ಮಾಡಿಕೊಡುವನು. ನಾನು ನೀನು ನೋಡುತ್ತಿರುವಂತೆಯೇ ಅಗ್ನಿಪ್ರವೇಶಮಾಡಿ ಈ ಪಾರ್ಥಿವದೇಹವನ್ನು ಬಿಟ್ಟುಬಿಡುತ್ತೇನೆ.

೪೦. ನೀನು ಇಲ್ಲಿ ಒಂದು ಕ್ಷಣಕಾಲವಿರು. ನೀನು ನೋಡುತ್ತಿರುವಂತೆಯೇ ನಾನು ನನ್ನ ಈ ದೇಹವನ್ನು ಸುಟ್ಟು ನಿನ್ನ ಸ್ಥಾನವಾದ ಪರಮಪದವಾದ ವೈಕುಂಠವನ್ನು ಹೊಂದುತ್ತೇನೆ.

ಇತಿ ರಾಮಂ ಸಮಾಮಂತ್ರ್ಯ ಪ್ರವಿವೇಶ ಹುತಾಶನಂ । ಕ್ಷಣಾನ್ನಿರ್ಧೂಯ ಸಕಲಮವಿದ್ಯಾಕೃತಬಂಧನಂ ॥
ರಾಮಪ್ರಸಾದಾಚ್ಛಬರೀ ಮೋಕ್ಷಂ ಪ್ರಾಪಾಂತಿ ದುರ್ಲಭಂ । ಕಿಂ ದುರ್ಲಭಂ ಜಗನ್ನಾಥೇ ಶ್ರೀರಾಮೇ ಭಕ್ತವತ್ಸಲೇ ॥ ೪೧ ॥
ಪ್ರಸನ್ನೇಽಧಮಜನ್ಮಾಪಿ ಶಬರೀ ಮುಕ್ತಿಮಾಪ ಸಾ । ಕಿಂ ಪುನರ್ಬ್ರಾಹ್ಮಣಾ ಮುಖ್ಯಾ ಪುಣ್ಯಾಃ ಶ್ರೀರಾಮಚಿಂತಕಾಃ ॥ ೪೨॥
ಮುಕ್ತಿಂ ಯಾಂತೀತಿ ತದ್ಭಕ್ತಿರ್ಮುಕ್ತಿರೇವ ನ ಸಂಶಯಃ ॥ ೪೩ ॥

---

೪೧. ಆಕೆಯು ಶ್ರೀರಾಮನಿಗೆ ಇಂತೆಂದು ಹೇಳಿ ಅಗ್ನಿ ಪ್ರವೇಶವನ್ನು ಮಾಡಿದಳು. ಅವಿದ್ಯೆಯಿಂದ ಕೂಡಿರುವ ಈ ಬಂಧನ ರೂಪವಾದ ದೇಹವನ್ನು ಸುಟ್ಟು ನಾಶಪಡಿಸಿಕೊಂಡು ರಘುನಾಥನಾದ ಶ್ರೀರಾಮನ ಅನುಗ್ರಹದಿಂದ ದುರ್ಲಭವಾದ ಪರಮಪದವಾದ ಮೋಕ್ಷವನ್ನು ಹೊಂದಿದಳು.

೪೨. ಭಕ್ತವತ್ಸಲನಾದ ಜಗನ್ನಾಥನಾದ ಶ್ರೀರಾಮನು ಪ್ರಸನ್ನನಾಗಿರುತ್ತಿರುವಾಗ ಪ್ರಾಣಿಗೆ ಸಿಕ್ಕದಿರುವುದು ಯಾವುದು ತಾನೆ ಇರುವುದು ? ನೀಚಜಾತಿಯಲ್ಲಿ ಹುಟ್ಟಿದ ಆ ಶಬರಿಯೂ ಕೂಡಾ ಆ ಸ್ವಾಮಿಯ ಅನುಗ್ರಹದಿಂದ ಮುಕ್ತಿಯನ್ನು ಹೊಂದಿದಳು.

೪೩. ಉತ್ತಮವಾದ ಬ್ರಾಹ್ಮಣಜನ್ಮನಲ್ಲಿ ಹುಟ್ಟಿ ಪುಣ್ಯವಂತರಾಗಿ ಶ್ರೀರಾಮನನ್ನು ಭಜಿಸುತ್ತಿದ್ದರೆ ಅವರಿಗೆ ಮುಕ್ತಿ ಬರುತ್ತದೆಂಬುದರಲ್ಲಿ ಹೇಳಬೇಕಾದುದೇನಿರುವುದು ? ಆದ್ದರಿಂದ ಭಕ್ತಿಯಿಂದಲೇ ಮುಕ್ತಿಯು ಬರುತ್ತದೆ, ಎಂದು ಹೇಳುವುದರಲ್ಲಿ ಸಂಶಯವೇ ಇರುವುದಿಲ್ಲ.

ಭಕ್ತಿರ್ಮುಕ್ತಿವಿಧಾಯಿನೀ ಭಗವತಾಂ ಶ್ರೀರಾಮಚಂದ್ರಸ್ಯ ಹೇ ।
ಲೋಕಾಃ ಕಾಮದುಘಾಂಘ್ರಿ ಪದ್ಮಯುಗಳಂ ಸೇವಧ್ವಮುತ್ಯುತ್ಸುಕಾಃ ॥ ೪೪ ॥

ನಾನಾಜ್ಞಾನವಿಶೇಷಮಂತ್ರವಿತತಿಂ ತ್ಯಕ್ತ್ವಾ ಸುದೂರೇ ಭೃಶಂ ।
ರಾಮಂ ಶ್ಯಾಮತನುಂ ಸ್ಮರಾರಿಹೃದಯೇ ಭಾಂತಂ ಭಜಧ್ವಂ ಬುಧಾಃ ॥ ೪೫ ॥

ಇತಿ ಶ್ರೀಮದಧ್ಯಾತ್ಮರಾಮಾಯಣೇ ಅರಣ್ಯಕಾಂಡೇ
ದಶಮಸ್ಸರ್ಗಃ ಸಮಾಪ್ತಃ

೪೪–೪೫. ಎಲೈ ಜನಗಳಿರಾ! ಭಕ್ತಿಯೇ ಮುಕ್ತಿಯನ್ನು ಕೊಡತಕ್ಕದ್ದು. ಆದ್ದರಿಂದ ಇಷ್ಟಾರ್ಥವನ್ನು ಕೊಡುವ ಭಗವಂತನಾದ ಆ ಶ್ರೀರಾಮಚಂದ್ರನ ಪಾದಪದ್ಮಗಳನ್ನು ಆಸೆಪಟ್ಟು ಸಂತೋಷದಿಂದ ಸೇವಿಸುತ್ತಿರಿ!! ಜ್ಞಾನಕ್ಕೆ ಸರಿಯಾಗಿ ಸಿಕ್ಕದ, ಅನೇಕ ವಿಧವಾಗಿರುವ ಮಂತ್ರಗಳನ್ನು ಬಹುದೂರದಲ್ಲಿಯೇ ಬಿಟ್ಟುಬಿಡಿರಿ. ಆದರಿಂದ ಸಾಧಿಸುವುದು ಕಷ್ಟವಾಗುವುದು. ನೀಲಮೇಘಶ್ಯಾಮನಾದ ಸ್ಮರಾರಿಯಾದ ಶಿವನ ಹೃದಯದಲ್ಲಿ ಯಾವಾಗಲೂ ಸ್ಮರಣರೂಪದಿಂದಿರುವ ಆ ಶ್ರೀರಾಮನನ್ನು ಎಲೈ ಜನಗಳೇ! ಭಕ್ತಿಯಿಂದ ಭಜಿಸಿರಿ!!!

ಇಂತು ಶ್ರೀಮದಧ್ಯಾತ್ಮರಾಮಾಯಣದ ಅರಣ್ಯಕಾಂಡದಲ್ಲಿ ಹತ್ತನೆಯ ಸರ್ಗವು ಮುಗಿದುದು.